ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯ ಭಾಷೆ

(ಸತ್ಯವೇದ ಮತ್ತು ಆಯ್ದ ಕೃತಿಗಳು ಹಾಗೂ ಸಾಂಸ್ಕೃತಿಕವಾಗಿ ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಹನುಮಂತ ನರಸಪ್ಪ

ಮಾರ್ಗದರ್ಶಕರು
ಡಾ.ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೯

ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯ ಭಾಷೆ

(ಸತ್ಯವೇದ ಮತ್ತು ಆಯ್ದ ಕೃತಿಗಳು ಹಾಗೂ ಸಾಂಸ್ಕೃತಿಕವಾಗಿ ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಹನುಮಂತ ನರಸಪ್ಪ

ಮಾರ್ಗದರ್ಶಕರು

ಡಾ.ಡಿ. ಪಾಂಡುರಂಗಬಾಬು

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ಹನುಮಂತ ನರಸಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ **ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯ ಭಾಷೆ (ಸತ್ಯವೇದ ಮತ್ತು ಆಯ್ದ ಕೃತಿಗಳು ಹಾಗೂ ಸಾಂಸ್ಕೃತಿಕವಾಗಿ ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ)** ಎಂಬ ಸಂಶೋಧನಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : 08-02-19

ಸ್ಥಳ : ವಿದ್ಯಾರಣ್ಯ

ಸಂಶೋಧಕರ ಘೋಷಣಾ ಪತ್ರ

ಡಾ. ಡಿ. ಪಾಂಡುರಂಗಬಾಬು, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ **ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯ ಭಾಷೆ (ಸತ್ಯವೇದ ಮತ್ತು ಆಯ್ದ ಕೃತಿಗಳು ಹಾಗೂ ಸಾಂಸ್ಕೃತಿಕವಾಗಿ ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ)** ಎಂಬ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಣೆಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ಹನುಮಂತ ನರಸಪ್ಪ
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ : 8/2/19
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ: ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಭಿನ್ನವಾದ, ವಿಶಿಷ್ಟವಾದ ಪರಸ್ಪರ ಅಂತರ ನಿರ್ವಹಣೆ ಮಾಡುವ ಅನೇಕ ಸಮುದಾಯಗಳು ಒಂದೇ ಭಾಷೆಯನ್ನು ಬಳಸುತ್ತವೆ. ತಮ್ಮ ತಮ್ಮ ಸಮುದಾಯಬದುಕಿನ ವಿಧಾನ, ವೈವಿಧ್ಯತೆ, ವೈಶಿಷ್ಟ್ಯತೆಗಳಿಗೆ ಅನುಗುಣವಾಗಿ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಭಿನ್ನವಾದ ಅನೇಕ ಚಹರೆಗಳನ್ನು ಹೊಂದಿರುವ ಕಾರಣಕ್ಕೆ ಕೆಲವು ವಿಶಿಷ್ಟ ಭಾಷಾ ಲಕ್ಷಣಗಳನ್ನು ರೂಢಿಸಿಕೊಳ್ಳುತ್ತವೆ. ಹೀಗೆ ಹಲವು ಸಮುದಾಯಗಳು ಬಳಸುವ ವಿಶಿಷ್ಟವಾದ ಹಲವು ಒಳನುಡಿಗಳು ಒಟ್ಟಾಗಿ ಸೇರಿ ಒಂದು ಭಾಷೆಯಾಗುತ್ತದೆ. ಸಮುದಾಯಗಳಿಗೆ ವಿಶಿಷ್ಟವಾದ ಭಾಷಿಕ ಲಕ್ಷಣಗಳು ಇರುವಂತೆಯೇ, ಎಲ್ಲಾ ಸಮುದಾಯಗಳಿಗೂ ಅನ್ವಯವಾಗುವ ಸಾಮಾನ್ಯ ಲಕ್ಷಣಗಳೂ ಒಂದು ಭಾಷೆಗಿರುತ್ತವೆ. ಈ ಸಾಮಾನ್ಯ ಲಕ್ಷಣಗಳನ್ನು ಮತ್ತು ಭಾಷಿಕ ಜಾಯಮಾನವನ್ನು ಬಳಕೆಯ ನೆಲೆಯಲ್ಲಿ ಎಲ್ಲಾ ಸಮುದಾಯಗಳು ರೂಢಿಸಿಕೊಂಡಿದ್ದು ಪರಸ್ಪರ ಸಮುದಾಯಗಳ ನಡುವೆ ಬಳಸುತ್ತಾರೆ. ಹಾಗೆಯೇ ಒಂದೇ ಭಾಷೆಯನ್ನು ಬಳಸುವ ಕಾರಣಕ್ಕೆ ಭಾಷಿಕವಾಗಿ ಒಗ್ಗೂಡುವ ವಿಭಿನ್ನ ಸಮುದಾಯಗಳನ್ನು ಒಂದು ಭಾಷಿಕ ಸಮುದಾಯ ಎಂದು ಕರೆಯಲಾಗುತ್ತದೆ.

ಕನ್ನಡ ಭಾಷೆಯನ್ನು ಸಾವಿರಾರು ವರ್ಷಗಳಿಂದ ಅನೇಕ ಸಮುದಾಯಗಳು ಬಳಕೆ ಮಾಡುತ್ತಾ ಬಂದಿವೆ. ಈ ಸಮುದಾಯಗಳು ವಿವಿಧ ಧಾರ್ಮಿಕ ಹಿನ್ನೆಲೆಯನ್ನು ಹೊಂದಿದ್ದರೂ ಸಾವಿರಾರು ವರ್ಷಗಳಿಂದ ಇಲ್ಲೇ ನೆಲೆನಿಂತ ಕಾರಣಕ್ಕೆ ಕನ್ನಡವನ್ನೇ ಮನೆಮಾತು ಮತ್ತು ವ್ಯಾವಹಾರಿಕ ಭಾಷೆಯಾಗಿಸಿಕೊಂಡಿವೆ. ಈ ಸಮುದಾಯಗಳಿಗೆ ಸಂಬಂಧಿಸಿದ ಧಾರ್ಮಿಕ ಸಾಹಿತ್ಯವನ್ನು ಒಳಗೊಂಡಂತೆ ದೈವ, ಹಬ್ಬ, ಆಚರಣೆಗಳಿಗೆ ಸಂಬಂಧಿಸಿದ ಅಭಿವ್ಯಕ್ತಿಗೆ ಬೇಕಾದ ರಚನೆಗಳನ್ನು ತಾವು ಮಾತನಾಡುವ ಭಾಷೆಯ ಸಾಮಗ್ರಿಯಿಂದಲೇ ರೂಪಿಸಿಕೊಂಡಿವೆ. ಸಂಸ್ಕೃತ, ಪ್ರಾಕೃತ, ಮತ್ತಿತರ ಭಾರತೀಯ ಭಾಷೆಗಳಿಂದ ಪರಿಕಲ್ಪನೆ, ಪರಿಭಾಷೆಗಳನ್ನು ಪಡೆದುಕೊಂಡಿದ್ದರೂ ಇವುಗಳನ್ನು ತಮ್ಮ ಧಾರ್ಮಿಕ ವಲಯದ ವ್ಯಾಪ್ತಿಯನ್ನು ಹೊರತುಪಡಿಸಿಯೂ ಸಾಮಾನ್ಯ, ವ್ಯಾವಹಾರಿಕ, ಲೌಕಿಕ ಸಂದರ್ಭದಲ್ಲೂ ಈ ರಚನೆಗಳನ್ನು ಬಳಸುವುದರಿಂದ ತಮ್ಮ ಭಾಷೆಯ ಸಹಜ ಭಾಗವನ್ನಾಗಿ ಮಾಡಿಕೊಂಡಿರುತ್ತಾರೆ.

ಜೈನ, ಬೌದ್ಧ, ಹಿಂದೂ ಧರ್ಮದ ಹಿನ್ನೆಲೆಯ ಸಾಹಿತ್ಯದ ಭಾಷೆ ಮತ್ತು ಸಂಸ್ಕೃತಿಯ ಭಾಷಿಕ ರಚನೆಗಳು ಕನ್ನಡದ ಸಾಮಾನ್ಯ ವ್ಯಾವಹಾರಿಕ ಬಳಕೆಯ ನೆಲೆಯಲ್ಲಿಯೂ ಒಗ್ಗಿಕೊಂಡು ಸಹಜ ಬಳಕೆಗೆ ಬಂದಿವೆ. ಇಸ್ಲಾಂ ಧಾರ್ಮಿಕ ಹಿನ್ನೆಲೆಯ ಬಹುಪಾಲು ಸಮುದಾಯಗಳು ತಮ್ಮ ಮನೆಮಾತನ್ನಾಗಿ ಉರ್ದು ಅಥವಾ ದಖ್ಖನಿ ಭಾಷೆಯನ್ನು ಹೊಂದಿದ್ದು, ಧರ್ಮವು ಮತಾಂತರ

ಮತ್ತಿತರ ಕಾರಣಗಳಿಂದ ಕನ್ನಡ ಭಾಷಿಕರಿಂದ ಆಚರಿಸಲ್ಪಡುತ್ತಿದ್ದರೂ ಆ ಸಮುದಾಯಗಳು ತಮ್ಮ ಧಾರ್ಮಿಕ, ಸಾಮುದಾಯಿಕ ಅವಶ್ಯಕತೆಗಳಿಗೆ ಸಾಮಾನ್ಯವಾಗಿ **ಅರಬಿಕ್** ಭಾಷೆಯನ್ನು ವೈಯಕ್ತಿಕ, ಕೌಟುಂಬಿಕ, ಸಾಂಪ್ರದಾಯಿಕ ಶಿಕ್ಷಣದ ಅಗತ್ಯಗಳಿಗೆ ಉರ್ದು ಭಾಷೆಯನ್ನು ಬಳಸುತ್ತವೆ. ಹಾಗೂ **'ಕುರಾನ್'** ಅರಬಿಕ್ ಭಾಷೆಯಲ್ಲಿಯೇ ಇದೆ. ಬಹುಪಾಲು ಇಸ್ಲಾಂ ಮತೀಯರು ವ್ಯಾವಹಾರಿಕ ಮತ್ತು ಇತರೆ ಶೈಕ್ಷಣಿಕ ಉದ್ದೇಶಗಳಿಗೆ ಮಾತ್ರ ಕನ್ನಡವನ್ನು ಬಳಸುತ್ತಾರೆ.

ಆದರೆ ಕಳೆದ ನಾಲ್ಕೈದು ಶತಮಾನಗಳಿಂದ ಕ್ರೈಸ್ತ ಧರ್ಮ ಭಾರತಕ್ಕೆ ಪ್ರವೇಶಿಸಿದ ಕ್ರಮ ಆ ಧಾರ್ಮಿಕ ಹಿನ್ನೆಲೆಯ ಮೂಲ ನೆಲೆಯ ಲ್ಯಾಟಿನ್/ರೋಮನ್ ಭಾಷೆಗಳನ್ನು ಹೊರತುಪಡಿಸಿ ಸ್ಥಳೀಯ ಭಾಷೆಗಳ ಮುಖಾಂತರ ವಿಸ್ತರಿಸಿದ್ದು, ಆ ಸಂದರ್ಭದಲ್ಲಿ ಅದಕ್ಕಾಗಿಯೇ ಧಾರ್ಮಿಕ ಸಾಹಿತ್ಯವನ್ನು ಸ್ಥಳೀಯ ಭಾಷೆಗಳಲ್ಲಿ ರಚಿಸಲಾಯಿತು. ಈ ಸಾಹಿತ್ಯ ಧರ್ಮ ಪ್ರಚಾರ ಸಾಹಿತ್ಯವನ್ನೂ ಒಳಗೊಂಡಂತೆ ಧರ್ಮಗ್ರಂಥಗಳ ಅನುವಾದ, ಧರ್ಮ ಪುರಾಣದ ಸಾಹಿತ್ಯ, ಹೊಸದಾಗಿ ಅಳವಡಿಸಿಕೊಂಡ ಧರ್ಮಾಚರಣೆಗಳಿಗೆ ಸಂಬಂಧಿಸಿದಂತೆಯೂ ವಿಶಿಷ್ಟ **ಭಾಷಾಸಂದರ್ಭಗಳು** ಸೃಷ್ಟಿಯಾಗಿದ್ದು ಕನ್ನಡ ಭಾಷೆಯನ್ನು ಹೊಸ ಸಂದರ್ಭಗಳಿಗೆ ಅನುವುಮಾಡಿ, ಕನ್ನಡದ ಸಾಮಗ್ರಿಯ ಮೂಲಕ ಹೊಸ ನಿರೂಪಣೆಗಳನ್ನು ಮಾಡಲಾಗಿದೆ. ಹಾಗೆಯೇ ಅನಿವಾರ್ಯ ಸಂದರ್ಭಗಳಲ್ಲಿ ಲ್ಯಾಟಿನ್, ಗ್ರೀಕ್, ಪೋರ್ಚುಗೀಸ್, ರೋಮನ್ ಭಾಷೆಯ ಪದಗಳು, ಪರಿಭಾಷೆಗಳು ಕ್ರೈಸ್ತಧಾರ್ಮಿಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಆಚರಣೆಗಳ ಮೂಲಕ ಕನ್ನಡ ಭಾಷಾ ವಲಯವನ್ನು ಪ್ರವೇಶಿಸಿವೆ. ದೇಶೀಯವಲ್ಲದ ಒಂದು ಧರ್ಮದ ಆಚರಣೆ, ಸಾಂಸ್ಕೃತಿಕ ವಿಧ್ಯಮಾನಗಳು ಸ್ಥಳೀಯವಾದ ಬೇರೆ ಬೇರೆ ಬಗೆಯ ಆಚರಣೆಗಳನ್ನು ಧಾರ್ಮಿಕ ವಿನ್ಯಾಸಗಳನ್ನು ರೂಢಿಸಿಕೊಂಡಿದ್ದ ಹಲವು ಸಮುದಾಯಗಳು **'ಒಂದು'** ಬಗೆಯ ಧಾರ್ಮಿಕ ಆಚರಣೆ ಮತ್ತು ಧಾರ್ಮಿಕ ಸಾಹಿತ್ಯವನ್ನು ಸ್ಥಳೀಯವಾದ ತಮ್ಮ ಭಾಷೆಗಳ ಮೂಲಕ ಮತ್ತು ಸ್ವೀಕರಿಸಿದ ಧರ್ಮದ ಮೂಲ ಪ್ರದೇಶದ ಭಾಷೆಗಳಿಂದ ಸಾಮಗ್ರಿಗಳನ್ನು ಬಳಸುತ್ತಿವೆ. ಕನ್ನಡ ಭಾಷಾ ವಲಯಕ್ಕೆ ಹೀಗೆ ಬೇರೊಂದು ಪ್ರದೇಶದಲ್ಲಿ ಹುಟ್ಟಿ ಬೆಳೆದ ಧರ್ಮದ ಪ್ರವೇಶವು ಕನ್ನಡ ಭಾಷೆಯ ಸಾಹಿತ್ಯಿಕ, ಸಾಂಸ್ಕೃತಿಕ ಆವರಣವನ್ನು ಪ್ರಭಾವಿಸಿರುವ ಸ್ವರೂಪವನ್ನು ಅರಿಯುವುದು ಮತ್ತು ಕನ್ನಡ ಭಾಷೆಯು ಇಂತಹ ಸಂದರ್ಭವನ್ನು ಅನ್ವಯ ಮಾಡಿಕೊಳ್ಳುವ ಸಂದರ್ಭಕ್ಕೆ ಮಾಡಿಕೊಂಡಿರುವ ಬದಲಾವಣೆ, ಸೇರ್ಪಡೆ ಮತ್ತು ಇರುವ ರೂಪಗಳನ್ನು ಹೊಸ ಅರ್ಥಗಳಲ್ಲಿ ಪ್ರಯುಕ್ತಗೊಳಿಸಿರುವುದನ್ನು ಗುರುತಿಸಿ ಮಂಡಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

೧.೨. ಅಧ್ಯಯನದ ವ್ಯಾಪ್ತಿ: ಕನ್ನಡದಲ್ಲಿ ಲಭ್ಯವಿರುವ ಬೈಬಲ್ ಮತ್ತು ಪೂರಕ ಧಾರ್ಮಿಕ ಸಾಹಿತ್ಯ ಕೃತಿಗಳನ್ನು, ಧರ್ಮ ಪ್ರಚಾರ ಸಾಹಿತ್ಯ ಮತ್ತು ಬರಹಗಳನ್ನು, ಕನ್ನಡ ಕ್ರೈಸ್ತ ಸಮುದಾಯದ ಧಾರ್ಮಿಕ, ಸಾಮಾಜಿಕ ಆಚರಣೆಗಳ ಸಂದರ್ಭದ ಭಾಷೆಯ ಬಳಕೆಯನ್ನು ನಿರ್ದಿಷ್ಟ ಭೌಗೋಳಿಕ ಕ್ಷೇತ್ರಕ್ಕೆ ಸೀಮಿತಗೊಳಿಸಿ ಪರಿಶೀಲಿಸಲಾಗಿದೆ.

೧.೩. ಅಧ್ಯಯನದ ವಿಧಾನ: ಈ ಅಧ್ಯಯನವು ವಿವರಣಾತ್ಮಕವಾಗಿದ್ದು, ಲಿಖಿತ ಮಾಹಿತಿಯನ್ನೂ ಕ್ಷೇತ್ರಕಾರ್ಯಾಧಾರಿತವಾಗಿ ಸಾಮಾಜಿಕ ನೆಲೆಗಳಿಂದ ಸಂಗ್ರಹಿಸಿದ ಮಾಹಿತಿಯನ್ನೂ ಸಂಯೋಜಿಸಿ ವಿವರಗಳನ್ನು ಮಂಡಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ

ಅಧ್ಯಾಯ-೧ ಈ ಅಧ್ಯಾಯದಲ್ಲಿ ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಅಧ್ಯಯನ ಸ್ವರೂಪವನ್ನು ತಿಳಿಯಪಡಿಸಲಾಗಿದೆ.

ಅಧ್ಯಾಯ-೨ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಅಧ್ಯಯನಗಳಲ್ಲಿ ಸಮೀಕ್ಷೆಯನ್ನು ಈ ಅಧ್ಯಾಯದಲ್ಲಿ ಭಾಷಿಕವಾಗಿ ಗಮನಿಸಲಾಗಿದೆ.

ಅಧ್ಯಾಯ-೩ 'ಕನ್ನಡ ಕ್ರೈಸ್ತ ಧಾರ್ಮಿಕ ಸಾಹಿತ್ಯದ ಭಾಷಿಕ ಸ್ವರೂಪ' ಎಂಬ ಈ ಅಧ್ಯಾಯದಲ್ಲಿ ಕ್ರೈಸ್ತ ಧರ್ಮ ಗ್ರಂಥವಾದ ಸತ್ಯವೇದ (ಬೈಬಲ್) ಪರಿಶುದ್ಧ ಬೈಬಲ್, ಪವಿತ್ರ ಬೈಬಲ್, ಶುಭ ಸಂದೇಶ, ಸುಪ್ರೀಯ ಸಂದೇಶ, ಸುಪ್ರೀತ ಸಂದೇಶ ಎನ್ನುವ ಬೈಬಲ್ ಕೃತಿಗಳು ಹಾಗೂ ಗೀತೆಗಳಿಗೆ ಸಂಬಂಧಿಸಿದಂತೆ ಸಂಗೀತ ಮತ್ತು ಕೀರ್ತನೆಗಳು, ಬನ್ನಿರಿ ಆರಾಧಿಸೋಣ ಮತ್ತು ಉಜ್ಜೀವನ ಗೀತೆಗಳು ಎನ್ನುವ ಸಂಗೀತ ಸಾಹಿತ್ಯವು ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯವಾಗಿ ರಚನೆಯಾಗಿರುವುದನ್ನು ಗಮನಿಸಲಾಗಿದೆ. ಈ ಎಲ್ಲಾ ಕ್ರೈಸ್ತ ಧಾರ್ಮಿಕ ಸಾಹಿತ್ಯ ಕೃತಿಗಳಲ್ಲಿ ಕನ್ನಡ ಭಾಷೆ ಬಳಕೆಯಾಗಿದೆ. ಅದಕ್ಕೆ ಪೂರಕವಾಗಿ ರಚನೆಯಾಗಿರುವ ಕ್ರೈಸ್ತ ಧಾರ್ಮಿಕ ಕೃತಿಗಳನ್ನು ಭಾಷಿಕವಾಗಿ ಗಮನಿಸಲಾಗಿದೆ. ಗ್ರೀಕ್, ಹೀಬ್ರು ಪದಗಳು, ಸ್ಥಳನಾಮಗಳು, ವ್ಯಕ್ತಿನಾಮಗಳು ಹಾಗೂ ಸಾಮ್ಯಗಳಲ್ಲಿ ಬಳಕೆಯಾದ ಕನ್ನಡ ಭಾಷೆಯನ್ನು ಅರಿಯಲಾಗಿದೆ.

ಕನ್ನಡ ಕ್ರೈಸ್ತ ಧಾರ್ಮಿಕ ಸಾಹಿತ್ಯದೊಳಗೆ ಪರಿಭಾಷೆ ಹಾಗೂ ಕಾಲಜ್ಞಾನದ ವಿಚಾರವೂ ಕಂಡುಬಂದಿದೆ. ಪ್ರಮುಖವಾಗಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಎಂದರೆ ಅನುವಾದ ಸಾಹಿತ್ಯವಾಗಿದೆ. ಹಾಗಾಗಿ ಕನ್ನಡದೊಳಗೆ ಅನುವಾದವಾಗಿ ರಚನೆಯಾಗಿರುವ ಈ ಕ್ರೈಸ್ತ ಧಾರ್ಮಿಕ ಸಾಹಿತ್ಯದ ಕನ್ನಡ ಭಾಷೆಯ ಅನುವಾದ ಪರಿಕಲ್ಪನೆಯನ್ನು ಸವಿವರವಾಗಿ ಅಧ್ಯಯನ ಮಾಡಲಾಗಿದೆ. ಪದ್ಯ ಸಾಹಿತ್ಯ ಪ್ರಕಾರವೂ ಕ್ರೈಸ್ತ ಧರ್ಮದಲ್ಲಿ ಹೇರಳವಾಗಿ ಕಂಡುಬಂದಿದೆ. ಆದುದರಿಂದ 'ಪದ್ಯ ಸಾಹಿತ್ಯದ ಭಾಷೆ' ಅದರೊಳಗೆ ಕೆಥೋಲಿಕ್ ಹಾಗೂ ಪ್ರೊಟೆಸ್ಟೆಂಟ್‌ರ ಗೀತಾ ಭಾಷೆ ಎಂದು ಅಧ್ಯಯನ ಮಾಡಲಾಗಿದೆ. ಕ್ರೈಸ್ತ ಧರ್ಮ ಆಗಾಗ ಬಹಿರಂಗವಾಗಿ ಧರ್ಮೋಪದೇಶವನ್ನು ನೀಡುವುದರಿಂದ ಧರ್ಮೋಪದೇಶ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಗಮನಿಸಲಾಗಿದೆ. ಸಮುದಾಯ ಬಹಿರಂಗ ಕೂಟಗಳ ವಿಷಯ ಮತ್ತು ದಿನಾಂಕ ತಿಳಿಸಲು ಕರಪತ್ರಗಳಲ್ಲಿ ಕನ್ನಡ ನುಡಿ ಬಳಕೆ ಹಾಗೂ ಚರ್ಚ್‌ಗಳಲ್ಲಿ ಗೋಡೆಬರಹಗಳಾಗಿ ಬೈಬಲಿನಲ್ಲಿನ ಉಲ್ಲೇಖಗಳ ಬಳಕೆಯಾಗುವುದನ್ನು ತಿಳಿಯಲಾಯಿತು. ಜೊತೆಗೆ ಬೈಬಲಿನ ಸಾಮ್ಯ ಅಥವಾ ದೃಷ್ಟಾಂತಗಳಲ್ಲಿ ಒಂದೇ ಒಂದು ದೃಷ್ಟಾಂತ ತೆಗೆದುಕೊಂಡು ಅದನ್ನು ನಾಲ್ಕು ರೀತಿಯ ಬೈಬಲ್‌ನಲ್ಲಿ ಗಮನಿಸಿದಾಗ ಅಲ್ಲಿ ನುಡಿ ಬಳಕೆಯ ವ್ಯತ್ಯಾಸವನ್ನು ಕಂಡುಕೊಳ್ಳಲಾಯಿತು.

ಅಧ್ಯಾಯ-೪ ಕನ್ನಡ ಕ್ರೈಸ್ತ ಸಂಸ್ಕೃತಿ ಮತ್ತು ಭಾಷಾ ಬಳಕೆ ಈ ಅಧ್ಯಾಯದಲ್ಲಿ ಸಾಂಸ್ಕೃತಿಕವಾಗಿ ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿದ್ದರಿಂದ ಜಿಲ್ಲೆಯ ಸಂಸ್ಕೃತಿಯನ್ನು ತಿಳಿಯುವಲ್ಲಿ ಕ್ರೈಸ್ತ

ಚರಿತ್ರೆಯನ್ನು ಗಮನಿಸಬೇಕಾಗಿದ್ದುದರಿಂದ ಕ್ರೈಸ್ತ ಧರ್ಮದ ಚರಿತ್ರೆಯ ಬಗ್ಗೆ ಸಂಕ್ಷಿಪ್ತವಾಗಿ ದೇಶ, ರಾಜ್ಯ ಹಾಗೂ ವಿಶೇಷವಾಗಿ ರಾಯಚೂರು ಜಿಲ್ಲಾಮಟ್ಟದಲ್ಲಿ ಉಗಮಿಸಿರುವುದನ್ನು ಗಮನಿಸಲಾಗಿದೆ. ಮಾನಸಾಂತರ ಪೂರ್ವದಲ್ಲಿ ಇಂದಿನ ಕ್ರೈಸ್ತರ ಪಿತೃಗಳು ಹಾಗೂ ಪ್ರಸ್ತುತ ಕ್ರಿಶ್ಚಿಯನ್ನರು ಯಾವ ಯಾವ ಕುಲಕಸುಬು, ಆಚರಣೆಗಳನ್ನು ಮಾಡುತ್ತಿದ್ದರು ಹಾಗೆಯೇ ನಂಬಿಕೊಂಡಿದ್ದರೆಂದು, ವ್ಯಾಪ್ತಿ ವಲಯವಾಗಿರುವ ರಾಯಚೂರು ಜಿಲ್ಲೆಯ ಕ್ರೈಸ್ತರ ಬಗ್ಗೆ ಚರ್ಚಿಸಲಾಗಿದೆ. ಕ್ರೈಸ್ತ ಧಾರ್ಮಿಕ ಆಚರಣೆಗಳಾದ ಹಬ್ಬ, ಜಾತ್ರೆ, ಉತ್ಸವ ಹಾಗೂ ಭಕ್ತಿ ಸಂಜೀವನ (ಬಹಿರಂಗ ಸುವಾರ್ತ ಕೂಟ) ಈ ಕೂಟಗಳಲ್ಲಿ ಹಾಡುವುದು, ಕೂಗುವುದು, ಬೋಧಿಸುವುದು ಮತ್ತು ಸೂಚನೆಗಳನ್ನು ನೀಡುವುದೆಲ್ಲವೂ ಪರಸ್ಪರ ಸಂವಹನದಿಂದ ಹೊರ ಬರುವ ಭಾಷೆಯಾಗಿದೆ. ಪ್ರತಿಯೊಂದು ಧರ್ಮಕ್ಕೆ ಜಾತಿ ಜನಾಂಗಕ್ಕೆ ಭಾಷೆಯೆನ್ನುವುದು ಅತ್ಯಂತ ಅವಶ್ಯಕವಾಗಿದೆ. ಆಯಾ ಜಾತಿ ಜನಾಂಗದವರು ತಮ್ಮ ಎಲ್ಲಾ ಕ್ರಿಯೆಗಳನ್ನು ಮಾತಿನಿಂದಲೇ ನಿಬಾಯಿಸುವರು. ಮಾತೇ ಮಾಣಿಕ್ಯವೆಂಬಂತೆ ಇಲ್ಲಿ ಭಾಷೆಯೇ ಆಯಾ ಸಂಸ್ಕೃತಿ ಸಂಪ್ರದಾಯಗಳ ಉಸಿರು ಆಗಿದೆ.

ಮನುಷ್ಯನ ಹುಟ್ಟಿನಿಂದ ಆರಂಭವಾಗಿ ಚಟ್ಟದವರೆಗೆ ಮಾಡುವ ಎಲ್ಲಾ ಆಚರಣೆಗಳಲ್ಲಿನ ಭಾಷಾ ಬಳಕೆಯನ್ನು ತಿಳಿಯಲಾಗಿದೆ. ಉದಾ. ಜನನ, ನಾಮಕರಣ, ದೀಕ್ಷೆ, ದೃಢೀಕರಣ, ಋತುಮತಿ, ವಿವಾಹ, ಮರಣ ಎಂಬ ಸಂಸ್ಕಾರಗಳನ್ನು ಗಮನಿಸಲಾಗಿದೆ. ಹಾಗೆಯೇ ಕ್ರೈಸ್ತ ಧಾರ್ಮಿಕ ಆಚರಣೆಗಳಾದ,

ಕ್ರಿಸ್‌ಮಸ್ ಹಬ್ಬ: ಡಿಸೆಂಬರ್ ಮಧ್ಯ ರಾತ್ರಿಯಿಂದಲೇ ಎಲ್ಲಾ ಕ್ರೈಸ್ತ ಜನರು ಪಾದ್ರಿಯರನ್ನು ಸೇರಿಕೊಂಡು ಸಾಂತಾಕ್ಲೂಜ (ಕ್ರಿಸ್‌ಮಸ್ ತಾತಾ)ನೊಂದಿಗೆ ಇಡೀ ರಾತ್ರಿ ಮನೆ ಮನೆಗೆ ತೆರಳಿ ಕ್ರಿಸ್ತನ ಹುಟ್ಟಿದ ದಿನವನ್ನು ನೆನಪಿಸಿ ಆಚರಿಸುವುದನ್ನು ತಿಳಿಯಲಾಗಿದೆ.

ಕ್ರಿಸ್ತನ ಮೆರವಣಿಗೆ: ಈ ಆಚರಣೆಯನ್ನು ಖರ್ಜೂರ ಗರಿಗಳ ಭಾನುವಾರ ಎಂದೇ ಕರೆಯುವರು. ಹಿಂದೆ ಯೇಸು ಯೆರೂಸಲೇಮ(ಪ್ರದೇಶ)ನ್ನು ಕತ್ತೆಯ ಮೇಲೆ ಸವಾರಿ ಮಾಡಿ ಪ್ರವೇಶಿಸಿದಾಗ ಅಲ್ಲಿ ಸಾಕಷ್ಟು ಸಡಗರ ಸಂಭ್ರಮ ತುಂಬಿಕೊಂಡಿತ್ತು. ಹಾಗೆಯೇ ಪ್ರಸ್ತುತ ನಮ್ಮ ದೇಶದ ಕ್ರೈಸ್ತರು ವಿಶೇಷವಾಗಿ ರಾಯಚೂರು ಜಿಲ್ಲೆಯ ವಿಶ್ವಾಸಿಗಳು ಸಹಿತ ಅದರ ನೆನಪಿನಾರ್ಥವಾಗಿ ಯೇಸುಕ್ರಿಸ್ತನ ಭಾವಚಿತ್ರವನ್ನು ಕತ್ತೆಯ ಮೇಲೆ ಇರಿಸಿ ಮೆರವಣಿಗೆ (ಊರೊಳಗೆ) ಮಾಡಿ ದೇವಾಲಯಕ್ಕೆ ಬಂದು ಪ್ರಾರ್ಥಿಸಿ ಘೋಷಣೆಗಳೊಂದಿಗೆ ಮುಕ್ತಾಯಗೊಳಿಸುವುದನ್ನು ಗಮನಿಸಲಾಗಿದೆ.

ಗುಡ್‌ಫ್ರೈಡೆ ಹಬ್ಬ: ಈ ಹಬ್ಬವನ್ನು ಶುಭ ಶುಕ್ರವಾರ ಹಬ್ಬವೆಂತಲೂ ಕರೆಯುವರು. ಇದು ವಿಶೇಷವಾಗಿ ಕ್ರಿಸ್ತನು ೪೦ ದಿನಗಳ ಕಾಲ ಉಪವಾಸಗೈಯ್ದು ಮಾನವನ ಪಾಪಗಳಿಗಾಗಿ ಶಿಲುಬೆ ಮೇಲೆ ಪ್ರಾಣ ಬಿಟ್ಟಿರುವ ಒಂದು ಸಂದರ್ಭವನ್ನು ಸ್ಮರಿಸಿ ಕ್ರೈಸ್ತರು ಮಾಡುವ ಆಚರಣೆಯಾಗಿದೆ ಎಂಬುದನ್ನು ತಿಳಿಯಲಾಗಿದೆ.

ಪುನರುತ್ಥಾನ ಹಬ್ಬ: ಇದನ್ನು ಆಂಗ್ಲ ಭಾಷೆಯಲ್ಲಿ 'ಈಸ್ಟರ್' ಎಂದು ಕರೆಯುತ್ತಾರೆ. ಯೇಸು ತಾನು ಜೀವಿಸಿದ ಅವಧಿಯಲ್ಲಿ ಕೊಟ್ಟಿರುವ ವಾಗ್ದಾನ (ಮೂರು ದಿನದಲ್ಲಿ ತಿರುಗಿ ಸಾವಿನಿಂದ ಏಳುತ್ತೇನೆ) ದಂತೆ ಮೃತ್ಯುಂಜಯನಾಗಿ ಎದ್ದಿದ್ದಾನೆಂದು ಗುರ್ತಿಸಿ ಆಚರಿಸುವ ಹಬ್ಬವಾಗಿದೆ. ಆ ದಿನ ಬೆಳಿಗ್ಗೆ ೪ ಗಂಟೆಗೆ ಕ್ರಿಸ್ತನ ಸಮಾದಿಯೆಂದು ಆಯಾ ಊರುಗಳಲ್ಲಿ ನಿಗದಿ ಮಾಡಿರುವ ಸ್ಥಳಗಳಿಗೆ ಹೋಗಿ ಪ್ರಾರ್ಥಿಸಿ ಊರೊಳಗೆ ದಾರಿಯುದ್ದಕ್ಕೂ ಹಾಡುಗಳು, ವಾಕ್ಯಗಳು, ಘೋಷಣೆಗಳ ಮೂಲಕ ಕ್ರಿಸ್ತನ ವಿಷಯವಾಗಿ ಸಾರುತ್ತಾ ದೇವಾಲಯಕ್ಕೆ ಬರುವುದನ್ನು ಗಮನಿಸಲಾಗಿದೆ. ಜೊತೆಗೆ ಅಲ್ಲಿನ ಭಾಷಾ ಬಳಕೆಯನ್ನು ಕಂಡುಕೊಳ್ಳಲಾಗಿದೆ.

ವರ್ಷಾಂತ್ಯದವರೆಗೆ ಕೆಥೋಲಿಕ್ ಕ್ರೈಸ್ತರು ಹಬ್ಬ, ಜಾತ್ರೆ, ಉತ್ಸವಗಳನ್ನು ನೆನಪಿನ ದಿನಗಳನ್ನಾಗಿ ಕ್ರೈಸ್ತ ಸನ್ಯಾಸಿಗಳನ್ನು ನೆನಸಿ ಕ್ರಿಸ್ತ, ಮೇರಿಯನ್ನು ಸ್ಮರಿಸಿ ಆಚರಿಸುವ ಕಾರ್ಯಗಳಲ್ಲಿ ಬಳಸುವ ಭಾಷೆಯನ್ನು ಗಮನಿಸಲಾಗಿದೆ.

ಸ್ಥಳೀಯ ಸಂಸ್ಕೃತಿ ಮತ್ತು ಕ್ರೈಸ್ತ ಸಂಸ್ಕೃತಿಯ ಪರಿಧಿಯೊಳಗೆ ಪ್ರಾಚೀನ ಕುಲಕಸುಬುಗಳು, ವೃತ್ತಿಯೋಪಕರಣ, ವ್ಯಕ್ತಿನಾಮ ಹಾಗೂ ಸ್ಥಳನಾಮಗಳ ಮತ್ತು ಮಾನಸಾಂತರ/ಮತಾಂತರ ಪರಿಕಲ್ಪನೆಯನ್ನು ಭಾಷಿಕವಾಗಿ ಗಮನಿಸಲಾಗಿದೆ. ವ್ಯಾಪ್ತಿಯಿಂದ ರಾಯಚೂರು ಜಿಲ್ಲೆಯಲ್ಲಿ ತೆಗೆದುಕೊಂಡಿದ್ದರಿಂದ ವ್ಯಾಪ್ತಿಯೊಳಗೆ ಬರುವ ಕ್ರೈಸ್ತ ಸಮುದಾಯದ ಆಡಳಿತ ವ್ಯವಸ್ಥೆ, ಪಾದ್ರಿ ಮತ್ತು ಚರ್ಚ್ ಇರುವ ಗ್ರಾಮಗಳೆಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ–೫ ಅನ್ಯದೇಶಿ ಪದಗಳು, ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಕಂಡುಬರುವ ಪದಗಳು ಮತ್ತು ಪರಿಭಾಷೆಯನ್ನು ಗಮನಿಸಲಾಗಿದೆ. ಸತ್ಯವೇದದಲ್ಲಿ ಕಂಡುಬರುವ ಪ್ರಾಣಿ, ಪಕ್ಷಿ, ವಸ್ತು, ಕ್ರಿಮಿ–ಕೀಟ, ಹಣ್ಣು ಹಂಪಲಗಳ ನಾಮಪದಗಳನ್ನು ಗ್ರಹಿಸಲಾಗಿದೆ. ಅಲ್ಲದೆ ಕ್ರೈಸ್ತ ಸಮುದಾಯದಲ್ಲಿ ಆಡಳಿತಾತ್ಮಕವಾಗಿ ಕಂಡುಬರುವ ಹುದ್ದೆ, ಪದನಾಮಗಳನ್ನು ಹಂತಹಂತವಾಗಿ ಆಯಾ ಕ್ರೈಸ್ತ ಪಂಥಕ್ಕನುಗುಣವಾಗಿ ವಿಂಗಡಿಸಿ ಭಾಷಿಕವಾಗಿ ವಿವರಿಸಲಾಗಿದೆ.

ಅಧ್ಯಾಯ–೬ ಸಮಾರೋಪ ಫಲಿತಗಳು: ಈ ಅಧ್ಯಾಯದಲ್ಲಿ ಅಧ್ಯಯನ ಉದ್ದೇಶದೊಂದಿಗೆ, ಅಧ್ಯಯನ ವಿಶ್ಲೇಷಣೆ, ಅಧ್ಯಯನ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಜೊತೆಗೆ ಅಧ್ಯಯನ ಸಾಧ್ಯತೆಗಳನ್ನು ವಿವೇಚಿಸಲಾಗಿದೆ. ಅನುಬಂಧದಲ್ಲಿ ಆಕರ ಗ್ರಂಥಗಳಲ್ಲಿನ ಪ್ರಧಾನ ಗ್ರಂಥಗಳು, ಪೂರಕ ಗ್ರಂಥಗಳು, ಅಂತರ್ಜಾಲ ಮಾಹಿತಿ, ವಕ್ತೃವಿವರ, ಛಾಯಾಚಿತ್ರ ಹಾಗೂ ನಕ್ಷೆಯನ್ನು ನೀಡಲಾಗಿದೆ.

❖❖❖

ಅಧ್ಯಾಯ : ಎರಡು

ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಈ ಅಧ್ಯಾಯದಲ್ಲಿ ಈಗಾಗಲೇ ಕ್ರೈಸ್ತ ಧರ್ಮ, ಸಾಹಿತ್ಯ ಹಾಗೂ ಸಂಸ್ಕೃತಿಗೆ ಸಂಬಂಧಿಸಿ ಅಧ್ಯಯನ ಆಗಿರುವ ಕೆಲವು ಕೃತಿಗಳನ್ನು ಗಮನಿಸಲಾಗುವುದು. ನನ್ನ ಅಧ್ಯಯನ ವಿಷಯವಾಗಿರುವ "ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯ ಭಾಷೆ" ಈ ಅಧ್ಯಯನಕ್ಕೆ ಪೂರಕವಾಗಿ ಕೆಲ ಕೃತಿಗಳ ಅಧ್ಯಯನ ಸಮೀಕ್ಷೆ ಮಾಡಲಾಗುವುದು. ಆಗಿರುವ ಅಧ್ಯಯನಗಳಲ್ಲಿ ಯಾವ ಯಾವ ವಿಷಯವಸ್ತುವನ್ನು ಹೆಚ್ಚಾಗಿ ಗಮನಿಸಿದ್ದಾರೆ, ಇನ್ನು ಉಳಿದ ವಿಷಯವೇನು? ಅನ್ನುವುದರ ಬಗ್ಗೆ ಹಾಗೆಯೇ ನನ್ನ ವಿಷಯಕ್ಕೆ ಎಷ್ಟು ಸೂಕ್ತವಾಗಿವೆ ಎಂದು ಅವಲೋಕನ ಮಾಡಲಾಗುವುದು. ಅಲ್ಲದೆ ಆ ಅಧ್ಯಯನಗಳಿಂದ ಇನ್ನು ಏನನ್ನು ಆಶಿಸಬಹುದು ಎಂಬುದರ ಬಗ್ಗೆ ಚಿಂತನೆ ಮಾಡಲಾಗುವುದು.

ಅಧ್ಯಯನ ಸಮೀಕ್ಷೆಗೆ ಎಲ್ಲಾ ಧರ್ಮ, ಸಾಹಿತ್ಯ, ಸಂಸ್ಕೃತಿ ವಿಷಯಗಳು ಒಳಪಡುವಂತೆ ಕ್ರೈಸ್ತ ಧರ್ಮ ಸಾಹಿತ್ಯ ಸಂಸ್ಕೃತಿಯೂ ಹೊರತಾಗಿಲ್ಲ ಆದುದರಿಂದ ಕ್ರೈಸ್ತ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿ ರಚನೆಯಾದ ಸಾಹಿತ್ಯ ಅದರಲ್ಲಿ ವಿಶೇಷವಾಗಿ ಕನ್ನಡದಲ್ಲಿ ರಚನೆಗೊಳಪಟ್ಟ ಕೆಲವು ಆಯ್ದ ಕೃತಿಗಳ ಅಧ್ಯಯನ ಸಮೀಕ್ಷೆ ಮಾಡಲಾಯಿತು. ಅಂತಹ ಕೃತಿಗಳ (ಕನ್ನಡ) ವಿಶ್ಲೇಷಣೆ ಈ ಕೆಳಕಂಡಂತಿದೆ.

೨.೧. ಸಂಶೋಧನಾ ಕೃತಿಗಳ ಸಮೀಕ್ಷೆ

* **ಪುನೀತ್ ಡಿ.ಟಿ. 'ಕನ್ನಡ ಬೈಬಲ್: ಒಂದು ಅಧ್ಯಯನ'** ಅವರು ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ಎಫ್.ಟಿ. ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿರುವ ಪಿ.ಎಚ್.ಡಿ. ಮಹಾಪ್ರಬಂಧವನ್ನು ಅಧ್ಯಯನ ಸಮೀಕ್ಷೆಗೆ ತೆಗೆದುಕೊಂಡು ಅದರೊಳಗಿನ ಅಂಶಗಳನ್ನು ಹೀಗೆ ಗಮನಿಸಲಾಯಿತು.

೪ನೇ ಶತಮಾನದ ಮಧ್ಯಭಾಗದಲ್ಲಿ ಕ್ಲಮೆಂಟಿ ಎಂಬುವನು ಬೈಬಲ್ ಎಂದು ಕರೆದನು. ಅದು ೪೯ ವ್ಯಕ್ತಿಗಳಿಂದ ರಚನೆಯಾಗಿದೆ. ಬೈಬಲ್‌ನಲ್ಲಿ ಕಥೆ, ಕಾದಂಬರಿ, ದೃಷ್ಟಾಂತ, ಸಂಭಾಷಣೆ,

ಕಾವ್ಯ, ಭಾಷಾಂತರ ಮತ್ತು ರೂಪಾಂತರವನ್ನು ಕಾಣಬಹುದು ಎಂದಿದ್ದಾರೆ. ಹೊಸಗನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ಆದ ಪರಿಣಾಮಗಳನ್ನು ಚರ್ಚಿಸಿದ್ದಾರೆ. ಕ್ರೈಸ್ತರು ಹಿಂದೂ ಧರ್ಮದ ಮೇಲೆ ವಿರೋಧ ವ್ಯಕ್ತಪಡಿಸಿದರು ಅನ್ನುವುದಕ್ಕಿಂತ ಇತರ ಧರ್ಮಗಳು ಕೇಡು ಮಾಡಿಲ್ಲವೇ? ಎಂದು ಪ್ರಶ್ನಿಸುತ್ತಾರೆ. ಕನ್ನಡದ ಧಾರ್ಮಿಕ ಸಾಹಿತ್ಯಕ್ಕೆ ಬೈಬಲ್‌ನ ಕೊಡುಗೆ ಏನು? ಎಂಬುದರ ಬಗ್ಗೆ ತಿಳಿಯುತ್ತಾ ಮಿಶನರಿಗಳ ಕ್ರೈಸ್ತ ಸಾಹಿತ್ಯವೇ ಕನ್ನಡ ಶಾಸ್ತ್ರ ಸಾಹಿತ್ಯವು ಹೊಸದಾದ ರೂಪವನ್ನು ಪಡೆಯಲು ಸಹಾಯಕವಾಯಿತು ಎಂದು ಲೇಖಕರು ಹೇಳುತ್ತಾರೆ. ನಿಘಂಟು ವ್ಯಾಕರಣಗಳಲ್ಲಿ ಬದಲಾವಣೆ ತಂದು ಕೊಟ್ಟಿದ್ದಾರೆ ಎಂದು ತಿಳಿಯಲಾಯಿತು. ಬೈಬಲ್‌ನ ಸ್ವರೂಪ ಅದರ ರಚನಾ ವಿಧಾನ ಅದರ ಸಂಗ್ರಹ ಅನುವಾದದ ಬಗ್ಗೆ ಅಲ್ಲದೆ ಸಂರಕ್ಷಣೆಯ ವಿಧಾನಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ಅನುವಾದಕ್ಕಾಗಿ ಕಲ್ಕತ್ತೆಯ ಸೆರಾಂಪೂರ, ಮದ್ರಾಸಿನ ಸೇಂಟ್ ಜಾರ್ಜ್ ಕಾಲೇಜ್, ಬಳ್ಳಾರಿಯ ವಾರ್ಡಲಾ ಕಾಲೇಜ್, ಮಂಗಳೂರು ಮತ್ತು ಧಾರವಾಡದ ಬಾಸೆಲ್‌ಮಿಷನ್ ಮತ್ತು ಬೆಂಗಳೂರಿನ ಬೈಬಲ್ ಸೊಸೈಟಿ ಆಫ್ ಇಂಡಿಯಾ (ಬಿಎಸ್ಐ) ಎಂಬ ಸಂಸ್ಥೆಗಳು ಸಕ್ರಿಯವಾಗಿದ್ದವು ಎನ್ನುತ್ತಾರೆ.

ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ, ಹೊಸಗನ್ನಡ ಗದ್ಯ ಶೈಲಿ, ಪದ್ಯ ಶೈಲಿ ಅನುವಾದ, ಶಬ್ದಕೋಶ, ಕಥೆ ಮತ್ತು ಕಾದಂಬರಿ ರೂಪಗಳಿಗೆ ಬೈಬಲ್ ಮತ್ತು ಕ್ರೈಸ್ತ ಸಾಹಿತ್ಯ ಹೇಗೆ ಸಹಾಯಕವಾಗಿದೆ ಅದು ಎಷ್ಟರಮಟ್ಟಿಗೆ ಅವಶ್ಯಕವಾಯಿತು ಅದರಿಂದಾದ ಅನುಕೂಲಗಳೇನು ಎಂಬುದನ್ನು ಈ ಕೃತಿಯ (ಸಂಶೋಧನಾ) ಮೂಲಕ ಗಮನಕ್ಕೆ ತರಲಾಯಿತು. ಅಲ್ಲದೆ ಬೈಬಲ್ ಒಂದು 'ಸಂವಹನ ಮಾಧ್ಯಮ'ವಾಗಿ ನಿಲ್ಲುತ್ತದೆ. ಏಕೆಂದರೆ ಸತ್ಯವೇದದಲ್ಲಿ ಮತ್ತು ಸಂಸ್ಕೃತಿಯಲ್ಲಿ ಧರ್ಮಗುರು ಮತ್ತು ಭಕ್ತರು ಪರಸ್ಪರ ಉತ್ತರ ಪ್ರತ್ಯುತ್ತರವಾಗಿ ಆರಾಧಿಸುವರು ಕ್ರಿಸ್ತನ ಸಂದರ್ಭದಲ್ಲಿ ಯೇಸು ಮತ್ತು ಶಿಷ್ಯರು, ವಿಶ್ವಾಸಿಗಳು ಸಂವಹನ ಮಾಡುತ್ತಿದ್ದರು. ಪ್ರಸ್ತುತ ಕಾಲದಲ್ಲಿ ಕ್ರೈಸ್ತರು ಮತ್ತು ಕ್ರೈಸ್ತರ ಗುರು ಪರಸ್ಪರ ಸಂವಹನಾತ್ಮಕವಾಗಿ ಪ್ರಾರ್ಥನೆ ಮಾಡುತ್ತಾರೆ ಎಂದು ಗಮನಿಸಿದೆ.

ಹಾಗೆಯೇ ಬೈಬಲ್ ಇತರ ಧರ್ಮ ಗ್ರಂಥಗಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ. ಭಾಷಾಂತರದಿಂದ ಕನ್ನಡ ಭಾಷೆಗೆ ಆದಂತಹ ಪ್ರಯೋಜನವನ್ನು ಕೂಲಂಕುಷವಾಗಿ ಹೇಳಿದ್ದಾರೆ ಎಂದು ಅಧ್ಯಯನ ಸಮೀಕ್ಷೆಯ ಮೂಲಕ ಗಮನಿಸಲಾಯಿತು.

*** ಆರ್. ಲೋಹಿತ್‌ಕುಮಾರ, 'ಬಳ್ಳಾರಿ ಜಿಲ್ಲೆಯ ಕ್ರೈಸ್ತ ಮಿಷನರಿಗಳ ಚರಿತ್ರೆ'** ೨೦೧೭ರಲ್ಲಿ ರಚನೆಯಾದ ಈ ಮೇಲಿನ ಸಂಶೋಧನಾ ಕೃತಿಯಲ್ಲಿ ವಿಶೇಷವಾಗಿ ಮುದ್ರಣ, ಮತಾಂತರ ಮತ್ತು ಸಾಹಿತ್ಯದ ಅಂಶಗಳನ್ನು ಗಮನಿಸಲಾಯಿತು. ಅವುಗಳು ೧. ಮುದ್ರಣ- ೧೪೫೭ರ ಸುಮಾರಿನಲ್ಲಿ ಯುರೋಪಿನಲ್ಲಿ ಮುದ್ರಣ ಕಲೆಯು ಆವಿಷ್ಕಾರಗೊಂಡಿತು. ಈ ಕಲೆಯನ್ನು ಜರ್ಮನಿಯ ಗುಟನ್‌ಬರ್ಗ್ ಎಂಬುವನು ಮೊದಲ ಬಾರಿಗೆ ನಮ್ಮಲ್ಲಿ ಅಚ್ಚು ಮೊಳೆಗಳ ಮೂಲಕ ಶೋಧಿಸಿದನು. ಇದರಿಂದ ನಮ್ಮ ದೇಶದಲ್ಲಿ ಸತ್ಯವೇದವನ್ನು ಒಳಗೊಂಡಂತೆ ಹಲವಾರು ಕ್ರೈಸ್ತ

ಧಾರ್ಮಿಕ ಮತ್ತು ಧಾರ್ಮಿಕೇತರ ಪುಸ್ತಕಗಳು ಬಹಳ ಹೇರಳವಾಗಿ ರಚನೆ (ಮುದ್ರಣ)ಯಾದವು ಎಂದು ತಿಳಿಸಲಾಗಿದೆ.

ಬಳ್ಳಾರಿ ಮಿಷನ್ ಕೇಂದ್ರದಲ್ಲಿ ಮುದ್ರಣಗೊಂಡ ಪುಸ್ತಕಗಳು

ಮುದ್ರಿತವರ್ಷ	ವಿಷಯ	ಪ್ರತಿಗಳು
೧೮೨೧	ಸುವಾರ್ತೆಯ ಕರಪತ್ರಗಳು	೧೦೦೦
೧೮೩೦	ಕನ್ನಡ ಹೊಸ ಒಡಂಬಡಿಕೆ	೧೦೦೦
೧೮೩೧	ಹಳೆ ಮತ್ತು ಹೊಸ ಒಡಂಬಡಿಕೆಯ ಕನ್ನಡ ಬೈಬಲ್	೧೦೦೦
೧೮೩೧	ಇಪ್ಪತ್ತೆಂಟು ವಿಷಯಗಳನ್ನು ಕುರಿತ ಕರಪತ್ರಗಳು	೩೦೦
೧೮೩೨	ಕನ್ನಡ ಈಸೋಪನ ಕಥೆಗಳು	೧೦೦೦
೧೮೩೩	ಗಣಿತ ಪುಸ್ತಕ	
೧೮೩೩	ಕನ್ನಡದಲ್ಲಿ ಯಾತ್ರಿಕನ ಸಂಚಾರ ಭಾಗ ಒಂದು	
೧೮೩೩	ತೆಲುಗು ಶಬ್ದಕೋಶ	
೧೮೪೦	ಇಂಗ್ಲಿಷ ಕನ್ನಡ ಪಾಠ ಬೋಧೆ	
೧೮೪೩	ಕನ್ನಡ ಭೂಗೋಳಶಾಸ್ತ್ರ	೨೫೦
೧೮೪೪	ಕನ್ನಡ ವಾರ್ತಾಪತ್ರಿಕೆ ೨೦ ಸಂಚಿಕೆಗಳು	೧೧೮೦೦
೧೮೪೫	ಕನ್ನಡ ಪ್ರಪಂಚ ಸರಳ ಚರಿತ್ರೆ	೫೦೦
೧೮೪೫	ಕನ್ನಡ ವಾರ್ತಾ ಪತ್ರಿಕೆ ನಾಲ್ಕು ಸಂಚಿಕೆಗಳು	೧೯೦೦
೧೮೪೬	ಇಂಗ್ಲೀಷ್ ಭೂಗೋಳಶಾಸ್ತ್ರ	೭೫೦
೧೮೪೬	ಇಂಗ್ಲಿಷ್ ಕನ್ನಡ, ಕನ್ನಡ ಇಂಗ್ಲೀಷ್ ಶಬ್ದಕೋಶ	೭೫೦
೧೮೪೭	ಕನ್ನಡ ಸಾಮಾನ್ಯ ಚರಿತ್ರೆ	೫೦೦

ಮಿಷನರಿಗಳ ಮುದ್ರಣ ಕಾರ್ಯದಿಂದ ಹಲವು ಕನ್ನಡ ಭಾಷೆಯಲ್ಲಿಯೇ ಕನ್ನಡ ಸಾಹಿತ್ಯ, ಶಬ್ದಕೋಶಕ್ಕೆ ಸಂಬಂಧಿಸಿ ಅನ್ಯ ಪುಸ್ತಕಗಳು ಅಂದರೆ ಕನ್ನಡ, ಇಂಗ್ಲೀಷ್, ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು ರಚನೆಯಾಗಿವೆ ಎಂದು ಗಮನಿಸಲಾಗಿದೆ.

೧೯ನೇ ಶತಮಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮತಾಂತರ ಪ್ರಕ್ರಿಯೆಗಳು ಜರುಗಿದವು. ಏಕೆಂದರೆ ಪ್ರಕೃತಿ ವಿಕೋಪಗಳು ಮತ್ತು ಕೆಟ್ಟ ಆಡಳಿತಶಾಹಿ ನಿಯಮಗಳು ಎನ್ನಬಹುದು. ಮೊದಲಿಗೆ ಬ್ರಾಹ್ಮಣರೂ ಸೇರಿದಂತೆ ಮೇಲ್ವರ್ಗದವರು ಮತಾಂತರಕ್ಕೆ ಸಮ್ಮತಿಸಿದರು. ೧೮೩೫ ಮತ್ತು ೧೮೮೫-೯೦ರಲ್ಲಿ ಸಂಭವಿಸಿದ ಭೀಕರ ಪ್ಲೇಗ್ ಮತ್ತು ಕ್ಷಾಮಗಳಿಗೆ ಬೆದರಿದ ಬಡಜನತೆಯು, ಆಸ್ಪತ್ರೆ ಸೌಲಭ್ಯ ನೀಡುತ್ತಿದ್ದ ಹಾಗೂ ವಿದೇಶಗಳಿಂದ ಆಹಾರ ತರಿಸಿ ಕೊಡುತ್ತಿದ್ದ ಮಿಷನರಿಗಳ ಕೈಗೊಂಬೆಗಳಾಗಿ ನಂತರ ಸಾಮಾಜಿಕ ಭದ್ರತೆಗಾಗಿ ಮತಾಂತರ ಆದರು. ಅದರಲ್ಲಿ ವಿಶೇಷವಾಗಿ ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ, ಬಣಜಿಗ, ಬ್ರಾಹ್ಮಣ, ದೇವಾಂಗ, ತುಳು, ವಡ್ಡ, ವಕ್ಕಲಿಗ, ಗೊಲ್ಲ, ಕುರುಬ, ಲಂಬಾಣಿ, ಮಾದಿಗ, ಮೆಹರ್, ರೆಡ್ಡಿ ಮುಂತಾದವರು ಅಲ್ಲದೆ ಗೌಡಿ ಕ್ರೈಸ್ತ, ಚರೋಡಿ ಕ್ರೈಸ್ತ ಎಂಬಂತಹ ಇನ್ನೆರಡು ಪಂಗಡಗಳು ಮತಾಂತರ ಆದದ್ದು.

ಆರಂಭದಲ್ಲಿ ಬಂದ ಜಾನ್ ಹ್ಯಾಂಡ್ಸ್, ವಿಲಿಯಂ ರೀವ್ಸ್ ಜಾನ್ ರೀಡ್ ರಂತಹ ಮಿಷನರಿಗಳು (ಸೇವಕರು) ಬಹಳ ಚುರುಕಾಗಿದ್ದು ಒಳ್ಳೆಯ ಪಾಂಡಿತ್ಯವಂತರು ಆಗಿದ್ದರಿಂದಲೇ ಅವರು ಶಬ್ದಕೋಶ ರಚನೆ, ಭಾಷಾಂತರ, ಮುದ್ರಣದಂತಹ ಕಾರ್ಯಗಳಲ್ಲಿ ತಲ್ಲೀನರಾಗಿದ್ದರು. ೧೯೨೮ರಲ್ಲಿ ಹಚ್ಚೊಳ್ಳಿ, ೧೯೩೮ರಲ್ಲಿ ಹಾಲ್ವಿ, ೧೯೩೭ರಲ್ಲಿ ಮೀನಳ್ಳಿ, ೧೯೩೮ರಲ್ಲಿ ಸಂಗನಕಲ್ಲು, ಕರ್ಚೆಡು, ಮೋಕಾ ಮುಂತಾದ ಗ್ರಾಮಗಳು ಅಲ್ಲಿನ ದಲಿತರು ಮತಾಂತರವಾದರು. ಮತಾಂತರಗೊಂಡ ಬಹುತೇಕರಲ್ಲಿ ಮಾದಿಗರೇ ಹೆಚ್ಚಾಗಿದ್ದರು. ದಲಿತರು ಹೆಚ್ಚಾಗಿ ಮತಾಂತರವಾದ್ದರಿಂದ 'ದಲಿತ ಕ್ರೈಸ್ತರು' ಎಂದು ಸಮಾಜದಲ್ಲಿ ಕರೆಯಲ್ಪಟ್ಟರು ಎಂದು ಅಧ್ಯಯನ ಸಮೀಕ್ಷೆಯಿಂದ ಗಮನಿಸಲಾಯಿತು.

ಹೊಸಗನ್ನಡ ಗದ್ಯದಲ್ಲಿ ಬೈಬಲ್ ಭಾಷಾಂತರ ಕೆಲಸಕ್ಕೆ ಕೈ ಹಾಕಿದ ಜಾನ್ ಹ್ಯಾಂಡ್ಸ್‌ರವರ ಕಾಲ (೧೮೦೯)ವನ್ನು ಶ್ರೀನಿವಾಸ ಹಾವನೂರು ಅವರು 'ಹೊಸಗನ್ನಡ ಅರುಣೋದಯದ ಆರಂಭ' ಎಂದಿದ್ದಾರೆ. ರಂ.ಶ್ರೀ. ಮುಗಳಿ ಹೊಸಗನ್ನಡ ಸಾಹಿತ್ಯದ ಉದಯ (೧೮೨೦ ರಿಂದ ೧೮೩೦) ಎಂದು ಉಲ್ಲೇಖಿಸುತ್ತಾರೆ. ಹೀಗೆ ಕನ್ನಡದಲ್ಲಿ ಗದ್ಯ ಮಾದರಿ ಆರಂಭವಾಗಿದ್ದು ಬಳ್ಳಾರಿ ಮಿಷನರಿಗಳಿಂದ ಎಂದು ಹೇಳಬಹುದು. ಕನ್ನಡ ವ್ಯಾಕರಣ ಮತ್ತು ಕನ್ನಡ ಶಬ್ದಕೋಶ ರಚನೆಯಲ್ಲಿಯೂ ಜಾನ್ ಹ್ಯಾಂಡ್ಸ್, ವಿಲಿಯಂ ರೀವ್, ಮತ್ತು ಜಾನ್‌ರೀಡ್ ಅವರು ಪ್ರಮುಖರಾಗುತ್ತಾರೆ. ವಿಲಿಯಂ ರೀವ್‌ರವರು ೧೮೨೪ರಲ್ಲಿ ಇಂಗ್ಲಿಷ್ ಕನ್ನಡ ಶಬ್ದಕೋಶವನ್ನು, ೧೮೩೨ರಲ್ಲಿ ಕನ್ನಡ-ಇಂಗ್ಲಿಷ್ ಶಬ್ದಕೋಶವನ್ನು ರಚಿಸಿದರು. ಹಾಗೆಯೇ ಸ್ಯಾಂಡರ್‌ಸನ್ ಮತ್ತು ಕಿಟೆಲ್‌ರವರು ಮತ್ತಷ್ಟು ಶ್ರಮವಹಿಸಿ ಪ್ರಸಿದ್ಧ ಶಬ್ದಕೋಶಗಳನ್ನು ರಚಿಸಿದರು ಅದು ಅಲ್ಪ ಕಾಲದಲ್ಲಿಯೇ ಎನ್ನಬಹುದು. ಹೀಗೆ 'ಹೊಸಗನ್ನಡ' ಸಾಹಿತ್ಯಕ್ಕೆ ಹೊಸ ಬುನಾದಿಯನ್ನು ಮಿಷನರಿಗಳು ಕ್ರೈಸ್ತ ವಿಚಾರಗಳಿಂದ ಹಾಕಿದರು ಎಂದು ಸಮೀಕ್ಷೆಯಿಂದ ಗಮನಕ್ಕೆ ಬಂದಿದೆ.

* **ಕರ್ನಾಟಕದ ಕನ್ನಡ ಮತ್ತು ಕ್ರೈಸ್ತ ಬುಡಕಟ್ಟುಗಳ ಸಂಸ್ಕೃತಿ ಅಧ್ಯಯನ:** ಈ ಮೇಲಿನ ಸಂಶೋಧನಾ (ಪಿಎಚ್.ಡಿ.) ಕೃತಿಯು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಿಂದ

ಅಧ್ಯಯನ ಮಾಡಿರುವಂತಹದ್ದು ಈ ಸಂಶೋಧನಾ ಮಹಾಪ್ರಬಂಧದಲ್ಲಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಗಮನಿಸಲಾಯಿತು.

ಕರ್ನಾಟಕದ ಕ್ರೈಸ್ತರ ಚರಿತ್ರೆಯನ್ನು ಕಂಡುಕೊಂಡಿದ್ದಾರೆ. ಅವರುಗಳ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಮತ್ತು ಭೌಗೋಳಿಕವಾಗಿ ಆಯಾ ವಲಯಕ್ಕನುಗುಣವಾಗಿ ಕ್ರೈಸ್ತರ ಮೂಲ ಪರಂಪರೆಯನ್ನು ನೋಡಿದ್ದಾರೆ. ಕ್ರೈಸ್ತ ಬುಡಕಟ್ಟುಗಳ ವಿಧಗಳು ಯಾವ ಯಾವ ಪಂಗಡಗಳಲ್ಲಿ ಕ್ರೈಸ್ತರು ಇದ್ದಾರೆ ಎಂಬುದನ್ನು ಗಮನಿಸಿದ್ದಾರೆ. ಅಲ್ಲದೆ ಕ್ರೈಸ್ತರು ಹಿಂದೂ ಮುಸ್ಲಿಂ ಇನ್ನಿತರ ಧರ್ಮಗಳ ಜನರೊಂದಿಗೆ ಹೇಗೆ ಸಹಸಂಬಂಧ ಹೊಂದಿದ್ದಾರೆ ಎಂದು ಗಮನಿಸಲಾಗಿದೆ. ಕ್ರೈಸ್ತ ಬುಡಕಟ್ಟುಗಳ ಸಂಸ್ಕೃತಿ ಎಂದರೆ ಅವರ ಹುಟ್ಟಿದಂದಿನಿಂದ ಮರಣದವರೆಗೆ ಆಚರಿಸುವ ಉಡುವ, ತೊಡುವ ಮಾಡುವ ಪ್ರತಿಯೊಂದು ಕ್ರಿಯೆ ಚಟುವಟಿಕೆಗಳಲ್ಲಿನ ವಿಶಿಷ್ಟತೆಯನ್ನು ಹೇಳಿದ್ದಾರೆ. ಉದಾ. ದೀಕ್ಷೆ, ದೃಢೀಕರಣ, ನಾಮಕರಣ, ನಿಶ್ಚಿತಾರ್ಥ, ಕನ್ಯಾನ್ವೇಷಣೆ ವಿವಾಹ, ಮರಣ ಸಂಸ್ಕಾರ, ಅಂತಿಮ ಸಂಸ್ಕಾರ, ಶವಯಾತ್ರೆ, ಹುಟ್ಟು ಸಾವು ಕುರಿತ ನಂಬಿಕೆ-ನಿಷೇದಗಳ ಬಗ್ಗೆ ಗಮನಿಸಲಾಯಿತು.

ಹಾಗೆಯೇ ಕ್ರೈಸ್ತ ಬುಡಕಟ್ಟುಗಳ ಹಬ್ಬ ಜಾತ್ರೆ ಉತ್ಸವಗಳು ಎಂದು ಕ್ರಮವಾಗಿ ಕ್ರಿಸ್‌ಮಸ್, ಗುಡಫ್ರೈಡೆ, ಈಸ್ಟರ್, ಗರಿಗಳ ಭಾನುವಾರ, ಪವಿತ್ರ ಗುರುವಾರ, ಪವಿತ್ರ ಭಾನುವಾರ, ಬೂದಿ ಬುದವಾರ, ಹಬ್ಬಗಳು, ಮೇರಿ ಜಾತ್ರೆ, ಸಂತರ ಮರಿಯ ಜಾತ್ರೆ, ಹರಿಹರ ಮೇರಿ ಜಾತ್ರೆ, ರಾಯಚೂರು ಶಿಲುಬೆ ಜಾತ್ರೆ ಮತ್ತು ಅವರವರ ನಂಬಿಕೆಯಂತೆ ಅವರವರ ಸಂಪ್ರದಾಯದಂತೆ ಉತ್ಸವ (ಉಲ್ಲಾಸ) ಸಂತೋಷದ ಕೂಟಗಳನ್ನು ಏರ್ಪಡಿಸುತ್ತಾರೆ ಎಂದು ಗಮನಿಸಲಾಯಿತು. ಅಲ್ಲದೆ ಬುಡಕಟ್ಟು ಕ್ರೈಸ್ತರ ಸಾಮಾಜಿಕ ಆರ್ಥಿಕ ಸ್ಥಿತಿಗಳು ಪೂರ್ವದಲ್ಲಿ ಹೇಗಿತ್ತು ತರುವಾಯ ಹೇಗಾಯಿತು ಎಂಬುದನ್ನು ಹೇಳಿದ್ದಾರೆ ಅವರ ನಂಬಿಕೆಗಳು ಸಂಪ್ರದಾಯಗಳು ಕುಲಕಸುಬುಗಳು ಹೇಗೆ ಆರ್ಥಿಕವಾಗಿ ಸಬಲಗೊಳಿಸುತ್ತಿದ್ದವು ಅನ್ನುವುದನ್ನು ಗಮನಿಸಲಾಯಿತು. ಬುಡಕಟ್ಟು ಕ್ರೈಸ್ತರ ಮೌಖಿಕ ನುಡಿಗಳು ನೇರವಾಗಿ ಪರಸ್ಪರ ಹೇಗೆ ಮಾತುಗಳನ್ನಾಡುತ್ತಿದ್ದರು ಎಂಬುದನ್ನು ಗಮನಿಸಲಾಗಿದೆ. ಉದಾ. ಕಥೆಗಳು, ಗೀತೆಗಳು, ಆಚರಣೆಗಳು, ಒಗಟು ಮತ್ತು ಗಾದೆಗಳಲ್ಲಿ ಕ್ರೈಸ್ತರ ಭಾಷೆ ಹೇಗೆ ಧ್ವನಿಯಾಗಿ ಹೊರಬರುತ್ತಿತ್ತು. ಅದು ಹೇಗೆ ಭಾಷೆ ಮತ್ತು ಸಾಹಿತ್ಯಕ್ಕೆ ಸಹಾಯಕವಾಯಿತು ಮತ್ತು ಈ ಕ್ರೈಸ್ತರ ಪ್ರಸ್ತುತ ಸಮಸ್ಯೆ ಮತ್ತು ಸವಾಲುಗಳೇನು ಎಂಬುದನ್ನು ಅಧ್ಯಯನ ಸಮೀಕ್ಷೆ ಮೂಲಕ ಗಮನಕ್ಕೆ ತಂದುಕೊಳ್ಳಲಾಯಿತು.

ನನ್ನ ಅಧ್ಯಯನ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿನ ಭಾಷಾಧ್ಯಯನ ಆಗಿದ್ದರಿಂದ ಅದಕ್ಕೆ ಪೂರಕವಾಗಿ ಸಿಕ್ಕಿರುವಂತಹ ಕೆಲವು ಸಂಶೋಧನಾ ಕೃತಿಗಳಲ್ಲಿ ೧. ಕೊರಚ ಭಾಷೆ ವರ್ಣನಾತ್ಮಕ ಮತ್ತು ತೌಲನಿಕ ಅಧ್ಯಯನ, ಕೆ.ವಿ. ಜಯಪ್ಪ, ಗುಲಬರ್ಗಾ ವಿಶ್ವವಿದ್ಯಾಲಯ. ೨. ಗಬ್ಬೂರು ಸಾಂಸ್ಕೃತಿಕ ಅಧ್ಯನಯ, ಎಸ್. ಹಿರೇಮಠ, ಗುಲಬರ್ಗಾ ವಿಶ್ವವಿದ್ಯಾಲಯ. ೩. ಅಫಜಲಪುರ ಸಾಂಸ್ಕೃತಿಕ ಅಧ್ಯಯನ, ಬಲಭೀಮ ಸಿ. ಅಲಿಗೇರಿ, ಗುಲಬರ್ಗಾ ವಿಶ್ವವಿದ್ಯಾಲಯ. ಹಾಗೆಯೇ

ನನ್ನ ಅಧ್ಯಯನ ವಿಷಯ ಒಂದು ಧರ್ಮದ ಭಾಷೆ ಆಗಿದ್ದರಿಂದ. ೪. ಬೌದ್ಧ (ಕನ್ನಡದಲ್ಲಿ) ಸಾಹಿತ್ಯ, ಸುಷ್ಮ ಎಂ.ಎಂ. ಹಾಗರಗಿ, ಗುಲಬರ್ಗಾ ವಿಶ್ವವಿದ್ಯಾಲಯ ಎನ್ನುವ ಈ ನಾಲ್ಕು ಪಿಎಚ್.ಡಿ. ಸಂಶೋಧನಾ ಅಧ್ಯಯನ ವಿಷಯಗಳನ್ನು ಗಮನಿಸಲಾಯಿತು.

೨.೨. ಸಂಪಾದನಾ ಕೃತಿಗಳ ಸಮೀಕ್ಷೆ

*** ಡಾ. ವಿನ್ಸೆಂಟ್, ಪುರ್ತಾದೋ ಜಿ. (ಪ್ರಸಂ.), ತಲ್ವಾಡಿ ಬಿ.ಎಸ್. ಅವರ ೨೦೦೩ರಲ್ಲಿ ಪ್ರಕಟವಾದ 'ಕನ್ನಡ ಸಮಾಗಮ'** ಸಂಪಾದನ ಕೃತಿಯಲ್ಲಿ ಕೆಲವು ಅಂಶಗಳನ್ನು ಅಧ್ಯಯನ ಸಮೀಕ್ಷೆಗಾಗಿ ನಾನು ಗಮನಿಸಿದೆನು. ಅವುಗಳಲ್ಲಿ ಕೆಲವು ಲೇಖನಗಳು ಹೀಗಿವೆ.

೧. ಕನ್ನಡ ಸಾಹಿತ್ಯಕ್ಕೆ ಪ್ರೊಟೆಸ್ಟೆಂಟ ಮಿಷನರಿಗಳ ಕೊಡುಗೆ, ಪು. ೨೩

೨. ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕೆಥೊಲಿಕ್ ಕ್ರೈಸ್ತ ಮಿಷನರಿಗಳ ಕೊಡುಗೆ, ಪು. ೩೩

೩. ಕನ್ನಡದಲ್ಲಿ ಕ್ರೈಸ್ತ ಸಾಹಿತಿ ವಿದ್ವಾಂಸರು, ಪು. ೪೧

೪. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕ್ರೈಸ್ತ ವಿದೇಶಿ ವಿದ್ವಾಂಸರ ಕೊಡುಗೆ, ಪು. ೪೯

೧. ಕನ್ನಡ ಸಾಹಿತ್ಯಕ್ಕೆ ಪ್ರೊಟೆಸ್ಟೆಂಟ್ ಮಿಷನರಿಗಳ ಕೊಡುಗೆ, ಪು. ೨೩: ಈ ಲೇಖನವನ್ನು ಡಾ. ಲೀಲಾವತಿ ದೇವದಾಸರವರು ಬರೆಯುತ್ತಾರೆ. ಕನ್ನಡ ಕ್ರೈಸ್ತ ಸಾಹಿತ್ಯದ ಕಡೆಗೆ ನಾವು ದೃಷ್ಟಿಯನ್ನು ಹಾಯಿಸಿದರೆ ನಮಗೆ ಮೊದಲು ಕಾಣುವುದು 'ವಿಲಿಯಂಕೇರಿ ಮಿಷನರಿ' ೧೮೧೭ರಲ್ಲೇ 'ವ್ಯಾಕರಣ' ಎಂದು ರಚಿಸಿದ್ದ ಅದನ್ನೇ ಕನ್ನಡದ ಮೊದಲ ಕೃತಿಯೆಂದು ನಂಬುತ್ತಾರೆ. ಲಂಡನ್ ಮಿಷನ್ ಮಿಶನರಿಗಳು ಅನೇಕರು ಬರುತ್ತಾರೆ. ಒಬ್ಬೊಬ್ಬರು ತಮ್ಮದೇ ಆದ ನೆರವನ್ನು ನೀಡುತ್ತಾರೆ. ಉದಾ. ವಿಲಿಯಂ ರೀವ್, ಜಾನ್ ಹ್ಯಾಂಡ್ಸ್, ಜಾನ್‌ರೀಡ್‌ರವರು ಸಾಹಸಕ್ಕೆ ಕೈಹಾಕಿದರು ಎಂದು ಲೇಖನದಲ್ಲಿ ಗಮನಿಸಲಾಯಿತು. ೨೪ ದಾಸರ ಪದಗಳನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿದರು. ಜೈಮಿನಿ ಭಾರತ, ತೊರವೆ ರಾಮಾಯಣ, ದಾಸರ ಪದಗಳು, ಹರಿಭಕ್ತಿಸಾರ, ಕುಮಾರವ್ಯಾಸ ಭಾರತ, ಬಸವಪುರಾಣ, ಚೆನ್ನಬಸವಪುರಾಣ ಇತ್ಯಾದಿ ಕೃತಿಗಳನ್ನು ಹೊರತಂದು ಜರ್ಮನಿಯ ತಿಬೆಂಗನ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು. ಇದು ಕನ್ನಡಕ್ಕಾಗಿ ಸಂದ ಅಥವಾ ಪಡೆದ ಮೊದಲ ಡಾಕ್ಟರೇಟ್ ಪದವಿಯಾಗಿದೆ. ಹಾಗೆ ಹರ್ಮನ್ ಮೊಗ್ಲಿಂಗ್, ಕಿಟೆಲ್‌ರ ಶಬ್ದಕೋಶ, ಡಬ್ಲ್ಯುಜಿ. ವುರ್ತ್ ಇನ್ನು ಮುಂತಾದ ಮಿಷನರಿಗಳು ಕನ್ನಡಕ್ಕಾಗಿ ಸೇವೆ ಸಲ್ಲಿಸಿದರು ಎಂದು ಗಮನಿಸಲಾಯಿತು.

೨. ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕೆಥೋಲಿಕ್ ಕ್ರೈಸ್ತ ಮಿಷನರಿಗಳ ಕೊಡುಗೆ, ಪು. ೩೩ ಈ ಲೇಕನದ ಕರ್ತೃ ಡಾ. ಎಡ್ವರ್ಡ್ ನೊರೋನ್ ಇವರು ತಮ್ಮ ಈ ಮೇಲಿನ ಲೇಖನದ ಮೂಲಕ ಕನ್ನಡ ನಾಡಿನಲ್ಲಿರುವ ಎಲ್ಲ ಧರ್ಮಗಳಲ್ಲಿ ಈ ಕ್ರೈಸ್ತ ಧರ್ಮ ಒಂದಾಗಿದೆ. ಈ ಧರ್ಮವನ್ನು ಕರ್ನಾಟಕದಲ್ಲಿ ನೆಲೆಗೊಳಿಸುವಾಗ ವಿದ್ವಾಂಸರು, ಪಂಡಿತರು, ಕ್ರೈಸ್ತ ಪಾದ್ರಿಗಳು, ವಿಶ್ವಾಸಿಗಳು

ಎಲ್ಲರೂ ಕನ್ನಡದಲ್ಲಿ ಸ್ವಮತೀಯ ಸಾಹಿತ್ಯವನ್ನು ರಚಿಸಿದರು. ಆ ಮೂಲಕ ಕನ್ನಡ ಧಾರ್ಮಿಕ ಸಾಹಿತ್ಯ ಕ್ಷೇತ್ರಕ್ಕೆ ಒಂದು ವೈಶಿಷ್ಟ್ಯಪೂರ್ಣವಾದ ಕೊಡುಗೆಯನ್ನು ನೀಡಿದಂತಾಗಿದೆ. 'ನೀವು ಲೋಕದ ಎಲ್ಲ ಕಡೆಗೆ ಹೋಗಿ ಪ್ರತಿಯೊಬ್ಬರಿಗೂ ಸುವಾರ್ತೆ ಸಾರಿ (ಮಾರ್ಕನ ಸುವಾರ್ತೆ ೧೬.೧೫) ಎಂದು ಯೇಸು ಕೊಟ್ಟ ಅಪ್ಪಣೆಯನ್ನು ಕ್ರೈಸ್ತರು ಪಾಲಿಸುತ್ತಾರೆ. ಕೆಥೋಲಿಕ್ ಮಿಶನರಿಗಳ ಕೃತಿಗಳು ಪ್ರಧಾನವಾಗಿ ಧಾರ್ಮಿಕವಾಗಿದ್ದವು. ಸಾಹಿತ್ಯಿಕವಾಗಿರಲಿಲ್ಲವಾದ್ದರಿಂದ ಕೆಥೋಲಿಕ್ ಮಿಶನರಿಗಳು ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಗಮನಾರ್ಹವಾದ ವಿಶೇಷ ಕಾಣಿಕೆ ಕೊಡುಗೆಯನ್ನು ನೀಡಿದ್ದಾರೆ ಎಂಬುದನ್ನು ನಾವು ನಿಕರವಾಗಿ ನೇರವಾಗಿ ಹೇಳಬೇಕಾಗುತ್ತದೆ. ಆಚಾರಗಳಿಗೆ ಸಂಬಂಧಿಸಿದ ಕೃತಿಗಳಲ್ಲಿ ಕೆಥೋಲಿಕ್ ಕ್ರೈಸ್ತ ಮತದ ಒಂದು ಮುಖದ ಚಿತ್ರಣವಿದೆ. ಬೋಧನೆಗೆ ಸಂಬಂಧಿಸಿದ ಗ್ರಂಥಗಳಲ್ಲಿ ಅಂದಿನ ಕೆಥೋಲಿಕ್ ಮತಸ್ಥರು ದೇವರ ಮತ್ತು ಮಾನವನ ಸ್ವಭಾವದ ಬಗ್ಗೆ ಇಟ್ಟುಕೊಂಡಿದ್ದ ಕಲ್ಪನೆಗಳು ಅಭಿವ್ಯಕ್ತವಾಗಿವೆ. ಹಾಗೆಯೇ ಅನ್ಯಮತ ಖಂಡನೆಯ ಗ್ರಂಥಗಳಲ್ಲಿ ಅಂದಿನ ಕೆಥೋಲಿಕ್ ಧಾರ್ಮಿಕ ಸಮಾಜದ ಪ್ರತಿಫಲವಿದೆ ಎಂದು ನಾನು ಸಮೀಕ್ಷೆಯಿಂದ ಗಮನಿಸಿದೆನು.

೩. **ಕನ್ನಡದಲ್ಲಿ ಕ್ರೈಸ್ತ ಸಾಹಿತಿ ವಿದ್ವಾಂಸರು (ಪು. ೪೧)** ಈ ಲೇಖನವನ್ನು ಪ್ರೊ. ಡಿ. ಲಿಂಗಯ್ಯರವರು ರಚಿಸಿದ್ದಾರೆ. ಪಾಶ್ಚಿಮಾತ್ಯ ವಿದ್ವಾಂಸರು ನಮ್ಮ ನಾಡಿಗೆ ಬಂದು ನಾಡಿನ ಭಾಷೆಯನ್ನು ಕಲಿತು ನಾಡಿಗೆ, ಭಾಷೆಗೆ ಹಲವಾರು ಕೃತಿಗಳನ್ನು ನೀಡಿದ್ದಾರೆ. ಆದ್ದರಿಂದ ಅವರನ್ನು ಪ್ರತ್ಯೇಕವಾಗಿ 'ಕನ್ನಡದಲ್ಲಿ ಕ್ರೈಸ್ತ ಸಾಹಿತಿಗಳು' ಎಂದು ಗುರುತಿಸಿದ್ದಾರೆ. ಅವರು ಈ ಕೆಳಕಂಡ ಕೃತಿಗಳನ್ನು ಬರೆದಿದ್ದಾರೆ. ಹಾಗೂ ಸಂಪಾದಿಸಿದ್ದಾರೆ.

೧. ಕನ್ನಡದ ಪ್ರಾಚೀನ ಗ್ರಂಥಗಳಾದ ಕವಿರಾಜ ಮಾರ್ಗ, ಶಬ್ದಮಣಿ ದರ್ಪಣ, ಭಾಷಾಭೂಷಣ, ಕರ್ನಾಟಕ ಶಬ್ದಾನುಶಾಸನ, ಬಸವಪುರಾಣ, ಮುದ್ರಾಮಂಜೂಷ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

೨. ಇಂಗ್ಲೀಷ್ ಮತ್ತು ಇತರ ಭಾಷೆಗಳಿಂದ ಕೆಲವು ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಆ ಸಾಹಿತ್ಯ ಪ್ರಕಾರವನ್ನು ಕನ್ನಡಕ್ಕೆ ಪರಿಚಯಿಸಿದರು. ಉದಾ. ಪ್ರವಾಸ ಕಥನ (ಪಿಲಿಗ್ರೀಮ್ಸ್ ಪ್ರೋಗ್ರೆಸ್) ಸತ್ಯವೇದ (ಬೈಬಲ್) ಪರಮಾನಂದ ಗುರುಕಥೆ (ತಮಿಳು)

೩. ಕನ್ನಡ ಶಾಸನಗಳನ್ನು ಸಂಶೋಧಿಸಿ, ವ್ಯಾಖ್ಯಾನಿಸಿ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಿದರು. ಉದಾ. ಲೂಯಿರೈಸ್ ಈತನ ಸಾದನೆಯನ್ನು ಪರಿಗಣಿಸಿ ಕನ್ನಡ ಶಾಸನಗಳ ಪಿತಾಮಹ ಎಂದು ಕರೆಯುತ್ತಾರೆ.

೪. ವ್ಯಾಕರಣ, ಛಂದಸ್ಸು, ನಿಘಂಟುಗಳ ರಚನೆ ಮಾಡಿರುವುದು. ಉದಾ. ಹಲವು ವ್ಯಾಕರಣಗಳು, ನಿಘಂಟುಗಳು, ಕಿಟೆಲ್ ಕನ್ನಡ–ಇಂಗ್ಲಿಷ್ ನಿಘಂಟು ಶಬ್ದಕೋಶ.

ಹೀಗೆ ಹತ್ತು ಹಲವು ಕನ್ನಡ ನಾಡಿನ ಸಾಹಿತ್ಯ ಚರಿತ್ರೆಯ, ಕನ್ನಡ ಶಾಲಾ ಪಠ್ಯಪುಸ್ತಕಗಳು, ಲಾವಣಿಗಳು, ಜಾನಪದ ಸ್ಥಳನಾಮ, ಕವಿತೆಗಳನ್ನು ಕುರಿತು ಕೆಲಸ ನಿರ್ವಹಿಸಿದ್ದಾರೆ. ಅವರೇ

ಕ್ರೈಸ್ತ ಸಾಹಿತಿಗಳು ಎಂದು ದಿಟವಾಗಿ ಹೇಳುತ್ತಾರೆ. ವಿದೇಶಿ ಕ್ರೈಸ್ತ ಸಾಹಿತಿಗಳಲ್ಲಿ ಕೆಥೋಲಿಕರೂ ಪ್ರೊಟೆಸ್ಟಂಟರೂ ಸೇರಿದ್ದಾರೆ ಎಂದು ಅಧ್ಯಯನದ ಮೂಲಕ ಗಮನಿಸಲಾಯಿತು.

೪. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕ್ರೈಸ್ತ ವಿದೇಶಿ ವಿದ್ವಾಂಸರ ಕೊಡುಗೆ, ಪು. ೪೯ ಈ ಲೇಖನದಲ್ಲಿ ಶ್ರೀಮತಿ ಎ. ಜಯಮೇರಿ ಕನ್ನಡ ನಾಡಿಗೆ ಕಾಲಿಟ್ಟ ವಿದೇಶಿ ವಿದ್ವಾಂಸರು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಅತ್ಯಪಾರ ಕೊಡುಗೆಯನ್ನು ನೀಡಿದ್ದಾರೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳುತ್ತಾರೆ. ಅದು ಹೇಗೆಂದರೆ ಫರ್ಡಿನಾಂಡ್ ಕಿಟೆಲ್, ಹರ್ಮನ್‌ಮೊಗ್ಲಿಂಗ್, ಬಿ.ಎಚ್. ರೈಸ್, ಜಿ.ಎಚ್. ವೈಗಲ್ ಇನ್ನಿತರ ವಿದೇಶಿ ವಿದ್ವಾಂಸರು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ತಮ್ಮದೇ ಆದಂತಹ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯ ವೃದ್ಧಿಗಾಗಿ ಶ್ರಮಿಸಿದ ಇನ್ನು ಅನೇಕ ವಿದೇಶಿ ವಿದ್ವಾಂಸರಲ್ಲಿ ಗ್ರೇಟರ್, ಜೆ. ಮ್ಯಾಕ್ಸ್, ಥಿಯೋದೂರವಾಲ್ಜ್, ಜೆ. ಬೂಕರ್, ಜೆ.ಎಫ್. ವೈಲ್ ಹೀಗೆ ಹೆಸರಿಸುತ್ತಾ ಹೋದರೆ ಸಾಲದು ಈ ಮಹಾಪುರುಷರೆಲ್ಲ ಕನ್ನಡದ ಏಳ್ಗೆಗೆ ಸೇವೆ ಸಲ್ಲಿಸಿ ಅಮರರಾಗಿದ್ದಾರೆ. ಕ್ರೈಸ್ತರ ವಿದ್ವಾಂಸರ ಸ್ವಧರ್ಮನಿಷ್ಠೆಯ ಜೊತೆಗೆ ಸಾಹಿತ್ಯ ರಚನೆ ಪ್ರಕಟಣೆ ಹಾಗೂ ಪ್ರಸಾರಗಳಿಂದ ಕನ್ನಡ ಸಾಹಿತ್ಯವೆಂಬ ಗಿಡ ವೃಕ್ಷವಾಗಿ ಪರಿಣಮಿಸುವಲ್ಲಿ ಸಾಧ್ಯವಾಯಿತು. ಅಂದರೆ ಕನ್ನಡದ ಕಂಪು ಎಲ್ಲೆಡೆ ಪಸರಿಸಿತು. ಇದೆಲ್ಲಾ ವಿದೇಶಿ ವಿದ್ವಾಂಸರ ಕೊಡುಗೆ ಎಂದು ಲೇಖನದ ಮೂಲಕ ತಿಳಿಯಲಾಯಿತು.

ಹಾಗೆಯೇ ಕ್ರೈಸ್ತ ಧರ್ಮ ಶಿಕ್ಷಣ ಸಂಸ್ಥೆಗಳು, ಕ್ರೈಸ್ತ ಗುರುಗಳು ಕನ್ನಡ ಸಾಹಿತ್ಯ ಮತ್ತು ಭಾಷೆಯನ್ನು ಹೇಗೆ ಅರಿತಿದ್ದರು ಎಂಬುದನ್ನು ಗಮನಿಸಲಾಯಿತು. ಕನ್ನಡ ಚಾರಿತ್ರಿಕ ಸಂಶೋಧನೆಗೆ ಕನ್ನಡ ಸಾಹಿತ್ಯ ಸಂಶೋಧನೆಗೆ ಪ್ರಸ್ತುತ ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ ಎಂತಹದ್ದು ಎನ್ನುವುದನ್ನು ಗಮನಿಸಲಾಯಿತು. ಅಲ್ಲದೆ ಕನ್ನಡ ಜಾನಪದ ಅಧ್ಯಯನಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ ಕ್ರೈಸ್ತರ ಪ್ರಸ್ತುತ ಸಾಮಾಜಿಕ ಸ್ಥಾನಮಾನಗಳು ಮತ್ತು ಭಾರತೀಯರಿಗೆ ಯಾವುದು ಬೇಕು ಯಾವುದು ಬೇಡ ಎನ್ನುವ ಸಾಮಾಜಿಕ ನ್ಯಾಯದ ಬಗ್ಗೆ ವಿಚಾರ ಸಂಕೀರ್ಣಗಳ ಲೇಖನಗಳ ಸಂಪಾದನ ಕೃತಿಯಾದ 'ಕನ್ನಡ ಸಮಾಗಮ' ಎಂಬ ಕೃತಿಯಿಂದ ಈ ಎಲ್ಲಾ ಅಂಶಗಳನ್ನು ತಿಳಿಯಲಾಯಿತು.

*** ಶರ್ಲಿಕ್ರಿಷ್ಟಫರ್ ಪ್ರೇಮಾ ಪೆನ್, ವಿಜಯಾ ಪಾರ್‌ಮಾರ್, ಸೆಪ್ಟಂಬರ್ ೨೦೧೧, ನಮ್ಮೊಡನೆ ಮಾತನಾಡುವ ವಾಕ್ಯ** ಎಂಬ ಕೃತಿಯನ್ನು ಅವರು ನಾಲ್ಕು ಭಾಗಗಳಾಗಿ ವಿಂಗಡಿಸಿ ವಿಷಯ ವಿಶ್ಲೇಷಿಸಿರುತ್ತಾರೆ. ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮೇಲಿನ ಕೃತಿಯಲ್ಲಿ ಈ ಕೆಳಕಂಡ ವಿಷಯಗಳನ್ನು ಗಮನಿಸಲಾಯಿತು.

೧. ಕಥೆ/ವೃತ್ತಾಂತಗಳ ಅಧ್ಯಯನ

೨. ಅಲಂಕಾರಗಳು

೩. ಇಬ್ರಿಯ ನುಡಿಗಟ್ಟುಗಳು

೪. ಸಾಮ್ಯಗಳು/ದೃಷ್ಟಾಂತಗಳು

೫. ಇಬ್ರಿಯ ಕಾವ್ಯ

೬. ತತ್ವ ಸಿದ್ಧಾಂತ ಅಧ್ಯಯನ

* **ಮೊದಲನೆಯದಾಗಿ** ಕಥೆಯೆಂದರೆ ವೃತ್ತಾಂತವಾಗಿದೆ. ಸತ್ಯವೇದವು ಒಳಗೊಂಡ ವೃತ್ತಾಂತವು ಐತಿಹ್ಯವಾದದ್ದು ಹಿಂದಿನ ಯುಗದಲ್ಲಿ ದೇವರು ಧರ್ಮ ಯಾವ ರೀತಿಯಲ್ಲಿ ಕಾರ್ಯ ಮಾಡಿತು ಎಂಬುದನ್ನು ಭಕ್ತರಿಗೆ ತಿಳಿಸುವಂತಹ ಒಂದು ಪ್ರಕ್ರಿಯೆಯೇ ಕಥೆಗಳ ಮುಖ್ಯ ಉದ್ದೇಶ ಎಂದು ಗಮನಿಸಲಾಯಿತು.

* **ಎರಡನೆಯದಾಗಿ** ಅಲಂಕಾರಗಳು ಸತ್ಯವೇದ ಸಾಹಿತ್ಯವು ಹಲವಾರು ಬಗೆಯ ಶೈಲಿಯ ಬರವಣಿಗೆಯನ್ನು ಹೊಂದಿರುವುದರಿಂದ ಹಲವಾರು ರೀತಿಯ ಅಲಂಕಾರಗಳನ್ನು ಬಳಸಲಾಗಿದೆ.

೧. ಉಪಮಾಲಂಕಾರ–ನೇರ ಹೋಲಿಕೆ ಉಪಮಾಲಂಕಾರವನ್ನು 'ಅಂತೆ', 'ಹಾಗೆ' ಎನ್ನುವ ಪದಗಳನ್ನು ಬಳಸುವುದರ ಮೂಲಕ ವ್ಯಕ್ತಪಡಿಸಲಾಗುತ್ತದೆ. ಉದಾ. 'ನಿಮ್ಮ ಪಾಪಗಳು ಕಡು ಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವುವುಉ. ಯೇಶಾಯ ೧:೧೮ ೨. ನಿಮ್ಮ ಭಕ್ತಿಯು ಮಾಯವಾಗುವ ಇಬ್ಬನಿಗೂ ಸಮಾನವಾಗಿದೆ ಹೋಶೇಯ ೬:೪

೨. ರೂಪಕಾಲಂಕಾರ– ಪರೋಕ್ಷ ಹೋಲಿಕೆ ಇಲ್ಲಿ ಹೋಲಿಕೆ ನೇರವಾಗಿ ಕಂಡುಬರುವುದಿಲ್ಲ. ಹೋಲಿಕೆ ಮಾಡುವ ಹೋಲಿಕೆಗೆ ಒಳಪಡುವ ವಿಷಯ, ವಸ್ತು ಒಂದೇಯಾಗಿ ಬಿಂಬಿಸುತ್ತವೆ. ಬೇರೆ ಬೇರೆಯಾಗಿ ಗೋಚರಿಸುವುದಿಲ್ಲ. ಉದಾ. ೧. ಯೆಹೋಮನು ನನ್ನ ಕುರುಬನು ಕೀರ್ತನೆಗಳು ೨೩:೧ ೨. ನೀವು ಭೂಮಿಗೆ ಉಪ್ಪಾಗಿದ್ದೀರಿ ಮತ್ತಾಯ ೫:೧೩ ಹೀಗೆ ಕೃತಿಯಲ್ಲಿ ಸಂಬಂಧಸೂಚಿಸುವ ಅಲಂಕಾರಗಳು, ಅಖಂಡವನ್ನು ಸೂಚಿಸುವ ಅಲಂಕಾರಗಳು, ಸಂಬೋಧನಾ ಅಲಂಕಾರಗಳು ಇನ್ನಿತರೆ ಅಲಂಕಾರಗಳನ್ನು ಗಮನಿಸಲಾಯಿತು.

* **ಮೂರನೆಯದಾಗಿ** ಇಬ್ರಿಯರ ನುಡಿಗಟ್ಟುಗಳು – ಜೇಂಬರ್ಸ್ ನಿಘಂಟಿನ ಪ್ರಕಾರ ತಾರ್ಕಿಕವಾಗಿ ಅಥವಾ ವ್ಯಾಕರಣದಿಂದ ವಿವರಿಸಲಾಗದ ಒಂದು ನಿರ್ದಿಷ್ಟ ಭಾಷೆಯ ವಿಶಿಷ್ಟವಾದ ಪದಪ್ರಯೋಗವೇ ನುಡಿಗಟ್ಟು ಪ್ರತಿಯೊಂದು ಭಾಷೆಯು ತನ್ನದೇ ಆದ ನುಡಿಗಟ್ಟನ್ನು ಹೊಂದಿರುತ್ತದೆ. ಹಾಗೆಯೇ ಇಬ್ರಿಯ ಭಾಷೆಯು ಕೂಡ. ಇಬ್ರಿಯ ನುಡಿಗಟ್ಟುಗಳು ಅಲಂಕಾರಗಳಾಗಿದ್ದು ಇಬ್ರಿಯ ಜನರ ಆಲೋಚನೆಗಳ ವೈಶಿಷ್ಟ್ಯತೆಯನ್ನು ತೋರಿಸುತ್ತವೆ ಎಂಬುದಾಗಿ ತಿಳಿಯಲಾಯಿತು.

* **ನಾಲ್ಕನೆಯದಾಗಿ** ಸಾಮ್ಯಗಳು ಅಥವಾ ದೃಷ್ಟಾಂತಗಳು– ಯೇಸು ತನ್ನ ಉಪದೇಶವನ್ನು ಜನಸಾಮಾನ್ಯರಿಗೂ ಅರ್ಥವಾಗಲು ಕಥೆಯೋಪಾದಿಯಲ್ಲಿ ವಿಷಯ ಹೇಳುತ್ತಿದ್ದರು ಅದುವೇ ಸಾಮ್ಯವಾಗಿ ಪರಿವರ್ತನೆಯಾಯಿತು. ಸಾಮ್ಯ ಎನ್ನುವುದು ಇಂಗ್ಲಿಷಿನ 'ಪೇರಬಲ್' ಎಂದು

ಬಳಕೆಯಾಗಿದ್ದು ಇದು ಗ್ರೀಕನ 'ಪೆರಬೋಲ್' ಎಂಬ ಪದದಿಂದ ಬಂದಿದೆ. ಅಂದರೆ ವಿಷಯಗಳನ್ನು ಅಕ್ಕಪಕ್ಕದಲ್ಲಿಡುವುದು ಉದಾ. ೧. ಬಿತ್ತುವವನ ಸಾಮ್ಯ ೨. ದ್ರಾಕ್ಷಿ ತೋಟದ ಸಾಮ್ಯ.

* **ಐದನೆಯದಾಗಿ** ಇಬ್ರಿಯ ಕಾವ್ಯ – ಪ್ರಾಚೀನ ಕಾಲದಲ್ಲಿ ಇಸ್ರಾಯೇಲ್‌ನಲ್ಲಿ ಕಾವ್ಯವನ್ನು ಕಲಿಕೆಯಲ್ಲಿ ಬಹಳ ಬಳಸುತ್ತಿದ್ದರು. ಯಹೋದ್ಯರು ಸಂಗೀತ ಪ್ರಿಯರಾಗಿದ್ದರು ಅವರು ಹಾಡುಗಳಿಗೆ ಪ್ರಸಿದ್ಧರಾಗಿದ್ದರು ಕಾವ್ಯದ ಲಕ್ಷಣಗಳು ೧. ಸಮಾನಾಂತರ ೨. ಉಪಮಾನ ೩. ಅತಿಶಯೋಕ್ತಿ ೪. ಅನಿಷ್ಟ ಕೋರಿಕೆಯ ಕೀರ್ತನೆಗಳು.

* **ಕೊನೆಯದಾಗಿ** ತತ್ವ ಸಿದ್ಧಾಂತದ ಅಧ್ಯಯನ– ಇಲ್ಲಿ ಸತ್ಯವೇದದಲ್ಲಿ ಬರುವ ವಿಷಯ ವಿಚಾರಗಳನ್ನು ಗಂಭೀರವಾಗಿ ಅಧ್ಯಯನ ಮಾಡುವುದು ಯಾವ ವಿಚಾರದ ಬಗ್ಗೆ ಏನು ಹೇಳಲಾಗುತ್ತದೆ. ಅದರ ಮರ್ಮವೇಮ ಅದರ ಉದ್ದೇಶವೇನು ಯಾಕೆ ಅದನ್ನು ಯೇಸು ಹೇಳಿದರು ಅದರಿಂದ ಬರುವ ಲಾಭಾಂಶವೇನು ಎನ್ನುವುದರ ಬಗ್ಗೆ ಆಳವಾಗಿ ಅಧ್ಯಯನ ಮಾಡುವುದೇ ತತ್ವ ಸಿದ್ಧಾಂತವಾಗಿದೆ. ಕನ್ನಡ ಸಾಹಿತ್ಯದಲ್ಲಿ ಬರುವ ನಡುಕನ್ನಡದಲ್ಲಿ ಬರುವಂತೆ ತತ್ವಪದಕಾರರು ಕೀರ್ತನಕಾರರು ವಚನಕಾರರು ಹೇಳುವಂತೆ ಸತ್ಯವೇದದಲ್ಲಿ ಕೂಡ ತತ್ವಸಿದ್ಧಾಂತಗಳು ಇವೆ ಎಂಬುದನ್ನು ಅಧ್ಯಯನ ಸಮೀಕ್ಷೆ ಮೂಲಕ ಗಮನಿಸಲಾಯಿತು.

೨.೩. ಚರಿತ್ರಾತ್ಮಕ ಕೃತಿಗಳ ಸಮೀಕ್ಷೆ

* **ಅಳಗೋಡಿ ಎಸ್.ಡಿ.ಎಲ್., ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ: ೨೦೦೧.** ರೆ.ಎಸ್.ಡಿ.ಎಲ್. ಅಳಗೋಡಿಯವರ ಈ ಮೇಲಿನ ಪುಸ್ತಕದಲ್ಲಿ ಚರ್ಚಿಸುವ ವಿಚಾರ ಹೀಗಿದೆ. ಭಾರತಕ್ಕೆ ಬಂದಿರುವಂತಹ ವಸಾಹತುಶಾಹಿ ಸರಕಾರಗಳಾದ ಪೋರ್ಚುಗೀಸ್, ಡಚ್, ಫ್ರೆಂಚ್, ಬ್ರಿಟಿಷ್ ಮತ್ತು ಈಸ್ಟ್ ಇಂಡಿಯಾ ಕಂಪನಿ ಇವೆಲ್ಲವೂ ಅಧಿಕಾರವನ್ನು ಆಳುವುದರ ಜೊತೆಗೆ ಇಲ್ಲಿನ ಸಾಹಿತ್ಯ ಭಾಷೆ ಸಂಸ್ಕೃತಿ ಸಂಪ್ರದಾಯವನ್ನು ತಿಳಿದು ಬದಲಾಯಿಸಲು ಪ್ರಯತ್ನಿಸಿದರು. ಅಂದರೆ ಇಲ್ಲಿನ ಜಾತಿ ಬೇಧ, ವರ್ಗಸಂಘರ್ಷ, ಅಸ್ಪೃಶ್ಯತೆಯನ್ನು ಮೆಚ್ಚಲಿಲ್ಲ. ಅದನ್ನು ಬದಲಾಯಿಸಿ ಸಾರ್ವತ್ರಿಕ ಸಮಾನಗೌರವ ನೀಡುವಲ್ಲಿ ಕಾರ್ಯನಿರತರಾದರು. ಕಾರ್ಯನಿರತ ಸಂಸ್ಥೆಗಳೆಂದರೆ ಲಿಪಜಂಗ್, ಆಂಗ್ಲರ ಬಾಸೆಲ್ ವೆಸ್ಲಿಯನ್ ಅಮೇರಿಕನ್ ಮತ್ತು ಸೆರಾಂಪುರ ಮಿಷನ್‌ಗಳು ಆಗಿವೆ.

ಕ್ರೈಸ್ತ ಮಿಷನರಿಗಳು ನಮ್ಮ ನಾಡಿನ ಶಿಕ್ಷಣ ವ್ಯವಸ್ಥೆಯಲ್ಲಿ ಸಾರ್ವತ್ರಿಕ ಸಮಾನ ಅವಕಾಶ, ಸ್ತ್ರೀಯರಿಗೆ ಸ್ವಾತಂತ್ರ್ಯ ಸತಿಪದ್ದತಿ, ಬಾಲ್ಯವಿವಾಹ, ಹೆಣ್ಣುಮಕ್ಕಳ ಹತ್ಯೆ, ದೇವದಾಸಿ ಪದ್ದತಿಗಳನ್ನು ನಿಷೇಧ ಪ್ರಕ್ರಿಯೆ, ವೈದ್ಯಕೀಯ ವ್ಯವಸ್ಥೆ ಅಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿಯೂ ಕೆಲವು ಮಿಷನರಿಗಳು ಮಿಷನ್‌ಗಳು ಸ್ವತಃ ಪಾಲ್ಗೊಂಡಿವೆ ಎಂದು ಅಳಗೋಡಿಯವರ ಚರ್ಚೆಯಾಗಿದೆ. ಇದನ್ನು ನಾವು ಸಹಿತ ಒಪ್ಪುವಂತಹ ಮಾತಾಗಿದೆ. ಸತ್ಯವೇದ (ಬೈಬಲ್)ವನ್ನು ದಕ್ಷಿಣ ಭಾರತದಲ್ಲಿನ ಅನೇಕ ಭಾಷೆಗಳಲ್ಲಿನ ಅನುವಾದ ಮಾಡಲಾಗಿದೆ. ವಿಶೇಷವಾಗಿ ರೆ. ವಿಲಿಯಂಕೇರಿಯವರೆ ಈ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ ಎನ್ನಬಹುದು.

ಸತ್ಯವೇದವು ಬಂಗಾಳಿ, ತಮಿಳು, ಉರ್ದು ಭಾಷೆಯಲ್ಲಿ ಅನುವಾದಗೊಂಡಿದೆ. ಅಲ್ಲದೆ ಹಿಂದಿ, ಅಸ್ಸಾಮಿ, ಸಂಸ್ಕೃತ, ಹಿಂದೂಸ್ತಾನಿ ಮತ್ತು ನಮ್ಮ ಕನ್ನಡದಲ್ಲಿ ಅನುವಾದಮಾಡಿಕೊಟ್ಟ ಪ್ರಮುಖ ಕ್ರೈಸ್ತ ಮಿಷನರಿಯೆಂದರೆ, ವಿಲಿಯಂಕೇರಿ ಆಗಿದ್ದಾರೆ. ಅಲ್ಲದೆ ಕನ್ನಡದಲ್ಲಿ ಮೊದಲು ಶಬ್ದಕೋಶವನ್ನು ರಚನೆ ಮಾಡಿದವರು ವಿಲಿಯಂ ಕೇರಿ ಎಂದು ಅಳಗೋಡಿ ಅಭಿಪ್ರಾಯವಾಗಿದೆ. ಈ ಸತ್ಯವೇದದ ಅನುವಾದ ಕಾರ್ಯದಿಂದ ಕನ್ನಡ ಭಾಷೆಗೆ ಒಂದು ಹೊಸ ಸ್ವೀಕರಣದಂತೆ ಆಗುತ್ತದೆ.

ಕರ್ನಾಟಕದಲ್ಲಿ ಅಥವಾ ಭಾರತದಲ್ಲಿ ಕ್ರೈಸ್ತ ಧರ್ಮ ಕ್ರಿಶ್ಚಿಯನ್ನರು ಕ್ರಮೇಣವಾಗಿ ಹೆಚ್ಚಾಗಲು ಅಭಿವೃದ್ಧಿಯಾಗಲು ಮುಖ್ಯಕಾರಣವೆಂದರೆ ಮಿಷನರಿಗಳು ಸಮಾಜದಲ್ಲಿ ನೊಂದಿರುವ ಜನರನ್ನು, ಕ್ರೈಸ್ತರಲ್ಲಿರುವ ಜನಗಳನ್ನು ಆಶ್ರಯಿಸಿ ಅವರಿಗೆ ಸೂಕ್ತ ಆಹಾರ, ಬುದ್ಧಿ ಶಿಕ್ಷಣ ಬೋದನೆ ಆರೋಗ್ಯ ಕಲ್ಪಿಸಲು ಮುಂದಾಗಿದ್ದು ಕಾರಣವಾಗಿದೆ. ಈಗಾಗಿ ಹಂತಹಂತವಾಗಿ ಕ್ರೈಸ್ತಧರ್ಮ ೧೬೧೮ರಿಂದ ಆರಂಭವಾಗಿ ೧೮೧೦ರಲ್ಲಿ ಜಾನ್ ಹ್ಯಾಂಡ್ಸ್ ಬಳ್ಳಾರಿಗೆ ಬಂದು ನೆಲೆಸಿ ಸ್ವಯಂಸೇವಕನಾಗಿ ಕಾರ್ಯನಿರ್ವಹಿಸಿದರು. ಅಲ್ಲದೆ ತೋಮ, ವಾಸ್ಕೋಡಿಗಾಮ ಪ್ರಮುಖರು ಆದ್ಯರಾಗಿದ್ದಾರೆ. ಕರ್ನಾಟಕದಲ್ಲಿ ಬಳ್ಳಾರಿ, ಬೆಂಗಳೂರು, ಚಿಕ್ಕಬಳ್ಳಾಪುರ, ಬೆಳಗಾವಿ, ಮಿಷನಗಳಾಗಿಯೇ ಕಾರ್ಯನಿರ್ವಹಿಸಿದವು. ೧೮೩೬ರಲ್ಲಿ ಮೆಥೋಡಿಸ್ಟ್ ಸಭೆ ಮೈಸೂರಲ್ಲಿ ಆರಂಭ ಈ ಸಭೆ ಹಂತಹಂತವಾಗಿ ತುಮಕೂರು, ಬೆಂಗಳೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ವ್ಯಾಪಿಸಿ ಧರ್ಮ ಪ್ರಸರಣವಾಯಿತು.

ಹೀಗೆ ರೆ. ಅಳಗೋಡಿಯವರು ಭಾರತದ ಕರ್ನಾಟಕದ ಕ್ರೈಸ್ತರು ಆಳ್ವಿಕೆ ಮಾಡಿಕೊಳ್ಳುತ್ತಾ ತಮ್ಮ ಸಂಸ್ಕೃತಿಯನ್ನು ನಾಡಿನಲ್ಲಿ ಪಸರಿಸಿ ದಲಿತರನ್ನು ಕ್ರೈಸ್ತರನ್ನಾಗಿಯೇ ಮಾಡಿದ್ದಾರೆ. ನೊಂದವರನ್ನು ಮಾತ್ರವಲ್ಲ ಬ್ರಾಹ್ಮಣರನ್ನು ಸಹಿತ ಬ್ರಾಹ್ಮಣರೇ ಆದ್ಯರು ಈ ಕ್ರೈಸ್ತಧರ್ಮಕ್ಕೆ ಎಂದು ತಿಳಿದುಬರುವುದು ವಿಶ್ವ ಕ್ರೈಸ್ತ ಚಳುವಳಿಯಲ್ಲಿ ಲಂಡನ್ ಮಿಷನ್ ಪ್ರಮುಖ ಪಾತ್ರವಹಿಸಿದೆ ಎನ್ನುವುದು ಅಳಗೋಡಿಯವರ ವಾದವಾಗಿದೆ.

* **ತಲ್ವಾಡಿ ಬಿ.ಎಸ್., ಕರ್ನಾಟಕದ ಕ್ರೈಸ್ತರು, ಒಂದು ಪರಿಚಯ, ೧೯೯೮** ಇವರು ತಮ್ಮ ಕೃತಿಯಲ್ಲಿ ಸತ್ಯವೇದವನ್ನು ಎರಡು ರೀತಿಯಲ್ಲಿ ವಿಭಾಗಿಸುವರು. ಒಂದು (Old covenent) ಹಳೆಯ ಒಡಂಬಡಿಕೆ ಇನ್ನೊಂದು ಹೊಸ ಒಡಂಬಡಿಕೆ (New covenent or New Testment) ಎಂದು ಕರೆಯುವರು. ಇಲ್ಲಿ ಆಂಗ್ಲ ಪದಗಳಾದ Covenent & Testmentಗೆ ಬದಲಾಗಿ 'ಒಡಂಬಡಿಕೆ' ಎಂಬ ಪದವನ್ನು ಬಳಸಲಾಯಿತು. ಅದೇ ರೀತಿಯಾಗಿ ಸೌಲ(Soula)ಗೆ ಪೌಲ, ಪೀಟರ್(Peter)ಗೆ ಪೇತ್ರ, ಹಾಗೆಯೇ ಜೇಮ್ಸ್ (James)ಗೆ ಯಾಕೋಬ ಎಂಬ ಪದಗಳನ್ನು ಕನ್ನಡದಲ್ಲಿ ರೂಪಿಸಲಾಗಿದೆ. ಹಾಗೂ ಪೌಲ ಎಂದರೆ ವಿಶ್ವಮಾನವತೆಯ ಸಂಕೇತ ಎಂದು ಬಿ.ಎಸ್. ತಲ್ವಾಡಿ ಹೇಳುವರು.

ಹೀಗೆ ಬೆಳೆದುಬಂದ ಕ್ರೈಸ್ತ ಧರ್ಮ ಕೆಲ ದಿನಗಳ ನಂತರ ಬೇರೆ ಬೇರೆ ಪಂಗಡಗಳಾಯಿತು. ಜನಾಂಗ ಜಾತಿ ಕುಲ ಭಾಷೆ ಸಂಸ್ಕೃತಿ, ರಾಜಕೀಯ, ಆರ್ಥಿಕ ಸ್ಥಿತಿ ಧರ್ಮವನ್ನು ಒಡೆಯಿತು. ಅನಂತರ ಕ್ರೈಸ್ತ ಮಿಷನರಿಗಳು ಭಾರತಕ್ಕೆ (ಕರ್ನಾಟಕ)ಆಗಮಿಸಿದರು. ಭಾರತದಲ್ಲಿ ಮೊದಲು ಮದ್ರಾಸಿನ ಮೈಲಾಪುರದಲ್ಲಿ ಕ್ರೈಸ್ತರಾದ ಬ್ರಾಹ್ಮಣರ ಮದುವೆ ಸಮಾರಂಭದಲ್ಲಿ ರಾಬರ್ಟ್ ನೊಬಲಿ ಪಾಲ್ಗೊಂಡನು. ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಚರ್ಚ್ ಮೈಸೂರಲ್ಲಿ ಮೊದಲಾಯಿತು. ಸೆಂಟ ಫಿಲೋಮಿನಾ ಚರ್ಚ್ ಎಂದು ತಲ್ವಾಡಿಯವರು ಚರ್ಚಿಸಿದ್ದಾರೆ. ವಿಜಯನಗರವನ್ನು ಅಂದು ಕ್ರಿಶ್ಚಿಯನ್ನರು ಬಿಸ್ನಾಗ ಎಂದು ಕರೆಯುತ್ತಿದ್ದರು.

೧೫ನೇ ಶತಮಾನದಲ್ಲಿ ಬಿಜಾಪುರ ೧೭ನೇ ಶತಮಾನದಲ್ಲಿ ಮಂಗಳೂರಿಗೆ ಕ್ರೈಸ್ತ ಧರ್ಮ ಪ್ರಸಾರವಾಯಿತು. ೧೮ನೇ ಶತಮಾನದೊತ್ತಿಗೆ ಕರ್ನಾಟಕಾದ್ಯಂತ ಕ್ರೈಸ್ತ ಧರ್ಮ ಪಸರಿಸಿತು ಎಂದು ಹೇಳುವರು. ಅದೇ ಸಮಯದಲ್ಲಿ ಟಿಪ್ಪುಸುಲ್ತಾನನ ಶೋಷಣೆಯ ಕ್ರೈಸ್ತರು ಕರಾಳಯುಗವನ್ನು ಅನುಭವಿಸಿದರು ಎಂದು ತಲ್ವಾಡಿಯವರ ಅಭಿಪ್ರಾಯವಾಗಿದೆ. ಕನ್ನಡ (ಕರ್ನಾಟಕ)ದ ಮೊದಲ ಜಸೂಯಿಟರ್ ಫಾದರ್ ಮಾನವನ ಡಿಕುನ್ನ ಎಂದು ಹೇಳುತ್ತಾರೆ. ಇವರ ತರುವಾಯ ಕೆಥೋಲಿಕ್, ಪ್ರೊಟೆಸ್ಟೆಂಟ್, ಮೆಥೋಡಿಸ್ಟ್ ಸಂಸ್ಥೆಗಳು ಕರ್ನಾಟಕದಲ್ಲಿ ಕಾಲಿರಿಸಿದವು. ಇವರಲ್ಲಿ ಜಾನಗ್ಯಾರೆಟ್ ಎಂಬುವರು ಕನ್ನಡದಲ್ಲಿ ಶಬ್ದಮಣಿ ದರ್ಪಣದ ಮೊದಲ ಆವೃತ್ತಿಯನ್ನು ೧೮೬೫ರಲ್ಲಿ ಹೊರತಂದರು. 'ಬಹುಭಾಷಾ ಭಗವದ್ಗೀತೆ' ಕ್ಲಾಸಿಕಲ್ ಡಿಕ್ಷನರಿ ಆಫ್ ಇಂಡಿಯಾ, ತಿಗ್ಲರ್ ಅವರು 'Practical key to Kannada language' ಎಂದು ರಚನೆ ಮಾಡಿದರು. ಹಾಗೆಯೇ ಅನೇಕ ಮಿಷನ್ ಮತ್ತು ಮಿಷನರಿಗಳು ಬಂದು ತಮ್ಮ ಸಂಸ್ಕೃತಿಯನ್ನು ದೇಶೀಯ ಭಾಷೆಯಲ್ಲಿಯೇ ವ್ಯಕ್ತಪಡಿಸಿದರು. ಅಲ್ಲದೆ ಸಾಹಿತ್ಯಿಕ, ಭಾಷೆ, ವ್ಯಾಕರಣ ದೃಷ್ಟಿಯಿಂದಲೂ ಪ್ರಮುಖ ಪಾತ್ರವಹಿಸಿದ್ದಾರೆ ಎಂದು ತಲ್ವಾಡಿಯವರು ತಮ್ಮ ಕರ್ನಾಟಕ ಕ್ರೈಸ್ತರ ಇತಿಹಾಸ ಹೊತ್ತಿಗೆಯಲ್ಲಿ ಚರ್ಚಿಸುವರು.

* **ತಲ್ವಾಡಿ ಬಿ.ಎಸ್., ಕ್ರೈಸ್ತ ಮತ:** ಈ ಕೃತಿಯಲ್ಲಿ ತಲ್ವಾಡಿಯವರು ನಮ್ಮ ರಾಜ್ಯದಲ್ಲಿ ಹಲವು ಧರ್ಮಗಳಿವೆ. ಅಂತಹ ಹಲವು ಧರ್ಮಗಳಲ್ಲಿ ಕ್ರೈಸ್ತ ಧರ್ಮವೂ ಒಂದಾಗಿದೆ. ಈ ನಮ್ಮ ನಾಡಿನಲ್ಲಿ ಸುಮಾರು ಐದುನೂರು ವರ್ಷಗಳ ಇತಿಹಾಸವಿರುವಂತಹ ಈ ಕ್ರೈಸ್ತ ದರ್ಮದ ವಿಶ್ವಾಸಿಗಳು ಮತ್ತು ಅವರ ಸಂಖ್ಯಾಬಲ ಕಡಿಮೆಯಾಗಿದ್ದರೂ, ನಾಡಿನ ಭಾಷೆ, ಸಂಸ್ಕೃತಿಗಳಿಗೆ ಸಲ್ಲಿಸಿರುವ ಸೇವೆ ಅತ್ಯಂತ ಅವಿಸ್ಮರಣೀಯವಾಗಿದೆ. ಕ್ರೈಸ್ತ ಧರ್ಮವನ್ನು ಜನಸಾಮಾನ್ಯರಿಗೆ ಪರಿಚಯಿಸುವಂತಹ ಕೃತಿಗಳು ಅತ್ಯಲ್ಪವಾಗಿದ್ದರೂ ಇರುವ ಬರಹಗಳಲ್ಲಿನ ಭಾಷೆ, ಪರಿಭಾಷೆ, ದರ್ಶನಗಳು ಓದುಗರ ಮನಸ್ಸನ್ನು ಗೆಲ್ಲುತ್ತವೆ ಎಂದು ಅಧ್ಯಯನ ಸಮೀಕ್ಷೆಯಿಂದ ತಿಳಿಯುತ್ತದೆ. ಉದಾ. ಬಿ.ಎಸ್. ತಲ್ವಾಡಿಯವರ 'ಕ್ರೈಸ್ತ ಮತ' ಎಂದು ರಚನೆಯಾಗಿರುವ ಕಿರುಹೊತ್ತಿಗೆಯಲ್ಲಿ ಕ್ರಿಸ್ತನ ಜನನ, ಉಪದೇಶ, ಮರಣ ಮತ್ತು ಧರ್ಮದ ಶ್ರೇಷ್ಟತೆಯ ಬಗ್ಗೆ ತಿಳಿಯಬಹುದು. ಅದು ತಲ್ವಾಡಿಯವರ ಭಾಷಾ ರಚನೆ ಅತ್ಯಂತ ಸರಳ ಸುಂದರವಾದುದು. ಜನಸಾಮಾನ್ಯರಿಗೂ ಸುಲಭವಾಗಿ

ಅರ್ಥನಿಲುಕುವ ಹಾಗೆ ರಚಿಸಿದ್ದಾರೆ. ಅದರಲ್ಲಿ ವಿಶೇಷವಾಗಿ 'ಅಲಂಕಾರ ಪರಿಕಲ್ಪನೆ' ಕಂಡುಬರುತ್ತದೆ. ಆ ಅಲಂಕಾರವನ್ನು ಇಟ್ಟುಕೊಂಡು ರಚನೆಯಾಗಿರುವ ಸಾಲು ಹೀಗಿದೆ.

"…. ಹದ್ದು ಬಿಗಿ

ವಿಡಿದ ಲಾವಿಗೆಯಂತೆ, ಪಡುವರ್ಣದಿ ಬಿಳಿಯ ಬಿದಿ

ಗೆಯ ತಿಂಗಳಂತೆ, ಬಿಲ್ಲಿಗೆ ತೊಟ್ಟ ಸರಳಂತೆ,

ಮರಣ ವೃಕ್ಷದೊಳಮೃತ ಫಲದಂತೆ ತೂಗುತಿರೆ

ತನ್ನ ಬೇನೆಯನಣಂ ಗಣಿಸದವನುಸರಿದಂ

ಕ್ಷಮಿಸಿದರನೆಲೆ ತಂದೆ! ತಾವೇನನೆಸಗಿದಪೆ

ವೆಂದರಿಯರಿವರು" (ಬಿ.ಎಸ್. ತಲ್ವಾಡಿ ಕ್ರೈಸ್ತಮತ, ಪು. ೪೪)

ಈ ಮೇಲಿನ ಸಾಲಿನಲ್ಲಿ ಲಾವಿಗೆಯಂತೆ, ಸರಳಂತೆ ಮತ್ತು ತಿಂಗಳಂತೆ ಎಂದು ಹೇಳುವುದರ ಮೂಲಕ 'ಉಪಮಾಲಂಕಾರ'ವನ್ನು ಗುರ್ತಿಸಲಾಯಿತು. ಉಳಿದ ಭಾಗ ಹೆಚ್ಚಾಗಿ ಗದ್ಯ ಮಾದರಿಯಲ್ಲಿ ರಚನೆಯಾಗಿದೆ ಎಂದು ಗಮನಿಸಲಾಗಿದೆ.

*** ತಲ್ವಾಡಿ ಬಿ.ಎಸ್., ಸುವರ್ಣ ಸಂಪುಟ (೧೯೬೩–೨೦೧೩) ಚಿಕ್ಕಮಗಳೂರು ಧರ್ಮಕ್ಷೇತ್ರದ ಸಮಗ್ರ ಸಂಕ್ಷಿಪ್ತ ಚರಿತ್ರೆ, ೨೦೧೩.** ಅವರ ಕೃತಿಯನ್ನು ಸಮೀಕ್ಷೆ ಮಾಡಲಾಯಿತು. ಈ ಕೃತಿಯಲ್ಲಿ ಜಿಲ್ಲೆಯಾದ ಚಿಕ್ಕಮಗಳೂರು ಧರ್ಮಕ್ಷೇತ್ರ ಎಂದು ಆರಂಭಿಸುತ್ತ ಅಲ್ಲಿನ ಧರ್ಮಕ್ಷೇತ್ರದಲ್ಲಿ ಬರುವ ಉಪ ಕ್ಷೇತ್ರಗಳು ಯಾವುವು ಅವುಗಳ ನಾಮಗಳೇನು ಅವುಗಳು ಯಾವ ಯಾವ ಊರುಗಳಲ್ಲಿ ನೆಲೆಗೊಂಡಿವೆ ಎಂಬುದನ್ನು ಸಲಿಲವಾಗಿ, ಸರಳವಾಗಿ ವಿವರಿಸುತ್ತಾರೆ. ಸರಿಸುಮಾರು ೩೦ ರಿಂದ ೪೦ ಪ್ರದೇಶಗಳಲ್ಲಿ ಉಪ ಧರ್ಮಕ್ಷೇತ್ರಗಳು ಇವೆ ಎಂದು ಹೇಳುತ್ತಾರೆ. ಉದಾ. ಸಂತ ಜೋಸೆಫರ ಪ್ರಧಾನಾಲಯ ಚಿಕ್ಕಮಗಳೂರು

ಸಂತ ಪೇತ್ರರ ದೇವಾಲಯ ಗೋಣಿಬೀಡು

ಸಂತ ರೀತಮ್ಮನ ದೇವಾಲಯ ಜಯಪುರ

ಸಂತ ರಾಕಿಯಟರ ದೇವಾಲಯ, ಸಾಂತವೇರಿ

ಲೂರ್ದುಮಾತೆಯ ದೇವಾಲಯ, ಮಾಗುಡಿ

ಸಂತ ಲಾರೆನ್ಸರ ದೇವಾಲಯ, ಮಲ್ಲಂದೂರು ಹೀಗೆ ಹಾಸನ ಜಿಲ್ಲೆಯಲ್ಲಿ ಕ್ರಿಸ್ತ ದೇವಾಲಯಗಳು ಇವೆ. ಒಂದೊಂದು ಊರಿಗೆ ಒಬ್ಬೊಬ್ಬ ಸಂತರ ಹೆಸರನ್ನು ಇಟ್ಟುಕೊಂಡು ದೇವಾಲಯಗಳನ್ನು ಕಟ್ಟಿದ್ದಾರೆ ಎಂದು ಗಮನಿಸಲಾಯಿತು. ಹಾಗೆಯೇ ಕೇವಲ ಧರ್ಮಕ್ಕೆ ಸೀಮಿತವಾಗದೆ ಶಿಕ್ಷಣಕ್ಕೆ ಕೂಡ ವಿಶೇಷವಾದ ಪ್ರಾಧಾನ್ಯತೆ ನೀಡಿದ್ದಾರೆ. ಪದವಿ ಕಾಲೇಜು–೩, ಪದವಿಪೂರ್ವ ಕಾಲೇಜು–

೭, ಪ್ರೌಢ ಶಾಲೆಗಳು–೨೩, ಪ್ರಾಥಮಿಕ ಶಾಲೆ–೩೭, ಬುದ್ಧಿಮಾಂದ್ಯ ಮಕ್ಕಳ ಶಾಲೆ–೧, ಮಹಿಳಾ ವೃದ್ಧಾಶ್ರಮ–೧, ಸಮಾಜ ಸೇವಾ ಕೇಂದ್ರ–೧, ಅಭ್ಯರ್ಥಿಗಳಿಗೆ ತರಬೇತಿ ನೀಡುವ ವಿಶೇಷ ಪ್ರತ್ಯೇಕ ಮನೆಗಳು–೨, ತಾಂತ್ರಿಕ ಸಂಸ್ಥೆ–೧, ಲ್ಯಾಬ್‌ಶಾಲೆ–೧, ಆಸ್ಪತ್ರೆ–೨ ಹೀಗೆ ಚಿಕ್ಕಮಗಳೂರು ಸಮಗ್ರ ಅಭಿವೃದ್ಧಿಗೆ ಕ್ರೈಸ್ತ ಸಂಸ್ಥೆ ಶ್ರಮಪಟ್ಟಿತ್ತು ಎಂದು ಈ ಅಧ್ಯಯನ ಸಮೀಕ್ಷೆಯ ಮೂಲಕ ತಿಳಿಯಲಾಯಿತು.

ಬಿ.ಎಸ್. ತಲ್ವಾಡಿಯವರು ಈ ಕೃತಿಯಲ್ಲಿ ಇಡೀ ಬೈಬಲಿನ ಸಾರವನ್ನು ಕಾವ್ಯಾತ್ಮಕವಾಗಿ ಚಿತ್ರಿಸಿದ್ದಾರೆ. ಇವರ ಲೇಖನಿಗೆ ಇನ್ನಿತರ ವ್ಯಕ್ತಿಗಳು, ಕವಿಗಳು, ವಿಮರ್ಶಕರು ಪ್ರಶಂಸೆ ನೀಡಿದ್ದಾರೆ. ದೇಶದ ಎರಡು ಮಹಾಕಾವ್ಯಗಳಾದ 'ರಾಮಾಯಣ' 'ಮಹಾಭಾರತ'ದಂತೆ ಕ್ರೈಸ್ತರಿಗೆ ಸಂಬಂಧಿಸಿದ ಮಹಾಕಾವ್ಯವೆಂದರೆ ಬಿ.ಎಸ್. ತಲ್ವಾಡಿಯವರು ರಚಿಸಿದಂತಹ 'ಸಿರಿಭುವನ ಜ್ಯೋತಿ'ಯೇ ಮಹಾಕಾವ್ಯವಾಗಿ ಹೆಸರುವಾಸಿಯಾಗಿದೆ. ಇದನ್ನು 'ಭಾರತೀಯ ಕ್ರೈಸ್ತ ಮಹಾಕಾವ್ಯ' ಎಂದು ಬಿಂಬಿಸುವರು. ಆಧ್ಯಾತ್ಮಿಕ ಗುರು ಮೇರುವಾದ ಯೇಸುವಿನ ಮಹಾಕಾವ್ಯ ಎನ್ನುವರು. ಬೆರಗು ಮೂಡಿಸಿದ ಮಹಾಕಾವ್ಯ ಇದರಲ್ಲಿ ಮಾನವ ಧರ್ಮದ ಅಭಿವ್ಯಕ್ತಿ ಇದೆ. ಕನ್ನಡ ಸಾಹಿತ್ಯಕ್ಕೆ ಸೇರ್ಪಡೆಯಾಗಿ ಸಾಹಿತ್ಯದ ಬಲವಾಗಿದೆ. ಕರುಣೆಯ ಕಡಲಿನ ಮಡುವಾಗಿದೆ. ಅಲ್ಲದೆ ಜಗತ್ತಿನ ಬೃಹತ್ಕಾವ್ಯವೆಂದು ಕೆಲವರ ಅಭಿಪ್ರಾಯ. ಈ ಕೃತಿಯನ್ನು ಸಮೀಕ್ಷೆಗೆ ತೆಗೆದುಕೊಂಡು ಗಮನಿಸಿರುವ ಅಂಶಗಳು ಹೀಗಿವೆ. ಬಿ.ಎಸ್. ತಲ್ವಾಡಿ ಅವರು 'ಸಿರಿಭುವನ ಜ್ಯೋತಿ' ಮಹಾಕಾವ್ಯವನ್ನು ಮೂರು ಪರ್ವಗಳಲ್ಲಿ ವಿಡಂಬಿಸಿ ಹೇಳುತ್ತಾರೆ.

೧. ಆದಾಮಪರ್ವ

೨. ಸಿರಿಭುವನ ಜ್ಯೋತಿ ಪರ್ವ

೩. ಪರಂಜ್ಯೋತಿ ಕ್ರೈಸ್ತ ಧರ್ಮ ಪರ್ವ

ಮಹಾಕಾವ್ಯವನ್ನು ಬರೆಯುವುದಕ್ಕಿಂತ ಮುಂಚೆ ತಲ್ವಾಡಿಯವರು ಭಗವಾನ ಯೇಸುಕ್ರಿಸ್ತನನ್ನು ಸ್ಮರಿಸಿ ಅಪ್ಪಣೆ ಪಡಕೊಂಡು ಅಲ್ಲದೆ ಲೋಕ ಕವಿಗಳಾದ ಪಂಪ ಬಸವ ಮಿಲ್ಟನ್‌ರನ್ನು ನೆನಸಿ ಆರಂಭಿಸುವನು. ಮೊದಲ ಪರ್ವಕ್ಕೆ ಆದಾಮ ಪರ್ವ ಎಂದು ಹೆಸರಿಸುತ್ತಾನೆ. ಜಗತ್ತು ಸೃಷ್ಟಿ ಆಗುವುದಕ್ಕಿಂತ ಮುಂಚೆ ಮೂಲ ಪಿತೃಗಳಾಗಿ ಆದಾಮ ಅವ್ವ ಆದಾಮ ಅಜ್ಜ ಎಂದು ಬರುತ್ತಾರೆ. ಅವರು ಶಾಪಗ್ರಸ್ಥರಾಗಿದ್ದಲೇ ಅವರ ಶಾಪದಿಂದ ಇವತ್ತು ಜಗತ್ತು ಬೆಳೆದಿದೆ ಎನ್ನಲಾಗುತ್ತದೆ. ಅಲ್ಲದೆ ನೋಹನು ಎಂಬ ವ್ಯಕ್ತಿಯಿಂದ ಪುನಃ ಸಂತಾನ ಅಭಿವೃದ್ಧಿಯಾಗುತ್ತದೆ ಎಂದು ಮಹಾಕಾವ್ಯದಲ್ಲಿ ತಿಳಿಸಲಾಗುತ್ತದೆ. ಬೈಬಲಿನ ಆಧಾರಗಳನ್ನು ಇಟ್ಟು ಕೊರಡೇ, ವಚನ, ವಾಗ್ದಾನಗಳನ್ನು ಅನುಕರಿಸಿ ಅಧ್ಯಯನ ಮಾಡಿ ಭವಿಸ ತಲ್ವಾಡಿ ಗದ್ಯವನ್ನು ಕಾವ್ಯವಾಗಿ ರಚಿಸಿದ್ದಾರೆ. ಗದ್ಯರೂಪವಾಗಿರುವ (ಬೈಬಲ್) ಕ್ರೈಸ್ತ ಧಾರ್ಮಿಕ ಸಾಹಿತ್ಯ ತಲ್ವಾಡಿಯವರಿಂದ ಕಾವ್ಯ ರೂಪ ತಾಳಿದೆ ಎಂದು ಹೇಳಬಹುದು.

ಆದಾಮ ಪರ್ವ: 'ಬೆಳಕಾಗಲೆಂದಿತು ಆ ದಿವ್ಯವಾಣಿ' ಎಂಬ ಶಿರೋನಾಮದೊಳಗೆ ತಲ್ವಾಡಿಯವರು ಜಗತ್ತಿನ ಸೃಷ್ಟಿಯ ಬಗ್ಗೆ ಭೂಮಿ, ಆಕಾಶ, ಗಿಡಮರಬಳ್ಳಿ, ಕ್ರಿಮಿಕೀಟ, ಪಕ್ಷಿ, ಜಂತು, ಸೂರ್ಯ, ಚಂದ್ರ, ನಕ್ಷತ್ರ ಹಾಗೂ ಮಾನವ (ಆದಾಮ ಅವ್ವ ಆದಾಮ ಅಜ್ಜ) ರ ಬಗ್ಗೆ ಬಹಳ ಸರಳ ಸುಂದರವಾಗಿ ರಚಿಸಿದ್ದಾರೆ. ಕಾವ್ಯದಲ್ಲಿ ಹಾಗೆಯೇ 'ಜಲ ಪ್ರಳಯವಾಯ್ತಿಳೆಯೊಳಗೆ' ಎಂದು ಶಿರೋನಾಮವಿಟ್ಟು ಕಾವ್ಯವನ್ನು ಹೀಗೆ ಹೇಳುತ್ತಾರೆ.

"ನೋಹ, ನಿನ್ನ ಕುಟುಂಬದವರ
ನೊಳಗೊಂಡು, ಪ್ರತಿಯೊಂದು ಪ್ರಾಣಿ ಪಕ್ಷಿಗಳ
ಹೆಣ್ಣು ಗಂಡು ಜೋಡಿಯಾಗಿಸಿ ನಾವೆಯೊಳಗಿಳಿಸು
ಕ್ರಿಮಿಕೀಟ, ಪಶುಪಕ್ಷಿ ಸಕಲ ಜಾತಿಗಳಲೆರಡೆರಡು
ಬದುಕಿ ಬಾಳಲು ನಿನ್ನೊಡನೆ ಬಂದಿರಲಿ
ಬಗೆ ಬಗೆಯ ಬೋಜನವ ಸಂಗ್ರಹಿಸು ಸಕಲ
ಪದಾರ್ಥಗಳನದರೊಳಗೆ ಇರಿಸು ಕುಡಿವ ನೀರನು
ಸಂಗ್ರಹಿಸಿ ಇರಿಸು ನಡೆ ನನ್ನ ಆಜ್ಞೆಯಂ
ಪಾಲಿಸಂ"ದು ದೇವ ತಾಂ ಮರೆಯಾದ- ೧೬೦ನೇ ಪದ್ಯದ ಸಾಲು

ಈ ಮೇಲಿನ ಪದ್ಯ ಅರ್ಥ "ನೋಹ"ನು ಮಾತ್ರ ನಂಬಿಗಸ್ಥನಾಗಿದ್ದ ಸತ್ಪುರುಷನಾಗಿದ್ದ ಉಳಿದವರೆಲ್ಲರೂ ಪಾಪಕೃತ್ಯದಲ್ಲಿ ತೊಡಗಿ ಲೋಕವೆಲ್ಲ ಪಾಪದಲ್ಲಿ ಮುಳುಗಿದ್ದರಿಂದ ದೇವರು ಸಹಿಸದೇ ಜಲಪ್ರಳಯ ಮಾಡುವೆನೆಂದು ನೋಹನಿಗೆ ಸಕಲ ಜಾತಿಗಳಲ್ಲಿ ಗಂಡು ಹೆಣ್ಣು ಎರಡೆರಡು ತೆಗೆದುಕೊಂಡು ನಾವೆಯಲ್ಲಿ ಬೇರೆ ಸ್ಥಳಕ್ಕೆ ಹೋಗು ಆ ಸ್ಥಳ ದೇಶವನ್ನು ನಾಶ ಪಡಿಸುವೆಂದು ಆಜ್ಞೆ ಮಾಡಿದನು. ಅದನ್ನೇ ಬಿ.ಎಸ್. ತಲ್ವಾಡಿಯವರು ಒಂದು ಕಾವ್ಯದ ಸ್ಪರ್ಷವನ್ನು ಅದಕ್ಕೆ ನೀಡಿದ್ದಾರೆ.

ಸಿರಿಭುವನ ಜ್ಯೋತಿ ಪರ್ವ: ಎರಡನೆಯದಾಗಿ ರಚನೆಯಾದ ಈ ಪರ್ವ ಭಾಗದಲ್ಲಿ ಯೇಸು ಕ್ರಿಸ್ತನ ಜನನ ಸೇವೆ ಅದ್ಭುತ ಕಾರ್ಯಗಳನ್ನು ಅಲ್ಲದೆ ದೇವರ ಚಿತ್ತಾನುಸಾರವಾಗಿರುವ ಮರಣ-ಪುನರುತ್ಥಾನಗಳನ್ನು ತಿಳಿಯಪಡಿಸುತ್ತಾರೆ. ಜನನಕ್ಕೆ ಸಂಬಂಧಿಸಿ 'ಅರಿವಿನಾಗರ ಯೇಸು ದಿವ್ಯ ಸಂಜಾತ' ೩೫೪ನೇ ಪದ್ಯ ಸಾಲಿನಲ್ಲಿ ಹೇಳುತ್ತಾರೆ. ಹಾಗೆಯೇ "ಪವಾಡವಲ್ತಲ್ತು ಪರಮಾತ್ಮನನುಗ್ರಹವು" ಎಂದು ಅದ್ಭುತ ಕಾರ್ಯಗಳನ್ನು ಕುರಿತು ಹೇಳುತ್ತಾರೆ. ಅಲ್ಲದೆ 'ದೇವರೆ! ದೇವರೆ! ಯಾಕೆನ್ನ ಕೈ ಬಿಟ್ಟೆ?' ಎಂದು ಕ್ರಿಸ್ತನು ಶಿಲುಬೆಗೆ ಹಾಕಿದಾಗ ಸಾಯುವ ಮುನ್ನ ಹೇಳಿದ ಮಾತು ಮತ್ತು ಕ್ರಿಸ್ತನು ಜನರ ಮೇಲಿಟ್ಟಿರುವ ಪ್ರೀತಿಯನ್ನು ಹೇಳುತ್ತಾರೆ. 'ತಾವೇನು ಮಾಡುತ್ತಾರೋ ಅರಿಯರು' ಎಂದು ಯೇಸು ಹೇಳುತ್ತಾನೆ.

ಪರಂಜ್ಯೋತಿ ಕ್ರೈಸ್ತರ್ಷ ಪರ್ವ: ಈ ಪರ್ವದಲ್ಲಿ ಕ್ರಿಸ್ತನು ಮರಣಿಸಿ ೩ನೇ ದಿನ ತಿರುಗಿ ಎದ್ದು ಪರಲೋಕಾರೋಹಣ ಆಗುವ ಸಂದರ್ಭದ ವಿಚಾರಗಳನ್ನು ಆತನು ಜನರಿಗೆ ಹೇಳುವ ಮುಂದಿನ ಬೆಳವಣಿಗೆ ಮತ್ತು ನಾನು ತಿರುಗಿ ಬರುತ್ತೇನೆ ಎಂದು ಹೇಳಿ ಹೋಗುವ ವಿಚಾರಗಳನ್ನು ತಲ್ವಾಡಿಯವರು ಕಾವ್ಯದಲ್ಲಿ ಬಹಳ ಸರಳ ಅರ್ಥಗರ್ಭಿತವಾಗಿ ಭಾಷಿಕವಾಗಿ ಹೇಳುತ್ತಾರೆ.

*** ಪಿಯುಸ್ ಪೆಡೆಲಿಸ್ ಪಿಂಟೋ, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ, ೧೯೯೯,** ಅವರ ಪುಸ್ತಕದಲ್ಲಿ ಗಮನಿಸಿದಾಗ ೧೫೦೦-೧೫೬೫ರ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ಕರ್ನಾಟಕದಲ್ಲಿ ಕ್ರೈಸ್ತರ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರಕಿತು. ಅಲ್ಲದೆ ಕರಾವಳಿ ಕರ್ನಾಟಕದಲ್ಲಿ ಕ್ರೈಸ್ತರ ಹುಟ್ಟು ಮತ್ತು ಬೆಳವಣಿಗೆ ಗೊತ್ತಾಯಿತು.

*** ಪುರ್ತಾದೋ ಎಸ್. ರೈಟ್ ರೆವರೆಂಡ್, ಕ್ರೈಸ್ತ ಧರ್ಮದ ಇತಿಹಾಸ, ೧೯೯೦** ಈ ಮೇಲಿನ ಕೃತಿಯನ್ನು ಅವಲೋಕನ ಮಾಡಿದಾಗ ಅದರಲ್ಲಿ ಲಭ್ಯವಾಗಿರುವ ವಿಷಯವೇನೆಂದರೆ, ಕ್ರೈಸ್ತ ಧರ್ಮ ಯಾವ ರೀತಿ ಬೆಳೆಯಿತು ಎಂಬ ವಿಷಯವನ್ನು ಮುಖ್ಯವಾಗಿಟ್ಟುಕೊಂಡು ರಚನೆಯಾದ ಕೃತಿಯಾಗಿದೆ ಎಂದು ತಿಳಿಯಲಾಯಿತು. ಕ್ರಿಸ್ತ ಹುಟ್ಟಿದ ಮೊದಲನೆಯ ಶತಮಾನದಲ್ಲಿ ರೋಮ್ ಸಾಮ್ರಾಜ್ಯ ಸಮುದ್ರ ಸುತ್ತಲೂ ಇರುವ ವಿಶಾಲವಾದ ಪ್ರದೇಶವಾಗಿತ್ತು. ಉತ್ತರದಲ್ಲಿ ಬ್ರಿಟನ್, ಪಶ್ಚಿಮದಲ್ಲಿ ಸ್ಪೈನ್, ಪೂರ್ವದಲ್ಲಿ ಕಲ್ದೀಯ (ಬೆಬಿಲೋನ್) ದಕ್ಷಿಣದಲ್ಲಿ ತೀಬ್ಸ್ ಪಟ್ಟಣದ ಮುಂದೆ ಅತ್ಯಂತ ವಿಸ್ತಾರವಾಗಿ ಹರಡಿಕೊಂಡಿರುವ ಈಜಿಪ್ಟ್ ದೇಶ ಇವೆಲ್ಲವೂ ರೋಮ್ ಸಾಮ್ರಾಜ್ಯದ ಸುತ್ತಳತೆಯಾಗಿತ್ತು ಎಂದು ತಿಳಿಸುತ್ತಾರೆ. ಈ ರೀತಿ ವಿಶಾಲವಾಗಿ ವಿಸ್ತರಿಸಿಕೊಂಡಿರುವ ರೋಮ್ ಸಾಮ್ರಾಜ್ಯದಲ್ಲಿ ಯಹೂದ್ಯರು ಎಲ್ಲ ದಿಕ್ಕಿನಲ್ಲಿ ಇದ್ದರು ಅವರ ಭಾಷೆ ಲ್ಯಾಟಿನ್ ಆಗಿತ್ತು ಎಲ್ಲ ಪ್ರಜೆಗಳು ಸುಖವಾಗಿದ್ದರು ಆದರೆ ಅಲ್ಲಿನ ರಾಜರಿಗೆ ಗುಲಾಮನಾಗಿ ಇರಬೇಕಾಗುತ್ತಿತ್ತು. ಅಂತಹ ಪ್ರಜೆಗಳಲ್ಲಿ ಕ್ರೈಸ್ತ ಸಭೆಯೊಂದು ಉದ್ಭವ ಆಯಿತು ಎನ್ನಬಹುದು.

ಕ್ರೈಸ್ತತ್ವ ಬೆಳೆದಂತೆ ಆ ಕ್ರೈಸ್ತ ಸಭೆಯಲ್ಲಿ ದುರ್ಬೋಧನೆ ಕೂಡ ಬೆಳೆಯಿತು. ಕ್ರೈಸ್ತ ಸಭೆ ಇವುಗಳ ವಿರೋಧ ಮಾಡಬೇಕಾಯಿತು. ಕಡೆಗೆ ರೋಮ್ ಸರ್ಕಾರ ಸಾಮ್ರಾಜ್ಯದ ಮನ್ನಣೆ ಪಡೆದು ಇಡೀ ವಿಶ್ವಕ್ಕೆ ಹಬ್ಬಲು ಸಾಧ್ಯವಾಯಿತು ಎಂದು ತಿಳಿಯಲಾಯಿತು. ಅಲ್ಲದೆ ಪುರ್ತಾದೋ ಅವರ ಬಹು ಮುಖ್ಯ ಉದ್ದೇಶ. ಕ್ರಿ.ಶ. ೧ ರಿಂದ ೧೦೦ರವರೆಗೆ ಕ್ರೈಸ್ತ ಸಭೆಯು ನಡೆದು ಬಂದ (ಬೆಳವಣಿಗೆ) ದಾರಿಯನ್ನು ಕೃತಿಯಲ್ಲಿ ಹಲವು ಘಟನೆಗಳನ್ನು ಹೇಳುತ್ತಾ ವಿವರಿಸುತ್ತಾ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ ಎಂದು ಹೊಗಳಬೇಕು ಎಂಬುದೇ ಅವರ ಆಶಯವಾಗಿತ್ತು. ಆ ಹಿನ್ನೆಲೆಯಲ್ಲಿಯೇ ಕವಿಗಳು ಕ್ರೈಸ್ತ ಧರ್ಮದ ಚರಿತ್ರೆಯನ್ನು ಬರೆದಿದ್ದಾರೆ.

*** ವಿಜಯಕುಮಾರ್ ರೆವರೆಂಡ್, ಕರ್ನಾಟಕದಲ್ಲಿ ಪ್ರೊಟೆಸ್ಟೆಂಟ್ ಮಿಷನ್‌ಗಳ ಚರಿತ್ರೆ, ೨೦೦೪** ಈ ಕೃತಿಯಲ್ಲಿ ಕನ್ನಡ ನಾಡಿನಲ್ಲಿ ಕೆಥೋಲಿಕ್ ನಂತರ ಬಲಿಷ್ಟರಾಗಿರುವ ಸೇವಾಕಾರ್ಯದಲ್ಲಿ ಬಂದಿರುವ ಸಂಸ್ಥೆ ಎಂದರೆ ಪ್ರೊಟೆಸ್ಟೆಂಟ್ ಸಂಸ್ಥೆ ಎಂದು ರೆ. ವಿಜಯಕುಮಾರ ಅವರು

ಹೇಳಿದ್ದಾರೆ. ಅವರು ಹೇಳುವ ಕ್ರೈಸ್ತ ಮಿಷನ್‌ಗಳಲ್ಲಿ ಬಾಸೆಲ್ ಮಿಷನ್ ವಿವಿಧ ಭಾಷೆಗಳ ಬೆಳವಣಿಗೆಗೆ ಪ್ರತ್ಯೇಕವಾಗಿ ಹೊಸಗನ್ನಡದ ಅರುಣೋದಯಕ್ಕೆ ಅಪಾರ ಕೊಡುಗೆ ನೀಡಿದೆ. ಕಿಟೆಲ್ ಮತ್ತು ಗುಂಡರ್ಟರ ಹೆಸರನ್ನು ಮರೆಯುವಂತಿಲ್ಲ. ನಮ್ಮ ಪುರಾಣ ಇತಿಹಾಸಗಳನ್ನು ಪ್ರಥಮವಾಗಿ ವೈಜ್ಞಾನಿಕವಾಗಿ ಸಂಪಾದಿಸಿ ಅಚ್ಚು ಹಾಕಿಸಿದ ಕೀರ್ತಿ ಬಾಸೆಲ್ ಮಿಷನ್‌ಗೆ ಸಲ್ಲುತ್ತದೆ. ಕನ್ನಡದ ಮೊದಲ ವಾರ್ತಾ ಪತ್ರಿಕೆ ಮಂಗಳೂರು ಸಮಾಚಾರ ಅವರ ಕೃಪೆಯೇ ಆಗಿದೆ ಎನ್ನುವರು. ಕನ್ನಡ ಲಿಪಿ ಸುಧಾರಣೆಯಲ್ಲಿ ಡಾ. ಹರ್ಮನ್ ಮೊಗ್ಲಿಂಗ್ ಪ್ರಯತ್ನ ಸ್ಮರಣೀಯವಾಗಿದೆ.

ಜೈಮಿನಿ ಭಾರತ ದಾಸರಪದಗಳು, ಬಸವ ಪುರಾಣ, ದಶಪರ್ವ ಭಾರತ, ಚೆನ್ನಕೇಶವ ಪುರಾಣಗಳಂತಹ ಪ್ರಾಚೀನ ಶ್ರೇಷ್ಠ ಗ್ರಂಥಗಳನ್ನು ಪ್ರಕಟಿಸಿದ್ದು ಬಾಸೆಲ್ ಮಿಷನ್ ಆಗಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲನೆಯದ್ದು ಇವರ ಅನುವಾದ ಸಾಹಿತ್ಯ ಪ್ರಾಚೀನ ಕಾವ್ಯ, ಶಬ್ದಕೋಶ, ಛಂದಸ್ಸು, ವ್ಯಾಕರಣ, ನಾನಾರ್ಥ ಕೋಶ ಸಂಕಲನಗಳು ಚಿತ್ರಮಯ ಪ್ರದೇಶ ಪರಿಸರ, ವಿಶ್ವಪುಸ್ತಕಗಳು, ಚಿತ್ರಗಳು ಬಾಲಸಾಹಿತ್ಯ ಹೀಗೆ ಹಲವು ಬಗೆಯ ಪ್ರಕಟಣೆಗಳು ಹೊರಬಂದವು. ಹಾಗೆಯೇ ಇವರು ಸ್ವತಃ ಕೃತಿ ರಚನೆ ಮಾಡಿದ್ದಕ್ಕೆ ಪುರಾವೆಯಾಗಿ ರಚನೆಗೊಂಡಿರುವ ಸಾಹಿತ್ಯ ಕೃತಿಗಳು ಈಗಿವೆ.

೧. ಬೈಬಲ್ ಮತ್ತು ಸಂಬಂಧಪಟ್ಟ ಲೇಖನಗಳು ಮತ್ತು ಪುಸ್ತಕಗಳು

೨. ನೀತಿ ಪುಸ್ತಕಗಳು ಶಾಲೆಯ ಪಠ್ಯಪುಸ್ತಕಗಳು

೩. ಗೀತಗಳು

೪. ಧರ್ಮಗಳು (ಧರ್ಮಗ್ರಂಥಗಳು)

೫. ಗೃಹಸೂತ್ರಗಳು

೬. ಸಮಾಜಶಾಸ್ತ್ರ

೭. ಕನ್ನಡ

೮. ಶಾಲೆ ಹಾಗೂ ಪುಸ್ತಕಗಳು

೯. ಆರೋಗ್ಯ

೧೦. ಕಥೆಗಳು

೧೧. ಚರಿತ್ರೆ

೧೨. ಗಣಿತ

೧೩. ಕೃಷಿ

೧೪. ಇತರೆ ವಿಷಯಗಳು

೧. ರತ್ನಮಾಲೆ, ವೇದಸಂಗ್ರಹ, ವಚನ ಮಂಜರಿ, ಪ್ರಾರ್ಥನೆಗಳು ಪ್ರಸಂಗಗಳ ಕೈಪಿಡಿ.

೨. ದ್ರಾಕ್ಷಿ ಹಣ್ಣಿನ ಕಥೆ, ಕೆಕೈಸರು ಬಾಯಿಮೊಸಲು, ಅಣಿಮುತ್ತು

೩. ಕಾವ್ಯಗಳು, ಕ್ರಿಸ್ತದಾಸರ ಪದಗಳು, ಸುಕಾರಿ ಕೀರ್ತನೆಗಳು, ಸಂಕೀರ್ತನಗೀತೆಗಳು

೪. ಮಹಮ್ಮದನ ಚರಿತ್ರವು, ಕನ್ನಡ ಪಂಚಾದಶಿ (ಹಿಂದು ದ್ವೈತ ಅದ್ವೈತ) ದೇವ ವಿಚಾರಣೆ ತಿರುಪತಿಯಾತ್ರೆ, ಮತ ವಿಚಾರಣೆ, ಆರ್ಯಸಮಾಜ, ಭಗವದ್ಗೀತೆ

೫. ಜಗತ್ತಿನ ಪೇಚಾಟ ಏಕೆ, ಬಾಲ ಶಿಕ್ಷೆ, ಸುರಪಾನಗಳ ಮೋಸ, ಅನುಕೂಲ ದಾಂಪತ್ಯ

೬. ಭೂಗೋಳ, ಹಿಂದೂಸ್ತಾನದ ಸಂಕ್ಷಿಪ್ತ ಭೂಗೋಳ, ಶಾಸ್ತ್ರ ಭೂಗೋಳ, ಕನ್ನಡ ಭೂಗೋಳ

೭. ಕಾವ್ಯ ಶಬ್ದಾರ್ಥಬಳಿ, ಕನ್ನಡ ಪಂಚಾಂಗ, ಕನ್ನಡ ಮೂಲ ಪಾಠಕ, ಕನ್ನಡ ಬಾಲ ಬೋದನೆ, ಕನ್ನಡದಲ್ಲಿ ಸಂವಾದ, ಅರ್ಥಸಂಗ್ರಹ, ಕನ್ನಡ ಗಾದೆಗಳು, ಕನ್ನಡ ಛಂದಸ್ಸು, ಶಬ್ದವ್ಯುತ್ಪತ್ತಿ, ಹೊಸಗನ್ನಡ ವ್ಯಾಕರಣ, ಕಿಟೆಲ್‌ರ ಕನ್ನಡ–ಇಂಗ್ಲಿಷ ನಿಘಂಟು

೮. ಕರ್ನಾಟಕ ಪ್ರಬಂಧ ಮುಕ್ತವಳಿ, ಶಿಶು ಶಿಕ್ಷಣ, ನೀತಿ ಚಿಂತಾಮಣಿ, ತುಲಾಬಾರ ದೀಕ್ಷೆ

೯. ಪ್ಲೇಗ್ ರೋಗದ ಚಿಕಿತ್ಸೆ, ಹೋಮಿಯೋಪತಿ, ಚಿಕಿತ್ಸಾಮುಷ್ಟಿ, ಆರೋಗ್ಯ ಚಿಂತಾಮಣಿ

೧೦. ಕಥಾಸಪ್ತತಿ, ಈಸೋಪನ ನೀತಿ ಕಥೆಗಲು, ಆಲಿಬಾಬನ ಕಥೆ, ಕನ್ನಡ ಪಂಚತಂತ್ರ

೧೧. ಕ್ರೈಸ್ತ ಸಭಾ ಚರಿತ್ರೆ, ಕ್ರೈಸ್ತ ಸಭಾಪತ್ರವು, ಬ್ರಿಟಿಷ ಸಾಮ್ರಾಜ್ಯದ ಸಂಕ್ಷಿಪ್ತ ಚರಿತ್ರೆ, ಕರ್ನಾಟಕ ವರ್ಣನೆ, ದಕ್ಷಿಣ ಕನ್ನಡ, ಸಂಸ್ಥಾನದ ವಿವರ, ಉ.ಕನ್ನಡ ಜಿಲ್ಲೆಯ ವರ್ಣನೆ.

೧೨. ಗಣಿತ ಹಸ್ತಮಾಲಿಕ, ಗಣಿತನ್ಯಾಯ, ಮಗ್ಗಿಗಳು, ಕೋಷ್ಟಕಗಳು, ಪುರಾಣಿಕ

೧೩. ಕೃಷಿ ಶಾಸ್ತ್ರದ ಮೊದಲನೆ ಪುಸ್ತಕ, ಹಿಂದು ದೇಶದ ಸಸ್ಯಶಾಸ್ತ್ರ

ಹೀಗೆ ಕನ್ನಡದಲ್ಲಿ ಅನೇಕ ವಿಷಯಗಳಾದ ಧರ್ಮ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಿಗೆ ಸಂಬಂಧಿಸಿ ಸಾಹಿತ್ಯ ರಚನೆ ಮಾಡಿದ್ದಾರೆ. ಅಂದರೆ ಒಂದೇ ಧರ್ಮಕ್ಕೆ ಕಟ್ಟಿ ಬೀಳದೆ ಎಲ್ಲಾ ಧರ್ಮ ವಿಚಾರಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ ಎಂಬುದನ್ನು ಈ ಕೃತಿಯ ಅಧ್ಯಯನದಿಂದ ತಿಳಿಯಲಾಗಿದೆ.

*** ಸಭಾಪತಿ ಎನ್. ರೆವರೆಂಡ್, ೨೦೦೧, ಆಧುನಿಕ ಕನ್ನಡ ಸಾಹಿತ್ಯಾಭಿವೃದ್ಧಿಗೆ ಬಳ್ಳಾರಿ** ಲಂಡನ್ ಮಿಷನಿನ ಪ್ರಥಮ ಕೊಡುಗೆ ಎಂದು ಬರೆದ ರೆವರೆಂಡ್ ಎನ್. ಸಭಾಪತಿ ಅವರ ಕೃತಿಯನ್ನು ಅಧ್ಯಯನ ಸಮೀಕ್ಷೆಗೆ ಬಳಕೆ ಮಾಡಲಾಯಿತು. ಇದರಲ್ಲಿ ಕ್ರಿ.ಶ. ೧೬ನೇ ಶತಮಾನದಲ್ಲಿ ವೈಷ್ಣವ ಧರ್ಮದ ಭಕ್ತಿ ಪಂಥದ ಸಾಹಿತ್ಯ ಹೇರಳವಾಗಿ ಬೆಳೆಯಿತು ತರುವಾಯ ೧೯ನೇ

ಶತಮಾನದೊತ್ತಿಗೆ ಪಾಶ್ಚಾತ್ಯ ಕವಿಗಳಾದ ಜಾನ್ ಹ್ಯಾಂಡ್ಸ್, ವಿಲಿಯಂ ರೀವ್, ಜಾನ್, ರೀಡ್, ವಾರ್ಡಲಾ ಮುಂತಾದವರು ಬಂದು ಕನ್ನಡದಲ್ಲಿಯೇ ಒಂದು ಹೊಸ ಆಧುನಿಕ (ಹೊಸಗನ್ನಡ) ಗದ್ಯ ಪದ್ಯ ರಚನೆ ಮಾಡಿದರು. ವ್ಯಾಕರಣ ಶಬ್ದ ನಿಘಂಟುಗಳನ್ನು ಸಂಗ್ರಹಿಸಿದರು ಎಂದು ಹೇಳುತ್ತಾರೆ. ಹಾಗೆಯೇ ಸಭಾಪತಿಯವರು ವಾರ್ಡಲಾರವರ ಪ್ರೌಢಶಾಲೆಯು ೧೮೪೫ರಲ್ಲಿ ನೂತನ ಬೆಳಕನ್ನು ಸ್ಪೂರ್ತಿಯನ್ನು ಹುಮ್ಮಸ್ಸನ್ನು ಉತ್ಸಾಹವನ್ನು ನೀಡಿತು. ಜಾನ್ ಹ್ಯಾಂಡ್ಸ್ ರವರು ಹಾಲು ಕುಡಿಸಿ ತಿನಿಸಿ ಅಸ್ತಿವಾರ ಹಾಕಿದ ಮಗುವಿಗೆ ಅಥವಾ ಮಕ್ಕಳಿಗೆ ವಾರ್ಡಲಾರವರು ಊಟೋಪಚಾರ ನೀಡಿ ಮಕ್ಕಳನ್ನು ಬೆಳೆಸಿದರು. ಪ್ರೌಢಾವಸ್ಥೆಗೆ ತಂದರು. ಕಲ್ಲುಗಳನ್ನು ಮೂರ್ತಿ ಮಾಡಿದ ಶಿಲ್ಪಿಯಂತೆ ವಾರ್ಡಲಾ ಅವರು ಆಗಿದ್ದರು ಎಂದು ತಿಳಿಯಲಾಯಿತು.

೧೯ನೇ ಶತಮಾನದ ಹೊತ್ತಿಗೆ ಶುದ್ಧವಾದ ನಿರ್ಮಲವಾದ, ನಿಚ್ಚಳವಾದ ಗದ್ಯ ರೂಪದಲ್ಲಿ ಸತ್ಯವೇದ, ಶಾಲಾ ಪುಸ್ತಕ, ಕಥಾಪುಸ್ತಕಗಳು ಸುದ್ಧಿ ಸಮಾಚಾರದ ಪತ್ರಿಕೆಗಳು ಸಾವಿರಾರು ಪ್ರತಿಗಳಲ್ಲಿ ಸಿದ್ದವಾದವು. ಅಲ್ಪ ಅವಧಿಯಲ್ಲಿ ಕನ್ನಡ ಭಾಷೆಯ ಬೆಳವಣಿಗೆ ಆಯಿತು ಎಂದು ಕೃತಿಯಿಂದ ಗಮನಿಸಲಾಯಿತು.

ಅಧ್ಯಯನ ಸಮೀಕ್ಷೆ ಸಂಶೋಧನೆಯಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ. ಆದಕಾರಣ ನಾನು ನನ್ನ ವಿಷಯಕ್ಕೆ ಸಂಬಂಧಿಸಿದ ಹಲವು ಕೃತಿಗಳಾದಂತಹ ಬಿ.ಎಸ್. ತಲ್ವಾಡಿಯವರ ಕ್ರೈಸ್ತಮತ, ಕ್ರೈಸ್ತರ್ಷಿ, ಕನ್ನಡದ ಕ್ರೈಸ್ತರು ಮತ್ತು ಕರ್ನಾಟಕದ ಕ್ರೈಸ್ತ ಹಬ್ಬಗಳು ಮತ್ತು ಜಾತ್ರೆಗಳು ಎಂಬ ಪುಸ್ತಗಳನ್ನು ಅಧ್ಯಯನ ಸಮೀಕ್ಷೆ ಮಾಡಲಾಗಿದೆ. ಅಲ್ಲದೆ ಹಲವು ಕೃತಿಗಳು ಈ ರೀತಿ ಇವೆ.

ರವೀಂದ್ರನಾಥ ಅವರ – ಶಿಲುಬೆ

ಹೆಚ್.ಎಸ್. ರವಿನೇತ್ರ ಅವರ – ಶ್ರೀ ದೇವದರ್ಶನಂ

ಥಾಮಸ್ ಡಿ. ಅವರ – ಕ್ರಿಸ್ತನ ಅನುಕರಣೆ

ನರಸಿಂಹ ಭಟ ಅವರ – ದೇವಮಾನವ ಯೇಸು

ಜಯವಂತ ಎಂ. ಅವರ – ಜೋಗುಳರ ನಾವು ಯೇಸುವನ್ನು ನೋಡಬೇಕು

ಸುರೇಶ ಕಮ್ಮಾರ ಅವರ – ಸತ್ಯ

ಪುರ್ತಾದೋ ಎಸ್.ಆರ್. ಅವರ – ಕ್ರೈಸ್ತ ಧರ್ಮದ ಇತಿಹಾಸ

ಡೆರಿಕ್ ಫ್ರೆಂಚ ಅವರ – ಸತ್ಯವೇದಾಧ್ಯಯನ ಮತ್ತು ಪ್ರಾರ್ಥನೆ

ಫ್ರೀಮಾನ್ ಅವರ – ಅಸ್ತಿವಾರಗಳು

ಪ್ರಕಾಶ್ ಎನ್.ಬಿ. ಪಾಸ್ಟರ್ ಅವರ – ಸತ್ಯಬೇಧ ಸತ್ಯಾಂಶಗಳು ಮತ್ತು ಆರಾಧನ ಕ್ರಮ.

ಹೀಗೆ ಹಲವು ಕೃತಿಗಳನ್ನು ಅಭ್ಯಾಸ ಮಾಡಿದಾಗ ಅದರಲ್ಲಿ ಕ್ರೈಸ್ತರ ಚರಿತ್ರೆ, ತತ್ವಗಳು, ಆರಾಧನಾ ಕ್ರಮಗಳು, ಸತ್ಯಾಂಶಗಳು, ಜನರ ನಂಬಿಕೆಗಳು ಮುಂತಾದ ಅಂಶಗಳು ಕನ್ನಡ ಭಾಷೆಯಲ್ಲಿ ಯಾವ ರೀತಿಯಲ್ಲಿ ಅಡಗಿಕೊಂಡಿವೆ ಎಂಬುವ ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಲಾಯಿತು. ಅಂದರೆ ಅನ್ಯ ಸಾಹಿತ್ಯ (ಭಾಷೆ)ದ ಪದಗಳು ವ್ಯಕ್ತಿನಾಮಗಳು, ಸ್ಥಳನಾಮಗಳು, ಘೋಷಣೆಗಳು, ಹಾಡುಗಳು, ಪ್ರಾರ್ಥನೆ ಹೀಗೆ ಕೆಲವು ಸಂದರ್ಭದಲ್ಲಿ ಗೋಚರಿಸುತ್ತವೆ. ಆದುದರಿಂದ ಅಧ್ಯಯನ ಸಮೀಕ್ಷೆಯೂ ಒಂದು ಸಂಶೋಧನೆಯ ಪೂರಕ ಅಂಶವಾಗಿದೆ.

ಅದೇ ರೀತಿಯಾಗಿ ಆಧುನಿಕ ಕನ್ನಡ ಸಾಹಿತ್ಯಾಭಿವೃದ್ಧಿಗೆ ಬಳ್ಳಾರಿ ಲಂಡನ್ ಮಿಷನ್ನಿನ ಕೊಡುಗೆಗಳು ವಿಶೇಷವಾಗಿವೆ ಎಂದು ರೆ. ಯೆನ್. ಸಭಾಪತಿಯವರೇ ಹೇಳಿದ್ದಾರೆ. ಅಲ್ಲದೆ ಅಧ್ಯಯನಕ್ಕೆ ಸಂಬಂಧಿಸಿದಂತೆ ಮತಾಂತರ (ಸತ್ಯದ ಮೇಲೆ ಹಲ್ಲೆ) ಎಂಬ ಕೃತಿಯಿಂದ ಮತಾಂತರ ಎನ್ನುವುದು ಏನು? ಹೇಗೆ ಎಂಬುವ ವಿಷಯಗಳನ್ನು ತಿಳಿಯಲಾಯಿತು. ಜೊತೆ ಜೊತೆಗೆ ರೆ.ಎಫ್. ಕಿಟೆಲ್ ಒಂದು ಸಮಗ್ರ ಅಧ್ಯಯನ ಡಾ.ಕೆ.ಎಂ. ಮ್ಯಾಥ್ಯೂ ಅವರ ಸಂಪಾದನೆಯಾಗಿದೆ. ಈ ಪುಸ್ತಕಗಳು ಅಧ್ಯಯನ ಸಮೀಕ್ಷೆಗೊಳಗಾಗಿ ತಮ್ಮ ನಿಲುವನ್ನು ತಿಳಿಸಿ ಮುಂದಿನ ಪ್ರಯತ್ನಕ್ಕೆ ಬಿಟ್ಟಿವೆ ಎಂದು ಹೇಳಬಹುದು.

❖❖❖

ಅಧ್ಯಾಯ : ಮೂರು

ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯದ ಭಾಷಿಕ ಸ್ವರೂಪ

೩.೧. ಗದ್ಯ ಸಾಹಿತ್ಯ

೩.೧.೧ ಬೈಬಲ್ ಹಾಗೂ ಬೈಬಲ್ ಪ್ರಕಾರಗಳು

೩.೧.೨ ಸಾಮ್ಯಗಳು ಮತ್ತು ಭಾಷೆ

೩.೧.೩ ಸತ್ಯವೇದ (ಬೈಬಲ್)ದ ಧಾರ್ಮಿಕ ಪರಿಭಾಷೆ

೩.೧.೪ ಬೈಬಲ್‌ನ ಪೂರಕ ಕೃತಿಗಳು ಮತ್ತು ಭಾಷೆ

೩.೨. ಪದ್ಯ ಸಾಹಿತ್ಯ

೩.೨.೧ ಕೆಥೋಲಿಕ್ ಕ್ರೈಸ್ತ ಗೀತೆಗಳು

೩.೨.೨ ಪ್ರೊಟೆಸ್ಟೆಂಟ್ ಕ್ರೈಸ್ತ ಗೀತೆಗಳು

೩.೩. ಧರ್ಮೋಪದೇಶ ಸಂದರ್ಭದ ಭಾಷಾ ಬಳಕೆ

೩.೩.೧ ಮೆಥೋಡಿಸ್ಟ್ ಸಭೆಯ ಧರ್ಮೋಪದೇಶ ಮತ್ತು ಭಾಷೆ

೩.೩.೨ ಕೆಥೋಲಿಕ್ ಸಭೆಯ ಧರ್ಮೋಪದೇಶ ಮತ್ತು ಭಾಷೆ

೩.೩.೩ ಕ್ರೈಸ್ತ ಬಹಿರಂಗ ಶಾಂತಿ ಸಂದೇಶಕೂಟಗಳು ಮತ್ತು ಭಾಷೆ

೩.೪. ಪ್ರಚಾರ ಸಾಹಿತ್ಯ

೩.೪.೧ ಕ್ರೈಸ್ತ ಕರಪತ್ರಬರಹ

೩.೪.೨ ಕ್ರೈಸ್ತ ಗೋಡೆಬರಹ

೩.೫. ಕ್ರೈಸ್ತ ಧಾರ್ಮಿಕ ಸಾಹಿತ್ಯದ ಅನುವಾದ

೩.೫.೧ ಬೈಬಲಿನ ಅನುವಾದ

೩.೫.೨ ಅನುವಾದದಲ್ಲಿ ಅಕ್ಷರ ಬಳಕೆ

೩.೫.೩ ಅನುವಾದದಲ್ಲಿ ಪದ ಬಳಕೆ

೩.೫.೪ ಅನುವಾದದಲ್ಲಿ ಭಾಷಾ ಬಳಕೆ

ಅಧ್ಯಾಯ: ಮೂರು

ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯದ ಭಾಷಿಕ ಸ್ವರೂಪ

೧೯ನೇ ಶತಮಾನದಲ್ಲಿ ಭಾರತದ ಬಹುತೇಕ ಪ್ರದೇಶಗಳು ದೇಶೀಯ ರಾಜರುಗಳು ಮತ್ತು ಮುಸ್ಲಿಂ ರಾಜರುಗಳಿಂದ ಆಳಲ್ಪಡುತ್ತಿದ್ದವು. ಆ ಸಂದರ್ಭದಲ್ಲಿ ವ್ಯಾಪಾರ ಉದ್ದೇಶಕ್ಕಾಗಿ ಪಾಶ್ಚಾತ್ಯರು (ಫ್ರೆಂಚರು, ಡಚ್ಚರು, ಇಂಗ್ಲೀಷರು, ಪೋರ್ಚುಗೀಸರು) ಭಾರತಕ್ಕೆ ಬರುತ್ತಾರೆ. ಈ ಬರುವಿಕೆಯನ್ನು ಶ್ರೀನಿವಾಸ ಹಾವನೂರ ಅವರು "ಹತ್ತೊಂಬತ್ತನೆಯ ಶತಮಾನದ ಭಾರತಕ್ಕೆ ಪಾಶ್ಚಾತ್ಯ ಸಂಪರ್ಕವು ಈ ನಾಲ್ಕು ಬಗೆಯಲ್ಲಿ ಒದಗಿ ಬಂದಿತು.

೧. ಆಡಳಿತ, ವ್ಯವಹಾರ

೨. ಮುದ್ರಣ ಯಂತ್ರ

೩. ಕ್ರಿಸ್ತಮತ ಪ್ರಚಾರ

೪. ಹೊಸ ಶಿಕ್ಷಣ ಪದ್ಧತಿ ಮತ್ತು ಹೊಸ ವಿಚಾರ ಸರಣಿ"(ಹೊಸಗನ್ನಡ ಅರುಣೋದಯ, ಶ್ರೀನಿವಾಸ ಹಾವನೂರು, ಪು. ೮-೯)ಯಿಂದ ಪ್ರವೇಶ ಪಡೆಯಿತು ಎಂದು ಗುರುತಿಸುತ್ತಾರೆ. ಆಡಳಿತ-ವ್ಯವಹಾರದಲ್ಲಿ ಅಸ್ಥಿರ ದೇಶಿಯ ರಾಜರ ಆಳ್ವಿಕೆಯನ್ನು ಅಂತ್ಯಗೊಳಿಸಿ ಸಮರ್ಥ ಆಡಳಿತವನ್ನು ನೀಡಿದರು. ಇದರೊಂದಿಗೆ ಯುರೋಪಿನ ಔದ್ಯೋಗಿಕ ಸುಧಾರಣೆಗಳನ್ನು ಭಾರತಕ್ಕೆ ಪರಿಚಯಿಸಿದರು. ಇದರಿಂದಾಗಿ ಕೈಗಾರಿಕೆ, ಉದ್ಯಮ, ಆಧುನಿಕ ಸಂಚಾರ ಸಾಧನಗಳು ಭಾರತೀಯರಲ್ಲಿ ಸಂಚಲನ ಮೂಡಿಸಿದವು. ಇದಲ್ಲದೆ ಭಾರತೀಯರಿಗೆ ಭಿನ್ನ ಪಾಶ್ಚಾತ್ಯ ನಾಗರಿಕತೆಯು ಆಕರ್ಷಣೀಯವಾಗಿ ತೋರಿತು. ಮುಖ್ಯವಾಗಿ ಅವರ ಚಿಕಿತ್ಸಕ ಮನೋವೃತ್ತಿ, ವ್ಯವಹಾರಿಕ ದೃಷ್ಟಿ, ಜಾತಿಗಳ ಮೇಲು ಕೀಳನ್ನೆಣಿಸದ ವ್ಯವಹರಣೆ ಭಾರತೀಯ ಬದುಕಿನಲ್ಲಿ ಹರಡುತ್ತ ನಡೆದು, ಭಾರತೀಯ ಜನಸಾಮಾನ್ಯರ ಮನಸ್ಸು, ಸಂಸ್ಕೃತಿ, ಭಾಷೆಯಲ್ಲಿ ಪ್ರವೇಶ ಮಾಡಿದರು.

ಒಟ್ಟಾರೆಯಾಗಿ ವ್ಯಾಪಾರ ಮತ್ತು ಆಡಳಿತದ ಕಾರಣಕ್ಕಾಗಿ ಭಾರತಕ್ಕೆ ಬಂದವರು ಇವರು ಒಂದು ಕೈಯಲ್ಲಿ ಬೈಬಲ್. ಅದರ ಬೆನ್ನಿಗೆ ಮುದ್ರಣ ಸಾಮಗ್ರಿಗಳನ್ನು ಹಿಡಿದುಕೊಂಡು ಬಂದು ಮಿಶನರಿಗಳು ಸ್ವಮತ ಪ್ರಸಾರದ ಕಾರ್ಯದಲ್ಲಿ ತೊಡಗಿದರು. ಇದರಿಂದಾಗಿ ಸಾಹಿತ್ಯ ಶಿಕ್ಷಣ ಕ್ಷೇತ್ರಗಳಲ್ಲಿ ನೇರವಾಗಿ ಪ್ರವೇಶಿಸಿದರು.

ಆಡಳಿತ ಅಧಿಕಾರಿಗಳೊಂದಿಗೆ ಭಾರತಕ್ಕೆ ಬಂದ ಕ್ರೈಸ್ತ ಮಿಶರಿಗಳು ಪ್ರಾದೇಶಿಕ ಭಾಷೆಯನ್ನು ಕಲಿತ ಮೇಲೆ ಬೈಬಲ್ ಹಾಗೂ ಮತ ತತ್ವದ ಪುಸ್ತಕಗಳನ್ನು ಅನುವಾದಿಸುವುದು, ಆ ಪ್ರಾದೇಶಿಕ ಭಾಷೆಯ ವ್ಯಾಕರಣ, ಕೋಶಗಳನ್ನು ರಚಿಸುವ ಕೆಲಸ ಮಾಡಿದರು. ಇದರೊಂದಿಗೆ ಮಿಶರಿ ಶಾಲೆಗಳು ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕ ರಚನೆ ಮಾಡುತ್ತಿದ್ದವು. ಈ ಪಠ್ಯ ಪುಸ್ತಕಗಳ ಪ್ರಕಟಣೆಯನ್ನು ಮಿಶನ್ನಿನ ವತಿಯಿಂದ ಒಂದು ಅಚ್ಚುಕೂಟವನ್ನು ಸ್ಥಾಪಿಸಿ, ಅವುಗಳ ಮುದ್ರಣ, ವಿತರಣೆಗಳನ್ನು ಕೈಗೊಳ್ಳುತ್ತಿದ್ದವು. ಭಾರತದಲ್ಲಿ ಮಿಶರಿಗಳ ಮುದ್ರಣ ಮತ್ತು ಪ್ರಸರಣ ಕಾರ್ಯದ ಕುರಿತು ಶ್ರೀನಿವಾಸ ಹಾವನೂರು ಈ ರೀತಿಯಾಗಿ ಉಲ್ಲೇಖಿಸಿದ್ದಾರೆ. "ಲಂಡನ್ನಿನ ಕೇಂದ್ರೀಯ ಮಿಶನ್ ಸಂಸ್ಥೆಯ ವರದಿಯೊಂದರ ಪ್ರಕಾರ ೧೮೪೯-೧೮೫೯ರ ಅವಧಿಯಲ್ಲಿ ಭಾರತದಲ್ಲಿದ್ದ ಮಿಶನರಿಗಳು ೮೩೪ ಪುಸ್ತಕಗಳನ್ನು ವಿವಿಧ ಭಾಷೆಗಳಲ್ಲಿ ರಚಿಸಿ ಪ್ರಕಟಿಸಿದ್ದವು ಎಂದು ತಿಳಿದುಬರುತ್ತದೆ." (ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ಪು. ೧೩)

ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ

ಕ್ರೈಸ್ತ ಮಿಶರಿಗಳು ಭಾರತದಲ್ಲಿ ಸಾಹಿತ್ಯಿಕ ಕಾರ್ಯಚಟುವಟಿಕೆಗಳನ್ನು ಮೊದಲು ಬಂಗಾಳಿ ಮತ್ತು ಮರಾಠಿ ಭಾಷೆಯಲ್ಲಿ ಪ್ರಾರಂಭಿಸಿದವು. ನಂತರ ಇತರೆ ಪ್ರಾಂತೀಯ ಭಾಷೆಗಳಿಗೆ ವಿಸ್ತರಿಸಿಕೊಂಡವು. ಕರ್ನಾಟಕದಲ್ಲಿ ಮಿಶನರಿ ಚಟುವಟಿಕೆಗಳನ್ನು ೧೭ನೇ ಶತಮಾನದ ಹಿಂದಿನಿಂದಲೂ ಹಲವು ವಿದ್ವಾಂಸರು ಗುರುತಿಸುತ್ತಾರೆ. ಕರ್ನಾಟಕಕ್ಕೆ ಮೊದಲು ಬಂದ ಮಿಶನರಿಗಳು 'ಜೆಸುಯಿಟ್ ಸೊಸೈಟಿ, ಲಂಡನ್ ಮಿಶನ್, ವೆಸ್ಲಿಯನ್ ಮೆಥೋಡಿಸ್ಟ್ ಮಿಶನ್ ಹಾಗೂ ಜರ್ಮನ್ ಇವ್ಯಾಂಜೆಲಿಕಲ್ ಮಿಶನ್ ಎಂದು ಗುರುತಿಸುತ್ತಾರೆ. (ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ಪು. ೧೪) ಈ ಮಿಶನರಿಗಳು ರೋಮನ್ ಕ್ಯಾಥೋಲಿಕ್ ಗುಂಪಿಗೆ ಸೇರಿದ್ದು ಇನ್ನುಳಿದ ಮಿಶನರಿಗಳು ಪ್ರೊಟೆಸ್ಟೆಂಟ್ ಗುಂಪಿಗೆ ಸೇರಿದವೆಂದು ತಿಳಿಯುತ್ತದೆ.

ಜೆಸುಯಿಟ್ ಪಾದ್ರಿಯಾದ ಲಿಯೊನಾರ್ಡೊ ಸಿನ್ನಾಯಿ (೧೬೦೯-೧೬೭೬) ಮರಣದ ನಂತರ ಮತಾಂತರ ಕಾರ್ಯವನ್ನು ಮುಂದುವರೆಸಿತು. ಮಂಗಳೂರು, ಬೆಂಗಳೂರು ಪ್ರದೇಶಗಳು ರೋಮನ್ ಕ್ಯಾಥೋಲಿಕ್ ಮತಾಂತರ ಚಟುವಟಿಕೆ ಮೊದಲ ಕೇಂದ್ರಗಳಾಗಿದ್ದವು. ೧೮೫೦ರಲ್ಲಿ ಚಾರ್ಬೋನ್ ಎಂಬುವನು ಮೈಸೂರು ಸಂಸ್ಥಾನದ 'ವಿಕಾರ್ ಎಪೊಸ್ಟಿಲಿಕ್' ಆದ ನಂತರ ಕ್ಯಾಥೋಲಿಕ್‌ರ ಕನ್ನಡ ಚಟುವಟಿಕೆಗಳು ಕಂಡುಬಂದವು. ಇದರೊಂದಿಗೆ ಪ್ರೊಟೆಸ್ಟೆಂಟ್ ಮಿಶರಿಗಳ ಕಾರ್ಯ ಚಟುವಟಿಕೆಗಳನ್ನು ಲಂಡನ್ ಮಿಶನ್ ಸಂಸ್ಥೆಯ ಜಾನ್ ಹ್ಯಾಂಡ್ಸ್ ೧೮೦೧ರಂದು ಬಳ್ಳಾರಿಯ ಮಿಶನ್ ಕೇಂದ್ರದ ಮೂಲಕ ಗುರುತಿಸಬಹುದು. ನಂತರ ೧೮೨೦ರಲ್ಲಿ ಬೆಳಗಾವಿ, ಬೆಂಗಳೂರಿನಲ್ಲಿ ಕೇಂದ್ರಗಳನ್ನು ಪ್ರಾರಂಭಿಸಿ ಕ್ರೈಸ್ತ ಧರ್ಮದ ಚಟುವಟಿಕೆಗಳ್ನನು ಮುಂದುವರೆಸಿದರು.

ಥಾಮಸ್ ಹಾಡ್ಸನ್ ವೆಸ್ಲಿಯನ್ನರ ಕನ್ನಡದ ಚಟುವಟಿಕೆಗಳನ್ನು ಮೊದಲು ಪ್ರಾರಂಭಿಸಿದವನು. ಇವನ ಕಾರ್ಯಕ್ಷೇತ್ರ ಮೈಸೂರು ಸಂಸ್ಥಾನದ ಹಲವು ನಗರಗಳಿಗೆ ಸೀಮಿತವಾಗಿತ್ತು. ಇವನ

ನಂತರ ಬಂದ ಜೋಸಿಯ ಹಡ್ಸನ್ನನು(೧೮೭೮) ಶೈಕ್ಷಣಿಕ ಕಾರ್ಯಗಳನ್ನು ಹೆಚ್ಚು ವಿಸ್ತರಿಸಿದನು. ಇನ್ನೊಬ್ಬ ಪ್ರಸಿದ್ಧ ವೆಸ್ಲಿಯನ್ ಮಿಶರಿಯಾದ ಹೆನ್ರಿ ಹೇಗ್ ಮೈಸೂರು ನಗರದಲ್ಲಿ ನಿಂತು ಮುದ್ರಣ ಪತ್ರಿಕೋದ್ಯಮ, ಕನ್ನಡ ಬೈಬಲ್ ನವೀಕರಣ ಕಾರ್ಯಗಳಲ್ಲಿ ಶ್ರಮಿಸಿದನು. ಇದರೊಂದಿಗೆ ಜರ್ಮನಿಯ ಬಾಸೆಲ್ ಮಿಶನರಿಯು ಮಂಗಳೂರಿನಲ್ಲಿ ನೆಲೆನಿಂತು ಹಲವು ಕಾರ್ಯಗಳನ್ನು ಕೈಗೊಂಡಿತು. ಅದರಲ್ಲಿ ಮೊಗ್ಲಿಂಗ್, ವೈಗ್ಲೆ, ಕಿಟೆಲ್ ಮುಂತಾದವರು ಮಿಶರಿಗೆ ಕೀರ್ತಿ ತಂದರು.

ಬೈಬಲ್‌ನ ಕನ್ನಡ ಅನುವಾದಗಳು

ರೆ. ಜಾನ್ ಹ್ಯಾಂಡ್ಸ್ ಇವರು ಮೊದಲ ಬಾರಿಗೆ ಲೂಕ್ಸ್ ಬೈಬಲ್‌ನ್ನು ಕನ್ನಡಕ್ಕೆ ಭಾಷಾಂತರಿಸಿದರು. (ರಾ.ಯ. ಧಾರವಾಡಕರ, ಹೊಸಗನ್ನಡ ಸಾಹಿತ್ಯದ ಉದಯಕಾಲ, ಪು. ೬೬) ನಂತರದಲ್ಲಿ ಹ್ಯಾಂಡ್ಸ್‌ರವರ 'ಗಾಸ್ಪೆಲ್ಸ್ ಆ್ಯಂಡ್ ಆ್ಯಕ್ಟ್' ಎಂಬುದೇ ಕನ್ನಡದಲ್ಲಿ ಮುದ್ರಿತವಾದ ಪ್ರಥಮ ಬೈಬಲ್ ಕೃತಿ. ನಂತರದಲ್ಲಿ ಹ್ಯಾಂಡ್ಸ್ ಅವರು 'ಮೋಸೆಯ ಮೊದಲನೇ ಕಾಂಡವು' ಎಂಬುದನ್ನು 'ಹಳೇ ಒಡಂಬಡಿಕೆ' ಎಂಬುದನ್ನು ಭಾಷಾಂತರಿಸಿದರು. ಇದರ ನಂತರದಲ್ಲಿ ಹ್ಯಾಂಡ್ಸ್ ಅವರು ಜಾನ್ ರೀಡ್ ಅವರ ಕೂಡಿ 'ಎಫಿಸಿಯನ್ಸ್ ಅಂಡ್ ಫಿಲಿಪಿಯನ್ಸ್' ಎಂಬ ಭಾಗಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿದರು. ೧೮೨೩ರಲ್ಲಿ ವಿಲಿಯಮ್ ಕ್ಯಾರೆ ಅವರು 'ಧರ್ಮ ಪುಸ್ತಕ' ಎಂದು ಬೈಬಲ್ ಅನ್ನು ಅನುವಾದ ಮಾಡಿದರು. ನಂತರ ವಿಲಿಯಮ್ ರೀವ್ ಅವರ ಓಲ್ಡ ಟೆಸ್ಟಮೆಂಟ್ ಗ್ರಂಥವೂ ೧೮೩೧ರಲ್ಲಿ ಸಮಗ್ರ ಬೈಬಲ್ ಗ್ರಂಥವಾಗಿ ಪ್ರಕಟವಾಯಿತು. ಇವುಗಳಲ್ಲದೇ ರೀಡ್ ಅವರ 'ಸಾಂಗ್ ಆಫ್ ಸೊಲೊಮನ್', 'ಪೂರ್ವನಿಧಾರ ದ್ವಿಪಂಚಾಶತಿ', 'ನವನಿರ್ಧಾರ ದ್ವಿಪಂಚಾಶತಿ', ವೀಗಲ್ ಮತ್ತು ಮೊಗ್ಲಿಂಗರ 'ಕ್ರೈಸ್ತ ಗೀತೆಗಳು' ಮೊಗ್ಲಿಂಗರ 'ಹೃದಯ ದರ್ಪಣ' 'ದೇವ ವಿಚಾರ' (೧೮೫೨), 'ಜಾತಿ ವಿಚಾರಣೆ' (೧೮೫೪) 'ಮತ ವಿಚಾರಣೆ (೧೮೬೪) ಏಸುಕ್ರಿಸ್ತನ ಶ್ರಮೇ ಚರಿತ್ರೆ, 'ವಿಗ್ರಹಾರಾಧನೆ' (ರಾ.ಯ. ಧಾರವಾಡಕರ, ಹೊಸಗನ್ನಡ ಸಾಹಿತ್ಯದ ಉದಯಕಾಲ, ಪು. ೬೭) ಹೀಗೆ ಹಲವು ಗ್ರಂಥಗಳು ಕ್ರೈಸ್ತ ಧರ್ಮವನ್ನು ಕೇಂದ್ರೀಕರಿಸಿ ಕನ್ನಡದಲ್ಲಿ ಪ್ರಕಟಗೊಂಡವು. ಈ ಮೂಲಕ ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯವು ತನ್ನದೇ ಸ್ಥಾನವನ್ನು ಪಡೆದುಕೊಂಡಿತು.

ಹೀಗೆ ೧೭ನೇ ಶತಮಾನದಲ್ಲಿ ಕ್ರೈಸ್ತಧರ್ಮದ ಕೃತಿಗಳು ರಚನೆಯಾದರೆ, ಇಂದು ಇದೇ ಧರ್ಮ ಕುರಿತಾದ ಹಲವು ಕೃತಿಗಳು ಅನುವಾದ, ಮರುಸೃಷ್ಠಿ ಮೂಲಕ ಕನ್ನಡದಲ್ಲಿ ರಚನೆಯಾಗಿರುವುದು ಕಾಣಬಹುದು. ಅವುಗಳಲ್ಲಿ ಸತ್ಯವೇದ, ಪರಿಶುದ್ಧ ಬೈಬಲ್, ಪವಿತ್ರ ಬೈಬಲ್, ಶುಭಸಂದೇಶ, ಸುಪ್ರೀಯ ಸಂದೇಶ ಮತ್ತು ಸುಪ್ರೀತ ಸಂದೇಶ ಎಂಬುವುಗಳು ಮುಖ್ಯವಾಗಿ ಕಾಣಿಸುತ್ತವೆ. ಇದರೊಂದಿಗೆ ಗೀತಾಪುಸ್ತಕಗಳಾದ ಸಂಗೀತ ಮತ್ತು ಕೀರ್ತನೆ, ಉಜ್ಜೀವನ ಗೀತೆಗಳು, ಬನ್ನಿರಿ ಆರಾಧಿಸೋಣ ಮುಂತಾದವುಗಳನ್ನು ಕಾಣಬಹುದು.

ಒಟ್ಟಾರೆಯಾಗಿ ಕನ್ನಡ ಮತ್ತು ಭಾರತದ್ದಲ್ಲದ ಧರ್ಮ, ಆಚಾರ, ಸಂಸ್ಕೃತಿಯನ್ನು ಬೇರೆ ಬೇರೆ ಕಾರಣಕ್ಕಾಗಿ ಭಾರತೀಯ ಮತ್ತು ಕನ್ನಡದ ಸಮಾಜಗಳು ಪ್ರಾದೇಶಿಕ ಸತ್ವ ಭಾಷೆಗಳಿಗೆ ಒಳಗು ಮಾಡಿಕೊಂಡಿರುವುದು ಕಾಣಬಹುದು. ಅಂದರೆ ಮೂಲ ಗ್ರೀಕ್/ರೋಮನ್ ಭಾಷೆಗಳಲ್ಲಿನ ಸಾಹಿತ್ಯವು ಕನ್ನಡಿಗರನ್ನು ಮುಟ್ಟಲು ಕನ್ನಡ ಭಾಷೆ-ಸಂಸ್ಕೃತಿಗೆ ಅನುಸರಿಸಿ ಅನುವಾದಿಸಿ ಕನ್ನಡದ ಜೀವನದಂತೆಯೇ ರೂಪಿಸಿರುವುದು ಇಲ್ಲಿನ ವಿಶೇಷವಾಗಿದೆ. ಈ ವಿಶೇಷಗಳನ್ನು ಕನ್ನಡ ಭಾಷೆಯಲ್ಲಿ ರೂಪಿಸುವಾಗ ಮಾಡಿಕೊಂಡಿರುವ ಹೊಂದಾಣಿಕೆ, ಕೊಡುಕೊಳ್ಳುವಿಕೆಯನ್ನು ಗುರುತಿಸುವುದು ಇಲ್ಲಿ ಮುಖ್ಯವಾಗಿದೆ. ಅಂದರೆ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಬಳಕೆಯಾಗಿರುವ ಕನ್ನಡದ ಗದ್ಯ, ಪದ್ಯ, ಮೌಖಿಕ, ಪ್ರಚಾರ, ಅನುವಾದ ಸಾಹಿತ್ಯದ ಅಂಶಗಳೊಂದಿಗೆ ಪದ, ವಾಕ್ಯ, ಕನ್ನಡ ನಾಮಪದಗಳು ಹೇಗೆ ಭಿನ್ನವಾಗಿವೆ. ಅವುಗಳ ಬಳಕೆಯ ಸ್ವರೂಪವೇನು? ಈ ರೀತಿಯ ಬಳಕೆಯಲ್ಲಿ ಮೂಲ ವಸ್ತುವಿನ ಸ್ವರೂಪವೇನು ಎಂಬೆಲ್ಲಾ ಪರಿಶೀಲಿಸಿ ಕ್ರೈಸ್ತ ಧಾರ್ಮಿಕ ಸಾಹಿತ್ಯದ ಭಾಷಿಕ ಸ್ವರೂಪವನ್ನು ತಿಳಿಯುವುದಾಗಿದೆ.

೩.೧. ಗದ್ಯ ಸಾಹಿತ್ಯ

ಕನ್ನಡ ಸಾಹಿತ್ಯದಲ್ಲಿ "ಆಧುನಿಕ ಗದ್ಯವಂತು ಜಗತ್ತಿನ ನಾನಾ ಭಾಷಾ ಸಾಹಿತ್ಯಗಳ ಸಾರಸತ್ವವನ್ನು ಹೀರಿಕೊಂಡು ಸುಸ್ಪಷ್ಟವಾಗಿ ವಿಶ್ವರೂಪಾತ್ಮಕವಾಗಿ ಸರ್ವಂಕಷವಾಗಿ ಸರ್ವವ್ಯಾಪಕವಾಗಿ, ಜಗತ್ತಿನ ಸಮೃದ್ಧ ಭಾಷೆಗಳಿಗೆ ಸರಿಸಮನಾಗಿ ಬೆಳೆದಿದೆ. ಮಡಿ ಮೈಲಿಗೆಯ ಸಂಕೋಚವಿಲ್ಲದೆ ಬಿಂಕ ಬಿಗುಮಾನವಿಲ್ಲದೆ ಸಂಸ್ಕೃತ ಇಂಗ್ಲೀಷ್ ಪರ್ಷಿಯನ್ ಅರೇಬಿಕ್ ಮೊದಲಾದ ಭಾಷೆಗಳಿಂದ ಸಲೀಸಾಗಿ ಶಬ್ದ ಸಾಮಗ್ರಿಯನ್ನು ಅವುಗಳ ಜೇಗು ಬನಿಗಳನ್ನು ಸ್ಥೂಲ ಸೂಕ್ಷ್ಮಗಳನ್ನು ಪಡೆದುಕೊಂಡು, ರಕ್ತಗತ ಮಾಡಿಕೊಂಡು ಲೋಕ ಭಾಷೆಯಾಗಬಲ್ಲ ಸಾಮರ್ಥ್ಯವನ್ನು ಪಡೆದಿದೆ" (ಜೆ.ಎಸ್.ಎಸ್. ಅವರ ಶಾಸನ ಮತ್ತು ಗದ್ಯ ಸಂಪುಟ-ಗದ್ಯದ ಇತಿಹಾಸ ಒಂದ ಸಮೀಕ್ಷೆ, ಪು. ೧೬೩) ಎಂದು ದೇ.ಜ.ಗೌ. ಅವರು ಹೇಳುವಂತೆ ನಮ್ಮ ಕನ್ನಡ ಸಾಹಿತ್ಯದ ಚರಿತ್ರೆಯನ್ನು ನೋಡಬೇಕಾದರೆ ಮೊದಲು ನಮಗೆ ಗದ್ಯವೇ ಮೂಲಾಧಾರ ಕನ್ನಡದ ಪ್ರಾಚೀನತೆಯನ್ನು ಗ್ರಹಿಸಿರುವುದು ೪೫೦ರ ಹಲ್ಮಿಡಿ ಶಾಸನದಲ್ಲಾದರೂ ಅದು ಸಹಿತ ಗದ್ಯವನ್ನೇ ಒಳಗೊಂಡಿದೆ. ಆದ್ದರಿಂದ ಗದ್ಯವೇ ಸಾಹಿತ್ಯದ ಒಂದು ಬೆನ್ನೆಲುಬು ಎಂದು ಹೇಳಬಹುದು. ಅಂತಹ ಗದ್ಯ ಕೃತಿಗಳಲ್ಲಿ ಮೊದಲಿಗೆ ೮೫೦ರಲ್ಲಿ ಕಂಡುಬಂದ ಶ್ರೀವಿಜಯನ ಕವಿರಾಜಮಾರ್ಗ ಮೊಟ್ಟಮೊದಲ ಗದ್ಯ ಕೃತಿಯೆಂದೇ ಖ್ಯಾತಿ ಪಡೆದ ವಡ್ಡಾರಾಧನೆ (೯೨೦) ದ್ವಿತಾಯ ಗದ್ಯ ಕೃತಿಯೆಂದು ಹೆಸರಾದ ತ್ರಿಷಷ್ಟಿ ಲಕ್ಷಣ ಚಾವುಂಡರಾಯನ ಮಹಾಪುರಾಣ ಕೆಂಪು ನಾರಾಯಣನ ಮುದ್ರಮಂಜೂಷ ಮತ್ತು ಹೊಸಗನ್ನಡ ಮುಂಗೋಳಿ ಎಂಬ ಬಿರುದುನೊಂದಿಗೆ ಕಂಡುಬರುವ ಮುದ್ದಣನ ರಾಮಾಶ್ವಮೇಧ ಈ ಎಲ್ಲಾ ಕೃತಿಗಳು ಗದ್ಯ ಮಾದರಿಯವೇ ಆಗಿವೆ.

ಇಂತಹ ಹೊಸ ಗದ್ಯ ಮಾದರಿ ಸಾಹಿತ್ಯಕ್ಕೆ ಆಂಗ್ಲರ ಕೊಡುಗೆ ವಿಶೇಷವಾಗಿದೆ. ಹೊಸಗನ್ನಡ ಬೆಳವಣಿಗೆಗೆ ವಿದೇಶಿ ವಿದ್ವಾಂಸರುಗಳು ಹಾಕಿದ ಬುನಾದಿ ಅಲ್ಪವಾದುದು ಅಲ್ಲ. ಮುಂಬೈ

ಕರ್ನಾಟಕದಲ್ಲಿ ಎಲಿಯಟ್ ಫ್ಲೀಟ್ ಮತ್ತು ಫರ್ಗುಸನ್ ಮೊದಲಾದವರು ಕನ್ನಡ ಶಾಸನ ಸಂಗ್ರಹಿಸಿ ಪ್ರಕಟಿಸಿದರು. ಮದ್ರಾಸ್ ಕರ್ನಾಟಕದಲ್ಲಿದ್ದ ರೀವ್ ಮತ್ತು ಕಿಟೆಲ್ ಅಪಾರ ಶ್ರಮದಿಂದ ಕನ್ನಡದಲ್ಲಿ ನಿಘಂಟುಗಳನ್ನು ಹೊರತಂದರು. ಮೈಸೂರು ಪ್ರಾಂತ್ಯದಲ್ಲಿ ರೈಸ್‌ರವರು ಶಾಸನ ಸಂಗ್ರಹಿಸಿ ೧೮೪೭ ಸಂಪುಟಗಳಲ್ಲಿ ಹೊರತಂದರು. ಮಂಗಳೂರು ಮತ್ತು ಬಳ್ಳಾರಿಯಲ್ಲಿ ವಿದೇಶಿ ಮಿಶನರಿಗಳು ಮುದ್ರಣ ಸಂಸ್ಥೆಗಳನ್ನು ಸ್ಥಾಪಿಸಿದರು. ಆಗ ಆಂಗ್ಲ ಕೃತಿಗಳ ಭಾಷಾಂತರ, ರೂಪಾಂತರ ಪ್ರಯತ್ನಗಳು ಆರಂಭವಾದವು. ಆಗಲೇ ೧೮೨೭ರ ಹೊತ್ತಿಗೆ ಬೈಬಲ್ ಗ್ರಂಥವು ಕನ್ನಡಕ್ಕೆ ಭಾಷಾಂತರವಾಗಿ ಹೊರಬಂದಿತ್ತು. ಅಂದಿನಿಂದ ಇಂದಿನವರೆಗೆ ಈ ಬೈಬಲ್‌ನ ಅನುವಾದ ಕಾರ್ಯವು ಮುದ್ರಣದೊಂದಿಗೆ ಮುಂದುವರಿದಿದೆ. ಪ್ರಸ್ತುತ ೪ರಿಂದ ೫ ರೀತಿಯ ಶಿರೋನಾಮೆಗಳನ್ನು ಹೊಂದಿದ ಕ್ರೈಸ್ತ ಬೈಬಲನ್ನು ಗುರುತಿಸಿ ಅದರೊಳಗಿನ ಕನ್ನಡ ಗದ್ಯ ಸಾಹಿತ್ಯ ಮತ್ತು ಭಾಷೆಯನ್ನು ಗಮನಿಸಲಾಗಿದೆ.

೩.೧.೧. ಬೈಬಲ್ ಹಾಗೂ ಬೈಬಲ್ ಪ್ರಕಾರಗಳು

ಬೈಬಲ್ ಇಂಗ್ಲೀಷ ಪದವು ಗ್ರೀಕ್ ಭಾಷೆಯ 'ಬಿಬ್ಲಿಯ' ಪದದಿಂದ ಬಂದಿದ್ದು ನಮ್ಮ ಕನ್ನಡ ಭಾಷೆಯಲ್ಲಿ 'ಪುಸ್ತಕಗಳು' ಎಂಬ ಅರ್ಥವನ್ನು ಹೊಂದಿದೆ. ಮೊದಲು ಬಿಡಿ ಬಿಡಿಯಾಗಿ ಓದಲ್ಪಡುತ್ತಿದ್ದ ಈ ಪುಸ್ತಕಗಳು ಇಂದು ಇಡಿಯಾಗಿ ಓದುವಂತಹ ಒಂದು ದೊಡ್ಡ ಕ್ರೈಸ್ತ ಧರ್ಮ ಗ್ರಂಥವು ರಚನೆಯಾಗಿದೆ. ಬೈಬಲಿನ ಮೊದಲ ಭಾಗವಾದ ಹಳೆ ಒಡಂಬಡಿಕೆಯು ೩೯ ಪುಸ್ತಕಗಳ ಸಂಗ್ರಹವಾಗಿದೆ. 'ಒಡಂಬಡಿಕೆ' ಎಂದು ಭಾಷಾಂತರಿಸಲ್ಪಟ್ಟಿರುವ ಪದವು ಒಪ್ಪಂದ ಅಥವಾ ಕರಾರು ಎಂಬ ಅರ್ಥವನ್ನು ಒಳಗೊಂಡಿದೆ. ದೇವರು ತನ್ನ ಜನರನ್ನು ಆಶೀರ್ವದಿಸುವುದಾಗಿ ಮಾಡಿದ ವಾಗ್ದಾನವನ್ನು ಈ ಒಡಂಬಡಿಕೆ ಪದವು ಸೂಚಿಸುತ್ತದೆ. ಹೊಸ ಒಡಂಬಡಿಕೆ ಎಂದರೆ ಬೈಬಲಿನ ೨೭ ಪುಸ್ತಕಗಳ ಒಂದು ಸಂಗ್ರಹವಾಗಿದೆ. ಮೋಶೆ ಎಂಬ ಒಬ್ಬ ಪ್ರವಾದಿಯ ಕಾಲದಲ್ಲಿ ದೇವರು ಯೆಹೂದ್ಯರೊಡನೆ ಮಾಡಿಕೊಂಡ ಒಪ್ಪಂದವೇ ಹಳೇ ಒಡಂಬಡಿಕೆ ಮತ್ತು ಯೇಸುಕ್ರಿಸ್ತನನ್ನು ನಂಬುವ ಜನರೊಂದಿಗೆ ದೇವರು ಮಾಡಿಕೊಂಡ ಒಪ್ಪಂದವೇ ಹೊಸ ಒಡಂಬಡಿಕೆ ಎಂದು ಬೈಬಲಿನ ಎರಡು ಭಾಗಗಳನ್ನು ವಿಶ್ಲೇಷಿಸಲಾಗಿದೆ. ಇಲ್ಲಿ ಯೆಹೂದ್ಯರೆಂದರೆ ದೇವರನ್ನು ನಂಬಿರುವ ಜನಗಳು ಆಗಿರುತ್ತಾರೆ. ಈ ರೀತಿಯ ಎರಡು ಭಾಗಗಳನ್ನೊಳಗೊಂಡ ಕ್ರೈಸ್ತ ಧರ್ಮ ಗ್ರಂಥವಾದ ಸತ್ಯವೇದ (ಬೈಬಲ್) ಹಲವು ಹೆಸರುಗಳಲ್ಲಿ ಪ್ರಸ್ತುತ ಲಭ್ಯವಿದೆ. ಅದನ್ನು ಹೀಗೆ ವರ್ಗೀಕರಿಸಲಾಗಿದೆ.

೧. ಅಧ್ಯಯನ ಸತ್ಯವೇದವು – ಬಿಎಸ್‌ಐ, ಎಂ.ಜಿ. ರೋಡ್, ಬೆಂಗಳೂರು

೨. ಪವಿತ್ರ ಬೈಬಲ್ – ಕೆಜೆವಿ ಬಿಎಸ್ ವಿಜಯನಗರ, ಬೆಂಗಳೂರು

೩. ಪರಿಶುದ್ಧ ಬೈಬಲ್ – ಡಬ್ಲ್ಯೂಬಿಟಿಸಿ ಇಂಡಿಯಾ ಥಾಮಸ್ ಟೌನ್, ಬೆಂಗಳೂರು

೪. ಪವಿತ್ರ ವಚನ ಸತ್ಯವೇದ – ಬಿಲಿವರ್ಸ್ ಚರ್ಚ್ ಪಬ್ಲಿಕೇಷನ್ಸ್, ತಿರುವಳ್ಳ–೫, ಕೇರಳ

೫. ಪವಿತ್ರ ಬೈಬಲ್ – ಕೆಆರ್‌ಸಿಬಿಎಸ್, ವೀಲರ್ ರೋಡ್, ಥಾಮಸ್ ಟೌನ್, ಬೆಂಗಳೂರು

೬. ಸತ್ಯವೇದವು – ಬಿಎಸ್‌ಐ, ಎಂ.ಜಿ. ರೋಡ್, ಬೆಂಗಳೂರು

ಹೀಗೆ ಬೈಬಲಿನ ಸುಪ್ರೀಯ ಸಂದೇಶ, ಸುಪ್ರೀತ ಸಂದೇಶ, ಶುಭ ಸಂದೇಶ, ಶಾಂತಿ ಸಂದೇಶ ಎಂದು ವಿವಿಧ ನಾಮದ ಧರ್ಮ ಗ್ರಂಥಗಳನ್ನು ಗಮನಿಸಲಾಗಿದೆ. ಈ ಕ್ರೈಸ್ತ ಧರ್ಮ ಗ್ರಂಥಗಳಲ್ಲಿ ಬಳಕೆಯಾದ ಗದ್ಯ ಸಾಹಿತ್ಯ ಹಾಗೂ ಭಾಷೆಯನ್ನು ಈ ಕೆಳಕಂಡ ಅಂಶಗಳಿಂದ ವಿಶ್ಲೇಷಿಸಲಾಗಿದೆ.

ವಿವಿಧ ನಾಮಾಂಕಿತ ಸತ್ಯವೇದದ (ಬೈಬಲ್) ಭಾಷಾ ಭಿನ್ನತೆ

ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಧರ್ಮಗ್ರಂಥ ಯಾವುದೆಂದರೆ 'ಬೈಬಲ್' ಎಂದು ಹೇಳುತ್ತೇವೆ. ಈ ಬೈಬಲ್ ಕನ್ನಡದಲ್ಲಿ ಹಲವು ಹೆಸರುಗಳಲ್ಲಿ ಹೊಸ ಹೊಸದಾಗಿ ಅನುವಾದಗೊಂಡು ರಚನೆಯಾಗಿದೆ ಪ್ರಮುಖವಾಗಿ 'ಸತ್ಯವೇದ' ಇದು ಬೈಬಲ್ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು ವತಿಯಿಂದ ಮುದ್ರಣವಾಗಿದೆ. 'ಪವಿತ್ರ ಬೈಬಲ್' ಇದು ಕೆ.ಜೆ.ವಿ. ಬೈಬಲ್ ಸೊಸೈಟಿ ವಿಜಯನಗರ ಬೆಂಗಳೂರು ವತಿಯಿಂದ ಮುದ್ರಿತಗೊಂಡಿದೆ. 'ಪರಿಶುದ್ಧ ಬೈಬಲ್' ಇದು World Bible Translation Centre in India ಎಂಬ ಸಂಸ್ಥೆಯಿಂದ ೨೦೦೫ರಲ್ಲಿ ಮುದ್ರಿತವಾಗಿದೆ. ಹೀಗೆ ಬೇರೆ ಬೇರೆಯ ಅಂಗ ಸಂಸ್ಥೆಗಳಿಂದ ರಚನೆಯಾಗಿರುವ ಬೈಬಲ್(ಕೃತಿಗಳು)ನಲ್ಲಿ ಕನ್ನಡ ಭಾಷಾ ಬಳಕೆ ಒಂದೇ ತೆರನಾಗಿಲ್ಲ. ಬೇರೆ ಬೇರೆಯಾಗಿಯೇ ಅಂದರೆ ಪದ, ವಾಕ್ಯ ಭಿನ್ನವಾಗಿ ಬಳಕೆಯಾಗಿದೆ ಎಂಬುದನ್ನು ಗಮನಿಸಲಾಗಿದೆ. ಅದಕ್ಕಾಗಿ ಬೈಬಲಿನ ಕೆಲವು ವಿಚಾರಗಳನ್ನು ಅವಲೋಕನ ಮಾಡಲಾಗಿದೆ. ಒಂದೇ ಸಂದರ್ಭದ ವಿಷಯ ಹಲವು ಹೆಸರಿನ ಧರ್ಮ ಗ್ರಂಥ ಬೈಬಲಿನಲ್ಲಿ ಯಾವ ತರಹ ಭಾಷಾ ರೂಪ ತಾಳಿದೆ ಎನ್ನುವುದನ್ನು ತಿಳಿಯಲಾಗಿದೆ. ಅವುಗಳಲ್ಲಿ ಮೊದಲನೇ ದೃಷ್ಟಾಂತ ಹೀಗಿದೆ.

೧. **'ಸತ್ಯವೇದ' ಬೈಬಲ್ ಸೊಸೈಟಿ ಆಫ್ ಇಂಡಿಯಾ ಬೆಂಗಳೂರು** ಈ ಗ್ರಂಥದಲ್ಲಿ ಹೊಸ ಒಡಂಬಡಿಕೆಯಲ್ಲಿ ಕಂಡುಬರುವ ದೇವರ ವಾಕ್ಯ ಭಾಗ ಲೂಕನು ಬರೆದ ಸುವಾರ್ತೆ ೧೬ನೇ ಅಧ್ಯಾಯ ೧೯ರಿಂದ ಕೆಲವು ವಚನಗಳು ಇದರ ಶಿರೋನಾಮ (ಹೆಡ್ಡಿಂಗ್) 'ಭೋಗಪುರುಷನು ಭಿಕ್ಷಗಾರನು ಇವರ ದೃಷ್ಟಾಂತ' ಇದನ್ನು ಪ್ರವಾದಿ ಲೇಖಕರಾದ ಲೂಕ ಹೀಗೆ ಬರೆಯುತ್ತಾರೆ. ಐಶ್ವರ್ಯವಂತನಾದ ಒಬ್ಬ ಮನುಷ್ಯನಿದ್ದನು. ಅವನು ಸಕಲಾತಿ ನಯವಾದ ನಾರುಮಡಿ ಮುಂತಾದ ವಸ್ತ್ರಗಳನ್ನು ಧರಿಸಿಕೊಂಡು ಪ್ರತಿ ದಿನವೂ ವೈಭವದೊಡನೆ ಸುಖಸಂತೋಷ ಪಡುತ್ತಿದ್ದನು. ಅವನ ಮನೆ ಬಾಗಿಲಲ್ಲಿ ಲಾಜರನೆಂಬ ಒಬ್ಬ ಭಿಕ್ಷುಗಾರನು ಬಿದ್ದುಕೊಂಡಿದ್ದನು. ಇವನು ಮೈತುಂಬ ಹುಣ್ಣಿದ್ದವನು ಐಶ್ವರ್ಯವಂತನ ಮೇಜಿನಿಂದ ಬಿದ್ದ ಎಂಜಲನ್ನು ತಿಂದು ಹಸಿವು ತೀರಿಸಿಕೊಳ್ಳಬೇಕೆಂದಿದ್ದನು. ಇಷ್ಟು ಮಾತ್ರವಲ್ಲದೆ ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುವವು. ಹೀಗಿರುವಲ್ಲಿ ಸ್ವಲ್ಪ ಕಾಲದ ಮೇಲೆ ಆ ಭಿಕ್ಷುಗಾರನು ಸತ್ತನು. ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಆ ಐಶ್ವರ್ಯವಂತನು

ಸಹ ಸತ್ತನು ಅವನಿಗೆ ಉತ್ತರ ಕ್ರಿಯೆಗಳು ಆದವು. ಅವನು ಪಾತಾಳದೊಳಗೆ ಯಾತನೆ ಪಡುತ್ತ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನು ಇವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನು ನೋಡಿ 'ತಂದೆಯೇ ಅಬ್ರಾಹಮನೇ ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು. ಅವನು ತನ್ನ ತುದಿ ಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ ಈ ಉರಿಯಲ್ಲಿ ಸಂಕಟ ಪಡುತ್ತೇನೆ ಎಂದು ಕೂಗಿ ಹೇಳಿದನು. ಆದರೆ ಅಬ್ರಹಾಮನು ಕಂದಾ ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿದಿ, ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬುದನ್ನು ನೆನಪಿಗೆ ತಂದುಕೋ. ಈಗಲಾದರೂ ಇಲ್ಲಿ ಇವನಿಗೆ ಸಮಾಧಾನ ಆದರೆ ನಿನಗೆ ಸಂಕಟ ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ. ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವದಕ್ಕಾಗದು ಅಂದನು.

೨. ಕೆ.ಜೆ.ವಿ. ಅವರಿಂದ ಪ್ರಸಾರಗೊಂಡ 'ಪವಿತ್ರ ಬೈಬಲ್'ನಲ್ಲಿ ಐಶ್ವರ್ಯವಂತನೂ ಬಡಲಾಜರನೂ- ಲೂಕ ೧೬ನೇ ಅಧ್ಯಾಯ ೧೯-೨೪ ವಚನಗಳಲ್ಲಿ ಗಮನಿಸಿದಾಗ ೧೯ ಊದಾ ಬಣ್ಣದ ವಸ್ತ್ರಗಳನ್ನು ನಯವಾದ ನಾರುಮಡಿಯನ್ನು ಧರಿಸಿಕೊಂಡು ಪ್ರತಿ ದಿನವೂ ಸಮೃದ್ಧಿಯಾಗಿ ಭೋಜನ ಮಾಡುತ್ತಿದ್ದ ಒಬ್ಬಾನೊಬ್ಬ ಐಶ್ವರ್ಯವಂತನಿದ್ದನು. ಅವನ ಬಾಗಲಿನಲ್ಲಿ ಲಾಜರನೆಂಬ ಒಬ್ಬ ಭಿಕ್ಷುಕನು ಬಿದ್ದುಕೊಂಡಿದ್ದನು. ಅವನು ಮೈತುಂಬಾ ಹುಣ್ಣಿದ್ದವನು. ಐಶ್ವರ್ಯವಂತನ ಮೇಜಿನಿಂದ ಬೀಳುವ ರೊಟ್ಟಿ ತುಂಡುಗಳನ್ನು ತಿನ್ನುವುದಕ್ಕೆ ಅವನು ಆಶೆಪಡುತ್ತಿದ್ದನು. ಇದಲ್ಲದೆ ನಾಯಿಗಳು ಬಂದು ಅವನ ಹುಣ್ಣುಗಳನ್ನು ನೆಕ್ಕುತ್ತಿದ್ದವು. ಇದಾದ ಮೆಲೆ ಆ ಭಿಕ್ಷುಕನು ಸತ್ತನು, ದೂತರು ಅವನನ್ನು ಅಬ್ರಾಹಮನ ಎದೆಗೆ ತೆಗೆದುಕೊಂಡು ಹೋದರು, ಐಶ್ವರ್ಯವಂತನು ಸಹ ಸತ್ತನು, ಅವನನ್ನು ಹೂಣಿಟ್ಟರು. ಆಗ ಅವನು ಪಾತಾಳದೊಳಗೆ ಯಾತನೆಯಲ್ಲಿದ್ದವನಾಗಿ ತನ್ನ ಕಣ್ಣುಗಳನ್ನು ಮೇಲಕ್ಕೆತ್ತಿ ದೂರದಿಂದ ಅಬ್ರಹಾಮನನ್ನೂ ಅವನ ಎದೆಯಲ್ಲಿದ್ದ ಲಾಜರನನ್ನೂ ನೋಡಿದನು. ಅವನು ತಂದೆಯಾದ ಅಬ್ರಹಾಮನೇ ನನ್ನ ಮೇಲೆ ಕರುಣೆ ಇಟ್ಟು ಲಾಜರನು ತನ್ನ ತುದಿ ಬೆರಳನ್ನು ನೀರಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡುವಂತೆ ಅವನನ್ನು ಕಳುಹಿಸು, ಯಾಕೆಂದರೆ ನಾನು ಈ ಉರಿಯಲ್ಲಿ ಯಾತನೆ ಪಡುತ್ತಾ ಇದ್ದೇನೆ ಎಂದು ಕೂಗಿ ಹೇಳಿದನು. ಆದರೆ ಅಬ್ರಹಾಮನು ಮಗನೇ, ನೀನು ನಿನ್ನ ಜೀವಿತಕಾಲದಲ್ಲಿ ನಿನ್ನ ಒಳ್ಳೆಯವುಗಳನ್ನು ಹೊಂದಿದಿ, ಅದೇ ರೀತಿಯಲ್ಲಿ ಲಾಜರನು ಕೆಟ್ಟವುಗಳನ್ನು ಹೊಂದಿದ್ದನ್ನು ನೆನಪಿಗೆ ತಂದುಕೋ ಆದರೆ ಈಗ ಅವನು ಆದರಣೆ ಹೊಂದುತ್ತಾ ಇದ್ದಾನೆ, ನೀನು ಯಾತನೆ ಪಡುತ್ತಾ ಇದ್ದಿ. ಇದಲ್ಲದೆ ಇಲ್ಲಿಂದ ನಿಮ್ಮ ಕಡೆಗೆ ದಾಟಬೇಕೆಂದಿರುವವರು ದಾಟದ ಹಾಗೆಯೇ ಅಲ್ಲಿಂದ ನಮ್ಮ ಕಡೆಗೆ ಬರಬೇಕೆಂದಿರುವವರು ಬಾರದಂತೆಯೂ ನಮಗೂ ನಿಮಗೂ ನಡುವೆ ಒಂದು ದೊಡ್ಡ ಅಗಾಧ ಸ್ಥಾಪಿಸಿಯದೆ ಅಂದನು.

೩. **'ಪರಿಶುದ್ಧ ಬೈಬಲ್' ಲೂಕನು ಬರೆದ ಸುವಾರ್ತೆ ೧೬ನೇ ಅಧ್ಯಾಯ ೧೯ ರಿಂದ ೨೪ ವಚನಗಳವರೆಗೆ (೧೬:೧೯-೨೪)** ಐಶ್ವರ್ಯವಂತನು ಮತ್ತು ಲಾಜರನು ೧೯ ಯೇಸು ಇಂತೆಂದನು. ಒಬ್ಬ ಐಶ್ವರ್ಯವಂತಿದ್ದನು. ಅವನು ಯಾವಾಗಲೂ ಉತ್ತಮವಾದ ಉಡುಪುಗಳನ್ನು ಧರಿಸುತ್ತಿದ್ದನು. ಅವನು ಬಹಳ ಐಶ್ವರ್ಯವಂತನಾಗಿದ್ದುದರಿಂದ ಪ್ರತಿ ದಿನವೂ ವೈಭವದೊಡನೆ ಊಟ ಮಾಡುತ್ತಾ ಸಂತೋಷಪಡುತ್ತಿದ್ದನು. ಅಲ್ಲಿ ಲಾಜರನೆಂಬ ಒಬ್ಬ ಬಡಮನುಷ್ಯನು ಇದ್ದನು. ಅವನ ಮೈತುಂಬ ಹುಣ್ಣುಗಳಿದ್ದವು. ಅವನು ಐಶ್ವರ್ಯವಂತನ ಮನೆಯ ಹೊರ ಬಾಗಿಲು ಬಳಿ ಬಿದ್ದುಕೊಂಡಿರುತ್ತಿದ್ದನು. ಐಶ್ವರ್ಯವಂತನು ಊಟ ಮಾಡಿದ ಮೇಲೆ ಹೊರಗೆಸೆದ ಎಂಜಲನ್ನು ತಿನ್ನುವುದಕ್ಕಾಗಿ ಅಲ್ಲಿ ಬಿದ್ದುಕೊಂಡಿರುತ್ತಿದ್ದನು. ನಾಯಿಗಳು ಬಂದು ಅವನ ಹುಣ್ಣುಗಳನ್ನು ನೆಕ್ಕುತ್ತಿದ್ದವು. ಸ್ವಲ್ಪ ಸಮಯದ ನಂತರ ಲಾಜರನು ಸತ್ತನು. ದೇವದೂತರು ಲಾಜರನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಒಂದು ದಿನ ಐಶ್ವರ್ಯವಂತನೂ ಸತ್ತನು. ಅವನಿಗೆ ಸಮಾಧಿ ಮಾಡಲಾಯಿತು. ಆದರೆ ಅವನ ಪಾತಾಳದಲ್ಲಿ ಬಹಳ ಯಾತನೆ ಪಡುತ್ತಾ ಬಹಳ ದೂರದಲ್ಲಿ ಅಬ್ರಹಾಮನ ಎದೆಗೆ ಒರಗಿಕೊಂಡಿದ್ದ ಲಾಜರನನ್ನು ನೋಡಿ ತಂದೆಯಾದ ಅಬ್ರಹಾಮನೇ ನನ್ನ ಮೇಲೆ ಕರುಣೆ ತೋರು! ಲಾಜರನನ್ನು ನನ್ನ ಬಳಿಗೆ ಕಳುಹಿಸು ಅವನು ತನ್ನ ಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ. ನಾನು ಈ ಬೆಂಕಿಯಲ್ಲಿ ಯಾತನೆ ಪಡುತ್ತಿದ್ದೇನೆ ಎಂದು ಬೇಡಿಕೊಂಡನು. ಅದಕ್ಕೆ ಅಬ್ರಹಾಮನು "ಕಂದಾ ನಿನ್ನ ಜೀವಮಾನದ ದಿನಗಳು ನಿನಗೆ ನೆನಪಿಲ್ಲವೇ? ಅಲ್ಲಿ ನಿನಗೆ ಎಲ್ಲ ಬಗೆಯ ಸುಖವಿತ್ತು. ಆದರೆ ಲಾಜರನಿಗಾದರೋ ಕಷ್ಟಗಳೇ ತುಂಬಿಕೊಂಡಿದ್ದವು. ಆದ್ದರಿಂದ ಈಗ ಅವನು ಸುಖಪಡುತ್ತಿದ್ದಾನೆ. ನೀನು ಸಂಕಟ ಪಡುತ್ತಿರುವಿ. ಮಾತ್ರವಲ್ಲದೆ ನಿನಗೂ ನಮಗೂ ಮಧ್ಯೆ ದೊಡ್ಡ ಡೊಂಗುರವಿದೆ. ಅಲ್ಲಿಗೆ ಬಂದು ನಿನಗೆ ಸಹಾಯ ಮಾಡಲು ಯಾರಿಗೂ ಸಾಧ್ಯವಿಲ್ಲ ಎಂದು ಹೇಳಿದನು.

ಹೀಗೆ ಮೂರು ಹೆಸರುಗಳಲ್ಲಿ ಮುದ್ರಣವಾಗಿರುವ ಬೈಬಲ್ ಗ್ರಂಥದಲ್ಲಿ ಬಳಕೆಯಾಗಿರುವ ಪದಗಳು ವಾಕ್ಯಗಳು ಕೊಂಚ ಭಿನ್ನತೆಯಿಂದ ಕೂಡಿವೆ ಎಂದು ಹೇಳಲಾಗಿದೆ. ಅವುಗಳನ್ನು ಈ ಕೆಳಕಂಡ ಚಾರ್ಟ್‌ನ ಮೂಲಕ ತಿಳಿಸಲಾಗಿದೆ.

ಐಶ್ವರ್ಯವಂತ ಮತ್ತು ಬಡವನ ದೃಷ್ಟಾಂತ ಹೇಳುವಲ್ಲಿ ಭಾಷಾ ಭಿನ್ನತೆಯ ಒಳನೋಟ

ಸತ್ಯವೇದ	ಪವಿತ್ರ ಬೈಬಲ್	ಪರಿಶುದ್ಧ ಬೈಬಲ್	ಪವಿತ್ರ ವಚನ
ಬೋಗ ಪುರುಷ	ಐಶ್ವರ್ಯವಂತನೂ	ಐಶ್ವರ್ಯವಂತ	ಐಶ್ವರ್ಯವಂತನೂ
ವೈಭವ	ಸಮೃದ್ಧಿ	ವೈಭವ	ಸಮೃದ್ಧಿ
ಭಿಕ್ಷುಗಾರ	ಭಿಕ್ಷುಕನು	ಬಡಮನುಷ್ಯ	ಭಿಕ್ಷುಕ
ಎಂಜಲನ್ನು	ತುಂಡು	ಎಂಜಲನ್ನು	ರೊಟ್ಟಿ ತುಂಡು
ಯಾತನೆ ಪಡುತ್ತ	ಯಾತನೆಯಲ್ಲಿದ್ದವನಾಗಿ	ಯಾತನೆ ಪಡುತ್ತಾ	ಯಾತನೆಯಲ್ಲಿದ್ದವನಾಗಿ

ದಯವಿಟ್ಟು	ಕರುಣೆಯಿಟ್ಟು	ಕರುಣೆತೋರು	ಕರುಣೆ ಇಟ್ಟು
ಡೊಂಗರ	ಅಗಾಧ	ಡೊಂಗುರ	ಅಗಾಧ
ಸಂಕಟ	ಯಾತನೆ	ಬೆಂಕಿ	ಉರಿ

ಎರಡನೆಯದಾಗಿ ತೆಗೆದುಕೊಂಡಿರುವ ದೃಷ್ಟಾಂತ ಅಥವಾ ವಿಚಾರ 'ಪ್ರೀತಿಯ ಶ್ರೇಷ್ಠತೆ' ಈ ವಿಚಾರವನ್ನು ಸತ್ಯವೇದ, ಪರಿಶುದ್ದ ಬೈಬಲ್, ಪವಿತ್ರ ಬೈಬಲ್ ಹಾಗೂ ಪವಿತ್ರ ವಚನ (ಸತ್ಯವೇದ) ಎಂಬ ಕ್ರೈಸ್ತ ಧರ್ಮಗ್ರಂಥದಲ್ಲಿ ಹೇಗೆ ಭಿನ್ನ ಭಿನ್ನವಾಗಿ (ಭಾಷಿಕವಾಗಿ) ಕನ್ನಡ ಬಳಕೆಯಾಗಿದೆ ಎಂಬುದನ್ನು ಗಮನಿಸಲಾಗಿದೆ.

೧. ಗ್ರಂಥ 'ಸತ್ಯವೇದವು' ಬೈಬಲ್ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು ವಾಕ್ಯ ೧ನೇ ಕೋರಿಂಥದವರಿಗೆ ಬರೆದ ಪತ್ರಿಕೆ ೧೩ನೇ ಅಧ್ಯಾಯ ೧ರಿಂದ ೧೦ ವಚನಗಳು (೧ನೆ ಕೋರಿಂಥ ೧೩:೧-೧೦) ವಚನದಲ್ಲಿ 'ಪ್ರೀತಿಯ ಶ್ರೇಷ್ಟತೆ' ಬಗ್ಗೆ ಈ ರೀತಿಯಾಗಿ ನಾನು ಮನುಷ್ಯರ ಭಾಷೆಗಳನ್ನು ದೇವದೂತರ ಭಾಷೆಗಳನ್ನೂ ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. ನನಗೆ ಪ್ರವಾದನ ವರವಿದ್ದರೂ ಎಲ್ಲಾ ರಹಸ್ಯಗಳೂ ಸಕಲ ವಿಧವಾದ ವಿದ್ಯೆಯೂ ತಿಳಿದರೂ ಬೆಟ್ಟಗಳನ್ನು ತೆಗೆದಿಡುವುದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ, ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. ನನಗಿರುವುದೆಲ್ಲವನ್ನು ಅನ್ನದಾನ ಮಾಡಿದರೂ, ನನ್ನ ದೇಹವನ್ನು ಸುಡುವುದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವುದಿಲ್ಲ.

ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವುದು. ಪ್ರೀತಿಯು ಹೊಟ್ಟೆಕಿಚ್ಚು ಪಡುವುದಿಲ್ಲ. ಉಬ್ಬಿಕೊಳ್ಳುವುದಿಲ್ಲ ಮರ್ಯಾದೆಗೆಟ್ಟು ನಡೆಯುವುದಿಲ್ಲ, ಸ್ವ ಪ್ರಯೋಜನವನ್ನು ಚಿಂತಿಸುವುದಿಲ್ಲ, ಸಿಟ್ಟುಗೊಳ್ಳುವುದಿಲ್ಲ, ಅನ್ಯಾಯವನ್ನು ನೋಡಿ ಸಂತೋಷ ಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷ ಪಡುತ್ತದೆ. ಎಲ್ಲವನ್ನು ಅಡಗಿಸಿಕೊಳ್ಳುತ್ತದೆ, ಎಲ್ಲವನ್ನು ನಂಬುತ್ತದೆ ಎಲ್ಲವನ್ನು ನಿರೀಕ್ಷಿಸುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವುದಿಲ್ಲ. ಪ್ರವಾದನೆಗಳಾದರೋ ಇಲ್ಲದಂತಾಗುವವು. ವಾಣಿಗಳೋ ನಿಂತು ಹೋಗುವವು, ವಿದ್ಯೆಯೋ ಇಲ್ಲದಂತಾಗುವುದು. ಅಪೂರ್ಣವಾಗಿ ತಿಳಿದುಕೊಳ್ಳುತ್ತೇವೆ. ಅಪೂರ್ಣವಾಗಿ ಪ್ರವಾದಿಸುತ್ತೇವೆ. ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು.

೨. ಧರ್ಮಗ್ರಂಥ– 'ಪರಿಶುದ್ಧ ಬೈಬಲ್' ಡಬ್ಲುಬಿಟಿಸಿ ಇಂಡಿಯಾ ಬೆಂಗಳೂರು ವಾಕ್ಯ – ೧ನೇ ಕೋರಿಂಥದವರಿಗೆ ಬರೆದ ಪತ್ರಿಕೆ ೧೩ನೇ ಅಧ್ಯಾಯ ೧ ರಿಂದ ೧೦ ವಚನಗಳು (೧ನೇ ಕೋರಿಂಥ ೧೩:೧-೧೦) ಶೀರ್ಷಿಕೆ: 'ಪ್ರೀತಿ'ಯ ಬಗ್ಗೆ ಸತ್ಯವೇದದಲ್ಲಿ ಈ ರೀತಿಯಾಗಿ ಈಗ ನಾನು ನಿಮಗೆ ಎಲ್ಲಕ್ಕಿಂತಲೂ ಉತ್ತಮವಾದ ಮಾರ್ಗವನ್ನು ತೋರಿಸುತ್ತೇನೆ. ನಾನು ಮನುಷ್ಯರ ಭಾಷೆಗಳನ್ನಲ್ಲದೆ ದೇವದೂತರ ಭಾಷೆಗಳನ್ನು ಮಾತಾಡಬಹುದು. ಆದರೆ ನನ್ನಲ್ಲಿ ಪ್ರೀತಿಯಿಲ್ಲದಿದ್ದರೆ

ನಾನು ಕೇವಲ ಗಣಗಣಿಸುವ ಘಂಟೆ, ಝುಣ ಝುಣಿಸುವ ತಾಳ, ಪ್ರವಾದಿಸುವ ವರ ನನಗಿರಬಹುದು. ದೇವರ ರಹಸ್ಯ ಸಂಗತಿಗಳನ್ನೆಲ್ಲಾ ಮತ್ತು ಜ್ಞಾನವನ್ನೆಲ್ಲಾ ನಾನು ಅರ್ಥ ಮಾಡಿಕೊಂಡಿರಬಹುದು. ಮತ್ತು ಬೆಟ್ಟಗಳನ್ನು ಚಲಿಸಬಲ್ಲಂಥ ಮಹಾನಂಬಿಕೆ ನನಗಿರಬಹುದು. ಇವುಗಳೆಲ್ಲಾ ನನ್ನಲ್ಲಿ ಇದ್ದರೂ ಪ್ರೀತಿಯು ಇಲ್ಲದಿದ್ದರೆ ನಾನು ನಿಷ್ಪ್ರಯೋಜಕನಾಗಿದ್ದೇನೆ. ನಾನು ನನ್ನಲ್ಲಿರುವ ಪ್ರತಿಯೊಂದನ್ನು ಜನರ ಊಟಕ್ಕಾಗಿ ಕೊಟ್ಟುಬಿಡಬಹುದು. ಹೆಮ್ಮೆ ಪಡುವುದಕ್ಕಾಗಿ ನಾನು ನನ್ನ ದೇಹವನ್ನೇ ಸಜೀವ ದಹನವನ್ನಾಗಿ ಒಪ್ಪಿಸಿಕೊಡಬಹುದು. ಆದರೆ ಈ ಕಾರ್ಯಗಳೆನ್ನೆಲ್ಲ ಮಾಡಿದರೂ ಪ್ರೀತಿಯು ನನ್ನಲ್ಲಿ ಇಲ್ಲದಿದ್ದರೆ ನನಗೇನೂ ಪ್ರಯೋಜನವಿಲ್ಲ. ಪ್ರೀತಿಯು ತಾಳ್ಮೆಯುಳ್ಳದ್ದು, ದಯೆಯುಳ್ಳದ್ದು, ಪ್ರೀತಿಯು ಅಸೂಯೆಪಡುವುದಿಲ್ಲ, ಹೊಗಳಿಕೊಳ್ಳುವುದಿಲ್ಲ, ಗರ್ವಪಡುವುದಿಲ್ಲ, ಪ್ರೀತಿಯು ನಾಚಿಕೆಕರವಾದ ರೀತಿಯಲ್ಲಿ ವರ್ತಿಸುವುದಿಲ್ಲ, ಸ್ವಾರ್ಥಿಯಲ್ಲ ಮತ್ತು ಬೇಗನೆ ಕೋಪಗೊಳ್ಳುವುದಿಲ್ಲ, ತನಗಾದ ಅಪಕಾರಗಳನ್ನು ಜ್ಞಾಪಿಸಿಕೊಳ್ಳುವುದಿಲ್ಲ. ಪ್ರೀತಿಯು ಕೆಟ್ಟದರ ಬಗ್ಗೆ ಸಂತೋಷ ಪಡದೆ ಸತ್ಯದ ಬಗ್ಗೆ ಸಂತೋಷ ಪಡುತ್ತದೆ. ಪ್ರೀತಿಯು ಎಲ್ಲವನ್ನು ತಾಳ್ಮೆಯಿಂದ ಸ್ವೀಕರಿಸಿಕೊಳ್ಳುತ್ತದೆ. ಯಾವಾಗಲೂ ನಂಬುತ್ತದೆ. ಯಾವಾಗಲೂ ನಿರೀಕ್ಷಿಸುತ್ತದೆ. ಯಾವಾಗಲೂ ದೃಢವಾಗಿರುತ್ತದೆ. ಪ್ರೀತಿಯು ಎಂದಿಗೂ ಕೊನೆಗೊಳ್ಳುವುದಿಲ್ಲ. ಪ್ರವಾದಿಸುವ ವರಗಳಿವೆ. ಆದರೆ ಅವು ಕೊನೆಗೊಳ್ಳುತ್ತವೆ. ವಿವಿಧ ಭಾಷೆಗಳಲ್ಲಿ ಮಾತಾಡುವ ವರಗಳಿವೆ. ಆದರೆ ಆ ವರಗಳು ಕೊನೆಗೊಳ್ಳುತ್ತವೆ. ಜ್ಞಾನವೆಂಬ ವರವೂ ಇದೆ. ಆದರೆ ಅದೂ ಕೊನೆಗೊಳ್ಳುವುದು. ಏಕೆಂದರೆ ನಮಗಿರುವ ಈ ಜ್ಞಾನವು ಮತ್ತು ಈ ಪ್ರವಾದನೆಗಳು ಸಂಪೂರ್ಣವಾದವುಗಳಲ್ಲ ಆದರೆ ಸಂಪೂರ್ಣತೆಯು ಬಂದಾಗ ಸಂಪೂರ್ಣವಲ್ಲದವಗಳು ಕೊನೆಗೊಳ್ಳುತ್ತವೆ.

೩. ಪವಿತ್ರ ಬೈಬಲ್ ಕೆ.ಜಿ.ವಿ. ಬೈಬಲ್ ಸೊಸೈಟಿ ಬೆಂಗಳೂರು ವಾಕ್ಯ ೧ನೇ ಕೋರಿಂಥವರಿಗೆ ಬರೆದ ಪತ್ರಿಕೆ ೧೩ನೇ ಅಧ್ಯಾಯ ೧ ರಿಂದ ೧೦ ವಚನಗಳು (೧ನೇ ಕೋರಿಂಥ ೧೩:೧–೧೦) ಶೀರ್ಷಿಕೆ: 'ಪ್ರೀತಿಯ ಶ್ರೇಷ್ಟತೆ'ಯ ಬಗ್ಗೆ ಬೈಬಲ್‌ನಲ್ಲಿ ನಾನು ಮನುಷ್ಯರ ಮತ್ತು ದೂತರ ಭಾಷೆಗಳನ್ನು ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದ ಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. ನನಗೆ ಪ್ರವಾದನಾ ವರವಿದ್ದರೂ ಎಲ್ಲಾ ರಹಸ್ಯಗಳನ್ನು ಮತ್ತು ಸಕಲ ಜ್ಞಾನವನ್ನು ತಿಳಿದುಕೊಂಡವನಾಗಿದ್ದರೂ ಬೆಟ್ಟಗಳನ್ನು ತೆಗೆದಿಡುವುದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. ನನಗಿರುವುದೆಲ್ಲವನ್ನು ಬಡವರಿಗೆ ಅನ್ನದಾನ ಮಾಡಿದರೂ ನನ್ನ ದೇಹವನ್ನು ಸುಡುವುದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವುದಿಲ್ಲ. ಪ್ರೀತಿ ಬಹು ತಾಳ್ಮೆಯುಳ್ಳದ್ದು, ಕರುಣೆಯುಳ್ಳದ್ದು, ಪ್ರೀತಿಯು ಹೊಟ್ಟೆಕಿಚ್ಚು ಪಡುವುದಿಲ್ಲ. ಹೊಗಳಿಕೊಳ್ಳುವುದಿಲ್ಲ. ಉಬ್ಬಿಕೊಳ್ಳುವುದಿಲ್ಲ, ಮರ್ಯಾದೆಗೆಟ್ಟು ನಡೆಯುವುದಿಲ್ಲ. ಸ್ವಾರ್ಥತೆಯನ್ನು ಬಯಸುವುದಿಲ್ಲ, ಬೇಗನೆ ಕೋಪಗೊಳ್ಳುವುದಿಲ್ಲ. ಕೆಟ್ಟದ್ದನ್ನು ಯೋಚಿಸುವುದಿಲ್ಲ. ಅನ್ಯಾಯದಲ್ಲಿ ಸಂತೋಷಪಡದೆ ಸತ್ಯದಲ್ಲಿಯೇ ಸಂತೋಷ ಪಡುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ. ಎಲ್ಲವನ್ನೂ ನಿರೀಕ್ಷಿಸುತ್ತದೆ. ಎಲ್ಲವನ್ನು ತಾಳಿಕೊಳ್ಳುತ್ತದೆ.

ಪ್ರೀತಿಯು ಎಂದಿಗೂ ಬಿದ್ದುಹೋಗುವುದಿಲ್ಲ. ಆದರೆ ಪ್ರವಾದನೆಗಳು ಬಿದ್ದುಹೋಗುವವು. ಭಾಷೆಗಳು ನಿಂತು ಹೋಗುವವು, ಜ್ಞಾನವೋ ಇಲ್ಲದಂತಾಗುವುದು, ನಾವು ಅಪೂರ್ಣವಾಗಿ ತಿಳಿದುಕೊಳ್ಳುತ್ತೇವೆ, ಅಪೂರ್ಣವಾಗಿ ಪ್ರವಾದಿಸುತ್ತೇವೆ. ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು.

೪. ಪವಿತ್ರ ವಚನ ಸತ್ಯವೇದ (ಹೊಸ ಒಡಂಬಡಿಕೆ) ಬಿಲಿವರ್ಸ್ ಚರ್ಚ್ ಪಬ್ಲಿಕೇಶನ್ಸ್, ಕೇರಳ

ವಾಕ್ಯ ೧ನೇ ಕೋರಿಂಥವರಿಗೆ ಬರೆದ ಪತ್ರಿಕೆ ೧೩ನೇ ಅಧ್ಯಾಯ ೧ ರಿಂದ ೧೦ ವಚನಗಳಲ್ಲಿ (೧ನೇ ಕೋರಿಂಥ ೧೩:೧-೧೦) ಪ್ರೀತಿಯ ಬಗ್ಗೆ ಈ ರೀತಿ ಉಲ್ಲೇಖವಾಗಿದೆ. ನಾನು ಮನುಷ್ಯರ ಮತ್ತು ದೂತರ ಭಾಷೆಗಳನ್ನು ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದ ಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. ನನಗೆ ಪ್ರವಾದನಾ ವರವಿದ್ದರೂ ಎಲ್ಲಾ ರಹಸ್ಯಗಳನ್ನು ಮತ್ತು ಸಕಲ ವಿದ್ಯೆಯನ್ನು, ತಿಳಿದಿದ್ದರೂ, ಬೆಟ್ಟಗಲನ್ನು ಕದಲಿಸುವಷ್ಟು ನಂಬಿಕೆಯಿದ್ದರೂ ನನಗೆ ಪ್ರೀತಿಯಿಲ್ಲದಿದ್ದರೆ, ಶೂನ್ಯನಾಗಿದ್ದೇನೆ ನಾನು ನನ್ನ ಎಲ್ಲಾ ಆಸ್ತಿಯನ್ನು ದಾನ ಮಾಡಿದರೂ, ನನ್ನ ದೇಹವನ್ನು ಸುಡುವುದಕ್ಕೆ ಒಪ್ಪಿಸಿಕೊಟ್ಟರೂ, ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವುದಿಲ್ಲ. ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆಯುಳ್ಳದ್ದು ಪ್ರೀತಿ ಅಸೂಯೆ ಪಡುವುದಿಲ್ಲ. ಪ್ರೀತಿ ಹೊಗಳುವುದಿಲ್ಲ. ಉಬ್ಬಿಕೊಳ್ಳುವುದಿಲ್ಲ, ಮರ್ಯಾದೆಗೆಟ್ಟು ವರ್ತಿಸುವುದಿಲ್ಲ. ಸ್ವಹಿತವನ್ನು ಹುಡುಕುವುದಿಲ್ಲ. ಸಿಟ್ಟುಗೊಳ್ಳುವುದಿಲ್ಲ. ಅಪಕಾರವನ್ನು ಎಣಿಸುವುದಿಲ್ಲ. ಕೆಟ್ಟದ್ದರಲ್ಲಿ ಸಂತೋಷ ಪಡುವುದಿಲ್ಲ. ಸತ್ಯದೊಂದಿಗೆ ಸಂತೋಷಪಡುತ್ತದೆ. ಎಲ್ಲವನ್ನೂ ಅಡಗಿಸುತ್ತದೆ. ಎಲ್ಲವನ್ನು ನಂಬುತ್ತದೆ. ಎಲ್ಲವನ್ನು ನಿರೀಕ್ಷಿಸುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಅಳಿದುಹೋಗುವುದಿಲ್ಲ. ಪ್ರವಾದನೆಗಳಾದರೋ ಅಳಿದು ಹೋಗುವುವು, ವಾಣಿಗಳು ನಿಂತು ಹೋಗುವವು, ವಿದ್ಯೆಯೋ ಅಳಿದು ಹೋಗುವುದು, ನಾವು ಅಪೂರ್ಣವಾಗಿ ತಿಳಿದುಕೊಂಡು ಅಪೂರ್ಣವಾಗಿ ಪ್ರವಾದಿಸುತ್ತೇವೆ. ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಅಳಿದು ಹೋಗುವುದು.

ಹೀಗೆ ಈ ಮೇಲಿನ ೪ ಶಿರೋನಾಮಗಳಲ್ಲಿ ಪ್ರಕಟವಾಗಿರುವ ಬೈಬಲ್‌ನಲ್ಲಿ ಕನ್ನಡ ಪದ ವಾಕ್ಯ ಹೇಗೆ ಭಿನ್ನ ಭಿನ್ನವಾಗಿ ಬಳಕೆಯಾಗಿದೆ ಎಂಬುದನ್ನು ಕೆಳಗಿನ ಕೋಷ್ಟಕದ ಮೂಲಕ ತಿಳಿಯಬಹುದು.

ಪ್ರೀತಿಯ ಶ್ರೇಷ್ಠತೆ ಹೇಳುವಲ್ಲಿ ಭಾಷಾ ಭಿನ್ನತೆಯ ಒಳನೋಟ

ಸತ್ಯವೇದ	ಪವಿತ್ರ ಬೈಬಲ್	ಪರಿಶುದ್ಧ ಬೈಬಲ್	ಪವಿತ್ರ ವಚನ
ಆಡುವವನು	ಆಡುವವನು	ಮಾತಾಡಬಹುದು	ಮಾತಾಡುವವನು
ತಿಳಿದರು	ತಿಳಿದುಕೊಂಡವನು	ಅರ್ಥಮಾಡು	ತಿಳಿದಿದ್ದರು

ತೆಗೆದಿಡು	ತೆಗೆದಿಡು	ಚಲಿಸಬಲ್ಲ	ಕದಲಿಸುವ
ಅಲ್ಲದವನು	ಅಲ್ಲದವನು	ನಿಷ್ಪ್ರಯೋಜಕ	ಶೂನ್ಯ
ಉಬ್ಬಿಕೊಳ್ಳುವ	ಹೊಗಳಿಕೊಳ್ಳುವ	ಅಸೂಯೆಪಡುವ	ಹೊಗಳಿಕೊಳ್ಳುವ
ಸ್ವಪ್ರಯೋಜನ	ಸ್ವಾರ್ಥತೆ	ಸ್ವಾರ್ಥಿಯಲ್ಲ	ಸ್ವಹಿತ

೩.೧.೨. ಸಾಮ್ಯಗಳು ಮತ್ತು ಭಾಷೆ

ಸಾಮ್ಯ ಎಂಬುವುದು ಗ್ರೀಕ್ ಭಾಷೆಯ ಪದವಾಗಿದ್ದು ಕನ್ನಡದಲ್ಲಿ ಅದನ್ನು ಹಾಗೆಯೇ ಬರೆಯಲಾಗಿದೆ. ಗ್ರೀಕ್ ಭಾಷೆಯಲ್ಲಿ 'ಸಾಮ್ಯ' ಎಂದರೆ "ವಿಷಯಗಳನ್ನು ಹೋಲಿಸುವಂತೆ ಅವುಗಳನ್ನು ಒಟ್ಟುಗೂಡಿಸುವುದು" (ಅಧ್ಯಯನ ಸತ್ಯವೇದವು ಪುಟ ೧೫೭೯). ಸಾಮ್ಯಗಳು ಸಾಮಾನ್ಯವಾಗಿ ಒಂದು ನೀತಿಯನ್ನು ಭೋದಿಸುವ ಚಿಕ್ಕ ಚಿಕ್ಕ ಕಥೆಗಳಾಗಿವೆ. ಅವುಗಳು ಕೆಲವೊಮ್ಮೆ ಜನರು ಪ್ರಕೃತಿಯಲ್ಲಿ ಆಗುವ ಕೆಲವು ಸಾಮಾನ್ಯ ಅನುಭವಗಳನ್ನು ಹೋಲಿಕೆ ಮಾಡುವ ನಾಣ್ನುಡಿಗಳಾಗಿವೆ. ಉದಾ. ಜ್ಞಾನೋಕ್ತಿ (ಬೈಬಲನ)ಗಳಲ್ಲಿ ಬರುವ ಅಧ್ಯಾಯಗಳಾದ ೬,೭,೮ರಲ್ಲಿ ಭವಿಷತ್ತಿನ ಕುರಿತು ಯೋಚನೆ ಮಾಡಿ ಬೇಕಾದಷ್ಟು ಆಹಾರವನ್ನು ತಾನೇ ಸ್ವತಃ ಶ್ರಮದಿಂದ ಕೂಡಿಟ್ಟುಕೊಳ್ಳುವ ಇರುವೆಯನ್ನು ವಿಶ್ವಾಸಪಾತ್ರರಾಗಿ ಸ್ವಂತ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿರುವ ಮನುಷ್ಯರಿಗೆ ಹೋಲಿಸಲಾಗಿದೆ. ಪ್ರವಾದಿಯಾದ ಪ್ರವಾದಿಯೆಂದರೆ ಸುವಾರ್ತಿಕನು ದೇವರ ಬಗ್ಗೆ ಬೋದಿಸುವವನು ಅಂತಹ ಪ್ರವಾದಿ ಯೇಶಾಯನು ಅವನು ತನ್ನ ಕಾಲದ ಜನರನ್ನು ಫಲಬಿಡದ ಒಂದು ದ್ರಾಕ್ಷಿ ತೋಟಕ್ಕೆ ಹೋಲಿಸಿದನು. (ಯೇಶಾಯ ೫:೧೫) ಹೀಗೆ ಮಾರ್ಕ, ಲೂಕ ಮತ್ತು ಮತ್ತಾಯನು ಬರೆದ ಸುವಾರ್ತೆಗಲಲ್ಲಿ ಅನೇಕ ಸಮಯಗಳಲ್ಲಿ ದೇವರು ಮತ್ತು ದೇವರ ರಾಜ್ಯದಲ್ಲಿ ಜನರು ಹೇಗೆ ಜೀವಿಸಬೇಕು ಎಂಬುದನ್ನು ಸ್ವತಃ ಕ್ರಿಸ್ತನೇ (ಯೇಸು) ಜನರ ಮಧ್ಯೆದಲ್ಲಿ ಸಾಮ್ಯಗಳು ಅಥವಾ ಕಥೆಗಳು ಹಾಗೂ ದೃಷ್ಟಾಂತಗಳಲ್ಲಿ ಬೋಧಿಸುತ್ತಿದ್ದನು. ಯೇಸುವಿನ ಹಿಂಬಾಲಕರಿಗೆ ಈ ರೀತಿಯ ಸಾಮ್ಯದ ಮೂಲಕ ಹೇಳಿದರೆ ಸುಲಭವಾಗಿ ಅರ್ಥವಾಗುತ್ತಿತ್ತು. ಹಾಗಾಗಿ ಯೇಸುವು ಸಂದರ್ಭಕ್ಕನುಗುಣವಾಗಿ ಜನರಿಗೆ ಸಾಮ್ಯಗಳ ಮೂಲಕ ಉಪದೇಶಿಸುತ್ತಿದ್ದನು. ಈ ಸಾಮ್ಯಗಳಲ್ಲಿ ವಸ್ತು, ಪ್ರಾಣಿ, ವ್ಯಕ್ತಿ, ಹಣ್ಣು ಹಂಪಲು, ಪರಿಸರಕ್ಕೆ ಸಂಬಂಧಿಸಿದ ಹಲವು ನಾಮವಾಚಿಪದಗಳನ್ನು ಗಮನಿಸಲಾಗಿದೆ. ಅವು ಭಾಷಿಕವಾಗಿ ವಿಶೇಷವಾಗಿದ್ದು ಅವುಗಳನ್ನು ಹೀಗೆ ಹೇಳಲಾಗಿದೆ.

ಬೈಬಲ್‌ನಲ್ಲಿ ಅದರಲ್ಲಿ ವಿಶೇಷವಾಗಿ ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನು ಅನೇಕ ಕಥೆಗಳನ್ನು ಸಾಮ್ಯರೂಪದಲ್ಲಿ ಹೇಳಿದ್ದಾನೆ. ಸಾಮ್ಯಗಳು ಎಂದರೆ ಸಾಮಾನ್ಯವಾಗಿ ಕಥೆ ಅಥವಾ ದೃಷ್ಟಾಂತಗಳು ಎಂದರ್ಥ. ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿಯೂ ವಿಶೇಷವಾಗಿ ಕಂಡುಬರುತ್ತವೆ. ಅಂತಹವುಗಳಲ್ಲಿ ಕನ್ನಡ ಭಾಷೆ ಬಳಕೆಯನ್ನು ಗಮನಿಸಲಾಯಿತು. ಕ್ರೈಸ್ತ ಧರ್ಮ ಗ್ರಂಥ ಬೈಬಲ್ (ಸತ್ಯವೇದ)ದಲ್ಲಿ ಉಲ್ಲೇಖಿತವಾದ ಸಾಮ್ಯಗಳು ಹಲವು ಇವೆ. ಅವುಗಳಲ್ಲಿ ಕನ್ನಡ ನುಡಿ ಯಾವ ರೀತಿಯಲ್ಲಿ ಪೋಷಿಸಲ್ಪಟ್ಟಿದೆ ಎಂಬುದನ್ನು ಗಮನಿಸಬಹುದು.

೧. ನಡುಕಟ್ಟಿನ ಸಾಮ್ಯ (ಯೆರೆಮಿಯ ೧೩ನೇ ಸಂಧಿ ೧ ರಿಂದ ೫)

ಯಹೋವನು – ನನಗೆ–ನೀನು ಹೋಗಿ ನಾರಿನ ನಡುಕಟ್ಟನ್ನು ಕೊಂಡುಕೊಂಡು ಸೊಂಟಕ್ಕೆ ಬಿಗಿದುಕೋ, ನೀರಿನಲ್ಲಿ ನೆನಸಬೇಡ ಎಂದು ಅಪ್ಪಣೆ ಕೊಟ್ಟನು. ಆಗ ನಾನು ಯಹೋವನ ಮಾತಿನಂತೆ ನಡುಕಟ್ಟನ್ನು ಕೊಂಡುಕೊಂಡು ಸೊಂಟಕ್ಕೆ ಬಿಗಿದುಕೊಂಡೆನು. ಆ ಮೇಲೆ ನೀನು ಕೊಂಡು ಸೊಂಟಕ್ಕೆ ಬಿಗಿದ ನಡುಕಟ್ಟನ್ನು ತೆಗೆದುಕೊಂಡು ಹೊರಟ 'ಯೂಫ್ರೆಟಿಸ್' ನದಿಗೆ ಹೋಗಿ ಅದನ್ನು ಅಲ್ಲಿ ಬಂಡೆಯ ಸಂದಿನೊಳಗೆ ಬಚ್ಚಿಡು ಎಂಬುದಾಗಿ ಯಹೋವನ ಎರಡನೆಯ ಮಾತು ನನಗೆ ಬಂತು. ಆಗ ಯಹೋವನ ಅಪ್ಪಣೆಯ ಮೇರೆಗೆ ನಾನು ಹೋಗಿ ಯೂಫ್ರೆಟಿಸ್ ನದಿಯ ಬಳಿಯಲ್ಲಿ ಅದನ್ನು ಬಚ್ಚಿಟ್ಟನು.

೨. ಗಡಿಗೆಗಳ ಸಾಮ್ಯ (ಯೆರೆಮಿಯ ೧೩:೧೨–೧೪)

ಹೀಗಿರಲು ಪ್ರತಿಯೊಂದು ಗಡಿಗೆಯು ದ್ರಾಕ್ಷಾರಸದಿಂದ ತುಂಬಿರುವುದು ಎಂಬುದಾಗಿ ಇಸ್ರಾಯೇಲ್ಯರ ದೇವರಾದ ಯಹೋಮನು ಹೇಳುವ ಮಾತನ್ನು ಕೇಳಿರಿ ಎಂದು ನೀನು ಅವರಿಗೆ ಸಾರು ಆಗ ಅವರು ನಿನಗೆ ಪ್ರತಿಯೊಂದು ಗಡಿಗೆಯು ದ್ರಾಕ್ಷಾರಸದಿಂದ ತುಂಬಿರುವುದು ನಮಗೆ ಗೊತ್ತಿಲ್ಲವೋ ಎಂದು ಹೇಳುವರು. ಆಗ ನೀನು ಅವರಿಗೆ ಯಹೋವನ ಈ ಮಾತನ್ನು ಕೇಳಿರಿ. ದಾವೀದನ ಸಿಂಹಾಸನವನ್ನೇರಿದ ಅರಸರನ್ನು ಯಾಜಕರನ್ನು ಪ್ರವಾದಿಗಳನ್ನು ಯೆರುಸಲೇಮಿನ ಸಕಲ ನಿವಾಸಿಗಳನ್ನು ಅರಿತು ದೇಶದ ಜನರೆಲ್ಲರನ್ನು ನಾನು ಅಮಲಿನಿಂದ ತುಂಬಿಸಿ ಹಿರಿಕಿರಿಯರಾದ ಸಮಸ್ತರನ್ನು ಒಬ್ಬರಿಗೊಬ್ಬರು ಬಡಿದಾಡುವಂತೆ ಮಾಡುವೆನು. ನಾನು ಅವರನ್ನು ಉಳಿಸೆನು, ಕನಿಕರಿಸೆನು, ಕರುಣಿಸೆನು, ನಾಶಮಾಡದೆ ಬಿಡೆನು ಇದು ಯಹೋವನ ನುಡಿ.

೩. ಕುಂಬಾರನ ಸಾಮ್ಯ – ಯರೆಮಿಯ ೧೮:೧–೪)

ಯಹೋವನು ಯೆರೆಮಿಯನಿಗೆ ನೀನೆದ್ದು ಕುಂಬಾರನ ಮನೆಗೆ ಇಳಿದು ಹೋಗು, ಅಲ್ಲೇ ನನ್ನ ನುಡಿಯನ್ನು ನಿನಗೆ ಕೇಳ ಮಾಡುವೆನು ಎಂಬ ಮಾತನ್ನು ದಯಪಾಲಿಸಿದನು. ಆಗ ನಾನು ಕುಂಬಾರನ ಮನೆಗೆ ಇಳಿದುಹೋದನು. ಇಗೋ ಅವನು ಚಕ್ರದ ಮೇಲೆ ತನ್ನ ಕೆಲಸವನ್ನು ನಡಿಸುತ್ತಿದ್ದನು. ಆ ಕುಂಬಾರನು ಜೇಡಿಮಣ್ಣಿನಿಂದ ಮಾಡುತ್ತಿದ್ದ ಪಾತ್ರೆಯು ಅವನ ಕೈಯಲ್ಲಿ ಕೆಟ್ಟು ಹೋಗಲು ಪುನಃ ತನಗೆ ಸಾರಿತೋಚಿದ ಹಾಗೆ ಅದನ್ನು ಹೊಸ ಪಾತ್ರೆಯನ್ನಾಗಿ ಮಾಡಿದನು.

೪. ಕೂಜನ ಸಾಮ್ಯ (ಯರೆಮಯ ೧೯:೧–೩)

ಯಹೋವನು ನನಗೆ ಹೀಗೆ ಹೇಳಿದನು. ಹೊರಡು, ಕುಂಬಾರನು ಮಾಡಿದ ಮಣ್ಣಿನ ಕೂಜವನ್ನು ಕೊಂಡುಕೊಂಡು ಜನರ ಹಿರಿಯರಲ್ಲಿಯೂ ಯಾಜಕರ ಹಿರಿಯರಲ್ಲಿಯೂ ಕೆಲವರನ್ನು ಕರೆದುಕೊಂಡು ಬೋಕಿಯ ಬಾಗಿಲಿನ ಸಮೀಪದಲ್ಲಿರುವ ಬೆನ್ ಹಿನ್ನೋಮ್ ತಗ್ಗಿಗೆ ಹೋಗಿ ನಾನು ನಿನಗೆ ತಿಳಿಸುವ ಮಾತುಗಳನ್ನು ಸಾರು ಯೆಹೂವದ ಅರಸರೇ, ಯೆರೂಸಲೇಮಿನ

ನಿವಾಸಿಗಳೇ, ಯಹೋವನ ಮಾತನ್ನು ಕೇಳಿರಿ! ಇಸ್ರಾಯೇಲ್ಯರ ದೇವರೂ ಸೇನಾಧೀಶ್ವರನೂ ಆದ ಯೆಹೋವನು ಇಂತೆನ್ನುತ್ತಾನೆ. ಆಹಾ ನಾನು ಈ ಸ್ಥಳದ ಮೇಲೆ ಕೇಡನ್ನು ಬರಮಾಡುವೆನು ಅದರ ಸುದ್ಧಿಯನ್ನು ಕೇಳುವವರ ಎರಡು ಕಿವಿಗಳು ಮೊರ್ರೆನ್ನುವುದು

೫. ಒಳ್ಳೆಯ ಮತ್ತು ಕೆಟ್ಟ ಹಣ್ಣುಗಳ ಸಾಮ್ಯ (ಯೆರೆಮಿಯ ೨೪:೧–೫)

ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನು ಯಹೋಯಾಕೀಮನ ಮಗನೂ ಯಹೂದದ ಅರಸನೂ ಆದ ಯೆಕೋನ್ಯನನ್ನು ಯಹೋದದ ಪ್ರಧಾನರನ್ನು ಶಿಲ್ಪಿಗಳನ್ನು ಕಮ್ಮಾರರನ್ನು ಯೆರುಸ ಲೇನಿನಿಂದ ಬಾಬೆಲಿಗೆ ಸೆರೆ ಒಯ್ದ ಮೇಲೆ ಸೆರೆ ಒಯ್ದ ಮೇಲೆ ಯೆಹೂವನ ಆಲಯದ ಮುಂದೆ ಇಟ್ಟಿರುವ ಅಂಜೂರದ ಹಣ್ಣು ತುಂಬಿದ ಎರಡು ಪುಟ್ಟಿಗಳನ್ನು ಯಹೋವನು ನನಗೆ ಕಾಣಮಾಡಿದನು. ಒಂದು ಪುಟ್ಟಿಯಲ್ಲಿ ಫಲ ಕಾಲಕ್ಕೆ ಮುಂಚೆ ಮಾಗಿದ ಹಣ್ಣುಗಳ ಹಾಗೆ ಕಾಣುತ್ತಿದ್ದ ಅತ್ಯುತ್ತಮವಾದ ಅಂಜೂರದ ಫಲಗಳು ತುಂಬಿದ್ದವು. ಇನ್ನೊಂದು ಪುಟ್ಟಿಯಲ್ಲಿ ಯಾರೂ ತಿನ್ನದ ಹಾಗೆ ಬಹಳ ಕೆಟ್ಟು ಕೇವಲ ಅಸಹ್ಯವಾದ ಅಂಜೂರದ ಹಣ್ಣುಗಳು ತುಂಬಿದ್ದವು. ಆಗ ಯಹೋವನು ನನ್ನನ್ನು ಯೆರೆಮಿಯನೇ, ಏನು ನೋಡುತ್ತೀ ಎಂದು ಕೇಳಲು ನಾನು ಅಂಜೂರದ ಫಲಗಳನ್ನು ನೋಡುತ್ತೇನೆ. ಉತ್ತಮ ಫಲಗಳು ಅತ್ಯುತ್ತಮವಾಗಿವೆ. ಕೆಟ್ಟ ಫಲಗಳು ಬಹಳ ಕೆಟ್ಟಿವೆ. ಯಾರು ತಿನ್ನದ ಹಾಗೆ ಕೇವಲ ಅಸ್ಯವಾಗಿವೆ ಎಂದು ಉತ್ತರ ಕೊಟ್ಟೆನು.

೬. ಕಂದು ಬೆಳ್ಳಿಯ ಸಾಮ್ಯ (ಯೆಹೆಜ್ಜೇಲನು ೨೨:೧೭–೨೨)

ಈ ಮೇಲೆ ಯಹೋವನು ಈ ವಾಕ್ಯವನ್ನು ನನಗೆ ದಯ ಪಾಲಿಸಿದನು. ನರಪುತ್ರನೇ, ಇಸ್ರಾಯೇಲ್ ವಂಶವೆಂಬ ಲೋಹವು ನನ್ನ ದೃಷ್ಟಿಯಲ್ಲಿ ಕಲ್ಮಷವಾಗಿದೆ. ಅದೆಲ್ಲಾ ಕುಲುಮೆಯಲ್ಲಿನ ತಾಮ್ರ, ತವರ, ಕಬ್ಬಿಣ, ಸೀಸ, ಅದು ಕಂದುಬೆಳ್ಳಿ, ಹೀಗಿರಲು ಕರ್ತನಾದ ಯಹೋವನು ಇರಿತೆನ್ನುತ್ತಾನೆ. ನೀವೆಲ್ಲರು ಕಸರಾಗಿರುವುದರಿಂದ ಇಗೋ ನಿಮ್ಮನ್ನು ಯೆರೂಸಲೇಮಿನೊಳಕ್ಕೆ ಕೂಡಿಸುವೆನು. ಬೆಳ್ಳಿ, ತಾಮ್ರ, ಕಬ್ಬಿಣ, ಸೀಸ, ತವರ ಇವುಗಳನ್ನು ಕುಲುಮೆಯೊಳಗೆ ಕೂಡಿಸಿ ಊದಿ ಉರಿಹತ್ತಿಸಿ ಕರಗಿಸುವಂತೆ ನಾನು ನಿಮ್ಮನ್ನು ನನ್ನ ಉಗ್ರಕೋಪದಲ್ಲಿ ಕೂಡಿಸಿ ಇಟ್ಟುಬಿಟ್ಟು ಕರಗಿಸುವೆನು. ಹೌದು, ನಾನು ನಿಮ್ಮನ್ನು ನನ್ನ ರೋಷಾಗ್ನಿಯಲ್ಲಿ ಕೂಡಿಸಿ ಊದಲು ನೀವು ಅದರೊಳಗೆ ಕರಗಿ ಹೋಗುವಿರಿ. ಬೆಳ್ಳಿಯು ಕುಲುಮೆಯೊಳಗೆ ಕರಗುವಂತೆ ನೀವು ನನ್ನ ರೋಷಾಗ್ನಿಯಲ್ಲಿ ಕರಗುವಿರಿ. ನಿಮ್ಮ ಮೇಲೆ ರೋಷಾಗ್ನಿಯನ್ನು ಸುರುಸಿದಾತನು ಯೆಹೋವನಾದ ನಾನೇ ಎಂದು ನಿಮಗೆ ಗೊತ್ತಾಗುವುದು.

೭. ಕಿಲುಬಿನ ಹಂಡೆಯ ಸಾಮ್ಯ (ಯಹೆಜ್ಕೇಲ ೨೪:೧–೪)

ಯಹೋಯಾಕಿಮನು ಸೆರೆಯಾದ ಒಂಬತ್ತನೆಯ ವರುಷದ ಹತ್ತನೆಯ ತಿಂಗಳಿನ ಹತ್ತನೆಯ ದಿನದಲ್ಲಿ ಯಹೋವನು ಈ ವಾಕ್ಯವನ್ನು ನನಗೆ ದಯಪಾಲಿಸಿದನು. ನರುಪುತ್ರನೇ, ಈ ದಿನದ ಇದೇ ದಿನದ ಹೆಸರನ್ನು ಬರೆದುಕೋ, ಇದೇ ದಿನದಲ್ಲಿ ಬಾಬೇನ ಅರಸನು ಯರೂಸಲೇಮಿಗೆ

ಮುತ್ತಿಗೆ ಹಾಕಿದ್ದಾನೆ. ಈ ದ್ರೋಹಿ ವಂಶಕ್ಕೆ ದೃಷ್ಟಾಂತವನ್ನೆತ್ತಿ ಹೀಗೆ ಹೇಳು ಕರ್ತನಾದ ಯಹೋವನು ಇರಿತೆನ್ನುತ್ತಾನೆ. ಹಂಡೆಯನ್ನು ಒಲೆಯ ಮೇಲೆ ಇಡು ಮೇಲಿದು ಅದರಲ್ಲಿ ನೀರನ್ನು ಹೊಯ್ಯಿ ಮಾಂಸ ಖಂಡಗಳನ್ನು ಅಂದರೆ ತೊಡೆ ಮುಂದೊಡೆ ಮೊದಲಾದ ಒಳ್ಳೆಯ ಖಂಡಗಳನ್ನು ಅದರಲ್ಲಿ ಒಟ್ಟಿಗೆ ಹಾಕು, ಉತ್ತಮವಾದ ಎಲುಬುಗಳನ್ನು ಅದರಲ್ಲಿ ತುಂಬಿಸು. ಹಿಂಡಿನಲ್ಲಿ ಶ್ರೇಷ್ಠವಾದುದನ್ನು ತೆಗೆದುಕೋ ಹಂಡೆಯ ತಳದಲ್ಲಿ ಎಲುಬುಗಳನ್ನು ರಾಶಿಯಾಗಿ ಒಟ್ಟು ಚೆನ್ನಾಗಿ ಕುದಿಸು ಹೌದು ಎಲುಬುಗಳು ಅದರಲ್ಲಿ ಬೇಯಲಿ.

೮. ಕಳ್ಳನಾದ ಮನೆವಾರ್ತೆಯನ ಸಾಮ್ಯ (ಲೂಕ ೧೬:೧-೫)

ಯೇಸು ತನ್ನ ಶಿಷ್ಯರಿಗೂ ಹೇಳಿದ್ದೇನೆಂದರೆ ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ ಒಬ್ಬ ಮನೆವಾರ್ತಯವನಿದ್ದನು. ಇವನ ವಿಷಯವಾಗಿ ಯಜಮಾನನ ಬಳಿಯಲ್ಲಿ ಇವನು ನಿನ್ನ ಆಸ್ತಿಯನ್ನು ಹಾಳುಮಾಡುತ್ತಾ ಇದ್ದಾನೆ ಎಂದು ಯಾರೋ ದೂರು ಹೇಳಿರಲಾಗಿ ಯಜಮಾನನು ಅವನನ್ನು ಕರೆದು ಇದೇನು ನಾನು ನಿನ್ನ ವಿಷಯದಲ್ಲಿ ಕೇಳುವ ಸಂಗತಿ? ನಿನ್ನ ಮನೆವಾರ್ತೆಯ ಲೆಕ್ಕವನ್ನು ಒಪ್ಪಿಸು ನೀನು ಇನ್ನು ಮನೆವಾರ್ತೆಯವನಾಗಿರುವುದಕ್ಕಾಗುವುದಿಲ್ಲ ಎಂದು ಹೇಳಿದನು. ಹೀಗಿರಲಾಗಿ ಆ ಮನೆವಾರ್ತೆಯವನು ನಾನೇನು ಮಾಡಲಿ ನನ್ನ ಯಜಮಾನನು ನನ್ನಿಂದ ಈ ಮನೆವಾರ್ತೆ ಕೆಲಸವನ್ನು ತೆಗೆದುಬಿಡುತ್ತಾನಲ್ಲಾ ಅಗಿಯುವುದಕ್ಕೆ ನನಗೆ ಬಲವಿಲ್ಲ, ಭಿಕ್ಷೆ ಬೇಡುವುದಕ್ಕೆ ನನಗೆ ನಾಚಿಕೆಯಾಗುತ್ತದೆ.

೯. ಹತ್ತು ಮೊಹರಿಗಳ ಸಾಮ್ಯ (ಲೂಕ ೧೯:೧-೧೪)

ಅವರು ಈ ಮಾತುಗಳನ್ನು ಕೇಳುತ್ತಿರಲಾಗಿ ಯೇಸು ತಾನು ಯರೂಸಲೇಮಿಗೆ ಸಮೀಪವಾಗಿದ್ದರಿಂದಲೂ ದೇವರ ರಾಜ್ಯವು ಕೂಡಲೇ ಪ್ರತ್ಯಕ್ಷವಾಗುವ ಹಾಗಿದೆ ಎಂದು ಅವರು ಭಾವಿಸಿದ್ದರಿಂದಲೂ ಇನ್ನು ಒಂದು ಸಾಮ್ಯವನ್ನು ಹೇಳಿದನು. ಅದೇನೆಂದರೆ ಶ್ರೀಮಂತನಾದ ಒಬ್ಬಾನೊಬ್ಬ ಮನುಷ್ಯನು ತಾನು ರಾಜ್ಯಾಧಿಕಾರವನ್ನು ಪಡೆದುಕೊಂಡು ಹಿಂತಿರುಗಿ ಬರಬೇಕೆಂದು ದೂರ ದೇಶಕ್ಕೆ ಹೊರಟನು. ಹೊರಡುವಾಗ ತನ್ನ ಆಳುಗಳಲ್ಲಿ ಹತ್ತು ಮಂದಿಯನ್ನು ಕರೆದು ಅವರಿಗೆ ಹತ್ತು ಮೊಹರಿಗಳನ್ನು ಕೊಟ್ಟು ನಾನು ಬರುವ ತನಕ ವ್ಯಾಪಾರ ಮಾಡಿಕೊಂಡಿರಿ ಎಂದು ಹೇಳಿ ಹೋದನು ಆದರೆ ಅವನ ಪಟ್ಟಣದ ನಿವಾಸಿಗಳು ಅವನನ್ನು ದ್ವೇಷಿಸಿ, ಅವನ ಹಿಂದೆ ರಾಯಭಾರಿಗಳನ್ನು ಕಳುಹಿಸಿ ಇವನು ನಮ್ಮ ಮೇಲೆ ದೊರೆತನ ಮಾಡುವರು, ನಮಗೆ ಇಷ್ಟವಿಲ್ಲ ಎಂದು ಹೇಳಿಸಿದರು.

ಹೀಗೆ ಇನ್ನು ಹಲವು ದೃಷ್ಟಾಂತಗಳು ಸಾಮ್ಯಗಳು ಇವೆ ಅವುಗಳಲ್ಲಿ ಕನ್ನಡ ಹೇಗೆ ಬಳಕೆಯಾಗಿದೆ ಎಂಬುದನ್ನು ಗಮನಿಸಬಹುದು. ಹದ್ದು ಮತ್ತು ಗಿಡಗಳ ಸಾಮ್ಯ ಮತ್ತು ಇಬ್ಬರು ಸೂಳೆಯರ ಸಾಮ್ಯ ಎಂಬುದಾಗಿಯೂ ಕ್ರೈಸ್ತ ಧರ್ಮ ಗ್ರಂಥದಲ್ಲಿ ಗಮನಿಸಬಹುದು. ಈ ಮೇಲಿನ ಎಲ್ಲಾ ಸಾಮ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅಲ್ಲಿ ಬಳಕೆಯಾಗಿರುವ ಪದ

ಬಳಕೆ–ನಡುಕಟ್ಟು, ಗಡಿಗೆ, ಕುಂಬಾರ, ಕೂಜ, ಹಣ್ಣುಗಳು, ಹಂಡೆ, ಕಳ್ಳ, ನಾಣ್ಯ (ಚಿನ್ನದ) ಹದ್ದು, ಗಿಡ ಹಾಗೂ ಸೂಳೆ ಎಂಬ ನಾಮ ಪದಗಳನ್ನು ವಿವರಿಸಲಾಗಿದೆ.

ನಡುಕಟ್ಟು ಸಾಮ್ಯ

ಈ ಪದವನ್ನು ಕ್ರೈಸ್ತ ಧರ್ಮಗ್ರಂಥ ಕನ್ನಡದಲ್ಲಿ ರಚನೆಯಾದಂತಹ ಸತ್ಯವೇದವು ಎಂಬ ಧರ್ಮಗ್ರಂಥದಲ್ಲಿ ಹಳೆ ಒಡಂಬಡಿಕೆಯಲ್ಲಿ ಬರುವ ಯರೆಮಿಯನ ಗ್ರಂಥ ೧೩ನೇ ಸಂಧಿ ಅಥವಾ ಅಧ್ಯಾಯದಲ್ಲಿ ಕಾಣುತ್ತೇವೆ. ಈ ಪದವು ಒಂದು ಸಾಮ್ಯ ಅಥವಾ ದೃಷ್ಟಾಂತವನ್ನು ಹೇಳುವ ಸಂದರ್ಭದಲ್ಲಿ ರಚನೆಯಾಗಿದೆ. 'ನಡುಕಟ್ಟು' "ಎಂದರೆ ನಾರಿಸಂದ ಮಾಡಿದ ಸೊಂಟದ ಸುತ್ತಲೂ ಬಿಗಿದು, ಕೆಳಗೆ ತೊಡೆಯ ಅರ್ಧಭಾಗದವರೆಗೆ ಮಾತ್ರ ಮುಚ್ಚುವಂತಹ ಉಡುಪಾಗಿತ್ತು". ಇದು ಕ್ರಿ.ಪೂರ್ವದಲ್ಲಿ ಇಸ್ರೇಲನ ಯರೂಸಲೇಮ ಅಥವಾ ಜೆರುಸಲೇಮನಲ್ಲಿ ಬಳಕೆಯಾಗುತ್ತಿತ್ತು. ಈ ನಾರು ಬಟ್ಟೆಯನ್ನು ಜಂಬುಹುಲ್ಲಿನ ನಾರಿನಿಂದ ನೇಯುತ್ತಿದ್ದರು. ಈ ಒಂದು 'ನಡುಕಟ್ಟು' ಅಲ್ಲಿನ ದೇವ ಜನರಿಗೆ ಸಮಾನವೆಂದು ವಿಶ್ಲೇಷಿಸಲಾಗಿದೆ. ನಡುಕಟ್ಟು ಎಂದರೆ ಸಾಮಾನ್ಯವಾಗಿ ನಾವು ಸಿದ್ಧವಾಗು ಟೊಂಕ ಕಟ್ಟು ಎಂಬರ್ಥದಲ್ಲಿ ಹೇಳಿದರೆ ಸತ್ಯವೇದದ ಈ ಪದವು ದೇವರ ಪ್ರೀತಿಗೆ ದೇವರ ಸಹವಾಸಕ್ಕೆ ಸಿದ್ಧವಾಗಿರುವುದು ಎಂಬಂತಹ ಹೊಸ ಅರ್ಥವನ್ನು ನಾವು ಭಾಷಿಕವಾಗಿ ಗ್ರಹಿಸಬಹುದು.

ಗಡಿಗೆಗಳ ಸಾಮ್ಯ

ಈ ಸಾಮ್ಯದಲ್ಲಿ ನಿಷೇದಾರ್ಥಕಗಳನ್ನು ಗುರ್ತಿಸಲಾಗಿದೆ. ನಿಷೇಧ ಎಂದರೆ ಮಾಡುವುದಿಲ್ಲ, ನೋಡುವುದಿಲ್ಲ, ಕೇಳುವುದಿಲ್ಲ ಅಥವಾ ಹೇಳುವುದಿಲ್ಲ ಒಟ್ಟಾರೆಯಾಗಿ 'ಇಲ್ಲ' ಎಂಬುದೇ ನಿಷೇದ. ಇದು ಕನ್ನಡ ವ್ಯಾಕರಣದಲ್ಲಿ ಕಂಡುಬರುವ ನಿಷೇದ ಪದ ಆಗಿದೆ. ಇದು ಪ್ರಸ್ತುತ 'ಇಲ್ಲ' ನಿಷೇಧ ಬದಲಿಗೆ 'ಏನು' ಎಂಬ ಪ್ರತ್ಯಯ ಸೇರಿ ನಿಷೇಧ ಅರ್ಥ ನೀಡುವಂತಹ ಪದಗಳನ್ನು ಸೃಷ್ಟಿಸಿದೆ. ಉದಾ.

ಮಾಡು + ಎನು = ಮಾಡೆನು

ಬೇಡು + ಎನು = ಬೇಡೆನು

ನೋಡು + ಎನು = ನೋಡೆನು

ಕೇಳು + ಎನು = ಕೇಳೆನು

ಹೇಳು + ಎನು = ಹೇಳೆನು

ಹೀಗೆ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿಯೂ ನಿಷೇಧ ಅರ್ಥ ನೀಡುವ ಪದಗಳನ್ನು ಕಂಡುಕೊಳ್ಳಬಹುದು. ಕನ್ನಡ ಸತ್ಯವೇದದ ಹಳೆ ಒಡಂಬಡಿಕೆಯಲ್ಲಿ ಬರುವ ಯರೆಮಿಯ ಎಂಬ

ಪ್ರವಾದಿಗಳು ಬರೆದಿರುವ ಅಧ್ಯಾಯ ೧೩: ವಚನ ೧೨-೧೪ರವರೆಗೆ ಗ್ರಹಿಸಬಹುದು. ಅಲ್ಲಿ ಬರುವ ನಿಷೇಧ ಪದಗಳು

ಉಳಿಸೆನು

ಕನಿಕರಿಸೆನು

ಕರುಣಿಸೆನು

ಬಿಡೆನು

ಕುಂಬಾರನ ಸಾಮ್ಯ

ಈ ಸಾಮ್ಯದಲ್ಲಿ ಕೆಳಗಿನ ವಾಕ್ಯ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ.

೧. "ಅಲ್ಲೆ ನನ್ನ ನುಡಿಯನ್ನು ನಿನಗೆ ಕೇಳ ಮಾಡುವೆನು ಎಂಬ ಮಾತನ್ನು ದಯಪಾಲಿಸಿದನು" ಸಾಮಾನ್ಯವಾಗಿ ನಾವು ಮಾತನ್ನು ಹೇಳಿದನು, ಹೇಳಿದರು ಮಾತನ್ನು ಕೇಳಿದರು ಕೇಳಿದನು ಎಂಬ ಪದ ಬಳಕೆಯನ್ನು ಗಮನಿಸುತ್ತೇವೆ. ಆದರೆ ಸತ್ಯವೇದದ ಹಳೆ ಒಡಂಬಡಿಕೆಯ ಭಾಗದಲ್ಲಿ ಯರೆಮಿಯ ಪ್ರವಾದಿ ಬರೆದ ಅಧ್ಯಾಯ ೧೮:೧ರಿಂದ ೪ರವರೆಗೆ ನೋಡಿದಾಗ 'ಕುಂಬಾರನ ಸಾಮ್ಯ' ಎನ್ನುವ ಅಧ್ಯಾಯದಲ್ಲಿ ಕನ್ನಡದೊಳಗೆ ಬಳಕೆಯಿಲ್ಲದ 'ಮಾತನ್ನು ದಯಪಾಲಿಸಿದನು' ಎಂಬ ಹೊಸ ರೀತಿಯ ಪರಿಭಾಷೆಯನ್ನು ಕಂಡುಕೊಳ್ಳಲಾಗಿದೆ.

೨. "ಕುಂಬಾರನ ಮನೆಗೆ ಇಳಿದು ಹೋಗು" ಇಲ್ಲಿಯೂ ಸಹಿತ ಕನ್ನಡ ವಾಕ್ಯ ರಚನೆಯಲ್ಲಿ ಸಹಜವಾಗಿ 'ಮನೆಗೆ ಹೋಗು' ಎಂದು ಹೇಳುತ್ತೇವೆ. ಆದರೆ ಕ್ರೈಸ್ತ ಧಾರ್ಮಿಕ ಸಾಹಿತ್ಯದೊಳಗೆ ಅಂದರೆ ಸತ್ಯವೇದದಲ್ಲಿ ಮೇಲಿನ ವಾಕ್ಯವನ್ನು ಬಳಸಿರುವುದು ಕಂಡುಬರುತ್ತದೆ. ಕುಂಬಾರ ಎಂದರೆ ದೇವರು ಮಣ್ಣು, ಗಡಿಗೆ ಎಂದರೆ ಜನರು ಎಂದರ್ಥ.

ಒಳ್ಳೆಯ ಮತ್ತು ಕೆಟ್ಟ ಹಣ್ಣುಗಳ ಸಾಮ್ಯ

ಈ ಸಾಮ್ಯದಲ್ಲಿ ವಾಕ್ಯ ರಚನೆಯನ್ನು ಗಮನಿಸಲಾಗಿದೆ. "ಯಾರು ತಿನ್ನದ ಹಾಗೆ ಕೇವಲ ಅಸಹ್ಯವಾಗಿವೆ" ಎಂಬುದನ್ನು ಗುರ್ತಿಸಲಾಗಿದೆ. ಸಾಮಾನ್ಯವಾಗಿ ಯಾರು ತಿನ್ನದ ಹಾಗೆ ಅಥವಾ ತಿನ್ನದಂತೆ ಹಣ್ಣುಗಳು ಕೆಟ್ಟು ಹೋಗಿವೆ ಅಥವಾ ಅಸಹ್ಯವಾಗಿವೆ ಎಂದು ಹೇಳುವುದನ್ನು ತಿಳಿದಿದ್ದೇವೆ. ಆದರೆ ಕ್ರೈಸ್ತ ಧಾರ್ಮಿಕ ಗ್ರಂಥದಲ್ಲಿ 'ಕೇವಲ ಅಸಹ್ಯ' ಎಂದು ಪದ ಬಳಕೆಯಾಗಿದೆ. ಇದೊಂದು ಕನ್ನಡಕ್ಕೆ ಹೊಸ ಪದದ ರಚನಾ ಅನುಭವ ಎಂದು ಹೇಳಬಹುದು.

ಕಂದು ಬೆಳ್ಳಿಯ ಸಾಮ್ಯ

ಈ ಸಾಮ್ಯದಲ್ಲಿ 'ಅಲಂಕಾರ' ಪರಿಕಲ್ಪನೆಯನ್ನು ಕಾಣಬಹುದು. ಉದಾ. "ನೀವೆಲ್ಲರೂ ಕಸರಾಗಿರುವುದರಿಂದ ಇಗೋ ನಿಮ್ಮನ್ನು ಯರೂಸಲೇಮಿನೊಳಕ್ಕೆ ಕೂಡಿಸುವೆನು. ಬೆಳ್ಳಿ, ತಾಮ್ರ,

ಕಬ್ಬಿಣ, ಸೀಸ, ತವರ ಇವುಗಳನ್ನು ಕುಲುಮೆಯೊಳಗೆ ಕೂಡಿಸಿ ಊದಿ ಉರಿಹತ್ತಿಸಿ ಕರಗಿಸುವಂತೆ ನಾನು ನಿಮ್ಮನ್ನು ನನ್ನ ಉಗ್ರಕೋಪದಲ್ಲಿ ಕೂಡಿಸಿ ಇಟ್ಟುಬಿಟ್ಟು ಕರಗಿಸುವೆನು" ಎಂದು ಹೇಳಿರುವುದನ್ನು ಗಮನಿಸಬಹುದು. ಇಲ್ಲಿ 'ಕರಗಿಸುವಂತೆ' ಎಂದು ಅಲಂಕಾರವನ್ನು ಗುರ್ತಿಸಲಾಗಿದೆ.

ಸಾಮ್ಯಗಳಲ್ಲಿ ಬಳಕೆಯಾದ ಪದಗಳನ್ನು ಹೀಗೆ ತಿಳಿಯಬಹುದಾಗಿದೆ.

ಪದ	**ಅರ್ಥ**	**ಉಲ್ಲೇಖ**
ನಡುಕಟ್ಟು	ನಾರಿನ ನಡುಕಟ್ಟು	ಬಳಕೆ ಯರೆಮಿಯ ೧೩:೧
ಯೂಫ್ರೆಟಿಸ್	ನದಿ	ಬಳಕೆ ಯರೆಮಿಯ ೧೩:೩
ಗಡಿಗೆ	ದ್ರಾಕ್ಷಿರಸ ತುಂಬಿದ ಗಡಿಗೆ	ಬಳಕೆ ಯರೆಮಿಯ ೧೩:೨
ಉಳಿಸನು	ಉಳಿಸುವುದಿಲ್ಲ	ಬಳಕೆ ಯರೆಮಿಯ ೧೩:೧೪
ಕನಿಕರಿಸೆನು	ಕನಿಕನಿಸುವುದಿಲ್ಲ	
ಬಿಡೆನು	ಬಿಡುವುದಿಲ್ಲ	
ಕುಂಬಾರ	ಯೇಸುಕ್ರಿಸ್ತ	ಯರೆಮಿಯ ೧೮:೧
ಜೇಡಿಮಣ್ಣು	ವಿಶ್ವಾಸಿಗಳು ಜನರು ಇಸ್ರಾಯೇಲರು	ಯರೆಮಿಯ ೧೮:೬
ಜಿನ್‌ಹಿನ್ನೋಯ	ತಗ್ಗುಪ್ರದೇಶ	ಯಹೋಶುವ ೧೫:೮
ಕೂಜನ್	ಕುಂಬಾರನ ಮಣ್ಣಿನ ಗಡಿಗೆ	ಯರೆಮಿಯ ೧೯:೧
ಕಂದುಬೆಳ್ಳಿ	ತುಕ್ಕು, ಅಶುದ್ಧ ಮನಸ್ಸು ಲೋಹ	ಯೆಹೆಜ್ಕೇಲ ೨೨:೧೭
ಕಿಲುಬಿನ ಹಂಡೆ	ಪಾಪದ ಮನುಷ್ಯ	ಯೆಹೆಜ್ಕೇಲ ೨೪:೧೩
ಮನೆವಾರ್ತೆಯವನು	ಮನೆ ಆಳು (ಕೆಲಸಗಾರ)	ಲೂಕ ೧೬:೧
ಮೊಹರಿ	ಹಣ	ಲೂಕ ೧೯:೧೩

ಹೀಗೆ ಹಲವು ಸಾಮ್ಯಗಳಲ್ಲಿ ಬಳಕೆಯಾದ ಈ ಮೇಲಿನ ಕೆಲವು ಪದಗಳನ್ನು ಭಾಷಿಕವಾಗಿ ವಿಶ್ಲೇಷಿಸಿದಾಗ ಈ ಕೆಳಕಂಡಂತಹ ಅಂಶಗಳನ್ನು ಗಮನಿಸಲಾಯಿತು.

೩.೧.೩. ಸತ್ಯವೇದ(ಬೈಬಲ್)ದ ಧಾರ್ಮಿಕ ಪರಿಭಾಷೆ

ನಮ್ಮ ಶಿಷ್ಟ ಕನ್ನಡದಲ್ಲಿ ಬಳಕೆಯಾಗುವ ಪದಗಳು ನಾವು ಒಪ್ಪಿಕೊಂಡಿರುವ ಅಥವಾ ಗ್ರಹಿಸಿರುವ ಅರ್ಥವನ್ನು ನೀಡುತ್ತವೆ. ಆದರೆ ಕ್ರೈಸ್ತ ಧಾರ್ಮಿಕ ಸಾಹಿತ್ಯದೊಳಗೆ ಬಳಕೆಯಾಗಿರುವ ಅಥವಾ ಬಳಕೆಯಾಗುವ ಕೆಲವು ಪದಗಳು ಕನ್ನಡದವುಗಳೇ ಆದರೂ ಒಪ್ಪಿತವಾದ ಅರ್ಥವನ್ನು

ಮುಖ್ಯವಾಗಿ ಹೇಳದೆ ಬೇರೊಂದು ರೀತಿಯ ಹೊಸ ಅರ್ಥಸ್ವರೂಪವನ್ನು ಕಟ್ಟಿಕೊಡುತ್ತವೆ. ಇದೊಂದು ತೆರನಾಗಿ ನಮ್ಮ ಕನ್ನಡ ಭಾಷೆಯ ಅರ್ಥ ವ್ಯಾಪ್ತಿಗೆ ಕಾರಣವಾಗುತ್ತದೆ ಎಂದು ಹೇಳಬಹುದು. ಸಾಮಾನ್ಯವಾಗಿ ನಾವು ಗ್ರಹಿಸಿರುವ ಅರ್ಥಗಳೇ ಬೇರೆ ಧಾರ್ಮಿಕ ಸಾಹಿತ್ಯದಲ್ಲಿ ಅದು ಬಂದು ಕೊಡುವ ಅರ್ಥಗಳೇ ವಿಭಿನ್ನವಾಗಿವೆ. ಅಂತಹ ಕೆಲವು ಪದಗಳನ್ನು ಈ ಕೆಳಕಂಡಂತೆ ಗ್ರಹಿಸಲಾಗಿದೆ.

೧. **ರಕ್ಷಣೆ:** 'ರಕ್ಷಣೆ' ಎಂಬ ಪದದ ಅರ್ಥ ಸಾಮಾನ್ಯವಾಗಿ ಅಪಾಯದಿಂದ ರಕ್ಷಣೆ ಎಂದು ಹೇಳುತ್ತೇವೆ. ನಿಘಂಟುವಿನ ಪ್ರಕಾರ ರಕ್ಷಣೆ ಎಂದರೆ ಸಂರಕ್ಷಿಸುವಿಕೆ, ಕಾಪಾಡುವಿಕೆ, ಕಾಯುವಿಕೆ ಆಗಿದೆ. ಅಲ್ಲದೆ ಪೊಲೀಸರು ನೀಡುವ ರಕ್ಷಣೆ ಎಂತಲೂ ಹೇಳಬಹುದು. ಒಟ್ಟಾರೆಯಾಗಿ ರಕ್ಷಣೆ ಅಂದರೆ ಸಾಮಾನ್ಯವಾಗಿ ಈ ಲೋಕದಲ್ಲಿನ ರಕ್ಷಣೆಯಾಗಿದೆ. ಆದರೆ ಕ್ರೈಸ್ತ ಸಾಹಿತ್ಯದಲ್ಲಿ ಪದ ರಕ್ಷಣೆ ಈ ಅರ್ಥಗಳಿಂದ ಹೊರತಾಗಿದೆ. 'ರಕ್ಷಣೆ' ಎಂದರೆ ಕ್ರಿಸ್ತನಿಂದ ನಮಗೆ ದೊರೆತ ರಕ್ಷಣೆ. ಪಾಪದಿಂದ ಬಿಡಿಸಿದ ರಕ್ಷಣೆ ಎಂದು ಕರೆಯುವರು.

ಉದಾ. ೧. ನಂಬಿಕೆಯ ಮೂಲಕ ಕೃಪೆಯಿಂದಲೇ 'ರಕ್ಷಣೆ' ಹೊಂದಿದವರಾಗಿದ್ದೀರಿ. ಆ ರಕ್ಷಣೆ ನಿಮ್ಮಿಂದುಂಟಾದುದಲ್ಲ. ಅದು ದೇವರ ವರವೇ. (ಸತ್ಯವೇದದ ಹೊಸ ಒಡಂಬಡಿಕೆಯಲ್ಲಿ ಎಫೆಸದವರಿಗೆ ೨:೮)

೨. ಆಕೆಯು ಒಬ್ಬ ಮಗನನ್ನು ಹಡೆಯುವಳು ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು. ಯಾಕೆಂದರೆ ಆತನೇ ತನ್ನ ಜನರನ್ನು 'ಬಿಡಿಸಿ ಕಾಯುವನು' ಅಂದನು (ಸತ್ಯವೇದದ ಹೊಸ ಒಡಂಬಡಿಕೆಯಲ್ಲಿ ಮತ್ತಾಯ ೧:೨೧)

೩. ಸ್ವಾಮಿಗಳೇ, ನಾನು 'ರಕ್ಷಣೆ' ಹೊಂದುವುದಕ್ಕೆ ಏನು ಮಾಡಬೇಕೆಂದು ಕೇಳಲು ಅವರು ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು ಆಗ ನೀನು 'ರಕ್ಷಣೆ' ಹೊಂದುವಿ. (ಸತ್ಯವೇದದ ಹೊಸ ಒಡಂಬಡಿಕೆಯಲ್ಲಿ ಅಪೋಸ್ತಲರ ಕೃತ್ಯಗಳು ೧೬:೩೧)

ಈ ಮೇಲಿನ ಎಲ್ಲಾ ಹೇಳಿಕೆಗಳನ್ನು ಗಮನಿಸಿದಾಗ ನಾವು ಸಾಮಾನ್ಯವಾಗಿ ಗ್ರಹಿಸಿರುವ 'ರಕ್ಷಣೆ ಎಂಬ ಶಬ್ದದ ಅರ್ಥವನ್ನು ಇಲ್ಲಿ ಬೇರೆಯಾಗಿಯೇ ತಿಳಿಯಲಾಗಿದೆ. ಅಂದರೆ ರಕ್ಷಣೆ ಎಂದರೆ ಅಪಾಯದಿಂದ, ಕಷ್ಟದಿಂದ ಇನ್ನಾವುದೇ ತೊಂದರೆಯಿಂದ ಪಾರಾಗುವುದು ಎಂದು ಹೇಳುವುದು ಸಾಮಾನ್ಯ ಅರ್ಥವಾಗಿದೆ. ಆದರೆ ಕನ್ನಡದಲ್ಲಿ ರಚನೆಯಾದ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ 'ರಕ್ಷಣೆ' ಎಂದರೆ ಪಾರಮಾರ್ಥಿಕ ಅಂದರೆ ಆಧ್ಯಾತ್ಮಿಕ ರೀತಿಯಲ್ಲಿ ಅರ್ಥವನ್ನು ನೀಡುತ್ತದೆ. ಇಲ್ಲಿ ರಕ್ಷಣೆ ಎಂದರೆ ಮೋಕ್ಷ, ಮುಕ್ತಿ, ಯೇಸುವಿನ ಕೃಪೆಗೆ ಪಾತ್ರರಾಗುವುದು ಪಾಪದಿಂದ ಬಿಡಿಸುವುದು, ನರಕಯಾತನೆಯಿಂದ ಅಪ್ಪಿಸುವುದು ಎಂಬೆಲ್ಲಾ ಅರ್ಥಗಳನ್ನು ಸತ್ಯವೇದದ ಅಧ್ಯಾಯಗಳಲ್ಲಿ ಉಲ್ಲೇಖವಾದ ವ್ಯಾಕ್ಯಗಳಿಂದ ಗ್ರಹಿಸಬಹುದು.

೨. **ಸಾಕ್ಷಿ:** 'ಸಾಕ್ಷಿ' ಪದವನ್ನು ಗಮನಿಸಿದಾಗ ಸಾಮಾನ್ಯವಾಗಿ ಶಿಷ್ಟ ಕನ್ನಡದಲ್ಲಿ ಒಂದು ಕೃತ್ಯಕ್ಕೆ ಅಥವಾ ಒಬ್ಬರ ಹೇಳಿಕೆಗೆ ಇನ್ನೊಬ್ಬರು ನೀಡುವ ಹೇಳಿಕೆ ಪರವಾಗಿ ಅಥವಾ ವಿರೋಧವಾಗಿಯೂ ಇರಬಹುದು. ಆದರೆ ಕ್ರೈಸ್ತ ಧರ್ಮದಲ್ಲಿ 'ಸಾಕ್ಷಿ' ಅಂದರೆ ದೇವರ ವಿಷಯದಲ್ಲಿ ಇನ್ನೊಬ್ಬರ ಹೆದರಿಕೆಗೆ ಅಂಜದೆ ಗಟ್ಟಿಯಾಗಿ ನಿಲ್ಲುವಂತಹ ಸಾಕ್ಷಿ ಪ್ರಾಣವನ್ನು ಪ್ರೀತಿಸದೇ ಲೆಕ್ಕಿಸದೇ ದೇವರ ಕಾರ್ಯಕ್ಕಾಗಿಯೇ ತನ್ನ ಜೀವಿತವನ್ನು ಮುಡುಪಾಗಿಡುವುದು.

೩. **ತೀರಿತು:** 'ತೀರಿತು' ಎನ್ನುವ ಪದವನ್ನು ಅವಲೋಕಿಸಿದಾಗಲೂ ಶಾಬ್ಧಿಕವಾಗಿ ಕನ್ನಡ ಶಬ್ದಕೋಶದಲ್ಲಿ ಕೆಲಸ ಮುಗಿತು ಅಥವಾ ಕೊನೆ ಎಂದು ಅರ್ಥ ಹೇಳುತ್ತೇವೆ. ಆದರೆ ಕ್ರಿ.ಶ. ೨೦೦೦ ವರ್ಷಗಳ ಹಿಂದೆ ಯೇಸು ಕ್ರಿಸ್ತನು ತನ್ನ ಕರ್ಮವನ್ನು ಮುಗಿಸಿದ್ದು ಒಂದು ಕಡೆಯಾದರೆ, ನನ್ನ ಉಸಿರು ನಿಲ್ಲುತ್ತದೆ ನಾನು ನಿಧನವಾಗುವೆ ಎಂದು ಇನ್ನೊಂದು ಕಡೆ ಅಲ್ಲದೆ ನನ್ನ ಕಾರ್ಯ ಸಂಪೂರ್ಣವಾಗಿ ಮಾಡಿದ್ದೇನೆ ನನ್ನ ದೇವರು ನನಗೆ ವಹಿಸಿರುವ ಕಾರ್ಯವನ್ನು ಸಫಲಗೊಳಿಸಿದ್ದೇನೆ ನನಗೆ ಯಾವುದೇ ಅಂಜಿಕೆ ಅಳಿಕಿಲ್ಲ ನನ್ನ ದೇವರು ನನ್ನನ್ನು ಮೆಚ್ಚಿದ್ದಾನೆ. ಆದುದರಿಂದ ನನ್ನನ್ನು ಕರೆಯುತ್ತಾನೆ. ನನ್ನ ಸರದಿ, ಪಾಳಿ ಮುಗಿಯಿತು ಈಗ ನಿಮ್ಮ ನಿಮ್ಮ ಕಾರ್ಯಗಳನ್ನು ನೀವೇ ಮಾಡಿಕೊಳ್ಳಿ ಮುಂತಾದ ಪಾರಮಾರ್ಥಿಕ ಅಂಶಗಳನ್ನು ಈ ಪದದಿಂದ ತಿಳಿಯಲಾಗಿದೆ.

ಉದಾ. ೧. ಯೇಸು ಆ ಹುಳಿರಸವನ್ನು ತಕ್ಕೊಂಡ ಮೇಲೆ ತೀರಿತು ಎಂದು ಹೇಳಿ ತಲೆ ಬಾಗಿಸಿ ಆತ್ಮವನ್ನು ಒಪ್ಪಿಸಿಕೊಟ್ಟನು. (ಸತ್ಯವೇದದ ಹೊಸ ಒಡಂಬಡಿಕೆ, ಯೋಹಾನ, ೧೯ನೇ ಅಧ್ಯಾಯ, ೩೦ನೇ ವಚನ)

ಯೋಹಾನ ಯೇಸುವನ್ನು ನೋಡಿ ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ ಲೋಕದ ಪಾಪವನ್ನು ನಿವಾರಣೆ ಮಾಡುವನು. (ಯೋಹಾನ ೧:೨೯)

೨. ಯೇಸುವಿನ ಶಿಷ್ಯರಲ್ಲೊಬ್ಬರಾದ ಯೂದ ತಪ್ಪಿಲ್ಲದವನನ್ನು ಮರಣಕ್ಕೆ ಒಪ್ಪಿಸಿಕೊಟ್ಟು ಪಾಪ ಮಾಡಿದೆನು ಎಂದನು. (ಹೊಸ ಒಡಂಬಡಿಕೆ, ಮತ್ತಾಯ ೨೭:೪)

ಹೀಗೆ ಯೇಸುವಿನಿಂದ 'ತೀರಿತು' ಎಂಬ ೬ನೇ ಮಾತು ಅಂದರೆ ಯೇಸುವಿಗೆ ಶಿಲುಬೆಯ ಮೇಲೆ ಮರಣದಂಡನೆ ಶಿಕ್ಷೆ ವಿಧಿಸಿದಾಗ ಆತನು ಮಾತಾಡಿದ ನುಡಿ ಇದಾಗಿದೆ. ಲೋಕದ ಜ್ಞಾನಕ್ಕೆ ಸಂಬಂಧಿಸಿ ಹೇಳಿದರೆ 'ತೀರಿತು' ಎಂದರೆ ಕೆಲಸ ಮುಗಿಯಿತು, ವಸ್ತು ಖಾಲಿಯಾಯಿತು, ವ್ಯಕ್ತಿ ತೀರಿಕೊಂಡನು ಹೀಗೆ ಹೇಳುತ್ತೇವೆ. ಆದರೆ ಕ್ರಿಸ್ತನ ಧಾರ್ಮಿಕ ಸಾಹಿತ್ಯದಲ್ಲಿ ಪಾಪದ ವಿಮೋಚನೆ, ಬಿಡುಗಡೆ, ಲೋಕದ ಸಂಕಷ್ಟ ಮುಗಿಯಿತು ಯೇಸುವಿನ ಮರಣದಿಂದ ಎಂಬ ಅರ್ಥಗಳನ್ನು ಗ್ರಹಿಸಲಾಗಿದೆ. ಇದೊಂದು ಕನ್ನಡದಲ್ಲಿ ವಿಶೇಷ ಅರ್ಥ ಕೊಡುತ್ತದೆ ಎಂದು ಹೇಳಬಹುದು.

೪. **ಸೇವೆ:** 'ಸೇವೆ' ಈ ಪದವು ಸಹಿತ ಕ್ರೈಸ್ತ ಸಮುದಾಯದಲ್ಲಿ ವಿಶೇಷವಾಗಿದೆ. ಅಂದರೆ ಸಾಮಾನ್ಯವಾಗಿ ಸೇವೆ ಅಂದರೆ ಗುರು ಹಿರಿಯರಿಗೆ ಪಾಲಕರಿಗೆ ಸೇವೆ ಮಾಡುವುದೇ ಆಗಿದೆ.

ಆದರೆ ಕ್ರೈಸ್ತರು 'ಸೇವೆ' ಎಂದರೆ ಕ್ರಿಸ್ತನ ಸುವಾರ್ತೆಯನ್ನು ಸಾರುವುದೇ ಸೇವೆ ಎಂದು ಅರ್ಥೈಸುವರು ನಗರಗಳು ಗ್ರಾಮಗಳು ಮತ್ತು ಕ್ಯಾಂಪಗಳಿಗೆ ಎಲ್ಲಾ ಕಡೆ ದೇವರ ಹಿತೋಪದೇಶವನ್ನು ತಿಳಿಯಪಡಿಸುವುದೇ ಸೇವೆ ಎಂದು ಕರೆಯುವರು. 'ಲೋಕದ ಕಟ್ಟಕಡೆಯವವರೆಗೆ ನನ್ನ ವಾರ್ತೆ ತಿಳಿಸಿರಿ' ಎಂದು ಯೇಸು ಹೇಳಿದರ ನಿಮಿತ್ತವಾಗಿ ಸೇವೆಯನ್ನು ಮಾಡುತ್ತಿದ್ದಾರೆ.

ಉದಾ. ೧. ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾ ಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲ ಕಾಪಾಡಿಕೊಳ್ಳುವಂತೆ ಅವರಿಗೆ ಉಪದೇಶ ಮಾಡಿರಿ. (ಹೊಸ ಒಡಂಬಡಿಕೆ, ಮತ್ತಾಯ ೨೮:೧೮-೨೦)

೨. ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷೆಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು. (ಹೊಸ ಒಡಂಬಡಿಕೆ ಮಾರ್ಕ, ೧೬:೧೬-೧೭)

ಹೀಗೆ ಮೇಲಿನ ವಾಕ್ಯೋಪದೇಶಗಳನ್ನು ಅವಲೋಕಿಸಿದಾಗ ಕ್ರೈಸ್ತರಲ್ಲಿ ಹೆಚ್ಚಾಗಿ 'ಸೇವೆ' ಎಂಬ ಪದವು ಸಾಮಾನ್ಯವಾಗಿ ಬಳಕೆಯಾಗುವ ತಂದೆ-ತಾಯಿಗಳ ಸೇವೆ, ಗುರು-ಹಿರಿಯರ ಸೇವೆ, ಬಂಧು-ಬಳಗದವರ ಬಗ್ಗೆ ಗೌರವ ಎಂಬ ಅರ್ಥಗಳನ್ನು ಹೊರತುಪಡಿಸಿ ಧಾರ್ಮಿಕವಾಗಿ ದೇವರ ಬಗ್ಗೆ ಇಟ್ಟುಕೊಂಡಿರುವ ನಂಬಿಕೆ ನಿರೀಕ್ಷೆ ವಿಶ್ವಾಸದಿಂದ ಆತ್ಮಿಕ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಯೇಸುಕ್ರಿಸ್ತನ ಜನನ ಮರಣ ಪುನರುತ್ಥಾನದ ಬಗ್ಗೆ ಎಲ್ಲಕ್ಕಿಂತ ಮಿಗಿಲಾಗಿ ಯೇಸುವಿನ ಅಥವಾ ತ್ರೈಯೇಕ ದೇವರ ಪ್ರೀತಿಯನ್ನು ತೋರ್ಪಡಿಸುವುದಾಗಿದೆ. ಅದನ್ನೇ 'ಸೇವೆ' ಎಂದು ಸಂಬೋಧಿಸುವರು. ಇದು ಸಹ ಕನ್ನಡ ಶಬ್ದಕೋಶಕ್ಕೆ ಹೊಸ ಅರ್ಥ ನೀಡಿದಂತಾಗಿದೆ.

ಹಾಗೆಯೇ ಈ 'ಸೇವೆ' ಎಂಬ ಶಬ್ದದಿಂದ 'ಶಿಷ್ಯ', 'ದೀಕ್ಷೆ', 'ಉಪದೇಶ', 'ಸುವಾರ್ತೆ' ಹಾಗೂ 'ರಕ್ಷಣೆ' ಎಂಬ ನಾನಾ ಶಬ್ದಗಳ ದರ್ಶನವಾಗುತ್ತದೆ. ಅಂದರೆ ಸೇವೆಯಿಂದ ಸುವಾರ್ತೆ ಆರಂಭವಾಗುತ್ತದೆ. ಸುವಾರ್ತೆಯಿಂದ ಶಿಷ್ಯರಾಗುತ್ತಾರೆ. ಶಿಷ್ಯರಾಗಿ ದೀಕ್ಷೆ ಪಡೆಯುತ್ತಾರೆ. ದೀಕ್ಷೆಯಿಂದ ರಕ್ಷಣೆ ಹೊಂದುತ್ತಾರೆ ಎಂದು ಹೇಳಬಹುದು. ಒಂದು ಶಬ್ದದಿಂದ ಕ್ರೈಸ್ತ ಧಾರ್ಮಿಕ ಸಾಹಿತ್ಯದ ಮೂಲಕ ಹಲವಾರು ಶಬ್ದಗಳನ್ನು ಗ್ರಹಿಸಬಹುದು.

೫. ಪ್ರಾರ್ಥನೆ: ಪ್ರಾರ್ಥನೆಯೆಂಬುದು ಎಲ್ಲಾ ಧರ್ಮೀಯರಂತೆ ಬೇಡಿಕೊಳ್ಳುದಾದರೂ ಇಲ್ಲಿ ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೋಗಿ ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು ಅದು ಮಾತ್ರ ಪ್ರಾರ್ಥನೆಯಾಗುವುದು ಎನ್ನುವರು. ಎರಡನೆ ವ್ಯಕ್ತಿ ನೋಡುವ ಹಾಗೆ ಬೀದಿ ಚೌಕಗಳಲ್ಲಿ ಪ್ರಾರ್ಥನೆ ಬೇಡ ಅದು ದೇವರಿಗೆ ಇಷ್ಟವಿಲ್ಲ ಎಂದು ಕ್ರೈಸ್ತ ಧರ್ಮ ಹೇಳುವುದು.

ಇದು ಸಾಮಾನ್ಯವಾಗಿ ಬೇಡಿಕೆ, ವಿಜ್ಞಾಪನೆ, ಭಿನ್ನಹ, ನಿವೇದನೆ ಎಂಬ ಅರ್ಥಗಳನ್ನು ಕನ್ನಡ ಶಬ್ದಕೋಶದಲ್ಲಿ ಗಮನಿಸುತ್ತೇವೆ. ಅಂದರೆ ಯಾವುದೇ ವಸ್ತು ವಿಷಯ ವ್ಯಕ್ತಿ ಅಥವಾ ಆಧ್ಯಾತ್ಮಿಕವಾಗಿಯೂ ಈ ಪ್ರಾರ್ಥನೆ ಪದವನ್ನು ಬಳಸುತ್ತೇವೆ. ಆದರೆ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಪ್ರಾರ್ಥನೆ ಎಂದರೇನು ಹೇಗಿರಬೇಕು ಪ್ರಾರ್ಥನೆ ಎಂಬ ಹೊಸ ಅರ್ಥವನ್ನು ಗಮನಿಸಲಾಗಿದೆ.

ಉದಾ. ೧. ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲ ಕೊಡುವನು. (ಸತ್ಯವೇದದ ಹೊಸ ಒಡಂಬಡಿಕೆಯಲ್ಲಿ ಮತ್ತಾಯ ೬:೬)

೨. ಬೇಡಿಕೊಳ್ಳಿರಿ ನಿಮಗೆ ದೊರೆಯುವುದು ಹುಡುಕಿರಿ ನಿಮಗೆ ಸಿಕ್ಕುವುದು ತಟ್ಟಿರಿ ನಿಮಗೆ ತೆರೆಯುವುದು ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು ಹುಡುಕುವವನಿಗೆ ಸಿಕ್ಕುವುದು ತಟ್ಟುವವನಿಗೆ ತೆರೆಯುವುದು (ಮತ್ತಾಯನು ಬರೆದ ಸುವಾರ್ತೆ (೭ನೇ ಅಧ್ಯಾಯ ೭ ರಿಂದ ೮) ೭:೭–೮)

೩. ಯೆಹೋವನ ಸನ್ನಿಧಿಯಲ್ಲಿ ಶಾಂತನಾಗಿ ಆತನಿಗೋಸ್ಕರ ಕಾದಿರು (ಸ.ಹ.ಒ. ಕೀರ್ತನೆಗಳು ೩೭:೭)

೪. ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು (ಹೊ.ಬ. ಯಾಕೋಬ ೪:೮)

೫. ದೇವರೇ ನಿನ್ನ ಕೂಗನ್ನು ಕೇಳಿ ನನ್ನ ಪ್ರಾರ್ಥನೆಗೆ ಕಿವಿಗೊಡು. ನಾನು ಎದೆಗುಂದಿದವನಾಗಿ ಭೂಮಿಯ ಕಡೇ ಭಾಗದಿಂದ ನಿನಗೆ ಮೊರೆಯಿಡುತ್ತೇನೆ. ನಾನು ಹತ್ತಲಾರದ ಆಶ್ರಯಗಿರಿಯ ಮೇಲೆ ನನ್ನನ್ನು ಹತ್ತಿಸು (ಹ.ಒ. ಕೀರ್ತನೆಗಳು ೬೧:೧–೨)

ಹೀಗೆ ಮೇಲಿನ ಎಲ್ಲಾ ವಾಕ್ಯ ಭಾಗಗಳನ್ನು ಗಮನಿಸಿದಾಗ 'ಪ್ರಾರ್ಥನೆ' ಎಂಬ ಪದಕ್ಕೆ ಹಲವು ಅರ್ಥಗಳು ಅಂದರೆ ಕೂಗು, ಬೇಡು, ತಟ್ಟು, ಹುಡುಕು, ಸಮೀಪಕ್ಕೆ ಬಾ ಅಲ್ಲದೆ ಕಾಯುವುದು ಎಂಬೆಲ್ಲಾ ಹೊಸ ಹೊಸ ಅರ್ಥ ರೂಪಗಳನ್ನು ಗ್ರಹಿಸಲಾಗಿದೆ.

೬. ಉಪವಾಸ: ಕ್ರೈಸ್ತರು ಈ ಉಪವಾಸ ಪದವನ್ನು ಸಹಿತ ಹೆಚ್ಚಾಗಿ ಬಳಸುವರು ಅಲ್ಲದೆ 'ಉಪವಾಸ' ಅಂದರೆ ಸಾಮಾನ್ಯವಾಗಿ ಊಟವನ್ನು ಬಿಡುವುದು ನೋಡಗರಿಗೆ ಗೊತ್ತಾಗುವಂತೆ ಮಾಡುವುದು ಆಗಿದೆ. ಆದರೆ ಇಲ್ಲಿ ಉಪವಾಸ ಮಾಡಬೇಕಾದರೆ ತಲೆಗೆ ಎಣ್ಣೆ ಹಚ್ಚಿಕೊಂಡು ಶುಭ್ರವಾಗಿ ನಗುತ್ತಾ ಲವಲವಿಕೆಯಿಂದ ಇರಬೇಕು ನಾನು ಉಪವಾಸವಿರುವೆ ಎಂದು ಯಾರಿಗೂ ಗೊತ್ತಾಗಬಾರದು ಆ ಸ್ಥಿತಿಯನ್ನು ಕಾಯ್ದುಕೊಳ್ಳಬೇಕು ಎಂದು ಕ್ರೈಸ್ತ ಸಾಹಿತ್ಯದಲ್ಲಿ ಉಪವಾಸ ಅದರ ಅರ್ಥವನ್ನು ಗ್ರಹಿಸುವರು. ಈ ಉಪವಾಸದಲ್ಲಿ ಕಪಟ, ಅಂಶಿಕ, ಸಾರ್ಥಕ, ಆತ್ಮೀಕ ಮತ್ತು

ಸಂಪೂರ್ಣ ಉಪವಾಸ ಎಂದು ವಿಭಾಗಿಸುವರು. ಹೀಗೆ ಅನೇಕ ವಿಶೇಷಾರ್ಥ ನೀಡುವ ಕ್ರೈಸ್ತರ ಕನ್ನಡ ಪದಗಳನ್ನು ಗಮನಿಸಲಾಗಿದೆ.

೭. ಸಭೆ: ಸಾಮಾನ್ಯವಾಗಿ ಸಭೆ ಎಂದರೆ ಕನ್ನಡ ನಿಘಂಟುವಿನ ಪ್ರಕಾರ ಒಂದು ಉದ್ದೇಶಕ್ಕಾಗಿ ಕಲಿತ, ಜನಗಳ ಸಮುದಾಯ, ಪರಿಷತ್ತು, ಗೋಷ್ಠಿ ಎಂದು ಅರ್ಥೈಸುತ್ತೇವೆ. ಅಲ್ಲದೆ ಅದನ್ನು ಸಭೆಯಾಗಿ ಪಾಲಿಸುತ್ತೇವೆ ಎಂದು ಗಮಿಸಬಹುದು. ಆದರೆ ಕ್ರೈಸ್ತ ಧಾರ್ಮಿಕ ವಲಯಕ್ಕೆ ಬಂದಾಗ ಈ 'ಸಭೆ' ಎಂಬ ಪದವು ಅರ್ಥ ಭಿನ್ನತೆಯನ್ನು ಪಡೆಯುತ್ತದೆ. ಹೊಸ ಅರ್ಥವನ್ನು ನೀಡುತ್ತದೆ. ಅದು ಕನ್ನಡ ಭಾಷಿಕ ವ್ಯವಸ್ಥೆಗೆ (ಬೆಳಕಿಗೆ) ಪೂರಕವಾಗಿ ಕಾರ್ಯನಿರ್ವಹಿಸಬಹುದು.

'ಸಭೆ' ಎಂದರೆ ಕ್ರೈಸ್ತ ಧರ್ಮ ಗ್ರಂಥದ ಪ್ರಕಾರ ಅಂದರೆ ರೋಮಾಪುರದವರಿಗೆ ಬರೆದ ಪತ್ರಿಕೆ ೧೨:೫ನೇ ವಚನದಲ್ಲಿ "ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ" ಎಂದು ಬರೆಯಲ್ಪಟ್ಟಿದೆ. ಇಲ್ಲಿ 'ಸಭೆ'ಯ ಅರ್ಥ 'ಒಂದೇ' ಎಂದು ಬೇರೆಯಲ್ಲ ಎಂಬ ಅರ್ಥ ನೀಡುತ್ತದೆ. ಹಾಗೆಯೇ ಎಫಸರದವರಿಗೆ ಬರೆದ ಪತ್ರಿಕೆ ೪:೪–೬ರಲ್ಲಿ ನೋಡುವುದಾದರೆ "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು. ಒಂದೇ ಆತ್ಮವನ್ನು ಹೊಂದಿದವರು ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು" ಎಂದು ಉಲ್ಲೇಖಿತವಾಗಿದೆ. ಇಲ್ಲಿ 'ಸಭೆ' ಎಂದರೆ 'ಕರೆಯಲ್ಪಟ್ಟವರು' ಎಂದು ಅರ್ಥ ನೀಡುತ್ತದೆ. ಹಾಗೆಯೇ ಸಭೆಯೆಂದರೆ ಚರ್ಚು, ವಿಚಾರಣೆ, ಸೇವೆ ಹಾಗೂ ಒಳ್ಳೆಯ ಮನೆವಾರ್ತೆಯವನು ಎಂಬ ಅರ್ಥಗಳನ್ನು ನೀಡುತ್ತದೆ.

೮. ಪ್ರೀತಿ: ಪ್ರೀತಿ ಎಂದರೆ ನಮ್ಮ ನಿಘಂಟುವಿನ ಪ್ರಕಾರ ಸಂತೋಷ, ಆನಂದ, ಸ್ನೇಹ, ಗೆಳೆತನ, ಒಲವು ಮತ್ತು ಅನುರಾಗ ಎಂದು ತಿಳಿದಿದ್ದೇವೆ. ಈ ಎಲ್ಲಾ ಪದಗಳು ಪ್ರೀತಿಗೆ ನೀಡುವ ಸಮಾನಾರ್ಥಗಳು ಎನ್ನಬಹುದು. ಆದರೆ ಪ್ರಸ್ತುತ ನಾವು ಕ್ರೈಸ್ತ ಧಾರ್ಮಿಕ ಗ್ರಂಥದಲ್ಲಿ ರಚನೆಯಾದ 'ಪ್ರೀತಿ' ಪದಕ್ಕೆ ಬೇರೆಯದೇ ಪದ(ಹೊಸ)ಗಳನ್ನು ಕಂಡುಕೊಳ್ಳಬಹುದು. ಉದಾ. ಯೋಜಕಕಾಂಡ ೧೯ನೇ ಅಧ್ಯಾಯ ೧೮, ಧರ್ಮೋಪದೇಶ ಕಾಂಡ ೬:೪–೫, ಮಾರ್ಕನು ಬರೆದ ಸುವಾರ್ತೆ ೧೨:೨೮, ೨೯,೩೦,ರವರೆಗೆ ಕ್ರಮವಾಗಿ ಓದಿದಾಗ ನಿಮ್ಮ ಸ್ವಜನರಲ್ಲಿ ಯಾರಿಗಾದರೂ ಕೇಡಿಗೆ ಕೇಡನ್ನು ಮಾಡದೆ ಮನಸ್ಸಿನಲ್ಲಿ ಮತ್ಸರವನ್ನು ಇಟ್ಟುಕೊಳ್ಳದೆ ನಿಮ್ಮ ನೆರೆಯವನನ್ನು ನಿಮ್ಮಂತೆಯೇ ಪ್ರೀತಿಸಬೇಕು. ನಾನು ಯೆಹೋವನು. ಇಸ್ರಾಯೇಲರೆ, ಕೇಳಿರಿ, ನಮ್ಮ ದೇವರಾದ ಯಹೋವನು ಒಬ್ಬನೇ ದೇವರು ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯ, ಪ್ರಾಣ ಹಾಗೂ ಶಕ್ತಿಯಿಂದಲೂ ಪ್ರೀತಿಸಬೇಕು ಎಂದು ಬರೆದಿದೆ. ಇಲ್ಲಿ ಈ ವಾಕ್ಯಗಳನ್ನು ಗಮನಿಸಿದಾಗ 'ಪ್ರೀತಿ' ಎಂದರೆ ದೇವರಿಗೆ ಮೆಚ್ಚಿಕೆಯಾದ ರೀತಿಯಲ್ಲಿ ನಡೆಯುವುದು, ನೆರೆಯವರನ್ನು ಪ್ರೀತಿಸುವುದು, ದೇವರನ್ನು ಸಂಪೂರ್ಣವಾಗಿ ನಂಬುವುದು, ಅಲ್ಲದೆ ದೇವರ ಕೊಟ್ಟ 'ಆಜ್ಞೆ'ಯೆಂತಲೂ ಕರೆಯಬಹುದು. ಇದು ಕನ್ನಡದಲ್ಲಿ ಇಲ್ಲದ ಅರ್ಥವನ್ನು ಇಲ್ಲಿ ಮೈಗೂಡಿಸಿಕೊಂಡಿದೆ ಎಂದು ಹೇಳಬಹುದು.

ನಿಘಂಟು	**ಕ್ರೈಸ್ತ ಧರ್ಮ**
ಸ್ನೇಹ, ಗೆಳೆತನ	ದೇವರನ್ನು ಮೆಚ್ಚಿಸುವ ರೀತಿ
ಸಂತೋಷ, ಆನಂದ	ದೇವರನ್ನು ನಂಬುವ ರೀತಿ
ಒಲವು, ಅನುರಾಗ	ಗೇವರ ಆಜ್ಞೆಯನ್ನು ಪಾಲಿಸುವುದು,
	ನೆರೆಯವರನ್ನು ಪ್ರೀತಿಸುವುದು.

ಹೀಗೆ ಇನ್ನುಳಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

ಪಶ್ಚಾತ್ತಾಪ	
ಮರುಗುವಿಕೆ	ದೇವರ ಮಾತಿಗೆ ಕಿವಿಗೊಡಿರಿ
	(ಧರ್ಮೋಪದೇಶ ಕಾಂಡ ೪:೩೦–೩೧)
	ಪಾಪಿಯಾದ ನನ್ನನ್ನು ಕರುಣಿಸು ಎಂದು ಬೇಡುವುದು (ಲೂಕ ೧೮:೯–೧೪)
ಬಡವ	
ಕೃಶನಾದವನು, ಸೊರಗಿದವನು	ಧನ್ಯತೆ (ಲೂಕ ೧:೪೬–೫೮)
ನಿರ್ಗತಿಕ, ದರಿದ್ರ	ಯಥಾರ್ಥತೆ (ಯೇಶಾಯ ೫೮:೧–೯)
	ದಯೆ ದೀನತೆ (ಮತ್ತಾಯ ೨೫:೩೧–೪೬)
	ತಾಳ್ಮೆ
ವ್ಯಭಿಚಾರ	
ಹಾದರ, ವಿಷಯ ಲಂಪಟತೆ	ಪರಸ್ತ್ರೀಯರನ್ನು ಕಣ್ಣಿನಿಂದ ಮೋಹಿಸುವುದು
ನೀತಿಗೆಟ್ಟ, ನಿಯಮಬಾಹಿರ	(ಮತ್ತಾಯ ೫:೨೭–೩೨)
	ಶರೀರಾಧೀನತೆ, ಜಾರತ್ವ
	(ಗಲಾತ್ಯದವರಿಗೆ ೫:೧೩–೨೪)
ಮದುವೆ	
ಲಗ್ನ, ವಿವಾಹ	ಗಂಡನಿಗೆ ಹೆಂಡತಿ ವಿಧೇಯಳಾಗಿರುವುದು
	ಪರಸ್ಪರ ಪ್ರೀತಿ, ಭಯ ಭಕ್ತಿಯಲ್ಲಿರುವುದು
	(ಎಫೆಸನವರಿಗೆ ೫:೨೨–೩೩)

ಪುನರುತ್ಥಾನ

ಮತ್ತೆ ಅಭಿವೃದ್ಧಿ, ಮತ್ತೆ ಚೈತನ್ಯ

ಯೇಸು ಮರಣವನ್ನು ಜಯಿಸಿದ್ದಾನೆ

ಸತ್ತವನು ಬದುಕಿದ್ದಾನೆ

(ಮತ್ತಾಯ ೨೭:೫೭-೨೮:೨೦)

ಸತ್ತು ಮೂರನೆ ದಿನ ಎದ್ದಿದ್ದಾನೆ ಎಂದು ಆಚರಿಸುವ ಹಬ್ಬ ಈಸ್ಟರ್.

ಹೀಗೆ ಇನ್ನು ಹಲವು ಸತ್ಯವೇದದ ವಚನಗಳನ್ನು ಗ್ರಹಿಸಬಹುದು. ಈ ಮೇಲಿನ ಎಲ್ಲಾ ವಾಗ್ದಾನಗಳು (ವಚನ) ಬೈಬಲಿನಲ್ಲಿ ಬಳಕೆಯಾಗಿದ್ದು ನಮ್ಮ ಸಾಮಾನ್ಯ ಭಾಷೆ ಕನ್ನಡ ಅಥವಾ ಕನ್ನಡ ನಿಘಂಟುವಿನ ಪ್ರಕಾರ ಇರುವ ಅರ್ಥಗಳನ್ನು ಹೊರತುಪಡಿಸಿ ಇನ್ನು ಹೊಸ ಹೊಸ ಅರ್ಥಗಳನ್ನು ಹೇಳುವ ಗ್ರಂಥ ಬೈಬಲ್ (ಸತ್ಯವೇದ) ಗ್ರಂಥವಾಗಿದೆ ಎನ್ನಬಹುದು.

ಕಾಲಜ್ಞಾನ

ಸಾಮಾನ್ಯವಾಗಿ ಕಾಲಜ್ಞಾನ ಎಂದರೆ ಮುಂದಿನ ಘಟನೆಗಳನ್ನು ತಿಳಿಸುವುದಾಗಿದೆ. ಕನ್ನಡ ನಿಘಂಟಿನ ಪ್ರಕಾರ ಮುಂದೆ ಆಗುವುದನ್ನೆಲ್ಲ ತಿಳಿಯುವುದಾಗಿದೆ. ಭವಿಷ್ಯಜ್ಞಾನ ಅಥವಾ ಭವಿಷ್ಯದ ಕಥನ ಎಂದು ನಂಬುತ್ತೇವೆ. ಅಂದರೆ ಮುಂದೆ ಆಗುವ ಎಲ್ಲಾ ಸಂಗತಿಗಳನ್ನು ಕೂಲಂಕಷವಾಗಿ ಬಿಚ್ಚಿ ಹೇಳುವಂತಹ ಒಂದು ಪ್ರಕಾರಕ್ಕೆ ಕಾಲಜ್ಞಾನ ಎನ್ನುತ್ತೇವೆ. ಕಾಲಜ್ಞಾನವನ್ನು ಆಡುಮಾತಿನಲ್ಲಿ ಶಾಸ್ತ್ರ, ಪಂಚಾಂಗ, ಜ್ಯೋತಿಷ್ಯ ಅಥವಾ ಹೇಳಿಕೆಯಂತಲೂ ಕರೆಯಬಹುದು. ಅಂತಹ ಒಂದು ವಿಶಿಷ್ಟ ಜ್ಞಾನವನ್ನು ಕಾಲಜ್ಞಾನ ಪರಿಕಲ್ಪನೆ ಎಂದು ಕರೆಯುತ್ತಾರೆ. ಈ ಒಂದು ವಿಚಾರವನ್ನು ಕನ್ನಡ ಕ್ರೈಸ್ತ ಧಾರ್ಮಿಕ (ಬೈಬಲ್) ಸಾಹಿತ್ಯದಲ್ಲಿ ಕಂಡುಕೊಳ್ಳಲಾಗಿದೆ. ಅದರಲ್ಲಿ ಬಳಕೆಯಾಗಿರುವ ವಿಶಿಷ್ಟ ಹೊಸ ಹೊಸ ಕನ್ನಡ ಪದಗಳನ್ನು ಗುರ್ತಿಸಬಹುದಾಗಿದೆ. ಮತ್ತಾಯ ೨೪ನೇ ಅಧ್ಯಾಯದಲ್ಲಿ ಯೇಸು ಯೆರೂಸಲೇಂನ ನಾಶನವನ್ನು ಯುಗದ ಸಮಾಪ್ತಿಯನ್ನು ಕುರಿತು ಕಾಲಜ್ಞಾನವನ್ನು ಹೇಳಿದ್ದು ಮತ್ತು ಆದಿಕಾಂಡ ೪೯:೧-೨೮ರ ವರೆಗೆ ೧೨ ಕುಲಗಳ ಕಾಲಜ್ಞಾನ ಹೇಳಿರುವುದನ್ನು ಈ ಕೆಳಕಂಡಂತೆ ಗುರ್ತಿಸಿ ಅದರೊಳಗಿನ ಹೊಸ ಪದ ರಚನೆಗಳನ್ನು ಗಮನಿಸಲಾಗಿದೆ. ಉದಾ.

ಇಸ್ರಾಯೇಲರು ತನ್ನಿಂದ ಉಂಟಾಗುವ ೧೨ ಕುಲಗಳ ವಿಷಯವಾಗಿ ಕಾಲಜ್ಞಾನ ಹೇಳಿದ್ದು

ಯಾಕೋಬನು ತನ್ನ ಮಕ್ಕಳನ್ನು ಕರೆಸಿ ನೀವೆಲ್ಲರೂ ಕೂಡಿ ಬನ್ನಿರಿ. ಮುಂದಿನ ಕಾಲದಲ್ಲಿ ನಿಮಗೆ ಸಂಭವಿಸುವುದನ್ನು ತಿಳಿಸುತ್ತೇನೆ. ಯಾಕೋಬನ ಮಕ್ಕಳೇ ನೀವೆಲ್ಲರೂ ಕೂಡಿ ಬಂದು ಕೇಳಿರಿ- ನಿಮ್ಮ ತಂದೆಯಾದ ಇಸ್ರಾಯೇಲನ ಮಾತನ್ನು ಲಾಲಿಸಿರಿ. ರೂಬೇನನೇ ನೀನು ನನ್ನ ಚೊಚ್ಚಲ ಮಗನು, ನನ್ನ ಚೈತನ್ಯ ಸ್ವರೂಪನು, ನನ್ನ ವೀರ್ಯಕ್ಕೆ ಪ್ರಥಮ ಫಲವು, ಗೌರವದಲ್ಲಿಯೂ ಅಧಿಕಾರದಲ್ಲಿಯೂ ಪ್ರಮುಖನು ಆಗಿದ್ದಿ. ಆದರೂ ದಡವನ್ನು ಮೀರಿದ ಪ್ರವಾಹದಂತಿರುವ ಇನ್ನು

ಪ್ರಮುಖನ ಸ್ಥಾನದಲ್ಲಿ ಇರುವುದಿಲ್ಲ. ನಿನ್ನ ತಂದೆಯ ಹಾಸಿಗೆಯನ್ನು ಹತ್ತಿ ಅದನ್ನು ಹೊಲೆ ಮಾಡಿದಿಯಲ್ಲಾ. ಇವನು ನನ್ನ ಮಂಚವನ್ನು ಹತ್ತಿದನು.

ಸೀಮೆಯೋನನು ಲೇವಿಯೂ ಅಣ್ಣ ತಮ್ಮಂದಿರೇ ಸರಿ, ಇವರ ಕತ್ತಿಗಳು ಬಲಾತ್ಕಾರದ ಆಯುಧಗಳೇ, ನನ್ನ ಪ್ರಾಣವೇ ಅವರ ಗುಪ್ತವಾದ ದುರಾಲೋಚನೆಗೆ ನೀನು ಒಳಪಡಬಾರದು. ನನ್ನ ಮನವೇ ಅವರ ಗುಂಪಿಗೆ ನೀನು ಸೇರಬೇಡ. ಅವರು ಕೋಪೋದ್ರೇಕದಿಂದ ಮನುಷ್ಯರನ್ನು ಸಂಹರಿಸಿದರು. ಮದದಿಂದ ಎತ್ತುಗಳನ್ನು ಊನಪಡಿಸಿದರು. ಅವರ ಕೋಪವು ಭಯಂಕರವಾಗಿಯೂ, ಅವರ ರೌದ್ರವು ಕ್ರೂರವಾಗಿಯೂ ಇದೆ. ಅದಕ್ಕೆ ಶಾಪ ಉಂಟಾಗಲಿ.

ಯಾಕೋಬನ ಕುಲದವರಲ್ಲಿ ಅವರನ್ನು ವಿಭಾಗಿಸುವೆನು. ಇಸ್ರಾಯೇಲರಲ್ಲಿ ಅವರನ್ನು ಚದರಿಸುವೆನು. ಯೆಹೋವನೆ ನಿನ್ನ ಅಣ್ಣತಮ್ಮಂದಿರು ನಿನ್ನನ್ನೇ ಸ್ತುತಿಸುವರು. ನಿನ್ನ ಕೈ ನಿನ್ನ ಶತ್ರುಗಳ ಕುತ್ತಿಗೆಯ ಮೇಲಿರುವುದು. ನಿನ್ನ ಸಹೋದರರು ನಿನಗೆ ಎರಗುವರು. ಯೆಹೋದನು ಪ್ರಾಯದ ಸಿಂಹದಂತಿದ್ದಾನೆ. ನನ್ನ ಪುತ್ರನೇ ನೀನು ಮೃಗವನ್ನು ಹಿಡುದು ಕೊಂದು ಬೆಟ್ಟವನ್ನು ಸೇರಿದ ಸಿಂಹಾದೋಪಾದಿಯಲ್ಲಿದ್ದೀ. ಅವನು ಸಿಂಹದಂತೆ ಕಾಲು ಮುದುರಿ ಹೊಂಚು ಹಾಕಿಕೊಂಡಿದ್ದಾನೆ. ಮೃಗೇಂದ್ರನಿಗೆ ಸಮಾನನಾದ ಇವನನ್ನು ಕೆಣಕುವುದು ಯಾರಿಂದಾದೀತು. ರಾಜದಂಡವನ್ನು ಹಿಡಿತಕ್ಕವನು ಬರುವತನಕ ಆ ದಂಡವು ಯೆಹೋದನ ಕೈಯಿಂದ ತಪ್ಪುವುದಿಲ್ಲ.

ಮುದ್ರೆ ಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ. ಅವನಿಗೆ ಅನ್ಯ ಜನಗಳು ವಿಧೇಯರಾಗಿರುವರು. ಅವನು ತನ್ನ ವಾಹನ ಪಶುವನ್ನು ದ್ರಾಕ್ಷಾ ಲತೆಗೆ ಕಟ್ಟುವನು. ರಾಜ ದ್ರಾಕ್ಷೆಗೆ ತನ್ನ ಕತ್ತೆಯನ್ನು ಬಿಗಿಯುವನು. ದ್ರಾಕ್ಷಾರಸದಲ್ಲಿ ತನ್ನ ಬಟ್ಟೆಗಳನ್ನು ಒಗೆಯುವನು. ದ್ರಾಕ್ಷಾರಸದಲ್ಲಿಯೇ ತನ್ನ ವಸ್ತ್ರಗಳನ್ನು ಅದ್ದಿ ತೊಳೆಯುವನು. ದ್ರಾಕ್ಷಾರಸದ ಸಮೃದ್ದಿಯಿಂದ ಅವನ ಕಣ್ಣುಗಳು ಕೆಂಪಾಗಿಯೇ ಇರುವವು. ಹಾಲಿನ ಸಮೃದ್ಧಿಯಿಂದ ಅವನ ಹಲ್ಲುಗಳು ಬೆಳ್ಳಗಾಗಿಯೇ ಇರುವವು.

ಜೆಬುಲೋನನು ಸಮುದ್ರದ ಕರಾವಳಿಯಲ್ಲಿ ವಾಸ ಮಾಡುವನು. ಅವನಿಗೆ ಹಡಗುಗಳು ಸೇರುವ ರೇವು ಇರುವುದು. ಅವನ ಸೀಮೆಯ ಒಂದು ಮೇರೆ ಚಿದೋನಿಗೆ ಮುಟ್ಟುವುದು. ಇಸ್ಸಾಕಾರನು ಕುರಿಹಟ್ಟಿಗಳ ನಡುವೆ ಮಲಗಿಕೊಂಡ ಬಲವುಳ್ಳ ಕತ್ತೆಯಂತಿರುವನು. ತಾನು ಸೇರಿದ ಪ್ರದೇಶವು ವಿಶ್ರಾಂತಿಗೆ ಅನುಕೂಲವು, ಸುಖಾಸ್ಪದವು ಆಗಿರುವುದನ್ನು ನೋಡಿ ಅವನು ಹೊರೆಯನ್ನು ಹೊರುವುದಕ್ಕೆ ಬೆನ್ನು ಬಗ್ಗಿಸಿಕೊಂಡು ಬಿಟ್ಟೀ ಕೆಲಸವನ್ನು ಮಾಡುವವನಾದನು. ದಾನನು ಇಸ್ರಾಯೇಲರ ಕುಲಗಳಿಗೆ ಯೋಗ್ಯನಾಗುವ ರೀತಿಯಲ್ಲಿ ತನ್ನ ಜನರ ವ್ಯಾಜ್ಯವನ್ನು ಜಯಕ್ಕೆ ತರುವನು. ದಾನನು ದಾರಿಯಲ್ಲಿರುವ ಹಾವಿನಂತೆಯೂ ಮಾರ್ಗದಲ್ಲಿ ಕುದುರೆಯ ಹಿಮ್ಮಡಿಯನ್ನು ಕಚ್ಚಿ ಸವಾರರನ್ನು ಕೆಡಹುವ ವಿಷ ಸರ್ಪದಂತೆಯೂ ಆಗಿರುವನು. ಯೆಹೋವನೇ ನಿನ್ನಿಂದುಂಟಾಗುವ ರಕ್ಷಣೆಯು ಯಾವಾಗ ಆಗುವುದೋ ಎಂದು ನಿರೀಕ್ಷಿಸಿಕೊಂಡಿದ್ದೇನೆ.

ಗಾದನ ಸಂಗತಿ– ಸುಲಿಗೆ ಮಾಡುವವರು, ದಂಡೆತ್ತಿ ಅವನ ಮೇಲೆ ಬೀಳಲು ಇವನು ಅವರನ್ನು ಹಿಮ್ಮೆಟ್ಟಿಸಿಕೊಂಡು ಹೋಗುವನು. ಆಶೇರನಿಗೆ ಧಾನ್ಯಸಮೃದ್ಧಿಯಾಗುವುದು. ಅವನಲ್ಲಿ ರಾಜಭೋಗ್ಯವಾದ ಪದಾರ್ಥಗಳು ದೊರಕುವವು. ನಫ್ತಾಲಿ ಬಿಡಿಸಿಕೊಂಡಿರುವ ಜಿಂಕೆಯಂತಿದ್ದಾನೆ. ಅವನಿಂದ ಇಂಪಾದ ಮಾತುಗಳು ಉಂಟಾಗುತ್ತವೆ. ಯೋಸೇಫನು ಬಹು ಫಲವನ್ನು ವೃಕ್ಷಕ್ಕೆ ಸಮಾನನಾಗಿದ್ದಾನೆ. ಒರತೆಯ ಬಳಿಯಲ್ಲಿ ಬೆಳೆದು ರೆಂಬೆಗಳನ್ನು ಗೋಡೆಯ ಆಚೆಗೆ ಚಾಚಿರುವ ಫಲವೃಕ್ಷದಂತಿದ್ದಾನೆ. ಬಿಲ್ಲುಗಾರರು ಬಂದು ಅವನನ್ನು ಕೆಣಕಿ ಬಾಣ ಎಸೆದು ಕವಿದುಕೊಂಡರು. ಆದರೂ ಯಾಕೋಬನ ವಂಶಸ್ಥರನ್ನು ರಕ್ಷಿಸುವ ಪರಾಕ್ರಮಿಯ ಬುಜಭಲದಿಂದಲೂ ಇಸ್ರಾಯೇಲನಿಗೆ ಪಾಲಕನೂ, ಬಂಡೆಯೂ ಆಗಿರುವಾತನ ಕಡೆಯಿಂದಲು ಅವನ ಬಿಲ್ಲು ಸ್ಥಿರವಾಗಿ ನಿಂತಿತು. ಅವನ ಕೈಗಳು ಚುರುಕಾಗಿ ಮಾಡಲ್ಪಟ್ಟವು. ಇದು ನಿನ್ನ ತಂದೆಯ ದೇವರಿಂದಾಯಿತು. ಆತನು ನಿನಗೆ ಸಹಾಯ ಮಾಡಲಿ, ಸರ್ವಶಕ್ತನಾದ ದೇವರಿಂದಾಯಿತು ಆತನು ನಿನ್ನನ್ನು ಆಶೀರ್ವದಿಸಲಿ, ಆತನ ಮೇಲಣ ಆಕಾಶದಿಂದಲೂ, ಕೆಳಗಣ ಸಾಗರದ ಸೆಲೆಗಳಿಂದಲೂ, ಸ್ತನ್ಯದಿಂದಲೂ, ಗರ್ಭದಿಂದಲೂ ಉಂಟಾಗುವ ಸೌಭಾಗ್ಯಗಳನ್ನು ಕೊಟ್ಟು ನಿನ್ನನ್ನು ಆಶೀರ್ವದಿಸಲಿ. ನಿನ್ನ ತಂದೆಯ ಆಶೀರ್ವಾದಗಳು ಆದಿಯಿಂದಿದ್ದ ಪರ್ವತಗಳಿಂದುಂಟಾಗುವ ಮೇಲುಗಳಿಗಿಂತಲೂ ಸದಾ ಕಾಲವಾಗಿರುವ ಬೆಟ್ಟಗಳಿಂದುಂಟಾಗುವ ಉತ್ತಮ ವಸ್ತುಗಳಿಗಿಂತಲೂ ವಿಶೇಷವಾಗಿವೆ. ಇವೆಲ್ಲ ಯೋಸೇಫನ ಪಾಲಿಗೆ ಬರಲಿ.

ಅಣ್ಣ ತಮ್ಮಂದಿರಲ್ಲಿ ಪ್ರಭುವಾಗಿರುವವನ ಶಿರಸ್ಸಿನ ಮೇಲುಂಟಾಗಲಿ, ಬೆನ್ಯಾಮೀನನು ಕುರಿಗಳನ್ನು ಹಿಡಿದುಕೊಳ್ಳುವ ತೋಳದಂತಿದ್ದಾನೆ. ಹಿಡಿದುಕೊಂಡದ್ದನ್ನು ಬೆಳಿಗ್ಗೆ ಉಣ್ಣುವನು, ಕೊಳ್ಳೆ ಮಾಡಿದ್ದನ್ನು ಸಂಜೆಯಲ್ಲಿ ಹಂಚಿಕೊಳ್ಳುವನು. ಇವರೆಲ್ಲರೂ ಇಸ್ರಾಯೇಲನಿಂದುಂಟಾದ ೧೨ ಕುಲಗಳು. ಇದೇ ಅವರ ತಂದೆಯವರಿಗೆ ಹೇಳಿದ ಆಶೀರ್ವಾದ. ಒಂದೊಂದು ಕುಲಕ್ಕೆ ಒಂದೊಂದು ಆಶೀರ್ವಚನವನ್ನು ನುಡಿದನು ಎಂದು ಹೀಗೆ ಬೈಬಲ್‌ನ ಅಡಕವಾಗಿರುವ ಕಾಲಜ್ಞಾನದ ಪರಿಕಲ್ಪನೆಯನ್ನು ಗಮನಿಸಲಾಗಿದೆ.

ಹೀಗೆ ಕಾಲಜ್ಞಾನದಲ್ಲಿ ಕನ್ನಡದ ವಿಶೇಷ ಪದರಚನೆಯನ್ನು ಅಥವಾ ಭಾಷಾ ಬಳಕೆಯನ್ನು ಗಮನಿಸಬಹುದು. ಅಂತಹ ವಿಶೇಷ ಪದಗಳು ಮತ್ತು ರಚನೆ ಈ ರೀತಿ ಇದೆ.

ಮುದ್ರೆಕೋಲು– ಇದು ಕನ್ನಡದಲ್ಲಿ ಹೊಸ ಪದರಚನೆಯಾಗಿ ಕಂಡುಬರುತ್ತದೆ. ಮುದ್ರೆ ಮತ್ತು ಕೋಲು ಎಂಬೆರಡು ಪದಗಳು ಸೇರಿ ಸಂಪೂರ್ಣ ಪದವಾಗಿರುತ್ತದೆ. ಶಾಬ್ದಿಕವಾಗಿ ಈ ಎರಡು ಪದಗಳು ಬೇರೆ ಬೇರೆಯೇ ಆಗಿರುತ್ತವೆ. ಆದರೆ ಇಲ್ಲಿ ಒಂದೇ ಆಗಿ ಅರ್ಥವನ್ನು ನೀಡುತ್ತದೆ. ಅದು ಕ್ರೈಸ್ತ ಧರ್ಮದಲ್ಲಿ ಕಾಲಜ್ಞಾನ ಹೇಳುವ ಸಂದರ್ಭದಲ್ಲಿ ಬಳಕೆಯಾಗಿರುತ್ತದೆ. ಮುದ್ರೆಕೋಲು ಎಂಬುದು ಕ್ರೈಸ್ತ ಸಾಹಿತ್ಯದಲ್ಲಿ ಪ್ರತ್ಯೇಕಿಸಲ್ಪಟ್ಟ ಮೊಹರು ಮಾಡಿದ ಒಂದು ರಾಜದಂಡ. ಅಧಿಕಾರದ ಶಕ್ತಿ ಆಗಿದೆ. ಕನ್ನಡದಲ್ಲಿ ಸಾಮಾನ್ಯವಾಗಿ ಮೊಹರಿನಿಂದ ಕೂಡಿದ ಕಟ್ಟಿಗೆ ಎಂದರೆ ಕ್ರೈಸ್ತ ಸಾಹಿತ್ಯದಲ್ಲಿ ಅಧಿಕಾರದ ರಾಜದಂಡವಾಗಿದೆ.

ಉದಾ. ಮುದ್ರೆ + ಕೋಲು = ಮುದ್ರೆಕೋಲು

ಹಾಗೆಯೇ ಬೈಬಲಿನಲ್ಲಿ ಮತ್ತಾಯನು ಬರೆದ ಸುವಾರ್ತೆ ೨೪ನೇ ಅಧ್ಯಾಯ ೨೦ ಮತ್ತು ೨೭ನೇ ವಚನದಲ್ಲಿ 'ಮನುಷ್ಯ ಕುಮಾರ' ಮತ್ತು 'ಸಬ್ಬತ್'ದಿನ ಎಂಬುದಾಗಿ ಎರಡು ಪದಗಳನ್ನು ಗ್ರಹಿಸಬಹುದಾಗಿದೆ. ಇವುಗಳು ಕನ್ನಡಕ್ಕೆ ಹೊಸ ಪದಗಳಾಗಿ ಆಗಮಿಸುತ್ತವೆ. ಮನುಷ್ಯ ಮತ್ತು ಕುಮಾರ ಎಂದು ಬಿಡಿಸಿ ನೋಡಿದಾಗ ಪದಗಳ ಅರ್ಥ ಕನ್ನಡದಲ್ಲಿ ಇದೆಯಾದರೂ ಒಟ್ಟಾಗಿ ನೋಡಿದರೆ ಅರ್ಥ ಸಿಗುವುದಿಲ್ಲ. ಹಾಗೆಯೇ ಸಬ್ಬತ್ ಎಂಬುವುದು ಕನ್ನಡದಲ್ಲಿ ಇಲ್ಲವಾದದುರಿಂದ ಇವು ಕನ್ನಡಕ್ಕೆ ಹೊಸ ಪದರಚನೆಯಾಗಿ ಬಂದಿವೆ ಎಂದು ಹೇಳಬಹುದಾಗಿದೆ. ಈ ಎಲ್ಲಾ ಪದಗಳ ರಚನೆಯನ್ನು ಹೀಗೆ ಗ್ರಹಿಸಬಹುದು.

ನಿರ್ದಿಷ್ಟ + ವಾರ್ಗಿಕ = ಹೊಸ ಪದರಚನೆ

ಮುದ್ರೆ + ಕೋಲು = ಮುದ್ರೆಕೋಲು

ದ್ರಾಕ್ಷ + ಲತೆ = ದ್ರಾಕ್ಷಾಲತೆ

ಫಲ + ವೃಕ್ಷ = ಫಲವೃಕ್ಷ

ಮನುಷ್ಯ + ಕುಮಾರ = ಮನುಷ್ಯ ಕುಮಾರ

ಸಬ್ಬತ್ + ದಿನ = ಸಬ್ಬತ್‌ದಿನ

ದ್ರಾಕ್ಷ + ರಸ = ದ್ರಾಕ್ಷಾರಸ

೩.೧.೪. ಬೈಬಲ್‌ನ ಪೂರಕ ಕೃತಿಗಳು ಮತ್ತು ಭಾಷೆ

ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಬಹಳ ಮುಖ್ಯವಾಗಿ ಗಮನಿಸುವ ಗ್ರಂಥ ಬೈಬಲ್ ಗ್ರಂಥ. ಇದು ೧೮ನೇ ಶತಮಾನದಿಂದಲೇ ಕನ್ನಡದಲ್ಲಿ ರಚನೆಯಾಗಿದೆ. ನಂತರದ ದಿನಗಳಲ್ಲಿ ಸತ್ಯವೇದ, ದೇವರವಾಕ್ಯ, ಪವಿತ್ರ ಬೈಬಲ್, ಪರಿಶುದ್ಧ ಬೈಬಲ್, ಪವಿತ್ರ ವಚನ, ಅಧ್ಯಯನ ಸತ್ಯವೇದವು, ಹೊಸ ಒಡಂಬಡಿಕೆ ಎಂಬುದಾಗಿ ನಾನಾ ಶಿರೋನಾಮೆಯಲ್ಲಿ (ಅನುವಾದ ಭಾಷಾಂತರ) ಮುದ್ರಣ ಕಂಡುಕೊಳ್ಳುತ್ತದೆ. ಇದು ಇಷ್ಟಕ್ಕೆ ನಿಲ್ಲದೆ ಬೈಬಲ್‌ನ ವಿಷಯವಸ್ತುವಿಗೆ ಅನುಗುಣವಾಗಿ ಅಂದರೆ, ಯೇಸುಕ್ರಿಸ್ತನ ಜೀವನ, ಸಾಧನೆ, ಸತ್ಯಾಂಶಗಳನ್ನು ಧರ್ಮದ ಹಿನ್ನೆಲೆಯಲ್ಲಿ ರಚನೆಯಾಗಿರುವ ಮತ್ತು ರಚನೆಯಾಗಲಿರುವ ಎಲ್ಲಾ ಕೃತಿಗಳನ್ನು ಪೂರಕ ಕೃತಿಗಳು ಎಂದು ಕರೆಯಬಹುದಾಗಿದೆ. ಪ್ರಸ್ತುತ ಸುಮಾರು ಪ್ರಕಾಶನಗಳು ಕ್ರಿಸ್ತನ ಸುವಾರ್ತೆಯ ಅಂಶಗಳನ್ನೊಳಗೊಂಡ ಕೃತಿಗಳನ್ನು ಹೇರಳವಾಗಿ ಮುದ್ರಿಸುತ್ತವೆ ಎಂದು ಹೇಳಿದರೆ ತಪ್ಪಾಗಲಾರದು.

ಕ್ರೈಸ್ತ ಧಾರ್ಮಿಕ ಪೂರಕ ಕೃತಿಗಳು ಹೆಚ್ಚಾಗಿ ಎಂತಹ ಅಂಶಗಳನ್ನು ತಿಳಿಸುತ್ತವೆ ಎಂದರೆ ಸತ್ಯವೇದದ ಅಂಶಗಳನ್ನು ಬಿಡಿಬಿಡಿಯಾಗಿ ಬೋಧಿಸುತ್ತದೆ. ಸತ್ಯವೇದದಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆ ೬೬ ಎಂದು ಹೇಳಲಾಗುತ್ತದೆ. ಕೆಥೋಲಿಕರ ಪ್ರಕಾರ ಇನ್ನು ೧೩ ಪುಸ್ತಕಗಳು ಸೇರಿದರೆ

೫೨ ಪುಸ್ತಕಗಳು ಆಗುತ್ತವೆ. ಈ ಎಲ್ಲಾ ಪುಸ್ತಕಗಳ ಒಟ್ಟು ರೂಪವೇ ಧರ್ಮದ ಗ್ರಂಥವಾಗಿದೆ. ಇಂತಹ ಪುಸ್ತಕಗಳು ಬಿಡಿಯಾಗಿ ಚಿಕ್ಕ ಚಿಕ್ಕ ಪುಸ್ತಕದ ರೂಪದಲ್ಲಿ ಮುದ್ರಣವಾಗುತ್ತದೆ. ಜೊತೆಗೆ ಬೈಬಲಿನಲ್ಲಿನ ವಾಗ್ದಾನಗಳು, ಅದ್ಭುತ ಕಾರ್ಯಗಳು, ಸಾಮ್ಯಗಳು, ಸೂಚಕಕಾರ್ಯಗಳಿಗೆ ಸಂಬಂಧಿಸಿದೆ ಕೃತಿಗಲು ರಚನೆಯಾಗಿವೆ. ಅಲ್ಲದೆ ಅತೀ ಪ್ರಾಮುಖ್ಯವಾಗಿ ಬರೆಯಲ್ಪಟ್ಟ ಕೃತಿಗಳೆಂದರೆ, ಕ್ರಿಸ್ತನ ಪ್ರೀತಿ, ಸತ್ಯ, ಮಾರ್ಗ, ಮತ್ತು ಜೀವನದ ಬಗ್ಗೆ ಬೋಧಿಸುವ ಅಂಶಗಳನ್ನು ಪುಸ್ತಕಗಳು, ಧರ್ಮದ ಚರಿತ್ರೆಯನ್ನು ಹೇಳುವ ಪುಸ್ತಕಗಳು, ಕ್ರೈಸ್ತ ಮಿಶರಿಗಳು ಜೀವನ ಚರಿತ್ರೆ, ಪುಸ್ತಕಗಳು ಅನೇಕ ವೈಯಕ್ತಿಕ ಸುವಾರ್ತಿಕ ಸಂಘ ಸಂಸ್ಥೆಗಳ ಪುಸ್ತಕಗಳು ರಚನೆಯಾಗಿವೆ. ಕ್ರೈಸ್ತ ಧರ್ಮದ ಎಲ್ಲಾ ಪಂಗಡಗಳು ಆಧುನಿಕವಾದ ಉಪಕರಣ ಅಂದರೆ ಎಲ್ಲಾ ಸಮೂಹ ಮಾಧ್ಯಮಗಳ, ಪತ್ರಿಕೆಗಳ (ಮಾಸಿಕ, ಕರಪತ್ರ) ಮೂಲಕ ಕ್ರೈಸ್ತ ಸುವಾರ್ತೆಯನ್ನು ಪ್ರಸಾರ ಮಾಡುತ್ತಾರೆ. ಈ ಎಲ್ಲಾ ಮೂಲಗಳನ್ನು ಒಟ್ಟಾರೆಯಾಗಿ ಕ್ರೈಸ್ತ ಧರ್ಮದ ಸಹಾಯಕ (ಪೂರಕ) ಅಂಶಗಳನ್ನು ಅಥವಾ ಕೃತಿಗಳು ಎಂದು ಕರೆಯಬಹುದಾಗಿದೆ. ಅಂತಹವುಗಳಲ್ಲಿ ಕೆಲವು ಆಯ್ದ ಪೂರಕ ಕೃತಿಗಳು ಈ ಕೆಳಕಂಡಂತಿದ್ದು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಭಾಷಿಕಾಂಶಗಳನ್ನು ಗಮನಿಸಲಾಗಿದೆ.

೧. ಆಲ್ಬನ್ ಡೊಗ್ಲಾಸ್, ೨೦೧೫ಸ ಸತ್ಯವೇದದ ಮೂಲಬೋಧನೆ, ಜಿಎಲ್ಎಸ್ ಪಬ್ಲಿಷಿಂಗ್, ಉದ್ಯೋಗ ಭವನ, ಮುಂಬೈ.

೨. ಗೋವಿಂದ ಪೈ. ಎಂ., ೨೦೦೬, ಗೋಲ್ಗೊಥಾ ಮತ್ತು ವೈಶಾಖಿ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

೩. ತಲವಾಡಿ ಬಿ.ಎಸ್., ಸಿರಿಭುವನ ಜ್ಯೋತಿ (ಯೇಸು ಕ್ರಿಸ್ತನ ಕುರಿತ ಮಹಾಕಾವ್ಯ) ಬಸವ ಭಾಗ್ಯ ಪ್ರಕಾಶನ, ವಿನಾಯಕ ಬಡಾವಣೆ, ಬೆಂಗಳೂರು.

೪. ಪ್ರಕಾಶ ಎನ್.ಬಿ., ೨೦೦೮, ಸತ್ಯವೇದದ ಸತ್ಯಾಂಶಗಳು ಮತ್ತು ಆರಾಧನ ಕ್ರಮಗಳು, ಕ್ರಿಬೋನ ಪ್ರಕಾಶನ, ನಿಜಾಂಪುರ, ಬೀದರ್

೫. ಪ್ರಕಾಶ ವಿ., ೨೦೧೪, ಸತ್ಯವೇದದಲ್ಲಿ ತೋರಿಬರುವ ಮುಖ್ಯಾಂಶಗಳು, ಬ್ಲೆಸಡ್ ಗಾಸ್ಪೆಲ್ ಚರ್ಚ್, ಬಿ.ಬಿ.ಎ. ಕಾಲೋನಿ, ದೇವಸೂಗೂರು.

೬. ಮೂರ್ತಿರಾವ್ ಎನ್., ೨೦೦೯, ದೇವರು, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೭. ಲೋಹಿತಕುಮಾರ ಆರ್., ೨೦೧೬, ಬಳ್ಳಾರಿ ಜಿಲ್ಲೆಯ ಕ್ರೈಸ್ತ ಮಿಶನರಿಗಳ ಚರಿತ್ರೆ, ಗಾಯತ್ರಿ ಪ್ರಕಾಶನ, ಬೆಂಗಳೂರು.

೮. ವಿಜಯಕುಮಾರ ರೆವರೆಂಡ್, ೨೦೦೪, ಕರ್ನಾಟಕದಲ್ಲಿ ಪ್ರೊಟೆಸ್ಟೆಂಟ ಮಿಶನ್ನಗಳ ಚರಿತ್ರೆ, ಕನ್ನಡ ದೈವಜ್ಞಾನ ಸಮಿತಿ, ಬೆಂಗಳೂರು.

೯. ಸುರೇಶ ಕಮ್ಮಾರ, ೨೦೧೦, ಸತ್ರ, ಲೈಫ್ ಟಚ್ ಪೌಂಡೇಶನ್, ಧಾರವಾಡ

೧೦. ಇಬ್ರುಹೀಮ ಸಈದ್, ೨೦೧೦, ಯೇಸು ಮತ್ತು ಮೇರಿ ಕುರಆನಿನಲ್ಲಿ, ಶಾಂತಿ ಪ್ರಕಾಶನ, ಮಂಗಳೂರು.

೧೧. ಐಜಕ್ ಭಸ್ಮೆ, ೨೦೦೯, ಕನ್ನಡ ಬೈಬಲಿನ ಅನುಕ್ರಮಗಳು, ಕೆ.ಜಿ.ವಿ. ಬೈಬಲ್ ಸೊಸೈಟಿ, ವಿಜಯನಗರ, ಬೆಂಗಳೂರು.

೧೨. ಡೇವಿಡ್ ರೋಪರ್, ೨೦೦೨, ಕ್ರಿಸ್ತನ ಜೀವನ ಚರಿತ್ರೆ, ಟ್ರೂಲ್ ಫಾರ್ ಟುಡೆ ವರ್ಲ್ಡ್ ಮಿಶನ್ ಸ್ಕೂಲ್, ಶಿವಾಜಿನಗರ, ಬೆಂಗಳೂರು.

೧೩. ಮಾರ್ಕ್ ವಾಲ್ಟಾರ್, ೨೦೧೫, ಭಗವಾನ ಯೇಸುಕ್ರಿಸ್ತ, ವಾಲ್ಟಾರ್, ರೋಶನ್, ಬೊಂದೆಲ್, ಮಂಗಳೂರು.

ಹೀಗೆ ಇನ್ನು ಅನೇಕ ಕೃತಿಗಳು ಪೂರಕ ಗ್ರಂಥಕೃತಿಗಳಾಗಿ ಕಂಡುಬರುತ್ತವೆ. ಈ ಮೇಲಿನ ಕ್ರೈಸ್ತ ಧರ್ಮದ ಪೂರಕ ಕೃತಿಗಳಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಕನ್ನಡ ನುಡಿಯ ಭಾಷಿಕ ವಿವರಗಳನ್ನು ಈ ಕೆಳಕಂಡಂತೆ ಗಮನಿಸಿ ವಿಶ್ಲೇಷಿಸಲಾಗಿದೆ.

ಧರ್ಮ ಸಭೆ

'ಸಭೆ' ಎಂಬುದು ಎಕ್ಲೇಸಿಯಾ ಎಂಬ ಗ್ರೀಕ್ ಪದದಿಂದ ಬಂದಿದೆ. ಇದರ ಅರ್ಥ ಹೊರಗೆ ಕರೆಯಲ್ಪಡುವುದು. ಕ್ರೈಸ್ತರು ಲೋಕದ ಕಡೆಯಿಂದ ಕ್ರಿಸ್ತನಲ್ಲಿರಲು ಕರೆಯಲ್ಪಟ್ಟವರಾಗಿದ್ದಾರೆ ಎಂದರ್ಥ. (೧ನೇ ಕೋರಿಂಥ ೧:೨) ಅಲ್ಲದೆ ಸಾಮಾನ್ಯವಾಗಿ ಗುಡಿ, ಚರ್ಚು, ಮಸೀದಿ ಎಂದು ಧಾರ್ಮಿಕರ ಸ್ಥಳಗಳನ್ನು ಗುರ್ತಿಸಿ ಹೇಳುತ್ತೇವೆ. ಇಲ್ಲಿ ಗುಡಿ ಎಂದರೆ ಹಿಂದೂ ಧರ್ಮ, ಚರ್ಚು ಎಂದರೆ ಕ್ರೈಸ್ತ ಧರ್ಮ ಹಾಗೆಯೇ ಮಸೀದಿ ಎಂದರೆ ಇಸ್ಲಾಂ ಧರ್ಮ ಎಂದು ಆಯಾ ಧರ್ಮದ ಗುರ್ತಾಗಿರುವ ಸ್ಥಳಗಳನ್ನೇ ಮುಖ್ಯವಾಗಿಟ್ಟುಕೊಂಡು ಲೆಕ್ಕ ಹಾಕುತ್ತೇವೆ. ಅಂದರೆ ಇಲ್ಲಿ ಒಂದು ಧರ್ಮಕ್ಕೆ 'ಗ್ರಂಥ' ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಆ ಧರ್ಮದ 'ಪವಿತ್ರ ಸ್ಥಳ' ಎಂದು ಹೇಳಬಹುದಾಗಿದೆ. ಹಾಗಾಗಿ ಪವಿತ್ರ ಸ್ಥಳವಿಲ್ಲದ ಯಾವುದೇ ಧರ್ಮವಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ರೈಸ್ತ ಧರ್ಮಕ್ಕೂ ಅವರದೇ ಆದ ಪವಿತ್ರ ಸ್ಥಳವೆಂದು ಗುರ್ತಿಸಿರುವ ಈಗಾಗಲೇ ಹೇಳಿದ ಚರ್ಚನ್ನು ಗಮನಿಸುವುದಾದರೆ ಈ ಚರ್ಚ್‌ಗೆ ಹಲವಾರು ಸಂಕೇತಗಳಿಂದ ಅಥವಾ ಹೆಸರುಗಳಿಂದ ಕೆಥೋಲಿಕ್ ಕ್ರೈಸ್ತರು ಸಭೆ ಎಂದು ಗುರ್ತಿಸುತ್ತಾರೆ. ಆ ಒಂದು ಸಭೆ ಪದ ಬಳಕೆ ಕನ್ನಡಕ್ಕೆ ಹೊಸದಾಗಿ ಕಂಡುಬರುತ್ತದೆ. ಅಂತಹ ಹೊಸ ಪದರಚನೆಯನ್ನು ಹಲವು ಸಭೆಗಳಲ್ಲಿ ಹೀಗೆ ಹೇಳಬಹುದು.

ಕುರಿಮಂದೆ ಸಭೆ (ಯೋವಾನ್ನ ೧೦:೧-೧೭): ಕೆಥೋಲಿಕರ ಪವಿತ್ರ ಬೈಬಲ್‌ನ (ಯೋವಾನ್ನ ಬರೆದ ಶುಭ ಸಂದೇಶ ೧೦ನೇ ಅಧ್ಯಾಯ ೧ ರಿಂದ ೧೭ವಚನ) ಚರ್ಚನ್ನು ಸಭೆ ಎಂತಲೂ ಕರೆಯುತ್ತಾರೆ. ಇಲ್ಲಿ ಯೇಸುವು ಕ್ರೈಸ್ತರ ಸಭೆಯನ್ನು 'ಕುರಿಮಂದೆ ಸಭೆ'ಗೆ ಹೋಲಿಸಿದ್ದಾರೆ.

ಕುರಿಮಂದೆ ಎಂದರೆ ಕುರಿಗಳ ಗುಂಪು ಎಂದರ್ಥ. ಆ ಗುಂಪಿಗೆ ಕುರುಬ ಅಥವಾ ಪೋಷಣೆ ಮಾಡುವವನು ನಾನೇ ಎಂದು ಹೇಳುತ್ತಾರೆ. ಹಾಗಾಗಿ ಕ್ರಿಸ್ತನನ್ನು 'ಕುರಿಗಾಹಿ' ಎಂತಲೂ ಕರೆಯುತ್ತಾರೆ.

ಕುರಿಹಟ್ಟಿ ಸಭೆ (ಯೋವಾನ್ನ ೧೦:೧-೫): ಧರ್ಮ ಸಭೆಯನ್ನು ಕುರಿಗಳ ಹಟ್ಟಿಗೆ ಹೋಲಿಸಲಾಗಿದೆ. ಹಟ್ಟಿಗೆ ಬರುವ ಒಂದೇ ಒಂದು ಚಿಕ್ಕ ಬಾಗಿಲು ನಾನೇ ಎಂದು ಕ್ರಿಸ್ತನು ಹೇಳುತ್ತಾರೆ. ನನ್ನ ಮೂಲಕ ಒಳಗೆ ಹೋಗುವವನು ಸುರಕ್ಷಿತನಾಗಿರುತ್ತಾನೆ. ಒಳಗೆ ಹೋಗುತ್ತಾನೆ ಹೊರಗೆ ಬರುತ್ತಾನೆ ಮೇವನ್ನು ಕಂಡುಕೊಳ್ಳುತ್ತಾನೆ ಎಂದು ಹೇಳುವಲ್ಲಿ 'ಕುರಿಹಟ್ಟಿ ಸಭೆ' ಎಂಬ ಪದವನ್ನು ಬಳಸಲಾಗಿದೆ.

ದೇವರ ಹೊಲ ಸಭೆ (೧ ಕೋರಿಂಥ ೩:೯): ಒಂದು ಹೊಲ ಬಿತ್ತನೆಗೆ ಒಳಗಾಗಿ ಫಲವನ್ನು ಕೊಟ್ಟರೆ ಎಷ್ಟು ಪ್ರಶಂಸೆಗೆ ಒಳಗಾಗುತ್ತದೆಯೋ ಹಾಗೆ ದೈವ ಜನರು ಸಹಿತ ದೇವರ ವಾಕ್ಯವೆಂಬ ಬೀಜದಿಂದ ಮೌಲ್ಯಗಳೆಂಬ ಫಲವನ್ನು ಕೊಡಬೇಕು ಎಂಬುದಾಗಿದೆ. ಇಲ್ಲಿ ಚರ್ಚನ್ನು ಹೊಲವೆಂದು ಅಲ್ಲಿ ಬಿತ್ತನೆ ಮಾಡುವವ ದೇವರೆಂದು ಬಣ್ಣಿಸಲಾಗಿದೆ.

ಮಾತೆ ಸಭೆ (ಗಲಾತ್ಯ ೪:೧೯): ಸಭೆಯನ್ನು ಕೆಥೋಲಿಕ್ ಕ್ರೈಸ್ತರು ಒಬ್ಬ ತಾಯಿಯಾಗಿ ನೋಡುತ್ತಾರೆ. ಈ ತಾಯಿ ಸಭೆ ತನ್ನ ಬೋಧನೆಯಿಂದ ದೀಕ್ಷಾಸ್ನಾನದಿಂದ ನಮಗೆ ಪುನರ್ಜನ್ಮ ನೀಡಿ ನಮ್ಮನ್ನು ದೈವ ಪ್ರಜೆಯನ್ನಾಗಿ ಮಾಡುತ್ತಾಳೆ. ಹಾಗಾಗಿ ಚರ್ಚ್ ಎಂದರೆ ತಾಯಿ ಎಂದು ಹೇಳುತ್ತಾರೆ. ಉದಾ. ನನ್ನ ಪ್ರಿಯೆ ಮಕ್ಕಳೆ, ತಾಯಿ ತನ್ನ ಮಗುವಿಗಾಗಿ ಪ್ರಸವ ವೇದನೆ ಪಡುವ ಪ್ರಕಾರ ಕ್ರಿಸ್ತಯೇಸು ನಿಮ್ಮಲ್ಲಿ ರೂಪುಗೊಳ್ಳುವ ತನಕ ನಿಮಗಾಗಿ ನಾವು ಮತ್ತೆ ಅಂಥ ವೇದನೆಯನ್ನು ಪಡುತ್ತಿದ್ದೇವೆ (ಗಲಾತ್ಯ ೪:೧೯) ಎಂದು ಸಭೆಯೆಂಬ ತಾಯಿ ಹೇಳುತ್ತಾಳೆ.

ರಹಸ್ಯ ಶರೀರ ಸಭೆ (೧ ಕೋರಿಂಥ ೧೨:೧೨-೧೩): ಇಲ್ಲಿ ಕ್ರಿಸ್ತ ಯೇಸುವಿನಲ್ಲಿ ದೈವ ಜನರೆಲ್ಲರೂ ಸೇರಿ ಒಂದು ದೇಹದ ಅಂಗಾಂಗಗಳಾಗುತ್ತಾರೆ. ದೀಕ್ಷಾಸ್ನಾನದಿಂದ ದೃಢೀಕರಿಸಿಕೊಂಡ ಎಲ್ಲಾ ಭಕ್ತರು ಕ್ರಿಸ್ತನ ದೇಹ ರಕ್ತದಲ್ಲಿ (ಪರಮ ಪ್ರಸಾದ) ಪಾಲುಗೊಂಡವರಾಗಿ ಒಂದೇ ಶರೀರವಾಗುತ್ತಾರೆ. ಕ್ರಿಸ್ತನೇ ಶಿರಸ್ಸು ಭಕ್ತರೆಲ್ಲರೂ ಉಳಿದ ಅಂಗಗಳು ಎಂಬುದಾಗಿ ಇಲ್ಲಿ ಕೆಥೋಲಿಕರು ಅರ್ಥೈಸುತ್ತಾರೆ. ಹಾಗಾಗಿ ಸಭೆ ಎಂದರೆ ಶರೀರ ಎನ್ನುತ್ತಾರೆ.

ವಧು ಸಭೆ (ಎಫೆಸ್ ೫:೨೭): ಇಲ್ಲಿ ಕ್ರಿಸ್ತನು ಯೆರೂಸಲೆಂ ಪಟ್ಟಣಕ್ಕೆ ಕತ್ತೆಯ ಮೇಲೆ ಸವಾರಿ ಮಾಡುವಾಗ ಪಟ್ಟಣ ಮದುವಣಗಿತ್ತಿಯಂತೆ ಶೃಂಗಾರವಾಗಿತ್ತು ಎಂದು ಉಲ್ಲೇಖಿಸಲಾಗಿದೆ. ಅದರಂತೆ ಕ್ರಿಸ್ತನೆಂದರೆ ವರ, ಸಭೆಯೆಂದರೆ ವಧುವಿನಂತೆ, ಗಂಡ ಹೆಂಡತಿ ಪ್ರೀತಿಯಿಂದ ಯಾವ ರೀತಿ ಒಂದೇ ಶರೀರವಾಗಿರುತ್ತಾರೆ ಹಾಗೆಯೇ ಸಭೆ ಮತ್ತು ದೇವರು ಪರಸ್ಪರ ಬಿಡಿಸಲಾರದ ದಿವ್ಯಗಂಟು ಎನ್ನುವ ಹಾಗೆ (ಕೆಥೋಲಿಕ್) ಕ್ರೈಸ್ತರು ಕ್ರೈಸ್ತರ ಸಭೆಯನ್ನು ಮದಲಗಿತ್ತಿಯೆಂದು ಹೇಳುತ್ತಾರೆ.

ಮೇಲಿನ ಎಲ್ಲಾ ಪದಗಳನ್ನು ಈ ರೀತಿಯಾಗಿ ವರ್ಗೀಕರಿಸಲಾಗಿದೆ.

ನಿರ್ದಿಷ್ಟ + ನಿರ್ದಿಷ್ಟ + ವಾರ್ಗಿಕ = ಕ್ರೈಸ್ತ ಪರಿಭಾಷೆ

ಕುರಿ + ಮಂದೆ + ಸಭೆ = ಕುರಿಮಂದೆ ಸಭೆ

ಕುರಿ + ಹಟ್ಟಿ + ಸಭೆ = ಕುರಿಹಟ್ಟಿ ಸಭೆ

ದೇವರ + ಹೊಲ + ಸಭೆ = ದೇವರ ಹೊಲ ಸಭೆ

ಮಾತೆ + ಆದ + ಸಭೆ = ಮಾತೆಯಾದ ಸಭೆ

ರಹಸ್ಯ + ಶರೀರ + ಸಭೆ = ರಹಸ್ಯ ಶರೀರ ಸಭೆ

ವಧು + ಆದ + ಸಭೆ = ವಧುವಾದ ಸಭೆ

ಹೀಗೆ ವರ್ಗೀಕರಿಸಿ ಕನ್ನಡ ಭಾಷಿಕ ಅಂಶಗಳನ್ನು ಕ್ರೈಸ್ತ ಧರ್ಮ ಸಭೆಯ ಅಥವಾ ಚರ್ಚುಗಳ ನಾಮಗಳಲ್ಲಿ, ಸಂಬೋಧನೆಗಳಲ್ಲಿ ಗುರ್ತಿಸಿ ಹೇಳಬಹುದು. ಇವು ಹೊಸ ಪದಗಳಾಗಿ ಗೋಚರಿಸುತ್ತವೆ. ಯಾವಾಗ ಎಂದರೆ ಬಿಡಿ ಬಿಡಿಯಾದ ಪದಗಳು ಇಡಿಯಾಗಿ ರಚನೆಯಾಗಿ ಕನ್ನಡಕ್ಕೆ ನವೀನ ಪದವಾಗಿ ಒಳಬರುತ್ತದೆ ಎನ್ನಲಾಗುತ್ತದೆ.

ದೈವ ಸಂಬೋಧನೆಗಳು ಮತ್ತು ವರ್ಗೀಕರಣ

ಸಂಬೋಧನೆ ಎಂದರೆ ಸಾಮಾನ್ಯ ಕರೆಯುವಿಕೆ ಎಂದರ್ಥ. ಈ ಕರೆಯುವಿಕೆ ಅಥವಾ ಗುರ್ತಿಸುವಿಕೆ ಎಂಬುದು ಇಂತಹುದೇ ವಿಷಯ ವಸ್ತು, ವ್ಯಕ್ತಿ, ಸ್ಥಳಗಳಿಗೆ ಇದೆ ಎಂದು ಹೇಳಲಿಕ್ಕಾಗುವುದಿಲ್ಲ. ಅಂದರೆ 'ಸಂಬೋಧನೆ' ಅಥವಾ ಕೂಗುವಿಕೆ ಎಂಬುವುದು ಸರ್ವಕಾಲ, ಸರ್ವ ವಿಷಯ, ವಸ್ತು, ವ್ಯಕ್ತಿಗಳಿಗೆ ಸಂಬಂಧಿಸಿದ್ದುದು ಆಗಿದೆ. ಒಟ್ಟಾರೆಯಾಗಿ ಸವಾಂತರ್ಯಾಮಿ ಪದ ಸಂಬೋಧನೆ ಪದ ಎನ್ನಬಹುದು. ಪ್ರಸ್ತುತ ಸಂಬೋಧನೆಯನ್ನು ಕ್ರೈಸ್ತ ಧರ್ಮದ ಪ್ರಮುಖ ವ್ಯಕ್ತಿ ಅಥವಾ ಕ್ರೈಸ್ತ ಧರ್ಮದ ದೇವರು ಎನಿಸಿಕೊಂಡಿರುವ ಪ್ರಭು ಕ್ರಿಸ್ತನ ಬಗ್ಗೆ ಹಲವು ರೀತಿಯ ನಾಮಾಂಕಿತ ಸಂಬೋಧನೆಗಳನ್ನು ಗುರ್ತಿಸಬಹುದಾಗದೆ. ಅಂದರೆ ವಿವಿಧ ಹೆಸರುಗಳಿಂದ ಕರೆಯುವಂತಹ ಸತ್ಸಂಪ್ರದಾಯವಿದೆ ಎಂದು ಕ್ರೈಸ್ತ ಧಾರ್ಮಿಕ ಪೂರಕ ಕೃತಿಗಳಿಂದ ಕಂಡುಕೊಳ್ಳಲಾಗಿದೆ. ಅಂತಹ ಹಲವು ಸಂಬೋಧನಾ ನಾಮರೂಪಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

'ಪತಿ' ಎಂಬ ಪದದಡಿಯಲ್ಲಿ ಸಂಬೋಧಿಸುವ ಪದಗಳು

ನಿರ್ದಿಷ್ಟ + ವಾರ್ಗಿಕ = ಸಂಬೋಧನೆ

ಆದಿ + ಪತಿ = ಆದಿಪತಿ (ಮೀಕ ೫:೧)

ಜೀವ + ಅಧಿಪತಿ = ಜೀವಾಧಿಪತಿ (ಅ.ಕೃ ೩:೧೫)

ಏಕ + ಅಧಿಪತಿ = ಏಕಾಧಿಪತಿ (೧ ತಿಮೋಥಿ ೬:೧೫)

ನ್ಯಾಯ + ಅಧಿಪತಿ = ನ್ಯಾಯಾಧಿಪತಿ (ಕೀರ್ತನೆ ೫೦:೬)

ಸರ್ವ + ಅಧಿಪತಿ = ಸರ್ವಾಧಿಪತಿ (ಕೀರ್ತನೆ ೪೬:೬೦)

'ಸ್ವರೂಪನು' ಎಂಬ ಪದದಡಿಯಲ್ಲಿನ ಸಂಬೋಧನೆಗಳು

ನಿರ್ದಿಷ್ಟ + ವಾರ್ಗಿಕ = ಸಂಬೋಧನೆ

ಪವಿತ್ರ + ಸ್ವರೂಪನು = ಪವಿತ್ರ ಸ್ವರೂಪನು (ಕೀರ್ತನೆ: ೨೨:೩)

ನೀತಿ + ಸ್ವರೂಪನು = ನೀತಿ ಸ್ವರೂಪನು (ಯೋಹಾನ ೧೭:೨೫)

ಸತ್ಯ + ಸ್ವರೂಪನು = ಸತ್ಯ ಸ್ವರೂಪನು (ಯೇಶಾಯ ೪೫:೨೧)

ಪ್ರೀತಿ + ಸ್ವರೂಪನು = ಪ್ರೀತಿ ಸ್ವರೂಪನು (೧ನೇ ಯೋಹಾನ ೪:೧೬)

ನ್ಯಾಯ + ಸ್ವರೂಪನು = ನ್ಯಾಯ ಸ್ವರೂಪನು (ಯೇಶಾಯ ೩೦:೧೮)

ಪ್ರಭಾವ + ಸ್ವರೂಪವನು = ಪ್ರಭಾವ ಸ್ವರೂಪವನು (ಕೀರ್ತನೆ ೨೯:೩)

ಅದ್ಭುತ + ಸ್ವರೂಪನು = ಅದ್ಭುತ ಸ್ವರೂಪನು (ಯೇಶಾಯ ೯:೬)

ಚೈತನ್ಯ + ಸ್ವರೂಪನು = ಚೈತನ್ಯ ಸ್ವರೂಪನು (ಕೀರ್ತನೆ ೪೨:೨)

ಆತ್ಮ + ಸ್ವರೂಪನು = ಆತ್ಮ ಸ್ವರೂಪನು (ಯೋಹಾನ ೪:೨೪)

ಧರ್ಮ + ಸ್ವರೂಪನು = ಧರ್ಮ ಸ್ವರೂಪನು (ಯೋಬ ೩೬:೩)

ದೇವಸೂಚಿತ ಮಾರ್ಗಗಳು

ಕ್ರೈಸ್ತ ಧಾರ್ಮಿಕ ಸಾಹಿತ್ಯದೊಳಗೆ 'ಮಾರ್ಗ' ಎಂಬುದರ ಬಗ್ಗೆ ಸಾಕಷ್ಟು ವಿವರಗಳನ್ನು ಕಾಣುತ್ತೇವೆ. ಅದಕ್ಕಿಂತ ಮೊದಲು ಮಾರ್ಗ ಎಂದರೆ ನಾವು ದಾರಿ ಎಂದು ಸಾಮಾನ್ಯವಾಗಿ ಅರ್ಥೈಸುತ್ತೇವೆ. ಧರ್ಮಕ್ಕೆ ಸಂಬಂಧಿಸಿದಂತೆ ಮಾರ್ಗ ಎಂಬುದನ್ನು ಕ್ರಿಸ್ತನು ಹೀಗೆ ಹೇಳುತ್ತಾನೆ. ಉದಾ. 'ನಾನೇ ಸತ್ಯವೂ, ಮಾರ್ಗವೂ, ಜೀವವೂ ಆಗಿದ್ದೇನೆ' ಎಂಬುದು ಇಷ್ಟು ಮಾತ್ರವಲ್ಲದೆ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ 'ಮಾರ್ಗದ' ಬಗ್ಗೆ ಹಲವಾರು ಪ್ರವಾದಿಗಳು ಹೇಳಿರುವ ಸಂಗತಿಗಳನ್ನು ಗಮನಿಸಬಹುದು. ಅಂತಹ ಮಾರ್ಗ/ದಾರಿಗೆ ಸಂಬಂಧಿಸಿದ ಭಾಷಿಕಾಂಶಗಳನ್ನು ಈ ರೀತಿಯಲ್ಲಿ ವರ್ಗೀಕರಿಸಿ ಹೇಳಬಹುದು.

ನಿರ್ದಿಷ್ಟ + ವಾರ್ಗಿಕ = ಮಾರ್ಗ

ಸನಾತನ + ಮಾರ್ಗ = ಸನಾತನ ಮಾರ್ಗ (ಕೀರ್ತನೆ ೧೩೯:೨೪)

ಭಕ್ತಿ + ಮಾರ್ಗ = ಭಕ್ತಿ ಮಾರ್ಗ (ಕೀರ್ತನೆ ೧೧೯:೩೦)

ಸತ್ಯ + ಮಾರ್ಗ = ಸತ್ಯ ಮಾರ್ಗ (೨ನೇ ಪೇತ್ರ ೨:೨)

ಜೀವ + ಮಾರ್ಗ = ಜೀವ ಮಾರ್ಗ (ಕೀರ್ತನೆ ೧೬:೧೧)

ಸಮಾಧಾನ + ಮಾರ್ಗ = ಸಮಾಧಾನ ಮಾರ್ಗ (ರೋಮ ೩:೧೭)

ರಕ್ಷಣೆಯ + ಮಾರ್ಗ = ರಕ್ಷಣೆಯ ಮಾರ್ಗ (ಅ.ಕೃ. ೧೬:೧೧)

ರಾಜ + ಮಾರ್ಗ = ರಾಜ ಮಾರ್ಗ (ಯೇಶಾಯ ೩೫:೮)

ನ್ಯಾಯ + ಮಾರ್ಗ = ನ್ಯಾಯ ಮಾರ್ಗ (ಜ್ಞಾನೋಕ್ತಿ ೨:೮)

ಪರಿಶುದ್ಧ + ಮಾರ್ಗ = ಪರಿಶುದ್ಧ ಮಾರ್ಗ (ಯೇಶಾಯ ೩೫:೮)

ಜ್ಞಾನ + ಮಾರ್ಗ = ಜ್ಞಾನ ಮಾರ್ಗ (ಜ್ಞಾನೋಕ್ತಿ ೨೧:೧೬)

ನೀತಿ + ಮಾರ್ಗ = ನೀತಿ ಮಾರ್ಗ (ಕೀರ್ತನೆ ೨೩:೩)

ನೀಟಾದ + ಮಾರ್ಗ = ನೀಟಾದ ಮಾರ್ಗ (೨ನೇ ಪೇತ್ರ ೨:೧೫)

ಸಂಖ್ಯಾವಾಚಿ ಆಶೀರ್ವಾದಗಳು

ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಸಂಖ್ಯೆಗೆ ಅನುಗುಣವಾಗಿ ಹೇಳುವಂತಹ ಕೆಲವು ಆಶೀರ್ವಾದ ವಚನಗಳನ್ನು ಗಮನಿಸಲಾಗಿದೆ. ಕ್ರೈಸ್ತ ಧಾರ್ಮಿಕ ಸಾಹಿತ್ಯಕ್ಕೆ ಪೂರಕವಾಗಿ ರಚನೆಯಾಗಿರುವ ಕೃತಿಯಾದ ಸತ್ಯವೇದದಲ್ಲಿ ತೋರಿ ಬರುವ ಮುಖ್ಯಾಂಶಗಳು ಎಂಬ ಕೃತಿಯಲ್ಲಿ ಗಮನಿಸಬಹುದಾಗಿದೆ. ಅಂತಹ ಆಶೀರ್ವಚನಗಳನ್ನು ಹೀಗೆ ಗುರ್ತಿಸಿ ವರ್ಗೀಕರಿಸಿ ಅವುಗಳ ಉಲ್ಲೇಖವನ್ನು ತಿಳಿಸಲಾಗಿದೆ.

ನಿರ್ದಿಷ್ಟ + ವಾರ್ಗಿಕ + ವಾರ್ಗಿಕ = ಆಶೀರ್ವಚನ

ಎರಡು + ಅಷ್ಟು + ಆಶೀರ್ವಾದ = ಎರಡರಷ್ಟು ಆಶೀರ್ವಾದ (ಯೋಬ ೪೨:೧೦)

ಐದು + ಅಷ್ಟು + ಆಶೀರ್ವಾದ = ಐದರಷ್ಟು ಆಶೀರ್ವಾದ (ಆದಿಕಾಂಡ ೪೩:೩೪)

ಹತ್ತು + ಅಷ್ಟು + ಆಶೀರ್ವಾದ = ಹತ್ತರಷ್ಟು ಆಶೀರ್ವಾದ (ದಾನಿಯೆಲ ೧:೨೦)

ನೂರು + ಅಷ್ಟು + ಆಶೀರ್ವಾದ = ನೂರರಷ್ಟು ಆಶೀರ್ವಾದ (ಆದಿಕಾಂಡ ೨೬:೧೨)

ಸಾವಿರ + ಅಷ್ಟು + ಆಶೀರ್ವಾದ = ಸಾವಿರದಷ್ಟು ಆಶೀರ್ವಾದ (ಧರ್ಮೋಪದೇಶ ಕಾಂಡ ೧:೧೧)

ಲಕ್ಷ + ಅಂತರ + ಆಶೀರ್ವಾದ = ಲಕ್ಷಾಂತರ ಆಶೀರ್ವಾದ (ಆದಿಕಾಂಡ ೨೭:೬೦)

ಲೆಕ್ಕವು + ಇಲ್ಲದಷ್ಟು + ಆಶೀರ್ವಾದ = ಲೆಕ್ಕವಿಲ್ಲದಷ್ಟು ಆಶೀರ್ವಾದ (ಆದಿಕಾಂಡ ೧೬:೧೦)

ನವೀನವಾಚಿ ನದಿಗಳು

ನಿರ್ದಿಷ್ಟ + ವಾರ್ಗಿಕ = ನದಿ	**ಅರ್ಥ**
ಐಗುಪ್ತ + ನದಿ = ಐಗುಪ್ತನದಿ	ಲೋಕಸಂಬಂಧ (ಯೋಹಾನ ೨:೧೫)
ಅಬಾನ + ನದಿ = ಅಬಾನ ನದಿ	ಸ್ಥಿರವಾದ (ಕೀರ್ತನೆ ೧೬:೮)
ಪರ್ಪರ + ನದಿ = ಪರ್ಪರ ನದಿ	ಹರಿಯುವ (೨ನೇ ಅರಸು ೫:೨೧)
ಕೆಬಾರ + ನದಿ = ಕೆಬಾರ ನದಿ	ಕೂಡಿಕೊಳ್ಳುವ (ಯೆಹೆಜ್ಕೆಲ್ ೧:೧)
ವಾಲಾ + ನದಿ = ವಾಲಾನದಿ	ಬಲವಾದ (ದಾನಿ ೮:೧೬)

ಇನ್ನು ಕ್ರೈಸ್ತ ಧಾರ್ಮಿಕ ಸಾಹಿತ್ಯದ ಪೂರಕ ಕೃತಿಗಳಲ್ಲಿ ಗಮನಿಸುವಾದರೆ, ಹಲವು ವಿಶೇಷ ಹೊಸ ಹೊಸ ಭಾಷಿಕಾಂಶಗಳನ್ನು ತಿಳಿಯಬಹುದಾಗಿದೆ. ಅಂತಹ ಭಾಷಿಕ ವಿವರಗಳನ್ನು ಹೀಗೆ ಹೇಳಬಹುದು.

ಲೋಗೋಸ್: ಇದು ಗ್ರೀಕ್ ಪದವಾಗಿದೆ. ಈ ಪದಕ್ಕೆ ಕನ್ನಡದಲ್ಲಿ 'ದಿವ್ಯವಾಣಿ' ಎಂದರ್ಥ. ಇದನ್ನು ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಬರುವ ಯೋಹಾನನು ಬರೆದ ಸುವಾರ್ತೆ ೧ನೇ ಅಧ್ಯಾಯ ೧ರಿಂದ ೧೮ ವಚನಗಳಲ್ಲಿ ಕಾಣಬಹುದು. 'ದಿವ್ಯವಾಣಿ' ದೇವರ ನಿಜ ಸಂಕೇತವಾಗಿಯೂ, ದಿವ್ಯದರ್ಶನವಾಗಿಯೂ ಕಂಡುಬರುತ್ತದೆ. ಹೀಬ್ರೂ ಜನರು ಇದನ್ನು ದೇವರ ಸೃಷ್ಟಿ ಮಾಡುವ ಶಕ್ತಿ ಮತ್ತು ದೇವರ ಜ್ಞಾನ ಎಂದರೆ ಗ್ರೀಕರು 'ದಿವ್ಯವಾಣಿ' ವಿಶ್ವದ ಮೂಲ ಮತ್ತು ಜನರು ಅದನ್ನು ತಿಳಿದುಕೊಳ್ಳುವ ಸೂತ್ರ ಎಂದು ಹೇಳಿದರು. ಶುಭಸಂದೇಶಗಳಲ್ಲಿ ಪ್ರಭು ಯೇಸು 'ದಿವ್ಯವಾಣಿ' ಆಗಿದ್ದಾರೆ.

ಮಸ್ಸೀಯ: ಮಸ್ಸೀಯ ಇಬ್ರಿಯ ಪದ ಅದನ್ನು ಗ್ರೀಕ್ ಭಾಷೆಯಲ್ಲಿ 'ಕ್ರಿಸ್ತ' ಎಂದು ಕರೆದರು ಈ ಎರಡೂ ಪದಗಳಿಗೂ ಅರ್ಥ 'ಅಭಿಷಿಕ್ತ' ಎಂದರ್ಥ. ಇಸ್ರಾಯೇಲ ಪರಿಶುದ್ಧ ಗ್ರಂಥಗಳಲ್ಲಿ ದೇವರಿಂದ ಆರಿಸಲ್ಪಟ್ಟವನು ಎಂದು ಸೂಚಿಸಲು ಪ್ರವಾದಿಯಿಂದ ಅಭಿಷೇಕಿಸಲ್ಪಟ್ಟ ರಾಜ ಎಂದು ಹೇಳುತ್ತದೆ. ಇದು ಯೋಹಾನ ೧:೨೦ರಲ್ಲಿ ಬಳಕೆಯಾಗಿದೆ.

ಎಲೀಯ: ಇಸ್ರಯೇಲರ ಕ್ರಿಪೂ. ೯ನೇ ಶತಮಾನದ ಒಬ್ಬ ಸುಪ್ರಸಿದ್ಧ ಪ್ರವಾದಿ ದೈವ ಸಂಕಲ್ಪವನ್ನು ಸಾರುವವನು. (ಯೋಹಾನ ೧:೨೦)

ದೇವರ ಕುರಿಮರಿ: ಇಡಿಯಾಗಿ ಇಂತಹ ಪದವನ್ನು ಕ್ರೈಸ್ತ ಧರ್ಮದಲ್ಲಿ ಮಾತ್ರ ಕಾಣಬಹುದು. ಕನ್ನಡದಲ್ಲಿ ಬಿಡಿಬಿಡಿಯಾಗಿ ಕಾಣುತ್ತೇವೆ. ಪ್ರಭು ಯೇಸು ಪಾಸ್ಕ (ಸುಗ್ಗಿ) ಕಾಲದಲ್ಲಿ ಯಹೂದ್ಯರು ದೇವರಿಗೆ ಬಲಿಯಾಗಿ ಅರ್ಪಿಸುವ ಕುರಿಗೆ ಹೋಲಿಸಲ್ಪಟ್ಟಿದ್ದಾರೆ. ಈ ಪದವನ್ನು ಯೋಹಾನ ೧:೨೯ರಲ್ಲಿ ನೋಡಬಹುದಾಗಿದೆ.

ರಬ್ಬಿ: ಇದು ಹೀಬ್ರೂ ಪದ, ಗುರು/ಬೋಧಕ ಎಂದರ್ಥ. (ಯೋಹಾನ ೩:೨)

ಕುರಿಬಾಗಿಲು: ಯೆರುಸಲೇಮಿನ ಮಹಾದೇವಾಲಯದ ಕ್ಷೇತ್ರದಲ್ಲಿ ಉತ್ತರ ದಿಕ್ಕಿನಲ್ಲಿದ್ದ ಬಾಗಿಲು 'ಕುರಿಬಾಗಿಲು' ಆಗಿದೆ. (ಯೋಹಾನ ೫:೨)

ಸಬ್ಬತ್: ವಾರದ ಏಳನೇ ದಿನ. ಪ್ರವಾದಿ ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಅದು ವಿಶ್ರಾಂತಿ ದಿನವಾಗಿ ಆಚರಿಸ್ಪಟ್ಟಿತು. ಶುಕ್ರವಾರ ಸೂರ್ಯಾಸ್ತದಿಂದ ಶನಿವಾರದ ಸೂರ್ಯಾಸ್ತದವರೆಗೆ 'ಸಬ್ಬತ್' ದಿನವೆಂದು ಗುರ್ತಿಸಲಾಗಿದೆ. ವಿಮೋಚನಾಕಾಂಡ ೨೦:೮–೧೧ರ ವಚನಗಳಲ್ಲಿ ಯಹೋವ ದೇವರು ಸಬ್ಬತ್ ದಿನ ಆಚರಣೆಯ ಬಗ್ಗೆ ವಿವರವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆರು ದಿನ ಕೆಲಸ ಮಾಡಿ ಏಳನೆಯ ದಿನ ವಿಶ್ರಾಂತಿ ದಿನ ಯಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ. (ಯೋಹಾನ ೫:೯)

ಪಾರಕ್ಲೀಟೋಸ್: ಇದು ಗ್ರೀಕ್ ಪದವಾಗಿದ್ದು ಅರ್ಥ ಪಕ್ಕದಲ್ಲಿರಲು ಕರೆಯಲ್ಪಟ್ಟವರು ಇನ್ನೊಂದು ಅರ್ಥದಲ್ಲಿ ಪೋಷಿಸುವವರು ಎಂದರ್ಥ. ಯೋಹಾನ ೧೪:೧೬ರಲ್ಲಿ ಈ ಪದ ಬಳಕೆಯಾಗಿದೆ.

ಮನ್ನಾ: ಮನ್ನಾ ಎಂದರೆ ನಿಘಂಟುವಿನ ಪ್ರಕಾರ ರದ್ದು, ವಿನಾಯಿತಿ, ಪ್ರತಿರೋಧ, ಅಡ್ಡಿ ಎಂದು ವಿವಿಧ ಅರ್ಥಗಳನ್ನು ಗ್ರಹಿಸಬಹುದು. ಆದರೆ ಕ್ರೈಸ್ತ ಸಾಹಿತ್ಯದಲ್ಲಿ 'ಮನ್ನಾ' ಎಂದರೆ ಹೊಸದಾದ ಅರ್ಥವನ್ನು ಕಂಡುಕೊಳ್ಳಬಹುದು. ಯೋಹಾನ ೬:೩೧ರಲ್ಲಿ ನಾವು ಗಮನಿಸುವುದಾದರೆ 'ಪರಲೋಕದಿಂದ ದೇವರು ಕೊಟ್ಟ ರೊಟ್ಟಿ ಆಹಾರವಾಗಿದೆ' ಅದು ಹೇಗಿರುತ್ತದೆ ಎಂದರೆ, ಮಂಜಿನ ಹನಿಗಳಂತೆ ಕಾಣುವ ತೆಳ್ಳಗಿನ ಸಣ್ಣ ಸಣ್ಣ ರವೆಗಳು ಇನ್ನು ವಿವರಕ್ಕಾಗಿ ವಿಮೋಚನ ಕಾಂಡ ೧೬:೩೬ರಲ್ಲಿ ಗೋಮೇರದಷ್ಟು ಅಂದರೆ ಸುಮಾರು ಮೂವತ್ತು ಸೇರು ಮನ್ನಾ (ಆಹಾರ)ವನ್ನು ನೀಡಲಾಯಿತು ಎಂದು ಗಮನಿಸಬಹುದು.

ಹೀಗೆ ಕ್ರೈಸ್ತ ಧಾರ್ಮಿಕ ಸಾಹಿತ್ಯಕ್ಕೆ ಪೂರಕವಾಗಿ ರಚನೆಯಾದ 'ಸತ್ಯ ಮಾರ್ಗ' ಎಂಬ ಪುಸ್ತಕದಲ್ಲಿ ಮೇಲ್ಕಂಡ ಹೊಸ ಹೊಸ ಭಾಷಿಕ ವಿವರಗಳನ್ನು ಗಮನಿಸಲಾಗಿದೆ.

ಬೈಬಲ್‌ನ ವಿಶೇಷ ಸಂಕೇತಗಳು ಮತ್ತು ಭಾಷೆ

ಕ್ರೈಸ್ತ ಪೂರಕ ಗ್ರಂಥವಾದ 'ಸತ್ಯವೇದದ ಮೂಲಬೋಧನೆ' ಎಂಬ ಈ ಕೃತಿಯಲ್ಲಿ ದೇವರ ವಾಕ್ಯವನ್ನು ದೃಷ್ಟಾಂತಿಸಲು ಉಪಯೋಗಿಸಲ್ಪಟ್ಟ ಏಳು ಚಿಹ್ನೆಗಳು ಮತ್ತು ಕನ್ನಡ ಭಾಷೆಯ ಬಳಕೆಯನ್ನು ಗಮನಿಸಲಾಗಿದೆ.

ಕತ್ತಿ: ಸತ್ಯವೇದ(ಬೈಬಲ್)ವು ಚೂಪಾದ ಕತ್ತಿಯಾಗಿದೆ. ವಾಕ್ಯ ಕೇಳುವವರನ್ನು ಮಾನಸಾಂತರಪಡಿಸುತ್ತದೆ. "ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು. ಪ್ರಾಣ, ಆತ್ಮಗಳನ್ನು, ಕೀಲುಮಜ್ಜೆಗಳನ್ನು ವಿಭಾಗಿಸುವಷ್ಟು ಮಟ್ಟಿಗೆ ತೂರಿ ಹೋಗುವಂತದ್ದು" ಎಂದು ಇಬ್ರಿಯರಿಗೆ ಬರೆದ ಪತ್ರಿಕೆ ೪:೧೨ರಲ್ಲಿ ಉಲ್ಲೇಖಿಸಲಾಗಿದೆ. ಅಂದರೆ 'ಕತ್ತಿ–ದೇವರವಾಕ್ಯ' ಎಂದು ಹೊಸದಾದ ಅರ್ಥವನ್ನು ಗ್ರಹಿಸಬಹುದು.

ಚಮ್ಮಟಿಗೆ: ಸತ್ಯವೇದವು ಶಕ್ತಿಯುತವಾಗಿದೆ. ಮತ್ತು ಕೇಳುಗರ ಪ್ರತಿಭಟನೆಯನ್ನು ಒಡೆಯುತ್ತದೆ. "ನನ್ನ ವಾಕ್ಯವು ಬೆಂಕಿಗೂ ಬಂಡೆಯನ್ನು ಹೊಡೆದು ಬಿಡುವ ಚಮಟಿಗೂ ಸಮಾನವಾಗಿದೆಯಲ್ಲ" ಎಂದು ಕರ್ತನು ನುಡಿದಿದ್ದಾನೆ. ಇದನ್ನು ಯೆರೆಮೀಯ ೨೩:೯ರಲ್ಲಿ ಗಮನಿಸಬಹುದು.

ಬೀಜ: ಸತ್ಯವೇದವು ಕೇಳುವುದನ್ನು ಪುನರುಜ್ಜೀವನಗೊಳಿಸುವ ಜೀವವುಳ್ಳ ವಾಕ್ಯವಾಗಿದೆ. ೧ನೇ ಪೇತ್ರ ೧:೨೩ರಲ್ಲಿ ಹೀಗೆ ಉಲ್ಲೇಖವಾಗಿದೆ. "ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ಅದು ದೇವರ ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು" ಎಂದಿದೆ.

ಕನ್ನಡಿ: ಸತ್ಯವೇದವು ನಂಬಿಗಸ್ತ ವಾಕ್ಯವಾಗಿದ್ದು ಕನ್ನಡಿಗೆ ಹೋಲಿಸಲಾಗಿದೆ. ಭಕ್ತನು/ಪಾಪಿಯು ಕರ್ತನು ಚಿತ್ರಿಸಿದ ವಾಕ್ಯವೆಂಬ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡುವನು ಎನ್ನುವುದನ್ನು ಯಾಕೋಬ ೧:೨೩–೨೫ರಲ್ಲಿ ಗಮನಿಸಲಾಗಿದೆ. ಇಲ್ಲಿಯೂ ಕನ್ನಡಿ ಎಂದರೆ ವಾಕ್ಯವಾಗಿದೆ.

ಬೆಂಕಿ: ಸತ್ಯವೇದವು ದಹಿಸುವ ಅಗ್ನಿಯಾಗಿದೆ. ಅದು ಕೇಳುವವರ ಕಲ್ಮಶವನ್ನೆಲ್ಲಾ ದಹಿಸಿಬಿಡುವುದು ಯರೆಮಿಯ ೨೩:೨೯ರಲ್ಲಿ "ನನ್ನ ವಾಕ್ಯವು ಬೆಂಕಿಗೆ ಸಾಮಾನ್ಯವಾಗಿದೆಯಲ್ಲವೇ?" ಎಂಬುದು. ಇಲ್ಲಿ ಬೆಂಕಿ ಮತ್ತು ದೇವರ ವಾಕ್ಯ ಒಂದೇ ಎನ್ನುವ ಅರ್ಥ ನೀಡುತ್ತದೆ.

ಹೀಗೆ ಸತ್ಯವೇದವು 'ಪ್ರಕಾಶಿಸುವ ದೀಪ' ಎಂದು ಕೀರ್ತನೆ ೧೧೯:೧೦೫ರಲ್ಲಿ ನೋಡುತ್ತೇವೆ. ಅಲ್ಲದೆ ಸತ್ಯವೇದವು ಪೋಷಿಸುವ 'ಆಹಾರ' ಎಂಬುದಾಗಿ ೧ನೇ ಪೇತ್ರ ೨:೨ರಲ್ಲಿ "ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಿಸಿರಿ ಅದರಿಂದ ಬೆಳೆಯುತ್ತಾ ರಕ್ಷಣೆ ಹೊಂದುವಿರಿ" ಎಂದು ಬರೆಯಲ್ಪಟ್ಟಿದೆ. ಒಟ್ಟಾರೆಯಾಗಿ ಸತ್ಯವೇದವು ಮೇಲಿನ ಎಲ್ಲಾ ಅಂಗಗಳಿಂದ ಸಂಕೇತ (ಚಿಹ್ನೆ)ವಾಚಿ ಸತ್ಯವೇದ (ಬೈಬಲ್) ಎಂಬುದಾಗಿ ಕರೆಯಿಸಿಕೊಂಡಿದೆ. ಅವುಗಳನ್ನು ವರ್ಗೀಕರಣ ಕೆಳಕಂಡಂತೆ ಮಾಡಬಹುದು.

ನಿರ್ದಿಷ್ಟ + ವಾರ್ಗಿಕ = ಸಂಕೇತವಾಚಿ ಸತ್ಯವೇದ

ಕತ್ತಿ + ಸತ್ಯವೇದ = ಕತ್ತಿ ಸತ್ಯವೇದ

ಚಮ್ಮಟಿಗೆ + ಸತ್ಯವೇದ = ಚಮ್ಮಟಿಗೆ ಸತ್ಯವೇದ

ಬೀಜ + ಸತ್ಯವೇದ = ಬೀಜ ಸತ್ಯವೇದ

ಕನ್ನಡಿ + ಸತ್ಯವೇದ = ಕನ್ನಡಿ ಸತ್ಯವೇದ

ಬೆಂಕಿ + ಸತ್ಯವೇದ = ಬೆಂಕಿ ಸತ್ಯವೇದ

ದೀಪ + ಸತ್ಯವೇದ = ದೀಪ ಸತ್ಯವೇದ

ಆಹಾರ + ಸತ್ಯವೇದ = ಆಹಾರ ಸತ್ಯವೇದ

ಹೀಗೆ ಒಂದೇ ಬೈಬಲನ್ನು ತಾನು ಒಳಗೊಂಡಿರುವ ದೈವ ವಾಕ್ಯದಿಂದ ಹಲವು ನಾಮಗಳಿಂದ ಸಂಬೋಧಿಸಬಹುದು ಎಂದು ಸತ್ಯವೇದ ಮೂಲ ಬೋಧನೆ ಎಂಬ ಪೂರಕ ಕ್ರೈಸ್ತ ಧಾರ್ಮಿಕ ಕೃತಿಗಳಿಂದ ಗಮನಿಸಲಾಗಿದೆ.

೩.೨. ಪದ್ಯ ಸಾಹಿತ್ಯ

ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುವಾಗ ಹಳೆಗನ್ನಡ, ನಡುಗನ್ನಡ, ಹೊಸಗನ್ನಡವೆಂದು ಓದುತ್ತೇವೆ. ಈ ವಿಭಾಗಗಳಲ್ಲಿ ಮೊದಲನೆಯದಾಗಿ ಬರುವ ಹೊಸಗನ್ನಡದಲ್ಲಿಯೇ ನಾವು ಪದ್ಯರೂಪ(ಕವನ)ವನ್ನು ಕಂಡುಕೊಳ್ಳುತ್ತೇವೆ. ಈ ಕವನ ಕುರಿತು ಅಥವಾ ಕಾವ್ಯ ಎಂಬುದನ್ನು ಪದ್ಯ ಸಾಹಿತ್ಯ ಎಂದು ಕರೆಯುತ್ತಾರೆ. ಈ ಪದ್ಯ ಸಾಹಿತ್ಯದೊಂದಿಗೆ ಗದ್ಯ ಸಾಹಿತ್ಯದಲ್ಲಿ ಮಿಶ್ರಣವಾಗಿದುದನ್ನೇ ಚಂಪೂಸಾಹಿತ್ಯ ರೂಪ ಎಂದು ಕರೆಯಲಾಗುತ್ತದೆ. ಆದರೆ ಇಲ್ಲಿ ಕೇವಲ ಕಾವ್ಯರೂಪ ಮಾತ್ರ ಗಮನಿಸಲಾಗಿರುತ್ತದೆ. ಅಂತಹ ಕಾವ್ಯರೂಪಕ್ಕೆ ಶುದ್ಧವಾಗಿ ಪದ್ಯ ಸಾಹಿತ್ಯ ಎಂದು ಕರೆಯಬಹುದು. ಈ ಪದ್ಯ ಸಾಹಿತ್ಯ ಕನ್ನಡದಲ್ಲಿ ಅಧಿಕೃತವಾಗಿ ರಚನೆಯಾಗಿರುವುದು ಕ್ರಿ.ಶ. ೧೯೨೧ರಲ್ಲಿ ಅಂದರೆ ೨೦ನೇ ಶತಮಾನ ಇಲ್ಲಿಗೆ ಸುಮಾರು ೧೦೦ ವರ್ಷಗಳ ಹಿಂದೆಯೇ ಪದ್ಯ ಸಾಹಿತ್ಯರೂಪ ದೊರೆಯಿತು. ಅದು ಬಿ.ಎಂ.ಶ್ರೀ ಅವರ 'ಇಂಗ್ಲೀಷ ಗೀತೆಗಳು' ಎಂಬ ಕವನ ಸಂಕಲನದಿಂದ ಎಂದು ಅಭ್ಯಾಸ ಮಾಡುತ್ತೇವೆ. ಇಂಗ್ಲೀಷ್ ಎಂಬ ತಕ್ಷಣ ಪಾಶ್ಚಿಮಾತ್ಯರು ಎಂಬ ಕಲ್ಪನೆ ಒಳಮೂಡುತ್ತದೆ. ಅಂದರೆ ಪಾಶ್ಚಿಮಾತ್ಯರ ಪ್ರಭಾವವಾಯಿತು ಕನ್ನಡ ಕಾವ್ಯದ ಮೇಲೆ ಎಂದು ಹೇಳಬಹುದು. ಹೀಗೆ ಕನ್ನಡ ಸಾಹಿತ್ಯ ಹಂತಹಂತವಾಗಿ ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಸಂಪಾದನೆ, ಪ್ರಬಂಧ ಎಂದು ಹೊಸ ಸಾಹಿತ್ಯರೂಪಗಳಾಗಿ ಬೆಳೆಯಿತು ಎಂಬುದನ್ನು ತಿಳಿದಿರುವ ಸಂಗತಿಯಾಗಿದೆ.

ಕನ್ನಡ ಸಾಹಿತ್ಯ ಹೊಸಗನ್ನಡ ರೂಪ ಪಡೆಯುವುದಕ್ಕಿಂತ ಮುಂಚೆಯೇ ಪಾಶ್ಚಿಮಾತ್ಯ ಕ್ರೈಸ್ತರ ವಿದ್ವಾಂಸರಿಂದ ಬೈಬಲ್ ಇನ್ನಿತರ ಕೃತಿ ಗ್ರಂಥಗಳು ಕನ್ನಡಕ್ಕೆ ಅನುವಾದಗೊಂಡವು ಎನ್ನಬಹುದು. ಕ್ರೈಸ್ತ ಪಾಶ್ಚಿಮಾತ್ಯ ವಿದ್ವಾಂಸರು ಹಾಗೂ ಕ್ರೈಸ್ತ ಸ್ಥಳೀಯ ಧರ್ಮಗುರುಗಳು ಸಹಿತ ನಾಡಿನ ಜನತೆಗೆ ಧಾರ್ಮಿಕ ಅಂಶಗಳನ್ನು ಅರ್ಥ ಅಥವಾ ಮನನ ಮಾಡುವ ಸಲುವಾಗಿ ಸ್ಥಳೀಯ ಭಾಷೆ ಕನ್ನಡವನ್ನು ಕಲಿತು ಕನ್ನಡದಲ್ಲಿಯ ಸಾಹಿತ್ಯ ರೂಪಗಳಲ್ಲಿಯೇ ಧಾರ್ಮಿಕ ಅಂಶಗಳನ್ನು ಹೇಳಲು

ಪ್ರಯತ್ನಿಸಿದರು. ಈ ಪ್ರಯತ್ನದ ಫಲವಾಗಿಯೇ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಪದ್ಯರೂಪವನ್ನು ಕಾಣಲಾಯಿತು. ಅಂತಹ ಪದ್ಯ ಸಾಹಿತ್ಯವನ್ನು ಪ್ರಸ್ತುತ ಅಧ್ಯಯನದ ಮೂಲಕ ಗುರ್ತಿಸಲಾಗಿದೆ.

ಬೈಬಲ್‌ನಲ್ಲಿ ಉಲ್ಲೇಖಿತವಾಗಿರುವ ಶ್ರೀ ಪೌಲನು ಕೊಲೆಸ್ಸೆಯವರಿಗೆ ಬರೆದ ಪತ್ರಿಕೆ ೩:೧೬ರಲ್ಲಿ "ಕರ್ತನ ಕೃಪೆಯನ್ನು ನೆನೆಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ, ಸಂಗೀತಗಳಿಂದಲೂ, ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ" ಎಂದು ಪ್ರತಿಯೊಬ್ಬ ಭಕ್ತನನ್ನು ಪ್ರಚೋದಿಸುವಂತೆ ಪ್ರಸ್ತುತ ಭಕ್ತರು ಸಂಗೀತಗಳಿಂದ ಸ್ತುತಿಸುತ್ತಿರುತ್ತಾರೆ.

ಕ್ರೈಸ್ತ ಸಂಗೀತ ಮತ್ತು ಕೀರ್ತನೆಗಳು

ಕ್ರೈಸ್ತ ಪದ್ಯ ಸಾಹಿತ್ಯದಲ್ಲಿ ಪ್ರಮುಖವಾಗಿ ಸಂಗೀತಗಳು ಹಾಗೂ ಕೀರ್ತನೆಗಳು ಎಂಬುದಾಗಿ ಸಂಬೋಧಿಸುತ್ತಾರೆ. ಈ ಒಂದು ಗೀತ ಸಾಹಿತ್ಯದಿಂದ ಕ್ರಿಸ್ತನ ಜನನ, ಮರಣ, ಪುನರುತ್ಥಾನ ಅಂಶಗಳನ್ನು ಹೇಳುತ್ತಾರೆ. ಬಹುಮುಖ್ಯವಾಗಿ ಕ್ರಿಸ್ತನನ್ನು ಆರಾಧಿಸುವ, ಪೂಜಿಸುವ ಅಲ್ಲದೆ ದೇವರಿಗೆ ಸ್ತುತಿಸ್ತೋತ್ರ ಸಲ್ಲಿಸುವ ಮತ್ತು ದೇವರಲ್ಲಿ ವಿಜ್ಞಾಪನೆಗಳನ್ನು ಇಡುವುದಾಗಿದೆ. ಹೀಗೆ ಎಲ್ಲಾ ರೀತಿಯ ಹಾಡುಗಳನ್ನು ಕ್ರೈಸ್ತ ಸಮುದಾಯ ಕನ್ನಡದಲ್ಲಿ ರಚಿಸಿಕೊಂಡಿದೆ ಎನ್ನಬಹುದು. ಕ್ರೈಸ್ತ ಧರ್ಮ ಗ್ರಂಥ ಬೈಬಲಿನ ಮಾತುಗಳನ್ನು ಗೀತೆಯ ರೂಪದಲ್ಲಿ ರಚಿಸಿರುವುದನ್ನು ಗಮನಿಸಲಾಗಿದೆ. ಉದಾಹರಣೆಗಾಗಿ ಬೈಬಲಿನ ಹಳೆ ಒಡಂಬಡಿಕೆಯಲ್ಲಿ ಬರುವ ದಾವೀದನೆಂಬ ಪ್ರವಾದಿ ದೈವಸಂಭೂತನಾಗಿ ಬರೆದಿರುವ ಕೀರ್ತನೆಗಳನ್ನು ಹೇಳಬಹುದು. ಹೀಗೆ ಹಲವು ಹಾಡುಗಳನ್ನು ಅಭಿಷಿಕ್ತರಾಗಿ ರಚಿಸಿ ಯೇಸು(ಮಗ) ಯೆಹೋವ (ತಂದೆ) ಪವಿತ್ರಾತ್ಮ ಎಂದು ತ್ರೈಯೇಕ ದೇವರ ನಾಮದಲ್ಲಿ ಹಾಡುವ ಸಂಪ್ರದಾಯವಿದೆ. ಈ ಹಾಡುಗಳನ್ನು ಎಲ್ಲಾ ಕ್ರೈಸ್ತ ಪಂಗಡಗಳಲ್ಲಿ ಕಾಣಬಹುದಾಗಿದೆ. ಈ ಕ್ರೈಸ್ತ ಗೀತೆಗಳನ್ನು ಬರೆಯಲ್ಪಟ್ಟ ಕೃತಿ ಅಥವಾ ಪುಸ್ತಕಗಳು ಹಲವಾರು ಇವೆ. ಅವುಗಳಲ್ಲಿ ಕೆಲವನ್ನು ಹೀಗೆ ಹೇಳಬಹುದು.

ಪ್ರೊಟೆಸ್ಟೆಂಟ್ ಪಂಗಡದ ಗೀತ ಪುಸ್ತಕಗಳು

* ಕನ್ನಡ ಸಂಗೀತ ಸಂಗ್ರಹ ಹಾಗೂ ಕನ್ನಡ ಕೀರ್ತನೆಗಳು– ಸ್ಟಾರ್‌ಲೈಟ್ ಪ್ರಿಂಟರ್ಸ್, ಬೆಂಗಳೂರು.

* ನಡೆ ಬಿಡುಗಡೆಯ ಕಡೆ– ರೆಡ್ಡಿ ಪ್ರಿಂಟರ್ಸ್, ಹಳೆ ಸರ್ಕಾರಿ ಆಸ್ಪತ್ರೆ ಹಿಂದುಗಡೆ, ಯಾದಗಿರಿ

* ಆತ್ಮೀಯ ಸ್ತುತಿ ಆರಾಧನೆಯ ಗೀತೆಗಳು – ಅಗಾಪೆ ಎ.ಜಿ. ಚರ್ಚ್, ಆಶಾಪೂರ ರಸ್ತೆ, ರಾಯಚೂರು.

* ಉಜ್ಜೀವನ ಗೀತೆಗಳು – ಸೆಲ್ವಿನ್ ಕ್ರಿಸ್ಟೋಫರ್ ಜಾರ್ಜ್, ಅನುದಿನದ ಆಹಾರ, ಈಜಿಪುರ, ವಿವೇಕನಗರ, ಬೆಂಗಳೂರು.

* ಬನ್ನಿರಿ ಆರಾಧಿಸೋಣ – ಯುವಿಎಸ್ಐ ೧೦, ಮಿಲ್ಲರ್ಸ್ ರೋಡ್, ಚೆನ್ನೈ.

ಕೆಥೋಲಿಕ್ ಕ್ರೈಸ್ತ ಗೀತ ಪುಸ್ತಕ

* ಚೇತನ (ಕ್ರೈಸ್ತ ಧಾರ್ಮಿಕ ಭಕ್ತಿ ಗೀತೆಗಳು) – ಸಂಚಲನ ಪ್ರಕಾಶನ, ನಾರಾಯಣ ನಗರ, ಕನಕಪುರ ಮುಖ್ಯ ರಸ್ತೆ, ಬೆಂಗಳೂರು.

ಹೀಗೆ ಕ್ರೈಸ್ತ ಧಾರ್ಮಿಕ ಕೆಲವು ಗೀತ ಪುಸ್ತಕಗಳನ್ನು ಗುರುತಿಸಿ ಪಂಗಡಕ್ಕೆ ಅನುಗುಣವಾಗಿ ಗೀತೆಗಳಲ್ಲಿನ ಭಾಷಿಕ ಅಂಶಗಳನ್ನು ವಿವರಿಸಲಾಗಿದೆ.

೩.೨.೧. ಕೆಥೋಲಿಕ್ ಕ್ರೈಸ್ತ ಗೀತೆಗಳು

ಮೊಟ್ಟ ಮೊದಲು ಕರ್ನಾಟಕದಲ್ಲಿ ಕೆಥೋಲಿಕ್ ಕ್ರೈಸ್ತತ್ವ ಎಂಬುವುದು ೧೫೦೨ರಲ್ಲಿ ಮುದುಗಲ್‌ನಲ್ಲಿ ಸ್ಥಾಪನೆಯಾಯಿತು ಎಂಬುದಾಗಿ ಅಂದಿನಿಂದ ಇಲ್ಲಿಯವರೆಗೂ ಈ ಕ್ರೈಸ್ತ ಪಂಗಡ ಹತ್ತು ಹಲವು ರೆಂಬೆಕೊಂಬೆಗಳಾಗಿ ಬೃಹತ್ತಾದ ಆಲದ ಮರದಂತೆ ಬೆಳೆಯುತ್ತಲೇ ಇದೆ. ಇಂತಹ ಸುದೀರ್ಘವಾದ ಇತಿಹಾಸವನ್ನು ಹೊಂದಿದ ಕ್ರೈಸ್ತರು (ಕೆಥೋಲಿಕ್) ದೇವರನ್ನು ಸ್ತುತಿಸುವಾಗ, ಆರಾಧಿಸುವಾಗ, ಸ್ಮರಿಸುವಾಗ ಅನೇಕ ಹಾಡುಗಳ ಮೂಲಕ ಸ್ತೋತ್ರ ಸಲ್ಲಿಸುವುದನ್ನು ಕಾಣುತ್ತೇವೆ. ಕೆಥೋಲಿಕ್ ಕ್ರೈಸ್ತರು ಕನ್ನಡದಲ್ಲಿ ಕ್ರಿಸ್ತನ ಮಹಿಮೆ ಪಡಿಸುವ, ಹಬ್ಬ ಆಚರಿಸುವ, ಸಂತರನ್ನು ಸ್ಮರಿಸುವ, ಸಂತರೆಂದರೆ ಯೇಸುಕ್ರಿಸ್ತನ ಸಲುವಾಗಿ ಬದುಕಿ ಸೇವೆ ಮಾಡಿ ಇಹಲೋಕ ತ್ಯಜಿಸಿರುವವರು ಹಿಂದು ಧರ್ಮದ ಪ್ರಕಾರ ಪೂಜಾರಿ ಸನ್ಯಾಸಿಯಂತೆ ಕೆಥೋಲಿಕರಲ್ಲಿ ಸಂತರು ಎಂದು ಅನುಮೋದಿಸಿ ಬಳಸುತ್ತಾರೆ. ಕ್ರೈಸ್ತ ಧಾರ್ಮಿಕ ಸಾಹಿತ್ಯದ ಮೂಲ ಇಬ್ರಿಯ, ಗ್ರೀಕ್ ಭಾಷೆಯಾದ್ದರಿಂದ ಕನ್ನಡ ಬೈಬಲ್‌ನಲ್ಲಿ ಅಲ್ಲಲ್ಲಿ ಮೂಲ ಭಾಷೆಯ ಪದಗಳನ್ನು ಹಾಗೆಯೇ ಪದ್ಯಗಳಲ್ಲಿ ಲ್ಯಾಟಿನ್ ಗೀತೆಗಳನ್ನು ಸಹಿತ ಗಮನಿಸಬಹುದಾಗಿದೆ. ಆರಂಭದಲ್ಲಿ ಲ್ಯಾಟಿನ್ ಭಾಷೆಯ ಗೀತೆಗಳನ್ನು ಕನ್ನಡದಲ್ಲಿ ಬರೆಯಿಸಿ ಹಾಡುತ್ತಿದ್ದರು. ಪ್ರಸ್ತುತ ಸುಮಾರು ಹಾಡುಗಳನ್ನು ಅನುವಾದ ಮಾಡಿ ಹಾಡುತ್ತಾರೆ. ಆದರೂ ಈಗಲೂ ಕೆಲವು ಹಾಡುಗಳನ್ನು ಹಾಗೆಯೇ ಲ್ಯಾಟಿನ್ ಭಾಷೆಯಲ್ಲಿಯೇ ಹಾಡುವುದನ್ನು ಕ್ರೈಸ್ತ ಗೀತಾ ಪುಸ್ತಿಕೆಗಳಲ್ಲಿ ಮುದ್ರಿಸಿರುವುದನ್ನು ಕಾಣುತ್ತೇವೆ. ಅಲ್ಲದೆ ಕೆಥೋಲಿಕ್ ಕ್ರೈಸ್ತರು ಹಿಂದೂ ಧರ್ಮದ ಪದಗಳನ್ನು ವಿಶೇಷವಾಗಿ ಬಳಸುತ್ತಾರೆ ಎನ್ನಬಹುದು.

ಹೀಗೆ ರಚನೆಗೊಂಡಿರುವ ಕ್ರೈಸ್ತ ಗೀತೆಗಳಲ್ಲಿ ಬಳಕೆಯಾಗಿರುವ ಕನ್ನಡ ಭಾಷಿಕ ಅಂಶಗಳನ್ನು ಕೆಳಕಂಡಂತೆ ವಿಶ್ಲೇಷಿಸಬಹುದು.

೧. ಓ ತರ್ಕ ದೇವರೇ ಸ್ವರ್ಗ ಲೋಕ ರಾಜರೇ
ಸರ್ವಶಕ್ತ ದೇವರೇ ಪ್ರೀತಿ ಪಾತ್ರ ತಂದೆಯೇ
ಹೊಗಳಿ ಸ್ತುತಿಸಿ ನಮಿಪೆವು ಆರಾಧಿಸುವೆವು
ಶ್ರೇಷ್ಠ ನಿಮ್ಮ ಮಹಿಮೆಯು ಎಂದು ಸ್ತೋತ್ರ ಗೈವೆವು

೨. ಪಿತನ ಏಕ ತನುಜರೆ ಕರ್ತ ಯೇಸುಕ್ರಿಸ್ತರೇ
ಪರಮ ಪೂಜ್ಯ ದೇವರೇ ಪಿತನ ಪ್ರೇಮ ಕುವರರೇ
ಜಗಕೆ ಮುಕ್ತಿ ದಾತರೇ ಕರುಣೆ ತೋರಿ ಕ್ರಿಸ್ತರೇ
ಜಗಕೆ ಮುಕ್ತಿ ದಾತರೇ ಆಲಿಸೆಮ್ಮ ಪ್ರಾರ್ಥನೆ

೩. ಪಿತನ ಸನಿಹ ಕುಳಿತಿಹ ರಾಜ್ಯಭಾರ ನಡೆಸುವ
ಸ್ವಾಮಿ ಯೇಸುಕ್ರಿಸ್ತರೇ ತೋರಿ ಎಮಗೆ ಕರುಣೆಯ
ನೀವೇ ಪರಮ ಶುದ್ಧರು ನೀವೇ ಏಕ ಕರ್ತರು ನೀವೇ ಸರ್ವ ಶ್ರೇಷ್ಠರು

೪. ಸ್ವರ್ಗಲೋಕದಲ್ಲಿಹ ಪಿತನ ಮಹಿಮೆ ಹೊಂದಿಹ
ಪರಮ ಪಾವನಾತ್ಮನ ಜೊತೆಯೆ ಕೂಡಿ ಬಾಳುವ
ಸ್ವಾಮಿ ಯೇಸುಕ್ರಿಸ್ತರೇ ನಿರುತ ನಿಮಗೆ ವಂದನೆ

ಸ್ವರ್ಗಲೋಕ ತಂದೆಗೆ ಪರಮ ಮಹಿಮೆ ಸಲ್ಲಲಿ ಭುವಿಯಲ್ಲಿರುವ ಮನುಜಗೆ ಸದಾ ಶಾಂತಿ ಲಭಿಸಲಿ

೧. ಕರ್ತ ಯೇಸು ಕ್ರಿಸ್ತರೆ ಸ್ವರ್ಗ ಲೋಕ ರಾಜರೇ
ಪಿತನ ಏಕ ಕುವರರೇ ಸರ್ವ ಸೃಷ್ಟಿ ಒಡೆಯರೆ
ನಿತ್ಯವು ನಿಮ್ಮನ್ನು ಹೊಗಳುತ ಹಾಡ್ವೆವು ನಿಮ್ಮಯ ಚರಣಕೆ ವಂದಿಸಿ ಬಾಳವು
ಕೀರ್ತಿಸಿ ನಿಮ್ಮನ್ನು ಮಹಿಮೆ ಗೈವೆವು

೨. ದೇವ ಪ್ರಿಯ ಪುತ್ರರೇ ಕನ್ಯಾ ಮೇರಿ ಕುವರರೇ
ಅರ್ಪಿಪ ನಮ್ಮ ಬಲಿಯಲ್ಲಿ ಪಾವನಾತ್ಮರು ನೀವೇ

ಓಂ ಭಗವಾನ್ ಶರಣಂ

೧. ಪ್ರೀತಿ ಸ್ವರೂಪನೇ ಶರಣಂ ॥ ದಿವ್ಯ ಜ್ಯೋತಿಯೇ ಶರಣಂ
ಕರುಣಾ ಮೂರ್ತಿಯೇ ಶರಣಂ

೨. ಜೀವದಾತನೇ ಶರಣಂ ॥ ದಿವ್ಯ ತೇಜನೇ ಶರಣಂ
ಶಾಂತಿದಾತನೇ ಶರಣಂ

೩. ದೇವ ದೇವನೇ ಶರಣಂ ॥ ಲೋಕ ಪಾಲನೇ ಶರಣಂ
ಪ್ರೀತಿ ಪಾಲನೇ ಶರಣಂ

ಓಂ ಜಗದೀಶ್ವರ ಸದಾಪಿ ಚಿನ್ಮಯ ಜಗದೀಶ್ವರಂ ವಂದೇ

ಓಂ ಪರಿಪೂಜಿತ ಪರಾತ್ಮರಾತ್ಮ ಪರಾತ್ಪರಾತ್ಮ ಅನವರತಂ ವಂದೇ

ಓಂ ಪ್ರಭು ಪಿತನೇ ಶರಣಂ ಓಂ ಪ್ರಭು ಸುತನೇ ಶರಣಂ

ಓ ಪ್ರಭು ಆತ್ಮನೆ ಶರಣಂ ॥ ತ್ರೈಯೇಕ ದೇವನೆ ಶರಣಂ

ಓಂ ಪ್ರಭು ದೇವಾ ಶರಣಂ ಶರಣಂ

ಈ ಮೇಲ್ಕಂಡ ತ್ರಿಪದಿ ಮತ್ತು ಕಂದ ರೂಪದ ಪದ್ಯಗಳಲ್ಲಿ ಸ್ತುತಿ, ಸ್ತೋತ್ರ ಅಥವಾ ಶ್ಲೋಕ ರೀತಿಯ ಮೂರು ಸಾಲು, ನಾಲ್ಕು ಸಾಲಿನಲ್ಲಿ ಗೀತೆಗಳು ರಚನೆಯಾಗಿದ್ದು ಕಂಡುಬರುತ್ತವೆ. ನಿರ್ದಿಷ್ಟ ಮತ್ತು ವಾರ್ಗಿಕಗಳಂತೆ ಬರೆಯಲ್ಪಟ್ಟಿವೆ. ಅಲ್ಲದೆ ಕ್ರೈಸ್ತ ಧರ್ಮ ಗೀತೆಗಳು ಸಮಾಸ ರೂಪಗಳನ್ನು ಒಳಗೊಂಡಿವೆ. ಮತ್ತು ಗೀತೆಗಳಲ್ಲಿ ಹಿಂದೂ ಧರ್ಮದ ಪರಿಭಾಷೆಯನ್ನು (ತಾಳ, ಲಯ) ಕಾಣಬಹುದಾಗಿದೆ. ಉದಾ.

ಸ್ತೋತ್ರ ಭಾಷೆ

ನಿರ್ದಿಷ್ಟ + ನಿರ್ದಿಷ್ಟ + ವಾರ್ಗಿಕ = ಕ್ರೈಸ್ತ ಪರಿಭಾಷೆ

ಓ + ಕರ್ತ + ದೇವರೆ = ಓ ಕರ್ತ ದೇವರೆ

ಸ್ವರ್ಗ + ಲೋಕ + ರಾಜರೆ = ಸ್ವರ್ಗ ಲೋಕ ರಾಜರೆ

ಪ್ರೀತಿ + ಪಾತ್ರ + ತಂದೆಯೇ = ಪ್ರೀತಿ ಪಾತ್ರ ತಂದೆಯೇ

ಪಿತನ + ಏಕ + ತನುಜರೇ = ಪಿತನ ಏಕ ತನುಜರೇ

ಕರ್ತ + ಯೇಸು + ಕ್ರಿಸ್ತರೇ = ಕರ್ತ ಯೇಸು ಕ್ರಿಸ್ತರೇ

ಪರಮ + ಪೂಜ್ಯ + ದೇವರೇ = ಪರಮಪೂಜ್ಯ ದೇವರೇ

ಪಿತನ + ಪ್ರೇಮ + ಕುವರರೇ = ಪಿತನ ಪ್ರೇಮ ಕುವರರೇ

ಸ್ವಾಮಿ + ಯೇಸು + ಕ್ರಿಸ್ತರೇ = ಸ್ವಾಮಿ ಯೇಸು ಕ್ರಿಸ್ತರೇ

ದೇವ + ಪ್ರಿಯ + ಪುತ್ರರೇ = ದೇವ ಪ್ರಿಯ ಪುತ್ರರೇ

ಬಹುವ್ರೀ ಸಮಾಸ ರಚನಾ ರೂಪಗಳು

ಪಿತನ + ಏಕ + ಕುವರ = ಯೇಸು ಕ್ರಿಸ್ತ

ಕನ್ಯಾ + ಮೇರಿ + ಕುವರ = ಯೇಸು ಕ್ರಿಸ್ತ

ಪಿತನ + ಏಕ + ತನುಜ = ಯೇಸು

ಸ್ವಾಮಿ + ಯೇಸು + ಕ್ರಿಸ್ತ = ಯೇಸು

ಕರ್ತ + ಯೇಸು + ಕ್ರಿಸ್ತ = ಯೇಸು

ತ್ರ + ಏಕ + ದೇವ = ಯೇಸು

ಶಿಲುಬೆ + ಹೊತ್ತವ = ಯೇಸು

ಸಾವಿನ + ಕೊಂಡಿಯ + ಮುರಿದವ = ಯೇಸು

ಇಷ್ಟದಿಂ + ಗಾಯವ + ಪಟ್ಟವ = ಯೇಸು

ಹಾಗೆಯೇ ಹಿಂದೂ ಸಂಸ್ಕೃತಿಯ ಸ್ವರ, ತಾಳ, ಲಯದಂತೆ ಕ್ರೈಸ್ತರು 'ಶರಣಂ' ಎಂಬ ಪದವನ್ನು ಸಹಿತ ಬಳಸುತ್ತಾರೆ. ಅಲ್ಲದೆ ಓಂ ಎಂಬ ಶಾಂತಿಮಂತ್ರವನ್ನು ಕೂಡ ಆರಾಧನೆಯಲ್ಲಿ ಬಳಸುತ್ತಿರುವುದನ್ನು ಮೇಲಿನ ಪದ್ಯಗಳ ಮೂಲಕ ಗಮನಿಸಲಾಗಿದೆ. ಉದಾ.

ಪ್ರೀತಿ ಸ್ವರೂಪನೇ ಶರಣಂ

ದಿವ್ಯ ಜ್ಯೋತಿಯೇ ಶರಣಂ

ಕರುಣಾಮೂರ್ತಿಯೇ ಶರಣಂ ಎಂಬುದಾಗಿದೆ.

ಈ ಕೆಳಕಂಡ ಪದ್ಯದ ಸಾಲುಗಳನ್ನು ಗಮನಿಸಿದರೆ ಒಂದು ಸಾಲಿನ ಪದ್ಯದಂತೆ ಭಾಸವಾಗುತ್ತವೆ. ಸಾಮಾನ್ಯವಾಗಿ ಕನ್ನಡ ತ್ರಿಪದಿ, ಕಂದ ಮತ್ತು ದ್ವಿಪದಿ ಸಾಲಿನ ಪದ್ಯಗಳು ಇರುವುದು ಸಾಮಾನ್ಯ. ಆದರೆ ಕ್ರೈಸ್ತರಲ್ಲಿ ಏಕಪದಿ ಅಥವಾ ಒಂದೇ ಸಾಲಿನ ಪದ್ಯಗಳನ್ನು ಕೆಥೋಲಿಕ್ ಕ್ರೈಸ್ತ ಗೀತೆಗಳಲ್ಲಿ ಕಾಣಬಹುದಾಗಿದೆ. ಅಲ್ಲದೆ ಕ್ರಿಸ್ತನ ಗುಣಗಾನ ಮಾಡುವ ಶಬ್ದಗಳು ಸಹಿತ ಹೇರಳವಾಗಿ ಕನ್ನಡದಲ್ಲಿ ಬಳಕೆಯಾಗಿವೆ. ಅಂತಹವುಗಳನ್ನು ಹೀಗೆ ವರ್ಗೀಕರಿಸಬಹುದು.

೧. ತ್ರಿತ್ವಂತ ದೇವಗೆ ಮಂಗಳವು

೨. ಇಹಪರದೊಡೆಯಗೆ ಮಂಗಳವು

೩. ಸನ್ನುತ ದೇವಗೆ ಮಂಗಳವು

೪. ಪ್ರೇಮದ ಮೂಲಗೆ ಮಂಗಳವು

೫. ರಕ್ಷಣೆದಾತೆಗೆ ಮಂಗಳವು

೧. ಪ್ರೇಮದಿ ನಾಮದಿ ಜಯಕ್ರಿಸ್ತಾ ॥ ಪಾಪವ ಜಯಿಸಿದ ಜಯಕ್ರಿಸ್ತಾ

೨. ಪಾಡನು ಪಡುತಲಿ ಜಯಕ್ರಿಸ್ತಾ ॥ ಕೇಡನು ಜಯಿಸಿದೆ ಜಯಕ್ರಿಸ್ತಾ

೩. ಪುನರುತ್ಥಾನದಿ ಜಯಕ್ರಿಸ್ತಾ । ಮೃತ್ಯುವ ಜಯಿಸಿದೆ ಜಯಕ್ರಿಸ್ತಾ

೪. ಜಗದೋದ್ಧಾರಕ ಜಯಕ್ರಿಸ್ತಾ ॥ ಭಗವಂತನ ವರ ಜಯಕ್ರಿಸ್ತಾ

೫. ಪರರನು ಕ್ಷಮಿಸುತ ಜಯಕ್ರಿಸ್ತಾ ॥ ನರರೊಳು ಬಾಳಿದೆ ಜಯಕ್ರಿಸ್ತಾ

ಬನ್ನಿರಿ ಬಂಧುಗಳೇ ಕೈಯಲ್ಲಿ ಗರಿಗಳ ಪಿಡಿದು ಪಾಡುತ ಹೊಸಾನ್ನ ಪೋಗುವ ಕರ್ತರ ಸನ್ನಿಧಿಗೆ ಹೋಸಾನ್ನ ಹೋಸಾನ್ನ ಹೋಸಾನ್ನ

೧. ದಾವಿದ ಕುವರಗೆ ಹೋಸಾನ್ನ ॥ ಕರ್ತರ ಪುತ್ರಗೆ ಹೋಸಾನ್ನ

೨. ಇಸ್ರಯೇಲ್ ರಾಜಗೆ ಹೋಸಾನ್ನ ॥ ಮಹೋನ್ನತದಲ್ಲಿ ಹೋಸಾನ್ನ

೩. ಕನ್ಯೆಯ ಸುತನಿಗೆ ಹೋಸಾನ್ನ ॥ ಭಗವಾನ್ ಯೇಸುಗೆ ಹೋಸಾನ್ನ

೪. ರಕ್ಷಕ ನಾಥಗೆ ಹೋಸಾನ್ನ ॥ ಮೃತ್ಯಂಜಯನಿಗೆ ಹೋಸಾನ್ನ

೫. ಜಗತ್ತಿನ ಜ್ಯೋತಿಗೆ ಹೋಸಾನ್ನ ॥ ಜ್ಯೋತಿಯ ಮೂಲಗೆ ಹೋಸಾನ್ನ

೬. ಪ್ರೇಮ ಸ್ವರೂಪಗೆ ಹೋಸಾನ್ನ ॥ ಜೀವದ ದಾತಗೆ ಹೋಸಾನ್ನ

೭. ಶಾಂತಿಯ ಧಾಮಗೆ ಹೋಸಾನ್ನ ॥ ಜೀವದ ದಾತಗೆ ಹೋಸಾನ್ನ

೮. ಇಹಪರ ರಾಯಗೆ ಹೋಸಾನ್ನ ॥ ರಾಜಾದಿ ರಾಜಗೆ ಹೋಸಾನ್ನ

೯. ನರರ ಸಂಜೀವಗೆ ಹೋಸಾನ್ನ ॥ ಸರುವರ ಪಾಲಗೆ ಹೋಸಾನ್ನ

೧೦. ಶ್ರೀ ಯೇಸುಸ್ವಾಮಿ ಹೋಸಾನ್ನ – ೨

ಈ ಮೇಲಿನ ಪದ್ಯಗಳಲ್ಲಿ ಭಾಷಿಕವಾಗಿ ಗುಣವಾಚಕ ಶಬ್ದಗಳನ್ನು ಗಮನಿಸಬಹುದು. ಅವು ಈ ರೀತಿ ಇವೆ.

ಪ್ರೇಮನಾಮದ ಕ್ರಿಸ್ತ	ಕೇಡನು ಜಯಿಸಿದ ಕ್ರಿಸ್ತ
ಮೃತ್ಯುವ ಜಯಿಸಿದ ಕ್ರಿಸ್ತ	ನರರೊಳ್ ಬಾಳಿದ ಕ್ರಿಸ್ತ
ದಾವೀದ ಕುಮಾರ	ಇಸ್ರಾಯೇಲರ ರಾಜ
ಕರ್ತರ ಪುತ್ರ	ಕನ್ಯೆಯ ಸುತ
ಭಗವಾನ್ ಯೇಸು	ರಕ್ಷಕನಾಥ
ಮೃತ್ಯುಂಜಯ	ಜಗತ್ತಿನ ಜ್ಯೋತಿ
ಪ್ರೇಮಸ್ವರೂಪ	ಜೀವಧಾತ
ಜ್ಯೋತಿಯ ಮೂಲ	ಶಾಂತಿಯ ಧಾಮ
ಇಹಪರ ರಾಯ	ನರರ ಸಂಜೀವ
ಸರ್ವರ ಪಾಲ	

ದ್ವಿಪದಿ ಸಾಲಿನ ಪದ್ಯಗಳು

೧. ಕ್ರಿಸ್ತರೊಡನೆ ನಾವು ಎಲ್ಲಾ ಪಾಪಗಳಿಗೆ ಸತ್ತೆವು
ಮಹಿಮೆಯಿಂದ ಕ್ರಿಸ್ತರೆದ್ದು ಜೀವವೆಮಗೆ ಕೊಟ್ಟರು

೨. ಇಂದಿನಿಂದ ದೇವದಾಸ ಮನುಜರಲ್ಲಿ ಇರುವುದು
ದೇವ ರಾಜ್ಯದಲ್ಲಿ ಅವನು ನಿತ್ಯ ಪ್ರಜೆಯಾಗಿರುವನು

೩. ದೇವರಿಂದ ಹುಟ್ಟಿದಾತ ಪಾಪವೆಂತು ಮಾಡ್ವನು
ಜೀವವೀವ ವೃಕ್ಷದೆಡೆಗೆ ಬಂದ ನೀವು ಧನ್ಯರು
ವೃಕ್ಷದಿಂದ ಫಲವ ನೀವು ತೋಷದಿಂದ ಭುಜಿಸಿರಿ

ಗುಪ್ತ ಎನ್ನ ದೇವಾ ನಮಿಪೆ ನಿಮ್ಮ ರೊಟ್ಟಿ ರೂಪದೊಳ್ ನೀವ್ ಇದ್ದಿರಿ ನಿಜ ಪ್ರೇಮದೊಳು ನಿಮ್ಮ ಎನ್ನ ಸರ್ವಾತ್ಮ ಸಹನೆ ದಿನಾ ಕೋರುತ್ತಿದೆ ನಿಮ್ಮ

೧. ದೃಷ್ಟಿ ಸ್ಪರ್ಶ ಸ್ವಾದ ಅರಯೆವೆಂದೂ ॥ ತಮ್ಮ ಮಾತಿನೊಳ್ ವಿಶ್ವಾಸ ಎನ್ನದು
ದೇವ ಪುತ್ರನನು ನಾ ನಂಬುವೆನು ॥ ಈ ಸತ್ಯವಂ ಸತ್ಯವೆಂದೊಪ್ಪುವೆನು

೨. ಶಿಲುಬೆ ಮೇಲ್ ಅವಿತಿತ್ತು ದೈವತ್ವ ॥ ಇಲ್ಲಿ ಕಾಣೆನು ಮನುಸ್ವಭಾವ ಸಹ
ದ್ವಿಸ್ವಭಾವಂ ನಂಬಿ ಸಮರ್ಥಿಪೆ ॥ ಸತ್ ಕಳ್ಳನು ಬೇಡಿದ್ದನ್ನೇ ಬೇಡುವೆ

ದೇವರಿಗೆ ಕೃತಜ್ಞತೆ ಸಲ್ಲಲಿ ಮಹೋನ್ನತ ದೇವರಿಗೆ ಕೃತಜ್ಞತೆ ಸಲ್ಲಲಿ

೧. ಭಕ್ತರ ಬಲಿಯನು ಸ್ವೀಕರಿಸಿ ॥ ಎಮ್ಮಯ ಪಾಪವ ಪರಿಹರಿಸಿ
ಪುತ್ರನ ದೇವಹಂ ಅನುಗ್ರಹಿಸಿ ॥ ಪಕ್ಷದಿಂ ಎನ್ನನು ಪಾಲಿಸಿದಿ

೨. ಸ್ವಾಮಿಯ ಪಾದವ ನಾ ಪಿಡಿದು ॥ ಕಷ್ಟ ಸಂಕಷ್ಟವಂ ನಾ ನುಡಿದು
ಧೈರ್ಯವಂ ಸ್ಥೈರ್ಯವಂ ನಾ ಕೋರಲು ॥ ಪಾಪಿಯಂ ಪ್ರೀತಿಯಿಂ ತಡವಿದರು

೩. ಪ್ರೇಮಕೆ ಪ್ರತಿಯಾಗಿ ದೇವರಿಗೆ ವಂದನೆ ಇಂದು
ಸಲ್ಲಿಸಲೇನೆ ಪೂರ್ಣ ಹೃದಯದಿ ॥ ಎನ್ನನರ್ಪಿಸೆ ಪ್ರೀತಿಯ ಕಾಣಿಕೆ ಸ್ವೀಕರಿಸು

ಕರ್ತರ ದಯೆಯನ್ನು ಹಾಡುವೆನು ಎಂದೆಂದಿಗೂ ಹಾಡುವೆನು

೧. ತಲತಲಾಂತರದವರೆಗೂ ಅವರ ಸತ್ಯವ ಸಾರುವೆನು

೨. ಪಿತನಿಗೂ ಸುತನಿಗೂ ಆತ್ಮನಿಗೂ ಆದಿಯಲ್ಲಿದ್ದಂತೆ ಈಗಲೂ ನಿತ್ಯವೂ ಮೂವರಿಗೂ ಮಹಿಮೆ

* ಲ್ಯಾಟಿನ್ ಗೀತೆಗಳು

ಎಂಥಾ ದಿವ್ಯ ಸಂಸ್ಕಾರದ ಹಾಡು

ತಾನ್ತುಂ ಎರ್ಗೋ ಸಾಕ್ರಮೆನ್ತುಮ್
ವೆನೆರೆಮುರ್ ಸೆರ್ನುಯಿ
ಎತ್ ಅನ್ತಿಕುವೂಮ್ ದೊಕ್ಯುಮೆನ್ತುಮ್
ನೊವೊ ಸೆದಾತ್ ರಿತುಯಿ
ಪ್ರೇಸ್ತೆತ್ ಫಿದೇಸ್ ಸುಪ್ಲೆಮೆನ್ತುಮ್
ಸೆನ್ಸುವೂಮ್ ದಿಫೆಕ್ತುಯಿ
ಜೆನಿತೊರಿ, ಜೆನಿತೊಕ್ವೇ
ಲೌಸ್ ಎತ್ ಯುಬಿಲಾತ್ಸಿಯೊ
ಸಾಲುಸ್ ಹೊನರ್ ವಿರ್ತೂಸ್ ಕೊಕ್ವೆ
ಸಿತ್ ಎತ್ ಬೆನೆದಿಕ್ತ್‌ಸಿಯೊ
ಪ್ರೊಚೆಂದೆಂತಿ ಅಬ್ ಉತ್ರೊಕ್ವೇ
ಕೊಮ್ಪಾರ್ ಸಿತ್ ಲೌದಾತ್ಸಿಯೊ, ಆಮೆನ್.

ನಿತ್ಯ ಮರಣದಿಂದ ಮುಕ್ತಿಗೊಳಿಸಲು ಹಾಡು

ಲಿಬೆರಾಮೆ ದೊಮಿನೆ, ದೆ ಮೋರ್ತೆ ಎತೆರ್ನಾ
ಇನ್ ದೀ ಇಲ್ಲ ತ್ರೆಮೆಂದಾ
ಕ್ವಾನ್ದೋ ಚೆಲ್ಲಿ ಮೊವೆಂದಿ ಸುನ್ತ್ ಎತ್ ತೆರ್ರಾ
ದುಮ್ ವೆನೆರಿಸ್ ಯೂದಿಕಾರೆ ಸೇಕುಲುಮ್ ಪೆರ್ ಇಗ್ನೇಮ್
ತ್ರೆಮೆನ್ಸ್‌ಫಾಕ್ತುಸ್ ಸುಮ್ ಎಗೋ ಎತ್ ತಿಮಿಯೋ
ದುಮ್ ದಿಸ್‌ಕುಸಿಯೋ
ವೆನೆರಿತ್ ಅತ್‌ಕ್ವೇ ವೆನ್‌ತುರಾ ಇರಾ
ಕ್ವಾನ್ದೋ ಚೆಲ್ಲಿ ಮೊವೆಂದಿ ಸುನ್ತ್ ಎತ್ ತೆರ್ರಾ
ದಿಯೆಸ್ ಇಲ್ಲಾ, ದಿಯೇಸ್ ಇರೇ ಕಲಾಮಿತಾತಿಸ್ ಎತ್
ಮಿಸೇರಿಯೇ ದಿಯೆಸ್ ಮ್ಯಾಗ್ನಾ ಎತ್ ಅಮಾರಾ ವಾಲ್ದೆ
ದುಮ್ ವೆನೆರಿಸ್ ಯೂದಿಕಾರೆ ಸೇಕುಲುಮ್ ಪೆರ್ ಇಗ್ನೇಮ್
ರೆಕ್ವಿಯೆಮ್ ಎತೆರ್ನಾಮ್ ಎಯ್ಸ್ ದೊಮಿನೆ ಎತ್
ಲುಕ್ಸ್ ಪರ್ಪೆತುವಾ ಲುಚೆಯಾತ್ ಎಯ್ಸ್

ಪಿತನ, ಸುತನ

ಇನ್ ನೋಮಿನೆ ಪಾತ್ರಿಸ್ ಎತ್ ಫೀಲಿಯಿ, ಎತ್ ಸ್ಪಿರಿತು ಸಾಂಕ್ತಿ, ಆಮೆನ್.

ಪ್ರಭುವಿನ ಹಾಡು

ಪಾತೆರ್ ನೋಸ್ತೆರ್, ಕ್ವಿ ಎಸ್ ಇನ್ ಚೆಲಿಸ್, ಸಾಂಕ್ತಿಫಿಚೇತುರ್
ನೊಮೆನ್ ತುವೂಮ್, ಆದ್ವೆನಿಯಾತ್ ರೆನ್ಯುಮ್ ತುವೂಮ್
ಫಿಯಾತ್ ವೊಲುಂತಾಸ್ ತುವ, ಸಿಕುತ್ ಇನ್ ಚೆಲೊ ಎತ್
ಇನ್ ತೆರ್ರಾ, ಪಾನೆಮ್ ನೊಸ್ತ್ರುಮ್ ಕೊತಿದಿಯಾನುಮ್ ದ
ನೊಬಿಸ್ ಹೊದಿಯೆ, ಎತ್ ದಿಮಿತ್ತೆ ನೊಬಿಸ್ ದೆಬಿತ ನೊಸ್ತ್ರಾ
ಸಿಕುತ್ ಎತ್ ನೊಸ್ ದಿಮಿತ್ತಿಮುಸ್ ದೆಬಿತೊರಿಬುಸ್ ನೊಸ್ತ್ರಿಸ್
ಎತಂ ನೆ ನೋಸ್ ಇಂದುಕಾಸ್ ಇನ್ ತೆನ್‌ತಾತ್ಸಿಯೋನೆಮ್, ಸೆದ್
ಲಿಬೆರಾ ನೊಸ್ ಅ ಮಾಲೊ, ಆಮೆನ್.

ನಮೋ ಮರಿಯಾ ಹಾಡು

ಆವೇ ಮರಿಯಾ ಗ್ರಾತ್ಸಿಯಾ ಪ್ಲೇನಾ
ದೊಮಿನುಸ್ ತೇಕುಮ್
ಬೆನೆದಿಕ್ತಾ ತು ಇನ್ ಮುಲೇರಿಬುಸ್
ಎತ್ ಬೆನೆದಿಕ್ತುಸ್ ಫ್ರುಕ್ತುಸ್ ವೆನ್‌ತ್ರಿಸ್ ತುಯಿ ಯೇಸುಸ್
ಸಾಂಕ್ತ ಮರಿಯಾ ದೇಯಿ ಮಾತೆರ್
ಒರ ಪ್ರೊನೊಬಿಸ್ ಪೆಕ್ಕಾತೊರಿಬುಸ್
ನುನ್ಕ್ ಎತ್ ಇನ್ ಹೊರ ಮೊರ್ತಿಸ್ ನೋಸ್ತ್ರೇ, ಆಮೆನ್

ಹೀಗೆ ಲ್ಯಾಟಿನ್ ಗೀತೆಗಳನ್ನು ಕೆಥೋಲಿಕ್ ಕ್ರೈಸ್ತ ಗೀತೆಗಳಲ್ಲಿ ಗುರ್ತಿಸಬಹುದಾಗಿದೆ. ಅವುಗಳಲ್ಲಿ ಕೆಲವು ಪದಗಳ ಕನ್ನಡ ಅರ್ಥಗಳನ್ನು ಈ ರೀತಿಯಾಗಿ ಹೇಳಬಹುದು.

ಕನ್ನಡ	**ಲ್ಯಾಟಿನ್**
ಪಿತ	ಪಾತ್ರಿಸ್
ಸುತ	ಫೀಲಿಯಿ
ಪವಿತ್ರಾತ್ಮ	ಸ್ಪಿರಿತು
ಯೇಸು	ಯೇಸುಸ್
ತಾಯಿ	ಮಾತೆರ್

ದಯೆತೋರಿ ಎಲೈಸಾನ

ಪರಿಶುದ್ಧರು ಸಾಂಕ್ತುಸ್

೩.೨.೨. ಪ್ರೊಟೆಸ್ಟೆಂಟ್ ಕ್ರೈಸ್ತ ಗೀತೆಗಳು

ಕ್ರೈಸ್ತ ಧರ್ಮದ ಎರಡನೆಯ ಪ್ರಮುಖ ಪಂಥವಾದ ಪ್ರೊಟೆಸ್ಟೆಂಟ್ ಪಂಥವು ಹತ್ತು ಹಲವು ಉಪ ಪಂಗಡಗಳನ್ನು ಹೊಂದಿದೆ. ಉದಾ. ಅಗಾಪೆ, ಮೆಥೋಡಿಸ್ಟ್, ಸಿಎಸ್ಐ, ಸೆವಂತಡೇ, ಹೊಸನ್ನಾ, ಮಿನಿಸ್ಟ್ರಿ, ಬ್ಲೆಸಡ್ ಗಾಸ್‌ಪುಲ್, ಬೈಬಲ್ ಮಿಶನ್, ಹೀಗೆ ಅನೇಕ ಸಂಸ್ಥೆಗಳು ಹಾಗೂ ಪೆಂತೆಕೋಸ್ಟ್ ಎನ್ನುವ ಮೂರನೇ ಪಂಗಡ ಎಂದು ಕೆಲವರು ಹೇಳುತ್ತಾರೆ. ಅಲ್ಲದೆ ಸ್ವತಂತ್ರ ಪಂಗಡಗಳು (ಎವ್ಯಾಂಜಿಲಿಕಲ್) ಸಹ ಕ್ರೈಸ್ತ ಧರ್ಮದಲ್ಲಿ ಬರುವ ವಿಶ್ವಾಸಿ, ಭಕ್ತ ಸಂಸ್ಥೆಗಳಾಗಿವೆ. ಈ ಎಲ್ಲಾ ಸಂಸ್ಥೆಗಳು ಪ್ರಭು ಯೇಸುಕ್ರಿಸ್ತನನ್ನು ಸ್ತುತಿಸುವ, ಕೊಂಡಾಡುವ, ಆರಾಧಿಸುವ, ಮಹಿಮಪಡಿಸುವ ಸಲುವಾಗಿ ಸಾವಿರಾರು ಗೀತೆಗಳನ್ನು ಕನ್ನಡದಲ್ಲಿ ರಚಿಸಿರುವುದನ್ನು ಕಾಣಬಹುದು. ಅಂತಹ ಗೀತೆಗಳಲ್ಲಿ ನಮ್ಮ ಕನ್ನಡ ಭಾಷೆ ಹೇಗೆ ಬಳಕೆಯಾಗಿದೆ ಎಂಬುದನ್ನು ಈ ಕೆಳಕಂಡ ಗೀತೆಗಳ ಮೂಲಕ ಗುರ್ತಿಸಿ ವಿವರಿಸಲಾಗಿದೆ.

ಕ್ರೈಸ್ತರ ಮದುವೆ ಸಂದರ್ಭ

ಖಾನಾ ಊರಲ್ಲಿ ಇಬ್ಬರು
ವಿವಾಹವಾಗುತ್ತಿರಲು
ಕ್ರಿಸ್ತೇನು ಅಲ್ಲಿಗೋದನು
ತನ್ನಾಶೀರ್ವಾದ ಕೊಟ್ಟನು

ಅದೇ ಪ್ರಕಾರ ನಮ್ಮನ್ನು
ಈ ಹೊತ್ತು ಆಶೀರ್ವದಿಸು
ಈ ಗಾಗುವಂಥಾ ಮದುವೆ
ಮಂಗಳ ಮಾಡು ಕರ್ತನೇ

ಸಭೆಯ ಮದಲಿಂಗನೇ
ಆಲೈಸು ನಮ್ಮ ಪ್ರಾರ್ಥನೆ
ಇಲ್ಲಿ ಪ್ರಸನ್ನನಾಗಿರು
ನಿನ್ನ ಕಟಾಕ್ಷ ತೋರಿಸು.

ಒಂದೇ ಕಟ್ಟಾಗಿ ಇವರು
ಸದ್ಭಕ್ತರಾಗಿ ನಡೆದು
ಪರಸ್ಪರಾನುರಾಗದಿ
ಸಂತೋಷದಿಂದ ಬಾಳಲಿ (ಸಂಗೀತ ಸಂಖ್ಯೆ ೩೫೮)

ಕ್ರೈಸ್ತರಲ್ಲಿ ಮದುವೆ ಸಂದರ್ಭದ ಹಾಡು ಬಹಳ ವಿಶೇಷವಾಗಿದ್ದು ಅದರಲ್ಲಿ ಮುಖ್ಯವಾಗಿ "ಖಾನಾ ಊರಲ್ಲಿ ಇಬ್ಬರು" ಎಂಬ ಈ ಮೇಲಿನ ಗೀತೆಯನ್ನು ಕಡ್ಡಾಯವಾಗಿ ಹಾಡುತ್ತಿರುತ್ತಾರೆ. ಏಕೆಂದರೆ ಸಾಕ್ಷಾತ್ ಯೇಸುಕ್ರಿಸ್ತನೇ ತನ್ನ ಜೀವಿತಾವಧಿಯಲ್ಲಿ ಖಾನಾ ಊರಲ್ಲಿ ನಡೆಯುವ ಮದುವೆ ಕಾರ್ಯವನ್ನು ಆಶೀರ್ವದಿಸುತ್ತಾನೆ ಎಂಬುದರ ಬಗ್ಗೆ ಬೈಬಲ್‌ನಲ್ಲಿ ಲಿಖಿತ ಆಧಾರಗಳಿವೆ. ಈ ಒಂದು ಹಾಡಿನಲ್ಲಿ ಎರಡು ಹೊಸ ಪದಗಳನ್ನು ಕನ್ನಡಕ್ಕೆ ಪರಿಚಯಿಸಿದಂತೆ ಆಗುತ್ತದೆ. ಅವುಗಳೆಂದರೆ ಒಂದು ಖಾನಾ, ಎರಡನೆಯದು ಸಭೆಯ ಮದಲಿಂಗ.

ಕ್ರೈಸ್ತ ಗೀತೆಗಳಲ್ಲಿ ಸಭೆಯ ಮದಲಿಂಗ ಎಂದರೆ ಸಾಕ್ಷಾತ್ ದೇವರೇ ಆಗಿರುತ್ತಾರೆ. ಸಭೆ ಎಂದರೆ ಚರ್ಚ್ ಅಥವಾ ಸಮುದಾಯ. ಮದಲಿಂಗ ಎಂದರೆ ಚರ್ಚ್‌ನ ಒಡೆಯ ಅಥವಾ ಯಜಮಾನ, ಯೇಸುಕ್ರಿಸ್ತ ಎಂದರ್ಥ. ಹಾಗಾಗಿ ಸಭೆಯ ಮದಲಿಂಗ ಎಂದರೆ ಚರ್ಚಿನ ಕ್ರೈಸ್ತ ದೇವರಾದ ಯೇಸು ಎಂದು ಸಂಬೋಧಿಸುತ್ತಾರೆ. ಆದ್ದರಿಂದ ಕನ್ನಡಕ್ಕೆ ಸಭೆಯ ಮದಲಿಂಗ ಎನ್ನುವುದು ಹೊಸ ಪರಿಭಾಷೆಯಾಗಿ ಕಂಡುಬರುತ್ತದೆ.

ಶವಸಂಸ್ಕಾರ ಸಂದರ್ಭ

ಸಮಾಧಿಯೊಳಗೆ ಈ ದೇಹ ಬೀಳುತ್ತೆ
ಮಣ್ಣಾಗಿ ಹುಳಕ್ಕೆ ಹೋಗಿ ಆಹಾರವಾಗುತ್ತೆ

ಆದಾಗ್ಯೂ ಮೃತ್ಯುವು ಎಂದೆಂದೂ ಜೈಸದು
ಸದ್ಭಕ್ತನನ್ನು ಗೋರಿಯು ನಶಿಸಲಾರದು

ಸಮಾಧಿ ಜೈಸಿದ ಕ್ರಿಸ್ತೇಸು ಬರಲು
ಹೂಣಿಟ್ಟ ನಮ್ಮ ದೇಹವ ರೂಪಾಂತ್ರ ಮಾಡ್ವನು (ಸಂಗೀತ ಸಂಖ್ಯೆ ೩೧೬)

ಮಾಯವಾದ ಲೋಕವೆಲ್ಲವು ಮಾಯೆಯೊಳಗಣ ಮಾಯವೇ
ಕಾಯವಖಿಲೋಪಾಯವು ಆದಾಯವೆಲ್ಲಾ ಮಾಯವೇ

ಹುಟ್ಟಿದಾಗಲೇನ ತಂದೆವು ಬಿಟ್ಟು ಹೋಗುವ ಕಾಲದಿ
ಕಟ್ಟಿಕೊಂಡು ಹೋಗಲಾರೆವು ಬಟ್ಟಬಯಲೇ ಅಪ್ಪುದು–ಮಾಯಾ

ತಾಯಿ ತಂದೆ ಬಂಧು ಮಿತ್ರರು ನ್ಯಾಯ ಮಡದಿ ಮಕ್ಕಳು
ಪ್ರಾಯವುಳ್ಳ ಸ್ನೇಹಿತರು ಮಾಯವಾಗಿ ಪೋಪರು – ಮಾಯಾ

ಧ್ಯಾನವು ಧನಲಾಭವೂ ಚೈತನ್ಯವೂ ಘನಕೀರ್ತಿಯೂ
ಮಾನ್ಯವೆನಿಪ ಭೂಮಿಗಳೂ ಶೂನ್ಯವಾಗಿ ಪೋಪವು – ಮಾಯಾ

ಲೋಕಭೋಗವು ಸಿರಿಯ ಮಹಿಮೆಯು ಜೋಕೆಯಾದ ಕಾಯವು
ಏಕ ಸಮಯದಲ್ಲಿಯೇ ಬಾಕಿಯಿಲ್ಲದೆ ಪೋಪವು – ಮಾಯ (ಕೀರ್ತನೆ ೧೯೯)

ಈ ಮೇಲಿನ ಗೀತೆಯಲ್ಲಿ ಕೆಲವು ಪದಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ಸಮಾಧಿ, ಗೋರಿ, ಕ್ರಿಸ್ತೇಸು, ರೂಪಾಂತ್ರ ಎಂಬುವುಗಳು. ಇಲ್ಲಿ ಕ್ರೈಸ್ತರು ಕ್ರೈಸ್ತ ವಿಶ್ವಾಸಿ ತೀರಿಕೊಂಡ ಮೇಲೆ ಅವನನ್ನು ಹೂಣಿಡುವ ಸಲುವಾಗಿ ತೋಡಿರುವ ಗುಂಡಿಗೆ 'ಸಮಾಧಿ' ಎಂದು ಶವಸಂಸ್ಕಾರ ಆದ ನಂತರ ಗೋರಿ ಎಂದು ಕರೆಯುತ್ತಾರೆ ಎಂದು ಗಮನಿಸಲಾಗಿದೆ. ಹಾಗೆಯೇ ಕ್ರಿಸ್ತ+ಯೇಸು = ಕ್ರಿಸ್ತೇಸು ಆಗಿದೆ ಎಂದು ಹೇಳಬಹುದು. ಇಲ್ಲಿ ಕ್ರಿಸ್ತನು ಒಂದೇ. ಯೇಸು ಒಂದೇ. ಹಲವು ಸಂಬೋಧನೆಗಳಲ್ಲಿ ದೇವರನ್ನು ಕ್ರೈಸ್ತರು ಕರೆಯುತ್ತಾರೆ. ಮತ್ತು ರೂಪಾಂತರ ಎಂದರೆ ಯಾವ ಕ್ರೈಸ್ತ ವಿಶ್ವಾಸಿ ತೀರಿದನೋ ಅವನು ಯೇಸುಕ್ರಿಸ್ತನು ತಿರುಗಿ ಲೋಕಕ್ಕೆ ಬಂದಾಗ ಅವನು ತನ್ನ ದೇಹವನ್ನು ರೂಪಾಂತರ ಅಂದರೆ ಬದಲಾಯಿಸಿಕೊಂಡು ಏಳುವನು ಎಂದು ಧಾರ್ಮಿಕ ಗ್ರಂಥದಲ್ಲಿ ಉಲ್ಲೇಖಿಸಿರುವುದನ್ನು ಹಾಡಿನ ಮೂಲಕ ಪ್ರಸ್ತುತಪಡಿಸಲಾಗಿದೆ.

ಈ ಹಾಡಿನಲ್ಲಿ ಆದಿ ಪ್ರಾಸ, ಮದ್ಯ ಪ್ರಾಸ ಮತ್ತು ಅಂತ್ಯ ಪ್ರಾಸಗಳನ್ನು ಗುರುತಿಸಲಾಗಿದೆ.

ಆದಿ	**ಮದ್ಯ**	**ಅಂತ್ಯ**
ಮಾಯ	ಎಲ್ಲವು	ಮಾಯಾವೇ
ಕಾಯ	ಅಪಾಯವು	ಕಾಲದಿ
ಕಟ್ಟಿ	ತಂದೆವು	ಅಪ್ಪುದು
ಹುಟ್ಟಿ	ಲಾರೆವು	ಮಕ್ಕಳು
ತಾಯಿ	ಮಿತ್ರರು	ಪೋಪರು
ಪ್ರಾಯ	ಸ್ನೇಹಿತರು	ಕೀರ್ತಿಯು
ಧ್ಯಾನ	ಲಾಭವು	ಕಾಯವು
ಮಾನ್ಯ	ಭೂಮಿಗಳು	ಪೋಪವು
ಲೋಕ	ಸಿರಿಯ	
ಏಕ	ದಲ್ಲಿಯೇ	

ಕ್ರೈಸ್ತರಮಕ್ಕಳ ಹಾಡು

ಪೂರ್ವದಲ್ಲಿ ಮಕ್ಕಳು
ಸ್ತೋತ್ರ ಮಾಡುತ್ತಿದ್ದರು
ನಾವು ಕೂಡ ಹಾಡುವ
ಯೇಸುವಿನ ಸ್ತೋತ್ರವ

ಕೇಳಿ ಕೇಳಿ ಚಿಕ್ಕ ಮಕ್ಕಳೇ
ಕೇಳಿ ಕೇಳಿ ಚಿಕ್ಕ ಮಕ್ಕಳೇ
ಜಯ ಜಯ ಜಯ ಜಯ
ಜಯ ಪ್ರಿಯ ಕರ್ತಗೆ

ನಾವು ದೇವ ಪ್ರೀತಿಯ
ದಿವ್ಯ ಸತ್ಯವೇದವ
ಮುಕ್ತಿಮಾರ್ಗ ಕಂಡೆವು
ಸ್ತೋತ್ರ ಮಾಡತಕ್ಕದ್ದು
ಕೇಳಿ ಕೇಳಿ ಚಿಕ್ಕ ಮಕ್ಕಳೇ
ಕೇಳಿ ಕೇಳಿ ಚಿಕ್ಕ ಮಕ್ಕಳೇ
ಜಯ ಜಯ ಜಯ ಜಯ
ಜಯ ಪ್ರಿಯ ಕರ್ತಗೆ

ಬಾಲ ವೃದ್ಧರೆಲ್ಲರೇ
ಪ್ರಿಯ ತಂದೆ ತಾಯ್ಗಳೇ
ನಮ್ಮ ಕೂಡ ಹಾಡಿರಿ
ಯೇಸುವನ್ನು ಸ್ತುತಿಸಿ
ಕೇಳಿ ಕೇಳಿ ಚಿಕ್ಕ ಮಕ್ಕಳೇ
ಕೇಳಿ ಕೇಳಿ ಚಿಕ್ಕ ಮಕ್ಕಳೇ
ಜಯ ಜಯ ಜಯ ಜಯ
ಜಯ ಪ್ರಿಯ ಕರ್ತಗೆ

ಕ್ರೈಸ್ತರ ಹೊಸ ವರುಷ ಸಂದರ್ಭ

ಬನ್ನಿ ಕೂಡ ಹಾಡುವ
ಹರ್ಷದಿಂದ ಗೀತವ
ಮೋಸ ನಷ್ಟ ಕಷ್ಟವು
ಎಷ್ಟು ಬಂದು ಇದ್ದರೂ
ಜೀವದಿಂದ ಈಗಲೂ
ಹೊಸ ವರ್ಷ ಕಂಡೆವು
ಹತ್ರವಿದ್ದು ತಂದೆಯು
ನಮ್ಮನ್ನೆಲ್ಲಾ ಕಾದನು

ಬನ್ನಿ ಕೂಡ ಹಾಡುವ
ಹರ್ಷದಿಂದ ಗೀತವ

ಹೊಸ ವರ್ಷ ಕೊಟ್ಟಂಥ
ಕೃಪೆಯುಳ್ಳ ದೇವರ
ಹೊಸ ಆಶೀರ್ವಾದ
ಈಗ ಬೇಡಿಕೊಳ್ಳುವ
ಆತಗುಂಟು ಎಂದಿಗೂ
ಅತ್ಯಧಿಕದಯವು
ಘನ ಮಾನ ಕರ್ತನೇ
ಹೊಂದ ಯೋಗ್ಯನು ನೀನೇ
ಬನ್ನಿ ಕೂಡ ಹಾಡುವ
ಹರ್ಷದಿಂದ ಗೀತವ

ಕ್ರೈಸ್ತರ ಹೊಸ ಮನೆಯ ಪ್ರವೇಶ ಸಂದರ್ಭ

ಪರಾತ್ಪರನ ರಾಜ್ಯವು
ಮಹಾವಿಸ್ತಾರವಾದದ್ದು
ನಾವೆಲ್ಲಿ ವಾಸಿಸಿದರೂ
ಕಾಪಾಡುವವನಾತನು

ಸ್ವವಾಸ ನೀ ಕೊಟ್ಟದ್ದು
ಅಧಿಕವಾದ ದಯವು
ಇದನ್ನು ನಿನಗೀ ಹೊತ್ತು
ಪ್ರತಿಷ್ಠೆ ಮಾಡಿಕೊಂಡೆವು

ಈ ಮನೆಯಲ್ಲಿ ಎಂದಿಗೂ
ಸುಕ್ಷೇಮ ದಯಪಾಲಿಸು
ಇಲ್ಲಿ ನಮ್ಮೊಂದಿಗೆ ಇದ್ದು
ನಮ್ಮನ್ನು ಆಶೀರ್ವದಿಸು

ಸರ್ವಜ್ಞನಾದ ದೇವರೇ
ಆಲೈಸು ನಮ್ಮ ಪ್ರಾರ್ಥನೆ
ಈ ಮನೆಯಲ್ಲಿ ನಮ್ಮನ್ನು
ಸನ್ಮಾರ್ಗದಲಿ ನಡಿಸು

ವಿಶ್ವಾಸಿಗಳ ದೀಕ್ಷಾಸ್ನಾನ ಸಂದರ್ಭ

೧. ನನ್ನಾಶೀರ್ವಾದ ಬಾಲರು
ಅಗತ್ಯ ಹೊಂದಬಹುದು
ನನ್ ಹತ್ರ ಬರಗೊಡಿಸು
ಅಂದನು ಯೇಸು ಸ್ವಾಮಿಯು

೨. ನಾವೀಗ ತಂದ ಮಗುವ
ಓ ಕರ್ತಾ, ಅಂಗೀಕರಿಸು
ನಿನ್ನಾತ್ಮ ಶುದ ಸ್ನಾನವ
ಈವಾಗ ದಯಪಾಲಿಸು

ಬಾಲಕ ಮಿತ್ರನಾದ
ದಯಾಳು ಯೇಸುವೆ
ಈ ಕೂಸ ಸೇರಿಸೀಗ
ನಿನ್ ಸಭೆಯೊಳಕ್ಕೆ

ನಿನ ದಿವ್ಯ ಕೈಗಳಲ್ಲಿ
ಈ ಕೂಸ ತೆಗೆದು
ನಿನ್ನಾಶೀರ್ವಾದ ನೀಡಿ
ಎಂದೆಂದೂ ರಕ್ಷಿಸು

ತ್ರಯೈಕನಾಮದಲ್ಲಿ
ಸ್ನಾನವ ಕೊಡಲು
ನಿನ್ ಶಿಷ್ಯ ಸಂಘದಲ್ಲಿ
ನೀನಂಗೀಕರಿಸು
ಈ ಮಗುವಿನಾತ್ಮ
ನಿನ್ನಿಂದ ತುಂಬಿಸು
ಪವಿತ್ರವಾದ ಮನ
ಓ ಕಾರ್ತಾ ಹುಟ್ಟಿಸು (ಕನ್ನಡ ಸಂಗೀತ ಸಂಗ್ರಹ ಮತ್ತು ಕನ್ನಡ ಕೀರ್ತನೆಗಳು, ಹಾಡಿನ ಸಂಖ್ಯೆ – ೨೬೯, ಪು. ೮೭)

ಈ ಮೇಲಿನ ಪದ್ಯಗಳಲ್ಲಿ ದ್ವಿರುಕ್ತಿರೂಪ ಮತ್ತು ಆಡು ಭಾಷೆಯನ್ನು ಗಮನಿಸಲಾಗಿದೆ. ಉದಾ. **ದ್ವಿರುಕ್ತಿಗೆ.**

ಕೇಳಿ ಕೇಳಿ

ಜಯ ಜಯ

ಚಿಕ್ಕ ಚಿಕ್ಕ

ಮಕ್ಕಳೆ ಮಕ್ಕಳೆ

ಉದಾ. ಆಡು ಭಾಷೆಗೆ

ಕನ್ನಡ	ಕ್ರೈಸ್ತ ಗೀತೆಯ ಆಡು ಭಾಷೆ
ಹರುಷ	ಹರ್ಷ
ವರುಷ	ವರ್ಷ
ಹತ್ತಿರ	ಹತ್ರ
ಕಾಯ್ದನು	ಕಾದನು
ಹೊಂದಲು	ಹೊಂದ
ನಾವು ಎಲ್ಲಿ	ನಾವೆಲ್ಲಿ
ಸ್ವಂತ ನಿವಾಸ	ಸ್ವ ನಿವಾಸ
ನಿನಗೆ ಈ ಹೊತ್ತು	ನಿನಗೀಹೊತ್ತು
ನನ್ನ ಆಶೀರ್ವಾದ	ನನ್ನಾಶೀರ್ವಾದ
ನನ್ನ ಹತ್ತಿರ	ನನ್‌ಹತ್ರ
ಮಗುವನ್ನು	ಮಗುವ
ಕೂಸು	ಕೂಸ
ಒಳಗೆ	ಒಳಕ್ಕೆ
ನಿನ್ನ	ನಿನ್
ಸೇರಲು	ಸೇರ
ನನ್ನ	ಎನ್
ನಾನು ಬದಲು	ನಾ ಬದಲೇನ

ಯೇಸುಕ್ರಿಸ್ತನ ಜನನ ನೆನಪಿನಾರ್ಥ ಹಾಡುಗಳು

ಮಂಗಳ ಶ್ರೀರಾತ್ರಿಯಲಿ
ಬೇತ್ಲೆಹೇಮ್ ಛತ್ರದಿ
ವರಕನ್ಯೆಯಿಂ ಜನಿಸಿದ
ದೇವಪುತ್ರನಂ ವಂದಿಸುವೆ
ವಂದನೆ ರಕ್ಷಕನೇ!

ಮಂಗಳ ಶ್ರೀರಾತ್ರಿಯಲಿ
ದೂತರು ಹೊಲದಿ
ಹಿಂಡು ಕಾಯುವ ಗೊಲ್ಲರಿಗೆ
ತಂದ ವಾರ್ತೆಯು ಶ್ರೇಷ್ಠವದೆ
ಬಂದನು ರಕ್ಷಕನೇ!

ಮಂಗಳ ಶ್ರೀರಾತ್ರಿಯಲಿ
ಜಾತನ ಮುಖದಿ
ಸುಪ್ರಸನ್ನತೆ ಶೋಭಿಸುತೆ
ನೀತಿಸದ್ಗತಿ ಭ್ರಷ್ಟರಿಗೆ
ಸ್ವಾಗತ ರಕ್ಷಕನೇ! (ಹಾಡಿನ ಸಂಖ್ಯೆ – ೭೭, ಪು. ೨೭)

ಒಂದು ಊರಿನಲ್ಲಿ ಒಂದು ಬೆಳಕು
ಅಂಧಕಾರದಲ್ಲಿ ತೋರಲಾಯಿತು
ಬೆತ್ಲೆಹೇಮಿನಲ್ಲಿ ನೀತಿಸೂರ್ಯನು
ಪಾಪಕತ್ತಲಲ್ಲಿ ಕಾಂತಿಕೊಟ್ಟನು

ಈಗ ನರರಲ್ಲಿ ದಿವ್ಯ ಕೃಪೆಯು
ಎಲ್ಲಾ ಭೂಮಿಯಲ್ಲಿ ದೊಡ್ಡದಾಯಿತು
ಈಗೆ ಶುಧ ನೀತಿ, ಒಳ್ಳೆ ಸುಖವು
ಸತ್ಯವಾದ ಪ್ರೀತಿ ನೆಲೆಗೊಂಡವು

ಬೇತ್ಲೆಹೇಮಿನಲ್ಲಿ ಯೇಸುಸ್ವಾಮಿಯು
ನರರೂಪದಲ್ಲಿ ಹುಟ್ಟಿದಾಗಲು
ಜೀವದ ಪ್ರಕಾಶ ಪ್ರಭೆ ಕೊಟ್ಟಿತು
ಮರಣದ ಪಾಶ ಬಿಚ್ಚಿಹೋಯಿತು (ಹಾಡಿನ ಸಂಖ್ಯೆ – ೭೮, ಪು. ೨೮)

ಕ್ರಿಸ್ತನ ಜನನ ಸಂದರ್ಭ ಗೀತೆಗಳಲ್ಲಿ ಗಮನಿಸಿದ ಹೊಸ ಭಾಷಿಕ ಅಂಶಗಳನ್ನು ಕೆಳಕಂಡಂತೆ ಗುರ್ತಿಸಿ ವಿವರಿಸಲಾಗಿದೆ.

ಬೆತ್ಲೆಹೇಮ ಛತ್ರ

ವರ ಕನ್ಯೆ

ಗೊಲ್ಲರು

ಜಾತನ

ಬೆಳಕು

ನೀತಿಸೂರ್ಯ

ನರರೂಪ

ಮರಣದ ಪಾಶ

'ಬೆತ್ಲೆಹೇಮ ಛತ್ರ' ಎಂಬುದು ನಮಗೆ ಪರಿಚಯವಲ್ಲದ ಪದ. ಇದು ಕೇವಲ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಮಾತ್ರ ಸಿಗುವಂತಹದು. ಇಲ್ಲಿಯೇ ಯೇಸು ಒಂದು ಸಾಮಾನ್ಯ ದನದ ಕೊಟ್ಟಿಗೆಯಲ್ಲಿ ಜನಿಸಿದನು ಎಂಬುದಕ್ಕೆ ಬೆತ್ಲೆಹೇಮ ಒಂದು ಕ್ರಿಸ್ತನ ಜನ್ಮಸ್ಥಳ ಎಂದು ಉಲ್ಲೇಖಿಸಲಾಗಿದೆ.

'ವರಕನ್ಯೆ' ಎಂದು ಸಂಬೋಧಿಸುವುದು ಸಹ ಪ್ರಭುವಾದ ಕ್ರಿಸ್ತನ ತಾಯಿ ಎಂದು ನಂಬುತ್ತಾರೆ. ವರಕನ್ಯೆಯಾಗಿ ಶುಚಿ ಮನಸ್ಕಳಾಗಿರುವ ಅಷ್ಟೇ ಸಂಪೂರ್ಣವಾದ ಭಕ್ತಿವಂತೆಯಾದ ಮರಿಯಳು ಆಗಿದ್ದಾಳೆ. ಈಕೆಗೆ ಇರುವ ಇನ್ನೊಂದು ಹೆಸರೇ ವರಕನ್ಯೆ.

'ಗೊಲ್ಲರು' ಎಂಬುದು ಕುರಿಗಳನ್ನು ಕಾಯುವ ಒಂದು ಸಮುದಾಯ ಎಂದು ನಾವು ಭಾವಿಸುತ್ತೇವೆ. ಆದರೆ ಇಲ್ಲಿ ಗೊಲ್ಲರು ಎಂದರೆ ಅಮಾಯಕರು, ಸಂಪನ್ನರು, ಸಾಧುಗಳು, ಭಕ್ತಿವಂತರು, ನಿಷ್ಠಾವಂತರು, ಅಲ್ಲದೆ ಬಹಳ ನಿಧಾನಗತಿಯಾದ ಮನುಷ್ಯರು ಎನ್ನುತ್ತಾರೆ. ಕ್ರೈಸ್ತರನ್ನು ಅಥವಾ ವಿಶ್ವಾಸಿಗಳನ್ನು ಕುರಿಗಳು ಎಂದು ಅವುಗಳನ್ನು ಕಾಯುವ ಯೇಸುವನ್ನು ಗೊಲ್ಲ ಅಥವಾ ಕುರುಬನೆಂದು ಹೇಳುತ್ತಾರೆ.

'ಜಾತಕ' ಪದವನ್ನು ಜಾತನ ಎಂದು ಸ್ಪಷ್ಟಪಡಿಸಿ ಹೇಳುತ್ತಾರೆ. ಜಾತನ ಎಂದರೆ ಜಾತಕ ನೋಡಿ ಕಲಿಯಬಹುದು.

'ಬೆಳಕು', 'ನೀತಿ ಸೂರ್ಯ' ಮನುಷ್ಯರಿಗೆ ಬೆಳಕು ಅವಶ್ಯಕ. ಬೆಳಕನ್ನು ನೀಡುವ ಸೂರ್ಯನು ಅವಶ್ಯಕ. ಆದರೆ ಕ್ರೈಸ್ತ ಧರ್ಮದಲ್ಲಿ ಬೆಳಕು ಮತ್ತು ಸೂರ್ಯ ಕ್ರಿಸ್ತನೇ ಆಗಿದ್ದಾನೆ ಎಂದು ಬೈಬಲ್ ಹೇಳುತ್ತದೆ. ಕ್ರಿಸ್ತನೆ ಅವುಗಳನ್ನು ನೀಡಿದ್ದಾನೆ ಎಂಬುದನ್ನು ಗಮನಿಸಲಾಗಿದೆ. ಹಾಗೆಯೇ 'ನರರರೂಪ' ಎಂದರೆ ಯೇಸುವೇ ಭೂಲೋಕದಲ್ಲಿ ನರಮನುಷ್ಯನಾಗಿ ಕನ್ಯೆ ಮರಿಯ ಹೊಟ್ಟೆಯಲ್ಲಿ ಜನಿಸಿದ್ದಾನೆ

ಎಂದು ಆತನಿಗೆ ಮರಣದ ಪಾಶ ಎಂದರೆ ಮರಣದ ಕೊಂಡಿ ಅಥವಾ ಮರಣ ಎಂಬ ಶಿಕ್ಷೆಯನ್ನು ಮುರಿದಿದ್ದಾನೆ ಅಥವಾ ಜಯಿಸಿದ್ದಾನೆ. ಆದ್ದರಿಂದ ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ ಎಂಬುದನ್ನು ತಿಳಿಯಬಹುದಾಗಿದೆ.

ಯೇಸುಕ್ರಿಸ್ತನ ಪುನರುತ್ಥಾನ ನೆನಪಿನಾರ್ಥ

೧. ಯೇಸು ಕರ್ತನೆದ್ದನು ಹಲ್ಲೆಲೂಯಾ!
ಮೃತ್ಯು ಸೋತುಹೋಯಿತು ಹಲ್ಲೆಲೂಯಾ!
ಜೀವ ಸಾವಿಂದ್ಹುಟ್ಟಿದೆ ಹಲ್ಲೆಲೂಯಾ!
ಜಯಪ್ರದ ಕ್ರಿಸ್ತಗೆ ಹಲ್ಲೆಲೂಯಾ!

ಲೋಕ ರಕ್ಷಾಕಾತನೆ ಹಲ್ಲೆಲೂಯಾ!
ನಂಬಿರೆಲ್ಲಾ ಜನರೇ ಹಲ್ಲೆಲೂಯಾ!
ಪಾಪ ಹರಿಸಿದನು ಹಲ್ಲೆಲೂಯಾ!
ನಿತ್ಯ ಭಾಗ್ಯ ಕೊಡ್ವನು ಹಲ್ಲೆಲೂಯಾ!

೨. ಯೇಸು ಕರ್ತನು ಎದ್ದ
ನೇಸು ಕ್ರಿಸ್ತನು

ಸಾಸಿರಾರು ಜನರ ಪಾಪರಾಸಿ ಹರಿಸಿದ
ಗಾಸಿಯೆಲ್ಲವನ್ನು ಬಿಡಿಸಿ ಲೇಸು ಮಾಡಿದ – ಯೇಸು
ಧರಣಿಗರ್ಭದಲ್ಲಿ ಇಳಿದು ಪರಮಪುರುಷನು
ಮರಣ ಕೊಂಡಿಯನ್ನು ಪೂರಾ ಮುರಿದುಬಿಟ್ಟನು – ಯೇಸು
ಗೋರಿಯೊಳಗಿದ್ದು ಕಳೆದ ಮೂರು ದಿನವನು
ಚಾರು ಮಹಿಮೆಯಿಂದ ಕೂಡುತೇರಿಬಂದನು – ಯೇಸು
ದೇವಬಲದಿ ಸಾವ ಕೊಂದು ಜೀವಧರಿಸಿದ
ನಾವು ಸ್ವರ್ಗದಲ್ಲಿ ಸೇರ ತಾವು ಮಾಡಿದ – ಯೇಸು
ಗೆದ್ದು ತನ್ನ ಮಾತಿನಂತೆ ಎದ್ದು ತೋರಿದ
ಶುದ್ಧರಾಗಿ ಬಾಳಿರೆಂದು ಬುದಿ ಹೇಳಿದ – ಯೇಸು

೩. ಜೀವದಿಂದ ಯೇಸು ಎದ್ದು ಸಾವ ಕೊಂದನು – ನಿತ್ಯ
ಜೀವ ತಂದನು
ಮೂರು ದಿನದಿ ತನ್ನ ಬಲವ ತೋರಮಾಡಿದ ಅಧಿ
ಕಾರ ಸಾರಿದ

ತನ್ನ ಶಕ್ತಿಯಿಂದ ಮರಣವನ್ನು ಜಯಿಸಿದ – ಭಿನ್ನ
ಭಿನ್ನ ಮಾಡಿದ
ಸರ್ವಶಕ್ತನನ್ನು ನೋಡಿ ಉರ್ವಿ ನಡುಗಿತು – ಎಲ್ಲಾ
ಗರ್ವವಡಗಿತು

ಈ ಮೇಲಿನ ಪದ್ಯಗಳಲ್ಲಿ ಕನ್ನಡ ಮತ್ತು ಕ್ರೈಸ್ತ ಗೀತೆಗಳಲ್ಲಿ ಬಳಸಿದ ಕನ್ನಡ ಭಾಷೆಯ ಪದಗಳ ಭಿನ್ನತೆಯನ್ನು ಗಮನಿಸಬಹುದಾಗಿದೆ.

ಕನ್ನಡ	ಕ್ರೈಸ್ತ (ಗೀತೆಯ) ಕನ್ನಡ
ಸಾವಿರಾರು	ಸಾಸಿರಾರು
ಪಾಪದ ರಾಸಿ	ಪಾಪರಾಸಿ
ತೊಂದರೆ	ಗಾಸಿ
ತಾಯಿ ಗರ್ಭ	ಧರಣಿ ಗರ್ಭ
ಯಮನ ನಾಲಿಗೆ	ಮರಣದ ಕೊಂಡಿ
ಕಾಣುವಂತೆ	ತೋರಮಾಡು

ಕರ್ತನ ರಾತ್ರಿ ಭೋಜನ ನೆನಪಿನಾರ್ಥ

೧. ಈ ಮೇಜ ಸೇರ ಯೇಸುವೆ
ನಾ ಯೋಗ್ಯನಲ್ಲವು
ಆದಾಗ್ಯೂ ನನ್ನ ತಳ್ಳದೆ
ಈ ಗಂಗೀಕರಿಸು

ನಾ ಯೋಗ್ಯನಲ್ಲ ಕರ್ತನೇ
ಪಾಪಿಷ್ಟನೇ ಹೌದು
ಓ ಸಮಾಧಾನ ಮೂಲನೇ
ನನ್ನನ್ನುದ್ಧರಿಸು

ನಾ ಯೋಗ್ಯನಲ್ಲ ನಿಜವೇ
ಸ್ವಭಾವ ಕೆಟ್ಟದ್ದು
ಪವಿತ್ರನಾದ ಆತ್ಮನೇ
ನನ್ನಲ್ಲಿ ಇರಿಸು (ಹಾಡಿನ ಸಂಖ್ಯೆ – ೨೭೩, ಪು. ೮೮)

೨. ಕ್ರಿಸ್ತೇನು ನಿಜ ತೀರ್ಥವು
ಈ ತೀರ್ಥದೊಳಗೆ
ಪಾಪಾತ್ಮ ತೊಳಕೊಳ್ಳಲು
ಶುದ್ಧಾತ್ಮವಾಗುತ್ತೆ

ಇಲ್ಲಿ ಪ್ರಸಿದ್ಧ ದುಷ್ಟನು
ಶುದ್ಧತ್ವ ಹೊಂದಿದ
ಪಾಪಾತ್ಮನಾದ ನನ್ನನ್ನೂ
ನಿರ್ಮಲ ಮಾಡುವ

ಈ ಬುಗ್ಗೆ ಕಂಡು ನನಗೆ
ಸಂಭ್ರಮ ಹುಟ್ಟಿತು
ಸ್ವರ್ಗದೊಳು ಕೊಂಡಾಡುವೆ
ಈ ಶ್ರೇಷ್ಠ ತೀರ್ಥವ (ಹಾಡಿನ ಸಂಖ್ಯೆ – ೧೦೪, ಪು. ೩೬)

೩. ಆಶ್ಚರ್ಯವಾದ ಶಿಲುಬೆ
ಕಣ್ಣಿಟ್ಟು ದೃಷ್ಟಿಸಿದರೆ
ಈ ಲೋಕದ ಮಹತ್ವವು
ಬರೀ ಹುಚ್ಚಾಟವಾದದ್ದು

ಎನ್ ಯೇಸುಸ್ವಾಮಿ ಒಬ್ಬನೇ
ಅಮೂಲ್ಯರತ್ನ ನನಗೆ
ನಾನಾತನನ್ನು ಕಂಡರೆ
ಬೇರೆಲ್ಲಾ ಭಾಗ್ಯ ಶೂನ್ಯವೇ

ಈ ದಿವ್ಯವಾದ ಪ್ರೀತಿಗೆ
ನಾ ಬದಲೇನು ಕೊಡುವೆ
ಸಂಪತ್ತು ಪ್ರಾಣ ಯಾವತ್ತು
ಕೊಟ್ಟಾಗ್ಯೂ ಇನ್ನು ಸಾಲದು (ಹಾಡಿನ ಸಂಖ್ಯೆ – ೧೦೦, ಪು. ೩೫)

ಈ ಮೇಲಿನ ಪದ್ಯಗಳಲ್ಲಿ **ಅಂಶಿ ಸಮಾಸದ** ರೂಪಗಳು ಕಂಡುಬರುತ್ತವೆ. ಉದಾ.

ಆತ್ಮ + ಶುದ್ಧ = ಶುದ್ಧಾತ್ಮ

ಆತ್ಮ + ಪಾಪ = ಪಾಪಾತ್ಮ

ಆಟ + ಹುಚ್ಚು = ಹುಚ್ಚಾಟ

ರತ್ನ + ಅಮೂಲ್ಯ = ಅಮೂಲ್ಯ ರತ್ನ

ಭಾಗ್ಯ + ಶೂನ್ಯ = ಶೂನ್ಯ ಭಾಗ್ಯ

೩.೩. ಧರ್ಮೋಪದೇಶ ಸಂದರ್ಭದ ಭಾಷಾ ಬಳಕೆ

ಮಾನವನು ಎಲ್ಲಾ ಜೀವಿಗಳಿಗಿಂತ ಬುದ್ಧಿವಂತ ಪ್ರಾಣಿ ಎನಿಸಬೇಕಾದರೆ ಅವನಲ್ಲಿ ಇರುವ ತಲಾಂತು ಎಂದರೆ ಭಾಷೆಯಾಗಿದೆ ಎಂದು ಯಾವುದೇ ಅನುಮಾನವಿಲ್ಲದೇ ಹೇಳುತ್ತೇವೆ. ಇಲ್ಲಿ ಭಾಷೆ ಮಾನವನ ಸಂವಹನ ಮಾಧ್ಯಮವಾಗಿದೆ. ಸಂವಹನವೇ ಮನುಷ್ಯನ ಅಭಿವೃದ್ಧಿಗೆ ಪೂರಕ ಅಸ್ತ್ರವಾಗಿದೆ ಎಂದು ಹೇಳಬಹುದು. ಭಾಷೆ ಯಾವುದೇ ಮಡಿವಂತಿಕೆಯಿಲ್ಲದೇ ಎಲ್ಲಾ ಜಾತಿ, ವರ್ಗ, ಸಮುದಾಯ, ಧರ್ಮಗಳಲ್ಲಿ ನುಸುಳಿ ಬೆಳೆಯುತ್ತದೆ ಎಂದು ಹೇಳಬಹುದು. ಹೀಗೆ ಬೆಳೆದುಬಂದಿರುವ ಕನ್ನಡ ಭಾಷೆ ಕ್ರೈಸ್ತ ಧಾರ್ಮಿಕ ವ್ಯವಸ್ಥೆಯಲ್ಲಿಯೂ ಕಂಡುಬರುತ್ತದೆ. ಅದರಲ್ಲಿ ಮೌಖಿಕ ಭಾಷೆಯು ಗಮನಿಸುವಂತಹದ್ದು. ಅದನ್ನೇ ಧರ್ಮೋಪದೇಶ ಸಂದರ್ಭದ ಭಾಷೆ ಎನ್ನಬಹುದು.

ಕ್ರೈಸ್ತ ಸಮುದಾಯದಲ್ಲಿ ವಾರದಲ್ಲಿ ಮೂರರಿಂದ ಐದು ದಿನ ಪ್ರಾರ್ಥನೆ ಮಾಡುವುದು ಕಂಡುಬರುತ್ತದೆ. ಪ್ರಾರ್ಥನೆ ಪೂಜೆ ಮಾಡುವಾಗ ಕ್ರಿಸ್ತನ ಸುವಾರ್ತೆಯನ್ನು ಬೋಧಿಸುತ್ತಾರೆ. ಬೋಧಿಸುವ ಸಂದರ್ಭದಲ್ಲಿ ಕನ್ನಡ ಭಾಷೆ ಬಳಕೆಯಾಗುತ್ತದೆ. ಅಲ್ಲದೆ ಅನುಕೂಲವಾದಾಗ ದೊಡ್ಡ ದೊಡ್ಡ ಬಹಿರಂಗ ಸಭೆಗಳು, ಉತ್ಸವಕೂಟಗಳು, ಶಾಂತಿಕೂಟಗಳು ಹಾಗೂ ಭಕ್ತಿ ಸಂಜೀವಿನ ಕೂಟಗಳು ಎಂದು ಮಹೋತ್ಸವಗಳನ್ನು ಇಟ್ಟುಕೊಳ್ಳುತ್ತಾರೆ. ಇಂತಹ ಆರಾಧನಾ ಕೂಟಗಳಲ್ಲಿಯೂ ಬಳಕೆಯಾಗುವ ಕನ್ನಡ ಭಾಷೆಯನ್ನು ಗಮನಿಸುವಂತಹದ್ದು. ಏಕೆಂದರೆ ಅಲ್ಲಿ ಉಪದೇಶಿಸುವ ಪದ, ವಾಕ್ಯ, ಪರಿಭಾಷೆಗಳು ಹೊಸದಾಗ ಗೋಚರಿಸುತ್ತವೆ. ಅಂತಹ ಪರಿಭಾಷೆಯನ್ನು ಕ್ರೈಸ್ತ ಪಂಥಗಳಿಗನುಸಾರವಾಗಿ ಈ ರೀತಿಯಾಗಿ ಗಮನಿಸಲಾಗಿದೆ.

೩.೩.೧. ಮೆಥೋಡಿಸ್ಟ್ ಸಭೆಯ ಧರ್ಮೋಪದೇಶ ಮತ್ತು ಭಾಷೆ

ರಸಭರಿತವಾದ ಕನ್ನಡ ಸಾಹಿತ್ಯದಲ್ಲಿ ಉಕ್ಕಿ ಹರಿಯುವ ಹಾಗೆ ಕ್ರೈಸ್ತ ಧಾರ್ಮಿಕ ಆಚರಣೆ ಮತ್ತು ಸಾಹಿತ್ಯ ಕಂಡುಬರುತ್ತದೆ. ಅದರಲ್ಲೂ ವಿಶೇಷವಾಗಿ ಕ್ರೈಸ್ತ ಮೌಖಿಕ ಸಾಹಿತ್ಯ ಅಂದರೆ ಉಪದೇಶ, ಬೋಧನೆ, ಸುವಾರ್ತೆ, ಉಜ್ಜೀವನ, ಕೂಟಗಳಲ್ಲಿ ಅಲ್ಲದೆ ಸಾರ್ವಜನಿಕ ಸುವಾರ್ತೆ ಕೂಟಗಳಲ್ಲಿ ಬಳಸುವ ಅಥವಾ ಬಳಕೆಯಾಗುವ ಕನ್ನಡ ಅಷ್ಟೇ ವಿಶೇಷವಾಗಿರುತ್ತದೆ. ಅಂತಹ ಮೌಖಿಕ ಭಾಷೆಯನ್ನು ನೇರವಾಗಿ ಚರ್ಚಿನ ಸಮಪಾಲಕರು (ಪಾಸ್ಟರ್) ಬೋಧಿಸುವ ವಾಕ್ಯೋಪದೇಶವನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

ಕರ್ತನಲ್ಲಿ ಪ್ರಿಯ ಸಭೆಯವರೇ ಕ್ರಿಸ್ತನ ನಾಮದಲ್ಲಿ ನಿಮಗೆ ಕೂಡ ನಾನು ವಂದಿಸುವವನಾಗಿದ್ದೇನೆ. ಈ ಪರಿಶುದ್ಧ ದಿನದ ಸ್ವಲ್ಪ ಹೊತ್ತಿನ ಧ್ಯಾನಕ್ಕಾಗಿ ನೇಕವಾದ ಸತ್ಯವೇದದ ವಾಕ್ಯ ಭಾಗ ಶ್ರೀ

ಲೂಕನು ಬರೆದ ಸುವಾರ್ತೆ (೧೯:೬-೧೦) ೧೯ನೇ ಅಧ್ಯಾಯ ೬ರಿಂದ೧೦ ವಚನಗಳನ್ನು ನಾವು ಸ್ವಲ್ಪ ಸಮಯವೇ ನಾವು ಧ್ಯಾನ ಮಾಡೋಣ ಯೇಸು ಸುಂಕದವನಾದ ಜಕ್ಕಾಯನ ಮನೆಗೆ ಹೋದಂತಹ ಈ ಒಂದು ದೃಷ್ಟಾಂತ. ಇಲ್ಲಿರುವಂತಹ ವಾಕ್ಯಭಾಗ ಅನೇಕ ಸಾರಿ ಅನೇಕರ ಬಾಯಿಂದ ಬಾಯಲ್ಲಿ ಚೊಕ್ಕ ಸಂದೇಶವನ್ನು ಕೇಳಿದ್ದೇವೆ. ವಿಶೇಷವಾಗಿ ಈ ದಿನ ಈ ಒಂದು ದೃಷ್ಟಾಂತ ಇಲ್ಲವೆ ಜಕ್ಕಾಯನ ಈ ಒಂದು ದೃಷ್ಟಾಂತ ನಮಗೆ ಯಾವ ವಾಕ್ಯವನ್ನು ದೈವ ಸಂದೇಶವನ್ನು ಕೊಡುತ್ತದೆ ಎಂಬುದಾಗಿ ಸ್ವಲ್ಪ ಸಮಯ ಆಲೋಚನೆ ಮಾಡೋಣ.

ಕರ್ತನಲ್ಲಿ ಪ್ರಿಯರೇ ಇಲ್ಲಿರುವ ಘಟನೆ ನಮ್ಮೆಲ್ಲರಿಗೆ ಗೊತ್ತಿದೆ. ಜಕ್ಕಾಯ ಪ್ರಧಾನ ಸುಂಕದವನಾಗಿದ್ದ ಮಾತ್ರವಲ್ಲದೆ ಅವನು ಯರಿಕೋವದ ನಿವಾಸಿಯಾಗಿದ್ದ ಆತನು ರೋಮಾಯ ಸರ್ಕಾರದಲ್ಲಿ ಒಬ್ಬ ಸುಂಕ ವಸೂಲಿ ಮಾಡುವಂತಹ ಜವಾಬ್ದಾರಿಯನ್ನು ಆತನು ಹೊಂದಿದ್ದ ರೋಮಾಯ ಸರ್ಕಾರ ಅವನಿಗೆ ಸುಂಕದ ಗುತ್ತಿಗೆದಾರನೆಂದು ಯಾವುದೇ ಸಂಬಳ ಕೊಡ್ತಾಯಿರಲಿಲ್ಲ. ಇವನೇನೆಂದರೆ ಸಾಮಾನ್ಯ ಜನರಿಂದ ಹೆಚ್ಚಾಗಿ ಹಣವನ್ನು ತೆಗೆದುಕೊಂಡು ಸರ್ಕಾರಕ್ಕೆ ಸಲ್ಲಿಸಬೇಕಾದದ್ದು ಸರ್ಕಾರಕ್ಕೆ ಕೊಟ್ಟು ಉಳಿದಿದ್ದನ್ನು ಅವನು ಏನು ಮಾಡುತ್ತಿದ್ದ ಅಂದರೆ ಸ್ವಲಾಭಕ್ಕಾಗಿ ತನ್ನ ಕಿಸೆಗೆ ತಮ್ಮ ಜೋಬಿಗೆ ಹಣವನ್ನು ಹಾಕಿಕೊಳ್ತಾ ಇದ್ದನು. ಈ ರೀತಿಯಾಗಿ ಹೆಚ್ಚಿನ ಅನ್ಯಾಯ ಹೆಚ್ಚಿನ ಮೋಸದ ಕಾರ್ಯವನ್ನು ಈ ಸುಂಕದ ಗುತ್ತಿಗೆದಾರರು ಮಾಡುತ್ತಿದ್ದರು. ಜಕ್ಕಾಯನು ಸಹಿತ ಉಳಿದ ಸುಂಕದವರ ಹೊರತಾಗಿರಲಿಲ್ಲ. ಅವನು ಕೂಡ ಅನ್ಯಾಯ ಮಾಡಿ ಮೋಸ ಮಾಡಿ ತನ್ನ ಸ್ವಲಾಭಕ್ಕಾಗಿ ಹೆಚ್ಚಿನ ಸುಂಕವನ್ನು ಆತನು ವಸೂಲಿ ಮಾಡುತ್ತಿದ್ದ ರೋಮಾಯ ಸರ್ಕಾರಕ್ಕೆ ಸಲ್ಲಿಸಬೇಕಾದ್ದನ್ನು ಸಲ್ಲಿಸುತ್ತಿದ್ದ ಹೆಚ್ಚಿಗೆ ಉಳಿದಿದ್ದನ್ನು ತಾನೇ ಸ್ವಂತ ತನ್ನ ಮನೆಗೆ ಉಪಯೋಗ ಮಾಡಿಕೊಳ್ಳುತ್ತಿದ್ದ ಈ ರೀತಿಯಾಗಿ ಬಹಳ ಹಣವಂತನಾಗಿದ್ದ ಬಹಳ ಅಂದರೆ ಐಶ್ವರ್ಯ ಕೂಡ ಆತನಲ್ಲಿ ಇತ್ತು. ಆಗಿದ್ದಾಗ ನಾವು ನೋಡ್ತಾ ಇದ್ದೇವೆ ಇಂತಹ ಐಶ್ವರ್ಯ ಒಂದು ಜಕ್ಕಾಯನನ್ನು ಅಲ್ಲಿನ ಸಾಮಾನ್ಯ ಜನರು ದ್ವೇಷ ಮಾಡುತ್ತಿದ್ದರು. ಏಕೆಂದರೆ ಮೋಸ ಮಾಡುತ್ತಿದ್ದಾರೆ ಎಂಬುದಾಗಿ ಅಲ್ಲಿನ ಯಹೂದ್ಯರು ಬಹಳವಾಗಿ ದ್ವೇಷ ಮಾಡುತ್ತಿದ್ದರು. ಯಾಕೆಂದರೆ ಇವರು ದೇವರಿಗೆ ವಿರೋಧವಾಗಿ ಕೆಲಸವನ್ನು ಮಾಡ್ತಾರೆ.

ಧರ್ಮಶಾಸ್ತ್ರದ ವಿರೋಧವಾಗಿ ಹೆಚ್ಚಾಗಿ ಮೋಸದ ಕಾರ್ಯ ಮಾಡ್ತಾರೆ ಎಂಬುದಾಗಿ ಯಹೋದ್ಯರು ಕೂಡ ಅವರನ್ನು ಸೇರಿಸ್ತಾ ಇರಲಿಲ್ಲ. ಅಂತಹ ಒಂದು ಸನ್ನಿವೇಶ ಅಂತಹ ಒಂದು ಸಂದರ್ಭದಲ್ಲಿ ಜಕ್ಕಾಯನ ಜೀವಿತದಲ್ಲಿ ಎಷ್ಟೋ ಬದಲಾವಣೆ ಉಂಟಾಗುತ್ತದೆ. ಯೇಸುಕ್ರಿಸ್ತನು ಯೆರಿಕೋ ಮಾರ್ಗವಾಗಿ ಹೋಗ್ತಾನೆ ಎಂಬ ವರ್ತಮಾನ ವಿಷಯ ಕಿವಿಗೆ ಬೀಳ್ತದೆ ಗಿಡ್ಡನಾಗಿದ್ದರಿಂದ ನೋಡಬೇಕೆಂಬ ಆಪೇಕ್ಷೆ ಅವನಲ್ಲಿ ಕೂಡ ಉಂಟಾಗಿದ್ದರಿಂದ ತಾನು ಯೇಸುವನ್ನು ನೋಡುವುದಕ್ಕೆ ಹೋಗ್ತಾನೆ. ತಾನು ಶಾರೀರಿಕವಾಗಿ ಕುಳ್ಳಾಗಿರುವುದರಿಂದ ಜನರ ಗುಂಪಿನೊಳಗೆ ಹೋದರೆ ಕಾಣುವುದಿಲ್ಲವೋ ಎಂಬ ಅಭಿಪ್ರಾಯದಿಂದ ಯೇಸು ಹೋಗುವ ಮಾರ್ಗದಿಂದ ಸ್ವಲ್ಪ ಮುಂದಕ್ಕೆ

ಹೋಗಿ ಒಂದು ಆಲದ ಮರದ ಹತ್ತಿರ ಹೋಗಿ ಅದರ ಮೇಲೆ ಕೂತುಕೊಳ್ತಾನೆ. ಯೇಸು ಕ್ರಿಸ್ತನನ್ನು ನೋಡಬೇಕೆಂಬುದಾಗಿ ಮತ್ತು ಯೇಸು ಕ್ರಿಸ್ತನು ಅದೇ ಮಾರ್ಗವಾಗಿ ಬರುವಾಗ ಜಕ್ಕಾಯನು ಯಾವ ಆಲದ ಮರದ ಮೇಲೆ ಹತ್ತಿದನೋ ಆ ಆಲದ ಮರದ ಕೆಳಗೆ ಬರುತಾನೆ ಆ ಆಲದ ಮರದ ಮೇಲಿರುವ ಜಕ್ಕಾಯನನ್ನು ನೋಡ್ತಾನೆ ಆಗ "ಜಕ್ಕಾಯನೇ ತಟ್ಟನೇ ಇಳಿದು ಬಾ" ಎಂದು ಕರೀತಾನೆ. ನಾನು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು (ಶ್ರೀ ಕೃಷ್ಣ ವಿದುರನ ಮನೆಯಲ್ಲಿ ಇಳಿದುಕೊಂಡಂತೆ) ಅಂತ ಹೇಳ್ತಾನೆ ಆಗ ಜಕ್ಕಾಯನಿಗೆ ಬಹಳ ಸಂತೋಷವಾಯಿತು. ಯಾರೂ ಕೊಡದ ಸನ್ಮಾನ ಗೌರವವನ್ನು ಯೇಸುಸ್ವಾಮಿ ಕೊಡ್ತಾನೆ. ಅಲ್ಲಿನ ಯಾರಿಗೂ ಪ್ರಾಮುಖ್ಯತೆ ಕೊಡಲಿಲ್ಲ. ಆತನನ್ನು ನೋಡುವುದಕ್ಕಾಗಿ ಮರವ ಹತ್ತಿದ ನನ್ನಂತವನಿಗೆ ಗೌರವಿಸಿ ಮಾತ್ರವಲ್ಲದೆ ನನ್ನ ಮನೆಯಲ್ಲಿ ಇಳಿದುಕೊಳ್ಳುತ್ತೇನೆ ಎಂಬುದಾಗಿ ಯೇಸುಸ್ವಾಮಿ ಕೊಟ್ಟಂತಹ ಮಾತಿಗಾಗಿ ಬಹು ಸಂತೋಷವುಳ್ಳವನಾಗಿ ಯೇಸುಸ್ವಾಮಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗ್ತಾನೆ. ಜಕ್ಕಾಯ ಆತಿಥ್ಯ ಸತ್ಕಾರವನ್ನು ಯೇಸುಕ್ರಿಸ್ತನಿಗೆ ಕೊಡ್ತಾನೆ ಮಾತ್ರವಲ್ಲದೆ ನಾವು ನೋಡ್ತಾ ಇದ್ದೇವೆ ಅಂತಂದರೆ ಜಕ್ಕಾಯನ ಮನೆ ಯೇಸುಕ್ರಿಸ್ತನ ಆಗಮನದಿಂದ ಈ ಜಕ್ಕಾಯನ ಮನೆ ಸಂಪೂರ್ಣ ರಕ್ಷಣೆ ಹೊಂದಿತು ಎಂದು ಈ ವಾಕ್ಯ ಭಾಗದಲ್ಲಿ ನಾವು ನೋಡುತ್ತೇವೆ.

ಹೌದು ಕರ್ತನಲ್ಲಿ ಪ್ರಿಯರಾದವರೆ ಇಷ್ಟು ದೊಡ್ಡ ಆಶಿರ್ವಾದವನ್ನು ಜಕ್ಕಾಯನು ಹೊಂದಿಕೊಳ್ಳಬೇಕಾದರೆ ಏನು ಕಾರಣ? ಯಾಕೆ ಆತನಿಗೆ ಇಷ್ಟು ಶ್ರೇಷ್ಠವಾದ ಆಶೀರ್ವಾದ ದೊರಕಿತು? ಕರ್ತನಲ್ಲಿ ಪ್ರಿಯರಾದವರೆ ಜಕ್ಕಾಯನಲ್ಲಿ ಇರುವ 'ಪ್ರಾಮಾಣಿಕತೆ' ಜಕ್ಕಾಯನಲ್ಲಿರುವಂತಹ ಒಂದು 'ಪ್ರಾಮಾಣಿಕತೆ' ಇವತ್ತು 'ಪ್ರಾಮಾಣಿಕತೆ' ಎಂಬುದಾಗಿ ಹೇಳುವಾಗ ಯಾವುದನ್ನು ಮಾಡುವುದು ಸರಿ ಯಾವುದನ್ನು ಬಿಡುವುದು ಸರಿ ನಂಬಿಗಸ್ಥನಾಗಿ ಒಂದು ನೈತಿಕ ಮೌಲ್ಯಗಳಿಗೆ ಅಂಟಿಕೊಂಡಿರುವಂತಹದ್ದೆ ಒಂದು 'ಪ್ರಾಮಾಣಿಕತೆ' ಅಂತಹ ಪ್ರಾಮಾಣಿಕತೆಯನ್ನು ಜಕ್ಕಾಯನು ತೋರಿಸಿದ್ದಾರೆ. ಅಂದರೆ ಜಕ್ಕಾಯ ತನ್ನ ಸ್ವ ನಿರ್ಧಾರದಿಂದ ತನ್ನದೇ ಆದಂತಹ ಸ್ವ ನಿರ್ಧಾರ, ಜಕ್ಕಾಯನಿಗೆ ಯಾರೂ ಯೇಸುಸ್ವಾಮಿ ಈ ಮಾರ್ಗವಾಗಿ ಹೋಗ್ತಾನೆ ಯಾರೂ ಆತನಿಗೆ ಹೇಳಿದರು ಎಂಬುದಾಗಿ ಇಲ್ಲವೆ ಯಾರು ಮಾಹಿತಿ ಕೊಟ್ಟರು ಎಂಬುದಾಗಿ ಸತ್ಯವೇದದಲ್ಲಿ ಅದರ ಸೂಚನೆಯಿಲ್ಲ. ಜಕ್ಕಾಯನಿಗೆ ಯಾರು ಹೇಳಿಲ್ಲ ನೀನು ಹೋಗು ಯೇಸು ಸ್ವಾಮಿ ಬರುತ್ತಾನೆ ಅಂತ ಯಾರೂ ಹೇಳಿಲ್ಲ. ನೀನು ಗಿಡ್ಡನಾಗಿದ್ದಿ ಯೇಸು ನಿನಗೆ ಕಾಣಿಸುವುದಿಲ್ಲ ನೀನು ಮರವನ್ನು ಹತ್ತು ಎಂಬುದಾಗಿ ಯಾರೂ ಹೇಳಿಲ್ಲ. ಯಾರೂ ಸಲಹೆ ಕೊಡಲಿಲ್ಲ. ಕರ್ತನಲ್ಲಿ ಪ್ರಿಯರಾದವರೆ ಅವನು ಅಪೇಕ್ಷೆ ಪಟ್ಟ ಅವನೇ ಸ್ವ ಅಪೇಕ್ಷೆ ಸ್ವ ನಿರ್ಧಾರ ಮಾಡಿಕೊಂಡ ನಾನು ಯೇಸು ಸ್ವಾಮಿಯನ್ನು ನೋಡಬೇಕು ಎಂಬುದಾಗಿ ಮಾತ್ರವಲ್ಲದೆ ಸ್ವಾಮಿ ಅವನಿಗೆ ಒಳ್ಳೆಯ ಗೌರವಕೊಟ್ಟು ನಾನು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು ಎಂಬುದಾಗಿ ಹೇಳುವಾಗ ಸಂತೋಷದಿಂದ ಯೇಸುಸ್ವಾಮಿಯನ್ನು ಮನೆಗೆ ಕರೆದುಕೊಂಡು ಹೋದನು ಎಂದು ಮೆಥೋಡಿಸ್ಟ್ ಸಭೆಯ ಸಭಾ ಪಾಲಕರು ದೈವ ಸಂದೇಶವನ್ನು ನೀಡಿದರು.

ಹೀಗೆ ಪ್ರೊಟೆಸ್ಟೆಂಟರ ಅಂಗ ಸಂಸ್ಥೆಯಾದ ಮೆಥೋಡಿಸ್ಟ್ ಕ್ರೈಸ್ತ ದೇವಾಲಯದಲ್ಲಿ ಪಾದ್ರಿಗಳು ಆದಂತಹ ರೆವರೆಂಡ್ ಸಾಮಸನ್ ಪಠಾಣ ಅಯ್ಯನವರು ವಾರದ ಆರಾಧನೆಯಲ್ಲಿ ಕ್ರಿಸ್ತ ಸಂದೇಶವನ್ನು ಹೇಳುವಾಗ ಬಳಸಿದ ಕನ್ನಡ ಭಾಷೆಯನ್ನು ಈ ರೀತಿಯಾಗಿ ವರ್ಗೀಕರಿಸಿ ಹೇಳಬಹುದಾಗಿದೆ.

ಸಂಬೋಧನೆಗಳು(ಪಾದ್ರಿ ವಿಶ್ವಾಸಿಗಳಿಗೆ)	**ಆಡು ಭಾಷೆ**
ಕರ್ತನಲ್ಲಿ ಪ್ರಿಯರೆ	ಕರಿತಾನೆ
ಕರ್ತನಲ್ಲಿ ಪ್ರಿಯ ಸಭೆಯವರೆ	ಮಾಡೋಣ
ಕರ್ತನಲ್ಲಿ ಪ್ರಿಯರಾದವರೆ	ಮಾಡ್ತಾರೆ, ಹೋಗ್ತಾನೆ
ಸ್ವಲ್ಪ ಹೊತ್ತಿನ	ನೋಡ್ತಾ ಇದೇವೆ, ನೋಡ್ತಾನೆ, ಕೊಡ್ತಾನೆ

ಒಂದೇ ಅರ್ಥ ಇರುವ ಪದಗಳ ಮರು ಬಳಕೆ ಅಂದರೆ ಪೂರ್ವ ಪದ ಮತ್ತು ಉತ್ತರ ಪದಗಳಲ್ಲಿ ಒಂದೇ ಅರ್ಥ ಬರುವಂತಹದ್ದು.

ಈದಿನ ಈ ಒಂದು ದೃಷ್ಟಾಂತ + ಜಕ್ಕಾಯನ ಈ ಒಂದು ದೃಷ್ಟಾಂತ

ತನ್ನ ಕಿಸೆಗೆ + ತಮ್ಮ ಜೋಬಿಗೆ

ಹೆಚ್ಚಿನ ಅನ್ಯಾಯ + ಹೆಚ್ಚಿನ ಮೋಸ

ಅನ್ಯಾಯ ಮಾಡಿ + ಮೋಸ ಮಾಡಿ

ವರ್ತಮಾನ + ವಿಷಯ

ತನ್ನ ಸ್ವ ನಿರ್ಧಾರ + ತನ್ನದೇ ಆದ ಸ್ವ ನಿರ್ಧಾರ

ಸ್ವ ಅಪೇಕ್ಷೆ + ಸ್ವ ನಿರ್ಧಾರ

ಸ್ವಲ್ಪ ಹೊತ್ತಿನ + ಸ್ವಲ್ಪ ಸಮಯ + ಸ್ವಲ್ಪ ಸಮಯವೇ

೩.೩.೨. ಕೆಥೋಲಿಕ್ ಸಭೆಯ ಧರ್ಮೋಪದೇಶ ಮತ್ತು ಭಾಷೆ

ಕೆಥೋಲಿಕ್ ಕ್ರೈಸ್ತ ಸಭೆಯ ಸಭಾ ಪಾಲಕರು ಆರಾಧನೆಯಲ್ಲಿ ದೇವರ ಸಂದೇಶವನ್ನು ನೀಡುವ ಸಂದರ್ಭದಲ್ಲಿ ಈ ರೀತಿಯಾಗಿ ಸಂಬೋಧಿಸುತ್ತಾ ದೇವರ ವಾಕ್ಯವನ್ನು ಮೌಖಿಕವಾಗಿ ಬೋಧಿಸುತ್ತಾರೆ. ಈಗಾಗಲೇ ಪಾರಾಯಣ ಮಾಡಿದ ದೇವರ ವಾಕ್ಯವನ್ನು ಪ್ರಭು ಯೇಸುಕ್ರಿಸ್ತರ ಶುಭ ಸಂದೇಶವಿದು ಎಂದು ಸಂಬೋಧಿಸುತ್ತಾ ಕ್ರಿಸ್ತನಲ್ಲಿ ಪ್ರಿಯ ಸಹೋದರ, ಸಹೋದರಿಯರೇ ದೇವರ ಆಯ್ಕೆ, ಅವರು ಆರಿಸಿಕೊಂಡಿರುವ ವಿಧಾನಗಳಲ್ಲಿ ಅವರು ನಮ್ಮನ್ನು ಪ್ರೀತಿಸಿದ ಮಾದರಿಯು ವಿಶೇಷವಾದದ್ದು ಎಂಬುವುದನ್ನು ಮೊದಲನೇ ವಾಚನದಲ್ಲಿ ನೋಡುತ್ತೇವೆ. ದೇವರು ನಮ್ಮನ್ನು

ಆರಿಸಿಕೊಂಡ ನಂತರ ಹೇಗೆ ನಾವು ಅವರ ಸ್ವಾಸ್ಥ್ಯವನ್ನು ಎಲ್ಲರಿಗೆ ಹೇಗೆ ಕೊಡಬೇಕೆಂಬುದನ್ನು ಸ್ಪಷ್ಟವಾಗಿ ಯೇಶಾಯ ಪ್ರವಾದನೆಯ ಗ್ರಂಥದಲ್ಲಿ ದೇವರು ಹೇಳಿದರು. ನಿನ್ನನ್ನು ತಾಯಿಯ ಉದರದಲ್ಲಿ ಗರ್ಭ ಧರಿಸುವುದಕ್ಕಿಂತ ಮುಂಚೆಯೇ ನಾನು ನಿನ್ನನ್ನು ಕಂಡಿದ್ದೇನೆ. ನೀನು ಉದರದಿಂದ ಹೊರಬರುವುದಕ್ಕಿಂತ ಮೊದಲೇ ನಿನ್ನನ್ನು ನಾನು ಪವಿತ್ರಗೊಳಿಸಿದ್ದೇನೆ. ನೀವು ಎದ್ದು ನಡುಕಟ್ಟಿಕೊಂಡು ನಾನು ಆಜ್ಞಾಪಿಸಿದ್ದೆಲ್ಲಾ ಜನರಿಗೆ ತಿಳಿಸಬೇಕು. ಯಾರಿಗೂ ಹೆದರಬೇಡ, ಹೆದರಿ ಹಿಂಜರಿದರೆ ನಾನು ನಿನ್ನನ್ನು ಹೆದರಿಸುತ್ತೇನೆ. ನಾನು ನಿನ್ನ ಜೊತೆಗೆ ಯಾವಾಗಲೂ ಇರುತ್ತೇನೆ. ನಿನ್ನ ವಿರುದ್ಧವಾಗಿ ಅವರು ಯುದ್ಧ ಮಾಡುವರು, ಆದರೆ ನಿನ್ನನ್ನು ಸೋಲಿಸುವುದಕ್ಕೆ ಆಗುವುದಿಲ್ಲ. ನಿನ್ನನ್ನು ಕಾಪಾಡುವವನು ನಾನೇ ನಿನ್ನೊಂದಿಗೆ ಇರುತ್ತೇನೆ. ಇದು ಸರ್ವೇಶ್ವರನಾದ ನನ್ನ ನುಡಿ ಎಂದು ಯೇಶಾಯ ಪ್ರವಾದನೆ ಹೇಳುತ್ತದೆ.

ಈ ಶುಭ ಸಂದೇಶದಲ್ಲಿ ನಿಮಗೆ ಹೇಳುವುದೇನೆಂದರೆ, ಯೇಸುಪ್ರಭು ಸ್ವಗ್ರಾಮ ನಜರೆತಗೆ ಹೋದರು. ವಾಡಿಕೆ ಪ್ರಕಾರ ಪ್ರಾರ್ಥನಾ ಮಂದಿರದಲ್ಲಿ ದೇವರ ವಾಕ್ಯವನ್ನು ಓದುವುದಕ್ಕೆ ಯೇಶಾಯನ ಸುರುಳಿ(ಗ್ರಂಥ)ಯನ್ನು ಕೈಯಲ್ಲಿ ಕೊಟ್ಟರು. ಆಗ ಯೇಸು ದೇವರು ನನ್ನನ್ನು ಆರಿಸಿದ್ದಾರೆ. ಈ ಶುಭ ಸಂದೇಶವನ್ನು ಸಾರುವುದಕ್ಕೆ, ಕುರುಡರು ಕಾಣುವುದಕ್ಕೂ, ಮೃತಪಟ್ಟವರನ್ನು ಎಬ್ಬಿಸುವುದಕ್ಕೂ, ಸೆರೆಯಲ್ಲಿದ್ದವರನ್ನು ನಾನು ಬಿಡುಗಡೆಮಾಡುವುದಕ್ಕೂ ನನ್ನನ್ನು ಅಭ್ಯಂಗಿಸಿದ್ದಾರೆ ಎಂದು ಹೇಳಿದರು. ಎಲ್ಲರೂ ಆಶ್ಚರ್ಯಪಟ್ಟರು, ಬೆರಗಾದರು. ಎಲ್ಲಿಂದ ಬಂತು ಇವನಿಗೆ ಜ್ಞಾನ, ಇವನು ಆ ಬಡಗಿ ಯೋಸೇಫನ ಮಗನಲ್ಲವೇ, ಇವನಿಗೆ ಎಲ್ಲಿಂದ ಬಂತು ಈ ಜ್ಞಾನ ಎಂದು ಮನಸ್ಸಿನಲ್ಲಿ ಯೋಚನೆ ಮಾಡಿದರು. ಯೇಸುಪ್ರಭು ಅದನ್ನು ಅರಿತುಕೊಂಡರು. ವೈದ್ಯರು ತನ್ನ ಆರೋಗ್ಯದ ಬಗ್ಗೆ ಕ್ರೈಸ್ತ ಪಾದ್ರಿ ಹಾಗೂ ಬಿಷಪರಾಗಲಿ ತಮ್ಮ ಗುಣ ನಡೆತೆಯ ಬಗ್ಗೆ ಮೊದಲು ತಿಳಿದುಕೊಂಡಿರಬೇಕು. ಆಮೇಲೆ ಇನ್ನೊಬ್ಬರಿಗೆ ವೈದ್ಯ ಹಾಗೂ ಬೋಧನೆ ಮಾಡಬೇಕು ಎಂಬಂತೆ ಯೇಸುವಿನ ಉಪದೇಶವನ್ನು ಕೇಳಲು ಯಾರೂ ತಯಾರಿರಲಿಲ್ಲ.

ಎಲೀಯನ ಕಾಲದಲ್ಲಿ ೩ ವರ್ಷ ೬ ತಿಂಗಳು ಮಳೆಯಿಲ್ಲದ ಸಂದರ್ಭದಲ್ಲಿ ಎಷ್ಟೋ ವಿಧವೆಯರು ಸ್ವಂತ ದೇಶದಲ್ಲಿ ಇದ್ದರು. ಹಾಗೆಯೇ ಪ್ರವಾದಿ ಎಲೀಷನ ಕಾಲದಲ್ಲಿ ಇಸ್ರಾಯೇಲದಲ್ಲಿ ಎಷ್ಟೋ ಕುಷ್ಟರೋಗಿಗಳಿದ್ದರು. ಯಾರನ್ನೂ ಗುಣಪಡಿಸಲಿಲ್ಲ. ವೈರಿಯಾದ ಸೇನಾಪತಿಯನ್ನು ಮಾತ್ರ ಕುಷ್ಟರೋಗದಿಂದ ಗುಣಪಡಿಸಿದರು ಅಂದರೆ ನಮ್ಮ ಮನೆ ಅಡುಗೆ ಎಷ್ಟು ಚೆನ್ನಾಗಿ ಮಾಡಿದರು ಸರಿ ಇರಲ್ಲ. ಹಾಗೆಯೇ ತಂದೆ ತಾಯಿ ಬೇರೆ ಹುಡುಗನನ್ನು ತೋರಿಸಿ ನೋಡು ಅವನು ಎಷ್ಟು ಓದುತ್ತಾನೆ ನೀನು ದಡ್ಡ ಎಂದು ಬೈಯುವುದು, ಹೆಂಡತಿ ಗಂಡನಿಗೆ ನೀನೇನು ಗಂಡಪ್ಪ ಅವರು ನೋಡು ಎಷ್ಟು ಸಾಮಾನು ತಂದಿದ್ದಾರೆ ಎಂದು ನಮ್ಮನ್ನು ನಮ್ಮಲ್ಲಿರುವುದನ್ನು ನಾವು ಯಾವಾಗಲೂ ಇಷ್ಟಪಡುವುದಿಲ್ಲ. ಮತ್ತು ನೀವೆಲ್ಲಾ ತಪ್ಪುಗಳು ನಿಮಗೆ ಗೊತ್ತಿದ್ದರೆ ಏನು ಮಾಡುತ್ತೀರಿ ಹೇಳುತ್ತಾರಲ್ಲ ಬ್ಲಾಕ್‌ಮೇಲ್ ಮಾಡುತೀನಿ, ವಾಟ್ಸಾಪ್, ಫೇಸ್‌ಬುಕಲ್ಲಿ ಆಕುತೀನಿ, ಎಲ್ಲಾ ಪಬ್ಲಿಷ್ ಮಾಡುತೀನಿ ಎನ್ನುವುದು ಇದು ನಮ್ಮಲ್ಲಿ ಜ್ಞಾನವೃದ್ಧಿಗಾಗಿ ಅಲ್ಲ. ಇದು ನಾಲೆಡ್ಜ್

ಅಪ್ರಿಸಿಯೇಟ್ ಮಾಡುವುದಕ್ಕಾಗಿ ಅಲ್ಲ. ಈಗ ಅಡ್ವಟೈಸ್‌ಮೆಂಟ್ ಕೊಡುತ್ತಾರಲ್ಲ ಕಣ್ಣು ಸೆಳೆಯುವ ಹಾಗೆ ಹೇಗೆ ಅವರು ಮಾಡುತ್ತಾರೆ, ಉದಾ. ಈ ಗೋಡೆ, ಗೋಡೆಯ ಮೇಲೆ ಇರುವ ಒಂದು ಚಿಕ್ಕ ರಂಧ್ರದ ಕಡೆಗೆ ಮನಸ್ಸು ಹೋಗುತ್ತೈತೆ. ಓಲ್‌ಗೋಡೆಯಲ್ಲಿ ಪೇಂಟಾಗಿದ್ದರೂ ಒಂದು ಸಣ್ಣ ಕೊರತೆ ಎಲ್ಲಿದೆಯೋ ಕಣ್ಣು ಅಲ್ಲೇ ಹೋಗುತ್ತೈತೆ. ಹಾಗೆಯೇ ಅಲ್ಲಿ ಅದ್ಭುತ ಮಾಡ್ತಿನಿ, ಇಲ್ಲಿ ಅದ್ಭುತ ಮಾಡ್ತೀನಿ ಎನ್ನುವಾಗ ಇಲ್ಲಿ ಮಾಡಿರಿ ನೋಡೋಣ ಎಂದು ಕ್ರಿಸ್ತನನ್ನು ದೊಬ್ಬಲು ಪ್ರಯತ್ನಿಸಿದರು. ಜನರು ಎಲ್ಲರೂ ಎಲ್ಲಾ ತಮಗೆ ಮಾಡಬೇಕು, ತಾವೇ ಮಾಡಬೇಕು ಅಲ್ಲದೆ ತಪ್ಪು ಹುಡುಕುವುದು ಮನುಷ್ಯ ಗುಣವಾಗಿರುತ್ತದೆ. ಪ್ರೀತಿಯಿಂದ ನೋಡಿದರೆ ಅರ್ಥ ಇದೆ, ವಿಶ್ವಾಸ ಇರಬಹುದು, ನಂಬಿಕೆ ಇರಬಹುದು ಆದರೆ ಪ್ರೀತಿ ಎಲ್ಲದಕ್ಕಿಂತ ಮಿಗಿಲಾಗಿದೆ ಏನು ಮಾಡಿದರೂ ಶಾಶ್ವತವಿಲ್ಲ, ಪ್ರೀತಿಯೊಂದೇ ಶಾಶ್ವತ ಎಂದು ಯೇಶಾಯನು ಹೇಳುವ ಹಾಗೆ ನಾನು– ನೀನು ಉದರದಲ್ಲಿರುವಾಗಲೇ ನಾನು ನಿನ್ನನ್ನು ಆರಿಸಿಕೊಂಡಿದ್ದೇನೆ ಎಂತಹ ಮಾತು ಆಗಾಗಿ ನಾವು ಯಾರಿಗೂ ಹೆದರಬೇಕಾಗಿಲ್ಲ. ಆದ ಕಾರಣ ದೇವರಿಗೆ ನಾವು ವಿಧೇಯರಾಗಿರುವಂತಹ ಕೆಲಸ ಕಾರ್ಯ ಮಾಡಬೇಕು. ಯಾರಿಗೂ ಹೆದರಬೇಕಾಗಿಲ್ಲ. ದೇವರಿಗೆ ಹೆದರಬೇಕಾಗಿದೆ. ನಾವು ಪಾಪದಲ್ಲಿದ್ದಾಗಲೇ ದೇವರು ನಮ್ಮನ್ನು ಪ್ರೀತಿಸಿದ್ದಾನೆ. ನಮ್ಮನ್ನು ನಾವು ತಪ್ಪುಗಳನ್ನು ತಿಳಿದುಕೊಳ್ಳೋಣ. ಒಳ್ಳೆಯದನ್ನೇ ತಿಳಿದುಕೊಳ್ಳೋಣ, ಒಳ್ಳೆಯದನ್ನೇ ಮಾಡೋಣ ದೇವರು ಎಲ್ಲವನ್ನು ಬಲ್ಲವನು, ಅವರ ಆಶೀರ್ವಚನ ನಮ್ಮ ಮೇಲೆ ಇರಲಿ.

ಹೀಗೆ ಕೆಥೋಲಿಕ್ ಕ್ರೈಸ್ತ ಸಭೆ ಅಥವಾ ವಿಚಾರಣೆಯಲ್ಲಿ ಆರಾಧನೆಯ ಸಂದರ್ಭದಲ್ಲಿ ಬಳಸುವ ವಾಕ್ಯೋಪದೇಶದಲ್ಲಿನ ಭಾಷಿಕ ವಿವರಗಳನ್ನು ಈ ರೀತಿಯಾಗಿ ವರ್ಗೀಕರಿಸಿ ಹೇಳಬಹುದಾಗಿದೆ.

ಆಡು ಭಾಷೆ	**ಕ್ರಿಸ್ತನ ವಾಗ್ದಾನಗಳು**
ಹೋಗುತ್ತಾರಲ್ಲ	ಹೆದರಬೇಡ
ಹೋಗ್ತೈತೆ	ಕಾಪಾಡುವವನು ನಾನೆ
ನೀನೇನು ಗಂಡಪ್ಪ ನೀನು	ನಿನ್ನೊಂದಿಗಿದ್ದೇನೆ
ಹೇಳುತಾರಲ್ಲ	ಹೆದರಿಸುತ್ತೇನೆ
ಕೊಡುತಾರಲ್ಲ	ಕಂಡಿದ್ದೇನೆ
ಹೆದರಬೇಕಾಗಿಲ್ಲ	ಪವಿತ್ರಗೊಳಿಸಿದ್ದೇನೆ, ಅಭ್ಯಂಗಿಸಿದ್ದೇನೆ (ಅಭಿಷೇಕ)

ಕ್ರೈಸ್ತ ಉಪದೇಶ ವಾಕ್ಯ	**ಕನ್ನಡ ವಾಕ್ಯ**
ಇದು ನಮ್ಮಲ್ಲಿ ಜ್ಞಾನ ವೃದ್ಧಿಗಾಗಿ ಅಲ್ಲ	ಇದು ನಮ್ಮ ಜ್ಞಾನವನ್ನು ವೃದ್ಧಿಸುವುದಿಲ್ಲ.

ಓಲ್ ಗೋಡೆಯಲ್ಲಿ ಪೇಯಿಂಟಾಗಿದ್ದರೂ	ಗೋಡೆ ತುಂಬಾ ಪೇಯಿಂಟ್ ಮಾಡಿದ್ದರೂ
ಕೊರತೆ ಎಲ್ಲಿದೆಯೋ ಕಣ್ಣು ಅಲ್ಲೇ ಹೋಗುತ್ತದೆ	ಕೊರತೆ ಎಲ್ಲಿದೆಯೋ ಅಲ್ಲಿಯೇ ಕಣ್ಣು ಹೋಗುತ್ತದೆ
ಏನು ಮಾಡಿದರೂ ಶಾಶ್ವತವಿಲ್ಲ	ಏನು ಗಳಿಸಿದರೂ ಶಾಶ್ವತವಿಲ್ಲ
ನಾನು ನೀನು ಉದರಲ್ಲಿರುವಾಗಲೇ ಆರಿಸಿಕೊಂಡಿದ್ದೇನೆ	ನಾನು ನಿನ್ನನ್ನು ಉದರಲ್ಲಿರುವಾಗಲೇ ನೋಡಿದ್ದೇನೆ

ಸಂಬೋಧನೆ

ಕರ್ತನಲ್ಲಿ ಪ್ರಿಯ ಸಹೋದರ, ಸಹೋದರಿಯರೇ

ಪ್ರಭು ಯೇಸುಕ್ರಿಸ್ತರ ಶುಭ ಸಂದೇಶವಿದು ಪ್ರಿಯರೆ

ಒಳ್ಳೆಯದನ್ನೇ ಮಾಡೋಣ, ಒಳ್ಳೆಯದನ್ನೇ ನೋಡೋಣ

೩.೩.೩. ಕ್ರೈಸ್ತ ಬಹಿರಂಗ ಶಾಂತಿ ಸಂದೇಶ ಕೂಟಗಳು ಮತ್ತು ಭಾಷೆ

ಕ್ರೈಸ್ತ ಧಾರ್ಮಿಕ ವ್ಯವಸ್ಥೆಯಲ್ಲಿ ದೈವಸಂದೇಶವನ್ನು ಚರ್ಚ್ ಅಥವಾ ವಿಚಾರಣೆಗಳಲ್ಲಿ ನೀಡುವುದು ಮಾತ್ರವಲ್ಲದೆ ಆಗಾಗ ಹಮ್ಮಿಕೊಳ್ಳುವ ಬಹಿರಂಗ ಧರ್ಮೋಪದೇಶ ಸಭೆಗಳಲ್ಲಿ ಬಳಸುವ ಕನ್ನಡ ಭಾಷಾ ಬಳಕೆಯನ್ನು ವಿಶೇಷವಾಗಿ ಗಮನಿಸಬಹುದಾಗಿದೆ. ಅಂತಹ ಒಂದು ಬಹಿರಂಗ ಸಭೆಯ ವಾಕ್ಯೋಪದೇಶವನ್ನು ಬ್ರದರ್ ನವೀನ್ ಜೋಸೆಫ್, ಬೆಂಗಳೂರು ಅವರಿಂದ ಕೇಳಿಸಿಕೊಳ್ಳಲಾಯಿತು. ಅವರು ನೀಡಿದ ಸಂದೇಶ ಹೀಗಿದೆ.

ವಾಕ್ಯೋಪದೇಶ: ಈಗಾಗಲೇ ಸೇವಕರು ಓದಿರುವಂತಹ ಯೇಶಾಯನು ಬರೆದ ಗ್ರಂಥ ೪೩ನೇ ಅಧ್ಯಾಯದಲ್ಲಿ ಒಂದೇ ಒಂದು ವಾಕ್ಯನಾ ಧ್ಯಾನ ಮಾಡಿ ಮೇ ಬಿ ಇವತ್ತು ರಾತ್ರಿ ನೀವು ಅನೇಕ ಕಷ್ಟ ನಷ್ಟ ಕಣ್ಣೀರಿನಿಂದ ಬಂದಿರಬಹುದು. ೨೦೧೯ನೇ ವರ್ಷ ಹೇಗಿರುತ್ತೆ, ೨೦೧೮ ವರ್ಷ ಸೋಲು, ದುಃಖ, ಕಣ್ಣೀರು ೨೦೧೯ನೇ ಅದು ಆಶೀರ್ವಾದಕರವಾಗಿರುತ್ತಾ, ಅಟ್‌ಲಿಸ್ಟ್ ೨೦೧೯ರಲ್ಲಿ ನನಗೆ ಏನಾದರೂ ಸಿಗುತ್ತಾ ಅಂತೇಳಿ ತವಕದಿಂದ ಬಂದಿರುವಂತ ಅನೇಕ ಪ್ರಶ್ನೆಗಳೊಟ್ಟಿಗೆ ಬಂದಿರುವಂತಹ ರಾಯಚೂರು ಜನರಿಗೆ ನಾನು ಏನು ಹೇಳ್ಲಿ ಅಪ್ಪ ಎಂದು ಕೇಳುವಾಗ ದೇವರು ನನಗೆ ಈ ವಾಕ್ಯವನ್ನು ಮಾತಾಡು ಅಂತೇಳಿದ್ರು. ನಾನು ಓದುತ್ತೇನೆ ಕೇಳಿ ೪೩ನೇ ಅಧ್ಯಾಯದಲ್ಲಿ ೧ನೇ ವಚನದಲ್ಲಿ ಓದುತ್ತೇನೆ. "ಭಯ ಪಡಬೇಡ ನಾನು ನಿನ್ನನ್ನು ವಿಮೋಚಿಸಿದೆನಲ್ಲ ನಿನ್ನ ಹೆಸರಿಡಿದು ಕರೆದೆನಲ್ಲ ನೀನು ನನ್ನವನೇ. ಎಂಥಾ ಮಧುರವಾದ ಮಾತು. ನಾಲ್ಕು ಪದದ ಅರ್ಥಗಳನ್ನು ನಾನು ನಿಮಗೆ ತೋರಿಸಿಕೊಡುತ್ತೇನೆ. ಅದು ಎಂಥ ಮಧುರವಾದ ಮಾತು. ಈ ಕೂಟಕ್ಕೆ ನಾನು ಏನು ಹೆಸರಿಡಬೇಕು, ಅಂಥ ಕೇಳಿದಾಗ ಜನವರಿ

ಆರಂಭ ತಾನೆ ಆಶೀರ್ವಾದಕೂಟ ಅಂಥ ಹೆಸರಿಡಿರಿ ಅಂಥ ಹೇಳಿದೆ. ದೇವರು ನಿಮ್ಮನ್ನು ಇಲ್ಲಿಗೆ ಕರಕೊಂಡು ಬಂದಿರುವುದು ಎಚ್ಚರ ಪಡಿಸುವುದಕ್ಕೋ? ಅಥವಾ ಶಾಪ ಕೊಡುವುದಕ್ಕೋ ನಾನು ನಿಮ್ಮನ್ನು ಇನ್ನು ಆಶೀರ್ವಾದ ಮಾಡಲ್ಲ ಅಂತ ಕರಕೊಂಡು ಬರಲಿಲ್ಲ. ಈ ಕೂಟಕ್ಕೆ ನಿಮ್ಮನ್ನು ಕರಕೊಂಡು ಬಂದಿರುವುದೇ ಇಲ್ಲಿಯವರೆಗೆ ಪಟ್ಟಂತ ಕಷ್ಟಗಳು ಸಾಕು, ಇನ್ನು ಮುಂದೆ ನಾನು ನಿಮ್ಮನ್ನು ಆಶೀರ್ವಾದ ಮಾಡಲಿಕ್ಕೋಸ್ಕರವೆಂದು ನಿಮ್ಮನ್ನು ಇಲ್ಲಿಗೆ ಕರಕೊಂಡು ಬಂದಿದ್ದಾರೆ.

ದೇವರ ವಾಕ್ಯ ಈ ರೀತಿಯಾಗಿ ಹೇಳ್ತಾ ಇದೆ. ಭಯಪಡಬೇಡ ಮೊದಲನೆಯ ವಾಕ್ಯ. ಇಲ್ಲಿ ಕೂಡಿ ಬಂದಿರುವಂತಹ ದೇವ ಮಕ್ಕಳಿಗೆ ದೇವರು ಹೇಳತಕ್ಕಂತಹುದು ೨೦೧೯ನೇ ವರ್ಷದಲ್ಲಿ ನೀನು ಭಯಪಡಬೇಡ. ಯಾಕೆ ಭಯಪಡಬೇಡ ಅಂತೇಳಿದರೆ ೨೦೧೮ರವರೆಗೆ ನಾನು ನಿನ್ನ ಪ್ರಾರ್ಥನೆಯನ್ನು ಕೇಳಲಿಲ್ಲ. ನಾನು ನಿನಗೆ ಸಹಾಯ ಮಾಡಲಿಲ್ಲ, ನಿನ್ನ ಕಡೆ ಕಿವಿಗೊಡಲಿಲ್ಲ, ನನ್ನ ಹಸ್ತವನ್ನು ನಿನ್ನಕಡೆಗೆ ಚಾಚಲಿಲ್ಲ. ಆದರೆ ಇದುವರೆಗೆ ಬಿಟ್ಟಿದ್ದು ಸಂಕಟವಾಗಿದೆ. ನಾನು ೨೦೧೯ರಲ್ಲಿ ನಾನು ನಿನ್ನ ಕೈಹಿಡಿಲಿಕ್ಕೆ ಹೋಗ್ತಾ ಇದ್ದೇನೆ. ನಾನು ನಿನ್ನ ಮೇಲಕ್ಕೆ ಎತ್ತಲಿಕ್ಕೆ ಹೋಗಾ ್ತಇದ್ದೇನೆ. ಅಂತ ದೇವರು ಹೇಳ್ತಾ ಇದಾನೆ. ಆ ವಿಚಾರಕ್ಕೋಸ್ಕರನೇ ದೇವರು ಭಯಪಡಬೇಡ ಅಂತ ಹೇಳ್ತಾ ಇದಾನೆ. ಗಮನವಿಟ್ಟು ಕೇಳ್ರಿ ಭಯ ಅಂತಕ್ಕಂತಹದ್ದು ಸಾಧಾರಣವಾದುದಲ್ಲ. ಒಬ್ಬ ಮನುಷ್ಯನಿಗೆ ಕ್ಯಾನ್ಸರ್, ಏಡ್ಸ್ ಇದೆ ಅಂಥ ಅಂದರೆ ಕ್ಯಾನ್ಸರ್, ಏಡ್ಸ್ ಸಾಯಿಸಲ್ಲ, ಅದರಿಂದ ಬಂದಿರುವಂತಹ ಭಯ ಅವನನ್ನು ಸಾಯಿಸಿಬಿಡುತ್ತೆ. ಒಬ್ಬ ಕ್ಯಾನ್ಸರ್ ಇದೆ ಫೈನಲ್ ಸ್ಟೇಜಲ್ಲಿ ಇದೆ ಅಂತ ಅಂದಾಗ ಡಾಕ್ಟರ್ ಹೇಳ್ತಾನೆ ಕ್ಯಾನ್ಸರ್ ಫೈನಲ್ ಸ್ಟೇಜಲ್ಲಿದೆ ಇನ್ನು ನೀನು ಬದುಕುವುದಾದರೆ ಒಂದು ವರ್ಷ ಬದುಕುತೀಯ ಅಂತ ಹೇಳುತಾನೆ. ಆಕ್ಚುವಲಿ ಫೈನಲ್ ಸ್ಟೇಜಲ್ಲಿ ಇದಾನೆ ಅಂತೆಂದರೆ ಒಂದು ವರ್ಷ ಬದುಕಬಹುದೇನೋ ಆದರೆ ಅವನು ಕ್ಯಾನ್ಸರ್ ಇದೆ ಅಂತ ಗೊತ್ತಾದಾಗ ಒಂದು ವರ್ಷ ಬದುಕುವ ವ್ಯಕ್ತಿ ಅದರ ನಿಮಿತ್ತ ಭಯ ಬರುತ್ತಲ್ಲ ಆ ಭಯ ಅವನನ್ನು ಐದು ತಿಂಗಳಲ್ಲಿಯೇ ಸಾಯಿಸಿಬಿಡುತ್ತೆ. ಒಬ್ಬ ಸಾಲ ಮಾಡಿದ ವ್ಯಕ್ತಿ ಸಾಲದಿಂದ ಸಾಯಲ್ಲ, ಆ ಸಾಲದ ಭಯದಿಂದ ಸಾಯಿಸಿಬಿಡುತ್ತೆ. ಒಬ್ಬ ವ್ಯಕ್ತಿಗೆ ಕಷ್ಟ, ನೋವು, ಕಣ್ಣೀರು ಸಾಯಿಸಲ್ಲ, ಅದರ ನಿಮಿತ್ತ ಬರುವ ಭಯ ಸಾಯಿಸಿಬಿಡುತ್ತೆ. ಇವತ್ತು ರಾತ್ರಿ ನಾನೇನು ಹೇಳಲಿಕ್ಕೆ ಇಷ್ಟಪಡುತ್ತೀನಿ ಅಂತೇಳಿದರೆ ಒಂದು ವೇಳೆ ಭಯಂಕರ ರೋಗ ಬಂದಿರಬಹುದು, ಭಯಂಕರ ಸಾಲದ ಭಾದೆಯಲ್ಲಿರಬಹುದು, ನೀವು ಮಾತ್ರವಲ್ಲ ಇಲ್ಲಿ ನಿಂತುಕೊಂಡಿರುವ ನಿಮ್ಮೆಲ್ಲರನ್ನು ಯೇಸು ಆಶೀರ್ವಾದ ಮಾಡುತಾನೆ.

ಯೇಸು ೨೦೧೯ನೇ ವರ್ಷದಲ್ಲಿ ನಿಮ್ಮೆಲ್ಲರನ್ನು ಮೇಲಕ್ಕೆತಲ್ಲಿಕ್ಕೆ ಹೋಗುತ್ತಾನೆ. ಭಯಪಡಬೇಡಿರಿ. ಭಯ ಅಂಥಕ್ಕಂತದು ಸಾಧಾರಣವಾದುದಲ್ಲ. ಭಯಪಟ್ಟ ತಕ್ಷಣ ಸೈತಾನನು ಒಂದು ಹೆಜ್ಜೆ ಮುಂದೆ ಇಡುತ್ತಾನೆ. ಯಾವ ವ್ಯಕ್ತಿ ಭಯಪಡುತ್ತಾನೋ ಆಗ ಸೈತಾನನು ಒಂದು ಹೆಜ್ಜೆ ಮುಂದೆ ಇಡುತ್ತಾನೆ. ಯಾವ ವ್ಯಕ್ತಿ ನಂಬಿಕೆಯಿಂದ ಇರುತ್ತಾನೋ ಅವನಿಗೋಸ್ಕರ ದೇವರು ಒಂದು

ಹೆಜ್ಜೆಯನ್ನು ಮುಂದೆ ಇಡುತ್ತಾನೆ. ಎಂತಹ ವ್ಯತ್ಯಾಸ ನೋಡಿರಿ ನಂಬಿಕೊಂಡು ಇರುವ ಒಬ್ಬ ಮನುಷ್ಯನಿಗೆ ಯೇಸು ಒಂದು ಹೆಜ್ಜೆಯನ್ನು ಮುಂದೆ ಇಡುತ್ತಾನೆ. ಭಯಪಡುವಂತಹ ಮನುಷ್ಯನಿಗೆ ಸೈತಾನನು ಒಂದು ಹೆಜ್ಜೆ ಮುಂದೆ ಇಡುತ್ತಾನೆ. ಸೈತಾನನು ಒಬ್ಬ ಮನುಷ್ಯನಿಗೆ ಭಯಬಂದ ತಕ್ಷಣ ಅವನ ಮನಸ್ಸಲ್ಲಿ ಸೇರಿಬಿಡುತ್ತಾನೆ. ಇನ್ನೇನೂ ನಡೆಯುವುದಿಲ್ಲ, ನಿನ್ನ ಗಂಡ ವಾಪಾಸ್ಸು ಬರುವುದಿಲ್ಲ, ನಿನ್ನ ಕೋರ್ಟ್ ಕೇಸು ವಿನ್ ಆಗುವುದಿಲ್ಲ, ನಿನ್ನ ರೋಗ ವಾಸಿ ಆಗುವುದಿಲ್ಲ, ಯಾರೂ ಪ್ರಾರ್ಥನೆ ಮಾಡಿದರೂ ಏನೂ ಆಗುವುದಿಲ್ಲ, ನಿನ್ನ ಸಾಲ ತೀರುವುದಿಲ್ಲ ಅಂತ ಹೇಳಿ ಸೈತಾನ ಒಂದು ಹೆಜ್ಜೆ ಮುಂದೆ ಬಂದು ನಿಮ್ಮೊಳಗೆ ಭಯವನ್ನು ತುಂಬಿಸಿ, ತುಂಬಿಸಿ ಕೊನೆಗೆ ನಿಮ್ಮನ್ನು ಆತ್ಮಹತ್ಯೆ ಮಾಡುವ ಕಡೆಗೆ ಕರಕೊಂಡು ಹೋಗಿ ಬಿಡ್ತಾನೆ. ಭಯಪಡತಕ್ಕಂತಹ ಒಬ್ಬ ವ್ಯಕ್ತಿ ನೇರವಾಗಿ ಆತ್ಮಹತ್ಯೆ ಮಾಡಿಕೊಳ್ತಾನೆ. ಅಮ್ಮ ಇವತ್ತು ರಾತ್ರಿ ನಿಮಗೆ ಹೇಳೋಕೆ ಇಷ್ಟಪಡುತೇನೆ. ಜೊತೆಯಲ್ಲಿರುವ ನಿಮ್ಮ ಗಂಡ ಬಿಟ್ಟುಹೋಗಿರಬಹುದು, ನಿನ್ನ ಮದುವೆ ಮಾಡಿಕೊಂಡ ಹೆಂಡತಿ ಕೈಬಿಟ್ಟು ಹೋಗಿರಬಹುದು, ನೀನು ಕಷ್ಟಪಟ್ಟು ಗಳಿಸಿದ ಹಣ ತಿಂದು ನಿನ್ನ ಮಕ್ಕಳು ಸಾಲ ತೀರಿಸಲಾಗದೆ ನಿನ್ನನ್ನು ಹೊರಗಡೆ ಹಾಕಿರಬಹುದು, ನಿಮಗೆ ಯಾವ ಆಶ್ರಯ ಇಲ್ಲದಿರಬಹುದು, ಮತ್ತು ಎಲ್ಲರಿಂದ ಕೈಬಿಡಲ್ಪಟ್ಟಿರಬಹುದು, ಆದರೆ ನಿನ್ನ ದೇವರು ಹೇಳ್ತಾನೆ ಭಯ ಪಡಬೇಡ. ಯಾಕೆ ಭಯ ಪಡಬೇಡ, ಭಯಪಟ್ಟರೆ ಸತ್ತೋಗಿಬಿಡ್ತೀಯಾ, ಆತ್ಮಹತ್ಯೆ ಮಾಡಿಕೊಳ್ತೀಯ, ಭಯಪಡದೇ ಇರು ನಾನು ನಿನಗೋಸ್ಕರ ಒಂದು ದೊಡ್ಡ ಕಾರ್ಯವನ್ನು ಮಾಡುತ್ತೇನೆ ಅಂತ ದೇವರು ಹೇಳುತ್ತಾನೆ.

ಕಳೆದ ತಿಂಗಳು ಒಬ್ಬ ಸಿಸ್ಟರ್ ಎದ್ದ ತಕ್ಷಣ ಫೋನು ಮಾಡಿದ್ಲು ಒಳ್ಳೆ ಸಿಸ್ಟರ್ ಮದುವೆ ಆಗಿದೆ, ಎರಡು ಮಕ್ಕಳಿದ್ದಾರೆ, ಗಂಡ ಒಬ್ಬ ಒಳ್ಳೆ ಸಾಫ್ಟ್‌ವೇರ್ ಇಂಜಿನಿಯರ್, ಹತ್ರತ್ರಾ ಒಂದು ಲಕ್ಷ ಸ್ಯಾಲರಿ ಬರುತ್ತದೆ. ಗಂಡ ಹೆಂಡತಿ ಇಬ್ಬರೂ ಸಹ ಗಂಡ ಕೆಲಸ ಮುಗಿಸಿಕೊಂಡು ಬಂದ ತಕ್ಷಣ ಇಬ್ಬರು ಸೇವೆಗೆ ಹೋಗುತ್ತಾರೆ. ಸೇವಕರಿಗೆ ಚೆನ್ನಾಗಿ ಕಾಣಿಕೆ ಕೊಡುತ್ತಾರೆ. ಸೇವಕರಿಗೆ ಸೇವೆ ಮಾಡುತಾರೆ, ಯಾರೆ ಸೇವಕರು ಬೆಂಗಳೂರು ಪಟ್ಟಣಕ್ಕೆ ಬಂದರೂ ಅವರ ಮನೆಯಲ್ಲಿ ಸ್ಟೇ ಮಾಡಬೇಕು, ಅಷ್ಟು ದೊಡ್ಡ ಮನೆ ಕಟ್ಟಿದ್ದಾರೆ, ಸೇವಕರು ಬಂದು ಮನೆಯಲ್ಲಿ ಉಳುಕೊಂಡು ಊಟ ಮಾಡಿಕೊಂಡು ಹೋಗಬೇಕೆಂದು ಅವರ ಆಸೆ. ಬೆಂಗಳೂರಿಗೆ ಯಾರೇ ಸೇವಕರು ಬಂದರೂ ಅವರ ಮನೆಗೆ ಹೋಗಿ ಉಳುಕೊಳ್ತಾರೆ. ಸೇವೆಗೆ ಅಷ್ಟು ಸಹಾಯ ಮಾಡುವಂತಹ ಸಿಸ್ಟರ್ ಸಡನ್ನಾಗಿ ಅಣ್ಣಾ ನನಗೋಸ್ಕರ ಪ್ರಾರ್ಥನೆ ಮಾಡು ನಾನು ಕೇಳಿದೆ ಏನಾಯ್ತು ಅಮ್ಮಾ ಏನಾಯ್ತು ಆಕೆ ಹೇಳಿದಳು, ಅಣ್ಣಾ ತುಂಬಾ ದಿನದಿಂದ ಸುಸ್ತು ಆಗ್ತಾಯಿತ್ತು. ಆ ಟ್ಯಾಬ್ಲೆಟ್, ಈ ಇಂಜಕ್ಷನ್ ತೊಗೊಂಡೆ, ಸುಸ್ತು ಕಡಿಮೆ ಆಗ್ಲಿಲ್ಲ, ಕೊನೆಗೆ ಏನೋ ಆಗಿರಬೇಕು ಅಂತ ಹೇಳಿ ಡಾಕ್ಟರ್ ಬಳಿಗೆ ಹೋದಾಗ ಡಾಕ್ಟರ್ ಒಂದು ಶಾಕಿಂಗ್ ನಿವ್ಸ್ ಹೇಳಿದರು, ನನಗೆ ಕ್ಯಾನ್ಸರ್ ಇದೆ ಅಂತ ಹೇಳಿದ್ರು ಅಣ್ಣ, ಆ ಕ್ಯಾನ್ಸರ್ ಇದೆ ಅಂತ ಹೇಳಿದ ತಕ್ಷಣ ನಾನು ಕುಗ್ಗಿ ಹೋಗಿ ತಾಳ್ಮೆ ನನ್ನಲ್ಲಿ ಬಲಸೇ ಇಲ್ಲದಂಗೆ ಆಗಿಬಿಟ್ಟಿದೆಯಣ್ಣ, ಅಣ್ಣಾ ನಾನು ಏನು ತಪ್ಪು ಮಾಡಿದೆ, ನಾನು

ಎಷ್ಟೋ ಕಾಣಿಕೆಯನ್ನು ಕೊಟ್ಟಿದೀನಿ, ಎಷ್ಟೋ ಚರ್ಚ್‌ಗಳನ್ನು ಕಟ್ಟಿದೀನಿ, ಸೇವೆಗೆ ಸಹಾಯ ಮಾಡಿದೀನಿ, ಯಾವುದೇ ಸೇವಕರು ಬಂದರು ನನ್ನ ಮನೆಯಲ್ಲಿ ಹಾಲ್ಟ್ ಮಾಡಲಿಕ್ಕೆ ಅವಕಾಶ ಮಾಡಿದಿನಿ, ಅವರಿಗೆ ಸನ್ಮಾನ ಮಾಡಿದಿನಿ, ಯಾಕೆ ನನಗೆ ದೇವರು ನನ್ನನ್ನು ಬಿಟ್ಟಿದ್ದಾರೆ, ಯಾಕೆ ಕ್ಯಾನ್ಸರ್ ಬಂದಿದೆ ಇದರ ನಿಮಿತ್ತ ಎಷ್ಟೇ ಧೈರ್ಯ ತಗೊಂಡರೂ ಆಗುತ್ತಾಇಲ್ಲ, ಭಯ ನನ್ನನ್ನು ಕಾಡುತಾಇದೆ. ಯಾಕೆಂದರೆ ನನ್ನ ಮಕ್ಕಳು ಚಿಕ್ಕವರು, ನನ್ನ ಗಂಡ ನನ್ನ ಮೇಲೆ ಪ್ರಾಣ ಇಟ್ಟುಕೊಂಡಿದಾನೆ, ಇದು ಒಂದು ವೇಳೆ ಗೊತ್ತಾದರೆ ಎದೆ ಒಡಕೊಂಡು ಸಾಯುತಾರೆ, ಅಣ್ಣಾ ಅದಕ್ಕೆ ನಾನು ಹೇಳಿದೆ ಇನ್ನು ಅದು ಫಸ್ಟ್ ಸ್ಟೇಜ್ ಇದೆ ಅಮ್ಮಾ ಆರಾಮಾಗ್ತಾದೆ ಅಂದರೂ ಸೈತಾನನು ಆಕೆಯನ್ನು ಅಂಜಿಸುತ್ತದೆ. ಅದಕ್ಕೆ ಆಕೆ ನಂಬುತಾ ಇಲ್ಲ. ಕಾರಣ ಭಯಪಡಬೇಡ, ನಿಮ್ಮ ಅಪ್ಪ, ಅಮ್ಮ, ನಿಮ್ಮ ಬಾಸ್, ಗೆಳೆಯ, ಗೆಳತಿ ಕೈಬಿಟ್ಟಿರಬಹುದು, ಅದರಲ್ಲಿ ಅಂಜದಿರು, ದೇವರು ಇನ್ನೊಂದು ಹೊಸ ಜೀವನವನ್ನು ಕೊಡಲಿಕ್ಕಿದ್ದಾನೆ, ಹಳ್ಳಿ ಜನ ನನ್ನನ್ನು ಹೆಸರಿಡಿದು ಕರೆಯಲಿಲ್ಲ, ಆದರೆ ಯೇಸು ಇಡೀ ಕರ್ನಾಟಕ ರಾಜ್ಯವೇ ಹೆಸರಿಡಿದು ಕರೆಯುವಂತೆ ಮಾಡಿದ್ದಾನೆ. ಅದು ಆತನ ಕೃಪೆ, ಕೆಪ್ಯಾಸಿಟಿ ಎಂದು ಬ್ರದರ್ ನವೀನ್ ಜೋಸೆಫ್ ಕ್ರಿಸ್ತನ ದೈವ ಸಂದೇಶವನ್ನು ಬಹಿರಂಗ ಸಭೆಯಲ್ಲಿ ಆಶೀರ್ವಾದ ಕೂಟಗಳು ಎನ್ನುವ ವೇದಿಕೆಯಿಂದ ಮನನ ಮಾಡಿದರು. ಈ ಸಂದೇಶದಲ್ಲಿ ಬಳಕೆಯಾದ ಕನ್ನಡ ಭಾಷೆಯನ್ನು ಬಹಿರಂಗವಾಗಿ ಕ್ರೈಸ್ತ ಧರ್ಮದ ವಿಚಾರವಾಗಿ ಸೇವಕರು ಅಥವಾ ಅಭಿಷಿಕ್ತರು ಯೇಸುಕ್ರಿಸ್ತನ ಪ್ರೀತಿಯನ್ನು ಸರ್ವರಿಗೂ ಹೇಳುವಂತಹ ಬಹಿರಂಗ ಸಭೆಗಳಲ್ಲಿ ಕ್ರೈಸ್ತ ಧರ್ಮದ ವಿಚಾರಗಳು ಕನ್ನಡ ನುಡಿಯಲ್ಲಿ ಹೇಗೆ ಹೊರ ಬರುತ್ತವೆ, ಭಾಷೆಯ ಬಳಕೆ ಹೇಗಾಗಿದೆ ಎಂಬುದನ್ನು ಈ ರೀತಿಯಾಗಿ ವರ್ಗೀಕರಿಸಿ ಹೇಳಲಾಗಿದೆ.

ವಾಗ್ದಾನಗಳು	ಇಂಗ್ಲಿಷ್ ಪದಗಳು	ನಿಷೇದ ರೂಪಗಳು
ಭಯ ಪಡಬೇಡ	ಮೇಬೀ	ಕೇಳಲಿಲ್ಲ
ನಾನು ನಿನ್ನನ್ನು ವಿಮೋಚಿಸಿದೆನಲ್ಲ	ಅಟ್‌ಲಿಸ್ಟ್	ಮಾಡಲಿಲ್ಲ
ನಿನ್ನ ಹೆಸರಿಡಿದು ಕರೆದೆನಲ್ಲ	ಫೈನಲ್	ಕಿವಿಗೊಡಲಿಲ್ಲ
ನೀನು ನನ್ನವನೇ	ಅಕ್ಚುವಲಿ	ಚಾಚಲಿಲ್ಲ
	ಸ್ಟೇ	ಬರುವುದಿಲ್ಲ
	ಸಿಸ್ಟರ್	ಗುಣವಾಗೋದಿಲ್ಲ
	ಇಂಜಕ್ಷನ್	ವಾಸಿಯಾಗೋದಿಲ್ಲ
	ಕೆಪಾಸಿಟಿ	ಕೇಸ್ ವಿನ್ನಾಗೋದಿಲ್ಲ
		ಸಾಲ ತೀರೋದಿಲ್ಲ

ಆಡು ಭಾಷೆ	**ಕನ್ನಡ ಭಾಷೆ**
ಹೇಳ್ಲಿ	ಹೇಳಲಿ
ಹೇಳಿದ್ರು	ಹೇಳಿದರು
ಹೇಳ್ದಿ	ಹೇಳಿದನು
ಓತ್ತೇನೆ	ಓದುತ್ತೇನೆ
ಮಾಡಲಿಕ್ಕೋಸ್ಕರ	ಮಾಡುವುದಕ್ಕೋಸ್ಕರ
ಹೇಳ್ತಾ	ಹೇಳುತ್ತಾ
ಹೋಗ್ತಾ	ಹೋಗುತ್ತಾ
ಕೇಳ್ರಿ	ಕೇಳಿರಿ
ಸಾಯಲ್ಲ	ಸಾಯುವುದಿಲ್ಲ
ಬಿಡುತ್ತೆ	ಬಿಡುವುದು
ಇಲ್ಲದಂಗೆ	ಇಲ್ಲದಂತೆ
ಕೊಡಲಿಕ್ಕಿದ್ದಾನೆ	ಕೊಡುತ್ತಾನೆ

೩.೪. ಪ್ರಚಾರ ಸಾಹಿತ್ಯ

ಕನ್ನಡ ಸಾಹಿತ್ಯದಲ್ಲಿ ಗದ್ಯ ಪದ್ಯ ಎಂದು ವಿಭಾಗಿಸಿ ಅಧ್ಯಯನ ಮಾಡುತ್ತೇವೆ. ಗದ್ಯ ರೂಪವಿದ್ದರೆ ಗದ್ಯ ಸಾಹಿತ್ಯ, ಪದ್ಯ ರೂಪವಿದ್ದರೆ ಪದ್ಯ ಸಾಹಿತ್ಯ ಎಂದು ಅಭ್ಯಾಸ ಮಾಡುತ್ತೇವೆ. ಇಲ್ಲಿ ಈ ಎರಡೂ ರೂಪಗಳಿಗೆ ಹೊರತುಪಡಿಸಿ ಒಂದು ಹೊಸ ರೂಪ ಅಂದರೆ ಕನ್ನಡ ಎರಡು ಪದಗಳಾದ ಪ್ರಚಾರ ಮತ್ತು ಸಾಹಿತ್ಯ ಪದಗಳನ್ನು ಕೂಡಿಸಿ ಪ್ರಚಾರ ಸಾಹಿತ್ಯ ಎನ್ನಬಹುದಾಗಿದೆ. ಆದರೆ ಇಲ್ಲಿ ಅಷ್ಟಕ್ಕೇ ನಿಲ್ಲದೆ ಪ್ರಚಾರ ಎಂದರೆ ಒಂದು ವಿಷಯ, ವ್ಯಕ್ತಿ, ವಸ್ತು ಬಗ್ಗೆ ಮನವರಿಕೆ ಮತ್ತು ಪ್ರೇರಣೆ ನೀಡುವಂತಹದ್ದಾಗಿದೆ. ಪ್ರಸ್ತುತ ಇಲ್ಲಿ ಕ್ರೈಸ್ತರ ವಿಚಾರ ಮತ್ತು ಕ್ರಿಸ್ತನ ಪ್ರೀತಿಯನ್ನು ತಿಳಿಸುವಂತಹದ್ದಾಗಿದೆ. ಕ್ರೈಸ್ತ ಸಮುದಾಯ ಹೆಚ್ಚಾಗಿ ಉಪದೇಶ, ಧರ್ಮೋಪದೇಶ, ವಾಕ್ಯೋಪದೇಶ ಎಂಬಂತಹ ಅಂಶಗಳನ್ನು ಹೊಂದಿದೆ. ಇದನ್ನು ಆತ್ಮೀಕ ಆಹಾರ ಎಂತಲೂ ಕರೆಯುತ್ತಾರೆ. ಭಕ್ತರು ದೇವರ ಬಗ್ಗೆ ಇಟ್ಟುಕೊಂಡಿರುವ ನಂಬಿಕೆಯನ್ನು ಯಾವತ್ತೂ ಕಳೆಯಬಾರದು, ಇನ್ನು ಹೆಚ್ಚಳವಾಗಬೇಕು ಎಂಬ ಉದ್ದೇಶದಿಂದ ಹಲವಾರು ಸಂಘ ಸಂಸ್ಥೆಗಳಲ್ಲಿ ಕ್ರೈಸ್ತ ಪಂಗಡಗಳು ಬಹಿರಂಗ ಸುವಾರ್ತ ಕೂಟಗಳನ್ನು ಹಮ್ಮಿಕೊಳ್ಳುತ್ತವೆ. ಅದನ್ನು ತಿಳಿಸುವ ನಿಮಿತ್ತವಾಗಿ ಕರಪತ್ರಗಳನ್ನು ಮುದ್ರಿಸಿ ಹಂಚಿಕೆ ಮಾಡುತ್ತಾರೆ. ಅಲ್ಲದೆ ಚರ್ಚುಗಳ ಮುಂಭಾಗದಲ್ಲಿ ಒಳಗಡೆ ಗೋಡೆಗಳಿಗೆ ಬೈಬಲಿನ ವಾಕ್ಯೋಪದೇಶಗಳನ್ನು ಬರೆಯಿಸುತ್ತಾರೆ. ಚರ್ಚುಗಳ ಮಾಹಿತಿಗಾಗಿ (ವಿಳಾಸ) ಸರ್ಕಲ್ಲುಗಳಲ್ಲಿ

ಶಿರೋನಾಮೆ ಪಲ್ಲಕ್ಕಿಗಳನ್ನು ನೆಟ್ಟಿರುತ್ತಾರೆ. ಅಲ್ಲದೆ ಅಲ್ಲಲ್ಲಿ ಕಾರ್ಯಕ್ರಮದ ನಿಮಿತ್ತವಾಗಿ ಮತ್ತು ಯೇಸುಕ್ರಿಸ್ತ ನೀವು ಲೋಕದ ಕಟ್ಟಕಡೆಯವರೆಗೆ ಸುವಾರ್ತೆ ಸಾರಿರಿ ಎಂದು ಹೇಳಿದುದರ ನಿಮಿತ್ತದಿಂದ ದೊಡ್ಡ ದೊಡ್ಡ ಫ್ಲೆಕ್ಸ್‌ಗಳನ್ನು ಸಹ ಸಾಮಾನ್ಯವಾಗಿ ಹಾಕುತ್ತಾರೆ. ಇವೆಲ್ಲವೂ ಸಹಿತ ಪ್ರಚಾರ ಅಥವಾ ಪ್ರಸಾರಕ್ಕಾಗಿ ಮಾಡುವಂತಹ ಸಾಧನೆಗಳೆಂದು ಹೇಳಬಹುದಾಗಿದೆ. ಈ ಅಧ್ಯಯನದಲ್ಲಿ ಕರಪತ್ರ ಮತ್ತು ಗೋಡೆ ಬರಹಗಳನ್ನು ಈ ರೀತಿಯಾಗಿ ವಿವರಿಸಲಾಗಿದೆ.

೩.೪.೧. ಕ್ರೈಸ್ತ ಕರಪತ್ರ ಬರಹ

ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಪ್ರಮುಖವಾಗಿ ಬೈಬಲ್ ಮುಖ್ಯ ಗ್ರಂಥವಾಗಿ ಬರುತ್ತದೆ. ಅದರ ಜೊತೆ ಜೊತೆಗೆ ಪೂರಕವಾಗಿ ಇನ್ನು ಹೊಸ ಹೊಸ ಧಾರ್ಮಿಕ ಗ್ರಂಥಗಳು ರಚನೆಯಾಗಿವೆ. ಹಾಗೆಯೇ ಧರ್ಮ ಉಪದೇಶದ ಬಗ್ಗೆ ಮುಂಚಿತವಾಗಿಯೇ ತಿಳಿಸುವಂತಹ ಕಾರ್ಯಕ್ಕಾಗಿ ಚಿಕ್ಕ ಚಿಕ್ಕ ಕರಪತ್ರಗಳನ್ನು ಮುದ್ರಿಸುತ್ತಾರೆ. ಆ ಕರಪತ್ರಗಳು ಸಹಿತ ಧಾರ್ಮಿಕ ವ್ಯವಸ್ಥೆಯಲ್ಲಿ ಒಂದು ಕಾರ್ಯವಾಗಿ ನಿಲ್ಲುತ್ತವೆ. ಆದ್ದರಿಂದ ಕ್ರೈಸ್ತ ಕರಪತ್ರಗಳು ಕ್ರೈಸ್ತ ಧರ್ಮೋಪದೇಶದ ಸಂಗತಿಯನ್ನು ಪ್ರಚಾರ ಮಾಡಿಸುವುದಕ್ಕೋಸ್ಕರ ಮುದ್ರಣಗೊಳ್ಳುತ್ತವೆ. ಇವುಗಳು ಕ್ರೈಸ್ತ ಧಾರ್ಮಿಕ ಸಾಹಿತ್ಯದ ಭಾಗವಾಗಿ ಬರುತ್ತವೆ ಎಂದು ಹೇಳಬಹುದು. ಅಂತಹ ಕ್ರೈಸ್ತ ಕರಪತ್ರಗಳು ಈರೀತಿಯಲ್ಲಿವೆ.

ಕರಪತ್ರ	ಪ್ರಸಾರಕರು
ಜೀವಿತ ನಿತ್ಯತ್ವಕ್ಕೆ	ಬೈಬಲ್ ಸೊಸೈಟಿ ಆಫ್ ಇಂಡಿಯಾ
ಭಯ ಪಡಬೇಡ	ಬೈಬಲ್ ಸೊಸೈಟಿ ಆಫ್ ಇಂಡಿಯಾ
ಅಪ್ಪಾ ನೀ ಎಲ್ಲಿದ್ದೀ?	ಬೈಬಲ್ ಸೊಸೈಟಿ ಆಫ್ ಇಂಡಿಯಾ
ನಿಮ್ಮ ಆತಂಕದಿಂದ ಹೊರಬರಲು ಮಾರ್ಗ	ಬೈಬಲ್ ಸೊಸೈಟಿ ಆಫ್ ಇಂಡಿಯಾ
ಜೀವನ ಯಾತ್ರೆಗೆ ಆಹಾರ ೨೦೧೮	
(ಅನುದಿನದ ದೇವರ ವಾಕ್ಯದ ವಾಚನ)	ಬೈಬಲ್ ಸೊಸೈಟಿ ಆಫ್ ಇಂಡಿಯಾ
ಯೇಸುವಿನ ಸ್ತುತಿ ಆಲಯ-ಕ್ರೈಸ್ತ	
ವಿಶ್ವಾಸಿಗಳ ಅರಿಕೆ	ರೆ.ಅನಿಲ್‌ಗೌಡ
ಮಹಿಮೆ ಸುವಾರ್ತ ಸಭೆಗಳು	ಬೈಬಿಲು ಮಿಷನ್ ಗುತ್ತಿ
ವಿಜಯ ಮಹೋತ್ಸವ	ಪಾದ್ರಿ ಜಾನ್ಸನ್
ಸಮಾಜದೊಂದಿಗೆ ಕ್ರಿಸ್‌ಮಸ್	ಎ.ಜಿ. ಚರ್ಚ್ ಮಾನ್ವಿ
ಮೆಥೋಡಿಸ್ಟ್ ಕ್ರೈಸ್ತ ಶಿಲುಬೆ ಜಾತ್ರೆ	
ಗಿಲ್ಲೇಸುಗುರು	ರಾಯಚೂರು

ಸಂಚಲನಾತ್ಮಕ ಕ್ರಿಸ್ತನ ವಿಜ್ಞಾನ ದೂರದರ್ಶನ ಪ್ರಸಾರಣೆಗಳು	ಜಯಶಾಲಿ ಪಿ. ಸುಂದರರಾವ್
ಶಾಂತಿ ಪ್ರಾರ್ಥನಾ ಕೂಟಗಳು	ಹುಸೇನಗರ ಕ್ಯಾಂಪ್ ಕಲ್ಲೂರು (ರಾಯಚೂರು)
ದೇವರು ಇದ್ದಾನೆ ಎಚ್ಚರಿಕೆ?	ಬ್ರದರ್ ಕೆ. ಉಪೇಂದ್ರ ರಾಯಲಸೀಮ
ಬೈಬಲ್ ಹೇಳುವ ಪ್ರಪಂಚ ಭವಿಷತ್	ಪಿ.ಡಿ. ಸುಂದರರಾವ್
ಕ್ರಿಸ್ತನ ರಾಜ್ಯದ ಸುವಾರ್ತೆ ಮಹೋತ್ಸವಗಳು	ವಿಜಯವರ್ಮರಾಜ್ ಹೈದ್ರಾಬಾದ್
ಯೇಸುಕ್ರಿಸ್ತನ ಶ್ರಮೆ ಮರಣ ಪುನರುತ್ಥಾನ ಧ್ಯಾನಗಳು	ಮೆಥೋಡಿಸ್ಟ್ ಚರ್ಚ್, ಗಬ್ಬೂರು

ದಕ್ಷಿಣ ಭಾರತ ಮತ್ತು ಹೈದ್ರಾಬಾದ್ ಪ್ರಾಂತಿಯ ಮಹಾಸಭೆಗಳ ಆಶ್ರಯದಲ್ಲಿ ಮೆಥೋಡಿಸ್ಟ್ ಕ್ರೈಸ್ತ ವಾರ್ಷಿಕ ಧಾರೂರು ಜಾತ್ರಾ ಮಹೋತ್ಸವ – ದಾರೂರು ಜಾತ್ರಾ ಸಮಿತಿ

ಹೀಗೆ ಕ್ರೈಸ್ತ ವಿಚಾರಗಳನ್ನು, ಸಂದೇಶಗಳನ್ನು, ಉಪದೇಶಗಳನ್ನು ಮುಂತಿಳಿಸುವ ಕರಪತ್ರಗಳನ್ನು ಗುರುತಿಸಿ ಈ ಕರಪತ್ರಗಳಲ್ಲಿ ಕ್ರೈಸ್ತತ್ವದ ಕೆಲವು ಪಾರಿಭಾಷಿಕ ಪದಗಳನ್ನು ಈರೀತಿಯಾಗಿ ವರ್ಗೀಕರಿಸಲಾಗಿದೆ.

ಕ್ರೈಸ್ತ ಪರಿಭಾಷೆ	**ಕನ್ನಡ**
ಕ್ರೇಸ್ತು	ಕ್ರಿಸ್ತನು
ಸುವಾರ್ತ	ಸುವಾರ್ತೆ
ಬೈಬೀಲು	ಬೈಬಲ್
ಕ್ರೈಸ್ಟ್	ಕ್ರೈಸ್ತ
ಹೊಸನ್ನಾ	ಹೊಸನ್ನ
ಅಬ್ರಹಾಂ	ಅಬ್ರಹಾಮ
ಕಲ್ವಾರಿ ಡಿವೈನ್	ಕಲ್ವರಿ
ಸತ್ಯವೇದಿಕೆ ಸಮಾಜ	ಸತ್ಯವೇದ
ಕ್ರಿಸ್ತನ ಬರೋಣ	ಬರುವಿಕೆ
ಮೆಸ್ಸೀಯ ಅಸೆಂಬ್ಲಿ	ದೇವರ ಸಭೆ
ದೈವಿಕ ಸ್ವಸ್ಥತೆ	ದೇವರ ಆಶೀರ್ವಾದ
ಭಸ್ಮ ಬುಧವಾರ	ಬೂದಿ ಬುಧವಾರ

೩.೪.೨. ಕ್ರೈಸ್ತ ಗೋಡೆ ಬರಹ

ಸಾಮಾನ್ಯವಾಗಿ ಗೋಡೆ ಬರಹಗಳು ಎಂದರೆ ಹೊರಗಡೆ ಸಾರ್ವಜನಿಕ ಸ್ಥಳಗಳಲ್ಲಿ ಬಸ್‌ಸ್ಟ್ಯಾಂಡ್, ಶಾಲೆ, ಕಾಲೇಜು, ಕಂಪೌಂಡ್‌ಗಳಲ್ಲಿ ಪ್ರಸಾರಕ್ಕಾಗಿ ಬರೆಯುವ ಹಾಗೂ ಚಿತ್ರಿಸುವ ಬರಹಗಳಿಗೆ ಗೋಡೆ ಬರಹ ಎನ್ನುವರು. ಅದರಂತೆಯೇ ನಮ್ಮ ದೇಶದ ಸರ್ವ ಸಮುದಾಯಗಳಲ್ಲಿ ಕ್ರೈಸ್ತ ಸಮುದಾಯ ಸತ್ಯವೇದದಲ್ಲಿರುವ ಭಕ್ತಿಯ ವಿಚಾರಗಳನ್ನು, ಶ್ಲೋಕಗಳನ್ನು, ಯೇಸುವಿನ ವಾಗ್ದಾನಗಳನ್ನು, ಕ್ರಿಸ್ತನ ಪ್ರೀತಿಯನ್ನು ಚರ್ಚಿಗಳ ಗೋಡೆಗಳಲ್ಲಿ ಬರೆಯುತ್ತಾರೆ. ಅಂತಹ ಬರವಣಿಗೆಗೆ ಗೋಡೆ ಬರಹ ಎಂದು ಕರೆಯುತ್ತಾರೆ. ಹಾಗೆಯೇ ಕ್ರೈಸ್ತ ಧಾರ್ಮಿಕ ವ್ಯವಸ್ಥೆಯಲ್ಲಿ ಕರಪತ್ರಗಳ ಜೊತೆಗೆ ಕ್ರಿಸ್ತನ ಚರ್ಚುಗಳು ಮತ್ತು ಅವುಗಳ ವಿಳಾಸವನ್ನು ತಿಳಿಸುವ ನಿಮಿತ್ತ ಚರ್ಚುಗಳಿಗೆ ಅಂತರದಲ್ಲಿದ್ದುಕೊಂಡೇ ಆಯಾ ಚರ್ಚುಗಳ ನಾಮ ವಿಳಾಸವನ್ನು ಹೇಳುವ ನಾಮ ಫಲಕಗಳನ್ನು ಗಮನಿಸಬಹುದು. ಇವೆಲ್ಲವು ಒಟ್ಟಾರೆಯಾಗಿ ಧಾರ್ಮಿಕ ಸಾಹಿತ್ಯದಲ್ಲಿ ಬರುವ ಅಂಶಗಳಾಗಿವೆ.

ಅದರಂತೆಯೇ ಕ್ರೈಸ್ತ ಗೋಡೆ ಬರಹಗಳನ್ನು ಈ ರೀತಿ ಉಲ್ಲೇಖಿಸಿ ಪಟ್ಟಿ ಮಾಡಲಾಗಿದೆ.

* ಯೇಸು.... ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣ ಮಾಡುತ್ತಾನೆ. (೧ನೇ ಯೋಹಾನ ೨:೨)

* ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು. (ಮತ್ತಾಯ ೭:೨)

* ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು. ೭ನೇ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ. (ವಿಮೋಚನ ಕಾಂಡ ೨೦: ೯–೧೦)

* ಮರಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳು ಉರಿಯುವ ಕೆರೆಯಲ್ಲಿ ದಬ್ಬಲ್ಪಟ್ಟನು. (ಪ್ರಕಟಣೆ ೨೦:೧೦)

* ಅವರು ತಮ್ಮ ತಮ್ಮ ಪಾಪಗಳನ್ನು ಹೇಳಿಕೊಂಡು ಯೊರ್ದನ ಹೊಳೆಯಲ್ಲಿ ಅವನಿಂದ ದೀಕ್ಷಾ ಸ್ನಾನ ಮಾಡಿಸಿಕೊಳ್ಳುತ್ತಿದ್ದರು (ಮತ್ತಾಯ ೩:೬)

* ಕರ್ತನ ಹೆಸರಿನಲ್ಲಿ ಒಳಗೆ ಬರುವವನಿಗೆ ಆಶೀರ್ವಾದ (ಕೀರ್ತನೆ ೧೧೮:೨೬)

* ತನ್ನ ಹೆಂಡತಿಯನ್ನು ಬಿಟ್ಟು ಬೇರೊಬ್ಬಳನ್ನು ಮದುವೆ ಮಾಡಿಕೊಳ್ಳುವ ಪ್ರತಿಯೊಬ್ಬನು ವ್ಯಭಿಚಾರ ಮಾಡುವವನಾಗಿದ್ದಾನೆ. ಮತ್ತು ಗಂಡ ಬಿಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗಿದ್ದಾನೆ.

* ನಾನು ನಿಮಗೆ ನಿಜ ನಿಜವಾಗಿ ಹೇಳುತ್ತೇನೆ. ನಿಮ್ಮ ದುಃಖ ಹೋಗಿ ಆನಂದವು ಬರುವುದು. (ಯೋಹಾನ ೧೬:೨೦)

* ಈ ಸ್ಥಳವಾದದ್ದು ದೇವರ ಮನೆ. ಇದೇ ಪರಲೋಕದ ಬಾಗಿಲು. (ಆದಿಕಾಂಡ ೨೮:೧೭)

* ಪ್ರಜೆಯೇ ನೀನಂತು ಹೆದರಬೇಡ ನಾನೇ ನಿನ್ನೊಂದಿಗೆ ಇದ್ದೇನೆ, ನಾನೇ ನಿನ್ನ ದೇವರು. (ಯೇಶಾಯ ೪೧)

* ಯೇಸು ನನ್ನನ್ನು ಪ್ರೀತಿಸುತ್ತೀಯಾ? (ಯೋಹಾನ ೨೧:೧೦)

* ಸಮಾಧಾನದಿಂದ ಹೋಗಿರಿ. (ಲೂಕ ೭:೫೦)

* ಯೆಹೋವನು ತನ್ನ ಪರಿಶುದ್ಧ ಮಂದಿರದಲ್ಲಿ ಇದ್ದಾನೆ. (ಹಬಕ್ಕೂಕ ೨:೨೦)

* ಪ್ರಾರ್ಥಿಸಿರಿ, ತ್ವರೆಪಡೆರಿ (ಅಪೋಸ್ತಲರ ಕೃತ್ಯಗಳು ೧೩:೩)

* ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು. (ಅಪೋಸ್ತಲರ ಕೃತ್ಯಗಳು ೧:೮)

* ನಮ್ಮ ದೇವರ ಆಲಯವನ್ನು ಎಂದೂ ಅಲಕ್ಷ್ಯ ಮಾಡುವುದಿಲ್ಲ ಎಂದು ಬರೆದು ಕೊಟ್ಟರು. (ನೆಹೆಮಿಯ ೧೦:೩೮)

* ಯೆಹೋವನ ಮಂದಿರಕ್ಕೆ ಹೋಗೋಣ ಬಾ ಎಂದು ಜನರು ನನ್ನನ್ನು ಕರೆದಾಗ ನನಗೆ ಸಂತೋಷವಾಯಿತು. (ಕೀರ್ತನೆ ೧೨೨:೧)

* ಅವರು ಅಪೋಸ್ತಲರ ಬೋಧನೆಯಲ್ಲಿಯೂ, ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವುದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು. (ಅಪೋಸ್ತಲ ಕೃತ್ಯಗಳು ೨:೪೨)

* ನನ್ನ ಆಲಯವು ಆಹಾರ ಶೂನ್ಯವಾಗದಂತೆ ನೀವು ದಶಮಾಂಶ ಯಾವತ್ತನ್ನೂ ಭಂಡಾರಕ್ಕೆ ತೆಗೆದುಕೊಂಡು ಬನ್ನಿರಿ. (ಮಲಾಕಿ ೩:೧೦)

* ಆ ಸಭೆಗಳವರು ಬಹಳ ಹಿಂಸೆ ತಾಳುವವರಾದರೂ ಮತ್ತು ವಿಪರೀತವಾದ ಬಡತನದಲ್ಲಿದ್ದರೂ ಬಹು ಆನಂದದಿಂದ ತುಂಬಿದವರಾಗಿ ಅತ್ಯಂತ ಔದಾರ್ಯವುಳ್ಳವರಾದರು. (೨ನೇ ಕೋರಿಂಥ ೮:೨)

* ನೀವು ಯಾವ ಕೆಲಸವನ್ನು ಮಾಡಿದರು ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ. (ಕೊಲೆಸ್ಸೆಯವರಿಗೆ ೩:೨೩)

ಹೀಗೆ ಹಲವು ಗೋಡೆಬರಹಗಳನ್ನಾಗಿ ಕ್ರೈಸ್ತ ಬೈಬಲ್‌ನಲ್ಲಿ ಉಲ್ಲೇಖವಿರುವ ದೈವ ವಾಕ್ಯಗಳನ್ನು ಆಯ್ದುಕೊಂಡು ಬರೆಯಲಾಗಿದೆ. ಈ ಗೋಡೆಬರಹಗಳಲ್ಲಿ ಹೆಚ್ಚಾಗಿ 'ತಂದೆ, ಮಗ, ಪರಿಶುದ್ಧಾತ್ಮ' ತಂದೆ ಎಂದರೆ ಯಹೋವ, ಮಗ ಎಂದರೆ ಯೇಸುಕ್ರಿಸ್ತ, ಪರಿಶುದ್ಧಾತ್ಮ ಎಂದರೆ ಆತ್ಮಸ್ವರೂಪ ಎಂಬ ತ್ರೈಯೇಕ ಮಂತ್ರವನ್ನು ಪಟಿಸುತ್ತಾರೆ. ಯಹೋವ ಎಂದರೆ ಯೇಸುವಿನ ತಂದೆ ರೂಪ

ಆ ತಂದೆಯೇ (ದೇವರು) ಮಗನಾಗಿ ಜನಿಸಿದನು ಎಂದು ಹೇಳುವುದು ನಂತರ ಯೇಸು ಸತ್ತು ಪುನಃ ಮೃತ್ಯುಂಜಯನಾಗಿ ಎದ್ದು ೩ನೇ ದಿನ ಆರೋಹಣವಾಗುವನು ಆಗ ಬಿಟ್ಟಿರುವ ಆತ್ಮವೇ ಪರಿಶುದ್ಧಾತ್ಮ. ಪ್ರಸ್ತುತ ಭೂಮಿಯಲ್ಲಿ ಪವಿತ್ರಾತ್ಮ ಕಾರ್ಯನಿರ್ವಹಿಸುತ್ತದೆ ಎಂದು ಧರ್ಮದಲ್ಲಿ ನೋಡುತ್ತೇವೆ.

ಹೀಗೆ ಗೋಡೆಬರಹಗಳಲ್ಲಿ ಯೆಹೋವ, ಯೇಸು ಮತ್ತು ಪವಿತ್ರಾತ್ಮ ಎಂಬ ತ್ರಿತ್ವ ದೇವಾಂಶಗಳನ್ನು ಕುರಿತು ಕಂಡುಕೊಳ್ಳುತ್ತೇವೆ. ಯೇಸು ಈ ಲೋಕದಲ್ಲಿ ಹುಟ್ಟುವುದಕ್ಕಿಂತ ಮುಂಚೆ ಯೆಹೋವ ದೇವರು ಎಂದು ಕರೆಯುತ್ತಿದ್ದರು. ಈ ಯೆಹೋವ ದೇವರ ಬಗ್ಗೆ ಬೈಬಲನ ಹಳೆ ಒಡಂಬಡಿಕೆಯಲ್ಲಿ ಕಾಣಬಹುದು. ಹೊಸ ಒಡಂಬಡಿಕೆಯಲ್ಲಿ ಯೇಸು ಪ್ರಭುವಿನ ಬಗ್ಗೆ ನೋಡಬಹುದು. ಈ ರೀತಿಯಲ್ಲಿ ಬರೆಯಲ್ಪಡುವ ಗೋಡೆಬರಹಗಳಲ್ಲಿ ಮನುಷ್ಯನ ನಂಬಿಕೆ, ಭಕ್ತಿ, ನಿರೀಕ್ಷೆ, ವಿಶ್ವಾಸ, ಪ್ರೀತಿ, ತಾಳ್ಮೆ, ದಯೆ ಎಂಬ ವಿಷಯಗಳ ಮೇಲೆ ಬರವಣಿಗೆಯಾಗುವುದನ್ನು ಗಮನಿಸಬಹುದು. ಅಲ್ಲದೆ ಮನುಷ್ಯ ಪಾಪವನ್ನು ತೊರೆಯಬೇಕು. ದೇವರಲ್ಲಿ ಸಂಪೂರ್ಣ ನಂಬಿಕೆ ಇಡಬೇಕು ಎಂಬುವುದು ಮನಸ್ಸನ್ನು ನಿರ್ಮಲಗೊಳಿಸಬೇಕು. ಲೋಕದ ಮೋಹಕ್ಕೆ ಒಳಗಾಗಬಾರದು ಅನುದಿನ ದೇವರನ್ನು ಧ್ಯಾನಿಸಬೇಕು ಎಂಬುವ ಸತ್ಯ ಸಂಗತಿಗಳನ್ನು ಗೋಡೆಬರಹಗಳಲ್ಲಿ ಕಾಣುತ್ತೇವೆ.

ಗೋಡೆಬರಹಗಳನ್ನು ಬರೆಯುವ ನಿಗದಿತ ಸ್ಥಳಗಳನ್ನು ಗಮನಿಸಿದರೆ ಚರ್ಚನ ಹೆಬ್ಬಾಗಿಲು ಮೇಲೆ, ಒಳಗಡೆ ಅಕ್ಕಪಕ್ಕದ ಗೋಡೆಗಳ ಮೇಲೆ ಹಾಗೆಯೇ ಪ್ರಮುಖವಾಗಿ ಒಳಗಡೆ ಗರ್ಭಗುಡಿಯಂತೆ ಇರುವ ಶಿಲುಬೆಯ ಮೇಲ್ಭಾಗದ ಗೋಡೆಯಮೇಲೆ ಸಾಮಾನ್ಯವಾಗಿ ಬರವಣಿಗೆಗಳನ್ನು ಕಾಣುತ್ತೇವೆ. ಅಲ್ಲದೆ ದೇವಾಲಯದ ತಡೆಗೋಡೆ (ಕಂಪೌಂಡ್)ಯ ಮೆಲೆಯೂ ಸಹಿತ ಕ್ರಿಸ್ತನ ವಾಕ್ಯಗಳನ್ನು ಬರೆದಿರುವುದನ್ನು ಗಮನಿಸಬಹುದು. ಈ ಎಲ್ಲಾ ಗೋಡೆಬರಹಗಳಲ್ಲಿ ಗಮನಿಸಲಾದ ಅಂಶಗಳು (ಭಾಷಿಕ) ಹೀಗಿವೆ.

* **ನಿವಾರಣ:** ಇಲ್ಲಿ 'ನಿವಾರಣೆ'ಯ ಬದಲಿಗೆ ಬೈಬಲ್‌ನಲ್ಲಿ ಹೊಸ ಒಡಂಬಡಿಕೆಯ ೧ನೇ ಯೆಹಾನ ೨:೨ರಲ್ಲಿ 'ನಿವಾರಣ' ಪದ ಬಳಕೆಯಾಗಿದೆ.

* **ವಿಶ್ವಾಂತಿ ದಿನ:** ಸಾಮಾನ್ಯವಾಗಿ ನಾವು ವಿಶ್ರಾಂತಿ ಹಾಗೂ ದಿನ ಎಂಬ ಪದಗಳನ್ನು ತಿಳಿದಿದ್ದೇವೆ. ಕ್ರೈಸ್ತ ಧಾರ್ಮಿಕತೆಯಲ್ಲಿ ಬೈಬಲ್‌ನಲ್ಲಿ ವಿಮೋಚನಕಾಂಡ ೨೦:೯-೧೦ರಲ್ಲಿ ೭ನೇ ದಿನ ಅದು ವಿಶ್ರಾಂತಿ ದಿನ (ಭಾನುವಾರ)ವೆಂದು ಹೇಳಲಾಗುತ್ತದೆ.

ಹೀಗೆ ಹಲವು ಪದಗಳನ್ನು ಈ ರೀತಿಯಾಗಿ ಹೇಳಲಾಗಿದೆ.

* ಬೆಂಕಿ ಗಂಧಕಗಳು ಉರಿಯುವ ಕೆರೆ

* ಯೋರ್ದನ ಹೊಳೆ

* ಕರ್ತನ ಹೆಸರು

* ವ್ಯಭಿಚಾರ ಮಾಡುವವನಾಗಿದ್ದಾನೆ

* ನಿಜ ನಿಜವಾಗಿ ಹೇಳುತ್ತೇನೆ

* ಈ ಸ್ಥಳವಾದದ್ದು ದೇವರ ಮನೆ

* ಪ್ರಜೆಯೇ

* ಪವಿತ್ರಾತ್ಮ

* ಮಂದಿರ

* ಆಲಯ

* ಕೀರ್ತನೆ

* ಸಭೆ

* ಅಪೊಸ್ತಲರು

೩.೫. ಕ್ರೈಸ್ತ ಧಾರ್ಮಿಕ ಸಾಹಿತ್ಯದ ಅನುವಾದ

ಅನುವಾದ ಎಂದರೆ ಅನುಕರಣೆ ಮಾಡುವುದು ಅಥವಾ ಅನುಸರಿಸಿ ಹೇಳುವುದು ಎಂದರ್ಥ, ಇನ್ನೊಂದು ಅರ್ಥದಲ್ಲಿ ಭಾಷಾಂತರ ಎಂದೂ ಸಹ ಕರೆಯುವರು. ಅಲ್ಲದೆ ಫಾರಸಿ ಭಾಷೆಯಲ್ಲಿ 'ತರ್ಜುಮಾ' ಎಂದು ಕರೆಯುತ್ತಾರೆ. ನಮ್ಮ ದೇಶಿಯ ಭಾಷೆಗಳಲ್ಲಿ ರೂಢಿಯಲ್ಲಿರುವ ಇಂತಹ ಶಬ್ದಗಳೊಂದಿಗೆ ನಮ್ಮ ಕನ್ನಡ ನುಡಿಯಲ್ಲಿ 'ಕನ್ನಡಿಸು' ಎನ್ನುವ ಮತ್ತೊಂದು ಶಬ್ದ ಬಳಕೆಯಲ್ಲಿ ಕಂಡುಬರುತ್ತದೆ. ಅಂದರೆ ಕನ್ನಡಕ್ಕೆ ಭಾಷಾಂತರ ಅಥವಾ ಕನ್ನಡಕ್ಕೆ ಅನುವಾದಿಸುವುದು ಎಂಬ ಅರ್ಥವನ್ನು ನೀಡುತ್ತದೆ. 'ಭಾಷಾಂತರ' ಮತ್ತು 'ಅನುವಾದ' ಶಬ್ದಗಳು ಬಹಳ ಹಿಂದಿನಿಂದಲೇ ನಮ್ಮ ಬಳಕೆಯಲ್ಲಿದ್ದರೂ ಪ್ರಸ್ತುತ ದಿನಗಳಲ್ಲಿ ಪದಗಳ ವಿಶ್ಲೇಷಣೆ ಹೆಚ್ಚಾಗಿ ಕಂಡುಬರುತ್ತಿಲ್ಲವಾದರೂ ಈ ಹಿಂದೆ ಪಾಶ್ಚಾತ್ಯ ಸಾಹಿತ್ಯ ಅಥವಾ ಇಂಗ್ಲೀಷ್ ಸಾಹಿತ್ಯದಿಂದ ಭಾಷಾಂತರದ ಪ್ರಕ್ರಿಯೆ ಭರಪೂರವಾಗಿ ಸಾಗಿತ್ತು. ಅಂತಹ ಸಾಹಿತ್ಯದಲ್ಲಿ ವಿಶೇಷವಾಗಿ ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನು ಗಮನಿಸಲಾಗಿದೆ. ಅಂದರೆ ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಅಥವಾ ಅನುವಾದ ಕ್ರಿಯೆಯಲ್ಲಿ ಬಳಕೆಯಾಗಿರುವ ಕನ್ನಡ ಭಾಷೆಯನ್ನು ಗುರ್ತಿಸಲಾಗಿದೆ. ಅನುವಾದಗಳಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹೇಗೆ ಕಂಡುಬರುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಕಾಣಲಾಗಿದೆ.

ಬೈಬಲಿನ ಮೂಲ ರಚನೆಯ ಸ್ವರೂಪ

ಕ್ರೈಸ್ತ ಧರ್ಮದಲ್ಲಿ 'ತ್ರಯಕತ್ವ' ಸಿದ್ಧಾಂತವನ್ನು ಬಹಳ ಗಟ್ಟಿಯಾಗಿ ನಂಬಿದ್ದಾರೆ. ತ್ರೈ ಎಂದರೆ ಮೂರು ವ್ಯಕ್ತಿಗಳೆಂದು ನಂಬುತ್ತಾರೆ. ಒಬ್ಬರು ತಂದೆ ಇನ್ನೊಬ್ಬರು ಮಗ ಮತ್ತೊಬ್ಬ ಪವಿತ್ರಾತ್ಮ ಎಂದು ನಂಬಿಕೊಂಡಿದ್ದಾರೆ. ತಂದೆ ಎಂದರೆ ಯಹೋವ, ಮಗಯೆಂದರೆ ಯೇಸು

ಕ್ರಿಸ್ತ ಮತ್ತು ಪವಿತ್ರಾತ್ಮ ಎಂದರೆ ಪ್ರಸ್ತುತ ನಮ್ಮ ಮಧ್ಯದಲ್ಲಿರುವ ಆತ್ಮ ಎಂದು ಹೇಳುತ್ತಾರೆ. ಏಕೆಂದರೆ ಯೇಸುಸ್ವಾಮಿ ಶಿಷ್ಯನಿಗೆ ವಿಶ್ವಾಸಿಗಳಿಗೆ "ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಹೋಗಲಾರರು" ಎಂದು ಹೇಳಿದ್ದಾರೆ. ಅದೇ ನುಡಿಯನ್ನು (ಇನ್ನು ಹಲವು ಕಡೆ ತಂದೆಯ ಪ್ರಸ್ತಾಪ ಬರುತ್ತದೆ) ಆಧಾರವಾಗಿಟ್ಟುಕೊಂಡು ಯೇಸುವನ್ನು ಮಗನೆಂದು ನಂಬಿದ್ದಾರೆ. ನಂಬುತ್ತಾರೆ. ಈ ಮೊದಲ ವ್ಯಕ್ತಿಯಾದ ತಂದೆಯ ಬಗ್ಗೆ ಹೇಳುವ ಮತ್ತು ಸೃಷ್ಟಿಯ ಬಗ್ಗೆ ಹೇಳುವ ವಿಷಯ ಹಳೆ ಒಡಂಬಡಿಕೆಯಲ್ಲಿದೆ ಮತ್ತು ಕ್ರಿಸ್ತನ ಜನನ ಸೇವೆ ಮರಣ ಪುನರುತ್ಥಾನ ಮುಂದಿನ ಆಗುಹೋಗುಗಳನ್ನು ತಿಳಿಸುವ ವಿಷಯ ಹೊಸ ಒಡಂಬಡಿಕೆಯಲ್ಲಿ ಒಳಗೊಂಡಿದೆ.

ಈ ಬೈಬಲಿನ ಸತ್ಯಾಂಶಗಳು ಮೊಟ್ಟ ಮೊದಲು ಮೂರು ಭಾಷೆಗಳಾದ ಇಬ್ರಿಯ, ಗ್ರೀಕ್ ಮತ್ತು ಕೆಲ ಭಾಗ ಅರಾಮಿಕ್ ಅಥವಾ ಆರ್ಯಮಯಿಕ ಭಾಷೆಗಳಲ್ಲಿ ದೈವಪ್ರೇರಣೆಯಿಂದ ಶಿಷ್ಯರುಗಳ ಮೂಲಕ ಬರೆಯಲ್ಪಟ್ಟವು. ಅದರಲ್ಲಿ ನೇರವಾಗಿ ಜೇಡಿ ಮಣ್ಣಿನ ಹಲಗೆಯಲ್ಲಿ (ಯೆಹೆಜ್ಕೇಲು–೧:೧), ಕಲ್ಲಿನ ಹಲಗೆಯಲ್ಲಿ (ಶಿಲಾಶಾಸನ) (ವಿಮೋಚನಕಾಂಡ–೨೪:೧೨) ದೇವರೇ ತಿಳಿದುಬರುತ್ತದೆ. ಬೆಂಡಿನ ಕಾಗದ (ನೈಲ್ ನದಿಯ ಪೇಪರಸ ಗಿಡದ ಬೆಂಡು) (ವಿನೇಯೋಹಾನ ೧೨ನೇ ವಚನ), ಚರ್ಮದ ಕಾಗದ (ಪಾರ್ಚೆಮೆಟ್ಸ್) (೨ನೇ ತಿಮಾಥೆ ೪:೧೩) ಅಲ್ಲದೆ ಶುದ್ಧ ಬಂಗಾರದ ತಗಡುಪಟ್ಟಿ (ಪ್ಲಾಟ್ ಮೆಟಲ್) (ವಿಮೋಚನಕಾಂಡ ೨೮:೩೬) ಹೀಗೆ ಹಲವು ವಸ್ತುಗಳನ್ನು ಬಳಸಿ ದೈವ ಸಂದೇಶಗಳನ್ನು ಉಲ್ಲೇಖಗಳನ್ವಯ ಬರೆದರು ಎಂದು ತಿಳಿಯಬಹುದು.

ಸತ್ಯವೇದವನ್ನು ಬರೆಯಬೇಕಾದರೆ ಪೂರ್ವದಲ್ಲಿ ಯಾವ ಪುಸ್ತಕವನ್ನು ಸತ್ಯವೇದದಲ್ಲಿ ಸೇರಿಸಬೇಕು, ಯಾವ ಪುಸ್ತಕ ಸೇರಿಸಬಾರದು ಎಂದು ತಿಳಿಯುವಲ್ಲಿ 'ಅಳತೆ ಪಟ್ಟಿ'ಯನ್ನು ಬಳಸುತ್ತಿದ್ದರು. ಅದನ್ನು 'ಕೆನಾನ್ ಸಿಟಿ' ಎಂದು ಕರೆಯುತ್ತಿದ್ದರು. ಸತ್ಯವೇದದಲ್ಲಿ ಎಲ್ಲರ ಮನ್ನಣೆಯಂತೆ ಪ್ರಸ್ತುತ ೬೬ ಪುಸ್ತಕಗಳು ಇವೆ. ಹಳೆಯ ಒಡಂಬಡಿಕೆಯ ೩೯ ಪುಸ್ತಕಗಳು ಹಾಗೂ ಹೊಸ ಒಡಂಬಡಿಕೆಯ ೨೭ ಪುಸ್ತಕಗಳು ಇಸ್ರಾಯೇಲ್ಯರ ೧೨ ಕುಲಗಳಿಗೆ ಸರಿಯಾಗಿ ೧ ರಿಂದ ೬ ಜನರನ್ನು ಒಟ್ಟು ೭೨ ಜನರನ್ನು ಆಯ್ಕೆ ಮಾಡಿದವನು ಎಜ್ರನು ಏಕೆಂದರೆ ಇವನೇ ಅಳತೆಪಟ್ಟಿ ಮಾಡಿದವನು. ೭೨ ಜನರಲ್ಲಿ ೨ ಜನ ಸತ್ತರು ಉಳಿದ ಈ ಸೆಪ್ಟಾ–೭೦ (ಸೆಪ್ಟಾಜೆಂಟ್) ಜನ ಸೇರಿ ಕ್ರಮವಾಗಿ ಅಲೆಕ್ಸಾಂಡ್ರಿಯಾ ದೇಶದಲ್ಲಿ ಹಳೆ ಒಡಂಬಡಿಕೆಯನ್ನು ಇಬ್ರಿಯ ಭಾಷೆಯಿಂದ ಗ್ರೀಕ ಭಾಷೆಗೆ ಭಾಷಾಂತರಿಸಿದರು. ಈ ಕಾರ್ಯ ಆದದ್ದು ಕ್ರಿಪೂ. ೩ನೇ ಶತಮಾನದಲ್ಲಿ ಎಂದು ತಿಳಿದುಬರುತ್ತದೆ. ಹಾಗೆಯೇ ಶಾಸ್ತ್ರಿಗಳು, ಪರಿಸಾಯರು ಗ್ರಂಥಗಳನ್ನು ಬರೆಯುತ್ತಾ ಬಂದರು. ಮತ್ತು ಬರೆದದ್ದನ್ನು ದಾರದಲ್ಲಿ ಹೊಲಿದು ಕಟ್ಟುವ ವಿಧಾನಕ್ಕೆ 'ಕೊಡೆಕ್ಸ್' ಎಂದು ಕರೆಯುತ್ತಿದ್ದರು. ಹೊಸ ಒಡಂಬಡಿಕೆಯನ್ನು ಈ ವಿಧಾನದಲ್ಲೇ ಬರೆದರು ಇದು ೪ನೇ ಶತಮಾನದಲ್ಲಿ ಆರಂಭವಾಯಿತು. ಅದೇ ಸಂದರ್ಭದಲ್ಲಿ ಜೆರೋಮ್ ಎಂಬುವವರು ಲ್ಯಾಟಿನ್ ಭಾಷೆಗೆ 'ಅಪೋಕ್ರಿಪಾ'ಗಳನ್ನು ಭಾಷಾಂತರಿಸಿದರು. 'ಅಪೋಕ್ರಿಫಾ' (Apochryapha) ಎಂದರೆ ಸತ್ಯವೇದದ ೬೬ ಪುಸ್ತಕಗಳನ್ನು ಬಿಟ್ಟು ಇನ್ನು ೧೫ ಪುಸ್ತಕಗಳಿವೆ.

ಇವುಗಳಿಗೆ 'ಅಪೋಕ್ರಿಫಾ' ಎಂದು ಕರೆಯುವರು. ಅಂದರೆ ಈ ಪುಸ್ತಕಗಳು ಮಾನವನ ವಿಮೋಚನೆಯ ಕುರಿತಾಗಿ ಯಾವ ಸಂಗತಿಗಳನ್ನು ಹೊಂದಿಲ್ಲ ಅದಕ್ಕಾಗಿ ಈ ಪುಸ್ತಕಗಳು ಸತ್ಯವೇದದಲ್ಲಿ ಸೇರ್ಪಡೆಯಾಗಲಿಲ್ಲ. ಈ ೧೫ ಅಪೋಕ್ರಿಫಾಗಳಲ್ಲಿ ೭ ಪುಸ್ತಕಗಳು ಕ್ಯಾಥೋಲಿಕರು ತಮ್ಮ ಸತ್ಯವೇದದಲ್ಲಿ ಸೇರಿಸಿಕೊಂಡಿದ್ದಾರೆ. ಆ ೭ ಪುಸ್ತಕಗಳು ಯಾವುವೆಂದರೆ ೧. ಥೋಬಿತ್ ೨. ಜುಡಿತ್ ೩. ವಿಜಡಂ ಆಫ್ ಸಾಲ್‌ಮೋನ್ ೪. ಎಕ್ಲಿಸಿಯಾಸ್ಟಿಕಸ್ ೫. ಬಾರೂಕ್ ೬. ೧ನೇ ಮೆಕಬಿಸ್ ೭. ೨ನೇ ಮೆಕೆಬಿಸ್

ಸತ್ಯವೇದದ ರಚನಾ ನಿಯಮಗಳು

ಪಾಶ್ಚಿಮಾತ್ಯರು ಬೈಬಲ್(ಸುರುಳಿ)ನ್ನು ದೈವ ಪ್ರೇರಣೆಯಿಂದ ಬರೆಯಬೇಕಾದರೆ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತಿತ್ತು. ಅಂತಹ ಷರತ್ತುಗಳು ಹೀಗಿವೆ.

೧. ದೇವಾಲಯದ ಸುರುಳಿ ಗ್ರಂಥವು ಶುದ್ಧವಾದ ಪ್ರಾಣಿಯ ಚರ್ಮದಿಂದ ತಯಾರಿಸಲ್ಪಡಬೇಕು. ಮತ್ತು ಆ ಶುದ್ಧ ಚರ್ಮದಲ್ಲೇ ಬರೆಯಬೇಕು.

೨. ಆಯಾ ದೇವಾಲಯಕ್ಕೆ ವಿಶೇಷವಾಗಿ ಯಹೂದ್ಯರಿಂದಲೇ ತಯಾರಿಸಲ್ಪಡಬೇಕು.

೩. ಒಂದೊಂದು ಸುರುಳಿ ಜೋಡಿಸುವಾಗ ಶುದ್ಧ ಪ್ರಾಣಿಯ ನರದಿಂದಲೇ ಹೊಲಿಯಬೇಕು.

೪. ಎಲ್ಲ ಚರ್ಮಗಳು ಒಂದಕ್ಕೊಂದು ಸಮನಾಗಿರಬೇಕು. ಒಂದು ಚರ್ಮದಲ್ಲಿ ಮೂರು ಭಾಗ ಮಾಡುವುದಾದರೆ ಇನ್ನುಳಿದ ಚರ್ಮದಲ್ಲೂ ಮೂರು ಭಾಗಗಳು ಸತ್ಯವೇದ ಮುಗಿಯುವವರೆಗೂ ಇರಬೇಕು.

೫. ಒಂದು ಭಾಗದಲ್ಲಿ ಉದ್ದ '೪೮'ಕ್ಕಿಂತ ಕಡಿಮೆ ಇರಬಾರದು '೬೦'ಕ್ಕಿಂತ ಹೆಚ್ಚಿರಬಾರದು. ಅದರ ಅಗಲದಲ್ಲಿ ಖಂಡಿತವಾಗಿ ೩೦ ಅಕ್ಷರಗಳು ಇರಬೇಕು.

೬. ಪೂರ್ಣ ನಕಲು ಪ್ರತಿಯನ್ನು ತಯಾರಿಸುವಾಗ ಮೊದಲು ಗೆರೆಗಳನ್ನು ಹಾಕಬೇಕು. ಮೂರು ಪದಗಳು ಆ ಗೆರೆಯಲ್ಲಿ ಇಲ್ಲದೇ ಹೋದರೆ ಎರಡು ಪ್ರತಿ ನಿಷ್ಪ್ರಯೋಜಕ.

೭. ಬರೆಯುವ ಮಸಿ ಕಪ್ಪು ಇರಬೇಕು. ಬೇರೆ ಯಾವುದೇ ಬಣ್ಣದ ಮಸಿ ಸಲ್ಲದು.

೮. ಒಂದು ಸತ್ಯವೇದದ ಅಸಲು ಸತ್ಯ ಸ್ಪಷ್ಟ ಮಾದರಿಯಾಗಿರಬೇಕು. ಆ ಸತ್ಯವಾದ ಮಾದರಿ ಅಸಲು ಇದ್ದ ಹಾಗೆಯೇ ನಕಲು ಪ್ರತಿ ಇರಬೇಕು.

೯. ಒಂದು ಪದ ಅಥವಾ ಅಕ್ಷರ ಜ್ಞಾಪಕದಲ್ಲಿ ಇಟ್ಟುಕೊಂಡು ಬರೆಯಕೂಡದು. ಬರೆಯುವಾಗ ಮುಂದೆ ಇರುವ ಅಸಲನ್ನು ನೋಡಿಯೇ ಬರೆಯಬೇಕು.

೧೦. ಪ್ರತಿ ಅಕ್ಷರದ ಮಧ್ಯದಲ್ಲಿ ಒಂದು ಕೂದಲು ಅಥವಾ ದಾರದ ಎಳೆಯಷ್ಟು ಸ್ಥಳ ಬಿಟ್ಟಿರಬೇಕು.

೧೧. ಒಂದು ಪ್ಯಾರಾಗ್ರಾಫ್ ಅಥವಾ ಭಾಗ ಮಾಡುವಾಗ ಅದರ ಅಗಲ ೯ ಅಕ್ಷರಗಳ ಅಂತರವಿರಬೇಕು.

೧೨. ಪ್ರತಿಯೊಂದು ಪುಸ್ತಕಗಳ ಮಧ್ಯ ೩ ಗೆರೆಗಳ ಅಂತರವಿರಬೇಕು.

೧೩. ಮೋಶಿಯ ೫ನೇ ಪುಸ್ತಕ ಮಾತ್ರ ಸರಿಯಾಗಿ ಗೆರೆಯ ಕೊನೆಯಲ್ಲಿಯೇ ಮುಗಿಯಬೇಕು. ಬೇರೆ ಪುಸ್ತಕಕ್ಕೆ ನಿರ್ಬಂಧವಿಲ್ಲ.

೧೪. ಬರೆಯುವ ಶಾಸ್ತ್ರೀಯು ಸಹಿತ ಸಂಪೂರ್ಣ ಯಹೂದಿಯ ವಸ್ತ್ರಗಳನ್ನು ಧರಿಸಬೇಕು.

೧೫. ಬರೆಯು ಶಾಸ್ತ್ರಿಯು ಸಂಪೂರ್ಣ ತಲೆಯಿಂದ ಕಾಲಿನ ಬೆರಳಿನವರೆಗೂ ಸ್ನಾನ ಮಾಡಿರಬೇಕು.

೧೬. 'ಯಹೋವ' ಎಂದು ದೇವರ ಹೆಸರನ್ನು ಯಾವಾಗ ಬರೆಯುವುದು ಬರುತ್ತದೋ ಆಗ ಮಸಿ ಬದಲಾಯಿಸಿ ಹೊಸ ಮನೆಯಲ್ಲಿ ಬರೆಯಬೇಕು.

೧೭. ದೇವರ ಹೆಸರನ್ನು ಬರೆಯುವ ಕ್ಷಣದಲ್ಲಿ ಆ ಶಾಸ್ತ್ರೀಯ ರಾಜನೇ ಬಂದರೂ ಕಿವಿಗೊಡಬಾರದು. ಒಂದು ವೇಳೆ ಬರೆಯಲ್ಪಡುವ ನಕಲು ತಪ್ಪಿದರೆ ಅಥವಾ ದೋಷವಾದರೆ ಸಂಪ್ರದಾಯದ ಪ್ರಕಾರ ಆ ಸುರುಳಿ (ಸುವಾರ್ತೆ)ಯನ್ನು ಮಣ್ಣು ಮಾಡಿ ಬರಬೇಕು. ಹೀಗೆ ಮೂಲ ಬೈಬಲನ್ನು ಬರೆಯಬೇಕಾದರೆ ಇಷ್ಟೆಲ್ಲಾ ಕಟ್ಟಾಜ್ಞೆಗಳನ್ನು ಪಾಲಿಸಬೇಕಾಗುತ್ತಿತ್ತು ಎಂದು ತಿಳಿಯಬಹುದು.

೩.೫.೧. ಬೈಬಲಿನ ಅನುವಾದ

ಆರಂಭದಲ್ಲಿ ಕ್ರೈಸ್ತ ಧರ್ಮ ಗ್ರಂಥವಾ ಬೈಬಲ್‌ನ ಹಳೆ ಮತ್ತು ಹೊಸ ಒಡಂಬಡಿಕೆಗಳು ಏಕರೂಪದಲ್ಲಿಯೇ ಇದ್ದವು ಒಳಗೆ ಯಾವುದೇ 'ಅಧ್ಯಾಯ' 'ವಚನ' ಎಂದು ವಿಭಾಗ ಮಾಡಿರಲಿಲ್ಲ. ಕುಮ್ರಾನ್‌ಕೇಟ್ (ಗುಹೆ)ನಲ್ಲಿ ಕುರುಬರ ಹುಡುಗನಿಗೆ (ಎಸ್ತೇರಳ ಪುಸ್ತಕ ಬಿಟ್ಟು) ಉಳಿದೆಲ್ಲ ಹಳೆ ಒಡಂಬಡಿಕೆಯ ಸುರುಳಿ (ಸುವಾರ್ತೆ) ಭಾಗಗಳು ಸಿಕ್ಕವು. ಕ್ರಿ.ಶ. ೧೩೮೪ರಲ್ಲಿ ಜಾನ್ ವಿಕ್ಲಿಪ್ ಹಳೆ ಒಡಂಬಡಿಕೆಯನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದರು. ಕ್ರಿ.ಶ. ೧೫೨೫–೨೬ರಲ್ಲಿ ವಿಲಿಯಂ ಟೆಂಡಿಲ್‌ರು ಗ್ರೀಕ್ ಮತ್ತು ಹೀಬ್ರು ಭಾಷೆಯಿಂದ ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದರು. ಮೋಶಿಯ ೫ ಪುಸ್ತಕಗಳನ್ನು ಸಹ ಭಾಷಾಂತರಿಸಿದರು. ಆದರೆ ಈ ಕಾರ್ಯಕ್ಕಾಗಿ ಇವರನ್ನು ೬.೧೦.೧೫೩೬ರಲ್ಲಿ ನೇಣುಗಂಬಕ್ಕೆ ಕಟ್ಟಿ ಸುಟ್ಟರು. ಸಾಯುವಾಗ ದೇವರೇ ಇಂಗ್ಲೆಂಡ್ ರಾಜನ ಕಣ್ಣುಗಳನ್ನು ತೆರೆ ಎಂದು ಪ್ರಾರ್ಥಿಸಿ ಪ್ರಾಣ ಬಿಟ್ಟನು. ಮುಂದೆ ಅದೇ ರಾಜನ ಕಣ್ಣು ತೆರೆಯಲ್ಪಟ್ಟು ಸ್ವತಃ ತಾನೇ ಇಂಗ್ಲಿಷ್ ಭಾಷೆ ಕಲಿತು ೨೦೦ ಜನ ಪಂಡಿತರ ಸಹಾಯದಿಂದ ೬ ಗುಂಪು ಮಾಡಿ ಸತ್ಯವೇದವನ್ನು ಭಾಷಾಂತರಿಸಿದರು. ಅದೇ ಕೆ.ಜೆ.ವಿ. (ಕಿಂಗ್ ಜೇಮ್ಸ್ ವರ್ಷನ್) ಮತ್ತು ೧೫೬೦ರಲ್ಲಿ ಜಿನೆವಾದಲ್ಲಿ ವಿಟ್ಟಗಾಂ, ಜಾನ್‌ನಾಕ್ಸ್, ಕವಡೆ ಸಂಪೂರ್ಣವಾಗಿ ಆಂಗ್ಲ ಭಾಷೆಗೆ ಭಾಷಾಂತರಿಸಿದರು. ಅದೇ ಗ್ರೇಟ್ 'ಬೈಬಲ್' ಆದದ್ದು ಮುಂದೆ ೧೬೮೯ರಲ್ಲಿ ಸತ್ಯವೇದ 'ಅಧ್ಯಾಯ'

ಮತ್ತು 'ವಚನ' ಎಂದು ರೂಪುಗೊಂಡಿತು. ೧೭ನೇ ಶತಮಾನದಲ್ಲಿ ಜರ್ಮನಿಯ ಜಿಗನ್ ಬಾಲ್ಕ ಭಾರತದ ತಂಜಾವೂರು ಪಕ್ಕದ ಟ್ರ್ಯಾಂಕೋಬಾರ್ ಎಂಬಲ್ಲಿಗೆ ಬಂದು ತಮಿಳು ಭಾಷೆ ಕಲಿತು ಪ್ರಥಮ ಬಾರಿಗೆ ಸತ್ಯವೇದ ದೇಶದ ತಮಿಳು ಭಾಷೆಯಲ್ಲಿ ರಚನೆಯಾಯಿತು. ನಂತರ ೧೭೯೩ರಲ್ಲಿ ಇಂಗ್ಲೆಂಡಿನ ವಿಲಿಯಂಕೇರಿ ಭಾರತಕ್ಕೆ ಬಂದು ಕಲ್ಕತ್ತಾದಲ್ಲಿ ನೆಲಸಿ ೪೦ ಭಾಷೆಗಳಲ್ಲಿ ಹೊಸ ಒಡಂಬಡಿಕೆಯನ್ನು ಭಾಷಾಂತರಿಸಿದರು. ಹಳೆ ಒಡಂಬಡಿಕೆಯ ಕೆಲ ಭಾಗಗಳನ್ನು ಭಾರತದ ೨೦೦ ಭಾಷೆಗಳಿಗೆ ಭಾಷಾಂತರಿಸಿದ ಕೀರ್ತಿ ವಿಲಿಯಂ ರೀವ್‌ಗೆ ಸಲ್ಲುತ್ತದೆ. ಹಾಗೆಯೇ ಲಂಡನ್ ಮಿಷನ್ ಸೊಸಾಯಿಟಿ (ಎಲ್.ಎಂ.ಎಸ್)ನ ಮಿಶನರಿಗಳಾದ 'ಜಾನ್ ಹ್ಯಾಂಡ್ಸ್' ಮತ್ತು 'ವಿಲಿಯಂ ರೀವ್' ಬಳ್ಳಾರಿಗೆ ಆಗಮಿಸಿ ನೆಲಸಿ ಸೇವೆ ಸಲ್ಲಿಸಿ ಬೈಬಲನ್ನು ಕನ್ನಡಕ್ಕೆ ಭಾಷಾಂತರ ಮಾಡಿದರು. ೧೮೩೪ರಲ್ಲಿ ಕನ್ನಡದ ಮೊದಲ ಬೈಬಲ್ ಪ್ರಕಟವಾಯಿತು ಎಂದು ತಿಳಿಯಲಾಗಿದೆ.

ಪೂರ್ವಜಲ್ಲಿ ಜಾನ್ ಹ್ಯಾಂಡ್ಸ್‌ರವರು ಭಾಷೆಯನ್ನು ಶ್ರಮಪಟ್ಟು ಕಲಿತು ಅಭ್ಯಾಸ ಮಾಡಿದರೆ ಮಾತ್ರ ಪವಿತ್ರ ಸತ್ಯವೇದ ಕುರಿತು ನಾಡಿನ ಜನರಿಗೆ ತಿಳುವಳಿಕೆ ಬರಬೇಕೆಂದು ಶ್ರೀ ಲೂಕನ ಸುವಾರ್ತೆಯನ್ನು ಗ್ರೀಕ್ ಮೂಲಾಧಾರದಿಂದ ಇಂಗ್ಲೀಷ್, ಇಂಗ್ಲಿಷಿನಿಂದ ಕನ್ನಡಕ್ಕೆ ೧೮೧೨ರಲ್ಲಿಯೇ ಅನುವಾದ ಮಾಡಿದರು. ಯೇಸುಕ್ರಿಸ್ತನ ಸಂಪೂರ್ಣ ಜೀವನ ಚರಿತ್ರೆ, ಬೋಧನೆ, ರಕ್ಷಣೆಯ ಸಂದೇಶಗಳನ್ನು ಪ್ರಜೆಗಳು ಸಂಪೂರ್ಣವಾಗಿ ತಿಳಿಯಬೇಕೆಂದು ಶ್ರೀ ಮತ್ತಾಯ, ಶ್ರೀ ಮಾರ್ಕನ ಸುವಾರ್ತೆಗಳನ್ನು ಅದೇ ಕಾಲದಲ್ಲಿ ಅನುವಾದಿಸಿದರು. ಲಂಡನ್ ಮಿಷನ್ ಸೊಸೈಟಿಯವರು ಜಾನ್ ಹ್ಯಾಂಡ್ಸ್‌ರವರ ನೆರವಿಗಾಗಿ ೧೮೧೬ರಲ್ಲಿ ಮತ್ತೊಬ್ಬ ಮೇಧಾವಿಯೂ ಆದ ವಿಲಿಯಂರೀವ್‌ನನ್ನು ಬಳ್ಳಾರಿಗೆ ಕಳುಹಿಸಿದರು. ಇವರು ಸಹಿತ ಕನ್ನಡ ಭಾಷೆಯನ್ನು ಬಹುಬೇಗನೆ ಕಲಿತುಕೊಂಡು ಸತ್ಯವೇದದ ಹಳೆ ಒಡಂಬಡಿಕೆಯನ್ನು ಭಾಷಾಂತರಿಸಲಿಕ್ಕೆ ಸಹಾಯಕರಾದರು. ಹಳೆ ಒಡಂಬಡಿಕೆಯ ಮೂಲ ಭಾಷೆಯಾದ ಹೀಬ್ರು ಗ್ರಂಥದಿಂದ ಇವರೀರ್ವರು ಪರಸ್ಪರ ಮೂವತ್ತೊಂಬತ್ತು ಪುಸ್ತಕಗಳನ್ನು ಹಂಚಿಕೊಂಡರು. ರೀವ್ ಅವರು ಆದಿಕಾಂಡದಿಂದ ಎಸ್ತೇರಳು ಗ್ರಂಥದವರೆಗಿನ ಪಂಚಕಾಂಡ, ಚರಿತ್ರಾ ಗ್ರಂಥಗಳನ್ನು ಭಾಷಾಂತರ ಮಾಡಿದರು. ಹ್ಯಾಂಡ್ಸರು ಉಳಿದ ಕಾವ್ಯ ಕೀರ್ತನೆ, ಪ್ರವಾದಿ ಗ್ರಂಥಗಳನ್ನು ಹಂಚಿಕೊಂಡು ಹೀಬ್ರು ಭಾಷೆಯ ಆಧಾರದಿಂದ ಇಂಗ್ಲಿಷಿನಿಂದ ಕನ್ನಡಕ್ಕೆ ಸಂಪೂರ್ಣ ಭಾಷಾಂತರ ಮಾಡಿ ೧೮೨೬ರಲ್ಲಿ ಅದನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಿದರು. ಪುನಃ ಪರಿಶೀಲನೆಯಾದ ನಂತರ ೧೮೨೭ರಲ್ಲಿ ಮುದ್ರಿಸಿದರು. ೧೮೨೧ರಲ್ಲಿ ಸ್ಥಾಪಿತವಾದ ಬಳ್ಳಾರಿ ಲಂಡನ್ ಮಿಷನ್ ಪ್ರೆಸ್‌ನವರು ಸಂಪೂರ್ಣ ಪವಿತ್ರ ಸತ್ಯವೇದವನ್ನು ಅಂದವಾಗಿ ಕನ್ನಡದಲ್ಲಿ ೧೮೩೧ರಲ್ಲಿ ಮುದ್ರಿಸಿದರು. ಇದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಶುದ್ಧ ಗದ್ಯ ಶೈಲಿಯಲ್ಲಿ ಪ್ರಥಮ ಕನ್ನಡದ ಮುದ್ರಿತಾಕ್ಷರಗಳಲ್ಲಿ ಪವಿತ್ರ ಸತ್ಯವೇದದಂತಹ ಹಿರಿಯ ಗ್ರಂಥ ಮಾಲೆಯನ್ನು ಮುದ್ರಿಸಿ ಕೆಲವೇ ದಿನಗಳಲ್ಲಿ ಒಂದು ಸಾವಿರ ಪ್ರತಿಗಳನ್ನು ಪ್ರಕಟಿಸಿ ಜನರ ಪ್ರಕಾಶನಕ್ಕೆ ೧೮೩೧ರಲ್ಲಿ ಬೆಳಕಿಗೆ ತಂದಿರುವುದು ಇತಿಹಾಸವಾಗಿದೆ. ಇದರ ಗೌರವ ಘನತೆ ಜಾನ್ ಹ್ಯಾಂಡ್ಸ್ ಹಾಗೂ ವಿಲಿಯಂ ರೀವ್‌ರಿಗೂ ಸಲ್ಲಿಕೆಯಾಗುತ್ತದೆ.

ಹೀಗೆ ಅನುವಾದ, ಅನುವಾದದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹೇಗೆ ಭಾಷಾಂತರ ಏಕೆ? ಅನುವಾದವಾಯಿತೇ? ಎಂಬುದನ್ನು ಗ್ರಹಿಸಲಾಯಿತು. ಮತ್ತು ಈ ಒಂದು ಅನುವಾದ ಕಾರ್ಯದಲ್ಲಿ ಭಾಷಿಕವಾಗಿ ಅಂದರೆ ಮೊದಲ ಅನುವಾದಗಳಲ್ಲಿ ಬಳಸಿದ ಕನ್ನಡ ಭಾಷೆ (ಮೂಲ)ಯು ಮತ್ತು ತರುವಾಯ ಬಳಸಿದ ಕನ್ನಡ ಭಾಷೆಯ ವ್ಯತ್ಯಾಸ ಹಾಗೂ ಬದಲಾವಣೆಗಳನ್ನು ನೇರವಾಗಿ ಅನುವಾದಗೊಂಡು ರಚನೆಯಾದ ಕ್ರೈಸ್ತ ಬೈಬಲಿನ ಕೆಲವು ಅಧ್ಯಯನಗಳಿಂದ ಉಲ್ಲೇಖಿಸಿ ಅನುವಾದ ಪರಿಯನ್ನು ಗುರ್ತಿಸಲಾಗಿದೆ.

ಕ್ರೈಸ್ತ ಅನುವಾದಗಳಲ್ಲಿ ಪ್ರಮುಖವಾಗಿ ಧಾರ್ಮಿಕ ಸಾಹಿತ್ಯದ ಪ್ರಮುಖ ಧರ್ಮಗ್ರಂಥವಾದ ಬೈಬಲ್‌ನ ಅನುವಾದ ಸಮಯದಲ್ಲಿ ಅಂದರೆ ಕ್ರಿ.ಶ. ೧೮೩೧ರಲ್ಲಿ ಹ್ಯಾಂಡ್ಸ್ ಮತ್ತು ರೀವ್ ಅವರಿಂದ ಭಾಷಾಂತರ ಕಾರ್ಯ ನಡೆದಿದ್ದು ಆ ಅನುವಾದಗಳಲ್ಲಿ ಬಳಸಿದ 'ಕನ್ನಡ ನುಡಿ' ಅಥವಾ ಮೂಲನುಡಿ ಮತ್ತು ನಂತರದ ದಿನಗಳಲ್ಲಿ ಬಳಕೆಯಾಗಿರುವ ಕನ್ನಡ ಭಾಷೆಯನ್ನು ಅನುವಾದಗೊಂಡಿರುವ ಕೆಲವು ಬೈಬಲಿನ ಅಧ್ಯಾಯಗಳನ್ನು ಪರಿಗಣಿಸಿ ವಿಶ್ಲೇಷಣೆ ಮಾಡಲಾಗಿದೆ. ಅಲ್ಲದೆ ಸತ್ಯವೇದದ ಅನುವಾದಗಳಲ್ಲಿ ಆದ 'ಕನ್ನಡ ನುಡಿಯ ಮೂಲ ಭಾಷಾಸ್ವರೂಪ'ವನ್ನು ಹೇಳುವ ಕೆಲವು ಅಧ್ಯಾಯಗಳನ್ನು ಅಧ್ಯಯನದ ಅನುಬಂಧದಲ್ಲಿ ನೀಡಲಾಗಿದೆ. (ಆ.ಕ.ಸಾ.ಬ.ಲ.ಮಿ. ಪ್ರಿ.ಕೋ.ರೆ.ಆಸ್, ೨೦೦೧, ಪು. ೧೪-೧೯)

೩.೫.೨. ಅನುವಾದದಲ್ಲಿ ಅಕ್ಷರ ಬಳಕೆ

ಮೂಲ ಅನುವಾದ ಕನ್ನಡ	ನಂತರದ ಅನುವಾದ ಕನ್ನಡ
'ಡ'	'ದ'
'ಯಿ'	'ಇ'
'ಂ'	'ನ್ನು'
'ಖ'	'ಕ'
'ವು'	'ಉ'
'ಳಿಂ/ಳ'	'ಲಿಂ/ಲ'
'ಈ ಲಿ'	'ಅಲ್ಲಿ'
'ಶ'	'ಸ', 'ಚ'

ಮೇಲಿನ ಉಲ್ಲೇಖದಂತೆ ವಿಶ್ಲೇಷಣೆ ಮಾಡಿದರೆ ೧೮೩೧ರಲ್ಲಿ (೧೯ನೇ ಶತಮಾನ) ಪ್ರಥಮ ಬಾರಿಗೆ ಕ್ರೈಸ್ತ ಧರ್ಮ ಗ್ರಂಥ ಬೈಬಲನ್ನು ಕನ್ನಡಕ್ಕೆ ತರ್ಜುಮೆ ಮಾಡುವಲ್ಲಿ ಪ್ರಮುಖ ಕಾರಣೀಭೂತರಾದ

'ಜಾನ್ ಹ್ಯಾಂಡ್ಸ್' ಮತ್ತು 'ವಿಲಿಯಂ ರೀವ್' ಅವರು 'ದ'ಕಾರಕ್ಕೆ ಬದಲಾಗಿ 'ಡ'ಕಾರವನ್ನು ಬಳಸಿರುವುದನ್ನು ಕಂಡುಕೊಳ್ಳಲಾಯಿತು. ಉದಾ. 'ಯೂದಾಯ'ಕ್ಕೆ ಯೂಡೈ, 'ಹೆರೋದನ'ಕ್ಕೆ ಹೆರೋಡನ ಎಂದು ಅನುವಾದಿಸಲಾಗಿದೆ. 'ಇ' ಕಾರಕ್ಕೆ 'ಯಿ'ಕಾರವನ್ನು ಬಳಸಲಾಗಿದೆ. ಉದಾ. 'ಇನ್ನೊಂದು' ಅನ್ನಲಿಕ್ಕೆ 'ಯಿನ್ನೊಂದು' 'ಇಸ್ರಾಯೇಲನು' ಪದವನ್ನು 'ಯಿಸ್ರಾಯೇಲನು' ಎಂದು ಬರೆಯಲಾಗಿದೆ. 'ನ' ಕಾರಕ್ಕೆ 'ಂ' ಅನುಸ್ವರವನ್ನು ಬಳಸಿದ್ದಾರೆ. ಉದಾ. ಅವನನ್ನು ಎಂಬುದಕ್ಕೆ ಅವನಂನು ನನ್ನನ್ನು-ನಂನನು, ದೇವರನ್ನು-ದೇವರಂನು, 'ಕ' ಕಾರಕ್ಕೆ 'ಖ' ಕಾರ ಬಳಕೆಯಾಗಿದೆ. ಉದ. ಜೆಕರಿಯ-ಜೆಖರಿಯ ಆಗಿದೆ ಮತ್ತು 'ಉದ್ಯೋಗ' ಎಂಬುದನ್ನು 'ವುದ್ಯೋಗ' ಎಂದು ಉಲ್ಲೇಖವಾಗಿದೆ. 'ಅಲ್ಲಿ' ಪದ ಹೋಗಿ 'ಈಲಿ'ಯಾಗಿ ರಚನೆಯಾಗಿದೆ. ಉದಾ. ಕಣ್ಣಾರೆ, ಕಣ್ಣಲ್ಲಿ ಪದವು 'ಕಣ್ಣೀಲಿ'ಯಾಗಿ ಬಳಕೆಯಾಗಿದೆ.

'ಸ'ಕಾರವು 'ಶ'ಕಾರವಾಗಿ ಬಳಕೆಯಾಗಿದೆ. ಉದಾ. 'ಇಸ್ರಾಯೇಲನು' ಪದ 'ಯಿಶ್ರಾಯೇಲನು' ಆಗಿ ಬಳಕೆಯಾಗಿದೆ. ಮತ್ತು 'ಳ' ಕಾರವು 'ಲ'ಕಾರ ಆಗಿ ಪೂರ್ವದಲ್ಲಿ ಬಳಕೆಯಾಗಿದೆ. ಉದಾ. ಮೂಲ ಅನುವಾದದಲ್ಲಿ 'ನೆಫ್ತಾಳಿಂ' ಪದ ಬಳಕೆಯಾಗಿದೆ. ಅದನ್ನು ಈಚಿನ ಅನುವಾದಗಳಲ್ಲಿ 'ನೆಫ್ತಾಲಿಂ' ಎಂದು ಬಳಕೆಯಾಗಿದೆ. ಅಲ್ಲದೆ 'ಚ' ಕಾರವನ್ನು 'ತ' ಮತ್ತು 'ಸ' ಕಾರಗಳಾಗಿ ಬಳಸಿದ್ದನ್ನು ಕಂಡುಕೊಳ್ಳಲಾಯಿತು. ಉದಾ. 'ಚೀಯೋನಿ' ಎಂಬ ಈ ಪದವು ಮೂಲ ಅನುವಾದದಲ್ಲಿ 'ತ್ಸಿಯೋನಿ' ಎಂದು ಬಳಕೆ ಆಗಿದೆ. ಇದರಿಂದ ಕ್ರೈಸ್ತ ಧಾರ್ಮಿಕ ಸಾಹಿತ್ಯ ಅನುವಾದಿಸಿದ್ದರಿಂದ ನಮ್ಮ ಕನ್ನಡ ಸಾಹಿತ್ಯಕ್ಕೆ ಬೆಳವಣಿಗೆ ರೂಪವನ್ನು ಕೊಟ್ಟಿದ್ದಲ್ಲದೆ ಸರಳ ಹಾಗೂ ಬದಲಾವಣೆಯ ಅಂಶಗಳನ್ನು ನೀಡಿದೆ ಎಂದು ಹೇಳಬಹುದು. ಹೀಗೆ ಪ್ರಾಯೋಗಿಕವಾಗಿ ಈ ರೀತಿಯ ಭಿನ್ನವಾದ ಅಕ್ಷರ-ಪಾದ ಬಳಕೆಯನ್ನು ಗಮನಿಸಲಾಗಿದೆ.

ಅಲ್ಲದೆ ಮೂಲ ಅನುವಾದದಲ್ಲಿ ಸಂಖ್ಯೆಯನ್ನು ಅಂಕೆಯಲ್ಲಿ ಬರೆಯದೆ ಸಂಪೂರ್ಣ ಅಕ್ಷರದಲ್ಲಿಯೇ ಬರೆಯಲಾಗಿದೆ. ಉದಾ. ೧೪೯ನೇ ೧೫೦ನೇ ಅಧ್ಯಾಯ ಎಂದು ಹೇಳುವಲ್ಲಿ 'ನೂರನಲವತ್ತೊಂಬತ್ತನೆಯ ಅಧ್ಯಾಯ' ಎಂದೂ ನೂರೈವತ್ತನೆಯ ಅಧ್ಯಾಯ ಎಂದು ಉಲ್ಲೇಖಿಸಲಾಗಿದೆ. ಮತ್ತು ವಚನಗಳ ಸಂಖ್ಯೆಯನ್ನು ಸಹಿತವಾಗಿ ಕನ್ನಡ ಅಕ್ಷರದಲ್ಲಿಯೇ ಅಂದರೆ 12345 ಎಂಬುದಾಗಿ ಇರುವ ವಚನಾ ಸಂಖ್ಯೆಯನ್ನು ೧೨೩೪೫ ಎಂದು ಬರೆದು ಅನುವಾದಿಸಲಾಗಿದೆ. ಆದರೆ ಪ್ರಸ್ತುತ ಅನುವಾದಗಳಲ್ಲಿ ಮತ್ತಾಯನು ಬರೆದ ಸುವಾರ್ತೆ ೧ನೇ ಅಧ್ಯಾಯ ೧ ರಿಂದ ೧೦ ವಚನವರೆಗೆ (೧:೧-೧೦) ಎಂದು ಅನುವಾದಿಸುತ್ತಾರೆ. ಮೂಲ ಅನುವಾದಗಳಲ್ಲಿ ಉದಾ. ಲೂಕನು ಬರೆದ ಸುಭ ಸಮಾಚರವು 'ಮೊದಲನೆಯ ಸಂಧಿ' ಎಂದು ಬರೆಯಲಾಗಿದೆ. ಇಂದು 'ಶುಭ ಮತ್ತು ಸಂಧಿ'ಯ ಬದಲಿಗೆ 'ಸುವಾರ್ತೆ' ಮತ್ತು 'ಅಧ್ಯಾಯ' ಎಂದು ಅನುವಾದಿಸುವುದನ್ನು ಕಂಡುಕೊಳ್ಳಲಾಗಿದೆ.

೩.೫.೩. ಅನುವಾದದಲ್ಲಿ ಪದ ಬಳಕೆ

ಪ್ರಸ್ತುತ ಅನುವಾದಗೊಂಡ ಸತ್ಯವೇದದಲ್ಲಿ ೧೪೯ನೇ ಕೀರ್ತನೆಯನ್ನು ಗಮನಿಸಿದಾಗ (೨೦೦೧-೦೨ನೇ ವರ್ಷದಲ್ಲಿ ಮುದ್ರಣಗೊಂಡ ಸತ್ಯವೇದವು ಬೈಬಲ್ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು, ಪುಟ. ೬೯೬) ೧೪೯-ಯಹೂವಿಗೆ ಸ್ತೋತ್ರ! ಯಹೋವನಿಗೆ ನೂತನ ಕೀರ್ತನೆಯನ್ನು ಹಾಡಿರಿ; ಭಕ್ತ ಸಭೆಯಲ್ಲಿ ಆತನನ್ನು ಸ್ತುತಿಸಿರಿ ಎಂದು ಹೇಳಲಾಗಿದೆ. ಆದರೆ ೧೯ನೇ ಶತಮಾನ (೧೮೩೧)ದಲ್ಲಿ ರಚನೆಯಾದ ಮೂಲ ಅನುವಾದದಲ್ಲಿ ಕನ್ನಡ ಭಾಷೆ ಅದೇ ೧೪೯ನೇ ಕೀರ್ತನೆಯಲ್ಲಿ ಹೀಗೆ ರಚನೆಯಾಗಿತ್ತು ಎಂದು ಗಮನಿಸಲಾಗಿದೆ. ಅಲ್ಲಿ 'ನೂರಾನಾಲ್ವತ್ತೊಂಭತ್ತನೇ ಕೀರ್ತನೆ' ಎಂದು ಅಕ್ಷರಗಳಲ್ಲಿ ಇದ್ದು ವಾಕ್ಯ-೧ ಯೆಹೋವಾನನ್ನು ಸ್ತುತಿಸಿರಿ. ಯಹೋವಾನನ್ನು ಕುರಿತು ನೂತನಕರವಾದ ಕೀರ್ತನೆಯನ್ನು ಭಕ್ತರ ಸಭೆಯಲ್ಲಿ ಆತನ ಸ್ತುತಿಯನ್ನು ಹಾಡಿರಿ.

೨. ಹಿಶ್ರಾಯೇಲನು ತನ್ನನ್ನು ನಿರ್ಮಿಸಿದಾತನಲ್ಲಿ ಆನಂದ ಪಡುವವನಾಗಲಿ ತ್ಸಿಯೋನಿನ ಕುಮಾರರು ತಮ್ಮ ಅರಸನಲ್ಲಿ ಸಂತೋಷಿಸುವವರಾಗಲಿ ಅವರು ಆತನ ನಾಮವನ್ನು ನಾಟ್ಯದಿಂದ ಸ್ತುತಿಸುವರಾಗಲಿ ತಂಬೂರಿಯಿಂದಲೂ ಕಿನ್ನರಿಯಿಂದಲೂ ಆತನನ್ನು ಕುರಿತು ಕೀರ್ತನೆಯನ್ನು ಹಾಡುವರಾಗಲಿ ಎಂದು ಅನುವಾದಿಸಲಾಗಿದೆ. ಇದರಲ್ಲಿ 'ಇಸ್ರಾಯೇಲ', 'ಚಿಯೋನಿ' ಪದಗಳನ್ನು ಮೂಲ ಅನುವಾದದಲ್ಲಿ 'ಯಿಶ್ರಾಯೇಲ', 'ತ್ಸಿಯೋನಿ' ಎಂಬುದಾಗಿ ಬಳಕೆಯಾಗಿರುವುದನ್ನು ಗುರ್ತಿಸಲಾಯಿತು. ಹೀಗೆ ಅನುವಾದಗೊಂಡ ಕೆಲ ಅಧ್ಯಾಯಗಳು ಅಂದರೆ ಕೀರ್ತನೆ-೧೪೯, ೧೫೦ನೇ ಕೀರ್ತನೆಗಳು, ಮತ್ತಾಯನ ಸುರ್ವಾತೆ ೪ನೇ ಅಧ್ಯಾಯದ ೬ನೇ ವಚನದವರೆಗೂ ಮತ್ತು ಮಾರ್ಕನ ಸುವಾರ್ತೆಯು ೧೪ನೇ ಅಧ್ಯಾಯ ೧೪ ರಿಂದ ೨೦ನೇ ವಚನದವರೆಗೂ ಅಲ್ಲದೆ ಲೂಕನ ಸುವಾರ್ತೆಯ ೧:೧-೧೨ ವಚನಗಳಿಂದ ಅಥವಾ ಸತ್ಯವೇದದ ಆಯ್ದ ಈ ಮೇಲಿನ ಅಧ್ಯಾಯಗಳಿಂದ ಮೂಲ ಕನ್ನಡ ಅನುವಾದ ಪದಗಳು ಮತ್ತು ನಂತರದ ಅನುವಾದ ಕನ್ನಡ ಪದಗಳೆಂದು ವರ್ಗೀಕರಿಸಿ ಹೀಗೆ ಹೇಳಬಹುದು.

ಮೂಲ ಅನುವಾದದ ಕನ್ನಡ ಪದಗಳು (೧೮೩೧)	**ಇತ್ತೀಚಿನ ಅನುವಾದದ ಕನ್ನಡ ಪದಗಳು (೨೦೦೧-೨೦೦೫)**
ಯಹೋವ	ಯಾಹು
ಸ್ತುತಿ	ಸ್ತೋತ್ರ
ಯಿಶ್ರಾಯೇಲನು	ಇಸ್ರಾಯೇಲನು
ತ್ಸಿಯೋನಿ	ಚೀಯೋನಿ
ತಂಬೂರಿ	ದಮ್ಮಡಿ
ಶೃಂಗಾರ	ಭೂಷಣ

ಹಗೆ	ಮುಯ್ಯಿ
ಸರಪಳಿ	ಸಂಕೋಲೆ
ಸಂಕೋಲೆ	ಬೇಡಿ
ಬರೆಯಲ್ಪಟ್ಟ	ಲಿಖಿತ
ಬಲ	ಶಕ್ತಿ
ಆಕಾಶವಿಶಾಲ	ಆಕಾಶಮಂಡಲ
ಪರಿಶುದ್ಧ ಸ್ಥಳ	ಪರಿಶುದ್ಧ ಲಯ
ಬಲವಾದ ಕಾರ್ಯ	ಮಹತ್ಕಾರ್ಯ
ಅತಿಶಯಘನ	ಮಹಾಪ್ರಭಾವ
ತುತೂರಿ	ಕೊಂಬು
ವೀಣೆ ಕಿನ್ನರಿ	ಸ್ವರಮಂಡಲ ಕಿನ್ನರಿ
ಪಿಳ್ಳಂಗೋವಿ	ಕೊಳಲು
ಮಹಾನಾದವುಳ್ಳ ತಾಳ	ಝಲ್ಲರಿ
ದೇವರಂನ	ಕರ್ತನನ್ನು
ತರುವಾಯ	ಬಳಿಕ
ಪರ್ವತ	ಬೆಟ್ಟ
ರಾಜ್ಯಗಳಂನೂ	ರಾಜ್ಯಗಳನ್ನು
ಮಹತ್ತಂನೂ	ವೈಭವವನ್ನು
ನಂನನು	ನನ್ನನ್ನು
ಯಿದೆಲ್ಲಾಂನು	ಇವುಗಳನ್ನೆಲ್ಲಾ, ಇದೆಲ್ಲನ್ನು
ಯಹೊವಾ	ಕರ್ತ
ಜೆಬುಲೋನ್ನ	ಜೆಬುಲೋನ
ನಫ್ತಾಳಂ	ನೆಫ್ತಾಲೀಮ್
ದೇವರಂನ	ದೇವರನ್ನು

ಪ್ರಾಂತ	ನಾಡು
ಪಟ್ಣ	ಊರು
ಯೊರ್ದ್ದೆನದಿ	ಯೋರ್ದನಿನದಿ
ಅಂನ್ಯಜನಾಂಗದ	ಅನ್ಯಜನಾಂಗಗಳ
ಗಲಿಲಾಯ ದೇಶ	ಗಲಿಲಯ ಸೀಮೆ
ಮಹಾಪ್ರಕಾಶವಂನು	ದೊಡ್ಡ ಬೆಳಕು
ಬಳೀಲಿ	ಬಳಿಯಲ್ಲಿ
ಅಂಡ್ರೆಯಾ	ಅಂದ್ರೆಯ
ಹಿಂದೆ ಹತ್ತಿದರು	ಹಿಂದೆ ಹೋದರು
ಇಬ್ಬರು	ಯಿಬ್ಬರು
ಸಹೋದರನಾದ	ತಮ್ಮನಾದ
ಜೆಬೆಡ್ಯೆನ	ಜೆಬೆದಾಯನ
ಸಂಗಡ	ಕೂಡ
ಹಡಗ	ದೋಣಿ
ಬಲೆಗಳಂನು	ಬಲೆಗಳನ್ನು
ನೆಟ್ಟಗೆ	ಸರಿ
ಹಿಂದೆ ಹೋದರು	ಹಿಂಬಾಲಿಸಿದರು
ತರುವಾಯ	ಬಳಿಕ
ಪ್ರಸಿದ್ಧಿ	ಹಬ್ಬಿ
ಚಂದ್ರರೋಗ	ಮೂರ್ಛಾರೋಗ
ಡೆಕಪೋಲಿ	ದೆಕಪೊಲಿ
ಹೂಡ್ಯೆಯ	ಯೂದಾಯ
ನದಿ	ಹೊಳೆ
ಸಮೂಹಗಳಂನು	ಗುಂಪುಗಳನ್ನು

ಪರ್ವತ	ಬೆಟ್ಟ
ಕುಳಿತ	ಕೂತುಕೊಂಡ
ದೈನ್ಯಮನಸ್ಸುಳ್ಳವರು	ಆತ್ಮದಲ್ಲಿ ಬಡವರು
ಭಾಗ್ಯವಂತರು	ಧನ್ಯರು
ನೀರಡಿಕೆ	ಬಾಯಾರಿಕೆ
ಹರತ ತುಡಿ	ಪವಿತ್ರ ದೇವಾಲಯ
ಮನವುಳ್ಳ	ಶ್ರೀಮತ್
ಆರಂಭ	ಮೊದಲು
ಕಂಣೇಲಿ	ಕಣ್ಣಾರೆ
ವಚನ ಬೋಧಕರು	ಸುವಾರ್ತವಾಕ್ಯ ಸಾರುವವರು
ಸಮಾಚಾರ	ವಿಷಯ
ಯಹೂಡ್ಯೈ	ಯೂದಾಯ
ಹೆರೋಡನ	ಹೆರೋದನ
ಜೆಖರಿಯ	ಜಕರಿಯ
ಆಚಾರ್ಯ	ಯಾಜಕ
ಅಹರೋನಳು	ಆರೋನಳು
ಎಲೀಸಬೆತ್	ಎಲಿಸಬೇತ್
ಸಮಸ್ತ	ಎಲ್ಲಾ
ಯೀಯಿಬ್ಬರು	ಅವರಿಬ್ಬರು
ಸಮುಖದಲ್ಲಿ	ದೃಷ್ಟಿಯಲ್ಲಿ
ಸಂತಾನವಿರಲಿಲ್ಲ	ಮಕ್ಕಳಿರಲಿಲ್ಲ
ಯಿದಲ್ಲದೆ	ಇದಲ್ಲದೆ
ಯೀಯಿಬ್ಬರು	ಈ ಇಬ್ಬರು
ವುದ್ಯೋಗ	ಧರ್ಮ ಉದ್ಯೋಗ

ಸಮ್ಮುಖ	ಸನ್ನಿಧಿ
ತನವಂತಾಗಿತ್ತು	ಅವನ ಪಾಲಿಗೆ ಬಂತು
ಸಮಯದಲ್ಲಿ	ಹೊತ್ತಿನಲ್ಲಿ
ಸಭಾಜನರೆಲ್ಲರೂ	ಜನರ ಗುಂಪೆಲ್ಲಾ
ಬಲಿಪಾರ್ಶ್ವ	ಬಲಗಡೆ
ಪ್ರತ್ಯಕ್ಷವಾಗು	ಕಾಣಿಸಿಕೊಳ್ಳು
ಕಳವಳ	ತತ್ತರ
ಅವನಂನು	ಅವನನ್ನು

ಹೀಗೆ ಅನುವಾದ ಸಾಹಿತ್ಯದಲ್ಲಿ ಬರುವ ಅಕ್ಷರ ಮತ್ತು ಪದಗಳನ್ನು ಈ ರೀತಿಯಾಗಿ ವರ್ಗೀಕರಿಸಬಹುದು.

ವಸ್ತುವಾಚಕಗಳು

ಮೂಲ ಅನುವಾದ ಕನ್ನಡ	**ನಂತರ ಅನುವಾದ ಕನ್ನಡ**
ಅ	ಬ
ತಂಬೂರಿ	ದಮ್ಮಡಿ
ಸರಪಳಿ	ಸಂಕೋಲೆ
ಸಂಕೋಲೆ	ಬೇಡಿ
ತುತೂರಿ	ಕೊಂಬು
ವೀಣೆ ಕಿನ್ನರಿ	ಸ್ವರಮಂಡಲ ಕಿನ್ನರಿ
ಪಿಳ್ಳಂಗೋವಿ	ಕೊಳಲು
ತಾಳ	ಝಲ್ಲರಿ
ಹಡಗ	ದೋಣಿ
ಹರತ ತುದಿ	ಪವಿತ್ರ ದೇವಾಲಯ

ವಿಶೇಷಣಗಳು

ಅ	ಬ
ಸ್ತುತಿ	ಸ್ತೋತ್ರ
ಶೃಂಗಾರ	ಭೂಷಣ
ಹಗೆ	ಮುಯ್ಯಿ
ಬರೆಯಲ್ಪಟ್ಟ	ಲಿಖಿತ
ಬಲ	ಶಕ್ತಿ
ಬಲವಾದ ಕಾರ್ಯ	ಮಹತ್ಕಾರ್ಯ
ಅತಿಶಯ ಘನ	ಮಹಾಪ್ರಭಾವ
ದೇವರಂನ	ಕರ್ತನನ್ನು
ತರುವಾಯ	ಬಳಿಕ
ರಾಜ್ಯಗಳಂನೂ	ರಾಜ್ಯಗಳನ್ನು
ಮಹತ್ತಂನೂ	ವೈಭವವನ್ನು
ನಂನನು	ನನ್ನನ್ನು
ಯಿದೆಲ್ಲ	ಇದೆಲ್ಲ
ಯಹೋವಾ	ಕರ್ತ

ವ್ಯಕ್ತಿ ಸ್ಥಳವಾಚಕಗಳು

ಅ	ಬ
ಯಹೋವ	ಯಾಹು
ಆಕಾಶವಿಶಾಲ	ಆಕಾಶ ಮಂಡಲ
ಪರಿಶುದ್ಧ ಸ್ಥಳ	ಪರಿಶುದ್ಧ ಲಯ
ಪರ್ವತ	ಬೆಟ್ಟ
ಜೆಬುಲೋ್ನ	ಜುಬುಲೋನ
ನಫ್ತಾಳಂ	ನೆಫ್ತಾಲೀಮ್

ಪ್ರಾಂತ	ನಾಡು
ಪಟ್ಣ	ಊರು
ಯೊರ್ದನದಿ	ಯೋರ್ದನನದಿ
ಗಲಿಲಾಯಿದೇಶ	ಗಲಿಲಾಯ ಸೀಮೆ
ಡೆಕಪೊಲಿ	ದೆಕಪೊಲಿ
ಹೂಡ್ಯೆಯ	ಯೂದಾಯ
ನದಿ	ಹೊಳೆ

೩.೫.೪. ಅನುವಾದದಲ್ಲಿ ಭಾಷಾ ಬಳಕೆ

ಅನುವಾದಗೊಂಡ ಕ್ರೈಸ್ತ ಧಾರ್ಮಿಕ ಸಾಹಿತ್ಯ (ಬೈಬಲ್)ದಲ್ಲಿ ಗಮನಿಸಿದಾಗ ಪೂರ್ವದಲ್ಲಿ ಅನುವಾದದೊಳಗೆ ಬಳಸಿದ ಕನ್ನಡದ ನುಡಿ ಪದಗಳು ಹಾಗೂ ಇತ್ತೀಚಿಗೆ ಅನುವಾದಿಸಿದ ಬೈಬಲ್ ಗ್ರಂಥದಲ್ಲಿ ಕಂಡುಬರುವ ಪದಗಳು ಕೊಂಚ ಭಿನ್ನವಾಗಿವೆ. ಮೂಲ ಅನುವಾದ ಮತ್ತು ಈಚೆಗೆ ಆಗಿರುವ ಅನುವಾದಗಳಲ್ಲಿ ಕನ್ನಡ ಭಾಷೆ ಬಳಕೆಯಾಗಿರುವ ಸ್ವರೂಪವನ್ನು ನೇರವಾಗಿ ತುಲನೆ ಮಾಡಿ ಈ ಕೆಳಕಂಡಂತೆ ಗುರ್ತಿಸಲಾಗಿದೆ.

(* ರೆಡಿ: ಯನ್. ಸಭಾಪತಿ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಲೂರು, ೨೦೦೧)

ಮೂಲ ಅನುವಾದದಲ್ಲಿ ಕನ್ನಡ ಭಾಷಾ ಬಳಕೆ

ಲೂಕನು ಬರೆದ ಶುಭ ಸಮಾಚಾರವು

ಮೊದಲನೇ ಸಂಧಿ

೧. ಮನವುಳ್ಳ ಥೆಯೊಫಿಲನೇ ಆರಂಭದಿಂದ ಕಂಣೀಲಿ ಕಂಡವರೂ ವಚನ

೨. ಬೋಧಕರೂ ನಮಗೆ ತಿಳಿಯ ಮಾಡಿದ ಹಾಗೆಯೇ ಅನೇಕರು

೩. ಪ್ರಯತ್ನ ಮಾಡಿದದರಿಂದ ನಂಮಲ್ಲಿ ಸಂಪೂರ್ಣವಾಗಿ ನಿಶ್ಚೈಸಿದ ಕಾರ್ಯಗಳ ವಿವರವಂನು ಬರಿಯನಾನೂಯಿವೆಲ್ಲಾಂನು ಆದಿ ಮೊದಲಾಗಿ ಪರಿಶೋ

೪. ಧಿಸಿ ನೀನು ವುಪುದೇಶಿಸಪಟ್ಟವಗಳಂನ ಕುರಿತು ನಿಂನನು ದೃಢಪಡಿಸುವ ಹಾಗೆ ಯೀಸಮಾಚರಗಳಂನು ನಿನಗೆ ವಾಂಕ್ತವಾಗಿ ಬರಿಯನನಗೆ ಯುಕ್ತವಾಗಿ ಕಾಣಿಸಿತು.

೫. ಯೆಹೂಡ್ಯೆಯಾ ದೇಶವು ಅರಸನಾದ ಹೇರೋಡನ ದಿನಗಳಲ್ಲಿ ಅಬಿಯಾನ ವಂಶಿನವನಾದ ಜೆಖರಿಯನೆಂಬುವನೊಬ್ಬ ಆಚಾರ್ಯನಿದ್ದನು. ಅವನ ಹೆಂಡತಿ ಅಹರೋನನ ವಂಶಸ್ತಳು ಅವಳ ಹೆಸರು ಎಲೀಸಬೆತ್.

೬. ಯೀಯಿಬ್ಬರು ಕರ್ತನ ಸಮಸ್ತ ಆಜ್ಞೆಗಳಲ್ಲಿಯೂ ನೀತಿನ್ಯಾಯಗಳಲ್ಲಿಯೂ ತಪ್ಪಿಲ್ಲದವರಾಗಿ ನಡಕೊಂಡು ದೇವರ ಸಮ್ಮುಖದಲ್ಲಿ ನೀತವಂತ

೭. ರಾಗಿದ್ದರು. (ಉಲ್ಲೇಖ ಆಧುನಿಕ ಕನ್ನಡ ಸಾಹಿತ್ಯಾಭಿವೃದ್ಧಿಗೆ ಬಳ್ಳಾರಿ ಲಂಡನ್ ಮಿಷನ್ನಿನ ಪ್ರಥಮ ಕೊಡುಗೆ)

ನಂತರದ ಅನುವಾದಗಳಲ್ಲಿ ಕನ್ನಡ ಭಾಷಾ ಬಳಕೆ

ಲೂಕನು ಬರೆದ ಸುವಾರ್ತೆ

ಪೀಠಿಕೆ

೧. ಶ್ರೀಮತ್ ಥೆಯೋಫಿಲನೇ ನಮ್ಮಲ್ಲಿ ನಿಶ್ಚಯಕ್ಕೆ ಬಂದಿರುವ ಕಾರ್ಯಗಳನ್ನು ಮೊದಲಿಂದ ಕಣ್ಣಾರೆ ಕಂಡು ಸುವಾರ್ತಾ ವಾಕ್ಯವನ್ನು ಸಾರುತ್ತಿದ್ದವರು ನಮಗೆ ತಿಳಿಸಿದ ಪ್ರಕಾರ ಆ ಕಾರ್ಯಗಳನ್ನು ಚರಿತ್ರ ರೂಪವಾಗಿ ಬರೆಯುವುದಕ್ಕೆ ಅನೇಕರು ಪ್ರಯತ್ನಿಸಿರಲಾಗಿ

೨. ನಾನು ಬುಡದಿಂದ ಎಲ್ಲವನ್ನು ಚೆನ್ನಾಗಿ ವಿಚಾರಿಸಿದವನಾದ ಕಾರಣ ಅವುಗಳನ್ನು ನಿನಗೆ ಕ್ರಮವಾಗಿ ಬರೆಯುವುದು ಒಳ್ಳೇದೆಂದು ನನಗೂ ತೋಚಿತು.

೩. ನಿನಗೆ ಉಪದೇಶಿಸಿರುವ ವಿಷಯಗಳು ಯಥಾರ್ಥವಾದವುಗಳೆಂದು ಇದರಿಂದ ನೀನು ಗೊತ್ತು ಮಾಡಿಕೊಳ್ಳಬಹುದು.

೪. ಯೂದಾಯದ ಅರಸನಾದ ಹೆರೋದನ ಕಾಲದಲ್ಲಿ ಅಬೀಯನ ವರ್ಗಕ್ಕೆ ಸೇರಿದ ಜಕರೀಯನೆಂಬ ಒಬ್ಬ ಯಾಜಕನಿದ್ದನು. ಅವನು ಹೆಂಡತಿಯು ಆರೋನನ ವಂಶದವಳು ಆಕೆಯ ಹೆಸರು

೫. ಎಲಿಸಬೇತ್ ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನು ನೇಮ ನಿಷ್ಠೆಗಳನ್ನೂ ಕೈಕೊಂಡು

೬. ತಪ್ಪಿಲ್ಲದೆ ನಡಕೊಳ್ಳುತ್ತಾ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು.

(ಉಲ್ಲೇಖ–ಸತ್ಯವೇದವು ಬಿ.ಎಸ್.ಐ. ಬೆಂಗಳೂರು, ೨೦೦೧–೦೨ ಪುಟ)

ಅನುವಾದಗಳಲ್ಲಿ ಆಗಿರುವ ಬದಲಾವಣೆ

ಅ	ಬ
ಶುಭ ಸಮಾಚಾರ	ಸುವಾರ್ತೆ
ಕಂಣೀಲಿ	ಕಣ್ಣಾರೆ
ನಂಮಲ್ಲಿ	ನಮ್ಮಲ್ಲಿ
ನಿಂನನ್ನು	ನಿನ್ನನ್ನು

ಯೀಸಮಾಚಾರ	ಈ ಸಮಾಚಾರ
ಯೆಹೂಡ್ಯೆ	ಯೂದಾಯ
ಹೆರೋಡನ	ಹೆರೋದನ

ಮೇಲ್ಕಂಡ ಪದಗಳನ್ನು ಈ ರೀತಿಯಾಗಿ ವಿವರಿಸಬಹುದು.

* ದೀರ್ಘವಾದ ಶಬ್ದಗಳನ್ನು ಸಂಕ್ಷಿಪ್ತಗೊಳಿಸಿರುವುದು.

ಉದಾ. ಶುಭಸಮಾಚಾರವು–ಸುವಾರ್ತೆ.

* ವಿಸರ್ಗವನ್ನು ಲೋಪಗೊಳಿಸಿ ಸಜಾತಿಯ ಒತ್ತಕ್ಷರ ಬಂದಿರುವುದು.

ಉದಾ. ನಂಮಲ್ಲಿ – ನಮ್ಮಲ್ಲಿ, ನಿಂನನು – ನಿನ್ನನು

* ವ್ಯಂಜನಾಕ್ಷರವನ್ನು ಲೋಪಗೊಳಿಸಿ ಸ್ವರವನ್ನು ತಂದಿರುವುದು.

ಉದಾ. ಯೀಸಮಾಚಾರ – ಈ ಸಮಾಚಾರ

* ವರ್ಗದ ಮೂರನೆಯ ಅಕ್ಷರದ ಬದಲಿಗೆ ಅದೇ ವರ್ಗದ ಮೊದಲ ಅಕ್ಷರವನ್ನು ತರುವುದು.

ಉದಾ. ಹೆರೋಡನ – ಹೆರೋದನ

❖❖❖

ಅಧ್ಯಾಯ : ನಾಲ್ಕು

ಕನ್ನಡ ಕ್ರೈಸ್ತ ಸಂಸ್ಕೃತಿ ಮತ್ತು ಭಾಷಾ ಬಳಕೆ

೪.೧. ಕ್ರೈಸ್ತ ಧಾರ್ಮಿಕ ಆಡಳಿತ ಸ್ವರೂಪ

೪.೧.೧ ರಾಯಚೂರಿನ ವಿವಿಧ ಕ್ರೈಸ್ತ ಸಮುದಾಯಗಳ ಸ್ವರೂಪ

೪.೧.೨ ಚರ್ಚುಗಳು ಹಾಗೂ ಪಾದ್ರಿಗಳು

೪.೧.೩ ಮೆಥೋಡಿಸ್ಟ್ ಚರ್ಚುಗಳಿರುವ ಗ್ರಾಮಗಳು

೪.೧.೪ ಕೆಥೋಲಿಕ್ ಕ್ರೈಸ್ತ ವಿಚಾರಣೆಗಳು ಹಾಗೂ ಕ್ರೈಸ್ತ ಶಿಕ್ಷಣ ಸಂಸ್ಥೆಗಳು

೪.೨. ಸ್ಥಳೀಯ ಸಂಸ್ಕೃತಿ ಮತ್ತು ಕ್ರೈಸ್ತ ಸಂಸ್ಕೃತಿ

೪.೨.೧ ಮತಾಂತರ/ಮಾನಸಾಂತರ

೪.೨.೨ ಕಸುಬುಗಳು

೪.೨.೩ ವ್ಯಕ್ತಿನಾಮಗಳು

೪.೨.೪ ಸ್ಥಳನಾಮಗಳು

೪.೩. ಆಚರಣೆಗಳು ಮತ್ತು ಭಾಷೆ

೪.೩.೧ ಧಾರ್ಮಿಕ ಹಿನ್ನೆಲೆಯ ಆಚರಣೆಗಳು

೪.೩.೨ ಕೌಟುಂಬಿಕ ಹಿನ್ನೆಲೆಯ ಆಚರಣೆಗಳು

೪.೩.೩ ಸಮುದಾಯದ ಹಿನ್ನೆಲೆಯ ಆಚರಣೆಗಳು

ಅಧ್ಯಾಯ: ನಾಲ್ಕು

ಕನ್ನಡ ಕ್ರೈಸ್ತ ಸಂಸ್ಕೃತಿ ಮತ್ತು ಭಾಷಾ ಬಳಕೆ

ಪ್ರಾಚೀನ ಕಾಲದಿಂದಲೂ ಜನರು ಸಂಸ್ಕೃತಿ, ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಪ್ರಸ್ತುತ ಜಾಗತೀಕರಣ ಮತ್ತು ಆಧುನೀಕರಣದ ಪ್ರಭಾವದಿಂದ ಭಾರತೀಯ ಸಂಸ್ಕೃತಿ, ಆಚರಣೆ, ಸಂಪ್ರದಾಯಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಸಂಸ್ಕೃತಿಯೆಂದರೆ ಒಂದು ದೇಶದ, ಧರ್ಮದ ಗುರುತಾಗಿರುವ ಸಾಂಕೇತಿಕ ವ್ಯವಸ್ಥೆ. ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳು ವೈವಿಧ್ಯತೆಯಿಂದ ಕೂಡಿವೆ. ಭಾಷಿಕವಾಗಿ 'ಸಂಸ್ಕೃತಿ' ಶಬ್ದವು 'ಸಂಸ್ಕೃತ' 'ಸಂಸ್ಕಾರ' ಮುಂತಾದ ಶಬ್ದಗಳು ಹುಟ್ಟಿದ ಮೂಲದಿಂದಲೇ ಹುಟ್ಟಿದೆ. ಸಂಸ್ಕೃತ ಅಥವಾ ಸಂಸ್ಕಾರ ಎಂದರೆ ಸುಧಾರಿಸಿದ, ನಯಗೊಳಿಸಿದ, ಪವಿತ್ರಗೊಳಿಸಿದ, ಪರಿಶುದ್ಧಗೊಳಿಸಿದ, ಶ್ರೇಷ್ಠವಾದ ಮುಂತಾದ ಅರ್ಥಗಳಿವೆ. ಈ ಅರ್ಥಗಳ ಹಿನ್ನೆಲೆಯನ್ನು ಗಮನಿಸಿದರೆ, ಇಲ್ಲಿ ಕಚ್ಚಾತನದಿಂದ ಬೇರ್ಪಡಿಸುವ, ಸುಧಾರಿಸುವ, ಶ್ರೇಣೀಕರಿಸುವ ಮತ್ತು ಪವಿತ್ರೀಕರಿಸುವ ಕ್ರಿಯೆಗಳು ಮುಖ್ಯವಾಗಿರುವುದು ತಿಳಿಯುತ್ತದೆ.

'ಸಂಸ್ಕೃತ' ಶಬ್ದವಾದರೂ ಪ್ರಾಕೃತಕ್ಕೆ (ಪ್ರಕೃತಿಗೆ) ಭಿನ್ನವಾದುದು. ವ್ಯಾಕರಣ ಶುದ್ಧವಾದುದು ಎಂಬರ್ಥಗಳನ್ನು ಒಳಗೊಂಡಿದೆ. 'ಸಂಸ್ಕೃತಿ' 'ಸಂಸ್ಕೃತ, 'ಸಂಸ್ಕಾರ' ಶಬ್ದಗಳಲ್ಲಿ ಶುದ್ಧೀಕರಿಸುವ, ಸಂಸ್ಕರಿಸುವ ಕ್ರಿಯೆಯ ಅಂಶವಿರುವುದು ಗಮನಾರ್ಹ. ಮುಂದೊಂದು ಘಟ್ಟದಲ್ಲಿ ಸಂಸ್ಕೃತಿ ಎಂದರೆ 'ಸಮುದಾಯ ಒಂದುರ ಸಮಗ್ರ ಜೀವನ ವಿಧಾನಗಳ ಮೊತ್ತ' ಎಂಬ ಮಾನವಶಾಸ್ತ್ರೀಯ ವ್ಯಾಖ್ಯೆ ಪ್ರವೇಶ ಪಡೆಯಿತು. ಇಲ್ಲಿ ಜೀವನ ವಿಧಾನವೆಂದರೆ, ಯುರೋಪಿಯನರ ದೃಷ್ಟಿಯಲ್ಲಿ ಹಿಂದುಳಿದ ಇನ್ನೂ ನಾಗರೀಕಗೊಳ್ಳದ ಆಫ್ರಿಕಾ, ಏಶಿಯಾ ಖಂಡಗಳ ಸಮುದಾಯಗಳ ಉಡುವ ಬಟ್ಟೆ, ಉಣ್ಣುವ ಊಟ, ಆಡುವ ಮಾತು, ಮಾಡುವ ಆಚರಣೆ, ನಂಬಿದ ನಂಬಿಕೆ ಮುಂತಾಗಿ ಸಮಸ್ತ ಬದುಕಿನ ವಿವರಗಳಾಗಿತ್ತು. ಇದರಲ್ಲಿ ಅವರ ಜ್ಞಾನದ ಕಲ್ಪನೆ ಮತ್ತು ಲೋಕವನ್ನು ನೋಡುವ ಲೋಕದೃಷ್ಟಿಯೂ ಸೇರಿತ್ತು. (ರಹಮತ್ ತರೀಕೆರೆ, ೨೦೧೭, ಸಾಂಸ್ಕೃತಿಕ ಅಧ್ಯಯನ, ಅಭಿನವ, ಬೆಂಗಳೂರು, ಪು. ೧–೭) ಅಂತಹ ಸಂಸ್ಕೃತಿಯನ್ನು ಹೊಂದಿರುವಂತ ಬಹುಧರ್ಮೀಯ ಭಾರತ ದೇಶದಲ್ಲಿ ಕ್ರೈಸ್ತ ಧರ್ಮವು ಒಂದಾಗಿದ್ದು, ಅದರ ಜೀವನ ವಿಧಾನಗಳನ್ನು ಸಾಂಸ್ಕೃತಿಕವಾಗಿ

ಗುರುತಿಸಿ, ಕನ್ನಡ, ಕನ್ನಡ ನುಡಿಗೆ ಹೇಗೆ ಪೂರಕವಾಗಿವೆ ಎಂಬುದನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಗಮನಿಸಲಾಗಿದೆ.

ಸಂಸ್ಕೃತಿ

ಸಂಸ್ಕೃತಿ ಶಬ್ದವು ಇಂಗ್ಲಿಶಿನ 'ಕಲ್ಚರ್' ಎಂಬುದಕ್ಕೆ ಪರ್ಯಾಯವಾಗಿ ಭಾರತದಲ್ಲಿ ಕಳೆದ ಶತಮಾನದಲ್ಲಿ ರೂಪುಗೊಂಡ ಪರ್ಯಾಯ ಪದವಾದರೂ, ಇದು ಪಶ್ಚಿಮದಲ್ಲಿ 'ಕಲ್ಚರ್' ಪಡೆದುಕೊಂಡ ಎಲ್ಲಾ ಬದಲಾವಣೆಗಳನ್ನು ಪಡೆದುಕೊಳ್ಳಲಿಲ್ಲ. ಪಶ್ಚಿಮದಲ್ಲಿ, ಪೈರಿನ ಬೆಳೆವಿಕೆ ಅಥವಾ ಕೀಟಸಾಕರಣೆ, ನೈತಿಕ ಆದರ್ಶಗಳು, ಸಾಹಿತ್ಯ ಚಿತ್ರ ಸಂಗೀತಾದಿ ಕಲೆಗಳ ಲೋಕ, ನಿರ್ದಿಷ್ಟ ಸಮುದಾಯ ವಿಶಿಷ್ಟ ಜೀವನ ವಿವರಗಳು, ಅಧ್ಯಯನಗಳಲ್ಲಿ ಬಹುಶಿಸ್ತೀಯ ಪರಿಶೀಲನೆ ಎಂಬ ಹಂತಗಳಲ್ಲಿ ಇದು ಅರ್ಥ ಪಡೆದುಕೊಂಡಿತು. ಭಾರತದಲ್ಲಿ ಸಂಸ್ಕೃತಿ ಶಬ್ದವು 'ಬೆಳೆವಿಕೆ' ಎನ್ನುವ ಅರ್ಥವನ್ನು ಕಾಣಲೇ ಇಲ್ಲ. (ಅದೇ ಪು. ೯)

ಕನ್ನಡದಲ್ಲಿ 'ಸಂಸ್ಕೃತಿ' ಶಬ್ದದ ಬಳಕೆಯು ಪರಿಷ್ಕರಣವಾದಿ ಮತ್ತು ನೈತಿಕ ಆದರ್ಶವಾದಿ ಅರ್ಥದ ಘಟ್ಟದಿಂದ ಶುರುವಾಗುತ್ತದೆ. ಇದಕ್ಕೆ ಕರ್ನಾಟಕದ ಸಾಮಾಜಿಕ ಚರಿತ್ರೆಯಲ್ಲಿ ಕಾರಣವಿದೆ. ಆಂಗ್ಲ ಶಿಕ್ಷಣ ವ್ಯವಸ್ಥೆಯಲ್ಲಿ ಮೊದಲ ಬಾರಿಗೆ ಪ್ರವೇಶಿಸಿ ಸರ್ಕಾರಿ ಉದ್ಯೋಗಗಳನ್ನು ಪಡೆದು, ಜನಾಭಿಪ್ರಾಯ ರೂಪಿಸುವ ಅವಕಾಶ ಪಡೆದು ಮೇಲ್ಜಾತಿ–ಮೇಲ್ವರ್ಗಗಳು, ಸಂಸ್ಕೃತಿಗೆ ಈ ಅರ್ಥವನ್ನು ಒದಗಿಸಿದವು. ಭಾಷಿಕವಾಗಿ ಒಂದು ಶಬ್ದವು ತನ್ನ ಮೂಲದಲ್ಲಿ ಪಡೆದುಕೊಂಡಿದ್ದ ಅರ್ಥದಲ್ಲಿಯೇ ಮುಂದೆಯೂ ಬಳಕೆಯಾಗಬೇಕೆಂದಿಲ್ಲ. ಶಬ್ದಕ್ಕಿರುವ ಅರ್ಥಗಳು ನಿರಂತರ ಬದಲುತ್ತಿರುತ್ತವೆ ಎನ್ನುವುದು ಭಾಷಾವಿಜ್ಞಾನ ಹೇಳುವ ಸರಳ ಸತ್ಯ. ಪ್ರಶ್ನೆಯೆಂದರೆ, ಈ ಅರ್ಥ ಪರಿವರ್ತನೆ ಯಾಕಾಗುತ್ತದೆ? ಒಂದೊಮ್ಮೆ ಹಳೆಯ ಅರ್ಥಗಳ ಜತೆಗೆ ಹೊಸ ಅರ್ಥಗಳು ಬಂದು ಸೇರುವುದಾದರೆ ಇದಕ್ಕೆ ಕಾರಣಗಳೇನು? ಈ ಪ್ರಶ್ನೆಗಳಿಗೆ ಉತ್ತ ಹುಡುಕುತ್ತ ಹೋದರೆ, ಅರ್ಥ ಪರಿವರ್ತನೆಯ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ ಕೆಲವು ಪಲ್ಲಟಗಳು ನಡೆದಿರುವುದು ಗೊತ್ತಾಗುತ್ತದೆ. ಈ ಪಲ್ಲಟಗಳು ಜನರ ಆಲೋಚನಕ್ರಮದ ಮೆಲೆ ಪ್ರಭಾವ ಬೀರುವುದು ಹಾಗೂ ಇದರ ಪರಿಣಾಮವಾಗಿ ಶಬ್ದವೊಂದಕ್ಕೆ ಹೊಸ ಅರ್ಥಗಳು ಬಂದಿರುವುದು ಸ್ಪಷ್ಟವಾಗುತ್ತದೆ. (ಅದೇ ಪು. ೯)

ಸಂಸ್ಕೃತಿ ಎನ್ನುವುದು ಏಕರೂಪಿಯಲ್ಲ ಅದೊಂದು ಬಹುರೂಪಿ. ಹಲವು ಆಯಾಮಗಳನ್ನು ಹೊಂದಿರುತ್ತದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಜನರ ಆಚರಣೆಯಲ್ಲಿ ಪಲ್ಲಟಗೊಳ್ಳುತ್ತಿರುತ್ತವೆ. ಸಂಸ್ಕೃತಿ ಎನ್ನುವುದು ಒಂದು ಸಮುದಾಯ ಆಲೋಚಿಸುವ ಮತ್ತು ಬದುಕುವ ಸಮಸ್ತ ಆಯಾಮಗಳನ್ನು ಒಳಗೊಳ್ಳುವ ಒಂದು ಪರಿಭಾಷೆ. 'ಸಮುದಾಯ' ಎಂದಾಗ ಒಂದು ಗುಂಪಲ್ಲ. ಹಲವಾರು ಗುಂಪುಗಳಿರುತ್ತವೆ. ಈ ಎಲ್ಲಾ ಗುಂಪುಗಳ ನಂಬಿಕೆ ಆಚರಣೆಗಳೂ ಒಟ್ಟು ಸೇರಿಯೇ ಅದರ ಸಂಸ್ಕೃತಿ. ಈ ಹಿನ್ನೆಲೆಯಲ್ಲಿ ಇಡೀ ನಾಡಿಗೆ ಏಕರೂಪಿಯಾದ ಸಂಸ್ಕೃತಿ ಇರುವುದಿಲ್ಲ. ಅದರೊಳಗೆ ಭೌಗೋಳಿಕ, ಪ್ರಾದೇಶಿಕ, ಜಾತೀಯ, ಧಾರ್ಮಿಕ, ಬುಡಕಟ್ಟಿನ

ರೂಪಗಳಿರುತ್ತವೆ. ಭಾರತದಂತಹ ದೇಶದಲ್ಲಿ ಇದನ್ನು ಸಂಸ್ಕೃತಿಯ ಬಹುರೂಪಿ ಗುಣ ಎನ್ನಬಹುದು. ಈ ಬಹುರೂಪಿ ಸಂಸ್ಕೃತಿಗಳ ಒಳಗೆ ಬಹುಕಾಲದಿಂದಲೂ ಸಂಘರ್ಷ ಮತ್ತು ಕೊಡುಕೊಳು ನಡೆಯುತ್ತ ಬಂದಿರುತ್ತದೆ. ಈ ಪ್ರಕ್ರಿಯೆ ನಾಡಿನ ಹೊರಗಿನ ಸಂಸ್ಕೃತಿಗಳ ಜತೆಗೂ ನಡೆದಿರುತ್ತದೆ. ಈ ಸಂಘರ್ಷ ಮತ್ತು ಕೊಡುಕೊಳುಗಳಿಗೆ ಚಾರಿತ್ರಿಕ ಕಾರಣಗಳಿರುತ್ತವೆ. ಮುಖ್ಯವಾಗಿ ಸಾಮಾಜಿಕ, ರಾಜಕೀಯ, ಆರ್ಥಿಕವಾದ ಚಲನೆಗಳು ಇದರ ಹಿಂದೆ ನಿರತವಾಗಿರುತ್ತವೆ. ಆದ್ದರಿಂದ 'ಶುದ್ಧ', 'ಮೂಲ' ಸಂಸ್ಕೃತಿ ಎಂಬುದು ಇರುವುದಿಲ್ಲ. ಅದರಲ್ಲೂ ಭಾರತೀಯ ಸಮಾಜದಲ್ಲಿ ಸಂಸ್ಕೃತಿಯು ಸದಾ ಸಂಕರರೂಪಿ. ಈ ಸಂಕರವು ಸಾಂಸ್ಕೃತಿಕ ಬಹುತ್ವಕ್ಕೂ ಹೊಸ ರೂಪಗಳ ಹುಟ್ಟಿಗೂ ಕಾರಣವಾಗಿದೆ. (ಅದೇ ಪು. ೧೦,೧೧)

ಸಂಸ್ಕೃತಿಯನ್ನು ನೈತಿಕ ನೆಲೆಯಿಂದ ಕೆಟ್ಟ-ಒಳ್ಳೆಯ, ವಿಕಾಸದ ದೃಷ್ಟಿಯಿಂದ ಹಿಂದುಳಿದ-ಮುಂದುವರೆದ, ಶ್ರೇಣೀಕರದ ನೆಲೆಯಿಂದ ಮೇಲು ಕೀಳು ಎಂದು ಅಳೆಯಲು ಸಾಧ್ಯವಿಲ್ಲ. ದೇಸಿ ಸಂಸ್ಕೃತಿಯಾಗಿರಬಹುದು ಹೊರನಾಡಿನಿಂದ ಬಂದಿರುವ ಸಂಸ್ಕೃತಿಯಾಗಿರಬಹುದು ಅವುಗಳು ತಮ್ಮದೇ ಆದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಲನ್ನು ಒಳಗೊಂಡಿರುತ್ತವೆ. ತನ್ನ ನೆಲಮೂಲ ಸಂಸ್ಕೃತಿಗೆ ಅನುಗುಣವಾಗಿ ಅಥವಾ ಭಿನ್ನವಾಗಿ ಹೊರನಾಡಿನ ಸಂಸ್ಕೃತಿ ರೂಪಗೊಳ್ಳುತ್ತಿರುತ್ತದೆ. ಸಂಸ್ಕೃತಿ ಎನ್ನುವುದು ಸದಾ ಚಲನಶೀಲವಾದದ್ದು. ಕ್ರೈಸ್ತ ಧರ್ಮದ ಸಂಸ್ಕೃತಿಯೂ ಕೂಡ ಭಾರತಕ್ಕೆ ಅದು ಹೊರನಾಡಿನ ಸಂಸ್ಕೃತಿ. ಭಾರತೀಯ ಸಂಸ್ಕೃತಿಯಲ್ಲಿ ಕ್ರೈಸ್ತ ಧರ್ಮದ ಸಂಸ್ಕೃತಿಯೂ ಒಂದು ಭಾಗವಾಗಿದೆ. ಏಕೆಂದರೆ ಆ ಸಮುದಾಯದ ಜನರು ಕೂಡ ಭಾರತದಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಭಾರತದ ಕೆಲವು ಸಮುದಾಯಗಳು ಈ ಧರ್ಮವನ್ನು ಒಪ್ಪಿಕೊಂಡು, ಆ ಸಂಸ್ಕೃತಿಯನ್ನು ತಮ್ಮ ಬದುಕಿನ ಕ್ರಮವಾಗಿ ಅಳವಡಿಸಿಕೊಂಡು ಜೀವಿಸುತ್ತಿದ್ದಾರೆ. ಇಲ್ಲಿನ ಜನರು ಭಾರತದ ಸಂಸ್ಕೃತಿ ಮತ್ತು ಹೊರದೇಶದಿಂದ ಬಂದ ಕ್ರೈಸ್ತ ಧರ್ಮದ ಸಂಸ್ಕೃತಿ ಈ ಎರಡು ಸಂಸ್ಕೃತಿಗಳ ನಡುವೆ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡಿದ್ದಾರೆ. ಈ ಎರಡು ಸಂಸ್ಕೃತಿಗಳ ನಡುವೆ ಬದುಕುತ್ತಿರುವ ಜನರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಿಕವಾಗಿರುವ ಭಿನ್ನತೆ ಮತ್ತು ವೈವಿಧ್ಯತೆಗಳನ್ನು ಪೂರಕ ಆಕರಗಳೊಂದಿಗೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಕ್ರೈಸ್ತ ಸಂಸ್ಕೃತಿ

ಸಾಮಾನ್ಯವಾಗಿ ಯಾವುದೇ ಧರ್ಮವಾಗಲಿ ಅದು ತನ್ನದೇ ಆದ ಇತಿಹಾಸವನ್ನು ಹೊಂದಿರುತ್ತದೆ, ನಮ್ಮ ದೇಶವೂ ಹೊರತಾಗಿಲ್ಲ. ದೇಶದಲ್ಲಿ ಹಲವಾರು ಧರ್ಮಗಳು ಇದ್ದು ಅವೆಲ್ಲವೂ ಒಂದೊಂದು ಚರಿತ್ರೆಯನ್ನು ಹೊಂದಿವೆ. ಹಾಗೆಯೇ ಕ್ರೈಸ್ತ ಧರ್ಮವೂ ಸಹಿತ ಒಂದು ಇತಿಹಾಸವನ್ನು ಹೊಂದಿದೆ ಎಂದು ಹೇಳಲಾಗಿದೆ. ಅದರಲ್ಲೂ ಕರ್ನಾಟಕದಲ್ಲಿ ೫-೬ನೇ ಶತಮಾನದಲ್ಲಿಯೇ ಕರ್ನಾಟಕಕ್ಕೆ ಕ್ರೈಸ್ತರು ಆಗಮಿಸಿದರು ಎಂದು ಪುರಾಣಗಳಿವೆ. ಆದರೆ ಅಧಿಕೃತವಾಗಿ ೧೪ನೇ ಶತಮಾನದಲ್ಲಿ ಕಂಡುಬಂದರು ಕ್ರಿ.ಶ. ೧೩೨೦ರಲ್ಲಿ ಡೊಮಿನಿಕ್, ಪಂಥದವರು ಮೈಸೂರು ಮಲಬಾರ ಪ್ರದೇಶಗಳಲ್ಲಿ

ಕಾಣಿಸಿಕೊಳ್ಳುತ್ತಾರೆ. ತರುವಾಯ ಫ್ರಾನ್ಸಿಸ್ಕರು, ಅಗುಸ್ಟಿಯನ್ನರು ಮುಂತಾದ ಮಿಷನ್‌ಗಳು, ಸಭೆಗಳು ಮತ್ತು ಪಂಥಗಳಾಗಿ ಸುಮಾರು ೧೯ನೇ ಶತಮಾನದವರೆಗೆ ಸಕ್ರಿಯವಾಗಿ ಕಂಡುಬರುವರು. ಅಂದರೆ ಕರ್ನಾಟಕದ ಪ್ರದೇಶಗಳಾದ ಬೆಂಗಳೂರು, ಮಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಹೊನ್ನಾವರ, ಭಟ್ಕಳ, ಬಾರಕೂರು, ತುಮಕೂರು, ರಾಯಚೂರು, ಮೈಸೂರು, ಬೆಳಗಾವಿ, ಚಿಕ್ಕಬಳ್ಳಾಪುರ ಮುಂತಾದ ಕಡೆ ಪಸರಿಸಿರುವುದನ್ನು ಚರಿತ್ರೆಯಿಂದ ತಿಳಿಯಲಾಗಿದೆ.

ಇನ್ನಿತರ ಪಂಥಗಳಾದ ಬಾಸೆಲ್ ಇವಾಂಜಲಿಕನ ಮಿಷನ್ ೧೮೩೪ ಅಕ್ಟೋಬರ್ ೩೦ರಂದು ಮಂಗಳೂರಲ್ಲಿ ಜನ್ಮ ತಾಳಿತು. ಇದರ ನಾಯಕರಾಗಿ ಗುಂಡರ್ಟನ್ ಮತ್ತು ಹರ್ಮನ್ ಮೋಗ್ಲಿಂಗರು ಬರುತ್ತಾರೆ. ಈ ಸಂಸ್ಥೆಯು ಸಹಿತ ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿಯನ್ನು ಮಾಡಿದೆ. ಸುಮಾರು ೧೫೦ ವರ್ಷಗಳ ಕಾಲ ಕಾರ್ಯ ನಿರ್ವಹಿಸಿದೆ ಎನ್ನಲಾಗಿದೆ. ಇನ್ನೊಂದು ಕ್ಯಾನರೀಸ್ ಇವಾಂಜೆಲಿಕನ್ ಮಿಷನ್ ೧೯೧೮ರಲ್ಲಿ ರೂಪ ತಾಳಿತು. ಅಲ್ಲದೆ ಆಂಗ್ಲಿಕನ್ ಮಿಷನ್‌ಗಳೆಂದು ಬೆಂಗಳೂರಲ್ಲಿ ೧೮೩೭ರಲ್ಲಿ, ಬಳ್ಳಾರಿಯಲ್ಲಿ ೧೮೧೧-೧೨, ಕೋಲಾರದಲ್ಲಿ ೧೮೮೯ರಲ್ಲಿ ಸ್ಥಾಪನೆಯಾದವು. ಹಾಗೆಯೇ ಮೆಥೋಡಿಸ್ಟ್ ಎಪಿಸ್ಕೋಪ್ ಮಿಷನ್ ಸಹಿತ ಬೆಂಗಳೂರು ಮತ್ತು ಬಳ್ಳಾರಿಯಲ್ಲಿ ೧೮೭೬ರಲ್ಲಿಯೇ ಆರಂಭವಾಯಿತು. ಈ ಪಂಥದ ಅಧೀನದಲ್ಲಿಯೇ ದಕ್ಷಿಣ ಭಾರತ ಕಾನ್ಫರೆನ್ಸ್ ಎಂದು ಅಧಿಕೃತವಾಗಿ ೧೮೭೬ರಲ್ಲಿ ಸ್ಥಾಪಿಸಿ ಸೇವೆಯ ಅಂಗವಾಗಿ ಜಾಕೋಬ ಎನ್ನುವವರನ್ನು ಗುಲಬರ್ಗಾಕ್ಕೆ, ಎರ್ನೆಸ್ಟರ್ಗರ್ ಎನ್ನುವವರನ್ನು ರಾಯಚೂರಿಗೆ ಸೇವಕರಾಗಿ ನೇಮಿಸಲಾಯಿತು. ಈ ಸಂದರ್ಭದಲ್ಲಿ ಅಂದರೆ ೦೧ ಜನವರಿ ೧೮೯೨ರಲ್ಲಿ ಮೊಟ್ಟ ಮೊದಲಿಗೆ ಮಾದಿಗ ಮುತ್ತಯ್ಯ ಕ್ರಿಸ್ತ ದೀಕ್ಷೆ ಪಡೆದು ಆ ಧರ್ಮದಲ್ಲಿ ಸೇರ್ಪಡೆಯಾದನು ಎಂದು ಹೇಳಲಾಗಿದೆ.

ಇನ್ನು ಇತರೆ ಪಂಥಗಳಲ್ಲಿ ಬರುವ ಪ್ರಮುಖ ಪಂಥವೆಂದರೆ ಪೆಂತೆಕೋಸ್ಟ್ ಸಭೆ ಎಂಬುದು ಇದು ೧೮೯೪ರಲ್ಲಿ ಮಂಗಳೂರಿನಲ್ಲಿಯೇ ಜನ್ಮ ತಾಳಿತು. ಮುಂದೆ ಅನೇಕ ಶಾಖೆಗಳಾಗಿ ಕವಲೊಡೆಯಿತು. ಅಂದರೆ ಸಿಲೋನ್ ಪೆಂತೆಕೋಸ್ಟ್ ಮಿಷನಾಗಿ ಮಂಗಳೂರಿನ ಅತ್ತಾವರ, ನಂದಿಗುಡ್ಡೆ ಮತ್ತು ಉಡುಪಿಯಲ್ಲಿ ಕ್ರಮವಾಗಿ ೧೯೪೫-೧೯೫೨ರಲ್ಲಿ ಆರಂಭವಾದವು. 'ಪೆಂತೆಕೋಸ್ತ ಸಭೆ' ಎಂದರೆ ಯಹೂದ್ಯರ ಹಬ್ಬ (ಮಿಕಾ ೨೩: ೧೪-೧೬) ಎನ್ನಲಾಗುತ್ತದೆ.

ಕನ್ನಡ ಕ್ರೈಸ್ತ ಸಂಸ್ಕೃತಿ

೧೪೯೮ರಲ್ಲಿ ವಾಸ್ಕೋಡಿಗಾಮ ಭಾರತಕ್ಕೆ ಮಾರ್ಗವನ್ನು ಕಂಡುಹಿಡಿದ ನಂತರ ಅನೇಕ ಕ್ರೈಸ್ತ ವಸಾಹತುಶಾಹಿಗಳು ಆಗಮಿಸಿದರು. ಅವರುಗಳಲ್ಲಿ ಪ್ರಮುಖವಾಗಿ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲಿಷರು ಎಂದು ತಿಳಿಯುತ್ತದೆ. ಈ ವಸಾಹತುಶಾಹಿಗಳು ಆರಂಭದಲ್ಲಿ ಗೋವೆಯಲ್ಲಿ ನೆಲೆಯೂರಿದ್ದರು ಆ ತರುವಾಯ ನಿಧಾನವಾಗಿ ಅಂದಿನ ಭಾರತದ ಮೊಟ್ಟ ಮೊದಲ ಹಿಂದೂ ಸಾಮ್ರಾಜ್ಯವೆನಿಸಿಕೊಂಡಿರುವ ವಿಜಯಗರ ಅರಸರು ಪ್ರಮುಖವಾಗಿ ತುಳುವ ವಂಶದ ನರಸಿಂಹ ಮತ್ತು ಪ್ರಸಿದ್ಧ ದೊರೆ ಕೃಷ್ಣದೇವರಾಯರ ಸಹಾಯ ಸಹಕಾರದಿಂದ ಮೈತ್ರಿಯಿಂದ

ಕರ್ನಾಟಕಕ್ಕೆ ಆಗಮಿಸಿದರು. ಕರಾವಳಿ ಕರ್ನಾಟಕದ ಪ್ರದೇಶಗಳಾದ ಭಟ್ಕಳ, ಹೊನ್ನಾವರ, ಬಾರಕೂರು, ಮಂಗಳೂರುಗಳಲ್ಲಿ ಕಾಣಿಸಿಕೊಂಡರು.

ಸುಮಾರು ೧೫೦೦-೧೭೬೩ರ ವರೆಗೆ ೩ ಶತಮಾನಗಳ ಕಾಲ ಸಕ್ರೀಯವಾಗಿ ಕಾರ್ಯನಿರ್ವಹಿಸಿದರು. ಪೋರ್ಚುಗೀಸರು ಮತ್ತು ಫ್ರೆಂಚರು ಕೆಥೋಲಿಕ್ ಪಂಥದವರಾಗಿದ್ದು ಡಚ್ಚರು ಮತ್ತು ಇಂಗ್ಲೀಷರು ಪ್ರೊಟೆಸ್ಟಂಟ್ ಪಂಥದವರಾಗಿದ್ದರು. ಈ ಎರಡೂ ಪಂಗಡಗಳು ಸಕ್ರೀಯವಾಗಿದ್ದವು. ೧೫೦೦ರಿಂದ ೧೫೬೫ರವರೆಗೆ ವಿಜಯನಗರ ಅರಸರು ಮತ್ತು ೧೫೬೫ ರಿಂದ ೧೭೬೩ರವರೆಗೆ ಕೆಳದಿಯ ಅರಸರಿಂದ ಸಹಾಯ ಪಡೆದು ಧಾರ್ಮಿಕ ವಿಷಯಗಳನ್ನು ಹರಡಿದರು. ದೇಶಿಯರು ಅನ್ಯ ದೇಶಿಯರಿಗೆ ಸಹಾಯ ಮಾಡುವಲ್ಲಿ ಇರುವ ಉದ್ದೇಶವೇನೆಂದರೆ ವಿಜಯನಗರಕ್ಕೆ ಪ್ರತಿಯಾಗಿ ಬಿಜಾಪುರದ ಸುಲ್ತಾನರು (ಮುಸ್ಲಿಂ) ದಂಗೆಯನ್ನು ಹೂಡಿದ್ದರು. ಈ ಕಾರಣವೇ ಆಂಗ್ಲರಿಗೆ ಅಥವಾ ಪಾಶ್ಚಿಮಾತ್ಯರಿಗೆ ವಿಜಯಗರ ಮತ್ತು ಕೆಳದಿಯ ಅರಸರು ಬರಮಾಡಿಕೊಂಡರು ಎನ್ನಬಹುದು. ಆದರೂ ಸಹಿತ ಸುಲ್ತಾನರಿಗೆ ಮತ್ತು ಹಿಂದುಗಳ ವಿಜಯನಗರ ಸಾಮ್ರಾಜ್ಯದ ಅರಸರಿಗೆ ಯುದ್ಧವೇ ಆಯಿತು. ಅದನ್ನೇ 'ರಾಯಚೂರು ಯುದ್ಧ' ಎಂದು ಕರೆದರು ದೋ-ಆಬ್ ಪ್ರದೇಶವಾಗಿರುವ ರಾಯಚೂರಲ್ಲಿ ಯುದ್ಧದ ಸ್ಥಳವನ್ನಾಗಿ ಮಾಡಿದ್ದರಿಂದ ಅದನ್ನು ರಾಯಚೂರು ಯುದ್ಧ ಎಂದು ಕರೆಯಲಾಯಿತು. ಹೀಗೆ ಅಂದಿನ ಕರಾವಳಿ ಕ್ರೈಸ್ತರು ಇಂದಿಗೂ ಎಲ್ಲಾ ಕಡೆ ಪಸರಿಸಿದ್ದಾರೆ ಎಂದು ಕಂಡುಕೊಳ್ಳಲಾಗಿದೆ.

ರಾಯಚೂರು ಕನ್ನಡ ಕ್ರೈಸ್ತ ಸಂಸ್ಕೃತಿ

ಅಧ್ಯಯನದಲ್ಲಿ ಸಾಂಸ್ಕೃತಿಕವಾಗಿ ರಾಯಚೂರನ್ನು ಮಿತಿ ಮಾಡಿಕೊಂಡಿದ್ದರಿಂದ ಈ ರಾಯಚೂರು ಕ್ರೈಸ್ತ ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ಈ ಜಿಲ್ಲೆಯೂ ಸಹಿತ ದೀರ್ಘವಾದ ಚರಿತ್ರೆಯನ್ನು ಹೊಂದಿದೆ ಎಂದು ಗೊತ್ತಾಯಿತು. ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ ೭ ತಾಲೂಕು ಕೇಂದ್ರಗಳು ಇದ್ದು ಎಲ್ಲವೂ ಸಹಿತ ಕ್ರೈಸ್ತ ದೇವಾಲಯಗಳನ್ನು ಹೊಂದಿವೆ ಅಲ್ಲದೆ ಚಾರಿತ್ರಿಕತೆಯನ್ನು ತೋರ್ಪಡಿಸುತ್ತಿವೆ. ವಸಾಹತುಶಾಹಿತ್ವ ವಾಸ್ಕೋಡಿಗಾಮನಿಂದ ಆರಂಭವಾಗುತ್ತದೆ. ತರುವಾಯ ಆಗಮಿಸಿರುವ ಪೋರ್ಚುಗೀಸರು ೧೫-೧೬ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸಹಕಾರದೊಂದಿಗೆ ನಮ್ಮ ನಾಡಿನಲ್ಲಿ ವಿಶೇಷವಾಗಿ ಬಲವನ್ನು ಹೊಂದುತ್ತಾರೆ. ಅದರಲ್ಲಿ ವಿಶೇಷವಾಗಿ ರಾಯಚೂರಿನಲ್ಲಿ ಕ್ರೈಸ್ತತ್ವ ಆರಂಭಿಸುವರು. ಕ್ರಿ.ಶ. ೧೫೮೨ರಲ್ಲಿಯೇ ರಾಯಚೂರಿನ ಸ್ಟೇಶನ್ ರೋಡ್‌ನಲ್ಲಿ ಸೆಂಟ್ ಫ್ರಾನ್ಸಿಸ್ ಝೇವಿಯರ್ ಚರ್ಚ್ ಸ್ಥಾಪನೆ ಮಾಡಿದ್ದಾರೆ. ಅದಕ್ಕಿಂತ ಮುಂಚಿತವಾಗಿಯೇ ಅಂದರೆ ಕ್ರಿ.ಶ. ೧೫೦೨ರಲ್ಲಿಯೇ ಸ್ಥಾಪನೆಯಾಗಿ ದಕ್ಷಿಣ ಭಾರತದ ಪ್ರಥಮ ಚರ್ಚ್ ಎಂದು ಗುರುತಿಸಿಕೊಂಡ ಮುದಗಲ್ ಚರ್ಚ್ ಇತಿಹಾಸ ಪ್ರಸಿದ್ಧವಾಗಿದೆ. ಇದರಿಂದ ಜಿಲ್ಲೆಯು ದೀರ್ಘವಾದ ಇತಿಹಾಸವನ್ನು ಹೊಂದಿದೆ ಎನ್ನಬಹುದು. ಅಂದಿನಿಂದ ಇಂದಿನವರೆಗೂ ರಾಯಚೂರು ಜಿಲ್ಲೆಯಲ್ಲಿ ಅನೇಕ ಹೆಸರುಗಳಲ್ಲಿ ಚರ್ಚ್‌ಗಳು ಸ್ಥಾಪನೆಯಾಗಿವೆ. ಅವುಗಳು ಹೀಗಿವೆ:

* ಮುದಗಲ್ ಸ್ಯಾಕ್ರೇಡ್ ಹಾರ್ಟ ಚರ್ಚ್ ೧೫೫೦೨
* ರಾಯಚೂರು ೧೫೮೨
* ಕವಿತಾಳ (ಮಾನ್ವಿ) ೧೯೪೨
* ಜವಳಗೆರಾ (ಸಿಂಧನೂರು) ೧೯೪೭
* ಮಾನವಿ (ಮೇರಿ) ೧೯೪೯
* ಹಟ್ಟಿ (ಲಿಂಗಸ್ಗೂರು) ೧೯೬೦
* ಮಸ್ಕಿ ೧೯೬೯
* ಸಿರವಾರ (ಮಾನ್ವಿ) ೧೯೭೯
* ಸಿಂಧನೂರು ೧೯೮೪
* ಶಕ್ತಿನಗರ (ರಾಯಚೂರು) ೧೯೮೪

ಹೀಗೆ ಇನ್ನು ಅನೇಕ ಚರ್ಚ್‌ಗಳು ಇಡೀ ರಾಯಚೂರು ಜಿಲ್ಲೆಯಾದ್ಯಂತ ಸುಮಾರು ಎಲ್ಲ ಪಂಥಗಳು ಸೇರಿ ೨೦೦ ರಿಂದ ೩೦೦ ರವರೆಗೆ ದೇವಾಲಯಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತವೆ.

ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳು ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟಿರುತ್ತಾರೆ. ಆದರೆ ಆ ನಂಬಿಕೆಯಲ್ಲೂ ಭಿನ್ನತೆ ಕಂಡುಬರುತ್ತದೆ. ಸಾಂಪ್ರದಾಯಿಕ ಕ್ರೈಸ್ತ ಧರ್ಮ, ಭಾಷೆ, ಪ್ರಾಂತ ಮತ್ತು ಜನಾಂಗಗಳ ಆಧಾರದಲ್ಲಿ ಹಲವಾರು ಚರ್ಚ್‌ಗಳು ಮತ್ತು ಸಂಪ್ರದಾಯಗಳ ನಡುವೆ ಹಂಚಿ ಹೋಗಿತ್ತು. ಅಲ್ಲದೆ ಧಾರ್ಮಿಕ ಸಿದ್ಧಾಂತಗಳು, ಚರ್ಚಿನ ಅಧಿಕಾರ ವ್ಯಾಪ್ತಿ, ಜೀಸಸ್‌ರ ಬಗ್ಗೆ ಅಭಿಪ್ರಾಯಗಳು, ಪೋಪರ ಅಧಿಕಾರ, ಪ್ರವಾದಿಗಳ ವಂಶಾವಳಿ ಮುಂತಾದ ವಿಷಯಗಳಲ್ಲಿ ವಿಭಿನ್ನ ಗುಂಪುಗಳ ನಡುವೆ ಭಿನ್ನಾಭಿಪ್ರಾಯಗಳು ಹುಟ್ಟಿದ ಕಾರಣದಿಂದ ಪಂಗಡಗಳು ಪಂಥಗಳ ಸಂಖ್ಯೆ ಬೆಳೆಯುತ್ತಲೇ ಹೋಯಿತು. ಕ್ರೈಸ್ತ ಧರ್ಮ ವಿಭಜನೆಯಾದದ್ದು ಎರಡು ಬಾರಿ ಮೊದಲ ಸಲ ವಿಭಜನೆ ಆಗಿದ್ದು ಬೈಜಂಟೈನ್ ಚರ್ಚ್ (ಪೌರಸ್ಥ್ಯ) ಮತ್ತು ರೋಮನ್ (ಪಾಶ್ಚಾತ್ಯ)ಗಳ ನಡುವೆ ವಿಭಜನೆಯಾಯಿತು. ನಂತರ ೧೬ನೇ ಶತಮಾನದಲ್ಲಿ ಹುಟ್ಟಿಕೊಂಡ ಪ್ರೊಟೆಸ್ಟೆಂಟ್ ಅಭಿಯಾನ ರೋಮನ್ ಚರ್ಚ್(ಪಂಥ)ನ್ನು ಒಡೆದು ಹಾಕಿತು.

ಹೀಗೆ ಧರ್ಮ ಕಾಲಾನುಗತವಾಗಿ ಪಾಶ್ಚಾತ್ಯ ಕ್ರೈಸ್ತರಲ್ಲಿ ೧. ಕೆಥೋಲಿಕ್, ೨. ಪ್ರೊಟೆಸ್ಟೆಂಟ್ ಎಂದು ಪ್ರಮುಖವಾಗಿ ಎರಡು ಪಂಗಡಗಳು ರಚನೆಯಾದವು. ನಂತರ ಪ್ರೊಟೆಸ್ಟೆಂಟ್‌ರಲ್ಲಿಯೇ ಪುನಃ ಮೆಥೋಡಿಸ್ಟ್ ಪೆಂತೆಕೋಸ್ಟ್ ಎಂಬುವ ಪಂಥಗಳು ರೂಪ ತಾಳಿದವು. ಅಲ್ಲದೆ ಇನ್ನು ಕೆಲವು ನವೀನ ಪಂಗಡಗಳು ಕಾಣಿಸಿಕೊಂಡವು ಎಂದು ಚರಿತ್ರೆಯಿಂದ ತಿಳಿಯಲಾಯಿತು.

೪.೧. ಕ್ರೈಸ್ತ ಧಾರ್ಮಿಕ ಆಡಳಿತ ಸ್ವರೂಪ

ಸಾಮಾನ್ಯವಾಗಿ ಯಾವುದೇ ಒಂದು ಸಂಘ ಸಂಸ್ಥೆಗಳನ್ನು ಅಥವಾ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡಾಗ ಅವುಗಳು ಅಭಿವೃದ್ಧಿಯಾಗಬೇಕು ಇಲ್ಲವೇ ಬೆಳವಣಿಗೆ ಹೊಂದಬೇಕು ಎಂದರೆ ಅವುಗಳ ಅಂಗವಾಗಿ ಒಂದು ಸಮಿತಿ ಇಲ್ಲವೆ ಮಂಡಳಿಯನ್ನು ರೂಪಿಸುತ್ತಾರೆ. ಅದರ ಮೂರ್ತ ಸ್ವರೂಪವೇ ಆಡಳಿತ ವ್ಯವಸ್ಥೆ ಎಂದು ಕರೆಯಬಹುದಾಗಿದೆ. ಈ ಆಡಳಿತ ಅಥವಾ ನಿಯಂತ್ರಣ ಎಂಬುದು ಎಲ್ಲಾ ವಿಚಾರಗಳಿಗೆ ಸಂಬಂಧಿಸಿರುತ್ತದೆ. ಯಾವುದೇ ಜಾತಿ, ಜನಾಂಗ, ಸಂಘ ಸಂಸ್ಥೆ ಹಾಗೂ ಕುಲ ಧರ್ಮ ಎನ್ನದೇ ಎಲ್ಲಾ ವಿಷಯಗಳಲ್ಲಿಯೂ ಆಡಳಿತ ಎಂಬುದು ನಿರ್ದಿಷ್ಟವಾಗಿ ಕಂಡುಬರುತ್ತದೆ. ಈ ಆಡಳಿತವು ಭಾರತ ದೇಶದ ಎಲ್ಲಾ ಧರ್ಮಗಳಲ್ಲಿ ಒಂದಾದ ಕ್ರೈಸ್ತ ಧರ್ಮದಲ್ಲಿಯೂ ಕಾರ್ಯನಿರ್ವಹಿಸುತ್ತದೆ. ಇದನ್ನು ಕ್ರೈಸ್ತ ಧಾರ್ಮಿಕ ಆಡಳಿತ ಎನ್ನಬಹುದಾಗಿದೆ. ಇದು ಎಲ್ಲಾ ಧರ್ಮಗಳಿಗೂ ಅವಶ್ಯಕವಾಗಿರುತ್ತದೆ ಎಂದು ಹೇಳಬಹುದಾಗಿದೆ.

೪.೧.೧. ರಾಯಚೂರಿನ ವಿವಿಧ ಕ್ರೈಸ್ತ ಸಮುದಾಯಗಳ ಸ್ವರೂಪ

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯಲ್ಲಿಯು ಕ್ರೈಸ್ತ ಸಮುದಾಯಗಳು ಸಕ್ರಿಯವಾಗಿವೆ. ಈ ಸಮುದಾಯದಲ್ಲಿಯೂ ಆಡಳಿತ ಎನ್ನುವುದು ಅಷ್ಟೇ ಅವಶ್ಯಕವಾಗಿ ಕಂಡುಬರುತ್ತದೆ. ಈ ಆಡಳಿತದ ಅಡಿಯಲ್ಲಿಯೇ ರಾಯಚೂರು ಜಿಲ್ಲೆಯಲ್ಲಿ ನಾನಾ ಕ್ರೈಸ್ತ ಸಮುದಾಯಗಳು ಅಂದರೆ ಕೆಥೋಲಿಕರು, ಪ್ರೊಟೆಸ್ಟೆಂಟರಲ್ಲಿ ಉಪ ಪಂಗಡಗಳಾಗಿ ಬರುವ ಮೆಥೋಡಿಸ್ಟ್, ಅಗಾಪೆ, ಸೆವೆಂತ್ ಡೇ, ಜೀಸಸ್, ಪೆಂತೆಕೋಸ್ಟ್ ಹಾಗೂ ಎವೆಂಜಲಿಸ್ಟ್ ಎನ್ನುವ ಕ್ರೈಸ್ತ ಪಂಗಡಗಳಲ್ಲಿ ಧರ್ಮ, ಆಚರಣೆ, ಸಂಪ್ರದಾಯಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಪಂಗಡಗಳಲ್ಲಿನ ಕ್ರೈಸ್ತ ಧರ್ಮಗುರುಗಳು ಶಿಕ್ಷಣ ಸಂಸ್ಥೆಗಳು ಹಾಗೂ ಹಲವು ಗ್ರಾಮಗಳಲ್ಲಿನ ಕ್ರೈಸ್ತ ದೇವಾಲಯ (ವಿಚಾರಣೆ)ಗಳು ಕಂಡುಬರುತ್ತವೆ. ಅವುಗಳನ್ನು ಸಮಗ್ರವಾಗಿ ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಕೆಥೋಲಿಕ್ ಕ್ರೈಸ್ತರು

೧೪ನೇ ಶತಮಾನದಲ್ಲಿ ಆಗಮಿಸಿರುವ ಕ್ರೈಸ್ತರು ಕೆಥೋಲಿಕ್ ಪಂಥಕ್ಕೆ ಸೇರಿದವರು ಕ್ರೈಸ್ತ ಮಿಶನ್‌ಗಳು ಭಾರತದಲ್ಲಿ ಸಾಹಿತ್ಯಿಕ ಕಾರ್ಯಚಟುವಟಿಕೆಗಳನ್ನು ಮೊದಲು ಬಂಗಾಳಿ ಮತ್ತು ಮರಾಠಿ ಭಾಷೆಯಲ್ಲಿ ಪ್ರಾರಂಭಿಸಿದವು. ನಂತರ ಇತರೆ ಪ್ರಾಂತೀಯ ಭಾಷೆಗಳಿಗೆ ವಿಸ್ತರಿಸಿಕೊಂಡವು. ಕರ್ನಾಟಕದಲ್ಲಿ ಮಿಶನರಿ ಚಟುವಟಿಕೆಗಳನ್ನು ೧೭ನೇ ಶತಮಾನದ ಹಿಂದಿನಿಂದಲೂ ಹಲವು ವಿದ್ವಾಂಸರು ಗುರುತಿಸುತ್ತಾರೆ. ಕರ್ನಾಟಕಕ್ಕೆ ಮೊದಲು ಬಂದ ಮಿಶನರಿಗಳು ಎಂದು ಜೆಸುಯಿಟ್ ಸೊಸೈಟಿ, ಲಂಡನ್ ಮಿಶನ್, ವೆಸ್ಲಿಯನ್ ಮೆಥಾಡಿಸ್ಟ್ ಮಿಶನ್ ಹಾಗೂ ಜರ್ಮನ್ ಇವ್ಯಾಂಜಿಲಿಕಲ್ ಮಿಶನ್ ಎಂದು ಗುರುತಿಸುತ್ತಾರೆ. (ಶ್ರೀನಿವಾಸ ಹಾವನೂರು, ೨೦೧೩, ಹೊಸಗನ್ನಡ ಅರುಣೋದಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೧೪) ಈ ಕೆಥೋಲಿಕ್ ಪಂಥದಲ್ಲಿ ಬರುವ ಮಿಷನ್‌ಗಳು ಈಗಿವೆ:

೧. ಕರ್ನಾಟಕ ಮಿಶನ್

೨. ಕೆನರಾ ಮಿಶನ್

೩. ಧರ್ಮಕ್ಷೇತ್ರಗಳು

೪. ಪೋರ್ಚುಗೀಸರು

೫. ಫ್ರೆಂಚರು

೬. ಸಿರಿಯನ್ ಕ್ರೈಸ್ತರು

ಕ್ರಿ.ಶ. ೧೫೯೯ರಲ್ಲಿ ಲೊಪೊ ವಾಚ್ ದಿ ಸಂಪಾಯೋ ಮಂಗಳೂರಿನಲ್ಲಿ ದೇವಾಲಯಗಳ ನಿರ್ಮಾಣ ಮಾಡಿದರು, ಕೆಥೋಲಿಕ್‌ನ ಮದುರೈ ಮಿಶನ್ನಿಗೆ ಸಂಬಂಧಿಸಿದ್ದವರು ಆಗಿದ್ದರು. ೧೬೭೧-೭೮ರಲ್ಲಿ ಪೋರ್ಚುಗೀಸರು ಕಾರ್ಖಾನೆ ಮತ್ತು ದೇವಾಲಯಗಳ ನಿರ್ಮಿಸಿದರು. ಅಲ್ಲದೆ ೧೬೮೩ರಲ್ಲಿ ಗೋವಾದಿಂದ ಬಂದಿರುವರೆಲ್ಲರೂ ಕ್ರೈಸ್ತರಾಗಿದ್ದರು. ಅದೂ ಅಲ್ಲದೆ ೧೭ನೇ ಶತಮಾನದಲ್ಲಿ ರೋಮನ್ ಕೆಥೋಲಿಕ್ ಮಿಷನ್‌ಗಳಿಂದ ಕರ್ನಾಟಕದಲ್ಲಿ ಕ್ರೈಸ್ತರು ಹುಟ್ಟಿಕೊಂಡರು ಎಂದು ಹೇಳಬಹುದಾಗಿದೆ.

ಕ್ರೈಸ್ತ ಧರ್ಮದಲ್ಲಿ ಜನಸಂಖ್ಯೆಯ ಆಧಾರದಲ್ಲಿ ಎಲ್ಲಕ್ಕಿಂತ ದೊಡ್ಡದು ರೋಮನ್ ಕೆಥೋಲಿಕ್ ಕ್ರೈಸ್ತ ಪಂಥ. ಈ ಪಂಥದ ಕ್ರೈಸ್ತ ವಿಚಾರಣೆಗಳು ರಾಯಚೂರು ಸೇರಿ ಐದು ತಾಲೂಕುಗಳಿದ್ದು, ಪ್ರಸ್ತುತ ಸಿರವಾರ ಮತ್ತು ಮಸ್ಕಿ ಪಟ್ಟಣಗಳು ತಾಲೂಕುಗಳಾಗಿದ್ದರಿಂದ ಈಗ ಏಳು ತಾಲೂಕುಗಳಲ್ಲಿ ಕ್ರೈಸ್ತ ಕೆಥೋಲಿಕ್ ವಿಚಾರಣೆಗಳನ್ನು ಅದರ ಸ್ಥಾಪನೆಗಳನ್ನು ಕಾಣಬಹುದಾಗಿದೆ.

ಪ್ರೊಟೆಂಸ್ಟೆಂಟರು

ಕ್ರೈಸ್ತರ ಇನ್ನೊಂದು ಪಂಗಡವಾಗಿರುವ ಪ್ರೊಟೆಸ್ಟೆಂಟರು ಇವರು ಸಹಿತ ಕೆಥೋಲಿಕರಿಗಿಂತ ಮುಂಚೆ ಬರದಿದ್ದರೂ ಅನೇಕ ಪಂಥಗಳಾಗಿ ಕವಲೊಡೆದು ವಿಸ್ತಾರವಾಗಿ ಕರ್ನಾಟಕದಲ್ಲಿ ಬೆಳೆದರು. ೧೬ನೆಯ ಶತಮಾನದಿಂದ ಪ್ರೊಟೆಸ್ಟಂಟರ ಆಗಮನವಾಯಿತು. ಈ ಪಂಗಡದಲ್ಲಿಯೂ ಸಹಿತ ಕೆಳಕಂಡ ಪಂಥಗಳನ್ನು ಅರಿಯಲಾಗಿದೆ.

೧. ಮಿಷನ್‌ಗಳು (ಲಂಡನ್)

೨. ಪಂಥಗಳು : ಮೆಥೋಡಿಸ್ಟ್, ವೆಸ್ಲಿಯನ್, ಎಪಿಸ್ಕೋಪಲ್, ಇವಾಂಜೆಲಿಕನ್, ಪೆಂತೆಕೋಸ್ಟ್

೧. ಮಿಷನ್‌ಗಳು (ಲಂಡನ್)

ಈ ಪಂಗಡಗಳಲ್ಲಿ ಪ್ರಮುಖವಾಗಿ ನಮ್ಮ ಕರ್ನಾಟಕದಲ್ಲಿ ಕಾರ್ಯನಿರ್ವಹಿಸಿದವುಗಳು ಹೆಚ್ಚಾಗಿ ಅಂದರೆ ಮಿಷನ್‌ಗಳೇ ಆಗಿವೆ. ಅವುಗಳೇ ಲಂಡನ್ ಮಿಷನರಿ ಹಾಗೂ ಮಿಷನ್‌ಗಳು ಅಂತಹ ಮಿಷನ್‌ಗಳು ಹೀಗಿವೆ:

ಬೆಂಗಳೂರು ಲಂಡನ್ ಮಿಷನ್ (೧೮೨೦)

ಬೆಳಗಾವಿ ಲಂಡನ್ ಮಿಷನ್ (೧೮೨೦)

ಬಳ್ಳಾರಿ ಲಂಡನ್ ಮಿಷನ್ (೧೮೩೧)

ಚಿಕ್ಕಬಳ್ಳಾಪುರ ಲಂಡನ್ ಮಿಷನ್ (೧೮೯೧)

೨. ಪಂಥಗಳು

ಮಥೋಡಿಸ್ಟ್ ಸಭೆ (ವೆಸ್ಲಿಯನ್) ೧೮೩೬ರಲ್ಲಿ ಮೈಸೂರಲ್ಲಿ ಆರಂಭವಾಯಿತು. ತರುವಾಯ ತುಮಕೂರು, ಬೆಂಗಳೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದ ಕಡೆ ಪ್ರಸಾರವಾಯಿತು. 'ಗುಬ್ಬಿ'ಯು ೧೮೩೭ರಲ್ಲಿ ಮೊಟ್ಟಮೊದಲ ಪ್ರೊಟೆಸ್ಟಂಟರ ಸೇವಾಕೇಂದ್ರವಾಗಿತ್ತು. ೧೮೪೦ರಲ್ಲಿ ಮೈಸೂರಲ್ಲಿ ಬೈಬಲ್ ಸಂಗೀತಗಳ ಮುದ್ರಣ ಅಲ್ಲದೆ ಮೆಥೋಡಿಸ್ಟ್ ಮಿಷನ್ ಸೊಸೈಟಿ ೧೯೩೮ರಲ್ಲಿ ಮೈಸೂರು, ೧೮೪೮ರಲ್ಲಿ ತುಮಕೂರು, ೧೮೬೩ರಲ್ಲಿ ಶಿವಮೊಗ್ಗ ಹಾಗೂ ೧೮೭೬ರಲ್ಲಿ ಹಾಸನದಲ್ಲಿ ಆರಂಭವಾಯಿತು.

ಕ್ರೈಸ್ತ ಧರ್ಮ ಜಗತ್ತಿನಲ್ಲಿ ಅತೀ ದೊಡ್ಡದಾದ ಧರ್ಮವಾಗಿದೆ. ರೋಮನ್ ಕೆಥೋಲಿಕ್ ಪಂಥದಿಂದ ಹಿಡಿದು ಸಾಂಪ್ರದಾಯಿಕ ಕ್ರೈಸ್ತ ಧರ್ಮದವರೆಗೆ, ಪುರಾತನವಾದ ನಸ್ರಾನಿಗಳಿಂದ ಆಧುನಿಕ ಪೆಂತೆಕೋಸ್ಟಲ್‌ವರೆಗೆ, ಪ್ರೊಟೆಸ್ಟೆಂಟ್‌ರಿಂದ ಆಂಗ್ಲಿಕಾನರವರೆಗೆ ಸುಮಾರು ೩೮ ಸಾವಿರ ಪಂಥಗಳಿಗಿಂತ ಹೆಚ್ಚಿವೆ. ಈ ಎಲ್ಲಾ ಪಂಥ, ಪಂಗಡಗಳಿಂದ ಕೂಡಿದಂತಹ ಅತ್ಯಂತ ಅಪರೂಪದ ಅಮರ ಧರ್ಮವಾಗಿದೆ. ಯೇಸು ಸ್ವಾಮಿಯನ್ನು ಒಬ್ಬ ಗುರುವಾಗಿ, ಅತಿಥಿಯಾಗಿ, ದೇವಪುತ್ರನಾಗಿ, ದೈವೀಪುರುಷನನ್ನಾಗಿ, ಪ್ರವಾದಿಯಾಗಿ ಅನೇಕ ಉನ್ನತ ಸ್ಥಾನಗಳಲ್ಲಿ (ಮೌಲ್ಯ) ಕಾಣುತ್ತಾರೆ. ಈ ರೀತಿಯಾಗಿ ಆರಾಧಿಸುವ ಕ್ರೈಸ್ತ ಪಂಗಡಗಳಲ್ಲಿ ೨ನೇ ಪ್ರಮುಖ ಪಂಥವೇ ಪ್ರೊಟೆಸ್ಟೆಂಟ್ ಪಂಥವಾಗಿದೆ.

ಮಧ್ಯ ಯುಗದಲ್ಲಿ ಇದ್ದ ಪೋಪ್‌ರ ಅಡಿಪಾಯದಲ್ಲಿ ಯುರೋಪ್ 'ಹೋಲಿ ರೋಮನ್' ಸಾಮ್ರಾಜ್ಯ ಬೆಳಿದಿತ್ತು ಎಲ್ಲಾ ರಾಜರೂ ಅಲ್ಲಿನ ಪೋಪ್‌ರ ವೈಯಕ್ತಿಕ ಧಾರ್ಮಿಕ ಸಿದ್ಧಾಂತಗಳನ್ನು ಒಪ್ಪಿಕೊಳ್ಳಬೇಕಾಗಿರುತ್ತಿತ್ತು. ಅಧಿಕಾರ ಹೆಚ್ಚಿದಂತೆ ಧರ್ಮದಲ್ಲಿ ಅನಾಚಾರಗಳು ಬೆಳೆಯತೊಡಗಿದವು. ಕ್ರಿ.ಶ. ೧೫೧೭ರಲ್ಲಿ ಮಾರ್ಟಿನ್ ಲೂಥರ್ ಅನಾಚಾರಗಳನ್ನು ಚರ್ಚ್‌ನ ಮುಂದೆ ಇರಿಸಿದ. ಆದರೆ ಅದರ ಬದಲಾಗಿ ರೋಮನ್ ಕೆಥೋಲಿಕ್ ಚರ್ಚ್‌ನಲ್ಲಿ ಭಾರೀ ಬಿರುಕು ಹುಟ್ಟಿ ಆಗಲೇ ಒಂದು ವಿಶೇಷ ಅನ್ಯ ಪಂಗಡ ಹುಟ್ಟಿಕೊಂಡು ಬಂದಿತು. ಅದುವೇ ಪ್ರೊಟೆಸ್ಟೆಂಟ್ ಪಂಥ ಅಥವಾ ಧರ್ಮ ಆಗಿದೆ. ಅವ್ಯವಸ್ಥಿತ ಚರ್ಚ್‌ಗಳಿಗೆ ವಿರೋಧವನ್ನು ವ್ಯಕ್ತಪಡಿಸಿದ್ದರಿಂದ ವಿರೋಧಿಸಿದ ಎಲ್ಲಾ ಚರ್ಚ್‌ಗಳಿಗೆ ಪ್ರೊಟೆಸ್ಟೆಂಟ್ ಪಂಥದ ಚರ್ಚುಗಳೆಂದು ಹೆಸರು ಬಂದೊದಗಿತು. ಬೈಬಲ್ ಮಾತ್ರ ಕೇಂದ್ರ ಬಿಂದು. ಧರ್ಮ ಶ್ರದ್ಧೆಯಿಂದ ಉದ್ಧಾರವಾಗಬೇಕು ಜನರೆಲ್ಲರೂ ನಂಬಿಕೆಯಿಂದ ಜೀವಿಸಬೇಕು

ಎಂಬುದು ಪ್ರೊಟೆಸ್ಟೆಂಟರ ವಾದ ಇದನ್ನೇ ಕೆಥೋಲಿಕರು ಮುಂದೆ ಬರು ಬರುತ್ತಾ ಅನುಸರಿಸಲಿಕ್ಕೆ ಆರಂಭಿಸಿದರು. ಈ ಪ್ರೊಟೆಸ್ಟೆಂಟರಲ್ಲಿ ಮುಖ್ಯವಾಗಿ ಬರುವ ಪಂಥ ಮೆಥೋಡಿಸ್ಟ್ ಪಂಥವಾಗಿದೆ.

ಮೆಥೋಡಿಸ್ಟ್

ಕ್ರೈಸ್ತ ಧರ್ಮದ ಎರಡನೇ ಪ್ರಮುಖ ಪಂಥವಾದ ಪ್ರೊಟೆಸ್ಟೆಂಟ್‌ರಲ್ಲಿ ಕಂಡುಬರುವ ಆಂಗ್ಲಿಕನ್, ಯಹೋವ ಸಾಕ್ಷಿ, ಸೆವೆಂತ ಡೆ, ಯಹೂದಿಗಳು, ಪೂರಿಟಾನ್, ಪ್ರೆಸ್‌ಬೈಟೇರಿಯನ್, ಸಿರಿಯನ್ ಟ್ರಿನಿಟಿ ಎನ್ನುವ ಇನ್ನು ಮುಂತಾದ ಹಲವಾರು ಕ್ರೈಸ್ತ ಪಂಗಡಗಳಲ್ಲಿ **'ಮೆಥೋಡಿಸ್ಟ್'** ಪಂಥ ಅಥವಾ ಸಭೆ ವಿಶೇಷವಾಗಿ ಕಂಡುಬರುತ್ತದೆ. ಇದು ಇಡೀ ಜಗತ್ತಿನ ಸುತ್ತ ೭.೫ ಕೋಟಿ ಅನುಯಾಯಿಗಳಿಂದ ಕೂಡಿರುವ ಪ್ರೊಟೆಸ್ಟೆಂಟ್ ಪಂಥದಲ್ಲಿ ಈ ಮೆಥೋಡಿಸ್ಟ್ ಪಂಥ ಒಂದು ಆಗಿದೆ. ಇದರಲ್ಲಿ ೫೦ಕ್ಕೂ ಮಿಗಿಲು ವಿಭಿನ್ನ ರೀತಿಯ ಚರ್ಚ್‌ಗಳು ಇವೆ. ಇದು ಆಂಗ್ಲಿಕನ್ ಸಂಪ್ರದಾಯದಲ್ಲಿ ಜಾನವೆಸ್ಲಿ ಎಂಬುವವರು ಅಮೇರಿಕಾದಲ್ಲಿ ಆರಂಭಿಸಿದಂತಹ ಒಂದು ಇವಾಂಜೆಲಿಕಲ್ ಪಂಗಡ. ಕ್ರಮೇಣವಾಗಿ ನಮ್ಮ ದೇಶ, ರಾಜ್ಯ, ಜಿಲ್ಲೆ ಮತ್ತು ಎಲ್ಲ ಗ್ರಾಮಗಳಿಗೂ ಹರಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಹಾಗೆಯೇ ಇನ್ನೊಂದು ಪಂಗಡವಾದ ಪೆಂತೆ ಕೋಸ್ಟಲ್ ಪಂಗಡ ಕೂಡ ಗಮನಿಸುವಂತಹದ್ದು.

ಪೆಂತೆ ಕೋಸ್ಟಲ್

ಈ ಕ್ರೈಸ್ತ ಧರ್ಮದಲ್ಲಿ **'ಪೆಂತೆಕೋಸ್ಟಲ್'** ಎನ್ನುವ ಧರ್ಮ ಅಥವಾ ಕ್ರೈಸ್ತರ ಪಂಗಡ ಇದು ಅತ್ಯಂತ ಗಟ್ಟಿಯಾದ ಸಂಸ್ಕೃತಿಯಾಗಿದೆ. ದೈವ ಸಹಾಯ ಮತ್ತು ಅದ್ಭುತ ಕಾರ್ಯಗಳಲ್ಲಿ (ಪವಾಡ) ನಂಬಿಕೆಯನ್ನು ಸಂಪೂರ್ಣವಾಗಿ ಇಟ್ಟುಕೊಂಡಿದೆ. ಯಹೂದಿಗಳು ಊರುಗಳಿಗೆ ಮಾಡುವ ಹಬ್ಬಕ್ಕೆ ಗ್ರೀಕ್ ಭಾಷೆಯಲ್ಲಿ **ಪೆಂತೆಕೋಸ್ಟಾ** ಎಂದು ಕರೆಯುತ್ತಾರೆ. ಬೈಬಲ್‌ನ ಬುಕ್ ಆಫ್ ಆ್ಯಕ್ಟ್‌ನ ಎರಡನೆಯ ಅಧ್ಯಾಯದಲ್ಲಿ ಬರುವ ಹಾಗೆ ಯೇಸುವಿನ ಅನುಯಾಯಿಗಳ ಮೇಲೆ ಪವಿತ್ರಾತ್ಮ ಇಳಿದು ಬರುವ ಸಂಕೇತವಾಗಿ **'ಪೆಂತೆಕೋಸ್ಟಲ್'** ಎಂದು ಸಂಬೋಧಿಸುತ್ತಾರೆ.

ಜಗತ್ತಿನಲ್ಲಿ ೨೫ ಕೋಟಿ ಜನ ಪೆಂತೆಕೋಸ್ಟಲ್ ಪಂಥದ ವಿಶ್ವಾಸಿಗಳಿದ್ದಾರೆ. ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ಪಂಥಗಳ ಬಳಿಕ ಇದಕ್ಕೆ ಕ್ರೈಸ್ತ ಧರ್ಮದ ಮೂರನೆಯ ಶಕ್ತಿ ಕೇಂದ್ರ ಎಂದೂ ಕರೆಯುತ್ತಾರೆ. ಪ್ರಸ್ತುತ ಈ ಪಂಗಡದ ಕ್ರೈಸ್ತರು ಆಫ್ರಿಕಾ, ಅಮೇರಿಕಾ, 'ಭಾರತ' ಸೇರಿದಂತೆ ಏಷ್ಯಾದ ಹಲವು ರಾಷ್ಟ್ರಗಳಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆಯಾಗಿರುವ ಅಲ್ಲದೆ ಬೆಳೆಯುತ್ತಿರುವ ಪಂಗಡ ಈ 'ಪೆಂಟಿಕೋಸ್ಟಲ್' ಧರ್ಮವಾಗಿದೆ. ಇಂದು ಪ್ರಪಂಚದಲ್ಲಿ ಸರಿಸುಮಾರು ಹನ್ನೊಂದು ಸಾವಿರ ಪೆಂಟಿಕೋಸ್ಟಲ್ ಪಂಥಗಳಿವೆ ಎಂದು ಹೇಳಬಹುದು. ಅತಿ ದೊಡ್ಡ ಪೆಂಟಿಕೋಸ್ಟಲ್ ಪಂಥವಾದ ದ ಅಸೆಂಬ್ಲೀಸ್ ಆಫ್ ಗಾಡ (ಎಜಿ) ಚರ್ಚ್ ಅಥವಾ ಪಂಥವು ಐದು ಕೋಟಿ ಎಪ್ಪತ್ತು ಲಕ್ಷ ವಿಶ್ವಾಸಿಗಳನ್ನು ಪಡೆದಿದೆ ಎಂದರೆ ತಪ್ಪಾಗಲಾರದು.

ಹೀಗೆ ಕ್ರೈಸ್ತ ಧರ್ಮದ ಈ ಎಲ್ಲಾ ಪಂಗಡಗಳು ಭಾರತದ ಕರ್ನಾಟಕದಲ್ಲಿನ ರಾಯಚೂರು ಜಿಲ್ಲೆಯಲ್ಲೂ ಬೆಳೆಯುತ್ತಿದೆ ಎನ್ನಬಹುದು.

ಪೆಂತೆಕೋಸ್ಟ್ ಸಭೆಗಳ ಸ್ಥಾಪನೆ

೧. ಸಭೆ – ಬೈಬಲ್ ಮಿಶನ್ ಚರ್ಚ್ ಇದು ಪ್ರಥಮವಾಗಿ ಆರ್. ದೇವದಾಸ ಎಂ. ಸಭಾ ಪಾಲಕರು ಅವರಿಂದ ೧೯೩೮ರಲ್ಲಿ ಗುಂಟೂರು (ಆಂಧ್ರಪ್ರದೇಶ)ನಲ್ಲಿ ಸ್ಥಾಪನೆಯಾಯಿತು. ಅದೇ ಮಿಷನ್ ಮಾನವಿಯಲ್ಲಿ (ರಾಯಚೂರು)ಯೂ ಆರಂಭವಾಯಿತು.

೨. ಸಭೆ – ಪೆನುಹೇಲ್ ಮಹಿಮಾ ಮಂದಿರ ಇದು ಪಾಸ್ಟರ್ ಆರ್.ಜಿ. ಮನೋಹರ ಅವರಿಂದ ೧೯೮೨ರಲ್ಲಿ ಸ್ಥಾಪನೆಯಾಗುತ್ತದೆ. ನಾಮಕರಣ – ಪ್ರಾರ್ಥನೆ ಮೂಲಕ ಹೆಸರಿಡುವುದು ಬೈಬಲಿನ ಹೆಸರುಗಳನ್ನು ಅನುಸರಿಸಿ ನಾಮಕರಣ ಮಾಡುವುದು. ಉದಾ. ಮಾರ್ಕ್, ಪಾಲ್, ಲೂಕ, ಯೋಹಾನ, ಸಾರ್ವತ್ರಿಕವಾಗಿ ಐಶ್ವರ್ಯ, ಸಂಜನಾ, ಪೂಜಾ, (ಆಧುನಿಕತೆ) ಪೂರ್ಣಿಮಾ, ಕವಿತಾ, ಉಲ್ಲಾಸ ಎಂದು ಇಡುತ್ತಾರೆ. ದೀಕ್ಷಾ ಸ್ನಾನ– ನೀರಿನಲ್ಲಿ ಮುಳುಗಿಸಿ, ನೀರನ್ನು ಚಿಮುಕಿಸಿ ದೀಕ್ಷೆ ನೀಡುವುದು.

ರವಿವಾರ ಆರಾಧನೆಯಲ್ಲಿ ಪ್ರಾರ್ಥನೆ ಮಾಡುವುದು, ಪಾಪ ಕ್ಷಮಾಪಣೆ ಕೋರುವುದು, ಹಾಡು, ಗುಂಪು ಪ್ರಾರ್ಥನೆ, ಕಡೆ ಪ್ರಾರ್ಥನೆ, ಅಂತ್ಯಾಶೀರ್ವಾದ ಹಾಗೆಯೇ ಸೋಮವಾರ ಆರಾಧನೆಯಲ್ಲಿ ದೈವಿಕ ಸನ್ನಿಧಿ ಬೇಡುವುದು, ಹೀಲಿಂಗ್ ಪ್ರೇಯರ್ ಮಾಡುವುದು ಮತ್ತು ಶುಕ್ರವಾರ ಉಪವಾಸ ಪ್ರಾರ್ಥನೆ ಮಾಡುವುದು ಅಲ್ಲದೆ ಇತರೆ ಆರಾಧನಾ ಕ್ರಮವಾಗಿ ಕುಟುಂಬ ಭೇಟಿ, ಹಳ್ಳಿಗಳ ಭೇಟಿ, ಕುಟುಂಬ ಪ್ರಾರ್ಥನೆ ಹಾಗೂ ಹಬ್ಬಗಳ ನಿಮಿತ್ತವಾಗಿ ಕ್ರಿಸ್‌ಮಸ್, ಈಸ್ಟರ್, ಗುಡ್‌ಫ್ರೈಡೇ, ತೈಲಾಭಿಷೇಕ, ಸೆಕೆಂಡ್ ಕಮಿಂಗ್ ಫೆಸ್ಟಿವಲ್, ಕಾಣಿಕೆ ಹಬ್ಬ, ತ್ರಿತ್ವಾಧಿಯತ್ವ ಪೆಂತೆಕೋಸ್ಟಲ್ ಹಬ್ಬ ಎಂದು ಆಚರಿಸುತ್ತಾರೆ. ಮದುವೆ ಮಾಡುವ ಅಧಿಕಾರ ಸೇವಾ ಜ್ಯೇಷ್ಟತೆ ಮತ್ತು ಅರ್ಹತೆಯಿಂದ ನಿಗದಿಯಾಗಿರುತ್ತದೆ.

ಈ ಸಭೆ ಸಿರವಾರ ಭಾಗ್ಯನಗರ ಕ್ಯಾಂಪ್‌ನ ೧೯೮೪ರಲ್ಲಿ ಆರ್.ಜಿ. ಮನೋಹರ ಹಾಗೂ ಮಹಿಮ ಅಮರನಾಥ ಸ್ತೋತ್ರಾಲಯಂ ಎಂದು ಶ್ರೀನಿವಾಸ ಕ್ಯಾಂಪ್‌ನಲ್ಲಿ ೧೯೯೫ರಲ್ಲಿ ಪಾಸ್ಟರ್ ವಿಜಯವಾಲ್ ಅವರಿಂದ ಸ್ಥಾಪನೆಯಾದವು.

*** ಚರ್ಚ್–ಶಾಲೆಮ ಪ್ರಾರ್ಥನಾ ಮಂದಿರ (ಪೆಂತೆಕೋಸ್ಟ್)**

ದಿನಾಂಕ ೨೦೦೪ರಲ್ಲಿ ಪಾಸ್ಟರ್ ಸ್ಟೀಫನ್‌ರಾಜ್ ಅವರಿಂದ ಸ್ಥಾಪನೆಯಾಯಿತು. ಇವರ ಆಚರಣೆಗಳು, ನಾಮಕರಣ, ಪ್ರಾರ್ಥನೆ, ದೀಕ್ಷಾಸ್ನಾನ, ನೀರಿನಲ್ಲಿ ಮುಳುಗಿಸುವುದರ ಮೂಲಕ ಹಾಗೂ ಉಪವಾಸ ಪ್ರಾರ್ಥನೆ, ಕುಟುಂಬ ಪ್ರಾರ್ಥನೆ, ವಿವಾಹ ಶವ ಸಂಸ್ಕಾರ ಹಾಗೆಯೇ ಆತ್ಮಿಕವಾಗಿ ಪ್ರಾರ್ಥಿಸುತ್ತಾ ಸಭೆಯನ್ನು ಮುನ್ನಡೆಸಿಕೊಂಡು ಹೋಗುತ್ತಾರೆ ಎಂದು ಗಮನಿಸಲಾಗಿದೆ.

* **ಬ್ಲೆಸ್ಡ್ ಗಾಸ್ಪೆಲ್ ಚರ್ಚ್**

ಇದು ೧೯೭೭ರಲ್ಲಿ ಫಾಸ್ಟರ್ ಜರ್ಮ್ ಜೇಮ್ಸ್ ಅವರಿಂದ ಮಾನ್ವಿಯಲ್ಲಿ ಆರಂಭವಾಗಿದೆ. ಈ ಸಬೆಯಲ್ಲಿ ಆಚರಣೆಗಳು ನಾಮಕರಣ, ಸಾಮಾನ್ಯವಾಗಿ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ. ದೀಕ್ಷೆ ನೀರಿನಲ್ಲಿ ಮುಳುಗಿಸಿ ವಾರದ ಆರಾಧನಾ ಕ್ರಮ ಪ್ರಾರ್ಥನೆ ಹಾಡುಗಳೊಂದಿಗೆ ಅಂತ್ಯಾಶೀರ್ವಾದದೊಂದಿಗೆ ನೆರವೇರಿಸುತ್ತಾರೆ. ಹಬ್ಬಗಳಾಗಿ ಕ್ರಿಸ್‌ಮಸ್, ಗುಡ್‌ಫ್ರೈಡೇಗಳನ್ನು ಆಚರಿಸುತ್ತಾರೆ. ಮದುವೆ ಕಾರ್ಯ ಸಾಮಾನ್ಯವಾಗಿ ಅರ್ಹತೆಯ ಆಧಾರದ ಮೇಲೆ ನೆರವೇರಿಸುತ್ತಾರೆ. ವಿಶೇಷ ಪ್ರಾರ್ಥನೆಗಳಾಗಿ ಕುಟುಂಬ ಪ್ರಾರ್ಥನೆ, ಆಸ್ಪತ್ರೆ ಭೇಟಿ, ಜೈಲು ಭೇಟಿ ನಡೆಯುತ್ತದೆ ಎಂದು ತಿಳಿಯಲಾಯಿತು.

* **ಇಂಡಿಯನ್ ಕ್ಯಾಂಪಸ್ ಕ್ರುಸೆಡ್ ಸಭೆ (ಐ.ಸಿ.ಸಿ.)**

ಇದು ೧೯೮೮ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಿದ್ದು, ನಂತರ ೧೯೮೬ರಲ್ಲಿ ಕೇರಳದಲ್ಲಿ ಮರುಸ್ಥಾಪನೆಯಾಗಿ ೧೯೯೯ರಲ್ಲಿ ನಮ್ಮ ರಾಯಚೂರು ಜಿಲ್ಲೆಯಲ್ಲಿ ಆರಂಭವಾಗಿ ಇತ್ತೀಚಿಗೆ ೨೦೦೮ರಲ್ಲಿ ಮಾನ್ವಿ ಪಟ್ಟಣದಲ್ಲಿ ಸ್ಥಾಪನೆಯಾಗಿದೆ. ಈ ಸಭೆಗೆ ಸಂಬಂಧಿಸಿದಂತೆ ಮಾನ್ವಿ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಕೆಲವು ಗ್ರಾಮಗಳು ಹೀಗಿವೆ.

ನಂದಿಹಾಳ, ಬುಡದಿನ್ನಿ, ಹರವಿ, ಯರಮದೊಡ್ಡಿ, ನೀರಮಾನ್ವಿ, ಬೆಟ್ಟದೂರು, ಹೊಸೂರು, ಕರಡಿಗುಡ್ಡ.

ಈ ಸಭೆಯ ಆಚರಣೆಗಳು– ನಾಮಕರಣ, ದೀಕ್ಷೆ, ದೃಢೀಕರಣ, ಆರಾಧನಾ ಕ್ರಮ ಸರ್ವೆಸಾಮಾನ್ಯವಾಗಿ ನಡೆಯುತ್ತವೆ. ಈ ಸಭೆಯ ವಿಶೇಷ ಸೇವಾ ಕಾರ್ಯವೆಂದರೆ, ಮನೆ ಮನೆ ಭೇಟಿ, ಮನೆಯಲ್ಲಿಯೇ ಯೇಸುವಿನ ಚಲನ ಚಿತ್ರವನ್ನು (ಸಿನಿಮಾ) ತೋರಿಸುವುದು. ಕುಟುಂಬ ಪ್ರಾರ್ಥನೆ, ಆರ್ಥಿಕ ಸಹಾಯ ನೀಡುವುದು, ಜೊತೆಗೆ ವಿವಾಹ, ಶವಸಂಸ್ಕಾರ ಕಾರ್ಯ ಅರ್ಹತೆಯ ಆಧಾರದ ಮೇರೆಗೆ ನಡೆಸುತ್ತಾರೆ ಎಂದು ಗಮನಿಸಲಾಯಿತು.

* **ಅಸೆಂಬ್ಲಿ ಆಫ್ ಗಾಡ್ ಚರ್ಚ್ (ಅಗಾಪೆ)**

ಇದು ೧೯೯೩ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಪಾಸ್ಟರ್ ಘನ ಬೋಧಕರಾದ ವರಪ್ರಸಾದ್ ಅವರಿಂದ ಸ್ಥಾಪನೆಯಾಗಿದೆ. ನಂತರ ೨೦೦೮ರಲ್ಲಿ ಮಾನ್ವಿ ಪಟ್ಟಣದಲ್ಲಿ ಕೂಡ ಪಾಸ್ಟರ್ ಸುದರ್ಶನ್ ಅವರಿಂದ ಮುನ್ನಡೆಸಲಾಗುತ್ತದೆ. ಹಾಗೆಯೇ ಈ ಸಭೆ ಲಿಂಗಸೂಗೂರುನಲ್ಲಿ ಪಾಸ್ಟರ್ ಜಾನ್ಸನ್ ಅವರಿಂದ, ಸಿಂಧನೂರುನಲ್ಲಿ ಪಾಸ್ಟರ್ ಜಯಕುಮಾರ್, ದೇವದುರ್ಗದಲ್ಲಿ ಪಾಸ್ಟರ್ ಇಮ್ಯೂನುವೇಲ್ ಅವರಿಂದ ಸೇವಾಕಾರ್ಯ ನಡೆಯುತ್ತದೆ. ಈ ಸಭೆಯ ಆಚರಣೆಗಳು–ನಾಮಕರಣ, ದೀಕ್ಷೆ, ಆರಾಧನಾ ಕ್ರಮ, ಹಬ್ಬ, ಮದುವೆ ಕಾರ್ಯ, ವಿಶೇಷ ಪ್ರಾರ್ಥನೆಗಳು ಕಂಡುಬರುತ್ತವೆ.

೪.೧.೨. ಚರ್ಚ್‌ಗಳು ಹಾಗೂ ಪಾದ್ರಿಗಳು

ರಾಯಚೂರು ಜಿಲ್ಲೆಯ ವಿವಿಧ ಕ್ರೈಸ್ತ ಸಮುದಾಯಗಳಲ್ಲಿ ಕಂಡುಬರುವ ಚರ್ಚ್‌ಗಳನ್ನು ಈ ರೀತಿಯಾಗಿ ತಿಳಿಸಲಾಗುವುದು.

ರಾಯಚೂರು ಜಿಲ್ಲಾ ಚರ್ಚ್(ಶಿರೋನಾಮ)ಗಳು

೧. ಮೆಥೋಡಿಸ್ಟ್ ಸೆಂಟ್ರಲ್ ಚರ್ಚ್

೨. ನ್ಯೂ ಲೈಫ್ ಬ್ಯಾಪಿಸ್ಟ್ ಚರ್ಚ್

೩. ಅಗಾಪೆ ಎ.ಜಿ. ಚರ್ಚ್

೪. ಬ್ಲೆಸಡ್ ಎಫ್.ಡಿ. ಚರ್ಚ್

೫. ಜಿ.ಎಫ್.ಎಮ್. ಚರ್ಚ್

೬. ಎಸ್.ಡಿ.ಎ. ಚರ್ಚ್

೭. ಈ ಎಲ್ ಬೆಥೆಲ್ ಚರ್ಚ್

೮. ತೆಲುಗು ಬೆಥ್ಲೆಹೇಮ ಅಸೆಂಬ್ಲಿ ಚರ್ಚ್

೯. ಹೊಸನ್ನಾ ಪ್ರೇಯರ್ ಹಾಲ್

೧೦. ಇಮಾನವೇಲ್ ಮೆಥೋಡಿಸ್ಟ್ ಚರ್ಚ್

೧೧. ಕನ್ನಡ ಪ್ರಥಮ ಅಸೆಂಬ್ಲಿ ಚರ್ಚ್

೧೨. ಮೆಥೋಡಿಸ್ಟ್ ಪ್ರೇಯರ್ ಹಾಲ್ ಚರ್ಚ್

೧೩. ನ್ಯೂ ಅಪೋಸ್ಟಲಿಕ್ ಚರ್ಚ್

೧೪. ದಿ ಪೆಂಟೆಕೋಸ್ಟ್ ಮಿಷನ್ ಚರ್ಚ್

೧೫. ಸೆಂಟ್ ಫ್ರಾನ್ಸಿಸ್ ಝೇವಿಯರ್ ಚರ್ಚ್

೧೬. ಚರ್ಚ್ ಆಫ್ ಕ್ರೈಸ್ಟ್

೧೭. ಅಗಾಪೆ ಚರ್ಚ್

೧೮. ಜೀಸಸ್ ಚರ್ಚ್

೧೯. ಇಂಡಿಯನ್ ಪೆಂತೆಕೋಸ್ಟ್ ಚರ್ಚ್

೨೦. ಸಿ.ಒ.ಎಮ್. ಸ್ಪಿರಿಟ್ ಫಿಲ್ಡ್ ಚರ್ಚ್

೨೧. ಜಿ.ಎಫ್.ಎ. ಬಿಲಿವರ್ಸ್ ಚರ್ಚ್

೨೨. ಲಿವಿಂಗ ವೇಟ್ಸ್ ಎಫ್.ಜಿ. ಚರ್ಚ್

೨೩. ಒಂ ಗುಡ್‌ಶೆಫರ್ಡ್ ಚರ್ಚ್

೨೪. ಮೆಥೋಡಿಸ್ಟ್ ಚರ್ಚ್ ಗಾಜಗರಪೇಟೆ

೨೫. ಮೆಥೋಡಿಸ್ಟ್ ಚರ್ಚ್ ಕುರ್ಡಿ

೨೬. ಮೆಥೋಡಿಸ್ಟ್ ಚರ್ಚ್ ಮಟಮಾನಿ

೨೭. ಮೆಥೋಡಿಸ್ಟ್ ಚರ್ಚ್ ಕಲ್ಲೂರ

೨೮. ಬ್ಲೆಸ್ಡ್ ಅಲ್ಫೋನ್ಸಾ ಚರ್ಚ್

೨೯. ಮೆಥೋಡಿಸ್ಟ್ ಚರ್ಚ್

೩೦. ಬ್ಲೆಸ್ಟ್ ಎಫ್ ಚರ್ಚ್

೩೧. ತೆಲುಗು ಬ್ರೆತರ್ಸ್ ಚರ್ಚ್, ಹೊಸೂರು

೩೨. ಐ.ಬಿ.ಎಫ್ ಚರ್ಚ್ – ಪೋತ್ನಾಳ

೩೩. ಯು.ಇ.ಎಸ್.ಐ. ಚರ್ಚ್

೩೪. ಬಿ.ಜಿ.ಇ.ಎ. ಚರ್ಚ್

೩೫. ಇಂಡಿಯನ್ ಕ್ಯಾಂಪಸ್ ಕ್ರುಸೇಡ್ (ಐಸಿಸಿ) ನ

೩೬. ಬಿ.ಎಫ್.ಜಿ. ಚರ್ಚ್

೩೭. ನೇಟಿವ್ ಗ್ರೇಸ್ ಚರ್ಚ್

೩೮. ಮೆಸ್ಸಾಯಿ ಎ.ಜಿ. ಚರ್ಚ್

೩೯. ಎಲ್‌ಷಡಾಯ ಚರ್ಚ್

೪೦. ಎಂ.ಸಿ.ಐ. ಚರ್ಚ್

೪೧. ಬಿ.ಎಂ. ಚರ್ಚ್

೪೨. ಎಸ್.ಪಿ.ಎಫ್.ಕೆ. ಚರ್ಚ್

೪೩. ಬಿ.ಸಿ.ಐ. ಚರ್ಚ್

೪೪. ಎಸ್.ಪಿ.ಎಫ್. ಚರ್ಚ್

೪೫. ಐ.ಎಮ್.ಎಸ್. ಚರ್ಚ್

೪೬. ಇ.ಪಿ.ಎಫ್. ಚರ್ಚ್

೪೭. ಐ.ಪಿ.ಸಿ. ಚರ್ಚ್

೪೮. ಐ.ಎಫ್.ಪಿ.ಸಿ. ಚರ್ಚ್

ಪಾದ್ರಿಗಳು

ರಾಯಚೂರು ಜಿಲ್ಲೆಯಲ್ಲಿ ಇಂದು ನಾವು ನೋಡುತ್ತಿರುವ ಕ್ರೈಸ್ತ ಧರ್ಮ ನಿನ್ನೆ ಮೊನ್ನೆಯದಲ್ಲ. ಸ್ವಾತಂತ್ರ್ಯ ಪೂರ್ವದಲ್ಲೇ ನಮ್ಮ ರಾಷ್ಟ್ರಕ್ಕೆ ಆಗಮಿಸಿತ್ತು. ಅಂದಿನಿಂದ ಇಲ್ಲಿಯವರೆಗೂ ಬೆಳೆಯುತ್ತಾ ಬಂದಿದೆ. ಮತ್ತು ಬೆಳೆಯುತ್ತಲೇ ಇದೆ. ಇದಕ್ಕೆಲ್ಲಾ ಕಾರಣ ಏನೆಂದರೆ ಮನುಷ್ಯನಿಗೆ 'ಬೆನ್ನು ಮೂಳೆ' ಎಷ್ಟು ಅವಶ್ಯಕವೋ ಹಾಗೆಯೇ ಈ ಕ್ರೈಸ್ತ ಧರ್ಮಕ್ಕೆ ಪಾದ್ರಿಗಳು ಅಂದರೆ ಪಾಸ್ಟರ್ಸ್ (ಪೂಜಾರಿಗಳು) ಅಷ್ಟೇ ಅವಶ್ಯಕವಾಗಿದ್ದಾರೆ. ಈ ಪಾದ್ರಿಗಳು ಯಾವುದೇ ಅಧಿಕ ಫಲಾಪೇಕ್ಷೆಯಿಲ್ಲದೇ ಸ್ವಯಂ ಸೇವೆ ಮಾಡುತ್ತಿದ್ದಾರೆ. ಆದ ಕಾರಣ ಕ್ರೈಸ್ತ ಧರ್ಮ ನಿರಂತರವಾಗಿ ಬೆಳೆಯುತ್ತಾ ಇದೆ. ಜೊತೆಗೆ ಶಿಕ್ಷಣ ಸಂಸ್ಥೆಗಳು, ಚರ್ಚುಗಳು ಹೊಸದಾಗಿ ನಿರ್ಮಾಣವಾಗುತ್ತವೆ ಎಂದು ಹೇಳಲಾಗಿದೆ. ಮೊದಲಿಗೆ ಕ್ರೈಸ್ತ ಧರ್ಮದ ಜಿಲ್ಲಾ ಪಾದ್ರಿಗಳು ಈ ಕೆಳಕಂಡಂತೆ ಕಂಡುಬರುತ್ತಾರೆ.

ಜಿಲ್ಲಾ ಕ್ರೈಸ್ತ ಪಾದ್ರಿಗಳು

೧. ರೆವರೆಂಡ್ ಜೆ.ಡಿ. ವಿಜಯಕುಮಾರ

೨. ರೆವರೆಂಡ್ ಬಿ.ಡಿ. ಯೆಬ್ಬೇಜು

೩. ರೆವರೆಂಡ್ ಸಿ. ವರಪ್ರಸಾದ್

೪. ರೆವರೆಂಡ್ ಎನ್. ಜೆರ್ನಸ್ ಜೇಮ್ಸ್

೫. ರೆವರೆಂಡ್ ಎಸ್. ಕುಮಾರ

೬. ರೆವರೆಂಡ್ ಎಚ್.ಬಿ. ಸ್ಟೆಫನ್

೭. ಬ್ರದರ್ ಎಮ್.ಎಸ್. ಮಿತ್ರ

೮. ರೆವರೆಂಡ್ ಸುಮಿತ್ರ

೯. ರೆವರೆಂಡ್ ಮಲಾಕಿ ಹನೋಕ

೧೦. ಬ್ರದರ್ ದಾನಿಯೇಲ್

೧೧. ಪಾಸ್ಟರ್ ಸಾಮಸನ್

೧೨. ರೆವರೆಂಡ್ ಸ್ಟೇನಲಿಜಾನ್

೧೩. ಬ್ರದರ್ ಎ. ಜೋಸೆಫ್

೧೪. ರೆವರೆಂಡ್ ಸಿ. ಮಾರ್ಕ್

೧೫. ರೆವರೆಂಡ್ ಇಮಾನುವೇಲ್

೧೬. ಪಾಸ್ಟರ್ ಜಾಕೋಬ

೧೭. ರೆವರೆಂಡ್ ಪಾದರ್ ಹೃದಯರಾಜ

೧೮. ಪಾಸ್ಟರ್ ಭಾಸ್ಕರ

೧೯. ಪಾಸ್ಟರ್ ಎಸ್.ಡಿ. ಹನೋಕ

೨೦. ಪಾಸ್ಟರ್ ಸುಕುಮಾರ

೨೧. ಪಾಸ್ಟರ್ ಪಿ. ಇಸಾಕ್

೨೨. ಪಾಸ್ಟರ್ ಲೂಕ

೨೩. ಪಾಸ್ಟರ್ ಎಸ್ ಆನಂದ

೨೪. ಪಾಸ್ಟರ್ ಎಚ್. ಬಲವೀರಯ್ಯ

೨೫. ಪಾಸ್ಟರ್ ಆರ್ ಸುದರ್ಶನ

೨೬. ಪಾಸ್ಟರ್ ಕೆ. ಬಸವರಾಜ ಮೋಜಸ್

೨೭. ರೆವರೆಂಡ್ ಎಮ್. ಕೃಪಾದಾಸ

೨೮. ರೆವರೆಂಡ್ ಜಿ. ಮನೋಹರ

೨೯. ರೆವರೆಂಡ್ ಬಿ. ಸ್ಟೆಫನ್‌ರಾಜ

೩೦. ರೆವರೆಂಡ್ ಪಿ.ಡಿ. ಸುಭಾಶ್

೩೧. ರೆವರೆಂಡ್ ಟಿ. ಡೇವಿಡ್

೩೨. ಪಾಸ್ಟರ್ ಆರ್. ಸುಂದರರಾಜಂ

೩೩. ಪಾಸ್ಟರ್ ಪ್ರಮೋದ ಸಾಮುವೇಲ್

೩೪. ಪಾಸ್ಟರ್ ಜಗನ್ನಾಥ

೩೫. ಪಾಸ್ಟರ್ ಭಾಸ್ಕರ ಇ.

೩೬. ಪಾಸ್ಟರ್ ಎಸ್. ಉಲ್ಲೇಶ

೩೭. ಪಾಸ್ಟರ್ ಸಂತೋಷ

೩೮. ಪಾಸ್ಟರ್ ನರಸಪ್ಪ ಎಸ್.

೩೯. ಪಾಸ್ಟರ್ ಪಿ. ರಾಜು

೪೦. ಪಾಸ್ಟರ್ ಪ್ರಣೀತಕುಮಾರ

೪೧. ರೆವರೆಂಡ್ ಬಿ. ಮಾರ್ಕ್

೪೨. ಪಾಸ್ಟರ್ ಪ್ರಸಂಗಿ

೪೩. ರೆವರೆಂಡ್ ಬಿ. ಸೂರ್ಯದಾಸ

೪೪. ಪಾಸ್ಟರ್ ಸುಕುಮಾರ ಎಸ್

೪೫. ಪಾಸ್ಟರ್ ರವಿ

೪೬. ಪಾಸ್ಟರ್ ಸಾಮುಯೇಲ್

೪೭. ಪಾಸ್ಟರ್ ಸುಧಾಕರ ಕೆ.

೪೮. ಪಾಸ್ಟರ್ ವಿಜಯಪಾಲ್

೪೯. ಪಾಸ್ಟರ್ ವಿಲ್ಸನ್ ಕುರ್ಡಿ

೫೦. ಪಾಸ್ಟರ್ ಸೀಮನ್‌ರಾಜ ಎಮ್.ಕೆ.

ಕೆಥೋಲಿಕ್ ಕ್ರೈಸ್ತ ಪಾದ್ರಿಗಳು

ಅಲೆಕ್ಸಾಂಡರ್ ಪೋಪರು

ಆಂತೋನ ಮರಿತಬಾ

ಇಗ್ನಾಸಿ

ಎಲಿಯೇನ ಲೂಯಿ ಶಾರ್ಬೋನೋ

ಟೆಂಪ್ಲೇಟು ಕರ್ನಾಟಕದ ಕ್ರೈಸ್ತ ಗುರುಗಳು

ಕುರಿಯಾಕೋಸ್

ಪೂಜ್ಯ ಜೋಸೆಫ್ ವಾಚ್

ಪೋಪ್ ಜಾನ್ ಪಾಲ್

ಫಾದರ್ ಅರುಪೆ

ಫಾದರ್ ಸ್ಟ್ಯಾನಿ ಬ್ಯಾಪಿಸ್ಟ್

ಬ್ರಿಗೆಲ್

ಮರಿಯಾಪುರ

ಲೂಯಿಸ್ ಡೆ ಗೊಗೊರಾ

ವಿಲಿಯಂ ರಾಲ್ಫ್ ಇಂಜ್

ಸಂತ ಆಲೋಶಿಯಸ್

ಸಂತ ಫ್ರಾನ್ಸಿಸ್ ಸಾವೇರಿ

ಸಿ. ಇನ್ನಾಸಪ್ಪ

ಸೂರಪ್ಪ

ಸೇಂಟ್ ಅಗಸ್ಟೈನ್

ಮೇರಿ ಲೋಬೋ

ದಯಾನಂದ ಪ್ರಭು

ಅರುಳಪ್ಪ, ಸಂತ ಫಿಲೋಮಿನ್

೪.೧.೩. ಮೆಥೋಡಿಸ್ಟ್ ಚರ್ಚುಗಳಿರುವ ಗ್ರಾಮಗಳು

ರಾಯಚೂರು ಜಿಲ್ಲೆಯಲ್ಲಿ ಕಂಡುಬರುವ ಕ್ರೈಸ್ತ ಮೆಥೋಡಿಸ್ಟ್ ಸಭೆ/ಪಂಥಗಳಿರುವ ಎಲ್ಲಾ ಊರು/ಗ್ರಾಮಗಳನ್ನು ಕ್ರಮವಾಗಿ ಈ ಕಳಕಂಡಂತೆ ಹೇಳಲಾಗಿದೆ.

ಜಿಲ್ಲೆಯ ಎರಡು ಪ್ರಮುಖ ಕೇಂದ್ರ ಸಭೆಗಳು

೧. ರಾಯಚೂರು ವಲಯ

೨. ಸಿರವಾರ ವಲಯ

೧. ರಾಯಚೂರು ಮೆಥೋಡಿಸ್ಟ್ ಸಭೆಯ ಗ್ರಾಮಗಳು

ಇಡಪನೂರು	ಮೀರಾಪುರ
ಗಂದಾಳ	ಗುಂಡೆರೆವಲಿ
ಬುಡದಿನ್ನಿ	ಬುಳ್ಳಾಪುರ
ತುಂಗಭದ್ರ	ಗಿಲ್ಲೆಸುಗುರ ಕ್ಯಾಂಪ್

ಗಿಲ್ಲೆಸುಗುರು

ಗಧಾರ

ಗುಂಜಳ್ಳಿ

ಗೋನಾಳ

ಹರ್ನಳ್ಳಿ

ಬಿಜನಗೇರಿ

ಮಿಡಗಲದಿನ್ನಿ

ಕಮಳೆತ್ತಿ

ಬಳಗೇರಿ

ಯದ್ಲಾಪುರ

ಜಂಬಲದಿನ್ನಿ

ತುರುಕುಂದೋಣಿ

ನೆಲಹಾಳ

ಮಲ್ಕಾಪುರ

ಗಂಗಾವರಂ

ಗಟ್ಟಬಿಜ್ಜಾಲಿ

ನಕ್ಕಲಮಿಟ್ಟ

ಯರಗೆರಾ

ಕಮಲಾಪುರ

ಜಿಲಂಗೆರಾ

ರಾಯಚೂರು

ಕೊಟ್ವಲ್

ಕಮಲಾಪುರ

ತುಂಟಾಪುರ

ಕಲ್ಲೂರ

ಸಿಂಗನೋಡಿ

ಬಾಪೂರು

ಜೂಕೂರು

ಇಂದುವಾಸಿ

ಮಂಜಾರ್ಲ

ದುಗುನೂರು

ಗಾಜಗಾರ ಪೇಟೆ (ರಾಯಚೂರು)

ಮಟಮಾರಿ

ತಲಮಾರಿ

ಮಾನ್ವಿ

ಚೀಕಲಪರ್ವಿ

ಹನುಮಾಪುರ

ಕುರ್ಡಿ

ಆಸಾಪುರ

ಶಕ್ತಿನಗರ

ಉಂಗ್ರಾಲದೊಡ್ಡಿ

೨. ಸಿರವಾರ ಮೆಥೋಡಿಸ್ಟ್ ಸಭೆಯ ಗ್ರಾಮಗಳು

ಬಾಬುರೆಡ್ಡಿ ಕ್ಯಾಂಪ್

ಬೊಮ್ಮನಾಳ

ಬಾಗಲವಾಡ

ಹೆಡಿನಾಳ

ಹಟ್ಟಿ	ಕಾರಟಗಿ
ಉಮಳಿಹೊಸೂರು	ಮಸರಕಲ್
ಗಂಧಾಳ	ಸೋಮನಮರಡಿ
ಮಾಡಿಗಿರಿ	ಲಿಂಗಸುಗೂರು
ಕವಿತಾಳ	ಗಬ್ಬೂರು
ಗಣದಿನ್ನಿ	ಸಿರವಾರ ಕೇಂದ್ರ ವಲಯ
ಕೊತ್ತಂದೊಡ್ಡಿ	ಕಮಲದಿನ್ನಿ
ದೇವದುರ್ಗ	

೪.೧.೪. ಕೆಥೋಲಿಕ್ ಕ್ರೈಸ್ತ ವಿಚಾರಣೆಗಳು ಹಾಗೂ ಕ್ರೈಸ್ತ ಶಿಕ್ಷಣ ಸಂಸ್ಥೆಗಳು

ಕ್ರೈಸ್ತ ಧಾರ್ಮಿಕ ವ್ಯವಸ್ಥೆಯಲ್ಲಿ ಈ ಒಂದು ಪದವನ್ನು ಬಳಸುತ್ತಾರೆ. ಈ ಪದವು ಸಾಮಾನ್ಯವಾಗಿ ನಮ್ಮ ಕನ್ನಡ ಶಬ್ದಕೋಶದಲ್ಲಿ ವಿಚಾರ, ಸಮಾಚಾರ, ವಿಷಯ ಎಂಬ ಅರ್ಥಗಳನ್ನು ನೀಡುವಂತಹದ್ದಾಗಿದೆ. ಆದರೆ ಕೆಥೋಲಿಕ್ ಕ್ರೈಸ್ತ ಸಮುದಾಯದಲ್ಲಿ ಇದು ಧಾರ್ಮಿಕ ವಿಚಾರಕ್ಕೆ ಸಂಬಂಧಿಸಿದ್ದುದು ಆಗಿದೆ. ಕ್ರೈಸ್ತರಲ್ಲಿ ಪ್ರಮುಖವಾಗಿ ಎರಡು ಪಂಗಡಗಳಿವೆ ಎಂದು ಹೇಳುವಾಗ ಒಂದು ಕೆಥೋಲಿಕ್ ಪಂಗಡ, ಇನ್ನೊಂದು ಪ್ರೊಟೆಂಸ್ಟೆಂಟ್ ಪಂಗಡ. ಇವುಗಳಲ್ಲಿನ ಮೊದಲೇ ಪಂಗಡವಾದ ಕೆಥೋಲಿಕರಲ್ಲಿ ಈ ಒಂದು ವಿಚಾರಣೆ ಪದ ಬಳಕೆಯಾಗುತ್ತದೆ.

'ವಿಚಾರಣೆ' ಎಂದರೆ ಕ್ರೈಸ್ತರ ಸಭೆ ಎಂದರ್ಥ ಅಥವಾ ಚರ್ಚ್ ಎಂತಲೂ ಕರೆಯಬಹುದು. ಪ್ರೊಟೆಸ್ಟೆಂಟರು ಸಭೆ ಎಂದರೆ ಕೆಥೋಲಿಕರು ವಿಚಾರಣೆ ಎಂದು ಕ್ರೈಸ್ತ ದೇವಾಲಯವನ್ನು ಅಥವಾ ಕ್ರೈಸ್ತ ಮಂದಿರವನ್ನು ಅಥವಾ ಊರುಗಳನ್ನೊಳಗೊಂಡ ಒಂದು ಸಣ್ಣ ಕೇಂದ್ರ ಮಂದಿರವನ್ನು ವಿಚಾರಣೆ ಎಂದು ಕರೆಯುತ್ತಾರೆ. ಅಂತಹ ವಿಚಾರಣೆಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕವಿತಾಳ ವಿಚಾರಣೆ

ಹೆಸರು – ಪುನರುತ್ತಾನ ದೇವಾಲಯ (ರಿಸೈನ್ ಕ್ರೈಸ್ಟ್ ಚರ್ಚ್)

ಪ್ರಸ್ತುತ ಪಾದ್ರಿ – ಐವನ್ ಪಿಂಟೋ

ಸ್ಥಾಪನೆ – ೧೯೪೨

ವಿಳಾಸ – ರಿಸೈನ್ ಕ್ರೈಸ್ಟ್ ಚರ್ಚ್, ಕವಿತಾಳ-೫೮೪ ೧೨೦.

ಈ ವಿಚಾರಣೆ ಕೇವಲ ಧಾರ್ಮಿಕ ವಿಚಾರಣೆಗಳನ್ನು ಮಾತ್ರ ಹೇಳದೆ ಶಿಕ್ಷಣ ಆರೋಗ್ಯ ವಸತಿ ಶಿಕ್ಷಣ ಆಧ್ಯಾತ್ಮ ಧ್ಯಾನಕೂಟಗಳು ವರ್ಷಕ್ಕೊಮ್ಮೆ ಸರ್ವಧರ್ಮ ಸಮ್ಮೇಳನ, ಹಮ್ಮಿಕೊಂಡು

ಧರ್ಮ ಸಮನ್ವಯತೆಯನ್ನು ಮೆರೆಯುತ್ತಾರೆ. ರೂಪಕ, ನಾಟಕಗಳ ಮೂಲಕ ಊರಲ್ಲಿ **'ಶಿಲುಬೆ ಹಾದಿ ಹಬ್ಬ'** ಎಂದು ತೇರನ್ನು ಎಳೆಯುವ ಮೂಲಕ ನಿರ್ವಹಿಸುತ್ತಾರೆ. ಈ ವಿಚಾರಣೆಗೆ ಸಂಬಂಧಿಸಿದ ಇತರೆ ಉಪ ಸಭೆಗಳು ಹೀಗಿವೆ.

೧. ಸೈದಾಪೂರು

೨. ಹುಸೇನಪುರ

೩. ಕಲಂಗೆರಾ

೪. ವಟಗಲ್

೫. ಯಕ್ಲಾಸಪುರ

೬. ಅಮೀನಗಡ

೭. ತೋರಣದಿನ್ನಿ

೮. ಜಿನ್ನಾಪುರ

೯. ಯದ್ದಲದಿನ್ನಿ

೧೦. ೭೩ ಕ್ಯಾಂಪ್

೧೧. ಹಿರೇದಿನ್ನಿ

ಕೆ. ಮರಿಯಮ್ಮನಹಳ್ಳಿ ವಿಚಾರಣೆ

ಹೆಸರು – ಆರೋಗ್ಯ ಮಾತಾ ದೇವಾಲಯ

ಸ್ಥಾಪನೆ – ೧೯೮೬

ಆರಂಭಿಕ ಪಾದ್ರಿ – ರೆ.ಫಾ. ಪೊನ್ನುಸ್ವಾಮಿ

ವಿಳಾಸ – ಆರೋಗ್ಯ ಮಾತಾ ದೇವಾಲಯ, ಪೋಸ್ಟ್ ಬಾಕ್ಸ್ ೧, ಕೆ. ಮರಿಯಮ್ಮನಹಳ್ಳಿ, ಮುದಗಲ್ ೫೮೪ ೧೨೫, ರಾಯಚೂರು ಜಿಲ್ಲೆ.

ಜವಳಗೆರಾ ವಿಚಾರಣೆ

ಹೆಸರು – ಸೇಂಟ್ ಜೋಸೆಫ್ ವರ್ಕರ್ ಚರ್ಚ್

ಸ್ಥಾಪನೆ – ೧೯೯೪

ವಿಳಾಸ – ಚರ್ಚ್ ಆಫ್ ಸೇಂಟ್ ಜೋಸೆಫ್ ದ ವರ್ಕರ್ ಸಿಸಿಎಫ್‌ಟಿ ಸೆಂಟರ್, ಜವಳಗೆರಾ–೫೮೪ ೧೪೩ ರಾಯಚೂರು ಜಿಲ್ಲೆ.

ಈ ಕ್ರೈಸ್ತ ಸಭೆ ೧೯೯೪ಳಕ್ಕಿಂತ ಮೊದಲೇ ಅಂದರೆ ೧೯೭೨ರಲ್ಲಿಯೇ ಆರಾಧನೆ ಆರಂಭವಾಗಿ ಕ್ರೈಸ್ತ ಸಭೆಯಾಗಿ ರೂಪವನ್ನು ಪಡೆದಿತ್ತು. ಆದರೆ ಅಧಿಕೃತವಾಗಿ ೧೯೯೪ರಿಂದ ಪುನಾರಂಭವಾಗಿದೆ. ಈ ಕ್ರೈಸ್ತ ವಿಚಾರಣೆ ಸಹಿತ ನವೆಂಬರ್ ೧ಕ್ಕೆ ಸಮಾಧಿ ಹಬ್ಬ ಎಂದು ಮಾಡುತ್ತದೆ. ಜನಪರ ಪ್ರಾರ್ಥನೆ, ಕನ್ಯಾ ಮರಿಯಮ್ಮ ಜಾತ್ರೆ, ಸಂತರ ಜಾತ್ರೆ ಅಲ್ಲದೆ ಊರೆಲ್ಲಾ ತಿರುಗಾಡಿ ತೇರಿನ ಮೂಲಕ ಕ್ರಿಸ್ತನನ್ನು ತಾಯಿ ಮೇರಿಯನ್ನು ಮೆಗವಣಿಗೆ ಮಾಡುವ ಮೂಲಕ ಆಚರಣೆ ಮಾಡುತ್ತಿದ್ದರು. ಪ್ರಸ್ತುತ ಶಿಕ್ಷಣ ವ್ಯವಸ್ಥೆಯನ್ನು ಬಲವಾಗಿ ಹಿಡಿದಿದೆ. ಈ ಸಭೆಗೆ ಸೇರುವ ವಿಚಾರಣೆಗಳು ಹೀಗಿವೆ.

೧. ದಿದ್ದಿಗಿ

೨. ರೈತನಗರ ಕ್ಯಾಂಪ್

೩. ಲಕ್ಷ್ಮಿಕ್ಯಾಂಪ್

೪. ಬಳಗಾನೂರು

೫. ಸಂಗರ ಕ್ಯಂಪ್

೬. ಸುಲ್ತಾನಪುರ

೭. ಜಾಲವಾಡಗಿ

೮. ರಾಮತ್ನಾಳ

೯. ಬನ್ನಿಗನೂರು

೧೦. ಯಾಪಲಪರ್ವಿ

೧೧. ವಲ್ಕಂದಿನ್ನಿ

೧೨. ಧುಮತಿ ಕ್ರಾಸ್

೧೩. ಧುಮತಿ

೧೪. ವಿಘ್ನೇಶ್ವರ ಕ್ಯಾಂಪ್

೧೫. ಲಕ್ಷ್ಮಿ ಹೊಲ ಕ್ಯಾಂಪ್

ಜವಳಗೆರಾ ಫಾರ್ಮ್ ವಿಚಾರಣೆ

ಹೆಸರು – ಸೇಂಟ್ ಜೋಸೆಫ್ ವರ್ಕರ ಚರ್ಚ್

ಸ್ಥಾಪನೆ – ೧೯೯೪

ಆರಂಭಿಕ ಪಾದ್ರಿ – ರೆ. ಚಾರ್ಲಸ್ ಸುಂದರ್

ವಿಳಾಸ – ಚರ್ಚ್ ಆಫ್ ಸೇಂಟ್ ಜೋಸೆಫ್ ದ ವರ್ಕರ್, ಸಿಸಿಎಫ್‌ಟಿ ಸೆಂಟರ್, ಜವಳಗೆರಾ – ೫೮೪೧೪೩, ರಾಯಚೂರು ಜಿಲ್ಲೆ.

ದೇವದುರ್ಗ ವಿಚಾರಣೆ

ಹೆಸರು – ಸತ್ಯ ಮಾತೆ ಚರ್ಚ್

ಸ್ಥಾಪನೆ – ೧೯೯೬

ಆರಂಭಿಕ ಪಾದ್ರಿ – ರೆ.ಫಾದರ್ ಕವಿಲವಿಟ್ಟಿ ಜೊಲ್ಲಿ ಎಸ್‌ಡಿಬಿ

ವಿಳಾಸ – ಡಾನ್ ಬಾಸ್ಕೊ, ಚಂದನಕೆರೆ ರೋಡ್, ದೇವದುರ್ಗ ೫೮೪ ೧೧೧, ರಾಯಚೂರು ಜಿಲ್ಲೆ.

ವಕ್ತೃ – ದೇಸಪ್ಪ (ಸಹಾಯಕರು) ಶಿಕ್ಷಕರು

ಈ ವಿಚಾರಣೆಯಲ್ಲಿ ೧೦೦ ರಿಂದ ೧೩೦ ಕ್ರೈಸ್ತ ಕುಟುಂಬಗಳಿವೆ. ಅಲ್ಲದೆ ಮೆಥೋಡಿಸ್ಟ್ ಸಭೆ ಇನ್ನಿತರ ಸಭೆಗಳಿವೆ. ಇಲ್ಲಿನ ಜನರು ಕೇವಲ ಒಂದೇ ವರ್ಗಕ್ಕೆ ಸೇರಿದವರಲ್ಲ. ಎಸ್.ಸಿ. ಲಂಬಾಣಿ, ಕುರುಬರು, ಬಣಜಿಗ, ಎಸ್.ಟಿ. ಮುಂತಾದ ಜನಾಂಗದವರು ಕ್ರೈಸ್ತ ಆಚರಣೆಗಳಲ್ಲಿ ಜೀವಿಸುತ್ತಿದ್ದಾರೆ. ಮೂಲತಃ ಅವರವರ ಜಾತಿ ಜನಾಂಗದಲ್ಲೇ ಇದ್ದು (ದಾಖಲಾತಿ) ಸಾಂಸ್ಕೃತಿಕ ಆಚರಣೆಗಳಲ್ಲಿ ಯೇಸು ಕ್ರಿಸ್ತನನ್ನು ನಂಬುವವರಾಗಿದ್ದಾರೆ. ಈ ವಿಚಾರಣೆ ಶಿಕ್ಷಣ, ಆರೋಗ್ಯ, ವಸತಿಯನ್ನು ನೀಡುವುದಾಗಿದೆ. ಇದರಲ್ಲಿ ಬರುವ ಉಪಕೇಂದ್ರಗಳು ಹೀಗಿವೆ.

೧. ಮದರಕಲ್ ವಿಚಾರಣೆ – ಸಂತ ಅಂತೋನಿ ಚರ್ಚ್

೨. ಮೂಡಲಗುಂಡ ವಿಚಾರಣೆ – ಜಾನ ಬಾಸ್ಕೋ ಚರ್ಚ್

೩. ಬೂಮನಗುಂಡ ವಿಚಾರಣೆ – ಆರೋಗ್ಯಮಾತೆ ಚರ್ಚ್

೪. ಶಾಂತಗಲ್ಲು ವಿಚಾರಣೆ – ಕಿರಿಯ ಪುಷ್ಪ ತೆರೇಸಾ ಚರ್ಚ್

೫. ಮಲ್ಲೇದೇವರ ಗುಡ್ಡ ವಿಚಾರಣೆ – ಯೇಸುವಿನ ಪವಿತ್ರ ಹೃದಯ ದೇವಾಲಯ

೬. ಮಾನಸಗಲ್ ವಿಚಾರಣೆ – ಯೇಸು ಬಾಲ ದೇವಾಲಯ

೭. ಕ್ಯಾದಗೇರಾ ವಿಚಾರಣೆ –

೮. ವಂದಲಿ ವಿಚಾರಣೆ – ಸಂತ ಜೋಸೆಫರ ದೇವಾಲಯ

ಪೊನ್ನೂರು ವಿಚಾರಣೆ

ಹೆಸರು – ಸೇಂಟ್ ಪೀಟರ್ ಚರ್ಚ್

ಸ್ಥಾಪನೆ – ೧೯೯೪

ಆರಂಭಿಕ ಪಾದ್ರಿ – ರೆ.ಫಾ. ಮ್ಯಾಕ್ಸಿಮ ರಸ್ಕಿನ್ ಎಸ್.ಜೆ., ಜಾಗೀರ ಪೊನ್ನೂರು ೫೮೪ ೧೨೩, ಚೀಕಲಪರ್ವಿ ಪೋಸ್ಟ್, ಮಾನವಿ ತಾಲೂಕು, ರಾಯಚೂರು ಜಿಲ್ಲೆ.

ಪೋತ್ನಾಳ ವಿಚಾರಣೆ

ಹೆಸರು – ಸೇಂಟ್ ಕ್ಲೇರ ಆಫ್ ಆಸಿಸಿ ಚರ್ಚ್

ಸ್ಥಾಪನೆ – ೧೯೯೪

ಪಾದ್ರಿ – ರೆ.ಫಾ. ಆಂಟೋನಿರಾಜ

ವಿಳಾಸ – ಸೇಂಟ್ ಕ್ಲೇರ್ ಆಫ್ ಚರ್ಚ್, ಪೋತನಾಳ ೫೮೪ ೧೨೩, ರಾಯಚೂರು ಜಿಲ್ಲೆ.

ಮಸ್ಕಿ ವಿಚಾರಣೆ

ಹೆಸರು – ಸೇಂಟ್ ಜಾನ್ ಚರ್ಚ್

ಸ್ಥಾಪನೆ – ೧೯೬೬

ಆರಂಭಿಕ ಪಾದ್ರಿ– ಲಿಯೋ ಮೈಕೆಲ್

ವಿಳಾಸ – ಸೇಂಟ್ ಜಾನ್ ಚರ್ಚ್, ಮಸ್ಕಿ ೫೮೪ ೧೨೪

ಪಾದ್ರಿ – ಫಾದರ್ ಚಿನ್ನಪ್ಪ

ವಕ್ತೃ – ಜೋಸೆಫ್ ಬಡಿಗೇರ, ಶಿಕ್ಷಕರು

ಈ ವಿಚಾರಣೆಯಲ್ಲಿ ಕೆಥೋಲಿಕ್ ಪಂಥದೊಂದಿಗೆ ಇನ್ನಿತರ ಅಂದರೆ ಮೆಥೋಡಿಸ್ಟ್, ಅಗಾಪೆ ಚರ್ಚ್‌ಗಳು ಇವೆ. ಕೆಥೋಲಿಕ್ ಮಸ್ಕಿ ವಿಚಾರಣೆಯು ಸಾಂಸ್ಕೃತಿಕವಾಗಿ **ಶಿಲುಬೆ ಮೆರವಣಿಗೆ ಹಬ್ಬ, ಬಾಲಯೇಸು ಮೆರವಣಿಗೆ** ಹಬ್ಬಗಳನ್ನು ಮಾಡುತ್ತದೆ. ವಿಶೇಷವಾಗಿ ಆರಂಭಿಕ ದಿನಗಳಲ್ಲಿ ಊರಲ್ಲಿರುವ 'ದೇವದಾಸಿ' ಪದ್ಧತಿಯನ್ನು ಬಿಡಿಸಿ ಶಿಕ್ಷಣ ಕೊಡಿಸುವ ಉತ್ತಮ ಕೆಲಸ ಮಾಡಿದರು ಅಲ್ಲದೆ ಉಚಿತ ಆರೋಗ್ಯ ಚಿಕಿತ್ಸಾ ವ್ಯವಸ್ಥೆಯನ್ನು ಸಹಿತ ಮಾಡಿದ್ದರು. ಹಳ್ಳಿಯ ಹೆಣ್ಣುಮಕ್ಕಳಿಗೆ ವಿಶೇಷ ಕಾಳಜಿಯನ್ನು ಮಾಡುತ್ತಾರೆ ಎಂದು ತಿಳಿಯಲಾಯಿತು.

ಈ ವಿಚಾರಣೆಯು ವಿಶೇಷವಾಗಿ **'ಮರಿಯಮ್ಮದೇವಿ'** ಜಾತ್ರೆಯೆಂದು ಆಚರಿಸುತ್ತದೆ. ಆಡು ಭಾಷೆಯಲ್ಲಿ **'ಮರದೇವಿ'** ಎಂದೇ ಹೇಳುತ್ತಿದ್ದರು. ಅಲ್ಲದೆ ಹಿಂದೂ ಆಚರಣೆಗಳಾದ ಮಸ್ಕಿ

ಮಲ್ಲಿಕಾರ್ಜುನ ಜಾತ್ರೆ, ಮಸ್ಕಿ ಮಲ್ಲಯ್ಯನ ಜಾತ್ರೆ ಮತ್ತು ೯ ಹನುಮಪ್ಪ ಗುಡಿಗಳ ಉತ್ಸವ ನಡೆಯುತ್ತದೆ ಎಂದು ಸಂದರ್ಶನದಿಂದ ತಿಳಿಯಲಾಯಿತು. ಈ ಮಸ್ಕಿ ವಿಚಾರಣೆಗೆ ಸಂಬಂಧಿಸಿದ ಊರುಗಳು–

೧. ಅಂತರಗಂಗಿ

೨. ಬಾಗಂಬೆಂಚಿ

೩. ನಂಜಲದಿನ್ನಿ

೪. ಬೆನಕಿನಾಲ

೫. ನೀರಲೂಟಿ

೬. ಉಸ್ಕಿಹಾಳ

೭. ಕಾಟಗಲ್

೮. ಉದ್ಬಾಳ

೯. ಊವಿನಬಾವಿ

೧೦. ಬೆಂಚಿನ ಮರಡಿ

೧೧. ಅಂಚಿನಾಳ

೧೨. ಹಿರೆಕಡಬೂರು

೧೩. ವೆಂಕಟಾಪುರ

೧೪. ಬೈಗುಡ್ಡ

೧೫. ಮೆದಿಕಿನಾಳ

೧೬. ಬೈಲಗುಡ್ಡ ಹೊಲ

೧೭. ನಾಗರಬೆಂಚಿ ಹೊಲ

೧೮. ದೂರಲದಿನ್ನಿ

ಮಾನವಿ ವಿಚಾರಣೆ

ಸ್ಥಾಪನೆ – ೧೯೪೯

ಪಾದ್ರಿ – ವಿನ್ಸೆಂಟ್ ಎನ್.ಎ.

ವಿಳಾಸ – ಸೇಂಟ್ ಮೇರಿ ಚರ್ಚ್, ಮಾನ್ವಿ–೫೮೪ ೧೨೩, ರಾಯಚೂರು ಜಿಲ್ಲೆ.

ಈ ಮಾನವಿಯ ಕ್ರೈಸ್ತ ಸಭೆ/ವಿಚಾರಣೆ ವರ್ಷಕ್ಕೊಮ್ಮೆ **ಮೇರಿ ಮಾತೆ ಜಾತ್ರೆ** ಎಂದು ನಿರ್ವಹಿಸುತ್ತದೆ. ಮತ್ತು ಶಿಕ್ಷಣ, ಆರೋಗ್ಯ, ವಸತಿಶಾಲೆ, ಪದವಿಪೂರ್ವ ಕಾಲೇಜು, ಯುವಕರ ಸಂಘ, ಸಾಮಾಜಿಕ ಸೇವಾ ಸಮಿತಿಗಳನ್ನು ಮಾಡಿದೆ. **'ಜನೋದಯ'** ಎಂಬ ಸಮಾಜ ಸೇವಾ ಸಮಿತಿ, **ದಯಾ ನಿವಾಸ** ಎಂಬ ಕೌಶಲ್ಯ ತರಬೇತಿ ಶಾಲೆ ಎಂದು ವಿವಿಧ ಸದುಪಯೋಗದ ಕಾರ್ಯಗಳನ್ನು ಹಮ್ಮಿಕೊಂಡಿದೆ. ಈ ಸಭೆಗೆ ಇನ್ನು ಸೇರಿರುವ ಊರುಗಳು (ವಿಚಾರಣೆ) ಹೀಗಿವೆ.

೧. ಕಪಗಲ್

೨. ನಂದ್ಯಾಳ

೩. ಮರ್ಚೆಡ

೪. ಮುಷ್ಟೂರ

೫. ಚೀಕಲಪರ್ವಿ

೬. ಮದ್ಲಾಪುರ

೭. ಬುದ್ದಿನ್ನಿ

೮. ಕಾತರಕಿ

೯. ಪೊನ್ನೂರ

೧೦. ರಂಗದಾಳ

೧೧. ಅಮರಾವತಿ

೧೨. ನಸ್ಲಾಪುರ

೧೩. ಆಲ್ದಾಳ

೧೪. ಕರಡಿಗುಡ್ಡ

೧೫. ಗುಡದಿನ್ನಿ

೧೬. ಚಿಮ್ಲಾಪುರ

ಮುದಗಲ್ ವಿಚಾರಣೆ

ಹೆಸರು–ಪವಿತ್ರ ಹೃದಯ ದೇವಾಲಯ

ಪಾದ್ರಿ – ರೆ.ಫಾ. ಎಂ.ಡಿ. ವಿನ್ಸೆಂಟ್

ಸ್ಥಾಪನೆ – ೧೫೦೨

ವಿಳಾಸ ಸ್ಯಾಕ್ರೆಡ್ ಹಾರ್ಟ್ ಚರ್ಚ್, ಮುದಗಲ್–೫೮೪ ೧೨೫

ಈ 'ಪವಿತ್ರ ಹೃದಯ ದೇವಾಲಯ' ಎಂಬ ಕ್ಯಾಥೋಲಿಕ್ ಚರ್ಚ್ ಕ್ರಿ.ಶ. ೧೫೦೨ರಲ್ಲಿ ನಿರ್ಮಾಣ ಆಗಿದ್ದರಿಂದ ದಕ್ಷಿಣ ಭಾರತದಲ್ಲಿಯೇ ಅತ್ಯಂತ ಪ್ರಾಚೀನ ಪ್ರಥಮ ಚರ್ಚ್ ಅಥವಾ ದೇವಾಲಯವೆಂದು ಹೆಸರುವಾಸಿಯಾಗಿದೆ. ಕ್ರಿ.ಶ. ೧೫೫೭ರಲ್ಲಿ ವಿಜಯಪುರದ ಇಬ್ರಾಹಿಂ ಆದಿಲ್‌ಶಾಹಿ ಮುದಗಲ್ ಚರ್ಚ್ ಅಭಿವೃದ್ಧಿಗಾಗಿ ಭೂಮಿಯನ್ನು ದೇಣಿಗೆ ನೀಡಿದನೆಂದು ಜಿಲ್ಲಾಧಿಕಾರಿಗಳು ಆಗಿರುವಂತಹ ಬಸೀರ ಅಹ್ಮದ್ ಬರೆದ **'ಬಿಜಾಪುರ ಇತಿಹಾಸ'** ಕೃತಿಯಲ್ಲಿ ಉಲ್ಲೇಖವಿದೆ. ಕ್ರಿ.ಶ. ೧೫೦೦ರ ವೇಳೆಗೆ ಮುದಗಲ್ ಪಟ್ಟಣ ದೊಡ್ಡ ವ್ಯಾಪಾರ ಕೇಂದ್ರವಾಗಿದ್ದರಿಂದ ಪೋರ್ಚುಗೀಸರು ವ್ಯಾಪಾರಕ್ಕಾಗಿ ಮುದಗಲ್‌ಗೆ ಬಂದರು ತರುವಾಯ ಆದಿಲ್‌ಶಾಹಿ ಅವರಿಂದ ಚರ್ಚನ್ನು ನಿರ್ಮಿಸಿಕೊಂಡರು ಅಲ್ಲದೆ ಪೋರ್ಚುಗೀಸನ ಫಾದರ ರಿಚರ್ಡ್ ಮತ್ತು ಒವೆನ್ ಗೋವಾಕ್ಕೆ ಹೋಗುವ ಮುನ್ನ ಈ ಮುದಗಲ್ ಪಟ್ಟಣಕ್ಕೆ ಬಂದಿದ್ದರು ಎಂದು ಕ್ಷೇತ್ರಕಾರ್ಯದಿಂದ ಗಮನಿಸಲಾಯಿತು. ಪ್ರಸ್ತುತ ಈ ಮುದಗಲ್ ಧರ್ಮಕ್ಷೇತ್ರದಲ್ಲಿ ವರ್ಷಕ್ಕೆ ಒಂದಾವರ್ತಿ **'ಮೂರು ರಾಯರ ಹಬ್ಬ'** ಮತ್ತು **'ಕಾಡು ವನದ ಚಿನ್ನಪ್ಪ ಜಾತ್ರೆ'** ಎಂದು ಅತ್ಯಂತ ವಿಜೃಂಭಣೆಯಿಂದ ನೆರವೇರಿಸುತ್ತಾರೆ. ಮಳೆಗಾಗಿ ಆ ಗುಡ್ಡದಲ್ಲಿ ಪ್ರಾರ್ಥಿಸುತ್ತಾರೆ. ಅಲ್ಲದೆ ಊರಿನ ಎಲ್ಲಾ ಜನರಿಗೆ ಆಹ್ವಾನಿಸಿ ಮಾಂಸದ ಊಟವನ್ನು ನೀಡುತ್ತಾರೆ. ಇಷ್ಟವುಳ್ಳವರು ಆತಿಥ್ಯ ಸ್ವೀಕರಿಸುವರು. ಇನ್ನು ಆರೋಗ್ಯ ಶಿಕ್ಷಣದ ಬಗ್ಗೆ ವಿಶೇಷ ಒತ್ತು ನೀಡುತ್ತದೆ. ಇಂತಹ ಧರ್ಮಕ್ಷೇತ್ರಕ್ಕೆ ಸಂಬಂಧಿಸಿದ ಉಪ ಕೇಂದ್ರಗಳು ಅಥವಾ ಊರುಗಳು ಹೀಗಿವೆ.

೧. ಮರಳಿ

೨. ವಂದಾಲಿ

೩. ಜಾಂತಾಪುರ

೪. ಕಡದರಾಳ ತಾಂಡ

೫. ಕಡದರಾಳ

ರಾಯಚೂರು ವಿಚಾರಣೆ

ಹೆಸರು – ಸೇಂಟ್ ಫ್ರಾನ್ಸಿಸ್ ಝೇವಿಯರ್ ಚರ್ಚ್

ಸ್ಥಾಪನೆ – ೧೫೮೨

ಪಾದ್ರಿ – ರೆ.ಫಾ. ವಿನ್ಸೆಂಟ್ ರೋಡ್ರಿಗೆಸ್

ವಿಳಾಸ – ಸೇಂಟ್ ಫ್ರಾನ್ಸಿಸ್ ಕ್ಷೇವಿಯರ್ ಚರ್ಚ್, ಸ್ಟೇಷನ್ ರೋಡ್, ರಾಯಚೂರು–೫೮೪೧೦೧.

ಈ ಚರ್ಚ್‌ನ ಇತಿಹಾಸ ೫೦೦ ವರ್ಷಗಳಿಂದ ಕಾಣಬರುತ್ತದೆ. ಮುದಗಲ್ ಚರ್ಚ್‌ನ ತರುವಾಯ ನಿರ್ಮಿತವಾದ ವಿಚಾರಣೆಯಾಗಿದೆ. ಈ ಚರ್ಚ್ ಸಹಿತ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದೆ. ಪ್ರಸ್ತುತ ಈ ದೇವಾಲಯದ ಅಡಿಯಲ್ಲಿ ಪ್ರಾಥಮಿಕ ಪ್ರೌಢ ಮತ್ತು ಪದವಿಪೂರ್ವ ಕಾಲೇಜನ್ನು ಸಹಿತ ನೋಡುತ್ತೇವೆ. ಅವುಗಳು ಮಹಿಳೆಯರಿಗಾಗಿಯೇ ಮೀಸಲಾಗಿವೆ ಎನ್ನಬಹುದು.

ಶಕ್ತಿನಗರ (ದೇವಸ್ಗೂರು) ವಿಚಾರಣೆ

ಹೆಸರು – ಸೇಂಟ್ ಅಲ್ಫೋನ್ಸಾ ಚರ್ಚ್

ಸ್ಥಾಪನೆ – ೧೯೮೪

ಆರಂಭಿಕ ಪಾದ್ರಿ – ರೆ.ಫಾ. ಜ್ಞಾನ ಪ್ರಗಸಂ ೧೩

ವಿಳಾಸ – ಸೇಂಟ್ ಅಲ್ಫೋನ್ಸಾ ಚರ್ಚ್, ಶಕ್ತಿನಗರ, ರಾಯಚೂರು ೫೮೪ ೧೭೦.

ಈ ವಿಚಾರಣೆಯು ಪ್ರಾಥಮಿಕ, ಪ್ರೌಢ ಶಿಕ್ಷಣ ಕೊಡುವ ಜೊತೆ ವಸತಿ ಊಟದ ವ್ಯವಸ್ಥೆಯನ್ನು ನೀಡುತ್ತದೆ ಎಂದು ಹೇಳಬಹುದು. ಇವರು ಸಾಮಾನ್ಯವಾಗಿ ಕ್ರೈಸ್ತ ಆಚರಣೆಗಳನ್ನು ನಿರ್ವಹಿಸುತ್ತಾರೆ.

ಸಿರವಾರ ವಿಚಾರಣೆ

ಹೆಸರು – ಪವಿತ್ರ ಶಿಲುಬೆ ಚರ್ಚ್ (ಹೋಲಿ ಕ್ರಾಸ್ ಚರ್ಚ್)

ಸ್ಥಾಪನೆ – ೧೯೭೯

ವಕ್ತೃ – ಪ್ರಭು ಶಿಕ್ಷಕರು

ಆರಂಭಿಕ ಪಾದ್ರಿ – ರೆವರೆಂಡ್ ಫಾದರ್ ಸ್ಯಾಮ್ ನಲನ್

ವಿಳಾಸ –ರೆ. ಫಾ. ಸ್ಯಾಮ್ ನಲನ್, ಹೋಲಿ ಕ್ರಾಸ್ ಚರ್ಚ್, ಸಿರವಾರ–೫೮೪ ೧೨೯

ಈ ವಿಚಾರಣೆಯಲ್ಲಿ 'ವಿನಯಾಲಯ' ಎಂಬ ವಸತಿ ಶಾಲೆ ಮತ್ತು ಆರೋಗ್ಯ ಕೇಂದ್ರ ಇದೆ. ಅಲ್ಲದೆ ಸಿರವಾರ ಪಟ್ಟಣದಲ್ಲಿ ಮೆಥೋಡಿಸ್ಟ್ ಸಭೆಯೂ ಇದೆ. ಸೆಪ್ಟೆಂಬರ್ ೧೪ರಂದು ಶಿಲುಬೆ

ಹಬ್ಬ ಎಂದು ಕೆಥೋಲಿಕರು ಮಾಡುತ್ತಾರೆ. ಇಲ್ಲಿ ೫೦-೬೦ ಕುಟುಂಬಗಳಿವೆ (ವಿಶ್ವಾಸಿ) ಸಾಮಾನ್ಯವಾಗಿ ಕ್ರೈಸ್ತ ಆಚರಣೆಗಳನ್ನು ಮಾಡುತ್ತಾರೆ. ಈ ವಿಚಾರಣೆಗೆ ಸಂಬಂಧಿಸಿದಂತೆ ಇರುವ ಊರುಗಳು ಹೀಗಿವೆ:

೧. ನೀಲಗಲ್

೨. ತಿಪ್ಪಲದಿನ್ನಿ

೩. ಗಣದಿನ್ನಿ

೪. ಸಿರವಾರ

೫. ನವಲಕಲ್

೬. ನಾರಬಂಡ

೭. ಪಟಕನದೊಡ್ಡಿ

೮. ಕುರುಕುಂದ

೯. ಕಸನದೊಡ್ಡಿ

೧೦. ಹೀರಾ

೧೧. ಉಡಾ

೧೨. ಮಲ್ಲಟ

೧೩. ಗೊಲ್ಲದಿನ್ನಿ

೧೪. ಚಿಕ್ಕಬಾದರದಿನ್ನಿ

೧೫. ನುಗಡೋಣಿ

೧೬. ಜಾಗಬಾವಿ

ಸಿಂಧನೂರು ವಿಚಾರಣೆ

ಹೆಸರು - ಪವಿತ್ರ ಕುಟುಂಬ ದೇವಾಲಯ (ಹೋಲಿ ಫ್ಯಾಮಿಲಿ ಚರ್ಚ್)

ಸ್ಥಾಪನೆ - ೧೯೮೪

ಆರಂಭಿಕ ಪಾದ್ರಿ - ರೆ.ಫಾ. ಮಾರ್ಕ್ ಗೊನಸಾಲ್ವೆಸ್

ವಕ್ತೃ - ಚಾರಪ್ಪ, ಶಿಕ್ಷಕರು

ಈ ವಿಚಾರಣೆಯಲ್ಲಿ ಶಿಕ್ಷಣದ ವ್ಯವಸ್ಥೆ ಅಂದರೆ ಪ್ರಾಥಮಿಕ, ಪ್ರೌಢ ಶಿಕ್ಷಣ ನೀಡುವ ಶಾಲೆಗಳಿವೆ. ೭೦-೧೦೦ ಕುಟುಂಬಗಳು ವಿಶ್ವಾಸಿಗಳಾಗಿ ಇವೆ. ಈ ಪಟ್ಟಣದಲ್ಲಿ ಕಥೋಲಿಕರಂತೆ ಮೆಥೋಡಿಸ್ಟ್, ಇವ್ಯಾಂಜಲಿಕ್ ಮತ್ತು ಬೈಬಿಲ್ ಮಿಷನ್ ಚರ್ಚ್‌ಗಳಿವೆ. ಈ ವಿಚಾರಣೆಗೆ ಸಂಬಂಧಿಸಿದ ಊರುಗಳು ಹೀಗಿವೆ.

೧. ಬೂದಿಹಾಳ

೨. ಬಂಗಾರ ಕ್ಯಾಂಪ್

೩. ತುರವಿಹಾಳ

೪. ಪ್ರಭುಕ್ಯಾಂಪ್

೫. ಪಗಡದಿನ್ನಿ ಕ್ಯಾಂಪ್

೬. ಕುರ್ಕುಂದಿ

೭. ಶ್ರೀಪುರಂ ಜಂಕ್ಷನ್

೮. ತಿಡಿಗೋಳ

ಈ ವಿಚಾರಣೆ ಆರಂಭವಾಗುವುದಕ್ಕಿಂತ ಮುಂಚೆ ರಾಯಚೂರು ಮುದಗಲ್ ವಿಚಾರಣೆಗಳಿದ್ದವು. ಅವುಗಳಿಂದಲೇ ಈ ವಿಚಾರಣೆ ಆರಂಭವಾಯಿತು. ಅಲ್ಲದೆ ರಾಯಚೂರು ಮತ್ತು ಮಂಗಳೂರಿನಿಂದ **'ಮುದಗಲ್'ಗೆ 'ಮೇಣದ ಅಡ್ಡಪಲ್ಲಕ್ಕಿ'** ಹೊಯ್ತಿದ್ದರು ಎಂದು ಸಂದರ್ಶನದಿಂದ ತಿಳಿಯಲಾಯಿತು.

ಹಟ್ಟಿ ವಿಚಾರಣೆ

ಹೆಸರು – ಪವಿತ್ರ ಹೃದಯ ದೇವಾಲಯ (ಸ್ಯಾಕ್ರೆಡ್ ಹಾರ್ಟ್ ಚರ್ಚ್)

ಸ್ಥಾಪನೆ – ೧೯೬೦

ವಿಳಾಸ – ಸ್ಯಾಕ್ರೆಡ್ ಹಾರ್ಟ್ ಚರ್ಚ್, ಹಟ್ಟಿ, ೫೮೪ ೧೧೫, ರಾಯಚೂರು ಜಿಲ್ಲೆ.

ಈ ಹಟ್ಟಿ ಸಭೆ ಅಧಿಕೃತವಾಗಿ ಸ್ಥಾಪನೆಯಾಗುವುದಕ್ಕಿಂತ ಮೊದಲು ನಗನೂರು ಮುದಗಲ್ ವಿಚಾರಣೆಗೆ ಸಂಬಂಧಿಸಿತ್ತು. ಆಮೇಲೆ ಅದು ಸ್ವತಂತ್ರ ಸಭೆಯಾಗಿ ೧೯೬೦ರಲ್ಲಿ ಸ್ಥಾಪನೆಯಾಯಿತು. ಈ ವಿಚಾರಣೆಯು ಕೂಡ ಶಿಕ್ಷಣ ಅಂದರೆ ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿ ಪ್ರಸ್ತುತ ನೀಡುತ್ತಿದೆ ಎಂದು ತಿಳಿಯಲಾಯಿತು.

ಹಾರಾಪುರ ವಿಚಾರಣೆ

ಹೆಸರು – ಜೀವನ ಮುಕ್ತಿ ಮಂದಿರ

ಪಾದ್ರಿ – ರೆ.ಫಾ. ಇರುದಯಾರಾಜ ಪಿ.ಜೆ.

ಸ್ಥಾಪನೆ – ೧೯೯೪

ವಿಳಾಸ – ಜೀವನ ಮುಕ್ತಿ ಮಂದಿರ, ಮುದ್ದಾಪುರ ಕ್ರಾಸ್ ರೋಡ್, ಹಾರಾಪುರ, ಸಿಂಧನೂರು ೫೮೪ ೧೨೮, ರಾಯಚೂರು ಜಿಲ್ಲೆ.

ಹಿರೆನಗನೂರು ವಿಚಾರಣೆ

ಹೆಸರು – ನಮ್ಮ ಮರಿಯ ಫಾತಿಮಾ ದೇವಾಲಯ (ಅವರ್ ಲೇಡಿ ಆಫ್ ಫಾತಿಮ ಚರ್ಚ್)

ಸ್ಥಾಪನೆ – ೧೯೮೬

ಆರಂಭಿಕ ಪಾದ್ರಿ – ರೆ.ಫಾ. ಜ್ಞಾನ ಪ್ರಕಾಸಂ

ವಿಳಾಸ – ಅವರ್ ಲೇಡಿ ಆಫ್ ಫಾತಿಮಾ ಚರ್ಚ್, ಹಿರೆನಗನೂರು ೫೮೪ ೧೧೫, ವಯಾ ಹಟ್ಟಿ, ರಾಯಚೂರು ಜಿಲ್ಲೆ.

ರಾಯಚೂರು ಜಿಲ್ಲೆಯಾದ್ಯಂತ ಯಾವ ಯಾವ ಪ್ರದೇಶಗಳಲ್ಲಿ ಚರ್ಚುಗಳನ್ನು ಪ್ರಾರಂಭ ಮಾಡಲಾಯಿತು, ಆ ಚರ್ಚುಗಳ ಹೆಸರೇನು? ಆ ಚರ್ಚಿನ ಪಾದ್ರಿ ಯಾರಾಗಿದ್ದರು? ಮತ್ತು ಸ್ಥಾಪನೆಗೊಂಡ ವರ್ಷವನ್ನು ತಿಳಿಸಲಾಗಿದೆ. ಚರ್ಚಿನಲ್ಲಿ ನಡೆಯುತ್ತಿದ್ದ ಹಬ್ಬ ಆಚರಣೆಗಳ ಬಗ್ಗೆ ತಿಳಿಸಿಕೊಡಲಾಗಿದೆ. ಜನರಿಗೆ ಯಾವ ಯಾವ ರೀತಿಯ ಸೌಲಭ್ಯಗಳನ್ನು ಕೊಡಲಾಗುತ್ತಿದೆ ಹಾಗೂ ಯಾವ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ ಎಂಬುದನ್ನು ಗಮನಿಸಲಾಗಿದೆ. ರಾಯಚೂರು ಜಿಲ್ಲೆಯು ಎಲ್ಲಾ ತಾಲೂಕು ಹಾಗೂ ಹಳ್ಳಿಗಳಲ್ಲಿರುವ ಚರ್ಚುಗಳು, ಹಬ್ಬ, ಜಾತ್ರೆ, ಪ್ರಾರ್ಥನೆ ಮುಂತಾದ ಧಾರ್ಮಿಕ ಆಚರಣೆಗಳನ್ನು ಮಾಡುವುದರ ಜೊತೆಗೆ ಜನರ ಶೈಕ್ಷಣಿಕ ಮತ್ತು ಆರೋಗ್ಯ ಸುಧಾರಣೆಗಾಗಿ ಶ್ರಮಿಸಿದ್ದಾರೆ. ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಾರೆ. ಶಾಲೆ, ವಸತಿ ಶಾಲೆ, ಕಾಲೇಜು, ಆರೋಗ್ಯ ಕೇಂದ್ರಗಳನ್ನು ನಿರ್ಮಿಸಿದ್ದಾರೆ. ಜೊತೆಗೆ ಸಾಮಾಜಿಕ ಸೇವಾ ಸಮಿತಿ ಮತ್ತು ಕೌಶಲ್ಯ, ತರಬೇತಿ ಕೇಂದ್ರಗಳನ್ನು ಆರಂಭ ಮಾಡಿ ಜನರ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸಿರುವುದು ಕಂಡುಬರುತ್ತದೆ. ರಾಯಚೂರು ಜಿಲ್ಲೆಯಲ್ಲಿನ ಚರ್ಚುಗಳು ಕ್ರೈಸ್ತ ಧರ್ಮದ ಅನುಯಾಯಿಗಳಿಗೆ ಶಿಕ್ಷಣದಿಂದ ವಂಚಿತರಾದವರಿಗೆ ಶಿಕ್ಷಣ ಅನಾರೋಗ್ಯದಿಂದ ಬಳಲುತ್ತಿದ್ದವರಿಗಾಗಿ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಿ ಸಮಾಜ ಸುಧಾರಣೆಗಾಗಿ ಶ್ರಮಿಸಿರುವುದು ಕಂಡುಬರುತ್ತದೆ ಎಂದು ಹೇಳಬಹುದಾಗಿದೆ.

ಶಿಕ್ಷಣ ಸಂಸ್ಥೆಗಳು

೧. ಇನಫಿಂಟ್ ಜೀಸಸ್ ಪಿ.ಯು. ಕಾಲೇಜ್, ಇನ್‌ಫಿಂಟ್ ಜೀಸಸ್ ಡಿಇಡಿ ಕಾಲೇಜು, ವಿದ್ಯಾನಗರ, ರಾಯಚೂರು.

೨. ಬ್ಲೆಸಡ್ ಅಲ್ಫೋನ್ಸಾ ಸ್ಕೂಲ್, ಶಕ್ತಿನಗರ, ರಾಯಚೂರು

೩. ಹೋಲಿ ಫ್ಯಾಮಿಲಿ ಸ್ಕೂಲ್ ಸಿಂಧನೂರು, ರಾಯಚೂರು

೪. ಸೇಂಟ್ ಜಾನ್ಸ್ ಸ್ಕೂಲ್, ಮಸ್ಕಿ, ರಾಯಚೂರು

೫. ಸ್ಯಾಕ್ರೆಡ್ ಹಾರ್ಟ್ ಸ್ಕೂಲ್, ಮುದಗಲ್, ರಾಯಚೂರು

೬. ಇನ್‌ಫಿಂಟ್ ಜೀಸಸ್ ಸ್ಕೂಲ್, ಬಾಲಯೇಸು ಸಿ.ಬಿ.ಎಸ್.ಇ. ಸ್ಕೂಲ್, ವಿದ್ಯಾನಗರ, ರಾಯಚೂರು

೭. ನವಚೇತನ ಸ್ಕೂಲ್, ಕವಿತಾಳ, ರಾಯಚೂರು

೮. ಹೋಲಿ ಕ್ರಾಸ್ ಸ್ಕೂಲ್, ಸಿರವಾರ, ರಾಯಚೂರು ಜಿಲ್ಲೆ

೯. ನಿವೇದಿತಾ ಪಬ್ಲಿಕ್ ಸ್ಕೂಲ್, ಶಕ್ತಿನಗರ, ರಾಯಚೂರು ಜಿಲ್ಲೆ

೧೦. ಮೌಂಟ್ ಕಾರ್ಮಲ್ ಸ್ಕೂಲ್, ಗುರುಗುಂಟಾ, ಲಿಂಗಸ್ಗೂರು, ರಾಯಚೂರು ಜಿಲ್ಲೆ

೧೧. ಮೇರಿ ಗರ್ಲ್ಸ್, ಕಿಂಡರ್‌ಗಾರ್ಡನ್ ಸ್ಕೂಲ್, ಮೇರಿ ಗರ್ಲ್ಸ್ ಪ್ರಾಥಮಿಕ ಶಾಲೆ, ಮೇರಿ ಗರ್ಲ್ಸ್ ಪ್ರೌಢಶಾಲೆ, ಮೇರಿ ಗರ್ಲ್ಸ್, ಪಿ.ಯು. ಕಾಲೇಜಂ, ಸ್ಟೇಷನ್ ರೋಡ್, ರಾಯಚೂರು.

೧೨. ಸ್ನೇಹ ಜ್ಯೋತಿ ವಿದ್ಯಾಲಯ, ಪೋತ್ನಾಳ, ರಾಯಚೂರು ಜಿಲ್ಲೆ

೧೩. ಸೇಂಟ್ ಝೇವಿಯರ್ ಸ್ಕೂಲ್, ಸೇಂಟ್ ಝೇವಿಯರ್ ಪಿ.ಯು. ಕಾಲೇಜ್, ಮಾನವಿ, ರಾಯಚೂರು

೧೪. ಲಿಟಲ್ ಫ್ಲವರ್ ಸ್ಕೂಲ್, ಲಿಂಗಸ್ಗೂರು, ರಾಯಚೂರು ಜಿಲ್ಲೆ

೧೫. ಜ್ಞಾನ ವಿದ್ಯಾಲಯ ಹಿರಿಯ ಪ್ರಾಥಮಿಕ ಶಾಲೆ ಜೆ.ಎಮ್.ಜೆ. ಪ್ರೌಢಶಾಲೆ, ಕೆ. ಮರಿಯಮ್ಮನಹಳ್ಳಿ, ಮುದಗಲ್, ರಾಯಚೂರು ಜಿಲ್ಲೆ

೧೬. ಸೇಂಟ್ ಅಂಟನಿ ಹಿರಿಯ ಪ್ರಾಥಮಿಕ ಶಾಲೆ, ಜವಳಗೇರಾ, ರಾಯಚೂರು ಜಿಲ್ಲೆ

೧೭. ಸೇಂಟ್ ಅನ್ನಾಸ್ ಪ್ರಾಥಮಿಕ, ಹಿರಿಯ ಮತ್ತು ಪ್ರೌಢ ಶಾಲೆ, ಹಟ್ಟಿ, ರಾಯಚೂರು ಜಿಲ್ಲೆ

೧೮. ಡಾನ್‌ಬಾಸ್ಕೋ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ದೇವದುರ್ಗ ರಾಯಚೂರು ಜಿಲ್ಲೆ

ರಾಯಚೂರು ಜಿಲ್ಲೆಯ ಕ್ರೈಸ್ತ ಹಾಗೂ ಕ್ರೈಸ್ತ ಚರಿತ್ರೆಯನ್ನು ಗಮನಿಸಿದಾಗ ದಕ್ಷಿಣ ಭಾರತದ ಮೊಟ್ಟ ಮೊದಲ ಕ್ರೈಸ್ತ ಜನ್ಮಸ್ಥಳ ಎಂಬುದಾಗಿ ಲಿಂಗಸ್ಗೂರು ತಾಲೂಕಿನ ಮುದಗಲ್ಲನ್ನು ಕಾಣಬಹುದು.

ಹಾಗೆಯೇ ಸಾಂಸ್ಕೃತಿಕವಾಗಿ ಅವಲೋಕನ ಮಾಡಿದಾಗ ಕ್ರೈಸ್ತರಲ್ಲಿ ಪ್ರಮುಖವಾಗಿ ಎರಡು ಪಂಗಡಗಳಿವೆ. ಆ ಪಂಗಡಗಳಲ್ಲಿ ಮೊದಲ ಪಂಗಡ ರೋಮನ್ ಕೆಥೋಲಿಕ್ ಪಂಗಡ. ಇವರು ನಮ್ಮ ನಾಡಿನಲ್ಲಿ ಕೇವಲ ಧಾರ್ಮಿಕ ವಿಚಾರಗಳನ್ನು ಮಾತ್ರ ಹೇಳದೆ, ಅಕ್ಷರ, ಆರೋಗ್ಯ, ಸ್ವಾವಲಂಬನೆ ಹಾಗೂ ಸೇವಾ ಮನೋಭಾವನೆಯನ್ನು ಬೆಳೆಸಿದೆ ಎಂದು ತಿಳಿಯಲಾಯಿತು. ಹಾಗೆಯೇ ಪ್ರೊಟೆಸ್ಟೆಂಟ್‌ರ ಪಂಗಡದಲ್ಲಿಯೂ ವಿಶೇಷವಾಗಿ ಮೆಥೋಡಿಸ್ಟ್, ಅಗಾಪೆ, ಪೆಂತೆಕೋಸ್ಟ್ ಇನ್ನಿತರ ಹಲವು ಅಂಗ ಸಂಸ್ಥೆಗಳು ಕ್ರೈಸ್ತ ಸಂಸ್ಕೃತಿಯನ್ನು ನಮ್ಮ ಕನ್ನಡ ಭಾಷೆಯಲ್ಲಿಯೇ ಪ್ರಚುರಪಡಿಸುತ್ತವೆ. ಇದರಿಂದ ನಮ್ಮ ಕನ್ನಡದ ವ್ಯಾಪ್ತಿ ವಿಶಾಲವಾಗಿದೆ ಎಂದು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

೪.೨. ಸ್ಥಳೀಯ ಸಂಸ್ಕೃತಿ ಮತ್ತು ಕ್ರೈಸ್ತ ಸಂಸ್ಕೃತಿ

ಮತಾಂತರಪೂರ್ವ ಕ್ರೈಸ್ತರು ಅನೇಕ ಹಿಂದು ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರು. ಯಾಕೆಂದರೆ ಆಗ ಅವರೆಲ್ಲ ಹಿಂದುಗಳೇ ಹೌದು ಇವತ್ತಿಗೂ ಹಿಂದುಗಳೇ ಆದರೆ ಮನಸ್ಸಿನಿಂದ ಮಾತ್ರ ಯೇಸುವನ್ನು ನಂಬಿದ್ದಾರೆ. ದಾಖಲಾತಿಯಿಂದ ಬದಲಾದವರು ಕುರ್ಡಿಯಲ್ಲಿ ಕೆಲವರು ಮಾತ್ರ ಎಂದು ಹೇಳಬಹುದು. ರಾಯಚೂರು ಜಿಲ್ಲೆಯ ಕುರ್ಡಿ ಗ್ರಾಮದಲ್ಲಿ ಮತಾಂತರ ಹಾಗೂ ಮಾನಸಾಂತರ ಪೂರ್ವದಲ್ಲಿ ಇಂದಿನ ಕ್ರೈಸ್ತರು ಹಿಂದೂ ಆಚರಣೆ ನಂಬಿಕೆಗಳಲ್ಲಿ ತುಂಬಾ ಸಕ್ರಿಯವಾಗಿದ್ದರು. ಇದನ್ನು ಸ್ಥಳೀಯ ಸಂಸ್ಕೃತಿ ಎನ್ನಬಹುದಾಗಿದೆ. ಇವರು ಮಾಡುತ್ತಿದ್ದ ಆಚರಣೆಗಳು ಈಗಿವೆ.

೧. ದೇವಿಜಾತ್ರೆ ಮಹೋತ್ಸವ

೨. ಲಕ್ಷ್ಮೀ ಜಾತ್ರೆ

೩. ಮೊಹರಂ ಹಬ್ಬ

೪. ಬಸವಣ್ಣನ ಪೂಜೆ (ಕಾರಹುಣ್ಣಿಮೆ) ಸಂಕ್ರಾತಿ, ಯುಗಾದಿ

ಈ ಮೇಲಿನ ಆಚರಣೆಗಳನ್ನು ಹಾಡು, ಘೋಷಣೆ, ಕುಣಿತಗಳಿಂದ ಮಾಡುತ್ತಿದ್ದರು. ಇವತ್ತಿಗೂ ಈ ಆಚರಣೆಗಳು ರೂಢಿಯಲ್ಲಿವೆ. ದೇವಿಜಾತ್ರೆಯಲ್ಲಿ ಕ್ರೈಸ್ತರದ್ದೇ ಸಿಂಹಪಾಲು ಇರುತ್ತದೆ. ದೇವಿ ಮತ್ತು ಮಾದಿಗರ ಹುಡುಗ ಇಬ್ಬರು ಪ್ರೀತಿ ಮದುವೆಯಾದವರೆಂದು ಕೊನೆಯಲ್ಲಿ ಗೊತ್ತಾಗಿ ಹುಡುಗನ ಪ್ರತಿರೂಪವಾಗಿ ಕೋಣವನ್ನು ಬಲಿಕೊಡುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಈ ಜಾತ್ರೆಯಲ್ಲಿ ವಿಶೇಷವೆಂದರೆ ಸಾರ್ವಜನಿಕ ಸಮಕ್ಷಮದಲ್ಲಿ ಹಾಡುವ ಕ್ರಿಯೆ, ಸಾಮಾಜಿಕವಾಗಿ ಸಮಾನತೆಯನ್ನು ಸೂಚಿಸುವ ಊಟದ ಪಂಕ್ತಿಯನ್ನು ಗಮನಿಸಬಹುದು. ಇದೊಂದು ಅನ್ಯೋನ್ಯತೆಯ ಅವಿನಾಭಾವ ಸಂಬಂಧವಾಗಿರುತ್ತದೆ. ನಂಬಿಕೆ ಸಂಪ್ರದಾಯಗಳಲ್ಲಿ ಇದು ದೊಡ್ಡದಾಗಿರುತ್ತದೆ.

ಲಕ್ಷ್ಮಿದೇವಿ ಜಾತ್ರೆಯೊಂದು ಎಲ್ಲರೂ ಆಚರಿಸುವಂತಹದ್ದಾಗಿದೆ. ಕ್ರೈಸ್ತರು ಆಚರಿಸುತ್ತಾ ಇರುವಾಗ ಕಲ್ಲುಗಳನ್ನು ಎತ್ತುವುದು ಕಬಡ್ಡಿ ಆಡುವುದು, ಚೀಲ (ಉಸುಕಿನ)ಗಳನ್ನು ಎತ್ತುವುದು ಹೀಗೆ

ಭಕ್ತಿಯ ಜೊತೆಗೆ ಶಕ್ತಿಯ ಪ್ರದರ್ಶನ ರಂಜನೆಯ ಸ್ವಾದ ಆಗುತ್ತಿತ್ತು. ಜೊತೆಗೆ ಮೊಹರಂ ಹಬ್ಬವನ್ನು ಸಹ ಎಲ್ಲ ಕೋಮಿನ ಸಮುದಾಯ ಆಚರಿಸುವ ಪರಿಪಾಠ ಇತ್ತು. ಇದೇ ಈ ಹಬ್ಬದಲ್ಲಿ ಬಳಸುವ ಪದಗಳು, ದುಲ್ಯೋ, ದುಲ್ಯೋ ಬಲೋ, ಹಿಂದೆ ಮುಂದೆ ಎಂಬ ಶಬ್ದ (ಧ್ವನಿ)ಗಳು ಹೊರಬರುತ್ತವೆ. ಇದೊಂದು ಸರ್ವಸಮುದಾಯಗಳ ಏಕತೆಯನ್ನು ಸೂಚಿಸುವ ಹಿಂದು ಮುಸ್ಲಿಂರ ಒಗ್ಗೂಡಿಸುವ ಮಂತ್ರದಂತೆ ಇದೆ ಎನ್ನಬಹುದು. ಹೀಗೆ ಕ್ರೈಸ್ತರು ಹಿಂದುಗಳ ಜಾತ್ರಾ ಮಹೋತ್ಸವಗಳನ್ನು ಆಚರಿಸುವುದರಿಂದ ಸ್ಥಳೀಯ ಮತ್ತು ಕ್ರೈಸ್ತ ಸಂಸ್ಕೃತಿಯನ್ನು ಕಾಣಬಹುದಾಗಿದೆ.

ಪೂರ್ವದಲ್ಲಿ ಕ್ರೈಸ್ತರು ಅಂದರೆ ಹಿಂದೂ ಧರ್ಮದ ಪರಿಶಿಷ್ಟ ಜಾತಿಯ ಅಸ್ಪೃಶ್ಯರೆಂದೇ ಬಿಂಬಿತವಾಗಿರುವ ಈ ಜನಾಂಗ ಅನೇಕ ಆಚರಣೆಗಳನ್ನು, ನಂಬಿಕೆಗಳನ್ನು, ಕ್ರಿಯಾಚಟುವಟಿಕೆಗಳನ್ನು ತಮ್ಮ ಬದುಕಿನಲ್ಲಿ ಮಾಡಿ ಹೋಗಿದ್ದಾರೆ, ಅವುಗಳೆಂದರೆ,

೧. ಎತ್ತುಗಳ (ಸತ್ತಿರುವ) ಚರ್ಮ ಸುಲಿಯುವುದು

೨. ಗೌಡ ಕುಲಕರ್ಣಿಯವರ ಸಮಾಧಿಗೆ ಸುಣ್ಣ ಬಳಿಯುವುದು

೩. ಹೇಳಿಕೆ ಕೇಳಿಕೆ ಪಂಚಾಂಗ ಕೇಳುವುದು

೪. ಮಾಂಸಹಾರ ಸೇವನೆ

೫. ಊರಲ್ಲಿ ಉತ್ಸವಗಳಿಗೆ ಹಲಗೆ ಬಡಿಯುವುದು

೬. ಶುಭ ಕಾರ್ಯಗಳಿಗೆ ಒತ್ತಿಗೆ ಕೇಳುವುದು

೭. ಕಾಡು, ಪ್ರಾಣಿ, (ಹಂದಿ, ಮೊಲ, ಉಡ)ಗಳನ್ನು ಕೊಂದು ತಿನ್ನುವುದು

೮. ಕೋಣ, ಹೋರಿಗಳನ್ನು ದೇವರಿಗೆ ಬಿಡುವುದು

೯. ಪೂಜೆ ಪುನಸ್ಕಾರ ಮಾಡುವುದು

೧೦. ಯುಗಾದಿ ಹಬ್ಬ ಆಚರಣೆ

೧೧. ಬನ್ನಿ ಹಬ್ಬ ಆಚರಣೆ

೧೨. ಸಂಕ್ರಾಂತಿ ಆಚರಣೆ

ಹೀಗೆ ಅನೇಕ ಹಿಂದೂ ಧರ್ಮದ ಆಚರಣೆಗಳನ್ನು ಮಾಡಿ ಸುಖ ಸಂತೋಷವನ್ನು ಅನುಭವಿಸುತ್ತಿದ್ದರು. ತಾವು ಮಾಡುವ ಕೆಲಸಗಳಲ್ಲಿಯೇ ಅಂದರೆ ಹಿರಿಯರ ಎತ್ತುಗಳು ಸತ್ತರೆ ಅಸ್ಪೃಶ್ಯರು ಅದರ ಚರ್ಮವನ್ನು ಸುಲಿಯುವ ಕೆಲಸ ಮಾಡುತ್ತಿದ್ದರು. ಸಮಾಧಿಯನ್ನು ಸ್ವಚ್ಛವಾಗಿಡುವ ಕೆಲಸ ಒಂದು. ಊರಿನಲ್ಲಿ ಯಾವುದೇ ವಿಶೇಷ ಸುದ್ಧಿಯಿದ್ದರೆ ಸಾರುವ ಸಲುವಾಗಿ ಈ ಕ್ರೈಸ್ತರೇ ಹಲಗೆ ಬಡಿಯುವುದುರ ಮೂಲಕ ಹೇಳುತ್ತಿದ್ದರು. ಹಂದಿ, ಮೊಲ, ಉಡಗಳನ್ನು ಬೇಟೆಯಾಡವುದರ

ಮೂಲಕ ತಿನ್ನುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಅದೇ ಜನ ಕೋಣ, ಹೋರಿಗಳನ್ನು ತಿಕ್ಕ ತಾತನಿಗೆ, ದೇವಿಗೆ ಕೊಡುವಂತಹ ನಂಬಿಕೆಯನ್ನು ಹೊಂದಿದ್ದರು. ಈ ಎಲ್ಲಾ ಆಚರಣೆಗಳನ್ನು ಇಂದಿಗೂ ಕ್ರೈಸ್ತರು ಅನುಸರಿಸುತ್ತಿದ್ದಾರೆ ಎನ್ನಲಾಗಿದೆ. ಇವೆಲ್ಲವುಗಳಿಂದ ಸ್ಥಳೀಯ ಧರ್ಮ, ಸಂಸ್ಕೃತಿಯನ್ನು ತಿಳಿಯುವುದಾಗಿದೆ.

೪.೨.೧. ಮತಾಂತರ/ಮಾನಸಾಂತರ

ಯಾವುದೇ ಒಬ್ಬ ವ್ಯಕ್ತಿ ಹುಡುಕಿ ಹುಡುಕಿ ಕೊನೆಯಲ್ಲಿ ತನ್ನ ಮನಃಪೂರ್ವಕ ಮತ್ತು ಹೃದಯಪೂರ್ವಕ ಒಪ್ಪಿ ಕ್ರಿಸ್ತನೇ ಸತ್ಯವೂ ಮಾರ್ಗವೂ ಜೀವವೂ ಎಂದು ಅರಿತುಕೊಳ್ಳುವುದೆ 'ಮಾನಸಾಂತರ'. ಪಾಪ ಪ್ರಾಯಶ್ಚಿತ ಯಜ್ಞವೇ 'ಮಾನಸಾಂತರ' ಅಥವಾ ಹೃದಯ ಪರಿವರ್ತನೆಯೇ ಹೊರತು ಜಾತಿಯಿಂದ, ಮತದಿಂದ ಹೊರಹೋಗಿ ಮತ್ತೊಂದು ಜಾತಿ ಮತದಲ್ಲಿ ಸೇರುವುದಲ್ಲ. ಭಗವದ್ಗೀತೆಯಲ್ಲಿ ಹೇಳಿದಂತೆ 'ಪರಿವರ್ತನೆ ಜಗದ ನಿಯಮ' ಅದು ಆಂತರ್ಯದಲ್ಲಿರುವ ಬದಲಾವಣೆ. 'ಹೃದಯ ಪರಿವರ್ತನೆ' ಮಾತ್ರ ಯಾವ ಧರ್ಮವೂ ಮನುಷ್ಯನನ್ನು ಉದ್ದರಿಸಲಿಕ್ಕೆ ಆಗದು. ಕ್ರೈಸ್ತ ಧರ್ಮವೂ ಸಹ ಉದ್ಧರಿಸಲಾರದು ಆದರೆ ಕ್ರಿಸ್ತನ ತತ್ವಗಳು ಆತನ ಮಾರ್ಗಗಳು ಮನುಷ್ಯನ ತಪ್ಪಾದ ದಿಕ್ಕನ್ನು ಬದಲಾಯಿಸಿ ಸನ್ಮಾರ್ಗದೆಡೆಗೆ ನಡೆಸುವಂತದ್ದಾಗಿವೆ ಎಂದು ತಿಳಿಯಲಾಯಿತು.

ಮನುಷ್ಯ ತನ್ನ ಮೂಲ ಜಾತಿ– ಮತದಲ್ಲೇ ಪೂರ್ವಜರ (ಪಿತೃ) ಧರ್ಮದಲ್ಲಿಯೇ ತನ್ನ ಸಂಸ್ಕೃತಿ ಮತ್ತು ಭಾಷೆಯಲ್ಲಿಯೇ ಇದ್ದು ಕ್ರಿಸ್ತನನ್ನು ಆತನ ತತ್ವಗಳನ್ನು ಅನುಸರಿಸಬಹುದಾಗಿದೆ. ಇದೇ ಕ್ರಿಸ್ತನ ಸುವಾರ್ತ ಸೇವೆಯ ಉದ್ದೇಶ ಮತ್ತು ತಾತ್ಪರ್ಯವಾಗಿದೆ ಹೊರತು ಬೇರೊಂದು ಜಾತಿ ಮತದೆಡೆಗೆ ನಡೆಸುವುದಲ್ಲ. ಮತಾಂತರವೆಂದರೆ ಅನುದೇವ ಬಸವಣ್ಣನವರು ಮೂಲತಃ ವಿಶ್ವಕರ್ಮ (ಕಮ್ಮ ಬ್ರಾಹ್ಮಣರು) ಅವರು ತಮ್ಮ ಜಾತಿ, ಮತ ಬಿಟ್ಟು ಸಂಪೂರ್ಣವಾಗಿ ಆಚರಣೆ, ಪದ್ಧತಿ ಎಲ್ಲದರಿಂದಲೂ ವೀರಶೈವ ಲಿಂಗಾಯತ ಧರ್ಮ ಸ್ಥಾಪಿಸಿ ಅದನ್ನು ಸ್ವೀಕರಿಸಿದರು ಇದು 'ಮತಾಂತರ' ಎಂದು ಹೇಳಲಾಗುತ್ತದೆ.

ಕನ್ನಡ ಸತ್ಯವೇದದಲ್ಲಿ 'ಮಾನಸಾಂತರ' ಎಂದರೆ 'ದೇವರ ಕಡೆಗೆ ತಿರುಗಿಕೊಳ್ಳುವುದು' ಎಂದರ್ಥ. ಉದಾಹರಣೆಗೆ ಸ್ನಾನಿಕನಾದ ಯೋಹಾನನು ದೇವಕುಮಾರನಾದ ಕ್ರಿಸ್ತನೂ ತಮ್ಮ ಸೇವೆಯನ್ನು ಪ್ರಾರಂಭಿಸಿದಾಗ ಸಾರಿದ ಸಂದೇಶ: ಕಾಲವು ಪರಿಪೂರ್ಣವಾಯಿತು. ದೇವರ ರಾಜ್ಯವು ಸಮೀಪವಾಯಿತು. ದೇವರು ಕಡೆಗೆ ತಿರುಗಿಕೊಂಡು (ಮಾನಸಾಂತರಪಟ್ಟು) ಸುವಾರ್ತೆಯನ್ನು ನಂಬಿರಿ ಪುನರುತ್ಥಾನವಾದ ಕ್ರಿಸ್ತನು ತನ್ನ ಶಿಷ್ಯರಿಗೆ ಬೋಧಿಸಿ ಪ್ರವಾದನೆಯನ್ನು ವಿವರಿಸಿ ಹೇಳಿದಾಗಲೂ ಪ್ರಸ್ತಾಪಿಸಿದ ವಿಚಾರವೂ ಇದೆ. 'ಪಾಪ ಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕು. (ಲೂಕ ೨೪:೪೭) ಎಂಬುದನ್ನು ಗಮನಿಸಲಾಗಿದೆ.

ಮತಾಂತರ ಅಥವಾ ಮಾನಸಾಂತರ ಪೂರ್ವದಲ್ಲಿ ಕ್ರೈಸ್ತರು (ಈಗಿನ) ಯಾವ ರೀತಿಯಲ್ಲಿ ಬಾಳಿ ಬದುಕಿದ್ದರು ಎಂದು ಜಿಲ್ಲೆಯ ಕೆಲವು ಊರುಗಳಿಗೆ ಹೋಗಿ ನೇರವಾಗಿ ಸಮುದಾಯದ ಹಿರಿಯರನ್ನು ಸಂಪರ್ಕಿಸಿ ವಿಷಯಗಳನ್ನು ಸಂಗ್ರಹಿಸಲಾಯಿತು. ಅಂತಹ ಊರುಗಳು ಹೀಗಿವೆ.

ಮಾನ್ವಿ – ಪಿ. ಪರಮೇಶ

ನೆಲಹಾಳ – ಪ್ರಕಾಶ

ಆಶಾಪೂರು – ಮಾರ್ಕಪ್ಪ

ರಾಯಚೂರು – ಸೀಮೋನ್

ಸಾಂಸ್ಕೃತಿಕವಾಗಿ ರಾಯಚೂರನ್ನು ಮಾತ್ರ ನಿಗದಿಮಾಡಿಕೊಂಡಿದ್ದರಿಂದ ೪ನೆಯ ಅಧ್ಯಾಯದಲ್ಲಿ ಪ್ರಸ್ತುತ ಕ್ರೈಸ್ತರು ಆ ದಿನಗಳಲ್ಲಿ (ಹಿಂದೆ) ಅಂದರೆ ಮತಾಂತರ ಪೂರ್ವದಲ್ಲಿ ಯಾವ ವೃತ್ತಿ, ಬದುಕು, ಸಂಪ್ರದಾಯಗಳನ್ನು ಮಾಡುತ್ತಿದ್ದರು ಎಂಬ ವಿಷಯದ ಬಗ್ಗೆ ನಾನು ರಾಯಚೂರು ಜಿಲ್ಲೆಯಲ್ಲಿನ ಮಾನ್ವಿಯಲ್ಲಿರುವ ಕ್ರೈಸ್ತ ವಿಶ್ವಾಸಿಗಳಾದ ಪಿ. ಪರಮೇಶ ಹಾಗೂ ಅವರ ತಂದೆಯನ್ನು ಸಂಪರ್ಕಿಸಿದೆ ಅವರು ಈ ಕೆಳಕಂಡ ವಿಚಾರಗಳನ್ನು ತಿಳಿಸಿದರು.

ವ್ಯಕ್ತಿನಾಮಗಳಿಗೆ ಸಂಬಂಧಿಸಿದಂತೆ ಅಂದಿನ ಹೆಸರುಗಳಲ್ಲಿ ಮಾರೆಮ್ಮ, ರಾಮಯ್ಯ, ಹುಸೇನಪ್ಪ, ಹನುಮಂತಿ, ಈರಮ್ಮ, ಹನುಮಪ್ಪ ಹೀಗೆ ಹೆಣ್ಣು ದೇವತೆಗಳ ಹಿರಿಯರ ದೈವೀಮೂಲ ಹೆಸರುಗಳನ್ನು ಇಡುತ್ತಿದ್ದರು ಎಂದರು. ನಂಬಿಕೆಗಳಿಗೆ ಸಂಬಂಧಿಸಿದ ಶಾಸ್ತ್ರಗಳನ್ನು ಕೇಳುತ್ತಿದ್ದರು. ಅನೇಕ ಊರು ದೇವರೆಂದು ಜಾತ್ರೆಗಳೆಂದು ಯಲ್ಲಮ್ಮ, ಮಾರೆಮ್ಮ, ಹನುಮಪ್ಪ, ಚೌಡಮ್ಮ ಜಾತ್ರೆಗಳೆಂದು ಅತ್ಯಂತ ಆಸಕ್ತಿಯಿಂದ ಮಾಡುತ್ತಿದ್ದರು. ಇವು ಇವತ್ತಿಗೂ ಇವೆ. ಆದರೆ ಕ್ರೈಸ್ತರು ಪೂಜೆ ಮಾಡುವುದಿಲ್ಲ ಹಿಂದೂ ಆಚರಣೆ ನೋಡಿ ಆನಂದಿಸುತ್ತೇವೆ ಎಂದರು. ಏಕೆಂದರೆ ನಾವು ಕ್ರಿಸ್ತನನ್ನು ನಂಬಿಕೊಂಡಿದ್ದೇವೆ. ಹಿಂದೂ ಸಹೋದರರಿಗೆ ನೋವು ಆಗಬಾರದೆಂದು ಅವರ ಆಚರಣೆಗಳಲ್ಲಿ ಭಾಗಿಯಾಗಿ ಆಹಾರ ಸೇವಿಸುತ್ತೇವೆ ಅಷ್ಟೇ. ಪೂಜೆ ಮಾಡುವುದಿಲ್ಲ ಎಂದು ಹೇಳುವುದನ್ನು ಗಮನಿಸಲಾಗಿದೆ.

ಅದೇ ರೀತಿಯಾಗಿ ಕೆಲವು ಕ್ರೈಸ್ತರು ಮೂಡನಂಬಿಕೆಗಳಲ್ಲಿಯೂ ಜೀವಿಸುತ್ತಿದ್ದರು ಅಂದರೆ ದೇವದಾಸಿ ಪದ್ದತಿ, ಜೀತಪದ್ಧತಿ, ದೇವಾಲಯಗಳಿಗೆ ಪ್ರವೇಶವಿಲ್ಲದಿರುವುದು ಅಸ್ಪೃಶ್ಯತೆ ಎಂಬುವ ಅನಿಷ್ಟಗಳು ಇದ್ದವು. ಇವು ಮಾನವೀಯತೆಯನ್ನು ಅಲ್ಲಗೆಳೆಯುತ್ತಿದ್ದವು. ಈ ವಿಚಾರಗಳಿಂದ ಇವತ್ತು ಸಮುದಾಯ ಬಿಡಿಸಿಕೊಂಡಿದೆ ಎಂದು ಹೇಳಿದರು. ಅಲ್ಲದೆ ಆ ಸಂದರ್ಭದಲ್ಲಿ ಜನರೆಲ್ಲಾ ತಮ್ಮ ಉಪಜೀವನವನ್ನು ಚಪ್ಪಲಿ ಒಲಿಯುವುದು, ಕೃಷಿ ಮಾಡುವುದು (ಬಹಳ ಕಡಿಮೆ) ಗೌಡ ಕುಲಕರ್ಣಿಯವರ ಮನೆಯಾಳಾಗಿ ದುಡಿಯುವುದು, ಮಡಕೆ, ಕೃಷಿಯೋಪಕರಣಗಳಾದ ಬಾರಕೋಲ್, ಬಾಣ್ಣಿ, ಕೂರಿಗೆ, ಕುಂಟೆ, ಕುರ್ಚಿಗೆ, ಮಡಕೆ, ಕುಡುಗೋಲು, ಬಂಡಿ, ಎತ್ತುಗಳು, ದನಕರುಗಳು,

ಕುರಿಮರಿ, ನಾಯಿಗಳನ್ನು ಸಾಕುತ್ತ ತಮ್ಮ ಬದುಕನ್ನು (ಜೀವನ) ಸಾಗಿಸುತ್ತಿದ್ದರು. ಸಮಾಜದಲ್ಲಿ ಗುಲಾಮರಾಗಿ, ಆಳುಗಳಾಗಿ, ಹಂಗಿನಲ್ಲಿ ಜೀವಿಸುತ್ತಿದ್ದರು ಎಂದು ಹೇಳಿದರು.

ಹಾಗೆಯೇ ಮಾನ್ವಿಯಲ್ಲಿ ಕ್ರೈಸ್ತತ್ವ ಉಗಮವಾಗಿದ್ದುದನ್ನು ಸಹಿತ ಹೇಳಿದರು. ಅಂದರೆ ಸುಮಾರು ೧೯೫೨ರಿಂದಲೇ ಉಗಮಿಸಿತು. ರಾಯಚೂರಿನ ಮುದಗಲ್‌ನ ಫಾದರ್ ಮಾನ್ವಿಗೆ ಬಂದು ಧರ್ಮದ ಶಾಂತಿ ಸಂದೇಶಗಳನ್ನು ಅದೇ ಹಿಂದೂ ದೇವಾಲಯಗಳಲ್ಲೇ ಹೇಳುತ್ತಿದ್ದರು. ಆರಂಭದಲ್ಲಿ ಲ್ಯಾಟೀನ್ ನಂತರ ಕನ್ನಡದಲ್ಲಿ ಹೇಳಲು ಆರಂಭಿಸಿದರು.

೧. "ದೋ ಮಿನಸ್ಕೊ ಬಿಸ್ಕೊ ಯತ್ನುಂ ಸ್ಪಿರಿತುತು" – ಕರ್ತರು ನಮ್ಮೊಡನೆ ಇದ್ದರೆ ನಿಮ್ಮೊಡನೆಯು ಇದ್ದಾರೆ (ಪಾದ್ರಿ ಜನರು ಪರಸ್ಪರ)

೨. ಸಾಂಕ್ತೂಸ್ ಸಾಂಕ್ತೂಸ್ – ಪರಿಶುದ್ಧ ಪರಿಶುದ್ಧರು

೩. ಕಿರಿಯ ಲೈಸನ್ – ಸ್ವಾಮಿ ದಯೆತೋರಿ

೪. ಕ್ರೈಸ್ತ ಲೈಸನ್ – ಕ್ರೈಸ್ತ ದಯತೋರಿ

ಪಾದ್ರಿಗಳು ೧೯೬೦-೬೫ ರಿಂದ ಕನ್ನಡದಲ್ಲಿ ಬೋಧಿಸಲು ಆರಂಭಿಸಿದರು. ಹೀಗೆ ಫಾದರ್ (ಪಾದ್ರಿಯ) ಆಜ್ಞೆಗಳಂತೆ ಇವತ್ತು ನಾವು ಪೂರ್ಣವಾಗಿ ಕ್ರಿಸ್ತನ ಹಬ್ಬಗಳಲ್ಲಿ ಕ್ರಿಸ್ತನ ಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತೇವೆ. ಅಲ್ಲದೆ ಹಿಂದೂ ಸಂಪ್ರದಾಯಗಳನ್ನು ನಾವು ಮಾಡದೇ ಇದ್ದರೂ ಅವುಗಳನ್ನು ನೋಡಿ ಅಸಹ್ಯಪಡುವುದಿಲ್ಲ. ಆನಂದಿಸುತ್ತೇವೆ. ನಾವು ಕೂಡ ಹಿಂದುಗಳೇ ಧರ್ಮದಿಂದ ನಂಬಿಕೆಯಲ್ಲಿ ಆಚರಣೆಯಲ್ಲಿ ಮಾತ್ರ ಕ್ರಿಸ್ತನವರು ಎಂದು ಹೇಳಲಾಗುತ್ತದೆ. ಅಂದರೆ ದ್ವಿ ಸಾಂಸ್ಕೃತಿಕತೆ ಇದೆ ಎಂದು ಹೇಳಬಹುದಾಗಿದೆ.

ಅದೇ ರೀತಿಯಾಗಿ 'ನೆಲಹಾಳ' ಗ್ರಾಮವನ್ನು ಸಂದರ್ಶಿಸಿ ಅಲ್ಲಿರುವ ಹಿರಿಯರಾದ ಪ್ರಕಾಶರವರನ್ನು ಸಂಪರ್ಕಿಸಿ ಈ ಕೆಳಗೆ ಕಂಡ ವಿಚಾರಗಳನ್ನು ಗಮನಿಸಲಾಯಿತು. ವ್ಯಕ್ತಿನಾಮಗಳಿಗೆ ಸಂಬಂಧಿಸಿದಂತೆ ಹುಲಿಗೆಯ್ಯ, ಮಾರೆಪ್ಪ, ನರಸಪ್ಪ, ನರಸಿಂಹ, ಕುಂಟಿನ್ನ, ರಾಮಯ್ಯ ಮತ್ತು ಬಸಯ್ಯ ಎಂದು ಇಡಲಾಗುತ್ತಿತ್ತು. ಹಾಗೆಯೇ ಹಬ್ಬಗಳೆಂದು ಮಾರೆಮ್ಮ ಜಾತ್ರೆ, ನರಸಪ್ಪ ದೇವರಾದನೆ, ಉರುಕುಂದೀರಣ್ಣ ಮುಂತಾದ ಹಬ್ಬ ಜಾತ್ರೆಗಳನ್ನು ಮಾಡುತ್ತಿದ್ದರು ಎಲ್ಲಾ ಆಚರಣೆಗಳನ್ನು ಹಿಂದು ಪದ್ಧತಿಯಲ್ಲೇ ಅಂದು ಆಚರಿಸುತ್ತಿದ್ದರು ಇಂದು ಬದಲಾವಣೆಯಾಗಿದೆ ಎಂದು ಹೇಳಿದರು.

ವೃತ್ತಿಗೆ ಸಂಬಂಧಿಸಿದಂತೆ ಅಂದು ಅನೇಕ ಕೆಲಸಗಳನ್ನು ಅತ್ಯಂತ ಆಸಕ್ತಿಯಿಂದ ಮಾಡುತ್ತಿದ್ದರು. ಅವುಗಳೆಂದರೆ,

ಬಡಿಗೆತನ

ಚಪ್ಪಲಿ ಒಲಿಯುವುದು

ಕಮ್ಮಾರಿಕೆ

ಜೀತಪದ್ಧತಿ

ಕೃಷಿ ಪದ್ಧತಿ

ಮನೆಮಾದಿಗ ಕೆಲಸ

ಕಸಬಳೆಯುವ ಕೆಲಸ

ಸಮಾಧಿಗಳಿಗೆ ಸುಣ್ಣ ಹಚ್ಚುವುದು

ಸತ್ತ ಪ್ರಾಣಿಗಳ ಚರ್ಮ ಸುಲಿಯುವುದು

ಸಂಪ್ರದಾಯಗಳು

ದೇವದಾಸಿ ಪದ್ಧತಿ (ಬಸವಿ)

ಬಾಲ್ಯ ವಿವಾಹ ಮಾಡುವುದು

ಪಂಚಾಂಗಗಳನ್ನು ಕೇಳುವುದು

ಅಸ್ಪೃಶ್ಯತೆಯಿಂದ ನೋಡುವುದು

ಕ್ರೈಸ್ತ ಪೂರ್ವದಲ್ಲಿ ಆಚರಿಸುವಂತಹ ಆಚರಣೆ, ನಂಬಿಕೆಗಳು ಇದ್ದವು. ಕ್ರೈಸ್ತತ್ವ ಸ್ವೀಕರಿಸಿದ ಮೇಲೆ ಇವೆಲ್ಲವೂ ಬದಲಾಗಿ ಕ್ರಿಶ್ಚಿಯನ್ ಆಚರಣೆಗಳಲ್ಲಿ ಜೀವಿಸುತ್ತೇವೆ ಆದರೂ ಹಿಂದೂ ಸಂಸ್ಕೃತಿಯನ್ನು ತಿರಸ್ಕಾರ ಮಾಡಿಲ್ಲ ನಾವು ಕ್ರಿಸ್ತನಲ್ಲಿ ನಂಬಿಕೆ ಇಟ್ಟಿದ್ದೇವೆ ಧರ್ಮ ಜಾತಿಯಲ್ಲಿ ಹಿಂದೂ ಎಸ್‌ಸಿಯಾಗಿದ್ದೇ ಇದ್ದೇವೆ ಎಂದು ಹೇಳಿದರು. ಕ್ರೈಸ್ತ ಸಂಸ್ಕೃತಿಯಲ್ಲಿ ಬಂದ ಮೇಲೆ ವ್ಯಕ್ತಿನಾಮಗಳಲ್ಲಿ ಬದಲಾವಣೆಯಾಯಿತು. ಉದಾ. ರಾಜಕುಮಾರ, ಯೇಸುರಾಜ, ಯೇಸುಮಿತ್ರ, ಹಿಂದೂ ದೇವರು/ದೇವತೆಗಳ ಹೆಸರುಗಳ ಬದಲು ಕ್ರಿಸ್ತನ ಹೆಸರುಗಳು ಮತ್ತು ಆಧುನೀಕರಣದಲ್ಲಿ (ಆಧುನಿಕ) ಹೆಸರುಗಳನ್ನು ಇಡುವಂತಹ ಸಂಪ್ರದಾಯವನ್ನು ಅಳವಡಿಸಿಕೊಂಡಿದ್ದೇವೆ. ಮತ್ತು ನಮ್ಮ ದೇವಾಲಯಗಳಲ್ಲಿ ದ್ವಿಭಾಷಿಕತೆಯ ಅಂಶ ಕಂಡುಬರುತ್ತದೆ. ಕನ್ನಡ ಮತ್ತು ತೆಲುಗು, ಕನ್ನಡ–ಮರಾಠಿ, ಕನ್ನಡ–ಇಂಗ್ಲಿಶ್ ಹೀಗೆ ಕೇಂದ್ರ ದೇವಾಲಯಗಳಲ್ಲಿ ಆಯಾ ಭಾಷಿಕ ಗುಂಪನ್ನು ಅನುಕರಿಸಿ ಸಂದೇಶಗಳನ್ನು ಆಯಾ ಭಾಷೆಗಳಲ್ಲಿ ಹೇಳಲಾಗುತ್ತದೆ.

ಆಶಾಪೂರು ಈ ಊರಿನಲ್ಲಿರುವ ಚರ್ಚ್‌ನ ಉಗ್ರಾಣಿಕರಾದ ಹಿರಿಯರಾದಂತಹ ಶ್ರೀ ಮಾರ್ಕಪ್ಪ ಅವರನ್ನು ಸಂದರ್ಶಿಸಿದಾಗ ಈ ಅಂಶಗಳನ್ನು ಗಮನಿಸಲಾಯಿತು. ಕ್ರೈಸ್ತತ್ವ ಸ್ವೀಕರಿಸುವುದಕ್ಕಿಂತ ಮುಂಚೆ ನಮ್ಮ ಅಥವಾ ನಮ್ಮ ಹಿರಿಯರ ಬದುಕು ಹೀಗಿತ್ತು ಎಂದಿದ್ದಾರೆ.

ವ್ಯಕ್ತಿನಾಮ – ನರಸಮ್ಮ, ಈರಣ್ಣ, ಮಾರೆಮ್ಮ, ಮಾರೆಪ್ಪ, ರಾಮ, ರಾಮಕ್ರಿಷ್ಣ, ಹನುಮಂತು, ಹನುಮಂತಿ, ಹುಲಿಗೆಮ್ಮ, ಯಲ್ಲಮ್ಮ, ಜಮಲಮ್ಮ ಹೀಗೆ ಹಲವು ದೈವೀಮೂಲ ಹೆಸರುಗಳನ್ನು ಇಡುತ್ತಿದ್ದರು.

ಆಚರಣೆಗಳಲ್ಲಿ – ಗುಡಿ ಗೋಪುರಗಳಲ್ಲಿ ಪೂಜೆ ಪುನಸ್ಕಾರ

ಮಷಮ್ಮ ಜಾತ್ರೆ

ದಾನಮ್ಮ ಜಾತ್ರೆ

ಮಾರೆಮ್ಮ ಜಾತ್ರೆ

ಹಂಪಯ್ಯ ಹುಣ್ಣಿಮೆ

ಈರಣ್ಣ ದೇವರು

ನರಸಮ್ಮ ದೇವರು

ಸತ್ತ ಪ್ರಾಣಿಗಳ ಚರ್ಮ ಸುಲಿದು ಕೊಡುವುದು

ಕಲ್ಲು ಒಡೆಯುವುದು

ಕಮ್ಮಾರಿಕೆ ಕೆಲಸ

ಚಮ್ಮಾರಿಕೆ ಕೆಲಸ

ಅಲ್ಪಸ್ವಲ್ಪ ಕೃಷಿ ಕೆಲಸ

ಹಲಗೆ (ತಪ್ಪಡಿ) ಮಾಡುವುದು ಮತ್ತು ಬಡಿಯುವುದು (ಬಾರಿಸುಃ

ಕೃಷಿಯೋಪಕರಣಗಳ ತಯಾರಿಕೆ ಮಾಡುವುದು

ಬಡತನವೆಂಬ ಬವಣೆಯಲ್ಲಿ ತೊಳಲಾಡುವ ಪರಿಸ್ಥಿತಿ ಇತ್ತು ಎಂದು, ಹೀಗೆ ಹಲವು ವಿಚಾರಗಳನ್ನು ಮಾರ್ಕಪ್ಪನವರು ಅಂದಿನ ಜೀವನದ ವ್ಯವಸ್ಥೆಯನ್ನು ಹೇಳಿದರು. ಆದರೆ ಇಂದು ನಾವೆಲ್ಲರೂ ಸಂಸ್ಕೃತಿಯಲ್ಲಿ ಆಚರಣೆಯಲ್ಲಿ ಬದಲಾಗಿದ್ದೇವೆ. ಅಂದರೆ ಕ್ರಿಸ್ತನನ್ನು ನಂಬಿದಂದಿನಿಂದ ೬೦–೭೦ ವರ್ಷಗಳಿಂದ ದೇವರನ್ನು ನಂಬಿ ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಬಲರಾಗುವಲ್ಲಿ ಸಾಧ್ಯವಾಗಿದೆ ಅಂದಿನ ಯಾವುದೇ ಅಮಾನವೀಯತೆಯ ನೋಟ ಇವತ್ತು ಇಲ್ಲಿ ಎಲ್ಲಾ ಜಾತಿ ಜನಾಂಗದವರೂ ಸಮಾನವಾಗಿ ಪ್ರೀತಿ ವಿಶ್ವಾಸದಿಂದ ಬಾಳುತ್ತಿದ್ದೇವೆ. ನಾವು ದಿನಾಲೂ ಪ್ರಾರ್ಥನೆಯನ್ನು ಮಾಡುತ್ತೇವೆ. ಒಂದು ಸಂದರ್ಭದಲ್ಲಿ ಅಂದರೆ ೧೯೬೪–೬೫ರಲ್ಲಿ ಮಳೆಗಾಗಿ ಈ ಆಶಾಪೂರು ಗುಡ್ಡದಲ್ಲಿ ಪ್ರಾರ್ಥಿಸಿ ಮಳೆಯನ್ನು ಪಡೆದೆವು. ಅದರ ಫಲವಾಗಿ ಇವತ್ತಿಗೂ ನಾವು ಅಲ್ಲೇ ಪ್ರಾರ್ಥಿಸುತ್ತೇವೆ. ಬೇರೆಯವರಿಗೂ ಸ್ವಾಗತವಿದೆ ಎಂದರು.

ಇನ್ನು ಕೆಲವು ನಂಬಿಕೆಗಳು ಇದ್ದವು. ಅವುಗಳೆಂದರೆ ಹೀಗಿವೆ.

ಮನೆಮಾದಿಗ ಪದ್ಧತಿ (ಮಾತಂಗಿ)

ಕುಂಬ ಹೋಗುವುದು

ಪಂಚಾಂಗವನ್ನು ಕೇಳುವುದು

ಪ್ರಾಣಿಗಳನ್ನು ದೇವರಿಗೆ ಬಿಡುವುದು

ಬಸವಿ (ದೇವದಾಸಿ) ಪದ್ಧತಿ

ಹೀಗೆ ಇನ್ನು ಕೆಲವು ಊರುಗಳಾದ ಮಟಮಾರಿ, ಯದ್ಲಾಪೂರು, ತುರುಕನದೋಣಿ ಮತ್ತು ರಾಯಚೂರುಗಳಲ್ಲಿ ಸಂದರ್ಶಿಸಿದಾಗ ಸಾಮಾನ್ಯವಾಗಿ ಅದೇ ರೀತಿಯ ಗುಲಾಮಗಿರಿಯ, ಅಮಾನವೀಯ, ಅನಿಷ್ಟ ಮೂಢನಂಬಿಕೆಗಳನ್ನು ಕ್ರೈಸ್ತತ್ವ ಸ್ವೀಕರಿಸುವ ಮುನ್ನ ನಂಬಿಕೊಂಡಿದ್ದರು ಅದೇ ಅಸಮಾನತೆಯ ಜೀವನ ಸಾಗಿಸುತ್ತಿದ್ದರು ಎಂದು ತಿಳಿಯಲಾಯಿತು. ಮತ್ತು ಕ್ರೈಸ್ತರಾಗಿ ಮಾರ್ಪಾಡಾದ ಮೇಲೆ ಈ ರೀತಿಯ ಯಾವುದೇ ಅಸಮಾನತೆಯ ಅಂಶಗಳು ಮಾಯವಾಗಿವೆ. ಪ್ರಮುಖವಾಗಿ ರಾಯಚೂರು ಜಿಲ್ಲೆಯಲ್ಲಿ 'ಯದ್ಲಾಪೂರ'ನಲ್ಲಿ ಇಡೀ ಎಸ್.ಸಿ. ಸಮುದಾಯವೆಲ್ಲ ದಾಖಲೆ ಸಹಿತ ಕ್ರೈಸ್ತರಾಗಿರುವಂತಹದ್ದು, ಗೊತ್ತಾಯಿತು. ಇನ್ನು ಬೇರೆ ಬೇರೆ ಕಡೆ ಕ್ರೈಸ್ತರು ಅಂತೇಳಿದ್ದರೂ ಅವರು ದಾಖಲೆಯಲ್ಲಿ ಹಿಂದೂಗಳಾಗಿಯೇ ಇದ್ದಾರೆ. ನಾವು ಹಿಂದೂಗಳಾಗಿ ಇರುತೀವಿ ಅಂದರೆ ನಂಬಿಕೆಯಲ್ಲಿ ಕ್ರಿಸ್ತನನ್ನು ನಂಬುತ್ತೀವಿ ಎಂದು ಹೇಳುವುದನ್ನು ಗಮನಿಸಲಾಯಿತು.

ಈ ಎಲ್ಲಾ ಊರುಗಳ ಕ್ಷೇತ್ರಕಾರ್ಯದಿಂದ ಕ್ರೈಸ್ತರು ತಾವು ಮತಾಂತರ ಪೂರ್ವದಲ್ಲಿ ಯಾವ ಯಾವ ರೀತಿಯಲ್ಲಿ ಬದುಕನ್ನು ಬದುಕುತ್ತಿದ್ದರು ಎಂಬುದನ್ನು ಗಮನಿಸಲಾಯಿತು. ಇದರೊಳಗೆ ಹಿಂದೂ ಮತ್ತು ಕ್ರೈಸ್ತರಾಗಿ ಉಳಿಯಲು ಕಾರಣಗಳನ್ನು ಈ ರೀತಿಯಾಗಿ ವಿವರಿಸಬಹುದು.

ಹಿಂದೂ ಆಚರಣೆಗಳನ್ನು ಕ್ರೈಸ್ತರು ಮಾಡಬೇಕಾದರೆ ಮೂಲ ಜಾತಿ ಮರೆಯಬಾರದು. ಸರ್ಕಾರಿ ಸೌಲಭ್ಯ ಸಿಗುತ್ತವೆ. ಕ್ರೈಸ್ತ ಧರ್ಮದಲ್ಲಿ ಸಂಪೂರ್ಣ ಮತಾಂತರ ಆಗಲೇಬೇಕೆಂಬ ಕಟ್ಟಪ್ಪಣೆ ಇಲ್ಲದಿರುವುದು, ಕೇವಲ ಆತ್ಮೀಯವಾಗಿ ನಂಬಿಕೆ ಹೊಂದಿದರೆ ಸಾಕು ಎಂಬುವುದು ಈ ಎಲ್ಲಾ ಕಾರಣಗಳಿಂದ ಈಗಲೂ ಹಿಂದೂ ಸಂಪ್ರದಾಯಗಳನ್ನು ಪಾಲಿಸುವುದು ಕಂಡುಬಂದಿದೆ.

ಹಾಗೆಯೇ ಕ್ರೈಸ್ತ ಸಂಪ್ರದಾಯವನ್ನು ಅನುಸರಿಸುವಲ್ಲಿ ಗಮನಿಸುವ ಅಂಶಗಳೇನೆಂದರೆ ಹಿಂದೂ ಧರ್ಮದ ಅಸಮಾನತೆಯ ನೋವು, ಕ್ರೈಸ್ತ ಧರ್ಮದ ಪ್ರೀತಿ ವಿಶ್ವಾಸ, ಕೆಲವು ಪ್ರದೇಶಗಳಲ್ಲಿ ಪಿತ್ರಾರ್ಜಿತ ಅಥವಾ ವಂಶಾವಳಿಯಾಗಿ ಬಂದಿರುವ ಕ್ರೈಸ್ತ ಸಂಸ್ಕೃತಿ ಹಾಗೂ ಪ್ರಾಥಮಿಕ ಶಿಕ್ಷಣ ಆರೋಗ್ಯವನ್ನು ನೀಡುವ ಧರ್ಮವಾಗಿದ್ದರಿಂದ ಕ್ರೈಸ್ತತ್ವದ ವಿಚಾರಗಳನ್ನು ಮೈಗೂಡಿಸಿಕೊಳ್ಳುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಹೇಗಿದ್ದರೂ ತಂದೆ-ತಾಯಿ ಎಂದಂತೆ ಹುಟ್ಟಿದ ಮೂಲ ಜಾತಿಯಲ್ಲೇ ಇದ್ದು ಅಭಿವೃದ್ಧಿಗೆ, ಸಮಾನತೆಗೆ ಹಾಗೂ ಸಮಾಜದಲ್ಲಿ ತಲೆಯೆತ್ತಿ ನಡೆಯುವಂತೆ ಸಹಾಯ, ಸಹಕಾರ ನೀಡಿದ, 'ಪ್ರೀತಿ'ಯಿಂದ ಕೂಡಿದ, ಧರ್ಮಕ್ಕೆ ಜೈ ಎಂಬಂತೆ ಹಿಂದೂ ಜಾತಿ, ಧರ್ಮ ಕ್ರೈಸ್ತ ಧರ್ಮ ಅಥವಾ ಜಾತಿಯಲ್ಲಿ ಹಿಂದೂ, ಆಚರಣೆಯಲ್ಲಿ ಕ್ರೈಸ್ತರು ಎಂಬುವ ರೀತಿಯಲ್ಲಿ ದ್ವಿ ಸಾಂಸ್ಕೃತಿಕವಾಗಿ ಬದುಕುತ್ತಿದ್ದಾರೆ ಎಂದು ಸ್ಥಳೀಯ ಸಂಸ್ಕೃತಿ ಮತ್ತು ಕ್ರೈಸ್ತ ಸಂಸ್ಕೃತಿಯನ್ನು ಕಂಡುಕೊಳ್ಳಲಾಯಿತು.

೪.೨.೨. ಕಸುಬುಗಳು

ಮತಾಂತರ/ ಮಾನಸಾಂತರ ಪೂರ್ವದಲ್ಲಿ ಕ್ರೈಸ್ತರು ಅನುಸರಿಸುತ್ತಿದ್ದ ಕಟ್ಟುಪಾಡುಗಳು ಆಚರಣೆಗಳು, ಕುಲಕಸುಬುಗಳು ಪ್ರಮುಖವಾಗಿದ್ದವು. ಪ್ರಸ್ತುತ ಈಗಿನ ಮತಾಂತರ/ಮಾನಸಾಂತರ ಕ್ರೈಸ್ತರು ಮತಾಂತರ ಪೂರ್ವದಲ್ಲಿ ಮೂಲತಹ ಹಿಂದುಗಳಾಗಿದ್ದರಿಂದ ಹಿಂದು ಸಂಪ್ರದಾಯಗಳನ್ನೇ ನಡೆಸುತ್ತಿದ್ದರು.

ಇವರು ತಮ್ಮ ಜೀವನ ರೂಪಿಸಿಕೊಳ್ಳಲು ಅನೇಕ ವೃತ್ತಿಗಳನ್ನು ಮಾಡುತ್ತಿದ್ದರು. ಚಪ್ಪಲಿ ಹೊಲಿಯುವುದು, ಹಗ್ಗ ಹೆಣೆಯುವುದು, ನೇಯುವುದು, ಬಡಿಗೆತನ ಮಾಡುವುದು, ಕಮ್ಮಾರಿಕೆ ಮಾಡುವುದು ಹಲಗೆ ಒಡೆಯುವುದು, ಚರ್ಮ ಸುಲಿಯುವುದು ಹೀಗೆ ಅನೇಕ ರೀತಿಯ ಕಸುಬುಗಳನ್ನು ಅತ್ಯಂತ ನಂಬಿಕೆ ಪ್ರೀತಿಯಿಂದ ಮಾಡುತ್ತಿದ್ದರು.

ಚಪ್ಪಲಿ ಹೊಲಿಯಲು ರೆಂಪೆ, ಕಲ್ಲು ಇನ್ನಿತರ ಸಲಕರಣೆಗಳು ಬಳಕೆಯಾಗುತ್ತಿದ್ದವು. ಅದೇ ರೀತಿಯಾಗಿ ಹಗ್ಗ ನೇಯುವಲ್ಲಿ ಎರಡು ಗೂಟಗಳು ಬೇಕಾಗುತ್ತಿದ್ದವು. ಬಡಿಗೆತನ ಮಾಡುವಲ್ಲಿ ಅತ್ಯಂತ ಸಕ್ರಿಯವಾಗಿ ಮನಸ್ಪೂರ್ತಿಯಾಗಿ ಮಾಡುವುದಾಗಿತ್ತು. ಅಂದರೆ ಯಾವ ರೀತಿಯಲ್ಲಿಯೂ ಕರ್ಮವೆನ್ನುವುದು ನಿಷ್ಫಲವಾಗುವಂತಿರಲಿಲ್ಲ. ಹಲಗೆ ಹೊಡೆಯುವುದು ಸಂಪ್ರದಾಯಗಳ ಪ್ರಕಾರ ಮಾಡುತ್ತಿದ್ದರು. ಹಲಗೆ ತಯಾರು ಮಾಡುವುದು ಸಹ ಈ ಕ್ರೈಸ್ತರೇ ಆಗಿದ್ದರು. ಸತ್ತಿರುವ ಎತ್ತು, ಎಮ್ಮೆ, ಕೋಣಗಳ ಆಕಳಗಳ ಚರ್ಮವನ್ನು ಮತಾಂತರ ಪೂರ್ವ ಕ್ರೈಸ್ತರು ಸುಲಿಯುತ್ತಿದ್ದರು. ಈ ಕೆಲಸವನ್ನು ಮಾತಂಗಿ ಮಕ್ಕಳು ಮಾಡುತ್ತಿದ್ದರು. ಇವರನ್ನು ಮನೆ ಮಾದಿಗರು, ಜಾಂಬವರು ಎಂತಲೂ ಕರೆಯುತ್ತಾರೆ. ಪ್ರಸ್ತುತ ಈ ಕಾರ್ಯ ಕೆಲವು ಕಡೆಯಲ್ಲಿ ಈಗಲೂ ಪ್ರಚಲಿತವಿದೆ. ಉದಾ. ಮಾನಸಾಂತರಗೊಂಡ ಕ್ರಿಶ್ಚಿಯನ್ನರು ಇರುವ ಕುರ್ಡಿ ಗ್ರಾಮದಲ್ಲಿದೆ. ಮತಾಂತರ ಹಾಗೂ ಮಾನಸಾಂತರಗೊಂಡ ಕ್ರೈಸ್ತರು ಹಿಂದೆ ತಮ್ಮ ಬದುಕಿನ ಬವಣೆಯನ್ನು ದುಡಿಯುವುದರ ಮೂಲಕ ಕೃಷಿಯಲ್ಲಿ ಶ್ರಮವಹಿಸಿ ಬದುಕಿದ್ದರು. ಹೆಚ್ಚಾನೆಚ್ಚಾಗಿ ಗೌಡರ ಕುಲಕರ್ಣಿಯವರ ಮನೆಗಳಲ್ಲಿ ಜೀತದಾಳುಗಳಾಗಿ ಹೊಲಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಅವರು ಯಾವುದೇ ರೀತಿಯ ಹೆಚ್ಚಿನ ಫಲಾಪೇಕ್ಷೆ ಪಡೆಯದೇ, ಆಶಿಸದೇ ಹೊಟ್ಟೆಗಾಗಿ ದುಡಿಯುತ್ತಿದ್ದರು. ಈ ವೃತ್ತಿ ಪ್ರಸ್ತುತ ಕ್ಷೀಣಿಸಿತಾದರೂ ಅಲ್ಲಲ್ಲಿ ಗೋಚರಿಸುವುದು.

ಪ್ರಸ್ತುತ ರಾಯಚೂರು ಜಿಲ್ಲೆಯ ಕೆಲವು ಊರುಗಳಲ್ಲಿ ಕ್ರೈಸ್ತರಲ್ಲಿಯೂ ಅಂದರೆ ಆರ್ಥಿಕವಾಗಿ ಬಲವಿಲ್ಲದವರು ಅದರಲ್ಲಿ ಕೆಲವರು ಹಿಂದೂ ಆಚರಣೆ, ಸಂಪ್ರದಾಯ ಹಾಗೂ ಕ್ರಿಯೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮಗೆ ತೋಚಿದಂತ ಕೆಲಸವನ್ನೇ ಮಾಡಿ ಉಪಜೀವನ ಮಾಡುತ್ತಿದ್ದರು. ಅಂದರೆ ನಾನು ಆ ಕೆಲಸ ಈ ಕೆಲಸ ಮಾಡಬೇಕೆಂಬ ಯಾವುದೇ ರೀತಿಯ ಅಹಂ ಅವರಿಗೆ ಇರಲಿಲ್ಲ. 'ಬಸವಣ್ಣ' ಎಂದು ಎನಿಸಿಕೊಳ್ಳುವ 'ಎತ್ತು'ಗಳಂತೆ ದುಡಿಯುತ್ತಿದ್ದರು. ತಾವು ಜಾತಿಯಿಂದ ಕೀಳೆಂದು ಉಳಿದ ಎಲ್ಲರೂ ಮೇಲೆಂದು ಎಲ್ಲರಿಗೂ ಅಯ್ಯ, ಅವ್ವ, ಯವ್ವ, ದಣೆರೆ, ಗೋಡ್ರೆ, ಅಮ್ಮ ಎಂಬುವ ಗೌರವಸೂಚಕ ಪದಗಳಿಂದ ಮಾತಾಡುತ್ತಿದ್ದರು. ಮೇಲ್ವರ್ಗದವರು ಇವರಿಗೆ ಎಲೆ, ಅಲೇ, ತಿಮ್ಮ, ಹನುಮ್ಯ, ಬಸ್ಯ ಎಂದು ದರ್ಪದಿಂದ ಹೇಳುವ, ಕೇಳುವ ಪರಿಪಾಟವಿತ್ತು.

ಕುಲಕಸುಬು ಅನ್ನುವುದು ಮಾತಂಗಿ ಮಕ್ಕಳಿಗೆ ಸಿಗುವುದು ಅಂತಲ್ಲ ಬೇರೆ ಉಳಿದವರು ತಮ್ಮ ವಂಶಪಾರಂಪರ್ಯವಾಗಿ ಬಂದಿರುವ ವೃತ್ತಿಯನ್ನು ಉದಾ. ಕಮ್ಮಾರಿಕೆ, ಚಮ್ಮಾರಿಕೆ, ಬಡಿಗೆತನ ಹೀಗೆ ಕೆಲವು ವೃತ್ತಿಗಳನ್ನು ಮಾಡುತ್ತಿದ್ದರು. ಅವರು ಉಪಯೋಗಿಸುವ ಸಲಕರಣೆಗಳು ರೆಂಪೆ, ಆರಿ, ಪಟಕರ್, ಕಲ್ಲು ಅನೇಕ ರೀತಿಯ ಪದಗಳ ಬಳಕೆಯಾಗುತ್ತಿತ್ತು. ಮಾನಸಾಂತರ ಕ್ರೈಸ್ತರು ಆಂಧ್ರದಿಂದ ವಲಸೆ ಬಂದವರೆಂದು ತಿಳಿಯಲಾಗಿದೆ. ಕಾರಣ ಇವರು ತೆಲುಗನ್ನು ಮನೆಮಾತಾಗಿಸಿಕೊಂಡಿದ್ದಾರೆ. ಕೆಲವು ಊರುಗಳಲ್ಲಿ ಅಂದರೆ ಮಾನವಿ ತಾಲೂಕಿನ ಸುತ್ತಮುತ್ತೆಲ್ಲ ತೆಲುಗಿನ ಗಾಳಿಯಲ್ಲಿ ಕನ್ನಡವೇ ಪಸರಿಸಿಕೊಂಡಿದೆ.

ಕಮ್ಮಾರಿಕೆ ಕೆಲಸದಲ್ಲಿ ಬಳಕೆಯಾಗುವ ಸಲಕರಣೆಗಳು ಚಾನ್, ಗನ್, ಸುತ್ತಿಗೆ (ಪದಗಳು) ವಿಶೇಷವಾಗಿರುತ್ತವೆ. ಅದೇ ರೀತಿಯಾಗಿ ಬಡಿಗೆತನದಲ್ಲಿಯೂ ನಾವು ಕೆಲವು ಪದಗಳನ್ನು ಗಮನಿಸಬೇಕು. ಹೀಗೆ ಮತಾಂತರ ಪೂರ್ವದಲ್ಲಿ ಕ್ರೈಸ್ತರು ಸ್ವ ಸಾಮರ್ಥ್ಯದಿಂದಲೇ ದುಡಿಮೆಯನ್ನು ಮಾಡಿ ಬದುಕುವ ಕಲೆಯನ್ನು ವಂಶವೃತ್ತಿಯನ್ನು ಬೆಳೆಸಿಕೊಂಡು ಉಳಿಸಿಕೊಂಡು ಬರುತ್ತಿದ್ದರು. ಪ್ರಸ್ತುತ ಈ ವಂಶ ವೃತ್ತಿಗಳು ಆಧುನಿಕತೆಯ ಗಾಳಿ ಬೀಸಿದ ಪರಿಣಾಮವಾಗಿ ಕುಲಕಸಬು ಕಡಿಮೆಯಾಗಿವೆ ಎನ್ನಬಹುದು.

ಎಲ್ಲಾ ರೀತಿಯ ಉಪಕರಣಗಳು ಆಧುನಿಕ ತಂತ್ರಜ್ಞಾನದೊಂದಿಗೆ ರೆಡಿಮೇಡಾಗಿ ಸಿಗುವುದರಿಂದ ಕಸುಬಿನ ಪ್ರಿಯರು ಕಡಿಮೆಯಾಗಿದ್ದಾರೆ. ಇಂದಿನ ಆಧುನಿಕತೆಯ ಪರಿಸರದಿಂದ ಜನರಲ್ಲಿನ ಅನ್ಯೋನ್ಯ ಸಂಬಂಧವೇ ಮಾಯವಾಗಿದೆ ಎನಿಸುತ್ತದೆ. ಅಂದಿನ ಜನ ಸಮುದಾಯ ಒಂದೇ ಕುಟುಂಬದಂತೆ ಇರುತ್ತಿತ್ತಂತೆ. ಉಳ್ಳವರು ಇಲ್ಲದವರು ಸಮನಾಗಿ ಜೀವಿಸುತ್ತಿದ್ದರು. ಇಂದು ಅದೇ ಮಾತಂಗಿ ಮಕ್ಕಳು ಒಬ್ಬರು ಕಂಡರೆ ಒಬ್ಬರಿಗಾಗಲ್ಲ ಇದರಿಂದ ತಂತ್ರಜ್ಞಾನ ಬೆಳೆಯುತ್ತದೆಯೋ ವಿನಹ ಮಾನವನ ನಡುವೆ ವಿರೋಧಭಾವಗಳು ಹಾಗೆಯೇ ಬೆಳೆದುಬರುತ್ತವೆ.

ಕುಲಕಸುಬುಗಗಳು

ಕಮ್ಮಾರಿಕೆ

ಬಡಿಗೆತನ

ಹಗ್ಗ ಮಾಡುವುದು

ಚಪ್ಪಲಿ ಒಲಿಯುವುದು

ಚರ್ಮ (ಪ್ರಾಣಿಗಳ) ಸುಲಿಯುವುದು

ತಮಟೆ (ತಪ್ಪಡಿ) ಮಾಡುವುದು ಮತ್ತು ಒಡೆಯುವುದು (ಬಾರಿಸು)

ಜೀತಪದ್ಧತಿ

ಈ ರೀತಿಯಲ್ಲಿ ಹಿಂದೆ ಅಂದರೆ ಮತಾಂತರಪೂರ್ವದಲ್ಲಿ ಅಥವಾ ಮಾನಸಾಂತರ ಪೂರ್ವದಲ್ಲಿ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಈ ಎಲ್ಲಾ ವೃತ್ತಿಗಳು ಮೂಲ ಕಸುಬುಗಳಾಗಿದ್ದವು. ಈ ಕೆಲಸಗಳಿಂದಲೇ ಜೀವನವನ್ನು ಸಾಗಿಸುತ್ತಿದ್ದರು. ಆದರೆ ಪ್ರಸ್ತುತ ಈ ವೃತ್ತಿಗಳು ನೇರವಾಗಿ ಕಾಣದಿದ್ದರೂ ತೆರೆಮರೆಯಲ್ಲಿ ಅಲ್ಲಲ್ಲಿ ಕಡು ಬಡತನದಲ್ಲಿರುವವರು ವಂಶಪರಂಪರೆಯ ವೃತ್ತಿಗಳಿವು ಎಂದು ಅಲ್ಪಸ್ವಲ್ಪ ಮಾಡುತ್ತಿದ್ದಾರೆ. ಆದರೆ ಅಳಿವಿನಂಚಿನಲ್ಲಿರುವುದು ಸತ್ಯ ಮತ್ತು ಈ ಎಲ್ಲಾ ಕುಲಕಸುಬುಗಳ ಜೊತೆಗೆ ಸಮಕಾಲೀನದಲ್ಲಿ ಕೆಲವು ಹೊಸ ಹೊಸ ವೃತ್ತಿಗಳನ್ನು ಮಾಡುತ್ತಿದ್ದಾರೆ ಅವುಗಳೆಂದರೆ–

ಆಧುನಿಕ ಕೆಲಸಗಳು

ಮನೆಯನ್ನು ಕಟ್ಟುವುದು

ಸೆಟ್ರಿಂಗ್ ಕೆಲಸ

ಕಾಂಟ್ರಾಕ್ಟ್ ಕೆಲಸ

ಸರ್ಕಾರಿ ಸೇವೆ

ಶಿಕ್ಷಣ, ಆರೋಗ್ಯ, ವಸತಿ ಇತರೆ ಇಲಾಖೆಗಳಲ್ಲಿ ಸೇವೆ

ಸಮಾಜದ ಮುಖ್ಯ ವಾಹಿನಿಗೆ ಬರುವುದು.

ಡ್ರೈವರ್ ಕೆಲಸ

ವೃತ್ತಿಯೋಪಕರಣಗಳು

ಈ ವೃತ್ತಿಯೋಪಕರಣಗಳ ನಾಮಾಂಕಿತಗಳಿಗೆ ಸಂಬಂಧಿಸಿದ ನಾನು ಕುರ್ಡಿ ಗ್ರಾಮದಲ್ಲಿರುವ ಕೆಲ ಕಸುಬುದಾರರನ್ನು ಸಂಪರ್ಕಿಸಿದೆ ಅಂತಹ ಮೂಲ ಕಸುಬುದಾರರು ತಮ್ಮ ವೃತ್ತಿಯನ್ನು

ವೃತ್ತಿಯಲ್ಲಿ ತಾವು ಬಳಸುವ ಉಪಕರಣಗಳ ಸಂಬೋಧನಾ ರೂಪಗಳನ್ನು ಈ ಕೆಳಕಂಡಂತೆ ಹೇಳಿ ತಿಳಿಸಿದರು. ಅವುಗಳೆಂದರೆ,

೧. **ಕಸುಬುದಾರ**–ಆನಂದಪ್ಪ

ವೃತ್ತಿ – ಚಪ್ಪಲಿ ಒಲಿಯುವುದು (ಚಮ್ಮಾರಿಕೆ)

ಉಪಕರಣಗಳು – ರೆಂಪೆ– ಕೊಯ್ಯುವ ಕತ್ತರಿಸುವ ಸಾಧನ

ಪಟಕಾರ (ತೆಲುಗು) – ಆರಿ– ಮೊಳೆಗಳನ್ನು ಕಿತ್ತುವುದು

ಗೂಟುಮು (ತೆಲುಗು) – ಗೂಟ – ಬಡಿಯುವ ಸಾಧನ

ಪನಿರಾಯಿ (ತೆಲುಗು) – ಕೆಲಸ ಕಲ್ಲು – ನೀಲಿಯಾಕಾರದ ದುಂಡನೆಯ ಕಲ್ಲು

ತೋಲು (ತೆಲುಗು) – ತೊಗಲಿನ ತುಣುಕು (ಒಣಗಿದ)

೨. **ಕಸುಬುದಾರ** – ಅಶೋಕ/ ಹನುಮಂತ

ವೃತ್ತಿ – ಕಬ್ಬಿಣದ ಕೆಲಸ (ಕಮ್ಮಾರಿಕೆ)

ಉಪಕರಣಗಳು – ಕೈಸುತ್ತಿಗೆ – ಬಡಿಯುವುದು

ಕೊಲ್ಮಿ ಬೊಲೋರ – ಗಾಳಿ ಊದುವುದು

ಗನ್ – ಕಬ್ಬಿಣ (ಕಾದ)ವನ್ನು ಬಡಿಯುವುದು

ಇಕ್ಕಳ – ಇಡಿಯುವುದು (ಪಟಕಾರ)

ತೆಲುಗು – ಬೊಗ್ಗುಲು – ಇದ್ದಿಲು – ಬೆಂಕಿ ಮಾಡಲು ಉಪಯೋಗಿಸುವುದು

ಜಾಕಿ – ಬಂಡಿ ಗಾಲಿಯನ್ನು ಸರಿಮಾಡಲು

ಅಡಿಗಲ್ಲು – ೨೦ ಕೆ.ಜಿಯ ಕಬ್ಬಿಣದ ತುಂಡು

ಚಾನ್ – ಕಬ್ಬಿಣ ಸರಳನ್ನು ಕತ್ತರಿಸುವುದು

೩. **ಕಸುಬುದಾರ** – ದಾನೇಲ್

ವೃತ್ತಿ – ಬಡಿಗೆತನ (ಕಾರಪೆಂಟರ್)

ಉಪಕರಣಗಳು – (ತೆಲುಗು೦ ಕೊರಪಂ) ಕರಗಸ – ಕಟ್ಟಿಗೆ ಕತ್ತರಿಸುವುದು

ಗನ್

ಉಳಿ

ಅಗರ

ಅಂಗರ ಜೋಳಿ

(ತೆಲುಗು– ಇರಸಾನಿ) ಇರಸಾನ್

ಚಾಳೀಸ್ (೪ ರೀತಿ)

(ತೆಲುಗು – ಕೊಡ್ತಿ) ಉಣಚೆವು

ಉದ್ಗೋಳ್– ಸಾಪ್ ಮಾಡುವುದು, ಕರೆಂಟಿಂದ್ದು

೪. **ಕಸುಬುದಾರ** – ಅಡಿವೆಪ್ಪ

ವೃತ್ತಿ – ಹಗ್ಗ ನೇಯುವಿಕೆ

ಉಪಕರಣಗಳು – ತೆಲುಗು – ಗೂಟ್ಮು

ಗೂಟ – ಕಬ್ಬಿಣದ ಸಣ್ಣ ತುಂಡು ಬಡಿಯುವುದು

ತೊಗಲು – ಆಕಳ, ಎತ್ತು, ಎಮ್ಮೆ, ಪ್ರಾಣಿಗಳ ತೊಗಲು

ರೆಂಪೆ – ತೊಗಲನ್ನು ಕತ್ತರಿಸುವುದು

ಕಟ್ಟಿಗೆಯ ಗೂಟಗಳು – ಹಗ್ಗವನ್ನು ಹಿಡಿದು ಎಳೆಯುವುದು

ಕೆಲಸದ ಕಲ್ಲು (೨ ರೀತಿಯ)

ಆರಿ

೫. **ಕಸುಬುದಾರ** – ಹುಚ್ಚಪ್ಪ

ವೃತ್ತಿ – ಲಾಲ್ ಒಡೆಯುವುದು (ಎತ್ತು ಪ್ರಾಣಿಗಳಿಗೆ)

ಉಪಕರಣಗಳು –

ಸುತ್ತಿಗೆ – ಬಡಿಯುವುದು

ಲಾಲ್ – ಕಬ್ಬಿಣದ ತೆಳ್ಳನೆಯ ಕವಚ

ಮೊಳೆ – ಕಾಲುಗಳಿಗೆ (ಎತ್ತುಗಳ) ಬಡಿಯುವುದು

ಚಾನ್ – ಮೊಳೆಗಳ ಮೇಲೆ ಬಡಿಯುವುದು

ಉಳಿ – ಗೆರ್ಸೆ ಕೆತ್ತುವುದು

ಪಟಕಾರ – ಹಿಡಿಯುವುದು

ಕರಗಸ – ಕೊಂಬುಗಳನ್ನು ಕತ್ತರಿಸುವುದು

ಕೋಡಗೆತ್ತೊ ಕುಡುಗೋಲು – ಕೋಡ ಕೆತ್ತುವುದು ಸಾಫ್ ಮಾಡುವುದು

ಹೀಗೆ ಕೆಲ ಕಸುಬುದಾರರನ್ನು ಸಂದರ್ಶಿಸಿ ವೃತ್ತಿ ಮತ್ತು ವೃತ್ತಿಯೋಪಕರಣಗಳ ಬಗ್ಗೆ ಚರ್ಚಿಸಿ ಉಪಕರಣಗಳ ನಾಮಾಂಕಿತಗಳನ್ನು ತಿಳಿಯಲಾಯಿತು.

೪.೨.೩. ವ್ಯಕ್ತಿನಾಮಗಳು

ವ್ಯಕ್ತಿನಾಮಗಳು ಸಮುದಾಯವನ್ನು ಗುರ್ತಿಸುವ ಮಹತ್ವದ ಅಂಶಗಳಾಗಿವೆ. ಒಂದು ಸಮುದಾಯದ ಸಂಸ್ಕೃತಿಯನ್ನು ಆಯಾ ವ್ಯಕ್ತಿನಾಮಗಳಿಂದ ತಿಳಿಯಬಹುದು. ಸಮುದಾಯವೊಂದರ ಭಾಷಿಕ ಚಹರೆಗಳನ್ನು ತಿಳಿಯಲು ಬಲು ಅವಶ್ಯಕವಾದ ಅಂಶಗಳನ್ನು ವ್ಯಕ್ತಿನಾಮಗಳು ಒದಗಿಸಿಕೊಡುತ್ತಾರೆ. ಒಬ್ಬ ವ್ಯಕ್ತಿಯ ಗುಣ ನಡತೆಗಳನ್ನು ಮಾತಿನಿಂದ ಅರಿಯಬಹುದು. ಹಾಗೆಯೇ ಒಬ್ಬ ವ್ಯಕ್ತಿಯ ವ್ಯಕ್ತಿನಾಮದಿಂದ ಇವರು ಇದೇ ಸಮುದಾಯದವರು ಎಂದೂ ಸಹ ಅರಿಯಬಹುದಾಗಿದೆ. ಪ್ರಪಂಚದಲ್ಲಿ ಹೆಸರಿಲ್ಲದ ವ್ಯಕ್ತಿಯೇ ಇಲ್ಲ. ಒಂದೊಂದು ಸಹ ಬೆಕ್ಕು, ನಾಯಿಗಳಿಗೂ ಹೆಸರನ್ನು ಇಟ್ಟು ಸಾಕುವುದನ್ನು ಕಾಣುತ್ತೇವೆ. ಹಾಗಾಗಿ ಹೆಸರು ಅಥವಾ ನಾಮ ಎನ್ನುವುದು ಯಾವುದೇ ಸಮುದಾಯದ ಮನುಷ್ಯನಿಗೆ ಮೂಲಭೂತ ಅವಶ್ಯಕತೆಗಳಂತೆ ಬೇಕಾಗಿರುತ್ತದೆ. ಅಂತಹ ಮಾನವ ಸಮುದಾಯಗಳಲ್ಲಿ ಕ್ರೈಸ್ತ ಸಮುದಾಯವು ಒಂದಾಗಿದೆ. ಈ ಸಮುದಾಯ (ಧರ್ಮ)ವು ವಿಶೇಷ ವ್ಯಕ್ತಿನಾಮಗಳನ್ನು ಹೊಂದಿದೆ ಎಂದು ಹೇಳಬಹುದಾಗಿದೆ.

ಈ ಕ್ರೈಸ್ತ ಧರ್ಮದ ಮೂಲ ಪಾಶ್ಚಿಮಾತ್ಯ ರಾಷ್ಟ್ರವಾದರೂ ಕಾಲಾಂತರದಲ್ಲಿ ಕ್ರಿ.ಶ. ೧೭–೧೮ನೇ ಶತಮಾನದಲ್ಲಿ ಕ್ರೈಸ್ತ ಮಿಶನರಿಗಳ ಮೂಲಕ ನಮ್ಮ ನಾಡಿನಲ್ಲಿ ನೆಲೆಯೂರಿತು ಎನ್ನಬಹುದು. ಈ ಬೆಳವಣಿಗೆಯಲ್ಲಿ ಮಿಶನರಿಗಳು ಸಾಹಿತ್ಯಿಕವಾಗಿ ಹಲವಾರು ಭಾಷಾಂತರ, ರೂಪಾಂತರ ಮುದ್ರಣ ಕಾರ್ಯವನ್ನು ವಿಫಲವಾಗಿ ಮಾಡಿದರು. ಅದರ ಅಂಗವಾಗಿ ಕ್ರೈಸ್ತ ಧರ್ಮ ಗ್ರಂಥ ಬೈಬಲ್ ಸಹಿತ ಭಾಷಾಂತರವಾಯಿತು (೧೮೨೭)ರಲ್ಲಿ. ಹೀಗೆ ಕ್ರೈಸ್ತ ಧರ್ಮದ ಸಾಹಿತ್ಯ ಮತ್ತು ಸಂಸ್ಕೃತಿ ಹುಟ್ಟಿದ್ದನ್ನು ಕಾಣಬಹುದು. ಈ ಧರ್ಮದ ಸಾಹಿತ್ಯ ಸಂಸ್ಕೃತಿಯಲ್ಲಿಯೂ ಹೊಸ ಹೊಸ ರೀತಿಯ ವ್ಯಕ್ತಿನಾಮಗಳನ್ನು ಕಂಡುಕೊಳ್ಳಬಹುದು. ಬೈಬಲಿನ ಮೂಲ ಇಬ್ರಿಯ ಮತ್ತು ಗ್ರೀಕ್ ಭಾಷೆಯಾಗಿದ್ದರಿಂದ ಅದೇ ಭಾಷೆಯ ನಾಮಪದಗಳನ್ನು ಕನ್ನಡ(ಲಿಪಿ)ದಲ್ಲಿ ಬರೆಯಲಾಗಿದೆ. ಹಾಗಾಗಿ ಇವು ಕನ್ನಡಕ್ಕೆ ಹೊಸ ಹೊಸ ವ್ಯಕ್ತಿನಾಮಗಳಾಗಿ ಗೋಚರಿಸುತ್ತವೆ. ಅವುಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿ ವಿವರಿಸಲಾಗಿದೆ.

ಹಳೆಯ ಪುರುಷ ವ್ಯಕ್ತಿನಾಮಗಳು	**ಹಳೆಯ ಸ್ತ್ರೀ ವ್ಯಕ್ತಿನಾಮಗಳು**
ಅಂಜಿನಪ್ಪ	ಅಯ್ಯಮ್ಮ
ಅಂಜಿನಯ್ಯ	ಅಂಜಿನಮ್ಮ

ಆದ್ಯಪ್ಪ
ಆನಂದಪ್ಪ
ಈರಪ್ಪ
ಈರಯ್ಯ
ಈರಣ್ಣ
ಉಗ್ರಾಸಪ್ಪ
ಕಟಗಿ ಮಲ್ಲಯ್ಯ
ಕೇಶಯ್ಯ
ಕುಂಟನರಸಪ್ಪ
ಗಿರೆಪ್ಪ
ಗೊರವಯ್ಯ
ಚಂದಯ್ಯ
ಚನ್ನಪ್ಪ
ಜಟ್ಟಯ್ಯ
ಜಟ್ಟಪ್ಪ
ತಿಕ್ಕಯ್ಯ
ತಿಮ್ಮಪ್ಪ
ತಿಮ್ಮಯ್ಯ
ತಿಪ್ಪಯ್ಯ
ದ್ಯಾವಣ್ಣ
ನರಸಿಂಹ
ನರಸಪ್ಪ
ನಾಗೇಶ
ನಾಗಪ್ಪ

ಆನಂದಮ್ಮ
ಈರಮ್ಮ
ಐಮಾವತಿ
ಕಾಡಮ್ಮ
ಕಾಳಮ್ಮ
ಜಯಮ್ಮ
ತಾಯಮ್ಮ
ತಿಪ್ಪಮ್ಮ
ದ್ಯಾವಮ್ಮ
ನರಸಮ್ಮ
ನಾಗಮ್ಮ
ನಾರಾಯಣಮ್ಮ
ನೀಲಮ್ಮ
ಭಾಗ್ಯಮ್ಮ
ಮಲ್ಲಮ್ಮ
ಮಾರೆಮ್ಮ
ಯಲ್ಲಮ್ಮ
ಯಂಕಮ್ಮ
ರಂಗಮ್ಮ
ರಾಮಕ್ಕ
ಲಕ್ಷ್ಮಮ್ಮ
ಲಚುಮಮ್ಮ
ಶಂಕ್ರಮ್ಮ
ಶಂಕರ ನೀಲಮ್ಮ

ನಲ್ಲರೆಡ್ಡಿ
ನಾಗೇಂದ್ರಪ್ಪ
ಪರಶಪ್ಪ
ಪರಶಯ್ಯ
ಪಕೀರಪ್ಪ
ಬಸವರಾಜ
ಭೀಮಯ್ಯ
ಭೀಮಣ್ಣ
ಬುಚ್ಚಯ್ಯ
ಬುಡ್ಡಪ್ಪ
ಮಲ್ಲೇಶ
ಮಲ್ಲಪ್ಪ
ಮಲ್ಲಯ್ಯ
ಮಾರೆಪ್ಪ
ಮಾರಯ್ಯ
ಯಲ್ಲಪ್ಪ
ಯಲ್ಲಯ್ಯ
ರಮೇಶ
ರಂಗಮ್ಮ
ರಂಗಯ್ಯ
ರಾಮಣ್ಣ
ರಾಮಯ್ಯ
ರಾಮ

ಶಾವಂತ್ರಿ
ಶಾರದಮ್ಮ
ಸರೋಜಮ್ಮ
ಹುಸೇನಮ್ಮ
ಹನುಮಕ್ಕ
ಹನುಮವ್ವ
ಹುಲಿಗೆಮ್ಮ
ಹುಚ್ಚಮ್ಮ

ರಾಜಪ್ಪ

ರಾಮೇಶ

ಲಕ್ಷ್ಮಣ

ಲಕ್ಷ್ಮಯ್ಯ

ವಣಕೇರಪ್ಪ

ಶಾಮಣ್ಣ

ಸಾಮಯ್ಯ

ಹನುಮಂತ

ಹಂಪಯ್ಯ

ಹುಸೇನಪ್ಪ

ಹುಲಿಗೆಪ್ಪ

ಹುಲಿಗೆಯ್ಯ

ಆಧುನಿಕ ಸಂದರ್ಭದ ವ್ಯಕ್ತಿನಾಮಗಳು

ಅಪರ್ಣಾ

ಅರುಣ

ಅವಿನಾಶ

ಅಮರೇಶ

ಅಂಕಿತ

ಅನಿಲ್

ವೀರೇಶ

ಉಲ್ಲಾಸ

ಕವಿತಾ

ಕಸ್ತೂರಿ

ಕಲ್ಪನಾ

ಕಿರಣ

ಚಂದ್ರಶೇಖರ

ಜಗನ್

ನಯನ

ನವೀನ

ನಾಗರತ್ನ

ಪವನ

ಪವಿತ್ರ

ಪಾಲರಾಜ

ಪ್ರವೀಣ

ಪ್ರಕಾಶ

ಪೂರ್ಣಿಮಾ

ಬಸವರಾಜ

ಭಾಸ್ಕರ

ಭೀಮೇಶ

ಮಲ್ಲೇಶ

ಮನರಾಜ

ಮಲ್ಲಿಕಾ

ಮುತ್ತಣ್ಣ

ಮೇನಕ

ಮೋಹನ

ಯುವರಾಜ

ರವಿ

ರವಿಕುಮಾರ

ರಂಜಿತ

ರಮೇಶ

ರಾಜಶೇಖರ

ರಾಜಕುಮಾರ

ವಾಸಂತಿ

ವಿಕ್ಟರ್

ವಿಜಯ

ವಿದ್ಯಾಶ್ರೀ

ವಿದ್ಯಾರಾಣಿ

ವಿನಯಕುಮಾರ

ವೈಶಾಲಿ

ಶಂಕರ

ಸವಿತ

ಸಂದೀಪ

ಸಂತೋಷ

ಸಂಗೀತಾ

ಸಂಜಯ್

ಸ್ವಪ್ನ

ಸ್ಪಂದನ

ಸಾಗರ

ಸ್ವಾಮಿದಾಸ

ಸುಧಾಕರ

ಸುರೇಶ

ಸುವರ್ಣ

ಮತಾಂತರ/ಮಾನಸಾಂತರ ನಂತರದ ವ್ಯಕ್ತಿನಾಮಗಳು

ಅಲ್ಫೋನ್ಸಾ

ಅರುಳಪ್ಪ

ಅಂಟೋನಿ

ಇಗ್ನಾಸಿ

ಇಸಾಕ

ಇಸ್ರಾಯೇಲ

ಎಡ್ವರ್ಡ್

ಎಡ್ವಿನ್

ಎಲಿಯಾ

ಐವನ್‌ವಾಜ್

ಕ್ರಿಸ್ಟಾಫರ್

ಕೃಪಾಸಾಗರ

ಚಸರಾ ಜಯನಾದನ್

ಜಾನ್‌ವೆಸ್ಲೆ

ಜೋಸೆಫ್

ಡೆನ್ನಿಸ್ ಡಿಸೋಜಾ

ಡೇವಿಡ್

ನವೀನ

ನೆಲ್ಸನ್ ನಜಿರೇ

ನೋಹಾ

ನಂದಕುಮಾರ

ಪ್ರಭಾಕರ

ಭಾಸ್ಕರ

ಬೆಂಜಮಿನ್

ಮರಿಯಪ್ಪ

ಮಾರ್ಥ

ಮೆಲ್ವಿನ್ ಡಿ

ಮೋಜಸ್

ಯೇಸು

ಯೇಸುದಾಸ

ರಾಜರತ್ನ

ರೂಬೆನ್

ರೊನಾಲ್ಡ್

ಲಾಜರ್

ಲೂಯಿಸ್

ವರಪ್ರಸಾದ

ಸಲೋಮನ

ಸಂಸಾನ

ಸಲ್ಮೋನ್

ಸಾಗರ

ಸೀಮನ್

ಸುವಾರ್ತ

ಸುಚಿತ್

ಸುಕೀರ್ತ

ಸುಂದರರಾಜ

ಸುಧಾಕರ

ಹೆರಾಲ್ಡ್ ಕ್ರಿಸ್ಟೋಫರ್

ಹೆನ್ರಿ ಡಿಸೋಜಾ

ಹಿಂದೂ ಕ್ರೈಸ್ತ ಮಿಶ್ರಿತ ವ್ಯಕ್ತಿನಾಮಗಳು

ರವಿ ಯೇಸುರಾಜ್

ರೀಟಾ ರೀನಿ

ಮೇರಿ ರೆಡ್ಡಿ

ವಿಜಯ ಇಮ್ಮಾನುವೆಲ್

ಪ್ರಶಾಂತ ಇಗ್ನೇಸಿಯಸ್

ಉದಯಕುಮಾರ್ ಫರ್ಡಿನಂಡ್

ಯಜಮಾನ ಫ್ರಾನ್ಸಿಸ್

ವಿನೋದ್ ಕೊಲಾಸೋ

ವಿನೋದ ಯೇಸುದಾಸ

ರಾವ್ ಜೇಮ್ಸ್

ದಯಾನಂದ ಪ್ರಭು

ಅನಿಲ್ ಪುರ್ತಾದೋ

ಜೂದ್ ಆನಂದ್

ಸಂದೇಶ ಇಮ್ಮಾನುವೆಲ್

ಅಮಲಾನಂದ

ಸುಪ್ರೀಯ

ಅನಿಲ್ ಜೋಯಲ್ ಪ್ರಸಾದ್

ಜ್ಯೋತಿವಾಜ್

ಚಿನ್ನಪ್ಪ

ಇರುದಯರಾಜ್

ಯೇಸುದಾಸ್

ಬೈಬಲ್‌ನಲ್ಲಿ ಉಲ್ಲೇಖಿತ ವ್ಯಕ್ತಿನಾಮಗಳು

ಕನ್ನಡ ಭಾಷಾಧ್ಯಯನದಲ್ಲಿ ಪದಗಳು ಪದಗಳ ಗ್ರಹಿಕೆ ವಿಶೇಷವಾಗಿರುತ್ತದೆ. ಯಾವುದೇ ಭಾಷೆಯಲ್ಲಿ (ಸಾಹಿತ್ಯ) ಕಾವ್ಯ ಕಥೆ ಕಾದಂಬರಿ ನಾಟಕಗಳು ಇರುತ್ತವೆ. ಆ ಸಾಹಿತ್ಯದ ನುಡಿಯಲ್ಲಿ ವ್ಯಕ್ತಿನಾಮಗಳು ಕಂಡುಬರುತ್ತವೆ. ನಾಮಪದಗಳು ಇಲ್ಲದ ಯಾವುದೇ ವಾಕ್ಯವೂ ಸಹಿತ ರಚನೆಯಾಗುವುದಿಲ್ಲ. ಅಂತಹ ವ್ಯಕ್ತಿನಾಮಗಳಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ವ್ಯಕ್ತಿನಾಮಗಳು ಪ್ರಮುಖವಾಗಿವೆ. ನಾಮಪದಗಳನ್ನು ಈ ಕೆಳಕಂಡಂತೆ ಹೇಳಲಾಗಿದೆ. ಅಲ್ಲದೆ ವಿಶೇಷವಾಗಿ ನಾಮವಿಲ್ಲದ ವ್ಯಕ್ತಿಯೇ ಇಲ್ಲ ಪಶು, ಪ್ರಾಣಿ, ಪಕ್ಷಿಗಳಿಗೂ ಸಹಿತ ಹೆಸರುಗಳನ್ನು ಇಟ್ಟಿರುವುದನ್ನು ಗಮನಿಸಲಾಗಿದೆ. ಆದುದರಿಂದ ಮನುಷ್ಯನಿಗೆ ಯಾವುದೇ ಪ್ರದೇಶವಿರಲಿ ಯಾವುದೇ ಜಾತಿ ಜನಾಂಗವಾಗಿರಲಿ ಹೆಣ್ಣೆ ಗಂಡೇ ಆಗಿರಲಿ ಎಲ್ಲರಿಗೂ ಕಡ್ಡಾಯವಾಗಿ ನಾಮಗಳನ್ನು ಇಡಲಾಗುತ್ತದೆ.

ಮತ್ತಾಯ ಹಾಗೂ ಕ್ರೈಸ್ತ ಸುವಾರ್ತೆಯನ್ನು ಸಾರಿರುವ ಅಥವಾ ಕ್ರಿಸ್ತನ ಶಿಷ್ಯರೂ ಅನುಯಾಯಿಗಳು ಆಗಿರುವ ಇವರು ಯೇಸುಕ್ರಿಸ್ತನ ಸುವಾರ್ತೆಯನ್ನು ಇಡೀ ಪ್ರಪಂಚಕ್ಕೆ 'ಹೊಸ ಒಡಂಬಡಿಕೆ'ಯಲ್ಲಿ ಯೇಸುವಿನ ಜನನ ಮರಣ ಪುನರುತ್ಥಾನದ ಬಗ್ಗೆ ಹೇಳಿದ್ದಾರೆ. ಅವರ ವ್ಯಕ್ತಿನಾಮಗಳು ಈ ರೀತಿ ಇವೆ.

ಮತ್ತಾಯ	ನೆಹೆಮಿಯ
ದಾವೀದ	ಮಾರ್ಕ
ಆಮೋಸ	ಹಗ್ಗಾಯ
ಲೂಕ	ಹಬಕ್ಕೂಕ
ಯೋಹಾನ	ಯೇಸುಕ್ರಿಸ್ತ
ಚೆಫನ್ಯ	ಪೌಲ
ಮೀಕ	ಯಾಕೋಬ
ಓಬದ್ಯ	ಪೆತ್ರನು
ಯೋವೇಲನು	ಯೂದನು
ಹೋಶೇಯ	ಯೋಸೇಫ
ದಾನಿಯೇಲ	ಯಹೋವ
ಯಹೆಜ್ಕೇಲ	ಯಹೋಶುವ

ಸಾಮುವೇಲ	ನೂನ
ರೂತ	ಬೆನ್ಯಾಮೀನ
ಎಜ್ರನು	ಕ್ರಿಸ್ತ
ಎಸ್ತೇರ	ಅಬ್ರಾಂ
ಯೋಬ	ಇಸಾಕ
ಯರೆಮಿಯ	ಅನನೀಯ
ಸ್ತೆಫ್	ಸೌಲ
ವನೇಯ	ಕೊರ್ನೆಲ್ಯ
ಫೆಲಿಕ್ಸ್	ಆದಾಮ
ಪಿಲಿಪ್ಪ	ದೊರ್ಕಳು
ಬಾರ್ನಬ	ಮೋಶೆ
ಸೇತ್	ಕೇನಾನ್
ಹನೋಕ	ಶೇಮ್
ಹಾಮ್	ಯಫೇತ
ಇಮ್ಮಾನವೇಲ್	ಕುಂಬಾರ
ದಾನಿಯೇಲ್	ಯೋನ
ಮೆತೂಷೆಲ	ಕರ್ತ
ದಾವಿದ್ ಕುಮಾರ	ಸಭಾಪಾಲಕ
ಪಾದ್ರಿ	ಅಯ್ಯ
ಮೇರಿ ಗ್ರೇಸಿ	ಕುರುಬ
ಮೆಸ್ಸೀಯ	ಇಸ್ರಾಯೇಲೇ
ಯಶಾಯ	ಯಹೆಜ್ಕೇಲ್
ಯೋವೇಲ	ಹೇಬೇಲ್
ಎನೇಷ್	ಮಹಲಲೇಲ್

ಲೆಮಕ	ನೊಹ
ಯೇಸು	ವರಕನ್ಯೆ
ಕ್ರಿಸ್ತ	ಅಬ್ರಾಹಂ
ಹೊಶೇಯ	ಯೋಹಾನ
ತಿಮೋತಿ	ತೀತ
ಫೆಲೆಮೋನ	ಯಾಕೋಬ
ಪೇತ್ರ	ಸಿಮೆಯೋನ
ಲೇವಿ	ಯೆಹೂದ
ನಫ್ತಾಲಿ	ಗಾದ್
ಅಶೇರ್	ಇಸ್ಸಾಕಾರ್
ಜೆಬುಲೋನ್	ಯೋಸೇಫ್
ಬೆನ್ಯಾಮೀನ್	

ಅರ್ಥಸಹಿತ ವ್ಯಕ್ತಿನಾಮಗಳು

ಯಹೋಶುವ	ನೀತಿವಂತ
ಹೋಶೇಯ	ರಕ್ಷಣೆ
ಸಮುವೇಲ	ದೇವರಿಂದ ಪಡೆದವನು
ಎಜ್ರ	ಸಹಾಯ ನೀಡುವುದು
ಎಸ್ತೇರ	ನಕ್ಷತ್ರ
ಓಬೇದ್ಯ	ದೇವರ ಸೇವಕನು
ಯಲೀನ	ಪಾರಿವಾಳ
ಮಿಕ	ದೇವರ ಹಾಗೆ
ನಹೂಮ	ದೇವರ ಆದರಣೆ
ಹಗ್ಗಾಯ	ದೇವರ ಹಬ್ಬ
ಯಹೋವ	ದೇವರು

ಜೆಕರ್ಯ	ದೇವರು ಜ್ಞಾಪಿಸಿಕೊಳ್ಳುವವನು	
ಮಲಾಕಿ	ನನ್ನ ಸುವಾರ್ತೆಕಾರರು	
ವ್ಯಕ್ತಿನಾಮ	**ಅರ್ಥ**	**ಬಳಕೆ**
ಯಾರೊಬ್ಬಾಮನು	ಜನರನ್ನು ವಿಸ್ತರಿಸುವುದು	೧ನೇ ಅರಸು ೧೪:೧೮
ಜಿಮ್ರಿಯು	ಕೀರ್ತಿಯನ್ನು ಏರಿದನು	೧ನೇ ಅರಸು ೧೬:೧೫
ಅಹಾಬನು	ದೊಡ್ಡ ತಂದೆ	೧ನೇ ಅರಸು ೧೬:೨೯
ಅಹಜ್ಯ	ಯೆಹೂಬನೇ ಸ್ಥಿರ ಪಡಿಸುವವನು	೧ನೇ ಅರಸು ೨೨:೫೧
ಯೇಹು		೧ನೇ ಅರಸು ೧೯:೧೬
ಯಹೋವಾಹಾಜನು	ಯಹೋವನೇ ಹಿಡಿದುಕೊಳ್ಳುವನು	೨ನೇ ಅರಸು ೧೦:೩೫
ಯಹೋವಾಷನ	ಯಹೋವನೇ ಪೋಷಕನು	೨ನೇ ಅರಸು ೧೩:೯
ಮೆನುಹೇಮನು	ಆದರಣೆ ಕರ್ತನು	೨ನೇ ಅರಸು ೧೫:೧೭
ಪೆಕಹ್ಯ	ಯಹೋವನನೇ ನುಡಿಸುವವನು	೨ನೇ ಅರಸು ೧೫:೧೭
ಚಿದ್ಕೀಯ	ಯೆಹೋಬನೇ ನೀತಿ	೨ನೇ ಅರಸು ೧೫:೨೩
ಮನಸ್ಸೆ	ಮರೆತುಹೋಗುವಂತೆ ಮಾಡುವವ	೨ನೇ ಪೂರ್ವ ೩೬:೧೧
ಅಮಚ್ಚನು	ಯಹೋಬನೇ ಶಕ್ತಿಯುಳ್ಳವನು	೨ನೇ ಪೂರ್ವ ೩೩:೧
ಅತಲ್ಯಳು	ಅನುಕೂಲ	೨ನೇ ಪೂರ್ವ ೧೪:೨
ಯೋತಾಮನು	ಪರಿಪೂರ್ಣನು	೨ನೇ ಪೂರ್ವ ೨೭:೧೦
ಅಹಜ್ಯದನು	ಸ್ಥಿರಪಡಿಸುವವನು	೨ನೇ ಪೂರ್ವ ೨೭:೨
ನಾದಾಬನು	ಇಷ್ಟಪೂರ್ವಕವಾಗಿ ಕೊಡುವುದು	೧ನೇ ಅರಸು ೧೫:೨೫
ಭಾಷನು	ಧೈರ್ಯಶಾಲಿ	೧ನೇ ಅರಸು ೧೫:೩೩
ಒಮ್ರಿಯು	ಯಹೋನದಾಸ	೧ನೇ ಅರಸು ೧೬:೨೩
ಯೋರಾಮ–ಯಹೋವನೆ	ಘನವು	೧ನೇ ಅರಸು ೩:೧–೨
ಜೆಕರ್ಯ	ಯಹೋವನನ್ನು ಸನ್ಮಾನಿಸುವುದು	೨ನೇ ಅರಸು ೧೫:೮
ಹೊಶೇಯ	ಮುಕ್ತಿ	೨ನೇ ಅರಸು ೧೫:೩೦

ಶಲ್ಲೂಮ	ಪ್ರತಿಕಾರ ಮಾಡುವವನು	೨ನೇ ಅರಸು ೧೫:೧೩
ಉಜ್ಜೀಯ	ಯೆಹೋವನೇ ನನ್ನ ಬಲ	೨ನೇಪೂರ್ವಕಾಲ ೩೩:೨೭
ಅಮುಚ್ಚನು	ಯೆಹೋವನೇ ಶಕ್ತಿಯುಳ್ಳವನು	೨ನೇ ಅರಸು ೧೪:೨
ಯೋತಾಮ	ಪರಿಪೂರ್ಣ	೨ನೇ ಪೂರ್ವಕಾಲ ೩೭:೧
ಆಸನು	ವೈದ್ಯನು ಬಳಕೆ	೧ನೇ ಅರಸು ೧೫:೯-೧೦
ಯಹೋಶುವ	ನೀತಿವಂತ	೧೩:೧೬
ಹೋಶೇಯ	ರಕ್ಷಣೆ	ಅರಣ್ಯಕಾಂಡ ೧೦:೮

೪.೨.೪. ಸ್ಥಳನಾಮಗಳು

ಸಾಮಾನ್ಯವಾಗಿ ಹೆಸರಿಲ್ಲದ ಮನುಷ್ಯನು ಇರಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಹೆಸರಿಲ್ಲದ ಒಂದು ಸ್ಥಳವೂ ಇರಲು ಸಾಧ್ಯವಿಲ್ಲ. ಯಾವುದೇ ಮನುಷ್ಯನಿಗೆ ಒಂದು ಹೆಸರಿರುವಂತೆ ಆ ಮನುಷ್ಯ ನೆಲೆಯೂರಿದ ಅಥವಾ ವಾಸವಾಗಿದ್ದ ಒಂದು ಸ್ಥಳಕ್ಕೂ ಹೆಸರು ಇರುತ್ತದೆ. ಏಕೆಂದರೆ ಒಂದು ಸ್ಥಳವನ್ನು ಸಮೀಪದ ಸ್ಥಳದಿಂದ ಬೇರ್ಪಡಿಸಲು ಯಾವುದಾದರೂ ಒಂದು ಹೆಸರನ್ನಿಡುವುದು ಸಹಜ. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡುಬಂದಿರುವ ಸಂಪ್ರದಾಯವಾಗಿದೆ. ಈ ಸ್ಥಳನಾಮಗಳನ್ನು ಕುರಿತು ವ್ಯಾಸಂಗ ಮಾಡುವುದನ್ನು ಆಂಗ್ಲ ಭಾಷೆಯಲ್ಲಿ ಟೊಪೋನೀಮೀ ಎಂದು ಕರೆಯುವರು. 'ಟೊಪೋನಿಮಿ' ಪದವು ಮೂಲ ಗ್ರೀಕ್ ಪದವಾಗಿದ್ದು, 'ಟೊಪೊಸ್ ನೋಮೊಸ್' ಎಂಬ ಪದದಿಂದ ಬಂದಿದೆ. ಟೊಪೊಸ ಎಂದರೆ ಸ್ಥಳ ನೊಮೊಸ್ ಎಂದರೆ ಅಧ್ಯಯನ ಎಂದರ್ಥ. ಈ ಎಲ್ಲಾ ಅಧ್ಯಯನಗಳಂತೆ ಸ್ಥಳನಾಮ ಅಧ್ಯಯನವೂ ಮನುಷ್ಯನಿಗೆ ಒಂದು ಫಲದಾಯಕ ಅಂಶವಾಗಿದೆ ಎಂದು ಹೇಳಬಹುದು. ಈ ಅಧ್ಯಯನಗಳಿಂದ ಸಂಸ್ಕೃತಿ, ಸಂಪ್ರದಾಯ ಮತ್ತು ಚರಿತ್ರೆಯನ್ನು ಸಹಿತ ತಿಳಿಯಬಹುದು. ಏಕೆಂದರೆ ಒಂದು ಸ್ಥಳಕ್ಕೆ ಹೆಸರಿಡಬೇಕಾದರೆ ಆ ಸ್ಥಳಕ್ಕೆ ಒಂದೊಂದು ಹಿನ್ನೆಲೆ, ಅರ್ಥ, ಕಾರಣಗಳು ಇರುತ್ತವೆ. ಇಂತಹ ಒಳಗಿನ ಗುಟ್ಟನ್ನು ಈ ಸ್ಥಳನಾಮಾಧ್ಯಯನದಿಂದ ಗುರ್ತಿಸಬಹುದು.

ಇಂತಹ ಸ್ಥಳನಾಮಗಳನ್ನು ಕುರಿತು ಮೊದಲು ಅಧ್ಯಯನ ಮಾಡಿದ ಕೀರ್ತಿ ಜರ್ಮನಿಯ ಗಾಟ್‌ಫ್ರೀಡ್ ವಿಲ್‌ಹೆಲ್ಮ್ ಲಿಬ್ನಿಜ್ (೧೭೬೮) ಎಂಬುವವರಿಗೆ ಸಲ್ಲುತ್ತದೆ. ಇಂದು ಲಿಬ್ನಿಜ್ ಅವರನ್ನು 'ಸ್ಥಳನಾಮಶಾಸ್ತ್ರದ ಪಿತಾಮಹ'ನೆಂದೇ ಕರೆಯುತ್ತಾರೆ. ತರುವಾಯ ನಮ್ಮ ಕನ್ನಡ ನಾಡಿನಲ್ಲಿ ಗಮನಿಸುವುದಾದರೆ ವಿದ್ವಾಂಸರಾದ 'ದೇಜಗೌ' ಅವರು 'ಭಾರತೀಯ ಸ್ಥಳನಾಮ ಸಂಸ್ಥೆ' ಎಂದು ೧೯೭೮ರಲ್ಲಿ ಸ್ಥಾಪಿಸಿ ಸ್ಥಳನಾಮ ಅಧ್ಯಯನಕ್ಕೆ ನಾಂದಿ ಹಾಡಿದ್ದಾರೆ. ಹೀಗೆ ಸ್ಥಳನಾಮಗಳ ಅಧ್ಯಯನ ಪ್ರಕ್ರಿಯೆ ಅಂದಿನಿಂದ ಇಂದಿನವರೆಗೆ ಮುಂದುವರೆದಿದೆ.

ಪ್ರಸ್ತುತ ಈ ಅಧ್ಯಯನದಲ್ಲಿ ಬಹಳ ಮುಖ್ಯವಾಗಿರುವ ಸಂಗತಿಯೇನೆಂದರೆ ಈ ಸ್ಥಳನಾಮ ಎನ್ನುವುದು ಯಾವುದೇ ಕಾಲ, ದೇಶ, ಧರ್ಮಕ್ಕೆ ಸೀಮಿತವಾಗಿರದೇ ಸರ್ವರೂ ಸ್ವೀಕರಿಸಿದ ಪರಿಕಲ್ಪನೆಯಾಗಿದೆ. ಅಂದರೆ ಸ್ಥಳನಾಮ ಇಡುವುದು ಎಲ್ಲಾ ಮನುಷ್ಯರಿಗೆ ಅತ್ಯಂತ ಅವಸರವೆಂದು ಹೇಳಲಾಗುತ್ತದೆ. ಹಾಗೆಯೇ ಕ್ರೈಸ್ತ ಧರ್ಮದಲ್ಲಿಯೂ ಸ್ಥಳನಾಮಗಳನ್ನು ಕಂಡುಕೊಳ್ಳಬಹುದಾಗಿದೆ. ಕ್ರೈಸ್ತರು ನಮ್ಮ ನಾಡಿನಲ್ಲಿಯೂ ಸಂಸ್ಕೃತಿಯನ್ನು ಕಟ್ಟಿಕೊಂಡಿದ್ದಾರೆ. ಪ್ರಸ್ತುತ ಇಂತಹ ಕ್ರೈಸ್ತ ಧಾರ್ಮಿಕ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ವಿಶೇಷವಾಗಿ ಸಾಂಸ್ಕೃತಿಕವಾಗಿ ರಾಯಚೂರು ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದ್ದರಿಂದ ಜಿಲ್ಲೆಯಲ್ಲಿ ಬಹಳ ಕ್ರೈಸ್ತ ಸ್ಥಳನಾಮಗಳು ಕಂಡುಬರುವುದಿಲ್ಲ. ಉಳಿದಂತೆ ಕ್ರೈಸ್ತ ಸಂಸ್ಕೃತಿ ಆಚರಣೆ ಸಂಪ್ರದಾಯಗಳು ಹೇರಳವಾಗಿವೆ. ಆದುದರಿಂದ ಈ ಅಧ್ಯಯನದಲ್ಲಿ ಸ್ಥಳನಾಮಗಳ ವಿಚಾರವನ್ನು ಸಾಂಸ್ಕೃತಿಕವಾಗ (ಪ್ರಾದೇಶಿಕ) ನೋಡದೆ ಕ್ರೈಸ್ತ ಧಾರ್ಮಿಕ ಸಾಹಿತ್ಯ(ಬೈಬಲ್)ದಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳನ್ನು ಅಧ್ಯಯನ ಮಾಡಲಾಗಿದೆ. ಅವುಗಳ ಬಳಕೆಗೆ ಅನುಗುಣವಾಗಿ ವಿವರಿಸಲಾಗುವುದು. ಈ ಧಾರ್ಮಿಕ ಸಾಹಿತ್ಯದೊಳಗಿನ ಕ್ರೈಸ್ತ ಸ್ಥಳನಾಮಗಳಿಂದ ನಮ್ಮ ಕನ್ನಡ ಸಾಹಿತ್ಯದೊಳಗೆ ಹೊಸ ಹೊಸ ಸ್ಥಳನಾಮದ ಪರಿಚಯ ಸೃಷ್ಟಿಸಿದಂತಾಗುವುದು. ಸತ್ಯವೇದದಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳು ಹೆಚ್ಚಾಗಿ ಇಬ್ರಿಯ ಗ್ರೀಕ್ ಮೂಲದವುಗಳಾಗಿದ್ದು ಅವುಗಳನ್ನು ಯಥಾರೀತಿಯಾಗಿ ಕನ್ನಡ ಅಕ್ಷರಗಳಲ್ಲಿ ಬರೆದು ಧರ್ಮಗ್ರಂಥವನ್ನು ಅನುವಾದಿಸಲಾಗಿದೆ. ಅಂತಹ ಸ್ಥಳನಾಮಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿದೆ.

ಸ್ಥಳನಾಮಗಳ ವರ್ಗೀಕರಣ ಮತ್ತು ವಿವರಣೆ

ಕ್ರೈಸ್ತ ಧಾರ್ಮಿಕ ಗ್ರಂಥ ಬೈಬಲ್‌ನಲ್ಲಿ ಹಲವು ಸ್ಥಳನಾಮಗಳು ಕಂಡುಬರುತ್ತವೆ. ಅದರಲ್ಲಿ ಅರಣ್ಯ ಸಂಬಂಧಿಸಿದ ಅಂದರೆ ಊರಿಗೆ ಸಂಬಂಧಿಸಿದ ಅನೇಕ ಸ್ಥಳನಾಮಗಳು ಇವೆ. ಹಾಗೆಯೇ ಪ್ರಾದೇಶಿಕ ಸಂಬಂಧಿಸಿದಂತಹ ಸ್ಥಳನಾಮಗಳೂ ಸಹಿತ ಅಡಕಗೊಂಡಿವೆ. ಏಕೆಂದರೆ ಅಂದು ಕ್ರಿಸ್ತನು ತನ್ನ ಉಪದೇಶವನ್ನು ಗುಡ್ಡ ಬೆಟ್ಟಗಳ ಮೇಲೆ ಅರಣ್ಯ, ತೋಟಗಳಲ್ಲಿ ಹಾಗೆಯೇ ದಾರಿಯ ಉದ್ದಗಲಕ್ಕೂ ಹೇಳುತ್ತಿದ್ದನು. ಆದುದರಿಂದ ಕ್ರೈಸ್ತ ಧರ್ಮಗ್ರಂಥದಲ್ಲಿ ಅನೇಕ ಪ್ರಾದೇಶಿಕ ಸ್ಥಳನಾಮಗಳ ಉಲ್ಲೇಖವಾಗಿದೆ. ಅಂತಹ ಸ್ಥಳನಾಮಗಳನ್ನು ಈ ಕೆಳಕಂಡಂತೆ ಗಮನಿಸಲಾಗಿದೆ.

೧. ಅರಣ್ಯಕ್ಕೆ ಸಂಬಂಧಿಸಿದ ಸ್ಥಳನಾಮಗಳು

ಸ್ಥಳನಾಮ	ಉಲ್ಲೇಖ	ಬೈಬಲ್‌ನಲ್ಲಿ ಬಳಕೆಯ ಸಂದರ್ಭ
ಎಂದಿಗೆಯ	೧ನೇ ಸಮುವೇಲ ೨೪:೧	ಸೌಲನು ಫಿಲಿಷ್ಟಿಯರನ್ನು ಓಡಿಸಿ ಹಿಂದಿರುಗಿಸಿ ಬರುವಾಗ ದಾವೀದನು ಈ ಅರಣ್ಯದಲ್ಲಿ ಅಡಗಿ ಕೊಂಡಿದ್ದನೆಂದು ಸೌಲನು ತಿಳಿದುಕೊಂಡನು ಎಂದು 'ಎಂದಿಗೆಯ' ಸ್ಥಳ (ಅರಣ್ಯ)ದ ಪ್ರಸ್ತಾಪ ಬರುತ್ತದೆ. ಇದು ಇಬ್ರಿಯ ಪದವಾಗಿದೆ.
ಏತಾಮಿನ್	ಅರಣ್ಯಕಾಂಡ ೨೨:೩೬	ಕೆಂಪು ಸಮುದ್ರವನ್ನು ದಾಟಿದ ಮೇಲೆ ಇಸ್ರಾಯೇಲರು ಮೂರು ದಿನ ನಡೆದು ಬಂದ ಅರಣ್ಯವಾಗಿದೆ. ಈ ಪದದ ಮೂಲ ಇಬ್ರಿಯ ಭಾಷೆಯಾಗಿದೆ.
ಏದೋಮ	೨ನೇ ಅರಸು ೩:೮–೯	ಇಸ್ರಾಯೇಲರು ಮತ್ತು ಸೈನಿಕರು ನೀರು ಸಿಕ್ಕದೇ ಅಲೆದಾಡಿದಂತಹ ಒಂದು ಸ್ಥಳ. ಇದು ಸಹ ಇಬ್ರಿಯ ಪದವಾಗಿದೆ.
ಗಿಬ್ಯೋನಿನ	೨ನೇ ಸಮುವೇಲ ೨:೨೪	ಯೋವಾಬನೂ ಅಭಿಷೈಯು ಅಬ್ನೇಯರನನ್ನು ಬೆನ್ನಟ್ಟಿದಾಗ ಇಳಿದುಕೊಂಡ ಸ್ಥಳ.
ಕಾದೇಶ	ಕೀರ್ತನೆ ೨೯:೮	ಯೆಹೋವನ ಗರ್ಜನೆಗೆ ಅರಣ್ಯವು ಕಂಪಿಸುವುದೆಂದು ದಾವೀದನು ತಿಳಿಸಿದ್ದು ಈ ಅರಣ್ಯದ ಮೂಲ ಭಾಷೆ ಇಬ್ರಿಯ.

ಚಿನ್	ಅರಣ್ಯಕಾಂಡ ೩೩:೩೬	ಇಸ್ರಾಯೇಲರು ಇಳಿದುಕೊಂಡ ಸ್ಥಳ
ಜೀಫ್	೧ನೇ ಸಮುವೇಲ ೨೩:೧೪	ಸೌಲನು ದಾವೀದನನ್ನು ಕೊಲ್ಲಬೇಕೆಂದು ಹುಡುಕುತ್ತಿರುವಾಗ ಅವನು ಇಳಿದುಕೊಂಡ ಸ್ಥಳ ಇದಾಗಿದೆ.
ತೆಕೋವ	೨ನೇ ಪೂರ್ವಕಾಲ ವೃತ್ತಾಂತ ೨೦:೨೦	ಯಹೆದ್ಯರಿಗೂ ಯರೂಸಲೇಮಿನವರಿಗೂ ಯಹೋವನಲ್ಲಿ ಭರವಸವಿಡಿರಿ ಆಗ ನೀವು ಸುರಕ್ಷಿತರಾಗಿರುವಿರಿ ಎಂದು ಹೇಳಿದಂತಹ ಸ್ಥಳವಾಗಿದೆ. ಈ ಮಾತನ್ನು ಯಹೋಷಾಫಾಟನು ಹೇಳುತ್ತಾನೆ.
ಪಾರಾನ್	ಅರಣ್ಯಕಾಂಡ ೧೦:೧೨	ಚಲಿಸುವ ಮೋಡವು ಪಾರಾನ್ ಎಂಬ ಅರಣ್ಯದಲ್ಲಿ ನಿಂತಿದ್ದನ್ನು ನಾವು ನೋಡುತ್ತೇವೆ ಎಂದು ಹೇಳುವಲ್ಲಿ ಈ ಪಾರಾನ್ ಸ್ಥಳನಾಮ ಬಳಕೆಯಾಗಿದೆ.
ಬೇರ್ಷೆಬದಕಾಡು	ಆದಿಕಾಂಡ ೨೧:೧೪	ಅಬ್ರಹಾಮನು ಹಾಗರಳನ್ನೂ ಆಕೆಯ ಮಗನನ್ನು ಒಪ್ಪಿಸಿ ಕಳಿಸಿ ಬಿಟ್ಟಿದ್ದ ಅಟ್ಟಿದ್ದ ಒಂದು ಕಾಡು ಇದಾಗಿದೆ.
ಮಾರಾ	ವಿಮೋಚನಾ ಕಾಂಡ ೧೭:೭	ಕುಡಿಯುವುದಕ್ಕೆ ನೀರಿಲ್ಲದಾಗ ಇಸ್ರಾಯೇಲರು ತಮ್ಮ ದೇವರಾದ ಯಹೋವನನ್ನು ಪರೀಕ್ಷಿಸಿದ ಸ್ಥಳ.
ಮಾವೋನ್	೧ನೇ ಸಮುವೇಲ ೨೩:೨೪	ಇದು ಸಹ ದಾವೀದನು ಅಡಗಿಕೊಂಡ ಸ್ಥಳ.
ಯೂದಾಯ	ಮತ್ತಾಯ ೩:೧	ಸ್ನಾನಿಕನಾದ ಯೋಹಾನನು ಪರಲೋಕ ರಾಜ್ಯದ ಸಂದೇಶವನ್ನು ಮೊದಲು ಸಾರಿ ಹೇಳುತ್ತಿದ್ದುದು.

ಯೆರೂವೆಲ್	೨ನೇ ಪೂರ್ವ ಕಾಲ ವೃತ್ತಾಂತ ೨೦:೨೦-೧೬	ಯೆಹೋಷಾಪಾವನಿಗೆ ವಿರುದ್ಧವಾಗಿ ಬಂದಾಗ ದೇವರು ತನ್ನ ಆತ್ಮದ ಮೂಲಕ ಅವರನ್ನು ಧೈರ್ಯಪಡಿಸಿದ ಸ್ಥಳ ಇದಾಗಿದೆ.
ಯೋಷೀಮೋನ್	ಅರಣ್ಯಕಾಂಡ ೨೧:೨೦	ಇಸ್ರಾಯೇಲರು ಸ್ವಾಧೀನಪಡಿಸಿಕೊಂಡ ಸ್ಥಳ.
ಶೂರಿನ್	ವಿಮೋಚನಕಾಂಡ ೧೫:೨೨	ಪರೋಹನನ ದಾಸತ್ವದಿಂದ ಬಿಡುಗಡೆ ಹೊಂದಿದ ಇಸ್ರಾಯೇಲರು ಕೆಂಪು ಸಮುದ್ರವನ್ನು ದಾಟಿದ ಮೇಲೆ ಬಂದು ಸೇರಿದ ಸ್ಥಳ.
ಸಿನಾಯಿ	ಅರಣ್ಯಕಾಂಡ ೧೦:೧೧-೧೨	ಇಲ್ಲಿ ದೇವರ ದರ್ಶನ ಗುಡಾರದ ಮೇಲಿದ್ದ ಮೋಡವು ಮೇಲಕ್ಕೆ ಅಂದರೆ ಚಲನೆಯಾಗಿದ್ದರಿಂದ ಅಲ್ಲಿರುವ ಇಸ್ರಾಯೇಲರು ಈ ಅರಣ್ಯವನ್ನು ಬಿಟ್ಟು ಮುಂದೆ ಪಾರಾನ್ ಅರಣ್ಯಕ್ಕೆ ಹೋದರು ಎಂದು ತಿಳಿದುಬರುತ್ತದೆ.
ಸೀನ್	ವಿಮೋಚನಕಾಂಡ ೧೬:೧	ಇದು ಇಸ್ರಾಯೇಲರು ಇಳಿದುಕೊಂಡ ಇನ್ನೊಂದು ಅರಣ್ಯ ಸ್ಥಳವಾಗಿದೆ. ಇದು ಸಹ ಇಬ್ರಿಯ ಭಾಷೆಯ ಪದವಾಗಿದೆ.

ಸ್ಥಳನಾಮಗಳ ವಿವರಣೆ

ಏದೆನ್ (ಆದಿಕಾಂಡ ೨ನೇ ಅಧ್ಯಾಯ ೮ನೇ ವಚನ): ಇದು ಕ್ರೈಸ್ತ ಧಾರ್ಮಿಕ ಗ್ರಂಥವಾದ ಬೈಬಲಿನ ಹಳೆ ಒಡಂಬಡಿಕೆಯಲ್ಲಿ ಬರುವ ಮೊದಲನೆಯ ಪುಸ್ತಕ ಆದಿಕಾಂಡ ೨ನೇ ಅಧ್ಯಾಯ ೮ನೇ ವಚನದಲ್ಲಿ, "ಇದಲ್ಲದೆ ಯಹೋವ ದೇವರು ಮೂಡಣ ದಿಕ್ಕಿನಲ್ಲಿರುವ ಏದೆನ್ ಸೀಮೆಯಲ್ಲಿ ಒಂದು ಉದ್ಯಾನವನ್ನು ಮಾಡಿ ತಾನು ರೂಪಿಸಿದ ಮನುಷ್ಯನನ್ನು ಅದರಲ್ಲಿ ಇರಿಸಿದನು" ಎಂದು ಬರೆಯಲ್ಪಟ್ಟಿದೆ. ಇದು ಮೂಲ ಇಬ್ರಿಯ ಪದವಾಗಿದೆ. ಇದನ್ನು ಆಂಗ್ಲ ಭಾಷೆಯಲ್ಲಿ 'ಈಡನ್' ಎಂದು ಕರೆಯುತ್ತಾರೆ. ಇಬ್ರಿಯ ಉಚ್ಚಾರಣೆಯನ್ನೇ ಕನ್ನಡದಲ್ಲಿ ಬಳಸಲಾಗಿದೆ. ಈಗಾಗಿ ಕನ್ನಡಕ್ಕೆ

ಹೊಸ ಶಬ್ದವಾಗಿ ಗೋಚರಿಸುವುದು. ಅಲ್ಲದೆ ಈ ಸ್ಥಳವನ್ನು ಮೊಟ್ಟ ಮೊದಲು ಮನುಷ್ಯರು ವಾಸಿಸಿದ ಸ್ಥಳ ಎಂಬುದಾಗಿ ವಿಶೇಷತೆಯನ್ನು ಹೊಂದಿದೆ. ಆರಂಭದಲ್ಲಿ ದೇವರು ಸೃಷ್ಟಿ ಮಾಡಿದ ಮೊದಲ ಇಬ್ಬರು ಮಾನವರು ಆದಾಮ (ಪುರುಷ ವ್ಯಕ್ತಿ) ಮತ್ತು ಈವ ಅವ್ವ (ಸ್ತ್ರೀ) ಇವರೀರ್ವರನ್ನು ಈ ಏದೆನ ತೋಟದಲ್ಲಿಯೇ ಇದ್ದರು. ಅಲ್ಲಿ ಮನುಷ್ಯನಿಗೆ ತಿನ್ನಲು ಬೇಕಾಗುವ ಎಲ್ಲಾ ರೀತಿಯ ಹಣ್ಣು ಹಂಪಲು ನೀರು ಇತ್ತು ಎಂದು ಉಲ್ಲೇಖವಿದೆ.

ಬೇರ್ಷೆಬದ: ಇದು ಇಬ್ರಿಯ ಪದವಾಗಿದ್ದು ಒಂದು ಅರಣ್ಯ ಪ್ರದೇಶವಾಗಿದೆ. ಕ್ರಿ.ಪೂ. ಅಂದರೆ ಹಳೆ ಒಡಂಬಡಿಕೆಯಲ್ಲಿ ಈ ಪದವು ಲಿಖಿತವಾಗಿದೆ. ಆದಿಕಾಂಡ ೨೧ನೇ ಅಧ್ಯಾಯ ೧೪ನೇ ವಚನದಲ್ಲಿ ಕಾಣಬಹುತ್ತದೆ, ಅದು ಹೀಗೆ "ಮಾರಣೆ ದಿನ ಬೆಳಿಗ್ಗೆ ಅಬ್ರಹಾಮನು ಎದ್ದು ಹಾಗರಳಿಗೆ ಬುತ್ತಿಯನ್ನು ಒಂದು ತಿತ್ತಿ ತಣ್ಣೀರನ್ನು ಕೊಟ್ಟು ಅವಳ ಹೆಗಲ ಮೇಲೆ ಇಟ್ಟು ಮಗುವನ್ನು ಒಪ್ಪಿಸಿ ಕಳುಹಿಸಿಬಿಟ್ಟನು. ಅವಳು ಹೊರಟು 'ಬೇರ್ಷೆಬದ' ಕಾಡಿನಲ್ಲಿ ಅಲೆಯುತ್ತಿದ್ದಳು" ಎಂದು ಬರೆಯಲಾಗಿದೆ. ಇಲ್ಲಿ ಬೇರ್ಷೆಬದ ಪದ ಕನ್ನಡ ಸಾಹಿತ್ಯದಲ್ಲಿ ಹೊಸದಾಗಿ ಸೇರ್ಪಡೆಗೊಳ್ಳುತ್ತದೆ.

ಮೆರಿಬಾ: ಇದು ಇಬ್ರಿಯಪದವಾಗಿದೆ. 'ಮೆರಿಬಾ' ಅಥವಾ 'ಮೆಸ್ಸಾ' ಎಂತಲೂ ಕರೆಯಿಸಿಕೊಳ್ಳುತ್ತದೆ. ನೀರಿನ ಪ್ರವಾಹಕ್ಕೆ ಮೆರಿಬಾ ಎಂದು ಕರೆದರು ಎಂದು ಬೈಬಲಿನಲ್ಲಿ ಉಲ್ಲೇಖವಾಗಿದೆ. ಅರಣ್ಯಕಾಂಡ ೨೦:೧೩ನೇ ವಚನದಲ್ಲಿ "ಇಸ್ರಾಯೇಲರು ಅಲ್ಲಿ ಯೆಹೋವನ ಸಂಗಡ ವಿವಾದ ಮಾಡಿದ್ದರಿಂದ ಆ ನೀರಿನ ಪ್ರವಾಹಕ್ಕೆ 'ಮೆರಿಬಾ' ಎಂದು ಹೆಸರಾಯಿತು" ಎಂದು ಬರೆಯಲಾಗಿದೆ.

ಯೂದಾಯ: ಇದು ಮೂಲ ಇಬ್ರುಪದವಾಗಿದ್ದು ಕನ್ನಡ ಅಕ್ಷರದಲ್ಲಿ ಮಾತ್ರ ಬಳಕೆಯಾಗಿದೆ. ಮೊದಲಿಗೆ ಹೂಡ್ಯೆಯ ಎಂದು ಅನುವಾದಿಸಲಾಗಿತ್ತು. ಪ್ರಸ್ತುತ 'ಯೂದಾಯ' ಎಂದು ಓದುತ್ತೇವೆ. ಯಹೂದ್ಯರು ಅಂದರೆ ಕ್ರಿ.ಪೂ. ಯಹೋವನನ್ನು ನಂಬಿದ ಜನಾಂಗವಿರುವ ಸ್ಥಳವೇ 'ಯೂದಾಯ' ಸ್ಥಳವಾಗಿದೆ. ಮತ್ತಾಯನು ಬರೆದ ಸುವಾರ್ತೆ ೨೪:೧೬ನೇ ವಚನದಲ್ಲಿ "ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿ ಹೋಗಲಿ ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗಿರುವುದನ್ನು ತೆಗೆದುಕೊಳ್ಳುವುದಕ್ಕೆ ಇಳಿಯದೆ ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವುದಕ್ಕೆ ಹಿಂದಿರುಗಿ ಬಾರದೆ ಓಡಿ ಹೋಗಲಿ" ಎಂದು ಉಲ್ಲೇಖವಿದೆ. ಇಲ್ಲಿ ಯೂದಾಯ ಎಂಬುವುದು ಸಹ ಕನ್ನಡಕ್ಕೆ ಒಂದು ಹೊಸ ಪದವಾಗಿ ಸೇರಿಕೆಯಾಗಿದೆ.

ಗೊಲ್ಗಥಾ: ಇದು ಗ್ರೀಕ್ ಭಾಷೆಯ ಪದವಾಗಿದ್ದು ಸತ್ಯವೇದ(ಬೈಬಲ್)ದ ಮತ್ತಾಯನು ಬರೆದ ಸುವಾರ್ತೆ ೨೭ ಅಧ್ಯಾಯ ವಚನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದು ಸಾಕ್ಷಾತ್ ಯೇಸುಕ್ರಿಸ್ತನನ್ನು ಶಿಲುಬೆಗೆ ೩೨-೩೪ರ ಏರಿಸಿದಂತಹ ಬೆಟ್ಟವಾಗಿದೆ. ಬೈಬಲ್‌ನಲ್ಲಿ "ಹೊರಕ್ಕೆ ಹೋಗುತ್ತಿರುವಾಗ ಕುರೇನೆ ಪಟ್ಟಣದ ಸೀಮೋನನೆಂಬುವನನ್ನು ಕಂಡು ಅವನನ್ನು ಆತನ ಶಿಲುಬೆಯನ್ನು ಹೊರುವುದಕ್ಕೆ

ಬಿಟ್ಟ ಹಿಡಿದರು. ಮತ್ತು 'ಗೊಲ್ಗೊಥಾ' ಅಂದರೆ ಕಪಾಲಸ್ಥಳ ಎಂಬ ಸ್ಥಾನಕ್ಕೆ ಬಂದಾಗ ಆತನಿಗೆ ಕಹಿ ಬೆರೆಸಿದ ದ್ರಾಕ್ಷಾರಸವನ್ನು ಕುಡಿಯುವುದಕ್ಕೆ ಕೊಟ್ಟರು. ಆತನು ಅದನ್ನು ರುಚಿ ನೋಡಿ ಕುಡಿಯಲೊಲ್ಲದೆ ಇದ್ದನು"ಎಂದು ಬರೆಯಲಾಗಿದೆ. 'ಗೊಲ್ಗೊಥಾ' ಎಂದು ಕರೆಯುವ ಸ್ಥಳ ಕ್ರಿಸ್ತನ ಮರಣದ ವಾರ್ತೆಯನ್ನು ತಿಳಿಸುತ್ತದೆ.

ಜೀಫ್: ಇದು ಇಬ್ರಿಯ ಪದವಾಗಿದ್ದು ಅರಣ್ಯ ಪ್ರದೇಶವಾಗಿದೆ. ಬೈಬಲ್‌ನಲ್ಲಿ ಈ ರೀತಿಯಾಗಿ ಕಂಡುಬರುತ್ತದೆ. ೧ನೇ ಸಮುವೇಲ ೨೩ನೇ ಅಧ್ಯಾಯ ೧೪ನೇ ವಚನದಲ್ಲಿ "ಅನಂತರ ದಾವೀದನು ಅರಣ್ಯದಲ್ಲಿರುವ ಆಯಾ ಆಶ್ರಯಗಿರಿಯಲ್ಲಿ ಇರುತ್ತಿದ್ದ ಕಡೆಗೆ 'ಜೀಫ್' ಅರಣ್ಯದ ಪರ್ವತ ಪ್ರಾಂತಕ್ಕೆ ಬಂದು ಅಲ್ಲಿ ವಾಸ ಮಾಡಿದನು" ಎಂದು ಉಲ್ಲೇಖವಾಗಿದೆ. ಇದು ಕನ್ನಡ ಸಾಹಿತ್ಯಕ್ಕೆ ಹೊಸ ಪದವಾಗಿದೆ ಎಂದು ಹೇಳಬಹುದು.

ಪರದೈಸಿ: ಇದು ಗ್ರೀಕ್ ಪದವಾಗಿದ್ದು ಸ್ವರ್ಗ ಪರಲೋಕ ಎಂಬ ಅರ್ಥಗಳನ್ನು ನೀಡುತ್ತದೆ. ಇದು ಕನ್ನಡದಲ್ಲಿ ಇಂದ ಪದ ಕ್ರೈಸ್ತ ಧಾರ್ಮಿಕ ಸಾಹಿತ್ಯದಿಂದ ಕನ್ನಡಕ್ಕೆ ಹೊಸ ಪದವಾಗಿ ಸೇರುತ್ತದೆ. ಬೈಬಲಿನ ಲೂಕನು ಬರೆದ ಸುವಾರ್ತೆ ೨೩ನೇ ಅಧ್ಯಾಯ ೪೩ನೇ ವಚನದಲ್ಲಿ ಗಮನಿಸುತ್ತೇವೆ. ಅದು ಹೇಗೆಂದರೆ "ಯೇಸುವೇ ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ ಅಂದನು. ಅದಕ್ಕೆ ಯೇಸು ಈ ಹೊತ್ತೆ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ ಎಂದು ಉತ್ತರ ಕೊಟ್ಟನು."

ಇನ್ನು ಕೆಲವು ಸ್ಥಳನಾಮಗಳನ್ನು ಹೀಗೆ ಗುರ್ತಿಸಲಾಗಿದೆ.

ಬಾಬಿಲೋನ	ಮೆಕೆದೋನಿಯಾ
ಪತ್ಮೋಸ	ಸ್ಮುರ್ನ
ಪೆರ್ಗಮ	ದುವತ್ತೈರ
ಸಾರ್ದಿಸಿ	ಫಿಲದೆಲ್ಫಿ
ಲವೊದಿಕೆಯ	ಅಂತಿಯೋಕ್ಯ
ಲುಸ್ತ್ರ	ದೆರ್ಬೆ
ಅಥೈನ್ಸ್	ಬೇರೋಯ
ಬೆತ್ಲೆಹೇಮ	ಚಿನೋಯ
ಬೇಥಾನ್ಯ	ಯೂದಾಯ
ಅನಾಮದೇಯ	ಯೋರ್ದನ್
ಜೆರುಸಲೇಂ	ಪಿಶೋನ್

ಗಿಹೋನ್	ಹಿದ್ದೆಕೇಲ್
ಯೂಫ್ರಟಿಸ್	ಕೊರಿಂಥಾ
ಎಫೆಸಾ	ರೋಮ
ಐಗುಪ್ತ	

ಹೀಗೆ ಇನ್ನು ಅನೇಕ ಸ್ಥಳನಾಮಗಳು ಸತ್ಯವೇದದಲ್ಲಿ ಕನ್ನಡ ಸಂಗೀತ ಕೀರ್ತನೆಗಳಲ್ಲಿ ಕಂಡುಬರುತ್ತವೆ. ಇವು ಕನ್ನಡದ ಮೇರೆಯನ್ನು ಹಿಗ್ಗಿಸುತ್ತವೆ. ಉಚ್ಚಾರಣೆ ಅನ್ಯಭಾಷೆಯ ಧ್ವನಿಯನ್ನು ಹೊರಹಾಕಿದರೂ ಲಿಪಿ ಮಾತ್ರ ಕನ್ನಡವೇ ಆಗಿದೆ. ಆದ್ದರಿಂದ ಈ ಪ್ರಕ್ರಿಯೆ ಕನ್ನಡಕ್ಕೆ ಪ್ರೋತ್ಸಾಹ ನೀಡಿದಂತೆ ಆಗುವುದು ಕನ್ನಡದಲ್ಲಿ ಇಲ್ಲದ ಪದಗಳನ್ನು ಹೊಸದಾಗಿ ನಿರ್ಮಿಸಿಕೊಳ್ಳುತ್ತದೆ. ಉದಾ. ರೋಮ, ಯೆರೂಸಲೇಂ, ಬಾಬಿಲೋನ್, ಎಫೆಸ ಎಂಬ ಅನ್ಯ ದೇಶೀಯ ಪದಗಳು ನಮ್ಮ ಕನ್ನಡದಲ್ಲಿ ರೂಪತಾಳಿವೆ. ಇಂತಹ ಸ್ಥಳನಾಮಗಳನ್ನು ಅಧ್ಯಯನದಲ್ಲಿ ಹೆಕ್ಕಿ ತೆಗೆಯಲಾಗಿದೆ. ಸ್ಥಳನಾಮಗಳನ್ನು ಪ್ರಮುಖವಾಗಿ ಸೀಮೆ, ದೇಶ, ಪಟ್ಟಣಗಳೆಂದು ವರ್ಗೀಕರಿಸಬಹುದು ಎಂದು ತಿಳಿಯಲಾಯಿತು.

೪.೩. ಆಚರಣೆಗಳು ಮತ್ತು ಭಾಷೆ

ಆದಿ ಮಾನವನು ಮೊದ ಮೊದಲು ಯಾವುದೇ ಹಬ್ಬ ಹರಿದಿನಗಳನ್ನು ಆಚರಿಸುತ್ತಿರಲಿಲ್ಲ ಎಂದು ನಾವು ಇತಿಹಾಸದಿಂದ ತಿಳಿಯುತ್ತೇವೆ. ಅವನು ಹಸಿ ಮಾಂಸ ಮತ್ತು (ಹೊಲದಲ್ಲಿ ಅಥವಾ ಭೂಮಿಯಲ್ಲಿ) ನೈಸರ್ಗಿಕವಾಗಿ ಸಿಗುವಂತಹ ಹಣ್ಣು ಹಂಪಲುಗಳನ್ನು ಸೇವಿಸಿ ಬದುಕುತ್ತಿದ್ದ ಮುಂದೆ ಬರುಬರುತ್ತಾ ಬೇಯಿಸಿ ತಿನ್ನುವುದನ್ನು, ಭೂಮಿಯನ್ನು ಹಸನು ಮಾಡಿ ಬೆಳೆ ಬೆಳೆಸುವುದನ್ನು ಕಲಿತುಕೊಂಡ, ಜೊತೆಗೆ ಭಯಭಕ್ತಿಯನ್ನು ಕಂಡುಕೊಂಡ, ಆದುದರಿಂದ ಅಂದಿನಿಂದಲೇ ಆಚಾರ ವಿಚಾರಗಳೆನ್ನುವುದು ರೂಪಿತವಾಯಿತು. ಅದರಲ್ಲಿ ಆಚಾರಗಳು ಆಯಾ ಧರ್ಮಕ್ಕನುಸಾರವಾಗಿ ಹುಟ್ಟಿಕೊಂಡವು. ಇಂತಹ ಭಾರತೀಯ ಬಹು ಧರ್ಮಗಳಲ್ಲಿ ಕ್ರೈಸ್ತ ಧರ್ಮವೂ ಒಂದಾಗಿದೆ. ಈ ಧರ್ಮವೂ ಹಲವು ಆಚರಣೆಗಳನ್ನು ಒಳಗೊಂಡಿದೆ. ಅವುಗಳನ್ನು ಧಾರ್ಮಿಕ ಆಚರಣೆಗಳೆಂದು ಈ ಕೆಳಕಂಡಂತೆ ವಿಭಾಗಿಸಿ ಆಚರಣೆಯಲ್ಲಿ ಕನ್ನಡ ಭಾಷಾ ಬಳಕೆಯನ್ನು ಹೀಗೆ ಉಲ್ಲೇಖಿಸಲಾಗಿದೆ.

ಕನ್ನಡ ಕ್ರೈಸ್ತ ಸಂಸ್ಕೃತಿಯ ಭಾಷೆಯನ್ನು ಸಾಂಸ್ಕೃತಿಕ ಆಚರಣೆಗಳಿಂದ ತಿಳಿಯಬಹುದು. ಕನ್ನಡ ಕ್ರೈಸ್ತರು ಅಥವಾ ಕನ್ನಡದಲ್ಲಿ ಕ್ರೈಸ್ತರು ಹುಟ್ಟಿನಿಂದ ಮರಣದವರೆಗೆ ಹಮ್ಮಿಕೊಳ್ಳುವ ಅನೇಕ ಸಂಪ್ರದಾಯಗಳಲ್ಲಿ ಕನ್ನಡ ಬಳಕೆಯಾಗಿದೆ. ಆ ಭಾಷೆಯನ್ನು ಈ ಅಧ್ಯಾಯದ ಮೂಲಕ ವಿವರಿಸಲಾಗಿದೆ. ಕ್ರೈಸ್ತರ ಸಂಸ್ಕೃತಿಯಲ್ಲಿ ಬರುವ ಆಚರಣೆಗಳು ಹೀಗಿವೆ.

೪.೩.೧. ಧಾರ್ಮಿಕ ಹಿನ್ನೆಲೆಯ ಆಚರಣೆಗಳು

ಕ್ರೈಸ್ತ ಆಚರಣೆಗಳಲ್ಲಿ ಪ್ರಮುಖವಾಗಿ ಧರ್ಮಕ್ಕೆ ಸಂಬಂಧಿಸಿದ ಆಚರಣೆಗಳು ಕಂಡುಬರುತ್ತವೆ. ಆ ಆಚರಣೆಗಳಲ್ಲಿ ಕ್ರಿಸ್‌ಮಸ್, ಗುಡ್‌ಫ್ರೈಡೆ, ಪುನರುತ್ಥಾನ ಹಾಗೂ ಹೊಸ ವರ್ಷವೆಂದು ಪ್ರಮುಖವಾದ ಧಾರ್ಮಿಕ ಆಚರಣೆಗಳಾಗಿವೆ. ಈ ಆಚರಣೆಗಳಲ್ಲಿ ಬಳಕೆಯಾಗುವ ಕನ್ನಡ ಭಾಷೆಯನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಅಂದರೆ ಧರ್ಮ ಮತ್ತು ಭಾಷೆ ಪರಸ್ಪರ ಹೇಗೆ ಅವಲಂಬನೆಗೆ ಒಳಗಾಗಿವೆ ಎಂಬುದನ್ನು ಈ ಅಧ್ಯಾಯದ ಮೂಲಕ ಗಮನಿಸಲಾಗಿದೆ. ಇಲ್ಲಿ ಕೇವಲ ದೇವರು ಧರ್ಮಕ್ಕೆ ಸಂಬಂಧಿಸಿದ ಹಬ್ಬಗಳನ್ನು ಅಥವಾ ಆಚರಣೆಗಳನ್ನು ಮಾತ್ರ ಗಮನಿಸಲಾಗಿದೆ. ಇಲ್ಲಿ ಯಾವುದೇ ವ್ಯಕ್ತಿಗತ ಆಚರಣೆಗಳು ಇರುವುದಿಲ್ಲ. ಆ ಆಚರಣೆಗಳನ್ನು ಈ ರೀತಿಯಾಗಿ ವರ್ಗೀಕರಿಸಿ ವಿವರಿಸಲಾಗಿದೆ.

ಕ್ರಿಸ್‌ಮಸ್

ಕನ್ನಡ ಭಾಷೆಯ ಬಳಕೆಯನ್ನು ಕ್ರೈಸ್ತರ ಪ್ರಮುಖ ಹಬ್ಬವಾದ ಕ್ರಿಸ್‌ಮಸ್ ಆಚರಣೆಯಲ್ಲಿ ಕ್ರೈಸ್ತರು ಮಾಡುವ ವಿಶೇಷ ಪ್ರಾರ್ಥನೆ, ವಾಕ್ಯೋಪದೇಶ ಮತ್ತು ಹಾಡುವ ಸಂಗೀತ ಕೀರ್ತನೆಗಳಿಂದ ತಿಳಿಯಬಹುದು. ಈ ಹಬ್ಬವನ್ನು ಡಿಸೆಂಬರ್ ೨೫ರಂದು ಆಚರಿಸುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಡಿಸೆಂಬರ್ ೨೪ರಂದೇ ಇಡೀ ರಾತ್ರಿಯಿಂದ ಬೆಳಗಿನ ಜಾವ ೪ಗಂಟೆಯವರೆಗೆ ಕ್ರಿಸ್ತನ ಜನನದ ವಾರ್ತೆಯನ್ನು ಕ್ರೈಸ್ತ ಸಮುದಾಯದಲ್ಲಿನ ಯವ್ವನಸ್ಥರು ಹಿರಿಯರು ಮತ್ತು ಸಭೆಯ ಪಾಲಕರು ಅಲ್ಲದೆ 'ಕ್ರಿಸ್‌ಮಸ್ ತಾತ' ಎಂದು ಇವರೆಲ್ಲರು ಹಾಡುಗಳ, ಪ್ರಾರ್ಥನೆಯ, ವಾಕ್ಯದ, ಘೋಷಣೆಗಳ ಮೂಲಕ ತಿಳಿಸುವರು. ಅಲ್ಲಿನ ಭಾಷೆಯ ಬಳಕೆ ಈಗಿರುತ್ತದೆ.

ಪ್ರಾರ್ಥನೆ: ನಿನ್ನ ಏಕಕುಮಾರನಾದ ಯೇಸುಕ್ರಿಸ್ತನ ಜಯಂತಿಯನ್ನು ವರ್ಷಂಪ್ರತಿ ಸ್ಮರಿಸಿಕೊಳ್ಳುವ ಭಾಗ್ಯವನ್ನು ನಮಗೆ ಅನುಗ್ರಹಿಸಿ ದೇವರೇ, ಆತನು ನಮ್ಮ ನ್ಯಾಯಾಧೀಶನಾಗಿ ಬರುವಾಗಲೂ ಸಹ ನಾವು ಆತನನ್ನು ದೃಢವಿಶ್ವಾಸದಿಂದ ಕಾಣಲಾಗುವ ಹಾಗೆ ನಮಗೆ ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತೇವೆ. ಆಮೆನ್. (ಉಲ್ಲೇಖ ಹುದುವಾದ ದೇವರಾದನೆ ಪು. ೪

ವಾಕ್ಯ: ಕ್ರಿಸ್ತನ ಜನನ ಕುರಿತು "ಎಲೈ ಯೋಸೇಫನೇ ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳದೆ ಅಂಜಬೇಡ ಆಕೆಯ ಗರ್ಭವು ಪವಿತ್ರಾತ್ಮಭರಿತವಾದದ್ದು ಆಕೆ ಒಬ್ಬ ಮಗನನ್ನು ಹಡೆಯುವಳು. ಆತನಿಗೆ ಯೇಸು ಎಂದು ಹೆಸರಿಡಬೇಕು" ಕರ್ತನ ದೂತನು (ದೇವದೂತ) ಹೇಳುವನು. (ಮತ್ತಾಯ ೧:೧೮–೨೧) (೧ನೇ ಅಧ್ಯಾಯ ೧೮–೨೧ ವಚನ)

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗಬಾರದೆಂದು ಆತನನ್ನು ಕೊಟ್ಟನು"

"ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪು ಮಾಡುವುದಕ್ಕಾಗಿ ಕಳುಹಿಸಲಿಲ್ಲ" (ಯೋಹಾನ ೩:೧೭) (೩ನೇ ಅಧ್ಯಾಯ ೧೭ನೇ ವಚನ)

ಮಂಗಳ ಶ್ರೀ ರಾತ್ರಿಯಲಿ
ಬೇಲ್ಲೆಹೇಮ್ ಛತ್ರದಿ
ವರಕನ್ಯೆಯಿಂ ಜನಿಸಿದ
ದೇವಪುತ್ರನಂ ವಂದಿಸುವ
ವಂದನೆ ರಕ್ಷಕನೇ!

ಮಂಗಳ ಶ್ರೀ ರಾತ್ರಿಯಲಿ
ದೂತರು ಹೊಲದಿ
ಹಿಂಡು ಕಾಯುವ ಗೊಲ್ಲರಿಗೆ
ತಂದ ವಾರ್ತೆಯು ಶ್ರೇಷ್ಠವದೆ
ಬಂದನು ರಕ್ಷಕನೇ!

ಒಂದು ಊರಿನಲ್ಲಿ ಒಂದು ಬೆಳಕು
ಅಂಧಕಾರದಲ್ಲಿ ತೋರಲಾಯಿತು
ಬೇತ್ಲೆಹೇಮಿನಲ್ಲಿ ನೀತಿಸೂರ್ಯನು
ಪಾಪಕತ್ತಲಲ್ಲಿ ಕಾಂತಿಕೊಟ್ಟನು
(ಕನ್ನಡ ಸಂಗೀತ ಮತ್ತು ಕೀರ್ತನೆಗಳು, ಪು. ೨೭)

ಹೀಗೆ ಕ್ರಿಸ್ತನ ಜಯಂತಿಯನ್ನು ಹಾಡು, ವಾಕ್ಯ, ಪ್ರಾರ್ಥನೆಗಳಿಂದ ಆಚರಿಸುವರು. ಮತ್ತು ಕ್ರಿಸ್ತನ ಜನನದ ಪ್ರಯುಕ್ತ ಇಡೀ ಡಿಸೆಂಬರ ತಿಂಗಳಾದಿಯಿಂದಲೂ ಅನೇಕ ಕಾರ್ಯಕ್ರಮಗಳನ್ನು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಆನಂದಿಸುವರು. ಈ ಕೂಟಗಳಲ್ಲಿ ಕನ್ನಡ ಭಾಷೆಯ ಬಳಕೆ ವಿಶೇಷವಾಗಿರುತ್ತದೆ. ಅದನ್ನು ರೆಕಾರ್ಡ್ ಮಾಡುವ ಮೂಲಕ ತಿಳಿಯಬಹುದು. ಕ್ರಿಸ್‌ಮಸ್‌ನ ಸಂಕೇತಗಳಾಗಿ ಇವುಗಳನ್ನು ಹೀಗೆ ಕರೆಯುವರು. ಕ್ರಿಸ್‌ಮಸ್ ಟ್ರೀ, ಕ್ರಿಸ್‌ಮಸ್ ತಾತಾ, ಕ್ರಾಸ್ (ಶಿಲುಬೆ), ಸ್ಟಾರ್ಸ್ (ನಕ್ಷತ್ರ) ಆಗಿವೆ.

ಬೂದಿ ಬುದುವಾರ

ಯೇಸು ದೀಕ್ಷೆಯನ್ನು ಪಡೆದುಕೊಂಡ ಮೇಲೆ "ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ" ಎಂದು ಆಕಾಶವಾಣಿ ಆಯಿತು. (ಮತ್ತಾಯ ೩:೧೭)

ಕ್ರಿಸ್ತನ ಶ್ರಮಮರಣ ದಿನಗಳ ನೆನಪಿನಾರ್ಥವಾಗಿ ಶುಭ ಶುಕ್ರವಾರದ ಹಬ್ಬದ ಹಿಂದಿನ ೪೦ ದಿನಗಳಿಂದ ಮಾಡುವ (ಉಪವಾಸ) ದಿನಗಳನ್ನೇ ಕಷ್ಟದ, ಉಪವಾಸದ, ಶ್ರಮಮರಣ ದಿನಗಳೆಂದು

ಆರಂಭದ ಮೊದಲ ದಿನವನ್ನು 'ಬೂದಿ ಬುಧವಾರ' ಎಂದು ಕರೆಯುವರು. ಏಕೆಂದರೆ ಕ್ರಿಸ್ತನ ವಿಷಯದಲ್ಲಿ ತಮ್ಮ ಪಾಪನಿವೇದನೆ ಮಾಡಿಕೊಳ್ಳುವರು ಮೈಯನ್ನು ಬೂದಿಯಲ್ಲಿ ಹೊರಳಾಡಿಸುವುದಾಗಿದೆ. ಇದು ಅಂದಿನ ರೋಮ ಸಂಸ್ಕೃತಿಯಲ್ಲಿತ್ತು. ಈಗ ಕೇವಲ ವಾಕ್ಯಗಳನ್ನು ಧ್ಯಾನಿಸುವುದರಿಂದ ಆಚರಿಸುವರು ಆ ವಾಕ್ಯಗಳು ಹೀಗಿವೆ.

೧. ಯಥಾರ್ಥಚಿತ್ತವೇ ನಿನಗೆ ಸಂತೋಷ (ಕೀರ್ತನೆ ೫೧:೬) (೫೧ನೇ ಅಧ್ಯಾಯ ೬ನೇ ವಚನ)

೨. ನಿಮ್ಮ ಹೃದಯಗಳನ್ನು ಹರಿದುಕೊಂಡು ಪ್ರಾರ್ಥಿಸಿರಿ (ಯೋವೇಲ ೨:೧೨) (೨ನೇ ಅಧ್ಯಾಯ ೧೨ನೇ ವಚನ)

ಈ ಬೂದಿ ಬುಧವಾರದಿಂದ ಸಮುದಾಯದಲ್ಲಿ ಯಾವುದೇ ರೀತಿಯ ಸಂತೋಷದ ಕೂಟಗಳಿರುವುದಿಲ್ಲ. ಅಲ್ಲದೆ ತಾಳ ಮೇಳಗಳನ್ನು ಆರಾಧನೆಯಲ್ಲಿ ಬಳಸುವುದು ಕಡಿಮೆಯಾಗುತ್ತದೆ. ಉಪವಾಸದ ದಿನಗಳ ಎಂದು ಎಲ್ಲರೂ ಗಂಭೀರವಾಗಿರುವರು. ಶುಭ ಶುಕ್ರವಾರ ಹತ್ತಿರವಾಗುತ್ತಿದ್ದಂತೆ ಸಭೆಯ (ಊರಿನ) ೪ ಮತ್ತು ೫ ಕಡೆಗಳಲ್ಲಿ ಕ್ರಿಸ್ತನ ಮರಣದ ವಾರ್ತೆಯನ್ನು ಹೇಳುವರು.

ಉಪವಾಸ ಪ್ರಾರ್ಥನೆಯ ಬಗ್ಗೆ ಬೈಬಲ್‌ನಲ್ಲಿ ಈ ರೀತಿ ಹೇಳಲಾಗಿದೆ. "ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು ಅಂತರಂಗದಲ್ಲಿ ನಡೆಯುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲ ಕೊಡುವನು". (ಮತ್ತಾಯ ೬:೬) (೬ನೇ ಅಧ್ಯಾಯ ೬ನೇ ವಚನ)

ಅಂದರೆ ಹಿಂದು ಮುಸ್ಲಿಂರಂತೆ ಕ್ರೈಸ್ತರು ಉಪವಾಸದ ಪ್ರಾರ್ಥನೆ ಮಾಡುವರು. ಮತ್ತು ಹಿಂದುಗಳಂತೆ ದಾಸೋಹ, ಪ್ರಸಾದದಂತೆ ಕ್ರೈಸ್ತರು ಅನ್ನವನ್ನು (ಊಟವನ್ನು) ನೀಡುವರು. ಉಪವಾಸವಿದ್ದವರಿಗೆ ದ್ರಾಕ್ಷಾರಸ, ಇನ್ನಿತರ ಫಲಹಾರಗಳನ್ನು ನೀಡುವರು. ಕೊಡುವಲ್ಲಿ ಸ್ವೀಕರಿಸಿಸುವ ಸಂದರ್ಭದಲ್ಲಿ ಹೇಳಲಾಗುವ ಭಾಷಾ ಬಳಕೆ ವಿಶೇಷವಾಗಿರುತ್ತದೆ. ಅಂದು ಪ್ರಾರ್ಥನೆ ಇರುತ್ತದೆ.

ಖರ್ಜೂರ ಗರಿಗಳ ಭಾನುವಾರ

ಯೇಸು ಅಂದು ಯೆರೂಸಲೇಮ ಪಟ್ಟಣವನ್ನು ಪ್ರವೇಶಿಸುವಾಗ ಅರಸನಂತೆ ಕತ್ತೆಯ ಮೇಲೆ ಕುಳಿತುಕೊಂಡು ಹೋಗುವ ಪ್ರಸಂಗವನ್ನು ನೆನಸಿಕೊಂಡು ಇಂದು ಕ್ರೈಸ್ತರು ಆಚರಣೆಯಲ್ಲಿ ತರುವರು. ಅದನ್ನು ಕ್ರಿಸ್ತನ ಪುನರುತ್ಥಾನ (ಈಸ್ಟರ) ಹಬ್ಬದ ಹಿಂದಿನ ಒಂದು ವಾರದ ಮುಂಚೆ ಈ ಆಚರಣೆಯಲ್ಲಿ ಬಳಸುವ ಕನ್ನಡ ಪದಗಳು ವಾಕ್ಯಗಳು ಹೀಗಿವೆ.

ವಾಕ್ಯ – ಚಿಯೋನ್ ನಗರಿಗೆ,

"ನೋಡು ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ

ಆತನು ಶಾಂತ ಗುಣವುಳ್ಳವನಾಗಿಯೂ ಕತ್ತೆಯನ್ನು

ಪ್ರಾಯದ ಕತ್ತೆಯ ಮರಿಯನ್ನು ಹತ್ತಿದವನಾಗಿಯೂ

ಬರುವನೆಂದು ಹೇಳಿರಿ ಎಂಬುದು (ಮತ್ತಾಯ ೨೧:೫) (೨೧ನೇ ಅಧ್ಯಾಯ ೫ನೇ ವಚನ)

ಕ್ರಿಸ್ತನನ್ನು ಮೆರವಣಿಗೆ ಮಾಡುವ ಸಂದರ್ಭದಲ್ಲಿ ಕೂಗುವ ಘೋಷಣೆಗಳು

ಜಯ ಕರ್ತನ ಹೆಸರಿನಲ್ಲಿ ಬರುವನಿಗೆ ಜಯ ಆಶೀರ್ವಾದ

ನಮ್ಮ ಪಿತೃವಾದ ದಾವೀಧನ ರಾಜ್ಯವು ಬರುತ್ತದೆ

ಮೇಲಣ ಲೋಕಗಳಲ್ಲಿ ಜಯ (ಮಾರ್ಕನ ಸುವಾರ್ತೆ)

ದಾವೀದ ಕುಮಾರನಿಗೆ ಜಯ (ಮತ್ತಾಯ)

ಪರಲೋಕದಲ್ಲಿ ಮಂಗಳ

ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಆಶೀರ್ವಾದ (ಲೂಕ)

ಇಸ್ರಾಯೇಲ್ ಅರಸನಿಗೆ ಜಯ (ಯೋಹಾನ)

ವಿಜಯರಾಜ ನೀನೇ ಯೇಸುವೆ

ಸುಜನಾಗ್ರಜ ನೀನೇ

ಅಜಿತ ನಿನ್ನದ್ಭುತವ ಸುಜನರು ಧ್ಯಾನಿಸಿ

ಭಜನೆಯ ಮಾಡುತ ವಿಜಯದಿ ನಮಿಪರು

ನನ್ನಾತ್ಮದಾತನು ನೀನೇ ಯೇಸು ನೀನೇ

ನನ್ನನ್ನು ಹುಡುಕಿದ ಮಿತ್ರನು ನೀನೇ

ನಿನ್ನನ್ನು ನಂಬಿದ ದಾಸನು ನಾನೇ – ಭೃತ್ಯನಾನೇ

ಇಂದು ದಾರಿಯ ಉದ್ದಕ್ಕು ಕತ್ತೆಯ ಮೇಲೆ ಯೇಸುವಿನ ಫೋಟೋವನ್ನು ಇಟ್ಟುಕೊಂಡು ಊರಿನಲ್ಲಿ ಮೆರವಣಿಗೆ ಮಾಡುವರು. ವಿಶ್ವಾಸಿಗಳು ಆ ಯೇಸುವಿನ ಭಾವಚಿತ್ರವನ್ನು ಹೊತ್ತ ಕತ್ತೆ ಮರಿಗೆ ಭಕ್ತಿಯಿಂದ ನೀರನ್ನು (ತುಂಬಿದ ಕೊಡ) ಹಾಕುವುದು ಸಂಪ್ರದಾಯವಾಗಿದೆ. ಇದರೊಂದಿಗೆ ಸಭೆಯ ಉಗ್ರಾಣಿಕರು ಪಾಲಕರು ಭಜನೆ ಮಂಡಳಿಯವರು ಸೇರಿ ಆರಾಧನೆ ಅಂದರೆ ಹಾಡು, ಘೋಷಣೆ, ವಾಕ್ಯಗಳನ್ನು ವಾಚನ ಮಾಡುವರು. ದಾರಿಯುದ್ಧಕ್ಕೂ ಹಾಡುವ ರಾಗಗಳು ಸ್ತುತಿಸ್ತೋತ್ರಗಳಾಗಿವೆ. ಅವುಗಳಲ್ಲಿ ಕೆಲವು ಹೀಗಿವೆ.

ಸುಂದರ ರಕ್ಷಕನೇ ನಿನ್ನ ವಂದಿತ ನಾಮವನೇ
ಕುಂದದೆ ಕೀರ್ತಿಸಿ ಎಂದಿಗೂ ಹಾಡುತ
ಬಂದು ಭಜಿಪೆವಯ್ಯಾ

ನರರೊಳ ಲೈಪತಿಯೇ ನೀ ಪರಿಮಳವಾಸನೆಯೇ
ಧರಣಿಯ ಭಕ್ತರ ಸ್ಮರಣೆಗೆ ಯೋಗ್ಯನು
ನಿರುತವು ಸದ್ಗುರುವೇ

ಮೂಡಣ ಬೆಳಕಿದೋ ಮೂಡಿಹುದು
ನಾಡುನಾಡೊಳು ಜ್ಯೋತಿಯ ಬೀರುವ
ಕಾಡುವ ಪಾಪದ ಕಾವಳ ನೀಗಲು
ನಾದಗೋದಲಿಯೊಳು ಯೇಸು ಪುಟ್ಟಲು

ಹೀಗೆ **'ಖರ್ಜೂರಗರಿಗಳ ಬಾನುವಾರ'** ಎಂದು ಆಚರಿಸುವರು. ಗರಿಗಳನ್ನು ಸಹಿತ ಮಂಡಕ್ಕಿಯೊಂದಿಗೆ ಮೇಲಕ್ಕೆ ಎತ್ತಿ ಸ್ವಾಗತಿಸುವ ನಿಟ್ಟಿನಲ್ಲಿ ಬಳಸುವರು. ಇದೊಂದು ಹಬ್ಬದ ವಾತಾವರಣವನ್ನು ಸೃಷ್ಟಿಸುತ್ತದೆ. ಈ ಹಬ್ಬದ ತರುವಾಯ ಬರುವ ಆಚರಣೆಯೇ ಗುಡ್‌ಫ್ರೈಡೇ (ಶುಭ ಶುಕ್ರವಾರ) ಆಗಿದೆ.

ಕಡೆ ರಾತ್ರಿ ಭೋಜನ

ಗುಡ್‌ಫ್ರೈಡೇ ಹಬ್ಬದ ದಿನದ ಹಿಂದಿನ ರಾತ್ರಿಯಲ್ಲಿ 'ಕಡೆ ರಾತ್ರಿ ಭೋಜನ' ಎಂದು ಸಭೆಯ ಪಾದ್ರಿಯವರು ನೀಡುವ ದ್ರಾಕ್ಷಾರಸ ಮತ್ತು ರೊಟ್ಟಿ (ಬ್ರೆಡ್)ಯನ್ನು ನೀಡುವರು. ಅಂದು ಕ್ರಿಸ್ತನು ಗೆತ್ಸೆಮನೆ ತೋಟದಲ್ಲಿ ಈ ಕಾರ್ಯಕ್ರಮ ಮಾಡಿದ್ದನು. ಅದರ ಸ್ಮರಣೆಯೆ ಈ ಕರ್ತನ ಇಲ್ಲಿ ಬಳಸುವ ಭಾಷೆ ಈಗಿದೆ. ಕರ್ತನ ರಾತ್ರಿ ಭೋಜನದಲ್ಲಿ ಬೋಧಕನು (ಪಾದ್ರಿ) ರೊಟ್ಟಿಯನ್ನು ತೆಗೆದುಕೊಂಡು ಹೀಗೆ ಅನ್ನವನ್ನು "ತೆಗೆದುಕೊಂಡು ತಿನ್ನಿರಿ ಇದು ನಿಮಗೋಸ್ಕರ ವಾಗಿರುವ ನನ್ನ ದೇಹ ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು" ಅದನ್ನು ತಿಂದ ಮೇಲೆ ಪುನಃ ಪಾಲಕರು ಕೈಯಲ್ಲಿ ಪಾದ್ರಿಯನ್ನು ತಕ್ಕೊಂಡೆ.

"ದೇವರಿಗೆ ಸೊಲ್ತು ಮಾಡಿ ಇದರಲ್ಲಿರುವ ದ್ರಾಕ್ಷಾರಸವನ್ನು ಎಲ್ಲರೂ ಕುಡಿಯಿರಿ. ಯಾಕೆಂದರೆ ಇದು ನನ್ನ ನೂತನ ಒಡಬಂಡಿಕೆಯ ರಕ್ತ ಇದು ನಿಮ್ಮ ಪಾಪಗಳ ಕ್ಷಮೆಗಾಗಿ ನಿಮಗೋಸ್ಕರ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ. ನೀವು ಇದನ್ನು ಪಾನ ಮಾಡುವಾಗೆಲ್ಲ ನನ್ನ ಜ್ಞಾಪಕಾರ್ಥವಾಗಿ ಪಾನ ಮಾಡಿರಿ ಅಂದನು" ಇದನ್ನು ಪಾಪದ ನಿವೇದನೆ, ಪಾಪದ ಹರಕೆ, ಪರಮ ಪ್ರಸಾದ ಎಂತಲೂ ಕರೆಯುವರು.

ಶುಭ ಶುಕ್ರವಾರ

ಮರುದಿನ ಬೆಳಿಗ್ಗೆಯೇ **ಶುಭ ಶುಕ್ರವಾರದ** ಹಬ್ಬವನ್ನು ಆಚರಿಸುವರು. ಅಂದರೆ ಸಾಯಂಕಾಲ ೩ ರಿಂದ ಕೆಲವರು ಬೆಳಿಗ್ಗೆಯಿಂದ ತಯಾರಿಯಲ್ಲಿರುವರು. ೩ ಗಂಟೆಗೆ ದೇವರು ಪ್ರಾಣವನ್ನು ಬಿಡುವನು ಎಂದು ಅದರೊಳಗೆ ಹಾಡು, ವಾಕ್ಯಗಳು, ಉಪದೇಶಗಳು ಸ್ತೋತ್ರಗಳು ಎಲ್ಲವನ್ನು ಮಾಡಿ ಮುಗಿಸುವರು. ಸಾಮಾನ್ಯವಾಗಿ ಈ ಹಬ್ಬವನ್ನು ಏಪ್ರಿಲ್ ತಿಂಗಳಿನಲ್ಲಿ ಮಾಡಲಾಗುವುದು. ಈ ಹಬ್ಬದ ಆರಾಧನೆಯಲ್ಲಿ ಪ್ರಮುಖವಾಗಿ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಅಂದು ಆಡಿದ ಮಾತುಗಳನ್ನು ಪುನಃ ಉಚ್ಚರಿಸುವರು. ಒಬ್ಬೊಬ್ಬರು ಒಂದೊಂದು ವಾಕ್ಯವನ್ನು ಹೇಳುವರು. ಅವುಗಳು ಹೀಗಿವೆ.

೧. ತಂದೆಯೇ ಅವರನ್ನು ಕ್ಷಮಿಸು (ಲೂಕ ೨೩:೩೩) (೨೩ನೇ ಅಧ್ಯಾಯ ೩೩ನೇ ವಚನ)

೨. ಈ ಹೊತ್ತೆ ನೀನು ನನ್ನ ಸಂಗಡ ಪರದೈಸಿನಲ್ಲಿರುವಿ (ಲೂಕ ೨೩:೪೩)

೩. ಅಮ್ಮಾ ಇಗೋ ನಿನ್ನ ಮಗನು ಇಗೋ ನಿನ್ನ ತಾಯಿ (ಯೋಹಾನ ೧೯:೨೧)

೪. ನನ್ನ ದೇವರೇ ನನ್ನ ದೇವರೇ ಯಾಕೆ ನನ್ನ ಕೈಬಿಟ್ಟಿದ್ದಿ (ಮತ್ತಾಯ ೨೭:೪೬)

೬. ತೀರಿತು (ಯೋಹಾನ ೧೯:೩೦)

೭. ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ (ಲೂಕ ೨೩:೪೬)

ಪುನರುತ್ಥಾನ

ಶುಭಶುಕ್ರವಾರ ಆದ ಮೇಲೆ ೩ನೇ ದಿನವಾದ ರವಿವಾರದಂದು ಪುನರುತ್ಥಾನ (ಈಸ್ಟರ) ಹಬ್ಬ ಎಂದು ಸಂತೋಷದಿಂದ ಮಾಡುವರು. ಕ್ರಿಸ್ತನು ಪುನಃ ಬದುಕಿ ಬಂದನೆಂದು ಆಚರಿಸುವ ಹಬ್ಬವಾಗಿದೆ. ಈ ಶುಭ ವಾರ್ತೆಯನ್ನು ಎಲ್ಲರಿಗೂ ತಿಳಿಸುವ ಕುತೂಹಲವನ್ನು ಕ್ರೈಸ್ತ ವಿಶ್ವಾಸಿಗಳು ಆ ದಿನದ ಬೆಳಗಿನ ಜಾವ ೪ಕ್ಕೆ ಯೇಸುವಿನ ಊರಲ್ಲಿ ಸಮಾಧಿಯತ್ತಿರ ಹೋಗಿ ಸ್ತುತಿ ಸ್ತೋತ್ರ ಮಾಡಿ ಅತ್ಯಂತ ಸಂತೋಷದಿಂದ ಹಾಡುಗಳನ್ನು, ವಾಕ್ಯಗಳನ್ನು ಮತ್ತು ಘೋಷಣೆಗಳನ್ನು ಅಲ್ಲದೆ ವಾದ್ಯಗಳಿಂದ ಸಮಾಧಿಯಿಂದ ಪುನಃ ದೇವಾಲಯದವರೆಗೆ ದಾರಿಯುದ್ದಕ್ಕೂ ಪಟಿಸುತ್ತ ಬರುವ ಆ ವಾಚನಗಳು ಈ ಕೆಳಕಂಡಂತಿವೆ.

ಶಿಲುಬೆಯ ಹೊತ್ತವ ನೀನೇ – ಯೇಸು ನೀನೇ
ಲಲಿತನಿವಾಸವ ಬಿಟ್ಟವ ನೀನೇ
ಇಳೆಯೊಳೆಮ್ಮನು ಪಡಕೊಂಡವ ನೀನೇ
ಸಾವಿನ ಕೊಂಡಿಯ ಮುರಿದವ ನೀನೇ
ದುಷ್ಟರ ಪೊರೆಯಲು ಸತ್ತವ ನೀನೆ

ಯೇಸುಕರ್ತನು ಎದ್ದ
ನೇಸುಕ್ರಿಸ್ತನು
ಸಾಸಿರಾರು ಜನರ ಪಾಪರಾಸಿ ಹರಿಸಿದ
ಗಾಸಿಯೆಲ್ಲವನ್ನು ಬಿಡಿಸಿ ಲೇಸುಮಾಡಿದ
ಧರಣಿಗರ್ಭದಲ್ಲಿ ಇಳಿದು ಪರಮಪುರುಷನು
ಮರಣಕೊಂಡಿಯನ್ನು ಪೂರಾ ಮುರಿದುಬಿಟ್ಟನು
ಗೋರಿಯೊಳಗಿದ್ದು ಕಳೆದ ಮೂರು ದಿನವನು
ಚಾರುಮಹಿಮೆಯಿಂದ ಕೂಡುತೇರಿಬಂದನು

ಜೀವದಿಂದ ಯೇಸು ಎದ್ದು ಸಾವ ಕೊಂದನು
ನಿತ್ಯ ಜೀವ ತಂದನು
ಮೂರು ದಿನದಿ ತನ್ನ ಬಲವ ತೋರ ಮಾಡಿದ
ಅಧಿಕಾರ ಸಾರಿದ

ಯೇಸು ಎದ್ದಿದ್ದಾನೆ! ಹೌದು ಎದ್ದಿದ್ದಾನೆ! ಕ್ರಿಸ್ತನೆದ್ದಿದ್ದಾನೆ ಹೌದು ಎದ್ದಿದ್ದಾನೆ! ನಿಜರೇತಿನ ಯೇಸು ಎದ್ದಿದ್ದಾನೆ! ಯೇಸು ಕ್ರಿಸ್ತನಿಗೆ ಜಯ! ಎಂದು ಪುನರುತ್ಥಾನದ ದಿನದಂದು ಎಲ್ಲರೂ ಗಟ್ಟಿಯಾಗಿ ಘೋಷಣೆ ಕೂಗುವರು. ಅಲ್ಲದೆ ಈ ಸಂದರ್ಭವನ್ನು ಕುರಿತು ಕೆಲವು ವಾಕ್ಯಗಳನ್ನು ಸಹಿತ ಆರಾಧನೆಯಲ್ಲಿ ಹೇಳುವರು. ಅವುಗಳಿಂದ ಕನ್ನಡ ಭಾಷೆಯ ಬಳಕೆ ತಿಳಿಯಬಹುದು. ಆ ವಾಕ್ಯ ಹೀಗಿದೆ.

ಆಗ ದೂತನು "ನೀವು ಹೆದರಬೇಡಿರಿ, ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು, ಆತನು ಇಲ್ಲಿ ಇಲ್ಲ ತಾನು ಹೇಳಿದಂತೆ ಎದ್ದಿದ್ದಾನೆ. ಬನ್ನಿ ಆತನು ಮಲಗಿದ್ದ ಸ್ಥಳವನ್ನು ನೋಡಿರಿ ಮತ್ತು ಬೇಗ ಹೋಗಿ ಆತನ ಶಿಷ್ಯರಿಗೆ ಸತ್ತವನು ಬದುಕಿದ್ದಾನೆ" ಎಂದು ಹೇಳಿರಿ ಅಂದನು.

ಪುನರುತ್ಥಾನದ ಹಬ್ಬವಾಗಲಿ ಕ್ರಿಸ್‌ಮಸ್ ಹಬ್ಬವಾಗಲಿ ಅಂದಿನ ರಾತ್ರಿಯಲ್ಲಿಯೇ ಚಿಕ್ಕ ಮಕ್ಕಳಿಂದ ಸಾಂಸ್ಕೃತಿಕ ಕೂಟಗಳನ್ನು ಮಾಡಿಸುವರು ಮಕ್ಕಳಿಂದ ಹಾಡುಗಳು, ವಾಕ್ಯಗಳನ್ನು ಹೇಳಿಸುವರು ಕ್ರಿಸ್ತನ ಜನನ ಮರಣದ ಕುರಿತು ಕಿರು ನಾಟಕಗಳನ್ನು ಮಾಡಿಸುವರು ಇಲ್ಲಿಯೇ ಭಾಷೆ (ಕನ್ನಡ)ಯ ಬಳಕೆ ವಿಶೇಷವಾಗಿರುತ್ತದೆ.

ಉದಾ. ವಾಕ್ಯ

"ಎಲೈ ಕಷ್ಟಪಡುವವರೇ ಹೊರೆ ಹೊತ್ತವರೇ
ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ

ನಾನು ನಿಮಗೆ ವಿಶ್ರಾಂತಿ ಕೊಡುವೆನು"

"ಬೇಡಿಕೊಳ್ಳಿರಿ ದೊರೆಯುವುದು ಹುಡುಕಿರಿ ಸಿಕ್ಕುವುದು

ತಟ್ಟಿರಿ ತೆರೆಯುವುದು"

ಉದಾ.

ಎಷ್ಟೋ ಸಂತೋಷವು
ಈ ಸಬ್ಬತ್ ದಿನವು
ಮೇಲಣ ಲೋಕ ಗುರುವೇ
ಸದ್ಭಕ್ತ ಸಂಘವು
ಈ ಹೊತ್ತು ಕೂಡಿದ್ದು
ಅನ್ಯೋನ್ಯ ಗುರುತಾಗುತ್ತೆ

ಹಬ್ಬ ಜಾತ್ರೆ

ಕ್ರೈಸ್ತರು, ಜಾತ್ರೆಗಳು ಉತ್ಸವಗಳು ಮತ್ತು ಹಬ್ಬಗಳೆಂದು ಆಚರಿಸುವರು. ಉದಾ. ಮಾನ್ವಿಯಲ್ಲಿ ಮೇರಿ ಹಬ್ಬ, ದಾರೂರು ಕ್ರೈಸ್ತರ ಜಾತ್ರೆ, ಗಿಲ್ಲೆಸೂಗೂರುನಲ್ಲಿ ಶಿಲುಬೆಯ ಜಾತ್ರೆ ಮೇರಿಯಮ್ಮರ (ಕೆಥೊಲಿಕ್) ಸಭಾ ವಾರ್ಷಿಕೋತ್ಸವ, ಬಹಿರಂಗ ಸಮ್ಮೇಳನಗಳು, ಕಲ್ಲೂರಿನ ಹುಸೇನ ನಗರ ಕ್ಯಾಂಪಿನಲ್ಲಾಗುವ ಉತ್ಸವಕೂಟಗಳು ಹರಿಹರದಲ್ಲಾಗುವ ಮೇರಿಹಬ್ಬ ಹೀಗೆ ಅನೇಕ ಕಡೆಗಳಲ್ಲಿ ಕ್ರೈಸ್ತರು ಹಿಂದುಗಳಂತೆಯೇ ಜಾತ್ರಾ ಮಹೋತ್ಸವಗಳನ್ನು ಮಾಡುವರು. ಈ ಜಾತ್ರಾ ಉತ್ಸವಗಳಲ್ಲಿಯೂ ಕನ್ನಡ ಭಾಷೆಯನ್ನು ಹಾಡು, ವಾಕ್ಯ, ಪ್ರಾರ್ಥನೆಗಳಲ್ಲಿ ಬಳಸುವರು. ಅಲ್ಲದೆ ಈ ಎಲ್ಲಾ ಉತ್ಸವಗಳ ದಿನಾಂಕವನ್ನು ಕರಪತ್ರಗಳ ಮೂಲಕ ಪ್ರಚಾರ ಮಾಡುವರು. ಕರಪತ್ರಗಳಲ್ಲಿ ಕೇವಲ ದಿನಾಂಕ ಮಾತ್ರವಿರುವುದಿಲ್ಲ. ಕ್ರಿಸ್ತನ ವಾಕ್ಯಗಳು ನುಡಿಗಳು ಮನಸ್ಸನ್ನು ಕೆರಳಿಸುವಂತಿರುತ್ತವೆ ಅವುಗಳನ್ನು ಗಮನಿಸಲಾಗಿದೆ. ಬೋಧಕ ಮಾತುಗಳು ಕರಪತ್ರಗಳಿಂದಲೇ ಪ್ರಚಾರ ಆಗುತ್ತವೆ.

ಹೃದಯವೆಂಬ ಬಾಗಿಲಬಳಿಯಲ್ಲಿ ಯೇಸು ಸ್ವಾಮಿಯು

ನಿಂತು ಸದಯನಾಗಿ ತಟ್ಟುತ್ತಿರುವ ಸಕಲ ವಿಧವಾಗಿ

ಯೇಸು ಕ್ರಿಸ್ತನ ದಿವ್ಯ ಪ್ರೀತಿಯ ಧ್ಯಾನ ಮಾಡುವ ಮಿತ್ರರೆ

ದಾಸ ರೂಪವ ಧರಿಸಿ ಪ್ರಣವ ಯಜ್ಞ ಮಾಡಿದ ಮಿತ್ರರೇ

ಬಹಿರಂಗ ಸಭೆಗಳಲ್ಲಿ ದ್ವಿ ಭಾಷಿಕತೆಯನ್ನು ಬಳಸುತ್ತಾರೆ. ಏಕೆಂದರೆ ಹೊರ ರಾಜ್ಯದ, ಹೊರ ದೇಶದಿಂದ ದೈವ ಸಂದೇಶಕರು ಬಂದು ವಾಕ್ಯೋಪದೇಶವನ್ನು ತಮ್ಮ ಮೂಲ ಭಾಷೆ ಉದಾ. ಇಂಗ್ಲೀಷ್, ತೆಲುಗು, ತಮಿಳು ಭಾಷೆಗಳಲ್ಲಿ ನೀಡುವುದರಿಂದ ಅದನ್ನು ಅನುವಾದ ಮಾಡಿ ಕನ್ನಡ

ಭಾಷೆಯಲ್ಲಿ ಹೇಳುತ್ತಾರೆ. ಈ ರೀತಿಯಾಗಿ ಕನ್ನಡ ಕ್ರೈಸ್ತರು ಕನ್ನಡವನ್ನು ಬಳಸುವುದರ ಜೊತೆಗೆ ಅಲ್ಲಲ್ಲಿ ಹಿಂದಿ, ಇಂಗ್ಲಿಷನ್ನು ಕೂಡ ಬಳಸುವರು. ದ್ವಿಭಾಷಿಕ ಪರಿಸರವನ್ನು ರೂಪಿಸುವರು. ಕ್ರೈಸ್ತರು ಕ್ರಿಸ್ತನನ್ನು ಸ್ತುತಿಸುವಲ್ಲಿ ಒಂದೇ ಹಾಡನ್ನು ತೆಲುಗು, ಹಿಂದಿ ಮತ್ತು ಇಂಗ್ಲೀಷನಲ್ಲಿ ಹಾಡುವರು. ಉದಾ.

ತೆಲುಗಿನಲ್ಲಿ – ದಾವೀದು ತನಯ ಹೊಸಾನ್ನ

ಹಿಂದಿಯಲ್ಲಿ ಮೈನೆ ಆಸಮಾನ ಸೆ ಬಾರ ಜಾಯಿಂಗೆ

ಇಂಗ್ಲೀಷನಲ್ಲಿ – Im so glad Jeses set me free

singing Halleluya Jesus set me free

ರೋಮ ಸಂಸ್ಕೃತಿ ಮತ್ತು ಭಾರತೀಯ ಕನ್ನಡ ಕ್ರೈಸ್ತರ ಸಂಸ್ಕೃತಿಯನ್ನು ಹೀಗೆ ಗುರುತಿಸಲಾಗಿದೆ. ಅಂದು ರೋಮ ಸಂಸ್ಕೃತಿಯಲ್ಲಿ ಕ್ರಿಸ್ತನ ಜನನದ ವಾರ್ತೆ ತಿಳಿದು ಕುರುಬರು ಮತ್ತು ಜೋಯಿಸರು ಯೇಸುವನ್ನು ಹುಡುಕಿ ಆತನಿಗೆ ಸಾಸ್ಟಾಂಗ ನಮಸ್ಕಾರ ಮಾಡಿ ಆಶೀರ್ವಾದ ತೆಗೆದುಕೊಳ್ಳಲು ಜೋಯಿಸರು ಚಿನ್ನ, ರತ್ನ, ಬೋಳಗಳನ್ನು ಕಾಣಿಕೆಯಾಗಿ ತಂದಿದ್ದರು. ಇದರ ನೆನಪಿನಾರ್ಥವಾಗಿ ಭಾರತೀಯ ಕ್ರೈಸ್ತರು ಕಿರು ನಾಟಕ, ಕ್ರಿಸ್ತ ಜನನಗಳ ಮೂಲಕ ಜೋಯಿಸರ ಪಾತ್ರವನ್ನು ಪರಿಚಯಿಸುವರು. ಆಗ ಈ ರೀತಿ ಹಾಡುವರು.

ಓ ಓ ಆಶ್ಚರ್ಯದ ನಕ್ಷತ್ರ
ಅರಸನಾಗಿ ಹುಟ್ಟಿದನು
ಧೂಪ, ರತ್ನ ಭೋಳತಂದು
ಅರ್ಪಿಸುವೆವು ರಾಜನ ಪಾದಕ್ಕೆ....

ಖರ್ಜೂರಿ ಗರಿಗಳ ಬಾನುವಾರದಂದು ರೋಮ ಸಂಸ್ಕೃತಿಯಲ್ಲಿ ಕ್ರಿಸ್ತನಿಗೆ ದಾರಿಯುದ್ಧಕ್ಕೂ ವಸ್ತ್ರಗಳನ್ನು (ಬಟ್ಟೆ) ಹಾಕುತ್ತಿದ್ದರು. ಭಾರತೀಯ ಕ್ರೈಸ್ತರು ನೀರನ್ನು ಹಾಕುವರು ಜಯಗೋಷ ಮಾಡುವರು.

ರೋಮ ಸಂಸ್ಕೃತಿಯರು ಪುನರುತ್ಥಾನದ ಸಮಯದಲ್ಲಿ ಮಗ್ದಾಲದ ಮರಿಯಳು ಹೋದರೆ ಇಲ್ಲಿ ಪಾದ್ರಿ ಮತ್ತು ವಿಶ್ವಾಸಿಗಳು ಸಮಾದಿಗೆ ಹೋಗುವರು. ಮತ್ತು ಅಂದು ಪಸ್ಕ ಹಬ್ಬ ಎಂದು ರೋಮನ್ನರು ಮಾಡುತ್ತಿದ್ದರು. ಅದನ್ನು ನಮ್ಮ ಭಾರತೀಯ ಕ್ರೈಸ್ತರು ಸುಗ್ಗಿ ಹಬ್ಬ ಎಂದು ಕರೆಯುವುದು ಅಲ್ಲದೆ ಬೂದಿ ಬುಧವಾರ ಹಬ್ಬದಂದು ರೋಮನ್ನರು ಗೋಣಿಚೀಲ ತೆಗೆದುಕೊಂಡು ಮೆಯೆಲ್ಲಾ ಬೂದಿ ಸವರಿಕೊಂಡು ಪಾಪನಿವೇದನೆ ಮಾಡಿಕೊಳ್ಳುತ್ತಿದ್ದರು. ಆದರೆ ಭಾರತೀಯ ಕ್ರೈಸ್ತರು ಈ ರೀತಿಯಲ್ಲಿ ಮಾಡದೆ ಪಶ್ಚಾತ್ತಾಪ ಪ್ರಾರ್ಥನೆ ಮಾಡುವರು. ಇವೆಲ್ಲವೂ ರೋಮ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಕಾಣುವ ಅಲ್ಪ ಸ್ವಲ್ಪ ವ್ಯತ್ಯಾಸಗಳು ಆಗಿವೆ.

ಕೆಥೋಲಿಕ್ ಕ್ರೈಸ್ತರ ಆಚರಣೆಗಳು

ದೀಕ್ಷಾಸ್ನಾನ: ಇದು ಕೆಥೋಲಿಕ್ ಕ್ರೈಸ್ತರಲ್ಲಿ ಮಕ್ಕಳಿಗೆ, ವಯಸ್ಕರಿಗೆ ಹಾಗೂ ಮರಣಾವಸ್ಥೆಯಲ್ಲಿರುವವರಿಗೆ ನೀಡುವಂತಹ ಸಂಸ್ಕಾರಕ್ಕೆ ದೀಕ್ಷಾಸ್ನಾನ ಎನ್ನುತ್ತಾರೆ. ಮಕ್ಕಳಿಗೆ ದೀಕ್ಷೆ ಕೊಡುವಾಗ ತಂದೆ ತಾಯಿಯರು ದೇವರಿಗೆ ಸ್ವಾಗತಿಸಿ ಕೃತಜ್ಞತೆ ಸಲ್ಲಿಸಲು ಯಾಜಕರು ಹೇಳುತ್ತಾರೆ. ತರುವಾಯ ಯಾಜಕರು ಅಂದರೆ ಧರ್ಮಗುರು. ತಂದೆ ತಾಯಿಗೆ ನಿಮ್ಮ ಮಗುವಿಗೆ ಏನೆಂದು ಹೆಸರಿಡುತ್ತೀರಿ, ನಿಮ್ಮ ಮಗುವನ್ನು ಸಂಪೂರ್ಣ ವಿಶ್ವಾಸದಲ್ಲಿ ಧರ್ಮದ ನಿಯಮಗಳನ್ನು ಪಾಲಿಸುವಲ್ಲಿ ಸಹಕರಿಸುವಿರೋ ಎಂದು ಪ್ರಶ್ನಿಸಿ ಉತ್ತರ ಪಡೆದು ಮಗುವಿಗೆ ದೀಕ್ಷೆಯನ್ನು ನೀಡುತ್ತಾರೆ. ಹಾಗೆಯೇ ಪಿತ ಸುತ ಪವಿತ್ರಾತ್ಮನ ಹೆಸರಿನಲ್ಲಿ ನಿನಗೆ ದೀಕ್ಷೆಯನ್ನು ನೀಡುತ್ತೇನೆ ಎಂದು ಧರ್ಮಗುರುಗಳು ಸಂಬೋಧಿಸುತ್ತಾರೆ. ಪಿತ ಸುತ ಪವಿತ್ರಾತ್ಮ ಎಂದು ಒಟ್ಟಾಗಿ ಪದ ಬಳಸುವುದು ಇಲ್ಲಿ ವಿಶೇಷವಾಗಿ ಭಾಷಾ ಬಳಕೆಯಾಗಿ ಕಂಡುಬರುತ್ತದೆ. ಹಾಗೆಯೇ ವಯಸ್ಕರಿಗೆ ಮತ್ತು ವೃದ್ಧಾಪ್ಯದಲ್ಲಿರುವವರಿಗೆ ಕೂಡ ದೀಕ್ಷೆಯನ್ನು ನೀಡುವುದು ಕಂಡುಬರುತ್ತದೆ. ಈ ದೀಕ್ಷೆಯಲ್ಲಿ ಬಳಸುವ ಪದಗಳು ಈ ರೀತಿಯಾಗಿವೆ. ಯಾಜಕ, ತಂದೆ ತಾಯಿ, ಜ್ಯೋತಿ ಧಾರಣೆ, ತಂದೆಯೇ, ಅಭಿಷೇಕ, ಶ್ವೇತ ವಸ್ತ್ರಾಧಾರಣೆ, ದುಷ್ಟಶಕ್ತಿಗಳ ಉಚ್ಚಾಟಣೆ, ಅಲ್ಲೇಲುಯ, ಅಭ್ಯಂಗ (ಅಭಿಷೇಕ), ವಿಶ್ವಾಸ ಪ್ರಕಟಣೆ.

ದೃಢೀಕರಣ ಸಂದರ್ಭದ ಭಾಷೆ

ಕೆಥೋಲಿಕರಲ್ಲಿ ದೃಢೀಕರಣ ಎಂಬುವುದು ವಯಸ್ಕರರಿಗೆ ನೀಡುವುದಾಗಿದೆ. ದೀಕ್ಷೆ ನಂತರ ಕೊಡುವ ದ್ವಿತೀಯ ದೀಕ್ಷೆಯೆಂತಲೂ ಕರೆಯಬಹುದು. ಈ ದೃಢೀಕರಣ ಆದ ನಂತರವೇ ವಿಶ್ವಾಸಿಗಳು ಕರ್ತನ ರಕ್ತ ದೇಹವನ್ನು (ದ್ರಾಕ್ಷಾರಸ ಹಾಗೂ ರೊಟ್ಟಿ) ಸೇವಿಸಲು ಸಾಧ್ಯವಾಗುತ್ತಿಲ್ಲ. ಮೊದಲಿಗೆ ಧರ್ಮಾಧ್ಯಕ್ಷರು ವಿಶ್ವಾಸಿಗಳಿಂದ ವಾಗ್ದಾನವನ್ನು ಪಡೆದು ಪಿತ ಸುತ ಪವಿತ್ರಾತ್ಮನ ಹೆಸರಿನಲ್ಲಿ ದೃಢೀಕರಿಸುತ್ತಾರೆ. ಈ ದೃಢೀಕರಣದಲ್ಲಿ ಬಳಸುವ ಪದಗಳು ಪಾಪ ನಿವೇದನೆ, ಪಾಪ ನಿವೇದಕ, ಪಶ್ಚಾತ್ತಾಪ ಪ್ರಾರ್ಥನೆ, ವಿಮೋಚನಾ ಆಶೀರ್ವಾದ.

ವಿವಾಹ ಸಂಸ್ಕಾರ

ಧರ್ಮ ಗುರುಗಳು ತಂದೆ ತಾಯಿಗಳ, ವಧು ವರರ ಒಪ್ಪಿಗೆಯನ್ನು ಪಡೆದು ಮದುವೆ ಮಾಡಲು ಸಿದ್ಧವಾಗುತ್ತಾರೆ. ವರನು ಹಾಗೂ ವಧುವಿನಿಂದ ಪರಸ್ಪರ ಒಪ್ಪಿಗೆಯ ಮಾತುಗಳನ್ನು ಬಹಿರಂಗ ಪಡಿಸುತ್ತಾರೆ. ಉದಾ. ಕಿರಣ ಆದ ನಾನು ಪ್ರೀತಿ ಆದ ನಿನ್ನನ್ನು ನನ್ನ ಪತ್ನಿಯಾಗಿ ಸ್ವೀಕರಿಸುತ್ತೇನೆ, ಸುಖ-ದುಃಖಗಳಲ್ಲಿ ನಿಮಗೆ ಪ್ರಾಮಾಣಿಕನಾಗಿರುತ್ತೇನೆ ಎಂದು ವಾಗ್ದಾನ ಮಾಡುತ್ತೇನೆ. ಜೀವನದ ಪ್ರತಿ ದಿನವೂ ನಿಮ್ಮನ್ನು ಪ್ರೀತಿಸಿ ಗೌರವಿಸುತ್ತೇನೆ ಎಂದು ವೈಯಕ್ತಿಕ ಒಪ್ಪಂದವನ್ನು ಹೇಳಿಸುತ್ತಾರೆ. ಹಾಗೇ ವಧುನಿಂದ ಹೇಳಿಸಿ ವ್ಯಾಜಕರು ಧರ್ಮಸಭೆಯ ಮುಂದೆ ನಿಮ್ಮ ಒಪ್ಪಿಗೆಯನ್ನು ಬಹಿರಂಗಪಡಿಸಿದ್ದೀರಿ. ದಯಾಮಯ ದೇವರು ನಿಮ್ಮಿಬ್ಬರ ಒಪ್ಪಿಗೆಯನ್ನು ದೃಢಪಡಿಸಿ ನಿಮ್ಮನ್ನು

ಆಶೀರ್ವದಿಸಲಿ, ದೇವರು ಕೂಡಿಸಿದ್ದನ್ನು ಮನುಷ್ಯನು ಬೇರ್ಪಡಿಸದಿರಲಿ ಎಂದು ಧರ್ಮಗುರುಗಳು ಪ್ರಾರ್ಥಿಸುತ್ತಾರೆ. ಸಭೆಯವರೆಲ್ಲರೂ ಆಮೆನ್ ಎನ್ನುತ್ತಾರೆ. ತರುವಾಯ ಪಾದ್ರಿಗಳು ತಾಳಿ ಅಥವಾ ಉಂಗುರವನ್ನು ಪವಿತ್ರೀಕರಣ ಮಾಡಿ ಕಟ್ಟಲು ಅಥವಾ ತೊಡಿಸಲು ಅನುವು ಮಾಡುತ್ತಾರೆ. ಇಲ್ಲಿ ಬಳಸುವ ಭಾಷೆ ಮತ್ತು ಪ್ರೊಟೆಸ್ಟೆಂಟರ ವಿವಾಹ ಸಂದರ್ಭದಲ್ಲಿ ಬಳಸುವ ಭಾಷೆ ಭಿನ್ನವಾಗಿ ಕಂಡುಬರುತ್ತದೆ.

ವ್ಯಾದಿಸ್ತರ ಸಂಸ್ಕಾರ

ವ್ಯಾದಿಸ್ತರ ಎಂದರೆ ಅಸ್ವಸ್ಥತೆಯಲ್ಲಿದ್ದವರು ಎಂದರ್ಥ. ಇವರ ಮನೆಗೆ ಹೋಗಿ ಪಾದ್ರಿಗಳು ಪಿತ ಸುತ ಪವಿತ್ರಾತ್ಮನ ನಾಮದಲ್ಲಿ "ಪ್ರಭುವೇ, ದೇವರೆ ನಿಮಗೆ ಸ್ತುತಿ ಮಹಿಮೆ ಉಂಟಾಗಲಿ, ಪ್ರೀತಿಯಿಂದ ನಿಮಗೆ ಸೇವೆ ಮಾಡಲು ನಮ್ಮನ್ನು ಕರೆದಿದ್ದೀರಿ. ಈ ನಮ್ಮ ಸಹೋದರ–ಸಹೋದರಿ ಯೇಸುವಿನ ಶಿಲುಬೆಯನ್ನು ಸ್ಮರಿಸಿಕೊಂಡು ತನ್ನ ನೋವನ್ನು ಸಹನೆಯಿಂದ ತಾಳಿಕೊಳ್ಳಲು ಶಕ್ತಿ ನೀಡಿರಿ. ನಿಮ್ಮ ಚಿತ್ತವಿದ್ದರೆ ಇವರ ಕಾಯಿಲೆಯನ್ನು ಗುಣಪಡಿಸಿರಿ ನಮ್ಮ ಪ್ರಭು ಕ್ರಿಸ್ತರ ಮುಖಾಂತರ ನಿಮ್ಮನ್ನು ಪ್ರಾರ್ಥಿಸುತ್ತೇವೆ" ಎಂದು ಅಸ್ವಸ್ಥರನ್ನು ಸಂತೈಸುವರು.

ಯಾಜಕ ದೀಕ್ಷೆ

ಧರ್ಮಾಧ್ಯಕ್ಷರು ಹೊಸದಾಗಿ ಕ್ರಿಸ್ತನ ಸೇವೆ ರೀತಿಯಲ್ಲಿ ಸಾರಲು ಅಥವಾ ಹೇಳಲು ಸ್ವ ಇಚ್ಛೆಯಿಂದ ಪಾಲಕರ ಒಪ್ಪಂದದೊಂದಿಗೆ ದೇವಾಲಯದ ಅರ್ಚಕ ವೃತ್ತಿಗೆ ಸೇರುವ ಮೊದಲು ಪಡೆದುಕೊಳ್ಳುವ ದೀಕ್ಷೆಯಾಗಿದೆ. ಧರ್ಮಾಧ್ಯಕ್ಷರು ಎಲ್ಲಾ ನಿಯಮಗಳನ್ನು ಬೋಧಿಸಿ ಪ್ರತ್ಯುತ್ತರ ಪಡೆದು ಎಲ್ಲಾ ಸಕಲ ಸಂತರ ಹೆಸರಿನ ಮೇಲೆ ಅಭ್ಯರ್ಥಿಯನ್ನು ಅಭಿಷೇಕಿಸುತ್ತಾರೆ. ಆ ಸಂದರ್ಭದಲ್ಲಿ ಬಳಕೆಯಾಗುವ ವಸ್ತುಗಳು, ಪೂಜಾ ವಸ್ತ್ರ ತೊಡುಗೆ, ಕರಗಳ ಅಭ್ಯಂಗ, ಪೂಜಾ ಪಾತ್ರೆಗಳ ಅರ್ಪಣೆ.

ಅಂತ್ಯಸಂಸ್ಕಾರ

ಕೆಥೋಲಿಕ್ ಕ್ರೈಸ್ತರು ಈ ಒಂದು ಅಂತ್ಯ ಸಂಸ್ಕಾರ ಆಚರಣೆಯನ್ನು ಮೂರು ಹಂತಗಳಲ್ಲಿ ನೆರವೇರಿಸುತ್ತಾರೆ. ಒಂದು ದಿವಂಗತರ ಮನೆ, ಎರಡನೆಯದಾಗಿ ದೇವಾಲಯ, ಮೂರನೆಯದಾಗಿ ಸ್ಮಶಾನದಲ್ಲಿ ಬಲಿಪೂಜೆಯನ್ನು ಹೊರತುಪಡಿಸಿ ಅಂತಿಮಸಂಸ್ಕಾರದ ವಿಧಿಗಳನ್ನು ಉಪಯಾಜಕರು ನೆರವೇರಿಸುತ್ತಾರೆ. ಯಾಜಕ ಅಥವಾ ಉಪದೇಶಿ ಇತರೆ ಸ್ತ್ರೀಸಾಮಾನ್ಯರು ಸಹ ಮೊದಲನೆಯ ಮತ್ತು ಮೂರನೆಯ ಸ್ಥಳಗಳಲ್ಲಿ ಮಾಡುವ ವಿಧಿಗಳನ್ನು ನೆರವೇರಿಸಬಹುದಾಗಿದೆ. ಎರಡನೆಯ ಸ್ಥಳವಾದ ದೇವಾಲಯದಲ್ಲಿ ಮಾತ್ರ ಯಾಜಕರು ನೆರವೇರಿಸುತ್ತಾರೆ. ಈ ಸಂಸ್ಕಾರದಲ್ಲಿ ಬಳಸುವ ವಿಶೇಷ ಪದಗಳು ಮೊದಲನೆಯ ಸ್ಥಳ, ಎರಡನೆಯ ಸ್ಥಳ, ಮೂರನೆಯ ಸ್ಥಳ, ಪರಂದಾಮ, ಸಮಾಧಿ ಮೆರವಣಿಗೆ, ಮೃತರ ಸ್ಮರಣೆ.

೪.೩.೨. ಕೌಟುಂಬಿಕ ಹಿನ್ನೆಲೆಯ ಆಚರಣೆಗಳು

ಕ್ರೈಸ್ತ ಧರ್ಮದ ಆಚರಣೆಗಳಲ್ಲಿ ಪ್ರಮುಖವಾಗಿ ಧರ್ಮದ ಆಚರಣೆಗಳನ್ನು ಹೊರತುಪಡಿಸಿದರೆ ವ್ಯಕ್ತಿಗತ ಆಚರಣೆಗಳು ಕಂಡುಬರುತ್ತವೆ. ಅವುಗಳನ್ನು ಕೌಟುಂಬಿಕ ಹಿನ್ನೆಲೆಯ ಆಚರಣೆಗಳು ಎನ್ನಬಹುದು. ಅವುಗಳನ್ನು ಆಚರಿಸುವ ಸಂದರ್ಭದಲ್ಲಿ ಬಳಕೆಯಾಗುವ ಕನ್ನಡ ಭಾಷೆಯನ್ನು ಈ ಕೆಳಕಂಡ ಆಚರಣೆಗಳನ್ನು ವಿಶ್ಲೇಷಿಸುವಲ್ಲಿ ಹೇಳಲಾಗಿದೆ. ಇಲ್ಲಿ ಪ್ರಮುಖವಾಗಿ ಜನನದಿಂದ ಮರಣದವರೆಗೆ ಅಂದರೆ ಹುಟ್ಟಿದ ದಿನ, ದೀಕ್ಷೆ, ದೃಢೀಕರಣ, ವಿವಾಹ ಮತ್ತು ಅಂತ್ಯ ಸಂಸ್ಕಾರ ಹೀಗೆ ವ್ಯಕ್ತಿಗೆ ಸಂಬಂಧಿಸಿದ ಆಚರಣೆಗಳನ್ನು ಈ ರೀತಿಯಾಗಿ ವರ್ಗೀಕರಿಸಿ ಅಲ್ಲದೆ ಜಾತ್ರೆ ಉತ್ಸವ ಹಾಗೂ ಕ್ರೈಸ್ತರ ದ್ವಿ ಸಾಂಸ್ಕೃತಿಕತೆಯ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ.

ಜನನ ದಿನ: ಇದನ್ನು ಕ್ರೈಸ್ತರು ಒಂದು ರೀತಿ ತಮ್ಮ ಮನೆಯಲ್ಲಿಯೇ ಪಾದ್ರಿಯನ್ನು ಕರೆಯಿಸಿಕಂಡು ಮಕ್ಕಳ ಹುಟ್ಟಿದ ದಿನವನ್ನು ಆಚರಿಸುವರು. ಈ ಆಚರಣೆಯಲ್ಲಿ ಕಂಡುಬರುವ ಅಥವಾ ಕೇಳುವ ಹಾಡುಗಳು

ನಾ ಹಾಡುವೆ ನಾ ಪಾಡುವೆ
ಇನ್ನೊಂದು ವರ್ಷ ದಾಟಿದೆ
ಎನ್ ಬಂಧುಮಿತ್ರರೊಡನೆ
ಎನ್ ಜನ್ಮದಿನ ನೋಡಿದೆ
ನಾ ಸ್ತೋತ್ರವನ್ನು ಅರ್ಪಿಸಿ
ಪರಾತ್ಪರನ ನಾಮಕ್ಕೆ
ನಿನ ದಿಟ್ಟ ಪ್ರೀತಿಸಿ ಧ್ಯಾನಿಸಿ
ಎಂದೆಂದಿಗೂ ಕೊಂಡಾಡುವೆ
ಹ್ಯಾಪಿ ಬರ್ತಡೇ ಟೂಯು
ಹ್ಯಾಪಿ ಬರ್ತಡೇ ಟೂಯು
ಹ್ಯಾಪಿ ಲಾಂಗ ಲೈಫ್ ಟೂಯು
ಮಿನಿ ಗ್ರೀಟಿಂಗ್ ಟೂಯು
ಮೈ ಗಾಡ್ ಬ್ಲೆಸ್ ಯು ಡಿಯರ್

ಶ್ಲೋಕ: ಪುತ್ರ ಸಂತಾನವು ಕರ್ತನಿಂದ ಬಂದ ಸ್ವಾಸ್ತವಾಗಿದೆ.

ನಾಮಕರಣ ದಿನ: ಈ ದಿನವನ್ನು ವಿಶೇಷವಾಗಿ ಆಚರಿಸುವರು ಧರ್ಮಗುರುವನ್ನು ಮನೆಗೆ ಆಹ್ವಾನಿಸಿ ಪ್ರಾರ್ಥನಾ ಕೂಟ ವಿಟ್ಟುಕೊಂಡು ನೆರೆಹೊರೆಯ ಎಲ್ಲಾ ಸಮುದಾಯವನ್ನು ಉಪಸ್ಥಿತಗೊಳಿಸಿ ಮಕ್ಕಳಿಗೆ ಹೆಸರಿಡುವ ಕಾರ್ಯ ಮಾಡುವರು. ಈ ಹೆಸರು ಇಡುವಲ್ಲಿ ಇಂತಹ ಆಲೋಚನೆಗಳಿಂದ ಅಂದರೆ ಹೆಸರಿಡುವಲ್ಲಿ ತಮ್ಮ ಹಿರಿಯರ ಹೆಸರು ಇಡುತ್ತಾರೆ. ಉದಾ. ಹನುಮಂತ, ನರಸಪ್ಪ,

ನರಸಿಂಹ, ದುರುಗಪ್ಪ ಎಂದು ಇಡುವರು ಅಲ್ಲದೆ ತಾವು ಜನಿಸಿದ ದಿನ, ಹುಟ್ಟಿದ ದಿನ ಪ್ರಮುಖ ವ್ಯಕ್ತಿಗಳ ದಿನವಾಗಿದ್ದರೆ ಉದಾ. ಯೇಸುವಿನ ಜನ್ಮದಿನ (ಕ್ರಿಸ್‌ಮಸ್) ಆಗಿದ್ದರೆ ಯೇಸು, ಯಾಸೇಬ ಎಂದು ಸಂತರ ಹೆಸರನ್ನು ಇಡುವರು.

ಆಧುನಿಕತೆಯ ಗಾಳಿ ಬೀಸಿದ ಪ್ರಸ್ತುತ ದಿನಗಳಲ್ಲಿ ಪಾಲಕರು ತಮಗಿಷ್ಟವಾದ ಹೆಸರನ್ನು ಇತ್ತೀಚೆಗೆ ಯಾವುದೇ ಧರ್ಮಕ್ಕೆ ಸೀಮಿತವಾಗದ ಸ್ಟೈಲಿಶ್ ಹೆಸರನ್ನು ಇಡುವರು. ಉದಾ. ಜೀವನ್, ದಿಗಂತ, ಅವಿನಾಶ, ಆಕಾಶ ಇತ್ಯಾದಿ.

ಈ ನಾಮಕರಣ ವಿಷಯದಲ್ಲಿ ಸಾಮಾಜಿಕ, ಆರ್ಥಿಕ, ಆಧುನಿಕ ವ್ಯವಸ್ಥೆಗಳಿಗಿಂತ ಧಾರ್ಮಿಕ ವ್ಯವಸ್ಥೆಯೇ ಸ್ವಲ್ಪ ಪ್ರಭಾವ ಬೀರಿದೆ. ಏಕೆಂದರೆ ಸಾಮಾನ್ಯವಾಗಿ ಕ್ರೈಸ್ತರು ಧರ್ಮೀಯ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಹಿಂದೆ ಹಿಂದೂವಾಗಿರುವ ಅಥವಾ ಹಿಂದು ಸಂಪ್ರದಾಯದಲ್ಲಿರುವವರು ಪ್ರಸ್ತುತ ಕ್ರೈಸ್ತ ಸಂಸ್ಕೃತಿಯನ್ನು ಆಚರಿಸುವುದರಿಂದ ಹಿಂದೂ ಮತ್ತು ಕ್ರೈಸ್ತ ಧರ್ಮ ಮಿಶ್ರಿತ ಹೆಸರುಗಳನ್ನು ನೋಡಬಹುದು. ಉದಾ.

ಕ್ರೈಸ್ತ + ಹಿಂದೂ ಮಿಶ್ರಿತ ನಾಮ

ಯೇಸು + ದಾಸ

ಪ್ರೇಮ + ದಾಸ

ಸ್ವಾಮಿ + ದಾಸ

ದೇವ + ರಾಜ

ಕೃಪಾ + ಸಾಗರ

ರೋಸಲಿ + ರಮೇಶ

ವಿಲ್ಬರ್ಟ್ + ಸಾಗರ

ಸಾಮೇಲ್ + ವಿಜಯ್

ಯೇಸು + ಸಂದೇಶ

ಯೇಸು + ನಾಗಯ್ಯ

ಯೇಸು + ಬುಚ್ಚಯ್ಯ

ಇರುವ ಹೆಸರನ್ನು ಬದಲಾಯಿಸಿಕೊಳ್ಳುವುದು.

ಉದಾ. ಹನುಮಂತ – ಪವನ

ರಮೇಶ – ಸಂತೋಷ

ದ್ಯಾವಣ್ಣ – ಡೇವಿಡ್

ಕ್ರಿಷ್ಣಪ್ಪ – ಕ್ರಿಷ್ಟಾಫರ್

ಬಸವರಾಜ – ಭಾಸ್ಕರ್

ಸುರೇಶ – ಸಾಗರ

ಪರಶುರಾಮ – ಪ್ರಭಾಕರ

ದೀಕ್ಷೆ: ಇದು ಕ್ರೈಸ್ತ ಧರ್ಮದ ಆದಿ ಸಂಸ್ಕರ ಎನ್ನಬಹುದು. ದೀಕ್ಷೆಯಾದರೆ ಮುಂದಿನ ದೃಢೀಕರಣ ವಿವಾಹ ಮತ್ತಿತರ ಕಾರ್ಯಗಳಿಗೆ ಅನುಕೂಲ ಆದುದರಿಂದ ಈ ದೀಕ್ಷೆಯನ್ನು ಧರ್ಮಗುರುಗಳು ಪಾಲಕರ ಒಪ್ಪಿಗೆಯ ಮೇರೆಗೆ ಮಾಡುವರು. ದೀಕ್ಷೆ ಕೊಡುವ ಕ್ರಮ ಹೀಗಿದೆ.

ಮೆಥೋಡಿಸ್ಟ್ ಸಭೆಯವರು – ತಂದೆ ಮಗನ ಪರಿಶುದ್ಧಾತ್ಮ ಹೆಸರಿನಲ್ಲಿ ದೀಕ್ಷೆ ಕೊಡುತ್ತಾರೆ.

ಕೆಥೋಲಿಕ್ – ಪಿತನ ಸುತರ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷೆ ಕೊಡುತಲ್ತಾರೆ.

ದೀಕ್ಷೆ ನೀಡಬೇಕಾದರೆ ನೀರಿನಲ್ಲಿ ಮುಳುಗಿಸಿ, ನೀರನ್ನು ಅಲೆದು ಮೇಲೆ ಚಿಮುಕಿಸಿ ಕರ್ತನ ಶಕ್ತಿಯಾಗಿರುವ ದಕ್ಷಿಣ ದೀಕ್ಷೆ ನೀಡುವರು. ಪಾದ್ರಿಯವರು ದೀಕ್ಷೆ ತೆಗೆದುಕೊಳ್ಳಲು ಸಿದ್ದರಿರುವವರಿಗೆ ಕೆಲವು ಪ್ರಶ್ನೆಗಳನ್ನು "ನೀವು ನಿಮ್ಮ ಪಾಪಿಗಳಿಗಾಗಿ ಪಶ್ಚಾತ್ತಾಪಪಟ್ಟು ಯೇಸುಕ್ರಿಸ್ತನನ್ನು ನಿಮ್ಮ ರಕ್ಷಕನನ್ನಾಗಿಯೂ ಪ್ರಭುವನ್ನಾಗಿಯೂ ಅಂಗೀರಿಸಲು ವ್ಯಕ್ತಪಡಿಸುತ್ತಿರೋ" "ದೇವರ ಪವಿತ್ರ ಚಿತ್ತವನ್ನು ಆತನ ಕಟ್ಟಳಗಳನ್ನು ಕೈಗೊಳ್ಳುವುದಕ್ಕೆ ಮನಪೂರ್ವಕವಾಗಿ ಪ್ರಯತ್ನ ಮಾಡುತ್ತಿರೋ?" ಎಂಬುವ ಪ್ರಶ್ನೆಗಳಿಗೆ ಉತ್ತರ ಪಡೆದು ದೀಕ್ಷೆ ನೀಡುವರು. ದೀಕ್ಷೆ ತೆಗೆದುಕೊಳ್ಳುವಾಗ ಹಾಡುವ ರಾಗ

ಬಾ ಸುಂದರ ಸ್ವಾಮಿಯೇ ಬಾರಯ್ಯ ಬಾ
ಭಾಸುರಾನಂದದಿ ಬಾ
ಯೇಸು ಸು ನಾಮವೇ ಬಾ ಬಾ ಬಾ

ದೃಢೀಕರಣ: ಇದು ದೀಕ್ಷೆಯಾದ ನಂತರ ನೀಡುವ ಸಂಸ್ಕಾರವಾಗಿದೆ. ಇದನ್ನು ಪಡೆದರೆ ಮಾತ್ರ ಸಭೆಯಲ್ಲಿ ಪೂರ್ಣತೆಯನ್ನು ಪಡೆದಂತಾಗುವುದು ಸಭೆಯ ಸದಸ್ಯನಾದಂತೆ ಅಂದರೆ 'ಕರ್ತನ ಭೋಜನ' ಸ್ವೀಕಾರ ಮಾಡಲು ಈ ಉಪನಯನ ಅತೀ ಅವಶ್ಯಕವಾಗಿರುತ್ತದೆ. ಇದನ್ನು ಪ್ರೊಟೆಸ್ಟೆಂಟ್ ಸಭೆಯಲ್ಲಿ ೧೮ ವರ್ಷ ಮೇಲ್ಪಟ್ಟವರಿಗೆ ಮಾಡುವರು. ಕೆಥೋಲಿಕ್‌ರಲ್ಲಿ ಕಿರಿಯರಿಗೆ ಸಹಿತ ನೀಡುವರು. ಪ್ರೊಟೆಸ್ಟೆಂಟ್ ಸಭೆಯಲ್ಲಿ ಡಿ.ಎಸ್. (ಜಿಲ್ಲಾ ಮೇಲ್ವಿಚಾರಕರು) ನೀಡುವರು. ಕೆಥೊಲಿಕರಲ್ಲಿ ಬಿಷಪರುಗಳು ನೀಡುವರು.

ಬೋಧಕರು ದೃಢೀಕರಣಾರ್ಥಿಗಳಿಗೆ "ನೀವು ಕ್ರಿಸ್ತನ ಬಲವನ್ನು ಆಧಾರ ಮಾಡಿಕೊಂಡು ಇಹಲೋಕದ ಅಹಂಕಾರವನ್ನು ವ್ಯರ್ಥವಾದ ಭೋಗಾಶೆಯನ್ನು ಶರೀರದ ಪಾಪಗಳನ್ನು ಸೈತಾನನ ಸಕಲ ಕಾರ್ಯಗಳನ್ನು ತ್ಯಾಗ ಮಾಡುತ್ತೀರಾ?" ಎಂದು ಪ್ರಶ್ನಿಸಿ ಪ್ರಶ್ನೆಗೆ ಉತ್ತರ ಪಡೆದು ಸಂಸ್ಕಾರ ನೀಡುವರು. ಆಗ ಎಲ್ಲರೂ ಕ್ರಿಸ್ತನ ಸ್ತೋತ್ರವನ್ನು ಹೇಳುವರು. ಉದಾ. ಪರಲೋಕ ಭೂಲೋಕವನ್ನು ಸೃಷ್ಟಿಸಿದ ತಂದೆಯಾದ ದೇವರನ್ನು ನಂಬುತ್ತೇನೆ. ಹೀಗೆ ದೃಢೀಕರಣಗೊಂಡ ವಿಶ್ವಾಸಿಗಳು ತಿಂಗಳ ಮೊದಲನೇ ವಾರದಲ್ಲಿ ಅಥವಾ ವಿಶೇಷ ದಿನಗಳಲ್ಲಿ ಕೊಡುವ ದ್ರಾಕ್ಷಾರಸ/ಕರ್ತನ ರಾತ್ರಿ ಭೋಜನವನ್ನು ಸೇವಿಸಲು ಅರ್ಹರಾಗಿರುತ್ತಾರೆ. ಅವರು ಆತ್ಮೀಕ ಅಂಶಗಳನ್ನು ಪಾಲಿಸಬೇಕು.

ಋತುಮತಿ ಮತ್ತು ಕನ್ಯಾನ್ವೇಷಣೆ: ಕ್ರೈಸ್ತ ಕೆಲ ಕುಟುಂಬಗಳಲ್ಲಿ ಈ ಸಂಪ್ರದಾಯಗಳು ಇನ್ನು ಇವೆ ಇರುತ್ತವೆ. ಇವು ಬಿಡದ ಆಚರಣೆಗಳಲ್ಲ ಏಕೆಂದರೆ ಮೂಲತಃ ಹಿಂದು ಧರ್ಮ ಬಾಂಧವರಾದ ಇವರು ಬಿಡಲಿಕ್ಕೆ ಆಗುತ್ತಿಲ್ಲ ಬಿಡುವುದಿಲ್ಲ. ಮಗು ದೊಡ್ಡವಳಾಗಿದೆ ಹಾಗೆಯೇ ಮರೆ ಮಾಡಬಾರದು. ಗುರ್ತಿಸಬೇಕು. ಜನರನ್ನು ಕೂಡಿಸಬೇಕು ಎಂದು ಒಂದು ವಾರದ ವರೆಗೆ ಸಂಜೆ ಮನೆಯಲ್ಲಿ ಗೀತೆಗಳನ್ನು ಹಾಡುವ ಅಥವಾ ಕಥೆಗಳನ್ನು ಕೇಳುವುದರ ಮೂಲಕ ಕೊನೆಯಲ್ಲಿ ಕಡೆದಿನದಲ್ಲಿ ಪಾದ್ರಿಯನ್ನು ಮನೆಗೆ ಕರೆಯಿಸಿ ಆರಾಧನೆ ಮೂಲಕ ಎಲ್ಲಾ ಸುತ್ತಮುತ್ತ ಇರುವ ಬಂಧುಬಳಗದೊಂದಿಗೆ ಪ್ರಾರ್ಥನೆಯೊಂದಿಗೆ ಮಗಳನ್ನು ಎಬ್ಬಿಸುವ ಕಾರ್ಯ ಮಾಡುವರು.

ಹಾಗೆಯೇ ಕನ್ಯಾವನ್ನು ಹುಡುಕುವ ಪ್ರಕ್ರಿಯೆಯೂ ಇದೆ. ಹಿಂದೆ ಸುಮಾರು ದಿನಗಳ ಕಾಲ ಕನ್ಯೆಗಾಗಿ ಹೋಡಾಡುತ್ತಿದ್ದರು. ಆದರೆ ಇವತ್ತು ಕಡಿಮೆಯಾಗಿದೆ. ಆದರೂ ಈ ಪ್ರಕ್ರಿಯೆ ಸಂಪೂರ್ಣವಾಗಿ ಹೋಗಿಲ್ಲ ಕ್ರೈಸ್ತರಲ್ಲಿಯೂ ಈ ವ್ಯವಸ್ಥೆ ಇನ್ನು ಜೀವಂತವಾಗಿದೆ.

ವಿವಾಹಕಾರ್ಯ: ಇದು ಕ್ರೈಸ್ತ ಸಂಸ್ಕಾರದಲ್ಲಿ ವಿಶೇಷವಾಗಿದೆ. ವಿವಾಹಕ್ಕಿಂತ ಮುಂಚೆಯೇ 'ನಿಶ್ಚಯಕಾರ್ಯ' ಪ್ರಮುಖವಾಗಿದೆ. ಇದೇ ಇವತ್ತು ಅನೇಕ ಧರ್ಮಗಳಲ್ಲಿ ಚಾಲನೆಯಿದೆ ಎನ್ನಬಹುದು. ನಿಶ್ಚಯ ಪದದ ಬದಲಾಗಿ 'Engegement' ಎಂಬ ಚಲಾವಣೆಯಲ್ಲಿದೆ. ಹುಡುಗನ ಮತ್ತು ಹುಡುಗಿಯ ಪಾಲಕರು ಒಪ್ಪಿದ ಮೇಲೆ ಹುಡುಗನ ಸಂಬಂಧಿಕರೆಲ್ಲರೂ ಹೋಗಿ ಹುಡುಗಿಯ ಮನೆಯಲ್ಲಿ ಮಾಡುವ ಕಾರ್ಯ ಇದಾಗಿದೆ. ಪಾದ್ರಿಯವರು ನಿಶ್ಚಯ ಕಾರ್ಯದ ಸೂಚಕವಾಗಿ ಬಟ್ಟೆ ಅಥವಾ ಉಂಗುರವನ್ನು ಹಾಕುವ ತೊಡಿಸುವ (ಪರಸ್ಪರ) ಮೂಲಕ ದೇವರ ವಾಕ್ಯದ ಉಪಸ್ಥಿತಿಯನ್ನು ಮಾಡುವರು. ಬೋಧಕನು ಮದುಮಗನಿಗೆ ಎಂಬ ನೀನು ಈ ಸ್ತ್ರೀಯನ್ನು ನಿನ್ನ ವಿವಾಹದ ಹೆಂಡತಿಯಾಗಿ ಅಂಗೀಕರಿಸಿ ವಿವಾಹದ ಪರಿಶುದ್ಧವಾದ ಸ್ಥಿತಿಯಲ್ಲಿ ಹೊಂದಿಕೊಂಡು ಬಾಳ್ವೆ ಮಾಡಲು ಒಪ್ಪಿಕೊಳ್ಳುತ್ತೀಯೋ ಈಕೆಯನ್ನು ಪ್ರೀತಿ ಮಾಡಿ ಆಧರಿಸಿ, ಸನ್ಮಾನಿಸಿ, ಸುಖ ದುಃಖಗಳಲ್ಲಿ ಸನ್ಮಾನಿಸಿ, ಸಂರಕ್ಷಿಸಿ, ಪರಸ್ತ್ರೀಯರಲ್ಲಿ ಮನಸ್ಸಿಡದೆ ನೀವಿಬ್ಬರೂ ಜೀವಿಸುವ ಮಟ್ಟಿಗೆ ಈಕೆಯ ಸಂಗಡ ಮಾತ್ರ ಇರುವುದಕ್ಕೆ ಒಪ್ಪುತ್ತೀಯೋ? ಎಂದು ಅದೇ ತರಹ ಮದುಮಗಳಿಗೆ ಸಹಿತ ಕೇಳಿ ಒಪ್ಪಿಗೆ ಪಡೆಯುವರು. ಹಾಗೆಯೇ ಪಾಲಕರ ಒಪ್ಪಿಗೆಯನ್ನು ಪುನಃ ಕೇಳುವರು.

ತರುವಾಯ ಮದುಮಗನ/ ಮಗಳ ನಡುವೆ ಪರಸ್ಪರ ನಂಬಿಗೆಯ ಮಾತುಗಳನ್ನು ಆಲಿಸಿದ ಮೇಲೆ ತಾಳಿಗಾಗಿ/ಮಾಂಗಲ್ಯ ಸೂತ್ರಕ್ಕಾಗಿ ಪ್ರಾರ್ಥನೆ "ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಈ ತಾಳಿಯು ವಧೂವರರನ್ನು ಪರಿಶುದ್ಧ ವಿವಾಹದಲ್ಲಿ ಎಲ್ಲರ ಮುಂದೆ ಒಂದುಗೂಡಿಸುವ ಸುವ್ಯಕ್ತ ಗುರುತೂ, ಆತ್ಮೀಯ/ಆತ್ಮಿಕಾ ಅಂತರ್ಯದಲ್ಲಿ ಹುಟ್ಟುವ ದೈವಾನುಗ್ರಹವನ್ನು ಬಹಿರಂಗಪಡಿಸುವ ಒಕ್ಕಟ್ಟಿನ ಚಿನ್ನೆಯೂ ಆಗಿದೆ" ಎಂದು ಬೋಧಿಸುವರು. ಹಾಗೆಯೇ ಪಾದ್ರಿ: ಸ್ಥಿರ ಪಡಿಸುವುದಕ್ಕೆ ಗುರುತಾಗಿರುವ ತಾಳಿಯನ್ನು ಕಟ್ಟಿ ಗಂಡ ಹೆಂಡತಿಯಾಗಿದ್ದರೆಂದು ತಂದೆ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೃಢಪಡಿಸುತ್ತೇನೆ ದೇವರು ಕೂಡಿಸಿದವರನ್ನು ಮನುಷ್ಯನು ಅಗಲಿಸದಿರಲಿ ಆಮೆನ್ ಎನ್ನುವರು.

ಮದುವೆಗೆ ಸಂಬಂಧಿಸಿದ ಹಾಡು ಹೀಗಿದೆ

"ಖಾನಾ ಊರಲ್ಲಿ ಇಬ್ಬರು ವಿವಾಹವಾಗುತ್ತಿರಲು

ಕ್ರಿಸ್ತೇಸು ಅಲ್ಲಿಗೋದನು ತನ್ನಾಶೀರ್ವಾದ ಕೊಟ್ಟನು"

ಕರ್ತನ ರಾತ್ರಿ ಭೋಜನ: ಇದು ಕ್ರೈಸ್ತ ವಿಶ್ವಾಸಿಗಳು ಸೇವಿಸುವ ತೀರ್ಥ ಅಥವಾ ಪ್ರಸಾದ ಎನ್ನಬಹುದು. ತಿಂಗಳ ಮೊದಲಿನ ದಿನ ರವಿವಾರದಲ್ಲಿ ಕೊಡಲಾಗುವುದು. ದೃಢೀಕರಣ ಹೊಂದಿದವರು ಮಾತ್ರ ಈ ದ್ರಾಕ್ಷಾರಸವನ್ನು ಸ್ವೀಕರಿಸಲು ಸಾಧ್ಯವಾಗುತ್ತದೆ. ಈ ಸಂಸಾರವನ್ನು ಪವಿತ್ರ ಭೋಜನ ಸಂಸ್ಕರಣೆ ಎಂದು ಹೇಳುವರು. ಇದನ್ನು ಕೆಥೋಲಿಕರು ಪರಮಪ್ರಸಾದ ಎಂದು ಹೇಳುವರು ಅಲ್ಲದೆ ಪ್ರೌಢ ಸಂಸ್ಕಾರ, ಪಾಪ ನಿವೇದನೆ ಎಂತಲೂ ಕರೆಯುವರು. ಈ ಸಂಸ್ಕಾರದಲ್ಲಿ ಹಾಡು ಹೀಗಿದೆ.

ಕ್ರಿಸ್ತೇಸು ನಿಜ ತೀರ್ಥವು
ಈ ತೀರ್ಥದೊಳಗೆ
ಪಾಪಾತ್ಮ ತೊಳಕೊಳ್ಳು
ಶುದ್ಧಾತ್ಮವಾಗುತ್ತೆ

ಇಲ್ಲ ಪ್ರಸಿದ್ಧ ದುಷ್ಟನು
ಶುದ್ಧತ್ಮ ಹೊಂದಿದ
ಪಾಪಾತ್ಮನಾದ ನನ್ನನ್ನೂ
ನಿರ್ಮಲ ಮಾಡುವ (ಸಂಗೀತ ಸಂಖ್ಯೆ ೧೦೪)

ಶವಸಂಸ್ಕಾರ ಕ್ರಮ: ಈ ಸಂಸ್ಕಾರದಲ್ಲಿ ಬಳಸುವ ಪದಗಳು ಹಾಡುಗಳು ಹೀಗಿವೆ. ಶವ

ಹೊತ್ತುಕೊಂಡು ಸಮಾಧಿಗೆ ಹೋಗುವಾಗ ಹಾಡು

ಲೋಪಾಯವು ಆದಾಯವೆಲ್ಲಾ ಮಾಯವೇ

೧. ಹುಟ್ಟಿದಾಗಲೇನ ತಂದೆವು ಬಿಟ್ಟು ಹೋಗುವ ಕಾಲಕೆ ಕಾಲವಿ

ಕಟ್ಟಿಕೊಂಡು ಹೋಗಲಾರೆವು ಬಟ್ಟ ಬಯಲೇ ಅಪ್ಪದು ॥ಮಾಯ॥

೨. ತಾಯಿ ತಂದೆ ಬಂಧು ಮಿತ್ರರು ನ್ಯಾಯ ಮಡದಿ ಮಕ್ಕಳು ಪ್ರಾಯವುಳ್ಳ

ಸ್ನೇಹಿತರು ಮಾಯವಾಗಿ ಪೋಪರು ॥ಮಾಯ॥

೩. ಕಾಸುವೀಸದ ರಾಸಿ ಮಾಯ ಮೋಸ ಬರುವುದು ನಿಶ್ಚಯ

ಯೇಸುವನ್ನೇ ಆತ್ಮದಾಸ್ತಿಯಾಸರಾಗಿ ಮಾಡಿಕೋ ॥ಮಾಯ॥

ಸಮಾಧಿಯಲ್ಲಿ ದೇಹ ಇಟ್ಟಾಗ ಹಾಡು

ಸಮಾಧಿಯೊಳಗೆ ಈ ದೇಹ ಬೀಳುತ್ತೆ
ಮಣ್ಣಾಗಿ ಹೋಗಿ ಹುಳಕ್ಕೆ ಆಹಾರವಾಗುತ್ತೆ

ಆದಾಗ್ಯೂ ಮೃತ್ಯುವು ಎಂದೆಂದೂ ಜೈಸದು
ಸದ್ಭಕ್ತನನ್ನು ಗೋರಿಯ ನಶಿಸಲಾರದು

ಬೋಧಕರು ವಾಕ್ಯ ಹೇಳುವ ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ ನನ್ನನ್ನು ನಂಬುವವ ಸತ್ತರೂ ಬದುಕುವವನು ಯೋಹಾನ ವಚನ ಹೀಗೆ ಸಂಸ್ಕಾರದ ತರುವಾಯ ೩ನೇ ದಿನ ಮತ್ತು ನೆನಪಿನಾರ್ಥವಾಗಿ ತಿಥಿ ಆರಾಧನೆ ಅಥವಾ ದಿವಸ ಸ್ಮರಣಾರ್ಥ ದಿನವನ್ನಾಗಿ ಅಂದುಕೊಂಡ ದಿನದಲ್ಲಿ ಬೋಧಕರನ್ನು ಕರೆಯಿಸಿ ಮನೆಯಲ್ಲಿ ಶಾಂತಿಕೂಟವನ್ನು ಮಾಡುವರು. ಹಾಡುಗಳ ವಾಕ್ಯದ ಮೂಲಕ ಮಾಡುವರು.

ಅಂದಿನ ದಿನ ಹಾಡುವ ಹಾಡು – "ಲೋಕವು ನಿನಗೆ ಏನಾಗಬೇಕು ಸುಖದಲ್ಲಿ ಬೀಳಬೇಡ ನೋಡು ಮನುಜಾ"

ಚರ್ಚ್‌ನ ಪ್ರವೇಶ (ಪಾದ್ರಿ ಮತ್ತು ವಿಶ್ವಾಸಿಗಳ ಮಧ್ಯೆ)

ಪಾದ್ರಿಯ ಉತ್ತರ – ಕ್ರೈಸ್ತ ಆರಾಧನೆಗಾಗಿ ಈ ದೇವಾಲಯವನ್ನು ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ಪ್ರತಿಷ್ಠಿಸುತ್ತೇವೆ.

ಜನರ ಪ್ರತ್ಯುತ್ತರ– ದೇವರು ಆತ್ಮ ಸ್ವರೂಪನು, ಆತನನ್ನು ಆರಾಧಿಸುವವರು, ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು.

ಉತ್ತರ– ಧರ್ಮದಲ್ಲಿಯೂ ಜ್ಞಾನದಲ್ಲಿಯೂ ಮಕ್ಕಳಿಗೆ ಶಿಕ್ಷಣ ದೊರೆಯುವಂತೆ ಯುವಕರೂ ಸೇವೆಗಾಗಿ ತಮ್ಮ ಜೀವನಗಳನ್ನು ಯುವಕರು ಅರ್ಪಿಸುವಂತೆಯೂ ಈ ದೇವಾಲಯವನ್ನು ಪ್ರತಿಷ್ಠಿಸುತ್ತೇವೆ.

ಪ್ರತ್ಯುತ್ತರ– ಯೌವ್ವನದಲ್ಲಿಯೇ ತನ್ನ ಸೃಷ್ಟಿಕರ್ತನನ್ನು ಸ್ಮರಿಸು.

ಉತ್ತರ – ಮುಂದಿನ ದಿನಗಳಲ್ಲಿ ಇದೆ ಮಾರ್ಗದಲ್ಲಿ ನಿರೀಕ್ಷೆ ಪೂರ್ವಕವಾಗಿ ನಡೆಯುವವರೆಗೂ ನಾವು ಈ ದೇವಾಲಯವನ್ನು ಪ್ರತಿಷ್ಠಿಸುತ್ತೇವೆ.

ಹೊಸಮನೆಯ ಪ್ರವೇಶ

ಉತ್ತರ – ಇಲ್ಲಿ ವಾಸಿಸುವ ಕುಟುಂಬದಲ್ಲಿ ದೇವ ಪ್ರೇಮವೂ ಸ್ನೇಹಪೂರ್ವಕವಾದ ಅತಿಥಿ ಸತ್ಕಾರವೂ ಇರಲೆಂದು ಈ ಮನೆಯನ್ನು ಪ್ರತಿಷ್ಠಿಸುತ್ತೇವೆ.

ಪ್ರತ್ಯುತ್ತರ – ನಿಮ್ಮ ಜೀವಮಾನಗಳು ಪರಿಪೂರ್ಣವೂ ಕೊರತೆಯಿಲ್ಲದಿರುವುದು ಆಗಿರುವಂತೆ ದೇವರು ನಿಮ್ಮನ್ನು ನಡೆಸಲಿ.

ಉತ್ತರ – ಈ ಮನೆಯಲ್ಲಿ ವಾಸಿಸುವವರಿಗೆ ಇದು ಶಾಂತಿ ಹರ್ಷಗಳ ಆಗರವಾಗಿರುವಂತೆ ಯಾವತ್ತೂ ಮನೆಯನ್ನು ಸಂತೋಷ, ಪ್ರೀತಿ, ವಿಶ್ವಾಸ, ನಿರೀಕ್ಷೆ ಮತ್ತು ಆರೋಗ್ಯಗಳಿಗಾರಲೆಂದು ಈ ಮನೆಯನ್ನು ಪ್ರತಿಷ್ಠಿಸುತ್ತೇವೆ. ಹಾಗೆಯೇ ಆಗ ಬೋಧಕನು "ಓ ದೇವರೆ ಪರಲೋಕದ ನಮ್ಮ ತಂದೆಯೇ ಜೀವನದ ಬಗ್ಗೆಯೇ ಈ ಮನೆಯಲ್ಲಿ ಜ್ಞಾನ ಮತ್ತು ಪ್ರೀತಿಗಳಿಗೆ ಆಶ್ರಯವಾಗಿರುವಂತೆ ಇದನ್ನು ಆಶೀರ್ವದಿಸು" ಎಂದು ಪ್ರಾರ್ಥಿಸುವರು. ನಂತರ ಹಾಡು – ಪಲ್ಲವಿದೇವಾ ನೀ ಆಶೀರ್ವದಿಸಿರೋ ಈ ಮನೆಯನ್ನು ನಮ್ಮ ಆದಿಪೆತ್ತರು ಈ ಜಗದೊಳು ನೇವದಿ ಆಗಿಹರು ಈ ಜಗದೊಳು ಸಮೃದ್ಧಿಗೊಳ್ಳ ಸೆಮ್ಮ ಸತಿ ಪತಿ ಹಿತರನ್ನು ॥ದೇವಾ॥

'ಪಸ್ಕ' ಇದು ಕ್ರೈಸ್ತರು ಆಚರಿಸುವ ಹಬ್ಬದ ಪದವಾಗಿದೆ. ಅಂದು ರೋಮ ಸಾಮ್ರಾಜ್ಯದಲ್ಲಿ ಈ ಪದವನ್ನು ಉಪಯೋಗಿಸಿ ಹಬ್ಬ ಆಚರಿಸುತ್ತಿದ್ದರು. ಅದನ್ನೇ ಭಾರತೀಯ ಕ್ರೈಸ್ತರು ಇಂದು 'ಸುಗ್ಗಿ' ಹಬ್ಬವೆಂದು ಆಚರಿಸುತ್ತಾರೆ. ಹಾಗೆಯೇ 'ಪಸ್ಕ' ಎಂತಲೂ ಕನ್ನಡದ ಕ್ರೈಸ್ತ ಸಾಹಿತ್ಯದಲ್ಲಿ ಸಂಬೋಧಿಸುವರು.

ಹೀಗೆ ಕನ್ನಡ ಕ್ರೈಸ್ತ ಸಂಸ್ಕೃತಿಯ ಭಾಷಿಕ ವಿವರಗಳನ್ನು ಹೇಳಲಾಗಿದೆ. ಪ್ರಮುಖ ಕೇಂದ್ರಬಿಂದುವಾದ ಸಾಂಸ್ಕೃತಿಕ ಆಚರಣೆಗಳಾದ ಕ್ರಿಸ್‌ಮಸ್ ಗುಡ್‌ಫ್ರೈಡೆ ಹಬ್ಬಗಳಲ್ಲಿ ಬಳಸುವ ಭಾಷಿಕ ವಿವರಗಳನ್ನು ಗುರ್ತಿಸಲಾಗಿದೆ.

೪.೩.೩. ಸಮುದಾಯದ ಹಿನ್ನೆಲೆಯ ಆಚರಣೆಗಳು

ಕ್ರೈಸ್ತ ಧರ್ಮದ ಪ್ರಾಚೀನ ಹಾಗೂ ಪ್ರಮುಖ ಪಂಥವಾದ ಕೆಥೋಲಿಕ್ ಪಂಥದ ಆಚರಣೆಗಳು ಪ್ರಮುಖವಾಗಿವೆ. ಇನ್ನುಳಿದ ಪ್ರೊಟೆಸ್ಟೆಂಟ್ ಪಂಥಗಳಿಗಿಂತ ಹೆಚ್ಚಾಗಿ ಅಂದರೆ ಇಡೀ ವರ್ಷಪೂರ್ಣ ಹಲವಾರು ಧಾರ್ಮಿಕ ವಿಧಿ ವಿಧಾನಗಳಲ್ಲಿ ಹಬ್ಬಗಳು, ಸಂತರ ಸ್ಮರಣೆಗಳು, ಮಹೋತ್ಸವಗಳೆಂದು ಆಚರಿಸುತ್ತಾರೆ. ಈ ಆಚರಣೆಗಳನ್ನು ಸಮುದಾಯದ ಹಿನ್ನೆಲೆಯ ಆಚರಣೆಗಳು ಎನ್ನಬಹುದು. ಈ ಆಚರಣೆಯ ಸಂದರ್ಭಗಳಲ್ಲಿ ಬಳಕೆಯಾಗುವ ಕನ್ನಡ ಭಾಷೆಯನ್ನು ಕೆಳಕಂಡಂತೆ ಗಮನಿಸಲಾಗಿದೆ.

ಕ್ರೈಸ್ತ ಹಬ್ಬಗಳು

ಈ ಕ್ರೈಸ್ತರ ಹಬ್ಬಗಳಲ್ಲಿ ಸಾಮಾನ್ಯವಾಗಿ ಕ್ರಿಸ್ತ ಜಯಂತಿ ಹಾಗೂ ಶುಭ ಶುಕ್ರವಾರ ಹಬ್ಬಗಳೆಂದು ಭಾವಿಸುತ್ತೇವೆ. ಆದರೆ ಇಲ್ಲಿ ಅದಕ್ಕಿಂತ ಹೆಚ್ಚಾಗಿ ಅನೇಕ ರೀತಿಯ ಸಂತರ ಹೆಸರಿನಲ್ಲಿ ಹಾಗೂ ಕ್ರಿಸ್ತನ ಹೆಸರಿನಲ್ಲಿ ಮತ್ತು ಧರ್ಮದ ಹೆಸರಿನಲ್ಲಿ ಹಲವಾರು ಹಬ್ಬ ಹರಿದಿನಗಳನ್ನು ಆಚರಿಸುತ್ತಾರೆ. ಅಂತಹ ಹಬ್ಬಗಳಲ್ಲಿ ಬಳಕೆಯಾದ ಕನ್ನಡ ಭಾಷೆಯನ್ನು ಈ ಕೆಳಕಂಡಂತೆ ಗ್ರಹಿಸಲಾಗಿದೆ. ಅಲ್ಲದೆ ಅಲ್ಲಿನ ಆ ಹಬ್ಬಗಳು, ಸ್ಮರಣೆ ಮತ್ತು ಮಹೋತ್ಸವಗಳನ್ನು ಹೀಗೆ ವರ್ಗೀಕರಿಸಲಾಗಿದೆ.

ಹಬ್ಬಗಳು	**ಉತ್ಸವಗಳು**
ಪರಮತ್ರಿತ್ವ	ಮರಿಯಮ್ಮ
ಕರ್ತರ ಶರೀರ ಮತ್ತು ರಕ್ತ	ಮಂಗಳ ವಾರ್ತೆ
ಯೇಸುವಿನ ಹೃದಯ	ತ್ರೋಮಾಸ್
ಪೇತ್ರ ಮತ್ತು ಪೌಲ	ಕನ್ಯಾಮರಿಯ ಸ್ವರ್ಗಾರೋಹಣ
ಕಾರ್ಮೆಲ್ ಮಾತೆ	ಸಕಲ ಸಂತರ
ಯೇಸು ಸ್ವಾಮಿಯ ಮಹಿಮಾರೂಪ	ಫ್ರಾನ್ಸಿಸ್ ಕ್ಸೇವಿಯರ್
ಬಾರ್ತೋಲೋಮಾಯ	ಅಮಲೋದ್ಭವ
ಪೂಜ್ಯ ಮರಿಯಮ್ಮ	
ಪವಿತ್ರ ಶಿಲುಬೆ	
ಕರ್ತರ ಸ್ನಾನ ದೀಕ್ಷೆ	
ಪೌಲರ ಮನಪರಿವರ್ತನೆ	
ಬಾಲಯೇಸುವಿನ ಅರ್ಪಣೆ	
ಬ್ರಿಟ್ಟೋ ರಕ್ತಸಾಕ್ಷಿ	
ಲೂರ್ದು ಮಾತೆ	
ಪೇತ್ರನ ಪೀಠ	
ಮಾರ್ಕ ಸಂದೇಶಕ	
ಫಿಲಿಪ ಯಾಕೋಬ	

ಸಂತ ಮತಿಯಾಸರ್

ಮತ್ತಾಯ ಸಂದೇಶಕ

ಲೂಕ ಸಂದೇಶಕ

ಸೀಮೋನ ಮತ್ತು ಯೂದರ್

ಕ್ರಿಸ್ತ ಜಯಂತಿ

ಸ್ತೆಫಾನ್ ರಕ್ತ ಸಾಕ್ಷಿ

ಶಿಶುಗಳ ರಕ್ತಸಾಕ್ಷಿ

ಈ ಮೇಲಿನ ಹಬ್ಬ ಮತ್ತು ಮಹೋತ್ಸವಗಳಲ್ಲಿ ಬಳಕೆಯಾದ ಕನ್ನಡ ಭಾಷೆಯನ್ನು ಈ ಕೆಳಕಂಡಂತೆ ವರ್ಗೀಕರಿಸಿ ಹೇಳಬಹುದಾಗಿದೆ.

ಕ್ರೈಸ್ತ ಪರಿಭಾಷೆ + ಕನ್ನಡ = ಹೊಸ ಪದ ಬಳಕೆ

ಲೂರ್ದು + ಮಾತೆ = ಲೂರ್ದು ಮಾತೆ

ಯೇಸುವಿನ + ಹೃದಯ = ಯೇಸುವಿನ ಹೃದಯ

ಕಾರ್ಮೆಲ್ + ಮಾತೆ = ಕಾರ್ಮೆಲ್ ಮಾತೆ

ಯೇಸುಸ್ವಾಮಿ + ಮಹಿಮಾ ರೂಪ = ಯೇಸುಸ್ವಾಮಿ ಮಹಿಮಾರೂಪ

ಬಾಲಯೇಸು + ಅರ್ಪಣೆಯ = ಬಾಲಯೇಸುವಿನ ಅರ್ಪಣೆ

ಪೌಲ + ಮನಪರಿರ್ವತನೆ = ಪೌಲನ ಮನಪರಿವರ್ತನೆ

ಪೇತ್ರನ + ಪೀಠ = ಪೇತ್ರನ ಪೀಠ

ಮಾರ್ಕ + ಸಂದೇಶಕ = ಮಾರ್ಕ ಸಂದೇಶ

ಪಿಲಿಪ ಯಾಕೋಬ + ಹಬ್ಬ = ಪಿಲಿಪ ಯಾಕೋಬರ ಹಬ್ಬ

ಮತ್ತಾಯ + ಸಂದೇಶಕ = ಮತ್ತಾಯ ಸಂದೇಶ

ಲೂಕ + ಸಂದೇಶಕ = ಲೂಕ ಸಂದೇಶ

ಸಿಮೋನಯೂದ + ಹಬ್ಬ = ಸಿಮೋನ ಯೂದರ ಹಬ್ಬ

ಕ್ರಿಸ್ತ + ಜಯಂತಿ = ಕ್ರಿಸ್ತನ ಜಯಂತಿ

ಸ್ತೆಫಾನ ರಕ್ತಸಾಕ್ಷಿ + ಹಬ್ಬ = ಸ್ತೆಫಾನನ ರಕ್ತಸಾಕ್ಷಿ ಹಬ್ಬ

ಫ್ರಾನ್ಸಿಸ್ ಜೇವಿಯರ್ + ಹಬ್ಬ = ಫ್ರಾನ್ಸಿಸ್ ಜೇವಿಯರ್ ಹಬ್ಬ

ಕನ್ಯಾಮರಿಯ + ಸ್ವರ್ಗಾರೋಹಣ = ಕನ್ಯಾ ಮರಿಯರ ಸ್ವರ್ಗಾರೋಹಣ

ಕರ್ತರ + ಶರೀರ ಮತ್ತು ರಕ್ತ = ಕರ್ತರ ಶರೀರ ಮತ್ತು ರಕ್ತ

ಪರಮ + ತ್ರಿತ್ವ = ಪರಮತ್ರಿತ್ವ

ಕನ್ನಡ + ಕ್ರೈಸ್ತ ಪರಿಭಾಷೆ

ಶಿಶುಗಳ + ರಕ್ತಸಾಕ್ಷಿ = ಶಿಶುಗಳ ರಕ್ತಸಾಕ್ಷಿ

ಸಂತರ + ಮತಿಯಾಸರ್ = ಸಂತಮತಿಯಾಸರ್

ಪವಿತ್ರ + ಶಿಲುಬೆ = ಪವಿತ್ರ ಶಿಲುಬೆ

ಪೂಜ್ಯ + ಮರಿಯಮ್ಮ = ಪೂಜ್ಯ ಮರಿಯಮ್ಮ

ಸಂತರ ಸ್ಮರಣೆ

ಕ್ರೈಸ್ತರು ಧಾರ್ಮಿಕರ ವ್ಯವಸ್ಥೆಯಲ್ಲಿ ಅದರಲ್ಲಿ ವಿಶೇಷವಾಗಿ ಕೆಥೋಲಿಕ್ ಕ್ರೈಸ್ತರು ಈ ಸಂತರು ಎನ್ನುವ ಪದವನ್ನು ಹೆಚ್ಚಾಗಿ ಬಳಸುತ್ತಾರೆ. ಹಿಂದೂ ಧರ್ಮದ ಆಚರಣೆಗಳನ್ನು ಮತ್ತು ಪದಬಳಕೆಯನ್ನು ಮನ್ನಿಸಿ ಅವರಂತೆಯೇ ತಮ್ಮ ವಿಧಿ ವಿಧಾನಗಳಲ್ಲಿ ಬಳಸುವುದನ್ನು ಕಾಣುತ್ತೇವೆ. ಸಂತ ಎಂಬ ಕನ್ನಡ ಪದವನ್ನು ಕ್ರೈಸ್ತರು ಪಾದ್ರಿಗಳಿಗೆ ಅಥವಾ ಧರ್ಮಗುರುಗಳಿಗೆ ಅನ್ವಯಿಸಿ ಹೇಳುವುದನ್ನು ಗಮನಿಸಿ ಹೇಳುವುದಾಗಿದೆ. ಇಂತಹ ನೂರಾರು ಸಂತರ ಸ್ಮರಣೆಗಳನ್ನು ಕಾಣಬಹುದಾಗಿದೆ. ಅಂದರೆ ಕ್ರೈಸ್ತ ಪೂಜಾರಿಗಳ ಹೆಸರಿನ ಮೇಲೆ ಆಚರಣೆ, ಪ್ರಾರ್ಥನೆಗಳನ್ನು ಮಾಡುವುದನ್ನು ಸ್ಮರಣೆ ಎನ್ನುತ್ತಾರೆ. ಇಂತಹ ಸ್ಮರಣಾರ್ಥ ಕಾರ್ಯಗಳನ್ನು ಕೆಥೋಲಿಕ್ ಕ್ರೈಸ್ತ ಸಂಪ್ರದಾಯದಲ್ಲಿ ವಿಶೇಷವಾಗಿ ಕಾಣುತ್ತೇವೆ. ಅಂತಹ ಸಂತರ ಸ್ಮರಣೆಗಳನ್ನು ಮೂರು ರೀತಿಯಾಗಿ ವರ್ಗೀಕರಿಸಬಹುದು.

೧. ಪುರುಷ ಸಂತರ ಸ್ಮರಣೆ

ಅನ್ಸಗಾರ	ಜಾನ್‌ಯುದ್ಧ
ಅಂಟೋಣಿ	ಜಾನ್ ಕ್ರಿಸಾಸ್ಟಮ್
ಅತನಾಸಿಯಸ್	ಜಾನ ಡಮಿಸಿನ್ ಜೆರೂಮ
ಅಗಸ್ಟಿನ್	ಟೈಟಸ್
ಅಲೋಸಿಯಸ್ ಗೊಂಜಾಗ	ಡೊಮಿನಿಕ್
ಅಲ್ಬರ್ಟ್	ತಿಮೋತಿ

ಅಂದ್ರೇಯ
ಅಂಬ್ರೋಸ್
ಆನ್‌ಸೆಲ್ಮ್
ಇಸಿದೋರ್
ಎಫ್ರೆಮ್
ಕಮಿಲ್ಲಸ್
ಕಾಸಿಮೀರ
ಕೆಜೆಟನ್
ಕ್ಲೆಮಾಟ್ ೧
ಗಾಬ್ರಿಯೆಲ್
ಗ್ರೆಗೊರಿ ೨
ಚಾರ್ಲ್ಸ್ ಬೋರೋಮೆಯೊ
ಜನುವಾರಿಯಸ್
ಜಾನ್ ದೇವದಾಸ
ಜಾನ್ ಬ್ಯಾಪ್ಟಿಸ್ಟ್
ಜಾನ್ ಫಿಷ್
ಪೌಲಿನಸ್
ಪೀಟರ್
ಕ್ರಿಸೊಲಗಸ್
ಬೆನೆಡಿಕ್ಟ್
ಬೆರ್ನಾಡಿಸ್
ಬೇಸಿಲ್
ಬೊನವೆಂಚರ
ಮತ್ತಾಯ
ತುರೀಬಿಯುಸ್
ತೋಮಸ್
ತೋಮಸ್ ಬೆಕೆಟ್
ದಮಾಸ್ಕಸ್ ೧
ದಿಸೆಲ್ಸ್
ನಿಕೋಲಸ
ನಾರ್ಬರ್ಟ್
ಪಯಸ ೫
ಪಯುಸ್ ೧೧
ಪ್ಯಾಟ್ರಿಕ್
ಪೀಟರ್ ಕನಿಸಿಯುಸ್
ಫಿಲಿಪನೇರಿ
ಪೀಟರ್ ಡೆಮಿಯನ
ಫ್ರಾನ್ಸಿಸ್ ರೋಮ
ಫ್ರಾನ್ಸಿಸ್ –ಪೇತ್ರ
ಫ್ರಾನ್ಸಿಸ್–ಪೌಲ

ಮತಿಯೋಸ್

ಮಹಾಲಿಯೋ

ಮಾರ್ಟಿನ್

ಮಿಖಾಯೆಲ್

ಯೂದ

ರಫಾಯೆಲ್

ರೈಮಂಡ್

ಲಾರೆನ್ಸ್ ಬಿ

ಲಿಯೋನಾರ್ಡ

ಲೂಕ

ಲೂಯಿಸ್

ಸಿಲ್ವೆಸ್ತರ್ ೧

ಸೀಮೊನ

ಸ್ಟೀಫನ್

ಹಿಲರಿ

ಹೆನ್ರಿ

೨. ಸ್ತ್ರೀ ಸಂತರ ಸ್ಮರಣೆ

ಅನ್ನ ಕನ್ಯಕುಮಾರಿ

ಅಲಕೊಕ್

ಅಲ್ಫೊನ್ಸಾಮರಿಯ

ಆಗ್ನೆಸ್

ಆಂಜೆಲ್

ಎಲಿಸಬೆತ್

ಕತರೀನ್

ಲಿಗೊರಿ

ಲೂರ್ದುಮಾತೆ

ವಿಯಾನ್ನಿ

ಸಿರಿಲ್

ಸ್ಕೊಲಾಸ್ತಿಕ

ಹೆಡ್ವಿಗ್

ಕಾರ್ಮೆಲ್

ಕ್ಲಾರ್

ಜೊಕಿಮ್

ಜಾನ್ ಮರಿಯ

ಜೆತ್ರೂದ

ತೆರೆಸ

ದೇವಮಾತೆ ಮರಿಯ

ಫ್ರಾನ್ಸಿಸ್ ಶಂತಾಲ್

ಬ್ರಿಜಿಲ್

ಮರಿಯ ಮಗ್ದಲೇನ

ಮಾರ್ತರ

ಮೋನಿಕ

ಮಾರ್ಗರೇಟ ಮೇರಿ

೩. ರಕ್ತಸಾಕ್ಷಿ (ಪುರುಷ–ಸ್ತ್ರೀ) ಸಂತರ ಸ್ಮರಣೆ

ಅಖಿಲ್ಲೆಯುಸ್

ಆಗತ (ಕನ್ಯೆ)

ಆಗ್ನೆಸ್ (ಕನ್ಯೆ)

ಇರೆನೆಯುಸ್

ಇಗ್ನೇಸಿಯಸ್

ಐಸಕ್

ಕಾಸ್ಮಸ್ ಡೆಮಿಯನ್

ಕೊರ್ನೇಲಿಯಸ್

ಕೊಲುಂಬಾನ್

ಗಾರ್ಸಿಯ

ಫಾಬಿಯಾನ

ಫಿಲಿಸಿತಾಸ್

ಫಿದೇಲಿಸ್

ಪೊನ್ಸಿಯನ್

ಬ್ರಿಟ್ಟೋ

ಬ್ಲೇಸ್

ಬೊನಿಫಾಸ್

ಮರಿಯಾಗೊರೆತ್ತಿ (ಕನ್ಯೆ)

ಮಾರ್ಟಿನ್ ೧ ಮಾರ್ಸೆಲಿನಸ್

ಮೀಕಿ

ಗೊನ್ಸಾಲೋ

ಚಾರ್ಲ್ಸ್‌ಲುವಾಂಗ

ಜಸ್ಟಿನ್

ಜಾರ್ಜ್

ಜಾನ್ ೧

ಡೆನಿಸ್

ತಾಮಸ್‌ಮೋರ

ನಿರೆಯುಸ್

ಪೀಟರ್

ಪೆರ್ಪೆತುವ

ಲೂಸಿ (ಕನ್ಯೆ)

ವಿನ್ಸೆಂಟ್–ವೆನ್ಸೆಸ್‌ಲಾವುಸ್

ಸ್ಟಾನಿಸ್ಲಾಸ್

ಸಿಕ್‌ಸ್ತುಸ್

ಸಿಪ್ರಿಯನ್

ಈ ಮೇಲಿನ ಕ್ರೈಸ್ತ ಸಂತರ ಸ್ಮರಣೆಯಲ್ಲಿ ಬಳಕೆಯಾದ ಕನ್ನಡ ಭಾಷೆಯನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

ಕನ್ನಡ + ಕ್ರೈಸ್ತ ಪರಿಭಾಷೆ

ಸಂತ + ಅಂತೋನಿ

ಸಂತ + ಫಾಬಿಯಾನ

ಸಂತ + ಆಗ್ನೇಸ್

ಸಂತ + ವಿನ್ಸೆಂಟ್

ಸಂತ + ಆಗತ

ಸನ್ಯಾಸಿ + ಫ್ರಾನ್ಸಿಸ್

ಧರ್ಮಾಧ್ಯಕ್ಷ + ಮೆಥೋಡಿಯಸ್

ರಕ್ತಸಾಕ್ಷಿ + ಜಾರ್ಜ್

ಸಂತ + ಜೋಸೆಫ್

ಸಂತ + ಹೆನ್ರಿ

ಸಂತ + ಪಯಾಸ್

ಪರಿಶುದ್ಧ + ಕನ್ಯಾಮರಿಯ

ಸಂತ + ಗ್ರೆಗೋರಿ

ಕ್ರೈಸ್ತ ಪರಿಭಾಷೆ + ಕನ್ನಡ

ಸಿಲ್ವೆಸ್ತರ್ + ಜಗದ್ಗುರು

ತೊಮಾಸ್ ಬೆಕೆಟ್ + ಧರ್ಮಾಧ್ಯಕ್ಷ

ಲೂಸಿ ಕನ್ಯೆ + ಸ್ಮರಣೆ

ಶಾಂತಾಲ್ + ಸನ್ಯಾಸಿನಿ

ಕನಿಸಿಯುಸ್ + ಧರ್ಮಗುರು

ದಮಾಸ್ಕಸ್ + ಧರ್ಮಗುರು

ಅಂದ್ರೆಯ + ಹಬ್ಬ

ಮಾರ್ಗರೆಟ್ + ಸಂತ

ಶಿಲುಬೆಯ + ಸಂತ

ಕಲಿಸ್ತಸ್ + ಜಗದ್ಗುರು

ಹೆಡ್ವಿಗ್ + ಸನ್ಯಾಸಿನಿ

ಇಗ್ನೇಸಿಯಸ್ + ರಕ್ತಸಾಕ್ಷಿ

ಬ್ರೂನೋ + ಧರ್ಮಗುರು

ಜಪಮಾಲೆಯ ರಾಣಿ + ಹಬ್ಬ

ಜನುವಾರಿಯಸ್ + ಧರ್ಮಾಧ್ಯಕ್ಷ

ಅಂತೋನಿ + ಮಠಾಧಿಪತಿ

ಆಂಜಲ್ + ಕನ್ಯೆ

ಗಾರ್ಸಿಯ + ರಕ್ತಸಾಕ್ಷಿ

ಪೊಲಿಕಾರ್ಪ + ರಕ್ತಸಾಕ್ಷಿ ಸ್ಮರಣೆ

ಬೆರ್ನಾಡ್ + ಮಠಾಧಿಪತಿ

ಯುದ್ಸ್ + ಧರ್ಮಗುರು

ಯೋವಾನ್ನರ + ಸ್ಮರಣೆ

ಕಲಸಾನ್ಸ್ + ಧರ್ಮಗುರು

ಬ್ರಿಜಿತ್ + ಸನ್ಯಾಸಿನಿ

ಕ್ರಿಸೋಲಗಸ್ + ಧರ್ಮಪಂಡಿತ

ಮರಿಯ ಮಗ್ದಲೇನ + ಸ್ಮರಣೆ

ಫ್ರಾನ್ಸಿಸ್ + ವನಪ್ರಸ್ಥ

ನಿರೆಯುಸ್ ಅಖಿಲ್ಲೆಯುಸ್ + ರಕ್ತಸಾಕ್ಷಿ

ಹೀಗೆ ಕೆಥೋಲಿಕ್ ಕ್ರೈಸ್ತರ ಸಮುದಾಯಿಕ ಆಚರಣೆಗಳಲ್ಲಿ ಕನ್ನಡ ಮತ್ತು ಕ್ರೈಸ್ತರ ಪರಿಭಾಷೆಯನ್ನು ಮಿಶ್ರಣ ಮಾಡಿ ಸಂಬೋಧಿಸುವಂತಹ ಶಬ್ದಭಂಡಾರವನ್ನು ಗಮನಿಸಬಹುದಾಗಿದೆ. ಹಾಗೆಯೇ ಈ ಮೇಲಿನ ಹಬ್ಬ, ಮಹೋತ್ಸವ, ಸ್ಮರಣೆಗಳಲ್ಲಿ ಕೆಲವು ಆಯ್ದ ಆಚರಣೆಗಳನ್ನು ಗಮನಿಸುವುದಾದರೆ ಅಲ್ಲಿನ ಭಾಷಾ ಬಳಕೆಯನ್ನು ಹೀಗೆ ವಿವರಿಸಬಹುದಾಗಿದೆ.

ದೇವಮಾತೆ ಮರಿಯಮ್ಮನವರ ಮಹೋತ್ಸವ

ದೇವಮಾತೆ (ಕನ್ನಡ) + ಮರಿಯಮ್ಮನವರ (ಕ್ರೈಸ್ತ ಪರಿಭಾಷೆ) + ಮಹೋತ್ಸವ (ಕನ್ನಡ) ಎಂದು ವರ್ಗೀಕರಿಸಿ ಹೇಳುತ್ತಾ ಮರಿಯಮ್ಮ ಅಥವಾ ಮೇರಿ ಅಥವಾ ಕನ್ಯಾಮೇರಿಯಮ್ಮ ಎಂದು ಹಲವು ಹೆಸರುಗಳಿಂದ ಕರೆಯುವುದುಂಟು. ಕ್ರಿಸ್ತನಿಗೆ (ಜನ್ಮಕ್ಕೆ) ಜನ್ಮ ನೀಡಿದವರ ಪ್ರಯುಕ್ತ ಅಂದರೆ ಯಾವುದೇ ಪುರುಷನ ಸಂಗವಿಲ್ಲದೆ ದೈವಸಂಭೂತನಿಂದ ಯೇಸುವಿಗೆ ಜನ್ಮ ನೀಡಿ ಕೊಟ್ಟಿದ್ದಾಳೆ ಎಂದು ಬೈಬಲಿನಲ್ಲಿ ಉಲ್ಲೇಖಿತವಾಗಿದೆ. ಕಾರಣ ಆಕೆಯನ್ನು ದೇವಸಂಬೂತೆ ದೇವಮಾತೆ ದೇವರಿಗೆ ಜನ್ಮ ನೀಡಿದ ಫಲವಾಗಿ ದೇವಮಾತೆಯೆಂದು ವರ್ಷದ ಜನವರಿಯ ಮೊದಲನೆ ದಿನದಂದೇ ಕನ್ಯಾಕುಮಾರಿಯಮ್ಮನವರ ಮಹೋತ್ಸವ ಎಂದು ಆಚರಿಸುತ್ತದೆ.

ಸಂತ ಆಗತ ಕನ್ಯೆ ಮತ್ತು ರಕ್ತಸಾಕ್ಷಿ ಸ್ಮರಣೆ

ಕ್ರೈಸ್ತ ಸನ್ಯಾಸಿನಿಯಾದ ಆಗತ ಸ್ತ್ರೀ ಎಂಬಾಕೆಯು ಒಬ್ಬ ಕನ್ಯೆಯಾಗಿದ್ದು, ದೇವರನ್ನು ಸಂಪೂರ್ಣ ನಂಬಿಕೊಂಡಿದ್ದರಿಂದ 'ಸಂತರು' ಎಂದು ಬಿರುದಾವಳಿಯನ್ನು ಪಡೆದಿರುತ್ತಾರೆ. ಅಷ್ಟೇ ಅಲ್ಲದೆ ಕನ್ಯಾಮರಿಯಮ್ಮನವರೋಪಾದಿಯಲ್ಲಿ ಯಾವುದೇ ಪರಪುರುಷನ ಸಂಗವಿಲ್ಲದೆ ಬದುಕುವವರಾಗಿರುತ್ತಾರೆ. ಇಂತಹ ಸ್ತ್ರೀಯನ್ನು ಸಂತರ ಕನ್ಯೆ ಎಂದು ಕರೆಯುತ್ತಾರೆ. ಇವರು ಕ್ರಿಸ್ತನ ಸಲುವಾಗಿ ರಕ್ತವನ್ನು ಸುರಿಸಿದ್ದಾರೆ. ಅಂದರೆ ಜೀವಂತ ಹತ್ಯೆಗೆ ಒಳಗಾಗಿದ್ದಾರೆ ಎಂದು ಅವರನ್ನು ದೇವರಿಗೆ ಸಾಕ್ಷಿಯಾಗಿ ನಿಲ್ಲಿಸುತ್ತಾರೆ. ಅದುವೇ 'ರಕ್ತಸಾಕ್ಷಿ' ಕ್ರಿಸ್ತನ ಸಲುವಾಗಿ ಅನೇಕ ವಿಶ್ವಾಸಿಗಳು ಪ್ರಾಣವನ್ನೇ ಅರ್ಪಿಸುತ್ತಾರೆ. ಅಂತಹವರಲ್ಲಿ ಸ್ತ್ರೀ ಒಬ್ಬರು. ಆದ್ದರಿಂದ ಇವರ ರಕ್ತಸಾಕ್ಷಿ

ಕನ್ಯೆಯ ಸ್ಮರಣೆ ಮಾಡುವುದು ಕ್ರೈಸ್ತ ಆಚರಣೆಗಳಲ್ಲಿ ಒಂದಾಗಿದೆ. ಈಕೆಯ ಸ್ಮರಣೆಯನ್ನು ಪ್ರತೀ ವರ್ಷ ಫೆಬ್ರವರಿ ೫ರಂದು ಮಾಡುತ್ತಾರೆ.

ಸಂತ ಮಾರ್ಕ್ ಶುಭ ಸಂದೇಶಕರ ಹಬ್ಬ

ಯೇಸುಕ್ರಿಸ್ತನ ತಾಯಿ ತರುವಾಯ ಅಂದರೆ ಕ್ರಿಸ್ತನ ಮರಣದ ನಂತರ ಕ್ರಿಸ್ತನೇ ಲೋಕದ ಕಟ್ಟ ಕಡೆಯವನಿಗೆ ಸುವಾರ್ತೆ ಸಾರಿರಿ ಎಂದು ಹೇಳಿರುವ ಹಾಗೆಯೇ ಸಂತ ಮಾರ್ಕನು ದೈವಸಂಭೂತನಾಗಿ ಕ್ರಿಸ್ತನ ಜೀವನ, ಮರಣ, ಸಾಧನೆ, ಪ್ರೀತಿ, ಅದ್ಭುತಕಾರ್ಯ ಮತ್ತು ಪುನರುತ್ಥಾನದ ವಿಷಯಗಳನ್ನು ಬರೆಯುತ್ತಾನೆ. ಎಲ್ಲರಂತೆ ಈತನ ಬರವಣಿಗೆಯಿಂದ ಯೇಸುಕ್ರಿಸ್ತನ ಬಗ್ಗೆ ತಿಳಿಯುವಲ್ಲಿ ಸಹಾಯಕವಾಗಿದೆ ಎಂದು ಕೆಥೋಲಿಕ್ ಕ್ರೈಸ್ತರು ಮಾರ್ಕ ಎಂಬ ಶುಭ ಸಂದೇಶಕರ ಹಬ್ಬವನ್ನು ಏಪ್ರಿಲ್ ೨೫ರಂದು ಆಚರಿಸುತ್ತಾರೆ.

ಸಂತ ರೋಮುವಾಲ್ಡ್ ಮಠಾಧಿಪತಿ

ಕೆಥೋಲಿಕ್ ಕ್ರೈಸ್ಥರು ಚರ್ಚ ಅಥವಾ ದೇವಾಲಯವನ್ನು ಒಂದು ಮಠಕ್ಕೆ ಹೋಲಿಸುತ್ತಾರೆ. ಹಾಗಾಗಿ ರೋಮುವಾಲ್ಡ್ ಎಂಬುವವರನ್ನು ಮಠಾಧಿಪತಿ ಎಂದು ಸಂಬೋಧಿಸುತ್ತಾರೆ. ಇಲ್ಲಿ ಕನ್ನಡ ಮತ್ತು ಕ್ರೈಸ್ತ ಪರಿಭಾಷೆಯ ಪದ ಮಿಶ್ರಿತವನ್ನು ಕಾಣಬಹುದಾಗಿದೆ. ಉದಾ. ಸಂತ + ರೋಮುವಾಲ್ಡ್ + ಮಠಾಧಿಪತಿ. ಈ ಆಚರಣೆಯನ್ನು ಜೂನ್ ೧೯ರಂದು ಆಚರಿಸುತ್ತಾರೆ.

ಪವಿತ್ರ ಶಿಲುಬೆಯ ಹಬ್ಬ

ಯೇಸುಕ್ರಿಸ್ತನು ಮರಣದಂಡನೆಗೆ ಒಳಗಾಗಿ ಶಿಲುಬೆಯನ್ನು ಕಲ್ವರಿ ಗುಡ್ಡಕ್ಕೆ ಹೊತ್ತುಕೊಂಡು ಹೋಗಿ ತನ್ನ ಪ್ರಾಣವನ್ನು ಕೊಟ್ಟಿರುವ ಸ್ಮರಣಾರ್ಥವಾಗಿ ಈ ಶಿಲುಬೆ ಹಬ್ಬವೆಂದು ಸೆಪ್ಟಂಬರ್ ೧೪ರಂದು ಆಚರಿಸುತ್ತಾರೆ. ಪ್ರಸ್ತುತ ಆಚರಣೆಗಳಲ್ಲಿ ಈ ಹಬ್ಬ ವಿಶೇಷವಾಗಿ ಕಂಡುಬರುತ್ತದೆ. ಇದನ್ನು ಶಿಲುಬೆಹಾದಿ ಹಬ್ಬ ಎಂತಲೂ ಕರೆಯುತ್ತಾರೆ. ಶಿಲುಬೆಹಾದಿ ಎಂದರೆ ಕ್ರಿಸ್ತನು ಶಿಲುಬೆಯನ್ನು ಹೋರುವಾಗ ಅಲ್ಲಲ್ಲಿ ನಿಲ್ಲುವ ಸ್ಥಳಗಳನ್ನು ಅಥವಾ ದೃಶ್ಯಾವಳಿಗಳನ್ನು ಶಿಲುಬೆಹಾದಿ ಎನ್ನುವರು. ಈ ಎಲ್ಲಾ ದೃಶ್ಯಗಳು ಚರ್ಚ್‌ನ ಒಳಗೋಡೆಯಲ್ಲಿ, ಒಳಗೋಡೆಯ ಸುತ್ತಲೂ ಕಾಣಬಹುದಾಗಿದೆ.

ಹೀಗೆ ಕೆಥೋಲಿಕ್ ಕ್ರೈಸ್ತರು ವರ್ಷಪೂರ್ತಿಯಾಗಿ, ತಿಂಗಳಾನುಸಾರವಾಗಿ ಸುಮಾರು ೨೫೦ ಸ್ತ್ರೀ-ಪುರುಷ ಸಂತರ ಹೆಸರಿನಲ್ಲಿ ಕ್ರಿಸ್ತನ ಹಾಗೂ ಕನ್ಯೆ ಮರಿಯಮ್ಮನವರ ನಾಮದಲ್ಲಿ ಸಮುದಾಯಿಕ ಆಚರಣೆಗಳನ್ನು ಮಾಡುತ್ತಾರೆ ಎಂದು ಗಮನಿಸಲಾಗಿದೆ.

❖❖❖

ಅಧ್ಯಾಯ : ಐದು

ಕ್ರೈಸ್ತ ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪದಕೋಶ ಮತ್ತು ಪರಿಭಾಷೆ

ಅಧ್ಯಾಯ: ಐದು

ಕ್ರೈಸ್ತ ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪದಕೋಶ ಮತ್ತು ಪರಿಭಾಷೆ

ಸಾಹಿತ್ಯ ಮತ್ತು ಸಂಸ್ಕೃತಿ ಎಂಬುದು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇವು ಪರಸ್ಪರ ಅವಲಂಬಿತವಾಗಿರುತ್ತವೆ. ಸಾಹಿತ್ಯದಿಂದ ಸಂಸ್ಕೃತಿಯನ್ನು ಅರಿಯಬಹುದು. ಸಂಸ್ಕೃತಿಯಿಂದ ಸಾಹಿತ್ಯವನ್ನು ಕಟ್ಟಬಹುದು. ಉದಾ. ಹೆಚ್.ಎಸ್. ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಕೃತಿಯನ್ನು ಹೇಳಬಹುದು. ಹೀಗೆ 'ಸಾಹಿತ್ಯ ಸಂಸ್ಕೃತಿ'ಯು ಒಂದು ಭಾಷೆ, ಧರ್ಮ ಸಮಾಜಕ್ಕೆ ಸೀಮಿತವಾಗಿರುವುದಿಲ್ಲ. ಇವು ಸರ್ವ ಭಾಷೆ, ಧರ್ಮ, ಜನಾಂಗದಲ್ಲಿಯೂ ತಮ್ಮದೇ ಸ್ವರೂಪದಲ್ಲಿ ನೆಲೆಯನ್ನು ಕಂಡುಕೊಂಡಿರುತ್ತದೆ. ಇಂತಹ ಸಾಹಿತ್ಯ ಮತ್ತು ಸಂಸ್ಕೃತಿ ನಮ್ಮ ನಾಡಿನ ಕನ್ನಡ ಭಾಷೆಯಲ್ಲಿಯೂ ಸುದೀರ್ಘವಾಗಿರುವ ಬೆಳವಣಿಗೆಯನ್ನು ಕಂಡಿದೆ. ಕನ್ನಡ ನುಡಿ ಅನೇಕ ಕಾವ್ಯ ಕೃತಿ ಸಂಪಾದನೆ, ವಿಮರ್ಶೆ, ಅನುವಾದ, ಪ್ರಬಂಧ ಹೀಗೆ ಹಲವು ರೂಪಗಳಲ್ಲಿ ವಿಶಾಲವಾಗಿ ಬೆಳೆದಿದೆ, ಬೆಳೆಯುತ್ತಲೇ ಇರುವುದು ಎಲ್ಲರಿಗೂ ತಿಳಿದಿರುವ ಸಂಗತಿ.

ಒಂದು ಭಾಷೆಗೆ ಯಾವುದೇ ಮಡಿ ಮೈಲಿಗೆಯಂತ ಭಾವ ಇರಕೂಡದು, ಇರುವುದಿಲ್ಲ. ಹಾಗೆಯೇ ಕನ್ನಡ ಭಾಷೆಯು ಸಹಿತ ಅನೇಕ ಬೇರೆ ಬೇರೆ ಭಾಷೆ ಸಂಸ್ಕೃತಿಗಳ ವಿಚಾರಗಳನ್ನು ಅನುಕರಿಸುವುದು, ವಿಮರ್ಶಿಸುವುದು, ಅನುವಾದಿಸುವುದು ಒಂದು ಒಳ್ಳೆಯ ವಿಚಾರವೇ ಆಗಿದೆ. ಅಂತಹ ಅನುವಾದಗಳಲ್ಲಿ ವಿಶೇಷವಾಗಿ ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನು ಅನುವಾದಿಸಿರುವುದು ಪ್ರಮುಖವಾಗಿದೆ. ಪಾಶ್ಚಿಮಾತ್ಯ ವಿದ್ವಾಂಸರುಗಳು ಮೊದಲಿಗೆ ಕನ್ನಡ ನುಡಿಯನ್ನು ಕಲಿತು ಅನುವಾದಿಸಿದರು. ತರುವಾಯ ಸ್ಥಳೀಯ ಕ್ರೈಸ್ತ ವಿದ್ವಾಂಸರುಗಳು ಹಾಗೂ ಅನ್ಯ ವಿದ್ವಾಂಸರು ಸಹಿತ ಕ್ರೈಸ್ತ ಸಾಹಿತ್ಯ ಸಂಸ್ಕೃತಿಯ ಅಂಗಗಳನ್ನು ಅನುವಾದ, ರೂಪಾಂತರ, ಭಾಷಾಂತರ ಮಾಡಿರುವುದು ವಿಶೇಷವಾಗಿದೆ. ಅಲ್ಲದೆ ಸಾಹಿತ್ಯಿಕ ಅಂಶಗಳನ್ನು ಕೂಡ ಕನ್ನಡ ಅನುಕರಿಸಿಕೊಂಡು ಪ್ರಸ್ತುತ ಹೆಮ್ಮರವಾಗಿ ಬೆಳೆದಿದೆ ಎನ್ನಬಹುದು. ಎಲ್ಲ ಭಾಷೆಗಳೂ ಎಲ್ಲಾ ಭಾಷೆಗಳಿಂದ ಪರಸ್ಪರ ಲೇವಾದೇವಿ ವ್ಯವಸ್ಥೆಯನ್ನು ಪಾಲಿಸಿವೆ, ಪಾಲಿಸುತ್ತದೆ ಎನ್ನಬಹುದು. ಹೀಗೆ ೧೭ನೇ ಶತಮಾನದಿಂದ ಕ್ರೈಸ್ತ ಧಾರ್ಮಿಕ ಸಾಹಿತ್ಯ ಕನ್ನಡಕ್ಕೆ ಪ್ರವೇಶಿಸಿ ಇದು ಬಹಳ ವಿಶಾಲವಾಗಿ ಹಲವು ಧಾರ್ಮಿಕ

ಕೃತಿಗಳನ್ನು ಮತ್ತು ಸಂಸ್ಕೃತಿಯ ವಿಚಾರಗಳನ್ನು ಹೊಂದಿದೆ ಎಂದು ಹೇಳಬಹುದು. ಇಂತಹ ಕ್ರೈಸ್ತ ಸಾಹಿತ್ಯ ಸಂಸ್ಕೃತಿಯಲ್ಲಿ ಕಂಡುಬರುವ ಭಾಷಿಕ ಅಂಶಗಳು ಎಂದರೆ ಪಾರಿಭಾಷಿಕ ಪದಗಳನ್ನು ಗಣನೀಯವಾಗಿ ಗಮನಿಸಲಾಗಿದೆ. ಅವುಗಳನ್ನು ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಪರಿಭಾಷೆಯಾಗಿ ಹೊಸ ಹೊಸ ಪದಗಳಾಗಿ ಕಾಣಬಹುದಾಗಿದೆ. ಅಂತಹ ಪದಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿ ವಿವರಿಸಲಾಗಿದೆ.

೫.೧. ಸಾಹಿತ್ಯ ಮತ್ತು ಸಾಂಸ್ಕೃತಿಕ ಪದಕೋಶ

ಪ್ರಸ್ತುತ ಕ್ರೈಸ್ತ ಸಮುದಾಯದ ಸಾಹಿತ್ಯದಲ್ಲಿ ಕಂಡುಬರುವ ಪ್ರಮುಖ ಕ್ರೈಸ್ತ ಧರ್ಮ ಗ್ರಂಥ ಸತ್ಯವೇದವು ಹಾಗೂ ಪೂರಕವಾಗಿರುವ ಧಾರ್ಮಿಕ ಗ್ರಂಥ ಕೃತಿಗಳಲ್ಲಿ ಬಳಕೆಯಾಗಿರುವ ವಿಶೇಷ ಪದಗಳನ್ನು ಗುರ್ತಿಸಲಾಗಿದೆ. ಹಾಗೆಯೇ ಸಾಂಸ್ಕೃತಿಕವಾಗಿಯೂ ಆಚರಣೆಗಳಲ್ಲಿ ಉಪಯೋಗಿಸುವ ಉಪದೇಶ, ಹಾಡು, ನಂಬಿಕೆ, ಸಂಪ್ರದಾಯಗಳಲ್ಲಿ ಬಳಕೆಯಾಗುವ ಭಾಷೆಯನ್ನು ಪದಗಳಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ ಅವುಗಳ ಪರಿಭಾಷೆಯನ್ನು ಕುರಿತು ವಿವರಿಸಲಾಗಿದೆ. ಅಂತಹ ಕನ್ನಡ ಕ್ರೈಸ್ತ ಸಮುದಾಯದ ಪದಗಳನ್ನು ಹೀಗೆ ವರ್ಗೀಕರಿಸಲಾಗಿದೆ.

ವಸ್ತುವಾಚಕ ಪದಗಳು

ಈಟಿ	ಕರ್ತನ ಮೇಜು
ಕಾಣಿಕೆ	ಚೀಲ
ಜಪಸರ	ತಾಳ (ಜಲ್ಲರಿ)
ದ್ರಾಕ್ಷಾರಸ ತಟ್ಟೆ	ಪ್ರಾರ್ಥನಾ ಬಟ್ಟೆ
ಬಲಿಪೀಠ	ಮೇಣದ ಬತ್ತಿ
ವಾದ್ಯಮೇಳ	ಸತ್ಯವೇದದ ರಕ್ಷಾಕವಚ
ಶಿಲುಬೆ	ನೋಹನನಾವೆ
ಮುಳ್ಳಿನ ಕಿರೀಟ	ವಾಕ್ಯಸಂಗೀತ
ಸೂಚನಾ ಫಲಕ	ಧೂಮ್ರರಕ್ತ ನೀಲವರ್ಣ
ಧೂಪ ಚಿನ್ನರಕ್ತ ಬೋಳ	ನಾರುಬಟ್ಟೆ
ಧೂಮ್ರಾಸ್ತ್ರ	ನಾರುಮುಡಿ
ಝುಲ್ಲರಿ (ತಾಳ)	ಪ್ರೇಯರ್ ಸ್ಕಾರ್ಫ್
ಕಾಣಿಕೆ ಪೆಟ್ಟಿಗೆ	ಕಲ್ವರಿ ಕ್ರೂಜೆ

ಹಿಸ್ಸೊಪ

ಹಿಸ್ಸೊಪಹುಲ್ಲು

ಪಾನಪಾತ್ರೆ

ಧರ್ಮಕ್ಕೆ ಸಂಬಂಧಿಸಿದ ಪದಗಳು

ಕನ್ಯೆ ಮರಿಯ

ಕ್ರೈಸ್ತರ್ಷಿ (ಕ್ರೈಸ್ತತ್ವ)

ಕ್ರೈಸ್ತ ವಿಚಾರಣೆ (ಕೆಥೋಲಿಕ್)

ಗರ್ಭಫಲ

ಚರ್ಚ್

ಡೀಕನ

ಧರ್ಮೋಪದೇಶ

ದೇವದೂತ (ದಾಸ)

ಪ್ರವಾದಿ

ಪಾಪದ ಸಂಬಳ

ಯಾಜಕ

ಸಾಮ್ಯ

ಸೂಚಕಕಾರ್ಯ

ಹಳೆ ಒಡಂಬಡಿಕೆ

ಹೊಸನ್ನ

ಹೊಸ ಒಡಂಬಡಿಕೆ

ಸುವಾರ್ತ ಕೂಟ

ಪ್ರಥಮ ಫಲ

ಪ್ರಸಂಗ

ಯೇಸು ಸಭೆ

ಕ್ರೈಸ್ತ ಸನ್ಯಾಸಿ

ಕ್ರೈಸ್ತ ವಿಚಾರಣೆ

ಬೈಬಲ್

ಬೈಬಲ್ ಮಿಷನ್

ಆಮೆನ್

ಆಚರಣೆಗೆ ಸಂಬಂಧಿಸಿದ ಪದಗಳು

ಈಸ್ಟರ್

ಉಜ್ಜೀವನಕೂಟ

ಕರ್ತನ ರಾತ್ರಿ ಭೋಜನ

ಕ್ರಿಸ್‌ಮಸ್ (ತಾತಾ) ಕ್ಯಾರಲ್

ಖಾನೇಷುಮಾರಿ

ತಂದೆ ಮಗ ಪರಿಶುದ್ಧಾತ್ಮ

ದ್ರಾಕ್ಷಾರಸ

ದೀಕ್ಷಾಸ್ನಾನ

ದೃಢೀಕರಣ

ಪಸ್ಕಹಬ್ಬ

ಪಿತ ಸುತ ಪವಿತ್ರಾತ್ಮ

ಶ್ರಮ ಮರಣ ದಿನ

ಕ್ರಿಸ್ತನ ಪುನರುತ್ಥಾನ

ಯೇಸುವಿಗೆ ಸಂಬಂಧಿಸಿದ ಸಂಬೋಧನೆಗಳು

ಕ್ರಿಸ್ತ	ಪವಿತ್ರಾತ್ಮ
ಯೇಸುಕ್ರಿಸ್ತ	ಪರಿಶುದ್ಧಾತ್ಮ
ಕರ್ತ	ಜೀಸಸ್
ಯೇಸುಕರ್ತ	ಇಮ್ಮಾನುವೇಲ
ಕುಂಬಾರ	ಕುರುಬ
ಮಸ್ಸೀಯ (ದೇವರು)	ರಬ್ಬಿ (ಗುರು)
ಅದ್ಭುತ ಸ್ವರೂಪನು	ಆಲೋಚನಾಕರ್ತ
ನಿತ್ಯನಾದ ತಂದೆ	ಸಮಾಧಾನದ ಪ್ರಭು
ಪರಾಕ್ರಮಿಯಾದ ದೇವರು	ತ್ರಯಕ ದೇವರು
ತಂದೆ ಮಗ ಪರಿಶುದ್ಧಾತ್ಮ	ಪಿತ ಸುತ ಪವಿತ್ರಾತ್ಮ
ರಾಫ (ಆರೋಗ್ಯದಾಯಕ)	ನಿಸ್ಸೀಮ (ಜಯ ನೀಡುವವ)
ಎಲ್‌ರೋಹಿ (ಸೃಷ್ಟಿಕರ್ತ)	ಯೀರೆ (ಒದಗಿಸುವಾತನು)
ಶಮ್ಮ (ಇರುವಾತನು)	ಎಲಿಯೋನ – ಉನ್ನತದೇವರೆ
ಶಾಲೋಂ ಸಮಾಧಾನ	ರೂಹಾ (ಒಳ್ಳೆಯ ಕುರುಬ)
ಏಲ್–ದೇವರು	ನರಪುತ್ರ (ಯೇಸು)
ಮನುಷ್ಯಕುಮಾರ (ಯೇಸು)	ಎಲ್‌ಷಡಾಯ (ಸರ್ವಶಕ್ತ ದೇವರು)

೫.೨. ಅನ್ಯ ದೇಶೀಯ ಪದಗಳು

ಕನ್ನಡ ಸಾಹಿತ್ಯದಲ್ಲಿ ಅನ್ಯ ದೇಶೀಯ ಪದಗಳನ್ನು ಗಮನಿಸುವಾಗ ನಾವು ಸಾಮಾನ್ಯವಾಗಿ ಪೋರ್ಚುಗೀಸ್, ಅರೇಬಿಕ್, ಪರ್ಷಿಯನ್, ಹಿಂದಿ, ಉರ್ದು, ಇಂಗ್ಲೀಷ್ ಎಂದು ವಿಭಾಗಿಸಿ ಅಧ್ಯಯನ ಮಾಡುತ್ತೇವೆ. ಹಾಗೆಯೇ ಕ್ರೈಸ್ತ ಸಮುದಾಯದ ಕನ್ನಡ ಬೈಬಲ್‌ನಲ್ಲಿಯೂ ಹಲವಾರು ಅನ್ಯ ದೇಶೀಯ ಪದಗಳು, ವಾಕ್ಯಗಳು ಕಂಡುಬರುವುದುಂಟು. ಅವುಗಳು ನಮ್ಮ ಕನ್ನಡಕ್ಕೆ ಹೊಸದಾಗಿ ಸೇರ್ಪಡೆಯಾಗುತ್ತವೆ. ಅವುಗಳ ಅರ್ಥ, ಸ್ವರೂಪ, ಬಳಕೆಯನ್ನು ಈ ಕೆಳಗಿನಂತೆ ವರ್ಗೀಕರಿಸಿ ವಿವರಿಸಲಾಗಿದೆ.

ಇಬ್ರಿಯ ಪದಗಳು

ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ವಿಶೇಷವಾಗಿ ಬೈಬಲ್ ಗ್ರಂಥವನ್ನು ಗಮನಿಸಿದಾಗ ಇಬ್ರಿಯ ಪದಗಳು ಕಂಡುಬಂದಿವೆ. ಯಾಕೆಂದರೆ ಕ್ರೈಸ್ತ ಮೂಲ ಧರ್ಮ ಗ್ರಂಥ ರಚನೆಯಾಗುವಲ್ಲಿ ಮುಖ್ಯವಾಗಿ ಎರಡು ವಿಧಗಳಲ್ಲಿ ಅಂದರೆ ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎಂದು ಬರವಣಿಗೆಯಾಗಿದೆ. ಹೀಗೆ ಬರವಣಿಗೆಗೊಂಡ ಮೊದಲ ಒಡಂಬಡಿಕೆ ಹಳೆ ಒಡಂಬಡಿಕೆ ಎಂದು ಕರೆಯಲ್ಪಡುತ್ತದೆ. ಕ್ರಿಸ್ತಪೂರ್ವದ ಒಡಂಬಡಿಕೆಯೆಂದೂ ಕರೆಯಬಹುದು. ಈ ಹಳೆ ಒಡಂಬಡಿಕೆ ಅಲ್ಲಿನ ಮೂಲ ಭಾಷೆಯಾದ ಇಬ್ರಿಯ ಭಾಷೆಯಲ್ಲೇ ರಚನೆಯಾಗಿದೆ. ಅದನ್ನು ಕಾಲಾಂತರದಲ್ಲಿ ನಮ್ಮ ಕನ್ನಡ ಭಾಷೆಗೆ ಅನುವಾದ ಮಾಡುವಾಗ ಜಾನ್ ಹ್ಯಾಂಡ್ಸ್ ಮತ್ತು ವಿಲಿಯಂ ರೀಟ್ ಪಾಶ್ಚಿಮಾತ್ಯ ಕ್ರೈಸ್ತ ಮಿಶನರಿಗಳು ಸ್ಥಳನಾಮ, ವ್ಯಕ್ತಿನಾಮ ಹಾಗೂ ಕೆಲವು ಸಂದರ್ಭದ ಪದಗಳನ್ನು ಮೂಲ ಇಬ್ರಿಯ ಉಚ್ಚಾರಣೆಗಳನ್ನೇ ಬಳಸಿ ಅನುವಾದಿಸಿದ್ದಾರೆ. ಲಿಪಿ ಮಾತ್ರ ಕನ್ನಡವಾಗಿದ್ದು ಧ್ವನಿ ಮೂಲ ಭಾಷೆಯದ್ದೇ ಆಗಿರುತ್ತದೆ. ಹಾಗಾಗಿ ಪ್ರಸ್ತುತ ನಮ್ಮ ಕನ್ನಡದಲ್ಲಿ ರಚನೆಯಾದ ಕ್ರೈಸ್ತ ಧರ್ಮಗ್ರಂಥ ಬೈಬಲ್‌ನಲ್ಲಿ (ಸತ್ಯವೇದವು) ಇಬ್ರಿಯ ಪದಗಳನ್ನು ಗುರ್ತಿಸಲಾಗಿದೆ. ಜೊತೆಗೆ ಅವುಗಳು ಉಲ್ಲೇಖಗೊಂಡಿರುವುದನ್ನು ಸಹಿತ ಗ್ರಹಿಸಲಾಗಿದೆ. ಅವುಗಳನ್ನು ಈ ಕೆಳಕಂಡಂತೆ ಹೆಸರಿಸಲಾಗಿದೆ.

ಪದ	ಅರ್ಥ	ಬಳಕೆ
ಅಲ್ಲೋನ ಬಾಕೂತ್	ಗೋಳಾಟದ ಮರ	ಆದಿಕಾಂಡ ೩೫:೮
ಅಲ್ಮೋನ್	ಯಾರ್ದನ್‌ಹೊಳೆಯಾಚೆ	ಆದಿಕಾಂಡ ೩೩:೪೭
ಆಕೋರಿನ	ಆಪತ್ತಿನ	ಯಹೋಶುವ ೭:೨೪
ಎಬಿನೇಜರ	ಸಹಾಯಶಿಲೆ	೧ನೇ ಸಮುವೇದ ೭:೧೩
ಏಲ್	ದೇವರು	ಆದಿಕಾಂಡ ೩೫:೭
ಪೆನಿಯೇಲ್	ದೇವರದರ್ಶನ	ವಿಮೋಚನ ಕಾಂಡ ೩೩:೨೦
ಪೆರೆಚ್	ಬೇದಿಸುವಿಕೆ	ಆದಿಕಾಂಡ ೨೮:೪೦
ಬೇತೆಲ್	ದೇವರಮನೆ	ಆದಿಕಾಂಡ ೨೮:೧೯
ಬೇನೋನಿ	ನನ್ನ ದುಃಖದ ಮಗ	ಆದಿಕಾಂಡ ೩೫:೧೮
ಮಗ್ದಲ್ಏದರ್	ಹಿಂಡನ್ನು ಕಾಯುವುದು	ಆದಿಕಾಂಡ ೩೫:೨೧
ಮಹನಯಿಮ	ಎರಡು ಪಾಳೆಯಗಳು	ಆದಿಕಾಂಡ ೩೨:೨
ಮಿಚ್ಪೆ	ಕಾವಲುಸ್ಥಳ	ಆದಿಕಾಂಡ ೩೧:೪೯

ಮೆನೆ ಮೆನೆ ತಿಕೆಲ್	ದೇವರು ತೂಕಮಾಡಿ ಕಡಿಮೆ	ದಾನಿಯೇಲನು ೫:೨೫
ಯದೀದ್ಯನು	ಕರ್ತನಿಗೆ ಪ್ರಿಯವಾದವನು	೨ನೇ ಸಮುವೇಲ ೧೨:೨೫
ರೆಹೋಬೋತ್	ವಿಶಾಲಸ್ಥಳ	ಆದಿಕಾಂಡ ೨೬:೨೨
ಸಿಟ್ನಾ	ದ್ವೇಷ	ಆದಿಕಾಂಡ ೩೮:೪೦
ಸುಕ್ಕೋತ	ಚಪ್ಪರಗಳು	ವಿಮೋಚನಕಾಂಡ ೩೩:೧೭
ಹೋರ್ಮ	ಸಂಪೂರ್ಣ ನಾಶವಾದ ಸ್ಥಳ	ಅರಣ್ಯಕಾಂಡ ೨೧:೩
ಎಜರ್	ಎಜ್ರನು	೧ನೇ ಅಧ್ಯಾಯ
ಎಸ್ತರ್	ಎಸ್ತೇರಳು	೧ನೇ ಅಧ್ಯಾಯ
ಎಜ್ಜಕೇಲ್	ಯೆಹೆಜ್ಕೇಲ್	೧ನೇ ಅಧ್ಯಾಯ
ಬ್ರೆಶಿಟ್	ಆದಿಕಾಂಡ	೧ನೇ ಅಧ್ಯಾಯ
ಮೋಸ	ಮೋಶೆ	೧ನೇ ಅಧ್ಯಾಯ
ಮಲಾಕಿಮ	ಅರಸುಗಳು	೧ನೇ ಅಧ್ಯಾಯ
ದಾನಿಯೆಲ್	ದಾನಿಯೇಲ್	೧ನೇ ಅಧ್ಯಾಯ
ದಿವರೆಹಯಮಿಮ	ಪೂರ್ವಕಾಲ ವೃತ್ತಾಂತ	೧ನೇ ಅಧ್ಯಾಯ
ಥಿಲಿಮ್ಸ್	ಕೀರ್ತನೆಗಳು	೧ನೇ ಅಧ್ಯಾಯ
ಮಿಸ್ರ	ಯೋಬನು	೧ನೇ ಅಧ್ಯಾಯ
ಮಿಶನ್ವಿ	ಆಮೋಸನು	೧ನೇ ಅಧ್ಯಾಯ
ಮಿಶಲೇ	ಜ್ಞಾನೋಕ್ತಿಗಳು	೧ನೇ ಅಧ್ಯಾಯ
ಯಿರಮಿಯಹು	ಯರೆಮೀಯನು	೧ನೇ ಅಧ್ಯಾಯ
ಯೆಕಹ	ಪ್ರಲಾಪಗಳು	೧ನೇ ಅಧ್ಯಾಯ
ಯೆಶಾಯಹು	ಯೇಶಾಯ	೧ನೇ ಅಧ್ಯಾಯ
ಯಾಯೆಲ್	ಯೊವೇಲನು	೧ನೇ ಅಧ್ಯಾಯ
ಯೋಶುವ	ಯಹೋಶುವನು	೧ನೇ ಅಧ್ಯಾಯ
ವಯಿಕ್ರ	ಯಾಜಕಕಾಂಡ	೧ನೇ ಅಧ್ಯಾಯ

ಶೆಮೊಟ	ವಿಮೋಚನಾಕಾಂಡ	೧ನೇ ಅಧ್ಯಾಯ
ಶಾಮಲ್	ಸಮುವೇಲ	೧ನೇ ಅಧ್ಯಾಯ
ಶೋಫೆಟ್	ನ್ಯಾಯಸ್ಥಾಪಕರು	೧ನೇ ಅಧ್ಯಾಯ

ಅಳತೆಗೆ ಸಂಬಂಧಿಸಿದ ಇಬ್ರಿಯ ಪದಗಳು

ಅಮ್ಮ	ಮಾಳ	ಆದಿಕಾಂಡ ೬:೧೫
ಇಸ್ಸಾರೋನಂ	ಅರ್ಧ ಸೇರು	ವಿಮೋಚನಕಾಂಡ ೨೯:೪೦
ಎಸ್ಬ	ನಾಲ್ಕು ಬೆರಳುದಪ್ಪ	ಯರೆಮಿಯ ೫೨:೨೧
ಏಫಾ	೩೦ ಸೇರು	ವಿಮೋಚನಕಾಂಡ ೧೬:೩೬
ಒಮೆರ್	ಗೋಮರ್	ವಿಮೋಚನಕಾಂಡ ೧೬:೩೨
ಕೋರ್	ಕೋರ್	೧ನೇ ಅರಸು ೪:೨೨
ಖದ್ರಿಖೇಲ್	ಪಾದದ ಅಳತೆ	ಧರ್ಮೋಪದೇಶಕಾಂಡ ೨:೫
ಗಾಬಿ	ಸೇರು	೨ನೇ ಅರಸು ೬:೨೫
ಗೆಶಿತಾ	ವರಹಾ	ಯೆಹೋರುವ ೨೪:೩೨
ಗೇರಾ	ಗೆರಾ	ಅರಣ್ಯ ೩:೪೭
ಡಕ್ಮ	ಪದನು	ನೆಹೆಮಿಯ ೭:೭೦
ಡೇರಿಕ್	ತಲಾಂತು	೧ನೇ ಪೂರ್ವ ವೃತ್ತ ೨೯:೭
ತೊಪಾಖ್	ಅಂಗೈಯಗಲ	ವಿಮೋಚನಕಾಂಡ ೨೮:೧೬
ಬೆಕ	ತೊಲೆ	ಆದಿಕಾಂಡ ೨೪:೨೨
ಮಿನ	ಮಾನೆ	ಯಹೆಜ್ಕೇಲು ೪೫:೨
ಯೋಮತೆರಖ್	ಒಂದು ದಿನದ ಪ್ರಯಾಣ	ಅರಣ್ಯಕಾಂಡ ೧೧:೩೧
ಶೆಕೆಲ್	ಬೆಳ್ಳಿ	ವಿಮೋಚನಕಾಂಡ ೩೮:೨೪–೨೫
ಸೆರತ್ತು	ಗೇಣು	ವಿಮೋಚನಕಾಂಡ ೨೮:೧೬
ಸೆಯಾ	ಮೂರು ಸೇರು	ವಿಮೋಚನಕಾಂಡ ೨೯:೪೦
ಸೈಯದ್	ಹೆಜ್ಜೆಯ ದೂರ	೨ನೇ ಸಮುವೆಲ ೬:೧೩

ಗ್ರೀಕ್ ಪದಗಳು

ಕನ್ನಡ ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನು ಅಧ್ಯಯನ ಮಾಡುವಲ್ಲಿ ಪ್ರಮುಖ ಧರ್ಮಗ್ರಂಥವಾದ ಸತ್ಯವೇದದಲ್ಲಿ ಕಂಡುಬರುವ ಅನೇಕ ಪದಗಳು ಗ್ರೀಕ್‌ನ ಪದಗಳಾಗಿವೆ. ಕ್ರೈಸ್ತ ಧರ್ಮಗ್ರಂಥ ಎರಡು ಭಾಗಗಳಾಗಿ ಒಂದು ಹಳೆ ಒಡಂಬಡಿಕೆ ಎರಡು ಹೊಸ ಒಡಂಬಡಿಕೆ ಎಂದು ರಚಿಸಲ್ಪಟ್ಟಿದೆ. ಎರಡನೆಯ ಭಾಗವಾದ ಹೊಸ ಒಡಂಬಡಿಕೆಯಲ್ಲಿ ಹೆಚ್ಚಾಗಿ ಗ್ರೀಕ್ ಭಾಷೆಯ ಪದಗಳು ಕಂಡುಬರುತ್ತವೆ. ಏಕೆಂದರೆ ಈ ಹೊಸ ಒಡಂಬಡಿಕೆಯ ಮೂಲದಲ್ಲಿ ಗ್ರೀಕ್ ಭಾಷೆಯಲ್ಲಿ ಬರವಣಿಗೆಯಾಗಿದ್ದರಿಂದ ಅನುವಾದ ಮಾಡುವ ಸಂದರ್ಭದಲ್ಲಿ ಕೆಲವು ನಾಮಾರ್ಥ, ಕೆಲವು ವಿಶೇಷ ಪದಗಳು ಇನ್ನಿತರ ಉಪಮೆಗಳಲ್ಲಿ ಬಳಸುವ ಪದಗಳು ಯಥಾವತ್ತಾಗಿ ನಮ್ಮ ಕನ್ನಡಕ್ಕೆ ಲಿಪ್ಯಂತರವಾಗಿವೆ ಎಂದು ಗಮನಿಸಲಾಗಿದೆ. ಅಂತಹ ಕೆಲವು ಪದಗಳನ್ನು ಈ ಕೆಳಕಂಡಂತೆ ಉದ್ಧರಿಸಬಹುದು.

ಗ್ರೀಕ್ ಪದಗಳು

ಗ್ರೀಕ್	ಕನ್ನಡ	ಉಲ್ಲೇಖ
ಅಬ್ರಾಮ್	ಅಬ್ರಹಾಮ	ಮತ್ತಾಯ ೧:೨
ಅರಮ	ಅರಾಮ	ಮತ್ತಾಯ ೧:೩
ಅವರಿಬ	ಊರೀಯ	ಮತ್ತಾಯ ೧:೬
ಅಬಿಯ	ಅಬೀಯ	ಮತ್ತಾಯ ೧:೭
ಅಸಫ್	ಆಸನು	ಮತ್ತಾಯ ೧:೭
ಅಕವ	ಆಹಾಜ	ಮತ್ತಾಯ ೧:೯
ಅಕವ	ಆಹಾಜ	ಮತ್ತಾಯ ೧:೯
ಅಮೊವ	ಆಮೋನ	ಮತ್ತಾಯ ೧:೧೦
ಅಮ್ಮಿನದಬ	ಅಮೀನಾದಾಬ	ಮತ್ತಾಯ ೧:೪
ಅಬಿಯೋದ	ಅಬಿಹೂದ	ಮತ್ತಾಯ ೧:೧೩
ಅಜಾರ	ಅಜೋರ	ಮತ್ತಾಯ ೧:೧೩
ಅಸೀಮ	ಅಖೀಮ	ಮತ್ತಾಯ ೧:೧೪
ಅಪೊಸ್ತಲೌನ್	ಅಪೊಸ್ತಲ	ಕೃತ್ಯಗಳು ೧ನೇ
ಇವೊರಮ	ಯೆಹೋರಾಮ	ಮತ್ತಾಯ ೧:೮

ಇವೊಸಫಟಿ	ಯೆಹೋಷಾಫಾಟನು	ಮತ್ತಾಯ ೧:೮
ಇವೌಬದ	ಓಬೇದ	ಮತ್ತಾಯ ೧:೫
ಇವೊಸಿಯ	ಯೋಷೀಯ	ಮತ್ತಾಯ ೧:೧೧
ಇಸೌ	ಯೇಸು	ಮತ್ತಾಯ ೧:೧೬
ಇವನ್ನಹನ್ ಎ	ಯೋಹಾನನು ಮೊದಲನೆಯದು	ಯೋಹಾನನ ೧ನೇ
ಎಶರೊಮ	ಹೆಜ್ರೋನ್	ಮತ್ತಾಯ ೧:೩
ಎಜಿಕಿಯನ್	ಹಿಜ್ಕೀಯ	ಮತ್ತಾಯ ೧:೯
ಎಕೊನಿಯನ್	ಯೆಕೊನ್ಯ	ಮತ್ತಾಯ ೧:೧೧
ಎಲಿಯಕಿಮ	ಎಲ್ಯಕೀಮ	ಮತ್ತಾಯ ೧:೧೩
ಎಲಿಯೋದ	ಎಲಿಹೂದ	ಮತ್ತಾಯ
ಎಫಿಸಿಯಸ್	ಎಫಿಸದವರಿಗೆ	ಎಫೆಸ ೧ನೇ
ಎಬ್ರೈಸ್	ಇಬ್ರಿಯರಿಗೆ	ಇಬ್ರಿಯ ೧ನೇ
ಐಇಸೈ	ಇಷಯ	ಮತ್ತಾಯ ೧:೨
ಐಯಾಕೊಬ	ಯಾಕೋಬ	ಮತ್ತಾಯ ೧:೨
ಐಯೊಡನ	ಯಹೂದ	ಮತ್ತಾಯ ೧:೨
ಒಡಿಯನ್	ಉಜ್ಜೀಯನು	ಮತ್ತಾಯ ೧:೮
ಕತ	ಸುವಾರ್ತೆ	ಮತ್ತಾಯ ೧ನೇ ಅಧ್ಯಾಯ
ಕ್ವಾಮರ್	ತಾಮದಳು	ಮತ್ತಾಯ ೧:೩
ಕ್ರಿಸ್ತೋ	ಕ್ರಿಸ್ತನು	ಮತ್ತಾಯ ೧:೧೬
ಕೆಸ್ಸಾಲೊನಿಕೀಸ್	ಥೆಸಲೋನಿಕದವರಿಗೆ	೧ನೇ
ಕೊಲಸ್ಸಾಈಸ್	ಕೊಲೆಸ್ಸೆಯವರಿಗೆ	೧ನೇ
ಗಲತಸ್	ಗಲಾತ್ರದವರಿಗೆ	ಗಲಾಲ್ಯ ೧ನೇ
ಜೆರ್ಕಿ	ಜೆರಹ	ಮತ್ತಾಯ ೧:೩

ಜೊರೊಬಬೆಲ್	ಜೆರುಬ್ಬಬೆಲ್	ಮತ್ತಾಯ ೧:೧೨
ಡೇಯಡ್	ದಾವೀದ	ಮತ್ತಾಯ ೧:೧
ತಿತೊನ್	ತೀತನಿಗೆ	ತೀತನಿಗೆ ೧ನೇ
ತಿಮೊಕಿಯನ್	ತಿಮಾಥಿಯನಿಗ	ತಿಮೋಥಿ ೧ನೇ
ನಾಸ್ಸೌನ್	ನಹಶೋನಾ	ಮತ್ತಾಯ ೧:೪
ಫ್ರಾಕ್ಸೀಸ್	ಕೃತ್ಯಗಳು	ಫಿಲಿಪ್ಪಿಯಸ್–ಪಿಲಿಪ್ಪಿಯರಿಗೆ
ಪೇತ್ರಾ	ಪೇತ್ರನು	
ಫೆರೆಟ್	ಪೆರೆಟ್	ಮತ್ತಾಯ ೧:೩
ಬಿ	ದ್ವಿತೀಯ	
ಬಿಬ್ಬಿಯಾ	ಪುಸ್ತಕ	ಸತ್ಯವೇದ
ಬೋಎವಂ	ಬೋವಜ	ಮತ್ತಾಯ ೧:೫
ಮನಸ್ಸ	ಮನಸ್ಸೆ	ಮತ್ತಾಯ ೧:೧೦
ಮೆಕ್ಕಾಯೋನ್	ಮತ್ತಾಯ	ಮತ್ತಾಯ ೧ನೇ
ಮಾರ್ಕೋನ್	ಮಾರ್ಕನು	ಮಾರ್ಕ್ ೧ನೇ ಅಧ್ಯಾಯ
ಯೋದ	ಯೂದ	ಯಾದ ೧ನೇ
ಯೋಶಫ	ಯೋಸೇಫ	ಮತ್ತಾಯ ೧:೧೬
ರಕಬ	ರಾಹಾಬಳು	ಮತ್ತಾಯ ೧:೫
ರೊಬಾಮ	ರೆಹಬ್ಬಾಮನು	ಮತ್ತಾಯ ೧:೭
ರೊಮಯೂಸ್	ರೋಮಾಪುರದವರಿಗೆ	ರೋಮಾಪುರದಾನಿಗೆ ೧ನೇ
ಲೌಕನ್	ಲೂಕನು	ಲೂಕ ೧ನೇ ಅಧ್ಯಾಯ
ಸಡೌಕ	ಸದೋಕ	ಮತ್ತಾಯ ೧:೧೪
ಸಲಕ್ಥಿಲ್	ಶೆಯಲ್ತಿಯೇಲ	ಮತ್ತಾಯ ೧:೧೩
ಸಲ್ಮೌನ್	ಸಲ್ಮೋನ	ಮತ್ತಾಯ ೧:೫
ಸೊಲೊಮೌನ	ಸೊಲೊಮೋನ	ಮತ್ತಾಯ ೧೭

ಅಳತೆಗೆ ಸಂಬಂಧಿಸಿದ ಗ್ರೀಕ್ ಪದಗಳು

ಗ್ರೀಕ್ ಪದ	ಅರ್ಥ	ಉಲ್ಲೇಖ
ಅಸ್ಸಾರಿಯನ್	ದುಡ್ಡು	ಮತ್ತಾಯ ೧೦:೨೧
ಕ್ವಾಡ್ರೆನ್ಸ್	ಕಾಸು	ಮತ್ತಾಯ ೫:೨೬
ಕ್ವಿನಿಕ್ಸ್	ಸೇರು	ಪ್ರಕಟಣೆ ೬:೬
ಕೊರೊಶ್	ಖಂಡುಗ	ಲೂಕ ೧೬:೭
ಖೊಡೊ ಸಬಾತ್	ಸಬ್ಬತ್ ದಿನದಲ್ಲಿ ಪ್ರಯಾಣಿಸುವ ದೂರ	ಅಪೋಸ್ತಲರ ಕೃತ್ಯ ೧:೧೨
ಟೇಲರ್	ಕೋಟ್ಯಾಂತರ	ಮತ್ತಾಯ ೧೮:೨೪
ಟೇಲೆಂಟ್	ಕೋಟ್ಯಾಂತರ	ಮತ್ತಾಯ ೧೮:೨೪
ಡಿನಾರಿಯಾ	ಹಣ	ಮತ್ತಾಯ ೧೮:೨೮
ತಲಾಂತು	ಮಣ	ಪ್ರಕಟಣೆ ೧೬:೨೧
ಪೇಖೋ	ಮೊಳ	ಮತ್ತಾಯ ೬:೨೭
ಪ್ರತಾಸ್	ಬುದ್ದಲಿ	ಲೂಕ ೧೬:೬
ಮಿನ	ಮೊಹರಿ	ಲೂಕ ೧೯:೧೩
ಮೆತ್ರೇಶ್	ಬಾನೆ	ಯೋಹಾನ ೨:೬
ಮೈಲ್	ಮೈಲು	ಮತ್ತಾಯ ೫:೪೧
ಮೊಡಿಯಸ್	ಕೊಳಗ	ಮತ್ತಾಯ ೫:೧೫
ಲೆಪ್ಟನ್	ದುಗ್ಗಾಣಿ	ಮಾರ್ಕ ೧೨:೨೪
ವರ್ದಿಯ	ಮಾರುದ್ದ	ಅಪೋಸ್ತಲ ಕೃತ್ಯ ೨೪:೧೩
ಶಲ್ವೇಶ್	ತಂಬಿಗೆ	ಮಾರ್ಕ ೭:೪
ಸಾಟ್ರಾನ್	ಮೂರು ಸೇರು	ಮತ್ತಾಯ ೧೩:೩೩
ಸ್ಟೇಟರ್	ಒಂದು ರೂಪಾಯಿ	ಮತ್ತಾಯ ೧೭:೨೭
ಸ್ತಾದಿಯ	ಒಂದು ಮೈಲು	ಲೂಕ ೨೪:೧೩

೫.೩. ಸತ್ಯವೇದದಲ್ಲಿ ಸೂಚಿತ ಪದಗಳು

ಕ್ರೈಸ್ತ ಧರ್ಮ ೧೬ನೇ ಶತಮಾನದ ಪೂರ್ವದಲ್ಲಿಯೇ ಕರ್ನಾಟಕದಲ್ಲಿ ಕಾಣಿಸಿಕೊಂಡಿತು ಎಂದು ಹೇಳುತ್ತಾರೆ. ಆದರೆ ಸತ್ಯವೇದ (ಬೈಬಲ್)ವು ಎಂದು ಕನ್ನಡದಲ್ಲಿ ರಚನೆಯಾಗಬೇಕಾದರೆ ಹಲವು ವರ್ಷಗಳು ಬೇಕಾದವು. ಮೊಟ್ಟ ಮೊದಲು ಬೈಬಲನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಕಾರ್ಯ ಆರಂಭವಾಗಿದ್ದು ೧೮೦೯-೧೮೧೦ ಎಂದು ಹೇಳಲಾಗುತ್ತಿದೆ. (ಕೆಥೋಲಿಕ್ ಕ್ರೈಸ್ತರ ಕನ್ನಡದ 'ಪವಿತ್ರ ಬೈಬಲ್', ಪು. III) ಬೈಬಲಿನ ಅನುವಾದ ಕಾರ್ಯ ಸೆರಾಂಪುರ ವಿಲಿಯಂ ಕೇರಿಯಿಂದ ಕಲ್ಕತ್ತದಲ್ಲಿ, ಲಂಡನ್ ಮಿಶನ್ನಿನ ಜಾನ್ ಹ್ಯಾಂಡ್ಸ್‌ರಿಂದ ಬಳ್ಳಾರಿಯಲ್ಲಿ ನಡೆಯುತ್ತದೆ. ಹೀಗೆ ೧೯೩೪ರಲ್ಲಿ 'ಸತ್ಯವೇದವು' ಎಂದು ಸಮಗ್ರ ಬೈಬಲಾಗಿ ಹೊರಬಂದಿತು. ಈ ಸತ್ಯವೇದದಲ್ಲಿ ಸೂಚಿತವಾದ ಪ್ರಾಣಿ, ವಸ್ತು, ವಾದ್ಯ, ಹಣ್ಣು, ಕ್ರಿಮಿ, ಸಸ್ಯಗಳಿಗೆ ಸಂಬಂಧಿಸಿದ ಪದಗಳನ್ನು ವರ್ಗೀಕರಿಸಿ ವಿವರಿಸಲಾಗಿದೆ. ಇವು ಕನ್ನಡ ಸಾಹಿತ್ಯಕ್ಕೆ ನವೀನ ಪದಗಳಾಗಿ ಒಳಬರುತ್ತವೆ ಎಂದು ಹೇಳಬಹುದಾಗಿದೆ.

೧. ಸತ್ಯವೇದದಲ್ಲಿ ಸೂಚಿತ ಪಕ್ಷಿಗಳು

ಪಕ್ಷಿ	ಉಲ್ಲೇಖ
ಪಾರಿವಾಳ	ಆದಿಕಾಂಡ ೮:೮-೧೨
ಕೋಳಿ	ಮಾರ್ಕ ೧೪:೩೦, ೭೨
ಹದ್ದು	ಧರ್ಮೋಪದೇಶಕಾಂಡ ೩೨:೧೧
ಕಾಗೆ	ಆದಿಕಾಂಡ ೮:೭-೧
ಉಷ್ಟ್ರಪಕ್ಷಿ	ಯೋಬ ೩೯:೧೩
ಲಾವಕ್ಕಿ	ವಿಮೋಚನಕಾಂಡ ೧೬:೧೩
ಗುಬ್ಬಿಗಳು	ಲೂಕ ೧೨:೬-೭
ಬೆಟ್ಟದ ಹದ್ದು	ಯೋಜಕಕಾಂಡ ೧೧:೧೩

೨. ಸತ್ಯವೇದದಲ್ಲಿ ಸೂಚಿತ ಪ್ರಾಣಿಗಳು

ರಥಾಶ್ವಕುದುರೆ	ಅರಸು ೪:೨೬
ಸಿಂಹ	ದಾನಿಯೇಲನ ಗ್ರಂಥ ೬:೧-೨೮
ಕುರಿಮರಿ ಕುರಿಗಳು	ಯೋಹಾನ ೧೦:೨-೪
ಎತ್ತುಗಳು, ದನ	ಅರಸು ೧೯:೧೯

ಸರ್ಪ	ಕೀರ್ತನೆ ೫೮:೪
ಹಂದಿ	ಯೋಜಕಕಾಂಡ ೧೧:೭
ಮೊಸಳೆ, ಓಡುವ ಸರ್ಪ	ಯೋಬ ೪೧:೧
ಕರಡಿ	ಸಮುವೇಲ ೧೭:೩೪-೩೬
ಒಂಟೆ	ಆದಿಕಾಂಡ ೨೪:೬೪
ಆಡು	ವಿಮೋಚನೆಕಾಂಡ ೨೬:೭
ಕತ್ತಿ	ಮತ್ತಾಯ ೨೧:೭
ಪಶುಗಳು	ಕೀರ್ತನೆ ೫೦:೧೦
ಕತ್ತೆ	ವಿಮೋಚನಕಾಂಡ ೮:೧-೧೫
ನರಿ	ಲೂಕ ೧೩:೩೨
ಜಿಂಕೆ	ಕೀರ್ತನೆ ೧೮:೩೩
ದೊಡ್ಡಮೀನು	ಯೋನ ೧:೧೭-೨೧

೩. ಸತ್ಯವೇದದಲ್ಲಿ ಸೂಚಿತ ಹಣ್ಣುಗಳು

ಒಲೀವ	ಧರ್ಮೋಪದೇಶ ಕಾಂಡ ೨೪:೨೦
ದಾಳಿಂಬರ	ಧರ್ಮೋಪದೇಶ ಕಾಂಡ ೮:೮
ಬಳ್ಳಿಗಡ್ಡೆ	ಅರಣ್ಯಕಾಂಡ ೧೧:೫
ಖರ್ಜೂರರಸ	ಯೋಜಕಕಾಂಡ ೨೩:೪೦
ಅಂಜೂರ	ಆದಿಕಾಂಡ ೩:೭
ಬಾದಾಮಿ	ವಿಮೋಚನಾಕಾಂಡ ೩೭:೧೯-೨೦
ದ್ರಾಕ್ಷಿಯ	ಯೇಶಾಯ ೫:೨-೭
ಸೇಬು	ಪಂಬುಗೀತಗಳು ೨:೩

೪. ಸತ್ಯವೇದದಲ್ಲಿ ಸೂಚಿತ ಸಂಗೀತ ವಾದ್ಯೋಪಕರಣಗಳು

ತಾಳ	ಪೂರ್ವಕಾಲ ವೃತ್ತಾಂತ ೧೫:೧೯
ವೀಣೆ	ಕೀರ್ತನ ೭೧:೨೨

ಕೊಳಲು	ಅರಸು ೧:೩೯-೪೦
ಕೊಂಬು	ಅರಸು ೧:೩೪
ಕಿನ್ನರಿ	ಸಮುವೇಲ ೬:೫
ದಮ್ಮಡಿ	ವಿಮೋಚನಕಾಂಡ ೧೫:೨೦
ಸ್ವರಮಂಡಲ	ಅರಸು ೧೦:೧೨
ತುತ್ತೂರಿ	ಅರಣ್ಯ ೧೦:೨-೧೦

೫. ಸತ್ಯವೇದದಲ್ಲಿ ಸೂಚಿತ ಸಸ್ಯಗಳು

ದ್ರಾಕ್ಷಿಲತೆ/ದ್ರಾಕ್ಷಾಲತೆ	ಅರಣ್ಯಕಾಂಡ ೧೩:೨೩
ಅಡವಿಯ ಪೂವು	ಮತ್ತಾಯ ೬:೨೮
ಹಿಸ್ಸೋಪಗಿಡ	ವಿಮೋಚನಕಾಂಡ ೧೨:೨೨
ದೇವದಾರು ಮರ	ಸಮುವೇಲ ೫:೧೧
ಅಂಜೂರದಮರ	ಆದಿಕಾಂಡ ೩:೭
ಪುಂಡಿಗಿಡ	ಯೆಹೋರುವ ೨:೧-೨೧
ಖರ್ಜೂರವೃಕ್ಷ	ನ್ಯಾಯಸ್ಥಾಪಕರು ೧:೧೬
ಒಲೀವವೃಕ್ಷ/ಎಣ್ಣೆಮರ	ವಿಮೋಚನಾಕಾಂಡ ೨೭:೨೦-೨೧

೬. ಸತ್ಯವೇದದಲ್ಲಿ ಸೂಚಿತ ವೃತ್ತಿಯೋಪಕರಣಗಳು

ಕೈಕೊಡಲಿ	ಕೀರ್ತನೆ ೭೪:೬
ಕೊಡಲಿ	ಧರ್ಮೋಪದೇಶಕಾಂಡ ೨೦:೧೯
ಗುದ್ದಲಿ	ಯೆಶಾಯ ೭:೨೫
ಸಲಾಕೆ	ವಿಮೋಚನಕಾಂಡ ೨೧:೬
ಕತ್ತಿಚೂರಿ	ಆದಿಕಾಂಡ ೨೨:೬
ಸುತ್ತಿಗೆ	ಅರಸು ೬:೭
ಹೊಲ ಉಳುವುದು	ಸಮುವೇಲ ೮:೧೨
ಕುಡುಗೋಲು	ಮಾರ್ಕ ೪:೨೯

೭. ಸತ್ಯವೇದದಲ್ಲಿ ಸೂಚಿತ ಕೀಟಗಳು

ಮಿಡತೆ	ಯಾಜಕಕಾಂಡ ೧೧:೨೨
ಚಿಟ್ಟೆನುಸಿ	ಮತ್ತಾಯ ೬:೧೯-೨೦
ಕಡಜದ ಹುಳ	ವಿಮೋಚನಾಕಾಂಡ ೨೩:೨೮
ಹುಳಗಳು	ಅಪೋಸ್ತಲರ ಕೃತ್ಯಗಳು ೧೨:೨೩
ಜೇನುಹುಳು, ಜೇನ್ನೊಣ	ಧರ್ಮೋಪದೇಶ ಕಾಂಡ ೧:೪೪
ಇರುವೆ	ಜ್ಞಾನೋಕ್ತಿ ೬:೬-೮
ವಿಷದ ಹುಳ/ನೊಣ	ವಿಮೋಚನಕಾಂಡ ೮:೨೧-೨೪

೫.೪. ಕ್ರೈಸ್ತ ಪಾದ್ರಿ (ಹುದ್ದೆ) ಪದನಾಮಗಳು

ಕ್ರೈಸ್ತ ಧರ್ಮದ ಮುಖ್ಯ ಆಧಾರಸ್ತಂಭವೆಂದೇ ಪಾದ್ರಿಯವರನ್ನು ಕರೆಯಲಾಗಿದೆ. ಕ್ರೈಸ್ತ ಧರ್ಮ ಪ್ರಮುಖವಾಗಿ ಕೆಥೋಲಿಕ್ ಮತ್ತು ಪ್ರೊಟೆಸ್ಟಂಟ್ ಎಂದು ಎರಡು ಪಂಗಡಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ಎರಡು ಪಂಗಡಗಳಲ್ಲಿಯು ಪಾದ್ರಿಗೆ ಪ್ರಮುಖ ಸ್ಥಾನವಿದೆ. ಈ ಪಾದ್ರಿಯನ್ನು ಪೂಜಾರಿ, ಅಯ್ಯ, ಸ್ವಾಮಿ, ಆಂಗ್ಲ ಭಾಷೆಯಲ್ಲಿ ಫಾದರ್ ಎಂತಲೂ ಸಂಬೋಧಿಸುವರು. ಈ ವೃತ್ತಿಯಲ್ಲಿ ಅನುಭವಕ್ಕೆ ಅನುಗುಣವಾಗಿ ಹುದ್ದೆ ಎಂಬುವುದು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತದೆ. ಅಂತಹ ಹುದ್ದೆಗಳ ಪದನಾಮಗಳನ್ನು ಹೀಗೆ ಗುರ್ತಿಸಲಾಗಿದೆ.

ಹುದ್ದೆಗಳ ವರ್ಗೀಕರಣ

ಕೆಥೋಲಿಕ್	**ಪ್ರೊಟೆಸ್ಟೆಂಟ್**
ಪೋಪ್	ಬಿಷಪ್
ಕಾರ್ಡಿನಲ್ಸ್	ಡಿಎಸ್
ಆರ್ಚ್ ಬಿಷಪ್	ರೆವರೆಂಡ್
ಬಿಷಪ್	ಪಾಸ್ಟರ್
ಗುರುಗಳು	ಬ್ರದರ್

ಹುದ್ದೆಗಳ ವಿವರಣೆ

ಪೋಪ್: ಇದು ಆಂಗ್ಲ ಪದ. ಪೋಪ್ ಎಂದರೆ ಕನ್ನಡದಲ್ಲಿ ಜಗದ್ಗುರು ಎಂದು ಸಂಬೋದಿಸುವರು. ಇವರು ರೋಮ್ ನಗರದ ವೆಟಿಕನ್ ಸಿಟಿಯಲ್ಲಿ ಇರುತ್ತಾರೆ. ಇವರ

ಅಧೀನದಲ್ಲಿಯೇ ಇಡೀ ಪ್ರಪಂಚದ ಕೆಥೋಲಿಕ್ ಕ್ರೈಸ್ತ ಸಭೆಗಳು ಇರುತ್ತವೆ. ಪ್ರಸ್ತುತ ಪೋಪ್ ಶ್ರೀ ಸೆಂಟ್ ಫ್ರಾನ್ಸಿಸ್‌ರವರು ಆಗಿರುತ್ತಾರೆ.

ಕಾರ್ಡಿನಲ್ಸ್: ಕಾರ್ಡಿನಲ್ಸ್ ಎಂಬುದು ಲ್ಯಾಟಿನ್ ಪದವಾಗಿದೆ. ಕನ್ನಡ ಲಿಪಿ ಲ್ಯಾಟಿನ್ ಭಾಷೆಯ ಉಚ್ಚಾರದಲ್ಲಿ ಬಳಸುತ್ತಾರೆ. ಇವರು ನಮ್ಮ ದೇಶದ ದೊಡ್ಡ ದೊಡ್ಡ ನಗರಗಳಾದ ಮುಂಬಯಿ, ದೆಹಲಿ ಮತ್ತು ಕೇರಳ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಅಲ್ಲದೆ ರಾಷ್ಟ್ರಮಟ್ಟದ ಅಧಿಕಾರಿಗಳಾಗಿರುತ್ತಾರೆ.

ಆರ್ಚ್‌ಬಿಷಪ್: ಇವರು ರಾಜ್ಯಮಟ್ಟದ ಅಧಿಕಾರಿಗಳಾಗಿರುತ್ತಾರೆ. ರಾಜ್ಯಕ್ಕೆ ಒಬ್ಬರೇ ಇರುತ್ತಾರೆ. ಇವರನ್ನು ಕನ್ನಡದಲ್ಲಿ 'ಮಹಾ ಧರ್ಮಾಧ್ಯಕ್ಷರು' ಎಂದು ಕರೆಯುತ್ತಾರೆ. ಇವರು ಆಯಾ ರಾಜ್ಯದ ರಾಜಧಾನಿಯಲ್ಲಿ ಇದ್ದು ಸೇವೆ ಸಲ್ಲಿಸುತ್ತಾರೆ.

ಬಿಷಪ್: ಇವರು ರಾಜ್ಯದ ವಿಭಾಗಮಟ್ಟದಲ್ಲಿ ಸೇವೆ ಸಲ್ಲಿಸುವ ಪಾದ್ರಿಗಳಾಗಿದ್ದಾರೆ. ಸಭೆಗಳ ಅಂತರಕ್ಕೆ ಅನುಗುಣವಾಗಿ ವಿಭಾಗದ ರೀತಿಯಲ್ಲಿ ಕೇಂದ್ರಗಳನ್ನು ಸ್ಥಾಪನೆ ಮಾಡಿರುತ್ತಾರೆ. ಕರ್ನಾಟಕದಲ್ಲಿ ಬಳ್ಳಾರಿಯೂ ಒಂದು ಧರ್ಮ ಕೇಂದ್ರವಾಗಿದೆ. ರಾಯಚೂರು ಜಿಲ್ಲೆ ಬಳ್ಳಾರಿ ವಿಭಾಗಕ್ಕೆ ಸಂಬಂಧಿಸಿರುತ್ತದೆ. ಪ್ರಸ್ತುತ ಬಳ್ಳಾರಿ ವಿಭಾಗದ ಬಿಷಪ್ ಮೋಸ್ಟ್ ರೆವರೆಂಡ್ ಹೆನ್ರಿ ಡಿಸೋಜಾ ಬಿಷಪ್‌ರು ಇರುತ್ತಾರೆ.

ಗುರು: ಇವರು ಸಾಮಾನ್ಯವಾಗಿ ಎಲ್ಲಾ ವಿಚಾರಣೆ (ಚರ್ಚ್)ಗಳಲ್ಲಿ ಪಾದ್ರಿಯಾಗಿ ಸೇವೆ ಸಲ್ಲಿಸುತ್ತಾರೆ. ಇವರನ್ನು ಯಾಜಕರು ಎಂದು ಕರೆಯುತ್ತಾರೆ.

ಮೆಥೋಡಿಸ್ಟ್ ಹುದ್ದೆಗಳು (ಪ್ರೊಟೆಸ್ಟೆಂಟ್‌ರು)

ಬಿಷಪ್: ಇವರು ರಾಜ್ಯಮಟ್ಟದಲ್ಲಿ ಇರುವ ಸೇವಕರು. ರಾಜ್ಯಕ್ಕೆ ಒಬ್ಬರೇ ಇರುತ್ತಾರೆ. ಇವರ ಅಧೀನದಲ್ಲಿ ಎಲ್ಲಾ ಜಿಲ್ಲಾ ಸೇವಕರು (ಡಿಎಸ್) ಇರುತ್ತಾರೆ. ಕನ್ನಡದಲ್ಲಿ ಇವರನ್ನು ಪ್ರಾದೇಶಿಕ ಆಲೋಚನಾ ಸಭೆ ಅಧ್ಯಕ್ಷರು ಎನ್ನುತ್ತಾರೆ. ಪ್ರಸ್ತುತ ಕರ್ನಾಟಕ ರಾಜ್ಯದ ಅಧ್ಯಕ್ಷರು ಬಿಷಪ್ ಎನ್.ಎಲ್. ಕರ್ಕರೆಯವರಾಗಿದ್ದಾರೆ. ಇವರ ಶ್ರೀಮತಿಯವರಾದ ನಿರ್ಮಲ ಕರ್ಕರೆ ಡಿಕ್‌ನೆಸ್ ಆಲೋಚನಾ ಸಭೆ ಬೆಂಗಳೂರು ಇದರ ಅಧ್ಯಕ್ಷರಾಗಿರುತ್ತಾರೆ.

ಡಿ.ಎಸ್.: ಇವರು ಎಲ್ಲಾ ಜಿಲ್ಲೆಗೆ ಒಬ್ಬರಂತೆ ಇರುವ ಸಭಾಪಾಲಕರು ಆಗಿರುತ್ತಾರೆ. ಒಂದೊಂದು ಸಂದರ್ಭದಲ್ಲಿ ಪ್ರದೇಶ ಹಾಗೂ ಚರ್ಚ್ ವಿಶ್ವಾಸಿಗಳ ಸಂಖ್ಯೆಗೆ ಅನುಗುಣವಾಗಿ ಒಂದೇ ಜಿಲ್ಲೆಯಲ್ಲಿ ಇಬ್ಬರು ಜಿಲ್ಲಾ ಮೇಲ್ವಿಚಾರಕರು (ಡಿ.ಎಸ್.) ಇರುತ್ತಾರೆ. ಉದಾ. ರಾಯಚೂರು ಜಿಲ್ಲೆಯಲ್ಲಿ ಎರಡು ಜಿಲ್ಲಾ ಮೇಲ್ವಿಚಾರಕ ಸ್ಥಾನಗಳಿವೆ. ರಾಯಚೂರು ಸ್ಥಾನಿಕ ವಲಯದಲ್ಲಿ ರೆವರೆಂಡ್ ಎ. ಸಂಸೋನ್‌ರವರು ಹಾಗೂ ಸಿರವಾರ ವಲಯದಲ್ಲಿ ಪಾಲ್ ಮದುಕರ್‌ರವರು ಇರುತ್ತಾರೆ.

ರೆವರೆಂಡ್: ಇವರನ್ನು ಕನ್ನಡದಲ್ಲಿ ಘನ ಬೋಧಕರು ಎನ್ನುವರು. ಇವರು ಜಿಲ್ಲಾ ಮೇಲ್ವಿಚಾರಕರ ಅಧೀನದಲ್ಲಿ ಸೇವೆ ಸಲ್ಲಿಸುತ್ತಾರೆ. ಇವರು ಜಿಲ್ಲಾ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಲು ಅರ್ಹರಿರುತ್ತಾರೆ. ಒಬ್ಬ ಪಾದ್ರಿಗಿಂತ ಉನ್ನತ ಸ್ಥಾನದಲ್ಲಿರುತ್ತಾರೆ.

ಪಾಸ್ಟರ್: ಇವರು ಕ್ರೈಸ್ತ ಸೇವಾ ವಲಯದಲ್ಲಿ ಬರುವ ಮೊದಲನೇ ಅಥವಾ ಆರಂಭದ ಸ್ಥಾನಮಾನವಾಗಿದೆ. ಎಲ್ಲಾ ಹಳ್ಳಿಗಳಲ್ಲಿ ಸಂಬಂಧಪಟ್ಟ ಊರು, ಸ್ಥಳಗಳಲ್ಲಿನ ಚರ್ಚ್‌ಗಳ ಉಸ್ತುವಾರಿಯನ್ನು ನೋಡಿಕೊಂಡು ಹೋಗುತ್ತಾರೆ. ಇವರು ಚರ್ಚ್‌ಗೊಬ್ಬರಂತೆ ಸೇವೆಯನ್ನು ಸಲ್ಲಿಸುತ್ತಾರೆ. ತಮ್ಮ ಧಾರ್ಮಿಕ ವಿಧಿಗಳಲ್ಲಿ ದೃಢೀಕರಣ ಇನ್ನಿತರ ವಿಶೇಷ ಕಾರ್ಯಗಳನ್ನು ನೆರವೇರಿಸಲು ರೆವರೆಂಡ್ ಅಥವಾ ಡಿ.ಎಸ್.ರವರನ್ನು ಆಹ್ವಾನಿಸುತ್ತಾರೆ.

೫.೫. ಕ್ರೈಸ್ತ ಧಾರ್ಮಿಕ ವಸ್ತುವಾಚಕ ಪದಗಳು

ಸಾಮಾನ್ಯವಾಗಿ ವಸ್ತುಗಳು ಎಂದರೆ ನಾವು ಬಳಸುವ ಅಥವಾ ಬಳಕೆಯಾಗುವ ಉಪಕರಣ ಸಾಧನಗಳಿಗೆ ವಸ್ತು ಎನ್ನುತ್ತೇವೆ. ವಸ್ತುಗಳನ್ನು ಉಪಯೋಗಿಸದೇ ಇರುವ ವ್ಯಕ್ತಿ, ಸಮಾಜ, ಸಮುದಾಯ ಅಥವಾ ಯಾವುದೇ ಧರ್ಮ ಇಲ್ಲ. ಎಲ್ಲ ವ್ಯಕ್ತಿ, ಪಂಗಡ ಮತ್ತು ಧರ್ಮ ಬಳಸುತ್ತದೆ. ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಬಳಸುವ ವಸ್ತುಗಳೇ ಧಾರ್ಮಿಕ ವಸ್ತುಗಳು ಆಗುತ್ತವೆ. ಆ ವಸ್ತುಗಳಿಲ್ಲದೆ ಧರ್ಮದ ಯಾವುದೇ ಆಚರಣೆಗಳು ಇಲ್ಲ. ಅಂತಹ ಧರ್ಮದಲ್ಲಿ ಕ್ರೈಸ್ತ ಧರ್ಮ ಒಂದಾಗಿದೆ. ಈ ಕ್ರೈಸ್ತ ಧರ್ಮದಲ್ಲಿ ಆಚರಿಸುವ ಧಾರ್ಮಿಕ ಆಚರಣೆಗಳು ಹಲವಾರು ಇವೆ. ಅದರಲ್ಲಿ ಕೆಥೋಲಿಕ್ ಕ್ರೈಸ್ತರು ಬಳಸುವ ವಸ್ತುಗಳನ್ನು ಭಾಷಿಕವಾಗಿ ಸಂಬೋಧಿಸುವುದನ್ನು ಈ ಕೆಳಕಂಡಂತೆ ವರ್ಗೀಕರಿಸಿ ವಿವರಿಸಲಾಗಿದೆ.

ಗವಿ: ಗವಿ ಎಂದರೆ ಸಾಮಾನ್ಯವಾಗಿ ನಾವು ಕತ್ತಲಕೋಣೆಯಂತಿರುವ ಸ್ಥಳವನ್ನು ಅಥವಾ ಆಳವಾಗಿರುವ ಸ್ಥಳವನ್ನು ಗವಿ ಅಥವಾ ಗುಹೆ ಎಂದು ಕರೆಯುತ್ತೇವೆ. ಕ್ರೈಸ್ತ ಧರ್ಮದಲ್ಲಿ ಗವಿ ಎಂದರೆ ಯೇಸುವಿನ ತಾಯಿಯಾಗಿರುವ ಸಂತರಾದ ಮರಿಯಳ ನೆನಪಿನಾರ್ಥವಾಗಿ ಆಕೆಯ ಆದರ್ಶ, ಭಕ್ತಿ ಮತ್ತು ಸೇವೆಯನ್ನು ಪರಿಗಣಿಸಿ ಆಕೆಯನ್ನು ಅನುಸರಿಸುವ, ಸ್ಮರಿಸುವ ದೃಷ್ಟಿಯಿಂದ ಮರಿಯಳಿಗೆಂದೇ ದೇವಾಲಯದ ಆವರಣದಲ್ಲಿ ಒಂದು ಕಟ್ಟಡವನ್ನು ನಿರ್ಮಿಸುತ್ತಾರೆ. ಆ ಒಂದು ಕಟ್ಟಡದ ಮೂರ್ತ ಸ್ವರೂಪಕ್ಕೆ ಗವಿ ಎಂದು ಕರೆಯುತ್ತಾರೆ.

ಜಪಸರ: ಕೆಥೋಲಿಕ್ ಕ್ರೈಸ್ತರು ಬಳಸುವಂತಹ ಧಾರ್ಮಿಕ ಆಚರಣಾತ್ಮಕ ಪದವಾಗಿದೆ. ಜಪ ಮತ್ತು ಸರ ಎಂಬ ಬಿಡಿ ಬಿಡಿ ಪದಗಳು ಬೇರೆ ಬೇರೆ ಅರ್ಥ ಕೊಡುತ್ತವಾದರೂ ಕ್ರೈಸ್ತ ಆಚರಮೆಗಳ ಅಥವಾ ಪೂಜಾ ವಿಧಾನಗಳಲ್ಲಿ ಈ ಎರಡು ಪದಗಳು (ಜಪ + ಸರ = ಜಪಸರ) ಸೇರಿ ಒಂದು ಹೊಸ ಪದವಾಗಿ ರಚನೆಯಾಗಿರುವುದನ್ನು ಅಥವಾ ಹೇಳುವ ಮಾತಾಡುವ ಪರಿಭಾಷೆಯಾಗಿ ಕೆಥೋಲಿಕ್ ಕ್ರೈಸ್ತ ಸಮುದಾಯದಲ್ಲಿ ಕಾಣಬಹುದಾಗಿದೆ. ಈ ಜಪಸರವನ್ನು ಕೊರಳಿನ ಸರ ಅಥವಾ ಶಿಲುಬೆಯ ಸರ ಎಂತಲೂ ಕರೆಯಬಹುದಾಗಿದೆ. ಇದು ತಂದೆಯಾದ

ದೇವರ ಮಗನಾದ ಯೇಸುಕ್ರಿಸ್ತನ ಮತ್ತು ಯೇಸುವಿನ ತಾಯಿಯಾದ ಮರಿಯಳನ್ನು ನೆನಪಿಸುವ ಸಲುವಾಗಿ ಪೂಜಿಸುವ ಮಣಿಗಳ ಒಂದು ಹಾರವಾಗಿದೆ. ಅಲ್ಲದೆ ಇದು ಕ್ರೈಸ್ತರೆನಿಸಿಕೊಳ್ಳುವಂತಹ ಸಂಕೇತವೂ ಆಗಿದೆ.

ತೀರ್ಥ: ಕ್ರೈಸ್ತ ಧರ್ಮಗುರುಗಳು ವಿಶ್ವಾಸಿಗಳಿಗೆ ದೀಕ್ಷೆ ನೀಡುವಾಗ ಅವರು ಒಂದು ಬಟ್ಟಲು ಅಥವಾ ತಂಬಿಗೆಯಲ್ಲಿ ನೀರನ್ನು ತೆಗೆದು ಪ್ರಾರ್ಥಿಸಿ ನೀರಿನಿಂದ ತಲೆಗೆ ಚಿಮುಕಿಸಿ ನೀರಿನಿಂದ ಶಿಲುಬೆಯ ಗುರುತು ಹಾಕಿ ದೀಕ್ಷೆ ನೀಡುವಾಗ ಕ್ರಿಸ್ತನ ಎಲ್ಲಾ ಮಹಾ ಉಪಕಾರಗಳು ನೆನಪಿಗೆ ಬರುತ್ತವೆ. ಇಂತಹ ಸ್ಮರಣೆಗಾಗಿ ಸೇವಿಸುವ ಕೊಡುವ ಪವಿತ್ರ ಜಲಸ್ಪರ್ಶಕ್ಕೆ ತೀರ್ಥ ಎನ್ನಬಹುದಾಗಿದೆ.

ತೇರು: ಹಿಂದಿನ ಕಾಲದಲ್ಲಿ ಅಥವಾ ಇತಿಹಾಸದಲ್ಲಿ ರಾಜ ಮಹಾರಾಜರುಗಳನ್ನು ಪ್ರಜೆಗಳು ಗೌರವಿಸುವುದಕ್ಕಾಗಿ ಪಲ್ಲಕ್ಕಿಯಲ್ಲಿ ಎತ್ತುಕೊಂಡು ಊರ ಬೀದಿ ಚೌಕಗಳಲ್ಲಿ ಮೆರವಣಿಗೆ ಹೋಗುತ್ತಿದ್ದರು. ಸಾಮಾನ್ಯ ಮನುಷ್ಯರಿಗೆ ಇಂತಹ ಗೌರವ ನೀಡುವಾಗ ಸಂತರಿಗೆ ಎಂತಹ ಗೌರವ ಸಲ್ಲಬೇಕು ಎಂದು ಕ್ರೈಸ್ತರು ಸಮುದಾಯಕ್ಕೆ, ಊರಿಗೆ, ಪ್ರದೇಶಕ್ಕೆ, ಚರ್ಚ್‌ಗೆ, ಸಂಘಕ್ಕೆ ಮಾಡಿದ ಸೇವೆಯನ್ನು ಪರಿಗಣಿಸಿ ಆಯಾ ಪ್ರಾದೇಶಿಕ ಸಂತರ ಮೂರ್ತಿ ಮಾಡಿ ಅವರ ಪ್ರತಿಮೆಯನ್ನು ಅದೇ ಸಮುದಾಯದ ಚರ್ಚ್‌ನ ಆವರಣದಲ್ಲಿ ಚರ್ಚ್ ಸುತ್ತಲೂ ತಿರುಗಾಡುವ ಮೂಲಕ ಮೆರವಣಿಗೆ ಮಾಡುವಂತಹ ಪ್ರಕ್ರಿಯೆಯಾಗಿದೆ.

ತೈಲ: ಕ್ರೈಸ್ತರು ತೈಲ ಪದಾರ್ಥವನ್ನು ಹೆಚ್ಚಾಗಿ ಬಳಸುತ್ತಾರೆ. ತೈಲ ಎಂದರೆ ಎಣ್ಣೆ. ಆದರೆ ಕ್ರೈಸ್ತರು ಇಲ್ಲಿ ತೈಲ ಎಂದರೆ ಎಣ್ಣೆ ಅಲ್ಲ ಅದು ಪವಿತ್ರಾತ್ಮನ ಅಭಿಷಿಕ್ತವಾದ ಸ್ವಸ್ಥತೆಯ ಎಣ್ಣೆ ಎಂದು ಕರೆಯುತ್ತಾರೆ. ಈ ಪವಿತ್ರ ತೈಲಕ್ಕಾಗಿ ಕೊಬ್ಬರಿ ಎಣ್ಣೆಯನ್ನು ಬಳಸುತ್ತಾರೆ. ಪ್ರಾರ್ಥನೆಯಿಂದ ಕೊಬ್ಬರಿ ಎಣ್ಣೆ ನೋವು, ಕಷ್ಟ, ನಷ್ಟ, ಸಂಕಷ್ಟ ಎಲ್ಲವನ್ನು ನಿವಾರಣೆ ಮಾಡುವ ಪದಾರ್ಥವಾಗಿದೆ. ಶರೀರಗಳಲ್ಲಿ ಎಲ್ಲಿ ನೋವು ಇದೆಯೋ ಅಲ್ಲಿ ಎಣ್ಣೆಯಿಂದ ಶಿಲುಬೆಯ ಗುರುತು ಹಾಕಿಕೊಳ್ಳುತ್ತಾರೆ. ಜೊತೆಗೆ ವಿಶ್ವಾಸದಿಂದ ಲೇಪನ ಮಾಡಿಕೊಂಡರೆ ಎಲ್ಲವೂ ನಿವಾರಣೆಯಾಗುತ್ತದೆ ಎಂದು ಕ್ರೈಸ್ತ ಜನಾಂಗ ಹೇಳುತ್ತದೆ ಎನ್ನಬಹುದಾಗಿದೆ.

ದೇವಾಲಯ: ಕ್ರೈಸ್ತ ಸಮುದಾಯದಲ್ಲಿ ದೇವಾಲಯ ಎಂಬುದು ಕ್ರಿಸ್ತನ ವಿಶ್ವಾಸಿಗಳ ದೇವಾಲಯವಾಗಿದೆ. ಆ ಆಲಯದ ದೇವರೇ ನಾನು ಎಂದು ಕ್ರಿಸ್ತನ ತಂದೆ (ಯಹೋವ) ಹೇಳುತ್ತಾನೆ. ನೀವೆ ನನ್ನ ಆಲಯವಾಗಿದ್ದೀರಿ. ಅದರಲ್ಲಿ ನಾನು ಬಂದು ನೆಲಸುವನು ಎಂದು ದೇವರು ಹೇಳುತ್ತಾನೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಆಚರಿಸುವ ಕ್ರಿಸ್ತ ಸಮುದಾಯವನ್ನು ಗಮನಿಸಲಾಗಿದೆ.

ಪವಿತ್ರ ಹೃದಯ ಪಟ: ಇಲ್ಲಿ ಪವಿತ್ರ ಮತ್ತು ಹೃದಯ ಎಂಬ ಎರಡು ಪದಗಳು ಸೇರಿ ಒಂದು ವಿಶೇಷ ಅರ್ಥ ಕೊಡುವ ಹೊಸ ಪದರಚನೆಯನ್ನು ಕಾಣಬಹುದಾಗಿದೆ. ಇಲ್ಲಿ ಪವಿತ್ರ ಹೃದಯವೆಂದರೆ ಭಗವಾನ್ ಯೇಸುಕ್ರಿಸ್ತ ಎಂದು ಸಂಬೋಧಿಸುತ್ತಾರೆ. ಕ್ರೈಸ್ತ ಸಮುದಾಯದ

ವಿಶ್ವಾಸಿಗಳು ಯೇಸುವಿನ ಭಾವ ಚಿತ್ರ ಪಟವನ್ನು ರೂಪಿಸಿ ಮಾಡಿರುವ ಮೂರ್ತ ಚಿತ್ರ ಪಟಕ್ಕೆ ಪವಿತ್ರ ಹೃದಯದ ಪಟ ಎನ್ನುತ್ತಾರೆ. ಈ ಭಾವಚಿತ್ರದ ಮುಂದೆ ಭಕ್ತರು ನಿಂತು ಬೇಡಿಕೊಳ್ಳುವ ಪ್ರಾರ್ಥಿಸುವ ಸಂಗತಿಯನ್ನು ಗಮನಿಸಬಹುದಾಗಿದೆ.

ಪೂಜಾ ಬಟ್ಟೆ: ಕ್ರೈಸ್ತ ಧಾರ್ಮಿಕ ಆಚರಣೆಗಳಲ್ಲಿ ಒಂದಾದ 'ಕರ್ತನ ರಾತ್ರಿ ಭೋಜನ ಸಂಸ್ಕಾರ' ಎಂದು ಹೊಸ ಪರಿಭಾಷೆಯಾಗಿ ಕಾಣುವ ಈ ಆಚರಣೆಯಲ್ಲಿ ಧರ್ಮಗುರುಗಳು ವಿಶ್ವಾಸಿಗಳಿಗೆ ದ್ರಾಕ್ಷಾರಸ ರೊಟ್ಟಿಯನ್ನು ನೀಡುವಲ್ಲಿ ಅದಕ್ಕಿಂತ ಮುಂಚೆ ಧರ್ಮಗುರುಗಳು ಧರಿಸುವ ವಸ್ತ್ರಧಾರಣೆಯನ್ನು ಪೂಜಾಬಟ್ಟೆಯೆಂದು ಕರೆಯುವರು. ಗುರುಗಳು ನೇಮಕವಾದ ಬಣ್ಣದ ಬಟ್ಟೆ(ಬಿಳಿ)ಯನ್ನು ಧರಿಸಿ ಪವಿತ್ರಾತ್ಮ ಪ್ರೇರಣೆಯಿಂದ ಸಭಿಕರಿಗೆ ಯೇಸುವಿನ ದೇಹ ರಕ್ತದ ಸ್ಮರಣಾರ್ಥವಾಗಿ ನೀಡುವಂತಹ ಕೂಟವಾಗಿದೆ. ಇದನ್ನು ಪರಮಪ್ರಸಾದವೆಂತಲೂ ಕರೆಯುತ್ತಾರೆ.

ಪೂಜಾ ಪಾತ್ರೆ: ಪರಮ ಪ್ರಸಾದವನ್ನು ನೀಡುವ ಸಂದರ್ಭದಲ್ಲಿ ಧರ್ಮಗುರುಗಳು ಮೊದಲಿಗೆ ಬಟ್ಟಲಿನೊಳಗೆ ಸಣ್ಣ ಬಿಲ್ಲೆಯಾಕಾರದ ರೊಟ್ಟಿಯನ್ನು ನೀಡಿ ಇದು ದೇವರ ಶರೀರ ಎಂದು ನಂತರ ದ್ರಾಕ್ಷಾರಸ ನಳಿಕೆಗಳನ್ನೊಳಗೊಂಡ ಪಾತ್ರೆಯನ್ನು ತೆಗೆದುಕೊಂಡು ಇದು ಕರ್ತನ ರಕ್ತ ಎಂದು ಹೇಳಿ ಯೇಸುವಿನ ಮರಣವನ್ನು ನೆನಪಿಸಿಕೊಳ್ಳಿ, ಅಲ್ಲದೆ ವಿಶ್ವಾಸದಿಂದ ಇರ್ರಿ ಎಂದು ಹೇಳುವ ಸಂದರ್ಭದಲ್ಲಿ ಬಳಕೆಯಾಗುವ ಪಾತ್ರೆಗಳು ಪೂಜಾ ಪಾತ್ರೆಗಳೆಂದು ಕರೆಯಿಸಿಕೊಳ್ಳುತ್ತವೆ. ಇದನ್ನು ಬಲಿಪೂಜೆ ಎಂತಲೂ ಕರೆಯುತ್ತಾರೆ.

ಮೇಣದ ಬತ್ತಿ: ಕ್ರಿಸ್ತನ ಮಹಿಮೆಯನ್ನು ಮತ್ತು ಆತನ ಕೃಪೆಯನ್ನು ಸ್ಮರಿಸಲು ಮೇಣದ ಬತ್ತಿಯನ್ನು ಹತ್ತಿಸಿ ಪ್ರಾರ್ಥನೆ ಮಾಡಲಾಗುವುದು. ಕ್ರೈಸ್ತೇತರರು ಬಳಸುವ ಊದಿನಕಡ್ಡಿಯಂತೆ ಕ್ರೈಸ್ತರು ಮೇಣದ ಬತ್ತಿ ಬಳಸಲು ಪ್ರಮುಖ ಕಾರಣ ಕ್ರಿಸ್ತನು ಲೋಕಕ್ಕೆ ಬೆಳಕಾಗಿದ್ದಾನೆ ಎಂದು ಬೆಳಕಿನ ರೂಪವಾದ ಮೇಣದ ಬತ್ತಿಯನ್ನು ಬಳಸುತ್ತಾರೆ ಎಂದು ತಿಳಿಯಬಹುದಾಗಿದೆ.

ಶಿಲುಬೆ: ಸಾಮಾನ್ಯವಾಗಿ ಶಿಲುಬೆ ಎನ್ನುವುದು ಪ್ರಭು ಕ್ರಿಸ್ತನನ್ನು ಮೊಳೆಗಳಿಂದ ಜಡಿದು ತೂಗು ಹಾಕಿದ ಕಟ್ಟಿಗೆ ಎಂದು ಕರೆಯುತ್ತೇವೆ. ಆದರೆ ಇಲ್ಲಿ ಕೇವಲ ಕಟ್ಟಿಗೆಯಾಗಿರದೆ ಲೋಕದ ಪಾಪ, ಶಾಪ, ನಷ್ಟ, ಕಷ್ಟಗಳನ್ನು ಹೊತ್ತುಕೊಂಡು ಪ್ರಾಣ ತ್ಯಾಗ ಮಾಡಿದಂತಹ ಕ್ರಿಸ್ತನ ಗುರುತಾಗಿದೆ. ಅಲ್ಲದೆ ಪ್ರಸ್ತುತ ಕ್ರೈಸ್ತರ ಗುರುತು ಕೂಡ ಆಗಿದೆ. ಯೇಸುವು–"ಯಾವನಾದರೂ ಮನಸ್ಸಿದ್ದರೆ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ" ಎನ್ನುತ್ತಾನೆ. ಇಲ್ಲಿ ತ್ಯಾಗ, ಬಲಿದಾನ, ಕಷ್ಟ, ನಷ್ಟ ಸಹಿಸಿಕೊಂಡು ಲೋಕದ ಮೋಹವನ್ನು ತ್ಯಜಿಸಿ ಕ್ರಿಸ್ತನನ್ನು ಅಂಗೀಕರಿಸುವುದಾಗಿದೆ ಎಂಬುದನ್ನು ಗಮನಿಸಲಾಗಿದೆ.

ಶಿಲುಬೆ ಹಾದಿ ಚಿತ್ರಪಟ: ಕ್ರಿಸ್ತನು ಶಿಲುಬೆ ಮರಣದಂಡನೆಯಾಗಿ ಶಿಲುಬೆಯನ್ನು ಹೊತ್ತು ಕಲ್ವರಿ ಗುಡ್ಡಕ್ಕೆ ಹೋಗುವಾಗ ನಡೆಯಲು ಆಗದೇ ಅಲ್ಲಲ್ಲಿ ನಿಲ್ಲುವ, ಬೀಳುವ, ಕಾಲಿಗೆ ಮುಳ್ಳು ನೆಟ್ಟಿರುವ ಹೀಗೆ ಎಲ್ಲಾ ರೀತಿಯ ಕಲ್ವರಿಗುಡ್ಡ ಮುಟ್ಟುವತನ ಪಟ್ಟಿರುವ ಕಷ್ಟ, ನೋವುಗಳನ್ನು

ಶಿಲುಬೆಹಾದಿ ಚಿತ್ರಪಟ ತೋರಿಸುತ್ತದೆ. ಪ್ರತಿಯೊಂದು ಕೆಥೋಲಿಕ್ ಚರ್ಚ್‌ನ ಒಳಗಡೆ ಗೋಡೆಯ ಸುತ್ತಲೂ ಈ ಚಿತ್ರಪಟಗಳು ಇರುತ್ತವೆ. ಭಕ್ತರು ಎಲ್ಲಾ ಚಿತ್ರಪಟಗಳ ಹತ್ತಿರ ಹೋಗಿ ಕ್ರಿಸ್ತನ ಶ್ರಮ, ಮರಣ ಸ್ಮರಿಸಿಕೊಂಡು ಪ್ರಾರ್ಥಿಸುತ್ತಾರೆ.

ಸಾಂಭ್ರಮಿಕ ತೈಲ: ಕೆಥೋಲಿಕ್ ಕ್ರೈಸ್ತರು ಪರಿಶುದ್ಧ ತೈಲವೆಂದು ಮೂರು ರೀತಿಯಲ್ಲಿ ಬಳಸುತ್ತಾರೆ. ಅದನ್ನು ಸಾಂಭ್ರಮಿಕ ಅಥವಾ ಆಚರಣಾತ್ಮಕ ತೈಲ ಎನ್ನುತ್ತಾರೆ. ೧. ಅಭ್ಯಂಜನ ತೈಲ–ಇದನ್ನು ದೀಕ್ಷಸ್ನಾನ, ದೃಢೀಕರಣ ಹಾಗೂ ಯಾಜಕ ಧರ್ಮಾಧ್ಯಕ್ಷರ ಅಭಿಷೇಕಕ್ಕೆ ಬಳಸುವಂತಹ ತೈಲವಾಗಿದೆ. ೨. ದೀಕ್ಷಸ್ನಾನಾರ್ಥಿಗಳ ತೈಲ– ಇದು ಯಾರು ದೀಕ್ಷೆ ಪಡೆಯಲು ಇಚ್ಛಿಸುತ್ತಾರೋ ಅವರಿಗೆ ನೀಡುವಂತಹದ್ದಾಗಿದೆ. ೩. ವ್ಯಾದಿಸ್ತರ ತೈಲ– ಇದು ಕಾಯಿಲೆಯಿಂದ ಹಾಸಿಗೆ ಹಿಡಿದವರಿಗೆ ನೀಡುವ ತೈಲವಾಗಿದೆ.

ಹಬ್ಬದ ಧ್ವಜ: ಕ್ರೈಸ್ತ ವಿಶ್ವಾಸಿಗಳು ಯಾವುದೇ ಸಂತರ, ಯೇಸುವಿನ, ಮರಿಯಳ ಬಗ್ಗೆ ಉದಾ. ಕ್ರಿಸ್‌ಮಸ್, ಗುಡ್‌ಫ್ರೈಡೇ, ಈಸ್ಟರ್ ಇನ್ನಿತರ ಸಂತರ ಸ್ಮರಣಾರ್ಥ ಕಾರ್ಯಗಳಲ್ಲಿ ಸಂಭ್ರಮದ ದೃಷ್ಟಿಯಿಂದ ಧ್ವಜವನ್ನು ಬಳಸುತ್ತಾರೆ. ಅದನ್ನೇ ಹಬ್ಬದ ಧ್ವಜ ಎನ್ನುವರು. ಅದು ಬಿಳಿ ಬಣ್ಣದ ಬಟ್ಟೆ ಅದರ ಮಧ್ಯದಲ್ಲಿ ಕೆಂಪು ಬಣ್ಣದ ಶಿಲುಬೆ ಇರುತ್ತದೆ. ಇದು ಕ್ರೈಸ್ತರ ಸಂಕೇತವಾಗಿರುತ್ತದೆ.

ಗಂಟೆ ಗೋಪುರ: ಕೆಥೋಲಿಕ್ ಕ್ರೈಸ್ತರು ಈ ಗಂಟೆ ಗೋಪುರವನ್ನು ನಿರ್ಮಿಸುತ್ತಾರೆ. ದೇವಾಲಯದ ಆವರಣದಲ್ಲಿ ಗೋಪುರವನ್ನು ನಿರ್ಮಿಸಿ ಅದರೊಳಗೆ ದೊಡ್ಡದಾದ ಗಂಟೆಯನ್ನು ಅಳವಡಿಸಿರುತ್ತಾರೆ. ಪ್ರೊಟೆಸ್ಟೆಂಟರಲ್ಲಿ ದೇವಾಲಯದ ನೆತ್ತಿಯ ಮೇಲೆ ಗಂಟೆಯನ್ನು ನಿರ್ಮಿಸುತ್ತಾರೆ. ಉದಾ. ಮೆಥೋಡಿಸ್ಟ್ ಪಂಗಡದವರು ಈ ಗಂಟೆಯನ್ನು ಸಾಮಾನ್ಯವಾಗಿ ಆರಾಧನೆ ಮತ್ತು ಯಾರಾದರೂ ತೀರಿದ ಸಂದರ್ಭದಲ್ಲಿ ಬಾರಿಸುತ್ತಾರೆ. ಮತ್ತು ಅವರನ್ನು ಒಯ್ಯುವ ಮುಂಚೆ ಗಂಟೆ ಬಾರಿಸಿ ಶವಸಂಸ್ಕಾರಕ್ಕೆ ಹೋಗುತ್ತಾರೆ. ಅಲ್ಲದೆ ತೀರಿದ ವ್ಯಕ್ತಿಯ ವಯಸ್ಸಿಗೆ ಅನುಗುಣವಾಗಿ ಅಷ್ಟು ಸಲ ಗಂಟೆ ಬಾರಿಸುತ್ತಾರೆ ಎಂಬುದನ್ನು ಗಮನಿಸಲಾಗಿದೆ.

೫.೬. ವಿಶೇಷ ಪದಗಳು ಮತ್ತು ಪರಿಭಾಷೆ

ಭಾರತವೆಂಬ ನಮ್ಮ ದೇಶದಲ್ಲಿ ಹಲವಾರು ಧರ್ಮಗಳು ಇವೆ. ಇಂತಹ ಧರ್ಮಗಳಲ್ಲಿ ಕ್ರೈಸ್ತ ಧರ್ಮವೂ ಒಂದು. ಈ ಧರ್ಮವೂ ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ವಿಶೇಷ ಆಚರಣೆಗಳನ್ನು ಹೊಂದಿದೆ. ಸದರಿ ಸಂಪ್ರದಾಯಗಳಲ್ಲಿ ಬಳಸುವ ಪದಗಳು ಈ ಕೆಳಕಂಡಂತಿವೆ.

ಪಿತ ಸುತ ಪವಿತ್ರಾತ್ಮ: ಇದು ಖಂಡವಾಗಿ ನೋಡಿದರೆ ಕನ್ನಡದ ಪದಗಳೇ ಆದರೂ ಅಖಂಡವಾಗಿ ಓದಿದಾಗ ವಿಶೇಷವಾದ ಪದವಾಗಿ ಕಂಡುಬರುತ್ತದೆ. ಇದನ್ನು ಕ್ರೈಸ್ತ ಧಾರ್ಮಿಕ ಆಚರಣೆಗಳಾದ 'ದೀಕ್ಷಾಸ್ನಾನ'ದಲ್ಲಿ ಬಳಕೆ ಮಾಡುವರು.

ತಂದೆ ಮಗ ಪರಿಶುದ್ಧಾತ್ಮ: ಈ ಪದವನ್ನು ಕ್ರೈಸ್ತರಲ್ಲಿರುವ ಇನ್ನೊಂದು ಪಂಗಡ 'ಪ್ರೊಟೆಸ್ಟೆಂಟರು' ಬಳಸುತ್ತಾರೆ. ಇವರು ಕೂಡ ಇದೇ ಕ್ರೈಸ್ತರ ದೀಕ್ಷೆ ಕೊಡುವ ಸಂದರ್ಭದಲ್ಲಿ ಪಾದ್ರಿಗಳು ವ್ಯಕ್ತಿಗಳ ಮೇಲೆ (ತಲೆ) ಕೈಯಿಟ್ಟು ಪ್ರಾರ್ಥಿಸುವರು.

ಕರ್ತನ ಭೋಜನ ಸಂಸ್ಕಾರ/ಕರ್ತನ ರಾತ್ರಿ ಭೋಜನ: ಇದು ಕ್ರೈಸ್ತೀಯ ಆಚರಣೆಗಳಲ್ಲಿ ಒಂದಾಗಿದ್ದು ದೀಕ್ಷಾಸ್ನಾನ ತೆಗೆದುಕೊಂಡ ಮೇಲೆ ದೃಢೀಕರಣ ಆದ ಮೇಲೆ ತಿಂಗಳ ಮೊದಲನೇ ರವಿವಾರ ಪ್ರಾರ್ಥನೆಯಲ್ಲಿ ತೆಗೆದುಕೊಳ್ಳುವ ತೀರ್ಥ/ ಪ್ರಸಾದ ಎನ್ನಬಹುದು. ಈ ಪದವೂ ಸಾಂಘಿಕವಾಗಿ ನೋಡಿದಾಗ ವಿಶೇಷವಾಗಿ ಗೋಚರಿಸುತ್ತದೆ. ಅಂದು ಯೇಸುಕ್ರಿಸ್ತ ಸ್ವಯಂ ನೀಡಿದ್ದಾನೆಂದು ಇವತ್ತು ಪಾದ್ರಿಗಳು ಸ್ಮರಣಾರ್ಥ ನೆರವೇರಿಸುವರು.

ಬೂದಿ ಬುಧವಾರ: ಕ್ರೈಸ್ತರು ಉಪವಾಸ ಮಾಡುವ ಸಮಯದಲ್ಲಿ ಆರಂಭದ ದಿನವೇ 'ಬೂದಿ ಬುಧವಾರ' ಆಗಿರುತ್ತದೆ. ಸಾಮಾನ್ಯವಾಗಿ ನಾವು ಬುಧವಾರವನ್ನು ಬಳಸುತ್ತೇವೆ. ಆದರೆ ಬೂದಿ ಬುಧವಾರ ಎಂಬ ಜಂಟಿ ಪದವನ್ನು ನಾವು ಕನ್ನಡದ ಕ್ರೈಸ್ತ ಸಾಹಿತ್ಯದಲ್ಲಿ ಮಾತ್ರ ಕಾಣಬಹುದು. ಆದಿಯಲ್ಲಿ ಯೆರೂಸಲೆಂನಲ್ಲಿ ಗೋಣಿತಟ್ಟು ಸುತ್ತಿಕೊಂಡು ಉಪವಾಸ ಆರಂಭಿಸುತ್ತಿದ್ದರು. ಅದನ್ನು ನಾವು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಬೂದಿ ಬುಧವಾರ ಎಂದು ಆಚರಿಸುವರು.

ಖರ್ಜೂರಗರಿಗಳ ಭಾನುವಾರ: ಇದು ಸಹಿತ ವಾರಗಳಲ್ಲಿ ಬಳಸುವ ಪದವಾಗಿದ್ದು ಜಂಟಿಯಾಗಿ ಬಳಸಬೇಕಾಗುತ್ತದೆ. ಕ್ರಿಸ್ತನು ಕತ್ತೆಯ ಮೇಲೆ ಯೆಶೂಸಲೆಂ ಪಟ್ಟಣಕ್ಕೆ ರಾಜನಾಗಿ ಪ್ರವೇಶ ಮಾಡುವ ಸಂದರ್ಭದಲ್ಲಿ ಅಂದು ವಿಶ್ವಾಸಿಗಳು ಜಯಕಾರ ಮಾಡುತ್ತಿದ್ದರು ಇದನ್ನು ಈಗಲೂ ನಮ್ಮಲ್ಲಿ ಆಚರಿಸುವರು.

ಶುಭ ಶುಕ್ರವಾರ: ಈ ವಾರವೂ ಕ್ರೈಸ್ತರಲ್ಲೇ ಬಳಕೆಯಾಗುತ್ತದೆ. ಇದು ಕ್ರೈಸ್ತರು ಆಚರಿಸುವ 'ಗುಡ್‌ಫ್ರೈಡೆ' ಆಚರಣೆಯಾಗಿದೆ. ಇದರ ವಿಶೇಷವೆಂದರೆ ಕ್ರಿಸ್ತನು ಮರಣಿಸಿರುವ ದಿನ ಆ ದಿನ ಕ್ರೈಸ್ತ ವಿಶ್ವಾಸಿಗಳಿಗೆ ದುಃಖದ ದಿನವಾಗಿದ್ದರೂ 'ಶುಭ' ಎಂದು ಸಂಬೋಧಿಸುತ್ತಾರೆ. ಏಕೆಂದರೆ ಪಾಪದ ಪರಿಹಾರ ದಿನ ಎಲ್ಲರ ಪಾಪಗಳು ಅಲ್ಲಿ ಕ್ಷಮಿಸಲ್ಪಟ್ಟ ದಿನ ಎಂದು ಬಲವಾಗಿ ನಂಬುವುದರಿಂದ ಕ್ರೈಸ್ತರಿಗೆ ಆ ದಿನ ಶುಭ ದಿನ ಅದೇ 'ಶುಭ ಶುಕ್ರವಾರ ಎಂದು ನಂಬುವರು.

ಹೀಗೆ ಕ್ರೈಸ್ತ ಧಾರ್ಮಿಕ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಕಂಡುಬಂದಿರುವ ಪದ ಮತ್ತು ಪರಿಭಾಷೆಗಳನ್ನು ಗುರ್ತಿಸಲಾಗಿದೆ.

❖❖❖

ಅಧ್ಯಾಯ : ಆರು

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಾಯ: ಆರು

ಸಮಾರೋಪ

ಈ ಅಧ್ಯಯನ ವಿಷಯವಾಗಿರುವ 'ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯ ಭಾಷೆ' ಎಂಬುದರಲ್ಲಿ ವಿಶೇಷವಾಗಿ ಧಾರ್ಮಿಕ ಸಾಹಿತ್ಯದ ಭಾಷೆ ಹಾಗೂ ಸಂಸ್ಕೃತಿ ಸಂಪ್ರದಾಯಗಳಲ್ಲಿ ಬಳಸುವ ಭಾಷೆ(ನುಡಿ)ಯನ್ನು ಗಮನಿಸುವುದಾಗಿದ್ದರಿಂದ ಸದರಿ ಭಾಷಾ ಪರಿಕಲ್ಪನೆಯನ್ನು ಸವಿವರವಾಗಿ ವಿಶ್ಲೇಷಿಸಲಾಗಿದೆ. ಕ್ರೈಸ್ತ ಧರ್ಮಗ್ರಂಥವಾಗಿರುವ 'ಬೈಬಲ್' ಹಾಗೂ ಆಯ್ದ ಕ್ರೈಸ್ತ ಧಾರ್ಮಿಕತೆಯ ಪೂರಕ ಕೃತಿಗಳು ಹಾಗೂ ಸಂಗೀತ ಮತ್ತು ಕೀರ್ತನೆಗಳ ಪುಸ್ತಕ, ಉಜ್ಜೀವನ ಗೀತಾಪುಸ್ತಕ, ಕ್ರೈಸ್ತ ಲೇಖನಗಳು, ಕರಪತ್ರ ಬರಹ, ಗೋಡೆಬರಹ, ಚರ್ಚ್ ಅಂಕಿತನಾಮಗಳಲ್ಲಿ ಬಳಕೆಯಾಗಿರುವ ಕನ್ನಡ ನುಡಿಯನ್ನು ಗಮನಿಸಲಾಗಿದೆ. ಹಾಗೆಯೇ ಸಾಂಸ್ಕೃತಿಕವಾಗಿ ಕ್ರಿಶ್ಚಿಯನ್ನರು ಮಾಡುವ ಹಬ್ಬ–ಹರಿದಿನ, ಆಚಾರ–ವಿಚಾರ, ನಂಬಿಕೆ–ಸಂಪ್ರದಾಯಗಳಲ್ಲಿನ ಕನ್ನಡ ನುಡಿಯ ಬಳಸುವಿಕೆಯನ್ನು ಕಂಡುಕೊಳ್ಳಲಾಗಿದೆ.

ಅಧ್ಯಯನದ ಫಲಿತಗಳು

* ಕ್ರೈಸ್ತ ಧಾರ್ಮಿಕ ಸಾಹಿತ್ಯದ ಭಾಷಿಕ ವಿವರಗಳನ್ನು ಗದ್ಯ, ಪದ್ಯ, ಅನುವಾದ, ಪ್ರಚಾರ ಸಾಹಿತ್ಯ ಹಾಗೂ ಧರ್ಮೋಪದೇಶ ಭಾಷೆ ಎಂಬುದಾಗಿ ವಿಂಗಡಿಸಲಾಗಿದೆ. ಸಾಹಿತ್ಯವನ್ನು ಗಮನಿಸಿದಾಗ ಅದರಲ್ಲಿ ಸ್ಥಳನಾಮಗಳು, ವ್ಯಕ್ತಿನಾಮಗಳು, ಸಾಮ್ಯಗಳು, ಕಾಲಜ್ಞಾನಕ್ಕೆ ಸಂಬಂಧಿಸಿದ ಅಂಶಗಳನ್ನು ಭಾಷಿಕವಾಗಿ ಕಂಡುಕೊಂಡಿರುವುದು.

* ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಮೂಲ ಭಾಷೆಯಾದ ಗ್ರೀಕ್, ಇಬ್ರಿಯ ಭಾಷೆಗಳಲ್ಲಿ ಉಚ್ಚರಿಸಲ್ಪಡುವಂತೆ ಕನ್ನಡದಲ್ಲಿಯೂ ಉಚ್ಚರಿಸಲ್ಪಟ್ಟಿವೆ. ಲಿಪಿ ಮಾತ್ರ ಕನ್ನಡ ಭಾಷೆ, ಧ್ವನಿ ಉಚ್ಚಾರ ಮೂಲ ಭಾಷೆಯದ್ದು ಎಂದು ಗಮನಿಸಿರುವುದು. ವ್ಯಕ್ತಿನಾಮಗಳಿಗೆ ಉದಾ. ಮತ್ತಾಯ, ಲೂಕ, ಯೋಹಾನ, ತಿಮೋಥಿ, ಥೆಸಲೋನಿಕ, ತೀತ, ತದ್ದಾಯ, ಅಲ್ಫಾಯ, ಮಾರ್ಕ, ಪೇತ್ರ, ಸಿಮೋನ, ಯಾಕೋಬ, ಆಂದ್ರೆಯ, ಫಿಲಿಪ್ಪ, ಬಾರ್ತೊಲೋಮಾಯ, ಯೂದ ಹೀಗೆ ಹಲವು ಹೆಸರುಗಳನ್ನು ಅಧ್ಯಯನದಲ್ಲಿ ಗಮನಿಸಿದ್ದು ಅವೆಲ್ಲವೂ ಮೂಲ ಭಾಷೆಯ ಉಚ್ಚಾರಣೆಯಲ್ಲಿದ್ದರೂ ಕನ್ನಡ ಭಾಷೆಯಲ್ಲಿ ರಚನೆಯಾಗಿದ್ದರಿಂದ

ಕನ್ನಡದವೇ ಎನ್ನುವಷ್ಟು ಸಾಹಿತ್ಯದಲ್ಲಿ ಬೇರೂರಿವೆ. ಸ್ಥಳನಾಮಗಳಿಂದ ಯೂದಾಯ, ಗಲಿಲಾಯ, ಗೆತ್ಸೆಮನೆ ತೋಟ, ಕಲ್ವರಿ, ಬೆತ್ಲೆಹೇಮ್, ಜೆರುಸಲೇಂ, ಯೋರ್ದನ್, ಇಸ್ರೇಲ್, ರೋಮ್ ಹೀಗೆ ಅನೇಕ ಸ್ಥಳನಾಮಗಳನ್ನು ಗುರ್ತಿಸಿ ಭಾಷಿಕವಾಗಿ ಅಧ್ಯಯನ ಮಾಡಿರುವುದು.

* ಕ್ರೈಸ್ತ ಧರ್ಮಗ್ರಂಥವಾದ ಸತ್ಯವೇದದಲ್ಲಿ ಸಾಮ್ಯಗಳು ಅಥವಾ ದೃಷ್ಟಾಂತಗಳು ಕಂಡುಬಂದವು. ಅವುಗಳಲ್ಲಿನ ಭಾಷೆಯನ್ನು ಗಮನಿಸಿದಾಗ ಹೊಸ ಪದ ಬಳಕೆಯನ್ನು ಕಂಡುಕೊಳ್ಳಲಾಯಿತು. ಒಂದೇ ದೃಷ್ಟಾಂತವನ್ನು ಆಯ್ಕೆ ಮಾಡಿಕೊಂಡು ಹಲವು ನಾಮಗಳಲ್ಲಿ ಅಥವಾ ನಾಲ್ಕು ರೀತಿಯಲ್ಲಿ ಹೊಸ ಹೊಸ (ಬೈಬಲ್)ಗ್ರಂಥಗಳಾಗಿ ಕನ್ನಡದಲ್ಲಿ ರಚಿತವಾಗಿರುವ ಪರಿಶುದ್ಧ ಬೈಬಲ್, ಪವಿತ್ರ ಬೈಬಲ್, ಪವಿತ್ರ ವಚನ ಹಾಗೂ ಸತ್ಯವೇದ ಎನ್ನುವ ಧರ್ಮಗ್ರಂಥಗಳಲ್ಲಿನ ಲೂಕನು ಬರೆದ ಸುವಾರ್ತೆ ೧೦ನೇ ಅಧ್ಯಾಯ ೧೯ರಿಂದ ಕೆಲವು ವಚನಗಳನ್ನು ಗಮನಿಸಿದಾಗ ಬೋಗಪುರುಷ ಮತ್ತು ಭಿಕ್ಷುಗಾರನು ಎಂಬುವುದು ಕೃತಿಯಿಂದ ಕೃತಿಗೆ (ಬೈಬಲ್ ಗ್ರಂಥ) ಅಂದರೆ, ಮೊದಲ ರಚಿತ ಧರ್ಮ ಗ್ರಂಥ ಸತ್ಯವೇದಕ್ಕು ನಂತರ ರಚನೆಯಾದ ಸತ್ಯವೇದಕ್ಕೂ ಪದಗಳು, ವಾಕ್ಯಗಳಿಂದ ಭಿನ್ನತೆಯನ್ನು ಕಂಡುಕೊಂಡಿರುವುದು. ಉದಾ.

ಸತ್ಯವೇದ	**ಪವಿತ್ರ ಬೈಬಲ್**	**ಪರಿಶುದ್ಧ ಬೈಬಲ್**	**ಪವಿತ್ರ ವಚನ**
ಭಿಕ್ಷುಕ	ಬಡವ	ಬಡ ಮನುಷ್ಯ	ಒಬ್ಬ ಭಿಕ್ಷುಕ
ಬಿದ್ದ ಎಂಜಲನ್ನು	ಬೀಳುವ ರೊಟ್ಟಿ	ಎಂಜಲು	ರೊಟ್ಟಿ ತುಂಡು
ದಯವಿಟ್ಟು	ಕರುಣೆ ಇಟ್ಟು	ಕರುಣೆ ತೋರು	ಕರುಣೆ ಇಟ್ಟು
ಸಂಕಟ	ಯಾತನೆ	ಬೆಂಕಿ	ಉರಿ
ಡೊಂಗರ	ಅಗಾಧ	ಡೊಂಗುರ	ಅಗಾಧ

* ಮೂಲ ಅನುವಾದ ಮತ್ತು ನಂತರ ಅನುವಾದ ಕೃತಿಗಳಲ್ಲಿಯೂ ಭಾಷಾ ಭಿನ್ನತೆಯನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಮೂಲ ಅನುವಾದದಲ್ಲಿ ಅಕ್ಷರ ಬಳಕೆ	**ನಂತರ ಅನುವಾದದಲ್ಲಿ ಅಕ್ಷರ ಬಳಕೆ**
'ಡ'	'ದ'
'ಯಿ'	'ಇ'
'ಂ'	'ನ್ನ'
'ಖ'	'ಕ'
'ವು'	'ಉ'

'ಳಿ೦/ಳ'	'ಲಿ೦/ಲ'
'ಈಲಿ'	'ಅಲ್ಲಿ'
'ಸ'	'ಶ'

ಹೀಗೆ ಅನುವಾದದಿಂದ ಭಾಷೆಯಲ್ಲಿ ಆಗಿರುವ ಬದಲಾವಣೆ ಹಾಗೂ ಬೆಳವಣಿಗೆ ಎಂದು ಗಮನಿಸಲಾಗಿದೆ. ಇದನ್ನು ಅಕ್ಷರದಲ್ಲಾದ ಅಥವಾ ಧ್ವನಿಮಾದಲ್ಲಾದ ಬದಲಾವಣೆ ಎಂದು ಕರೆಯಬಹುದು. ಇದಕ್ಕೆ ಸಂಬಂಧಿಸಿ ಅಧ್ಯಯನದಲ್ಲಿ ಸವಿವರವಾಗಿ ವಿಶ್ಲೇಷಣೆ ನೀಡಲಾಗಿದೆ. ಹಾಗೆಯೇ ಅಕ್ಷರದೊಂದಿಗೆ ಪದ ವಾಕ್ಯದಲ್ಲಿಯೂ ಭಿನ್ನತೆಯ ಬಳಕೆಯನ್ನು ಭಾಷಿಕವಾಗಿ ಕಂಡುಕೊಂಡಿರುವುದು.

* ಕ್ರೈಸ್ತರ ಧಾರ್ಮಿಕ ಸಾಹಿತ್ಯದಲ್ಲಿ ಸಮಪಾಲು ನಿರ್ವಹಿಸುವ ಗೀತೆಗಳು ರಚನೆಯಾಗಿರುವುದನ್ನು ಗಮನಿಸಲಾಯಿತು. ಅದರಲ್ಲಿ ಕ್ರೈಸ್ತರ ಪ್ರಮುಖ ಎರಡು ಪಂಥಗಳಾಗಿರುವ ಕೆಥೋಲಿಕ್ ಹಾಗೂ ಪ್ರೊಟೆಸ್ಟೆಂಟ್‌ರು ವಿಭಿನ್ನತೆಯಲ್ಲಿ ಗೀತೆಗಳನ್ನು ರಚಿಸಿ ಹಾಡುತ್ತಾರೆ ಎಂದು ಗುರ್ತಿಸಲಾಗಿದೆ. ಪ್ರೊಟೆಸ್ಟೆಂಟ್‌ರ ಮೆಥೋಡಿಸ್ಟ್ ಪಂಥದವರು ವಿಶೇಷವಾಗಿ ಜನನ ಗೀತೆ, ವಿವಾಹ ಗೀತೆ, ಕ್ರಿಸ್ತನ ಶ್ರಮದಿನಗಳ ಗೀತೆ, ಶವಸಂಸ್ಕಾರ ಗೀತೆ ಎಂಬುದಾಗಿ ಹಲವು ರೀತಿಯ ಹಾಡುಗಳನ್ನು ಹಾಡುತ್ತಾರೆ ಎಂಬುದನ್ನು ಗಮನಿಸಲಾಗಿದೆ. ಉದಾ.

ಕೆಥೋಲಿಕ್ ಕ್ರೈಸ್ತ ಗೀತೆಗಳನ್ನು ಗುರ್ತಿಸಿರುವುದು

ಓ ತರ್ಕ ದೇವರೇ ಸ್ವರ್ಗ ಲೋಕ ರಾಜರೆ
ಸರ್ವಶಕ್ತ ದೇವರೇ ಪ್ರೀತಿ ಪಾತ್ರ ತಂದೆಯೇ
ಹೊಗಳಿ ಸ್ತುತಿಸಿ ನಮಿಪೆವು ಆರಾಧಿಸುವೆವು
ಶ್ರೇಷ್ಠ ನಿಮ್ಮ ಮಹಿಮೆಯು ಎಂದು ಸ್ತೋತ್ರ ಗೈವೆವು

ಪ್ರೀತಿ ಸ್ವರೂಪನೇ ಶರಣಂ॥ ದಿವ್ಯ ಜ್ಯೋತಿಯೇ ಶರಣಂ
ಕರುಣಾ ಮೂರ್ತಿಯೇ ಶರಣಂ
ಜೀವಧಾತನೇ ಶರಣಂ॥ ದಿವ್ಯ ತೇಜನೆ ಶರಣಂ
ಶಾಂತಿಧಾತನೆ ಶರಣಂ
ದೇವದೇವನೇ ಶರಣಂ॥ ಲೋಕ ಪಾಲನೇ ಶರಣಂ
ಪ್ರೀತಿ ಪಾಲನೆ ಶರಣಂ

ಪ್ರೊಟೆಸ್ಟೆಂಟ್ ಕ್ರೈಸ್ತ ಗೀತೆಗಳನ್ನು ಗುರ್ತಿಸಿರುವುದು

ಹೊಸ ವರ್ಷದ ಸಂದರ್ಭ

ಬನ್ನಿ ಕೂಡ ಹಾಡುವ
ಹರ್ಷದಿಂದ ಗೀತವ
ಮೋಸ ನಷ್ಟ ಕಷ್ಟವು
ಎಷ್ಟು ಬಂದು ಇದ್ದರೂ
ಜೀವದಿಂದ ಈಗಲೂ
ಹೊಸ ವರ್ಷ ಕಂಡೆವು

ಮಳೆಗಾಗಿ ಪ್ರಾರ್ಥಿಸುವಾಗ

ಲೋಕವನ್ನು ಕಾಯುವಂಥ
ಪ್ರೇಮವುಳ್ಳ ತಂದೆಯೇ
ಕ್ಷಾಮ ಕಷ್ಟದೊಳಗಿಂದ
ರಕ್ಷಿಸೆಮ್ಮ ಕರ್ತನೆ
ಕರ್ತನೇ ಕರ್ತನೇ ರಕ್ಷಿಸೆಮ್ಮ ಕರ್ತನೇ

ಹೀಗೆ ಪದ್ಯ ಸಾಹಿತ್ಯ ವಿಶಾಲವಾಗಿ ಕನ್ನಡ ಕ್ರೈಸ್ತ ಸಾಹಿತ್ಯದಲ್ಲಿ ಕಂಡುಬಂದಿದೆ. ಗೀತೆಗಳಲ್ಲಿ, ವಾಕ್ಯದಲ್ಲಿ ಕೆಥೋಲಿಕರು ಬಹುವಚನವನ್ನು ಬಳಸಿದರೆ, ಪ್ರೊಟೆಸ್ಟೆಂಟರು ಏಕವಚನವನ್ನು ಬಳಸುತ್ತಾರೆ ಎಂಬುದನ್ನು ಗುರ್ತಿಸಲಾಗಿದೆ. ಉದಾ. ಯೇಸುವನ್ನು, ತಾಯಿಯಾದ ಮರಿಯಾಳನ್ನು ಕೆಥೋಲಿಕರು ಅವರು ಎಂದು ಸಂಬೋಧಿಸಿದರೆ, ಪ್ರೊಟೆಸ್ಟೆಂಟರು ಅವನು, ಆಕೆ ಎಂದು ಸಂಬೋಧಿಸುವರು ಎಂದು ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನದಿಂದ ತಿಳಿದಿರುವುದು.

* ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ರೈಸ್ತ ಧರ್ಮದ ಭಾಷೆಯನ್ನು ಸಂಸ್ಕೃತಿಯಲ್ಲಿ ಗಮನಿಸಲಾಯಿತು. ಯಾವುದೇ ಸಮುದಾಯದ ಸಂಸ್ಕೃತಿಗೆ ಒಂದು ಐತಿಹ್ಯ ಇರುವಂತೆ ಕ್ರೈಸ್ತ ಸಮುದಾಯಕ್ಕೂ ಚರಿತ್ರೆ ಇದೆ ಅದನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಅಲ್ಲದೆ ರಾಯಚೂರು ಜಿಲ್ಲೆಯ ಧಾರ್ಮಿಕ ಆಡಳಿತ ಸ್ವರೂಪ ಮತ್ತು ಇತಿಹಾಸವನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ಜೊತೆಗೆ ಕ್ರೈಸ್ತರ ಪೂರ್ವಜರು ಹಿಂದಿನ ಕಾಲದಲ್ಲಿ ಹಾಗೂ ಮಾನಸಾಂತರ ಸಂದರ್ಭದ ಕ್ರೈಸ್ತರು ಯಾವ ಆಚರಣೆ, ಜೀವನ ವೃತ್ತಿಗಳನ್ನು ಮಾಡುತ್ತಿದ್ದಾರೆ ಎಂಬುದನ್ನು ವಿವರವಾಗಿ ಕಂಡುಕೊಂಡಿರುವುದು.

* ಧರ್ಮದ ಬಹುಮುಖ್ಯ ಅಂಗವಾಗಿರುವುದು ಆಚರಣೆಗಳು. ಈ ಧಾರ್ಮಿಕ ಆಚರಣೆಗಳಲ್ಲಿ ಕನ್ನಡ ಭಾಷೆ ಬಳಕೆಯಾಗಿದೆ. ಆಚರಣೆಗಳನ್ನು ಧರ್ಮ ಹಿನ್ನೆಲೆಯ, ಕೌಟುಂಬಿಕ ಹಿನ್ನೆಲೆಯ

ಹಾಗೂ ಸಮುದಾಯ ಹಿನ್ನೆಲೆಯ ಆಚರಣೆಗಳೆಂದು ವಿಂಗಡಿಸಿ ಆ ಆಚರಣೆಗಳಲ್ಲಿ ಮುಖ್ಯವಾಗಿ ಮಾಧ್ಯಮವಾಗಿರುವ ಕನ್ನಡ ಭಾಷೆಯ ಬಳಕೆಯ ಪರಿಯನ್ನು ಅರಿತಿರುವುದು.

* ವೈಯಕ್ತಿಕ ಅಥವಾ ಕೌಟುಂಬಿಕ ಆಚರಣೆಯಾದ ದೀಕ್ಷೆ ಸಂದರ್ಭದಲ್ಲಿ ಕ್ರೈಸ್ತ ಪಾದ್ರಿಗಳು ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಿ ಸಾನಿಧ್ಯ ಎಂಬ ನಿನಗೆ ದೀಕ್ಷಾಸ್ನಾನ ನೀಡುತ್ತೇನೆ ಎಂದು ಸಂಬೋಧಿಸುವ ಹಾಗೂ 'ದೃಢೀಕರಣ' ಸಂದರ್ಭದಲ್ಲಿ ಜಿಲ್ಲಾ ಮೇಲ್ವಿಚಾರಕರು ವಾಗ್ದಾನ ನೀಡುವ ಭಾಷೆಯನ್ನು ಗುರ್ತಿಸಿರುವುದು.

* ವಿವಾಹ ಸಂದರ್ಭದಲ್ಲಿ ಪಾದ್ರಿಗಳು ಮದುಮಗನ ಮತ್ತು ಮದುಮಗಳ ನಡುವೆ ಪರಸ್ಪರ ಒಪ್ಪಿಗೆಯ ಅಂಶಗಳನ್ನು ಹೇಳುವಾಗ ಬಳಸಿದ ಭಾಷೆಯನ್ನು ಗಮನಿಸಿರುವುದು.

ಪಾದ್ರಿ ಮದುಮಗನಿಗೆ – ಪವನ ಎಂಬ ನೀನು ಈ ಸ್ತ್ರೀಯನ್ನು ನಿನ್ನ ವಿವಾಹದ ಹೆಂಡತಿಯಾಗಿ ಅಂಗೀಕರಿಸಿ ವಿವಾಹದ ಪರಿಶುದ್ಧವಾದ ಸ್ಥಿತಿಯಲ್ಲಿ ಹೊಂದಿಕೊಂಡು ಬಾಳ್ವೆ ಮಾಡಲು ಒಪ್ಪಿಕೊಳ್ಳುತ್ತೀಯೋ? ಈಕೆಯನ್ನು ಪ್ರೀತಿ ಮಾಡಿ ಆಧರಿಸಿ, ಸನ್ಮಾನಿಸಿ, ಸುಖ ದುಃಖಗಳಲ್ಲಿ ಸನ್ಮಾನಿಸಿ, ಸಂರಕ್ಷಿಸಿ ಪರಸ್ತ್ರೀಯರಲ್ಲಿ ಮನಸ್ಸಿಡದೆ ನೀವಿಬ್ಬರೂ ಜೀವಿಸುವ ಮಟ್ಟಿಗೆ ಈಕೆಯ ಸಂಗಡ ಮಾತ್ರ ಇರುವುದಕ್ಕೆ ಒಪ್ಪುತ್ತೀಯೋ? ಎಂದು ಪ್ರಶ್ನಿಸಿ ಒಪ್ಪಿಗೆ ಪಡೆದು ಪುನಃ ಅದೇ ರೀತಿಯಾಗಿ,

ಮದುಮಗಳಿಗೂ ಪ್ರಶ್ನಿಸಿ ಸಮ್ಮತಿಯನ್ನು ಪಡೆಯುವುದನ್ನು ಸಾಂಸ್ಕೃತಿಕ ಆಚರಣೆಯಾದ ಮದುವೆ ಕಾರ್ಯದಿಂದ ಈ ಒಡಂಬಡಿಕೆಯ ಅಥವಾ ಒಪ್ಪಂದದ ಮಾತುಗಳನ್ನು ಕನ್ನಡದಲ್ಲಿ ಗುರ್ತಿಸಿರುವುದು.

* ಗೃಹಪ್ರವೇಶ, ದೇವಾಲಯ ಪ್ರವೇಶ, ಕರ್ತನ ರಾತ್ರಿ ಭೋಜನ, ಸಂಸ್ಕಾರ, ಮರಣ ಸಂದರ್ಭದಲ್ಲಿ ಬಳಸುವ ಹಾಡು, ವಾಕ್ಯ, ಉಪದೇಶ, ಅಂತಿಮ ಆಶೀರ್ವಾದ ಪ್ರಾರ್ಥನೆ ಎಲ್ಲವೂ ಕನ್ನಡ ಸಾಹಿತ್ಯದೊಳಗೆ ಕ್ರೈಸ್ತ ಧಾರ್ಮಿಕ ಸಾಹಿತ್ಯದಿಂದ ಬಂದಿದೆ ಎಂದು ಕಂಡುಕೊಂಡಿರುವುದು.

* ಧಾರ್ಮಿಕ ಹಿನ್ನೆಲೆಯ ಕ್ರಿಸ್ತ ಜನನ ಹಬ್ಬ (ಕ್ರಿಸ್‌ಮಸ್)ದ ಬಗ್ಗೆ ಮುನ್ಸೂಚನೆಯಾಗಿ ಆಗುವ ದೈವವಾಣಿಯನ್ನು ಗುರ್ತಿಸಿರುವುದು. ವಾಣಿ– "ಎಲೈ ಯೋಸೇಫನೆ ದಾವೀದನ ವಂಶದವನೇ ನಿನ್ನ ಹೆಂಡತಿ ಯೋದ ಮರಿಯಳನ್ನು ಸೇರಿಸಿಕೊಳ್ಳುವುದಕ್ಕೆ ಅಂಜಬೇಡ, ಆಕೆಯ ಗರ್ಭವು ಪವಿತ್ರಾತ್ಮಭರಿತವಾದದ್ದು ಆಕೆ ಒಬ್ಬ ಮಗಳನ್ನು ಹಡೆಯುವಳು, ಆತನಿಗೆ ಯೇಸು ಎಂದು ಹೆಸರಿಡಬೇಕು" ಎಂದು ದೇವದೂತ ಬಂದು ಹೇಳುತ್ತಾನೆ. (ಮತ್ತಾಯ ೧:೧೮–೨೧)

ಕ್ರಿ.ಪೂ. ೪ ಡಿಸೆಂಬರ್ ೨೫ರಂದು ಯೇಸು ಕ್ರಿಸ್ತ ಹುಟ್ಟಿದನೆಂದು ಇತಿಹಾಸ ಹೇಳುವಂತೆ, ಪ್ರಸ್ತುತ ಕ್ರೈಸ್ತ ವಿಶ್ವಾಸಿಗಳು ಡಿಸೆಂಬರ್ ೨೫ ಮಧ್ಯ ರಾತ್ರಿಯಲ್ಲೇ ಕ್ರಿಸ್ತನ ಜನನ ವಾರ್ತೆಯನ್ನು ಸಭೆಯ (ವಿಶ್ವಾಸಿ) ಮನೆಗಳಿಗೆ ತೆರಳಿ ವಾಕ್ಯ, ಹಾಡು, ಘೋಷಣೆಗಳ ಮೂಲಕ ಆಚರಿಸಿ

ಸಂಭ್ರಮಿಸುವುದನ್ನು ಗಮನಿಸಿರುವುದು. ಉದಾ.

ಮಂಗಳ ಶ್ರೀ ರಾತ್ರಿಯಲ್ಲಿ
ಬೆತ್ಲೆಹೇಮ್ ಛತ್ರದಿ
ವರಕನ್ಯೆಯಿಂ ಜನಿಸಿದ
ದೇವಪುತ್ರನಂ ವಂದಿಸುವ
ವಂದನೆ ರಕ್ಷಕನೇ!

ಒಂದು ಊರಿನಲ್ಲಿ ಒಂದು ಬೆಳಕು
ಅಂಧಕಾರದಲ್ಲಿ ತೋರಲಾಯಿತು
ಬೆತ್ಲೆಹೇಮಿನಲ್ಲಿ ನೀತಿ ಸೂರ್ಯನು
ಪಾಪ ಕತ್ತಲಲ್ಲಿ ಕಾಂತಿಕೊಟ್ಟನು

ಕ್ರಿಸ್ತನ ಮೆರವಣಿಗೆ ಸಂದರ್ಭದಲ್ಲಿ ಕೂಗುವ ಘೋಷಣೆಗಳು–

* ಜಯ ಕರ್ತನ ಹೆಸರಿನಲ್ಲಿ ಬರುವವನಿಗೆ ಜಯ ಆಶೀರ್ವಾದ
* ಮೇಲಣ ಲೋಕಗಳಲ್ಲಿ ಜಯ
* ದಾವೀದ ಕುಮಾರನಿಗೆ ಜಯ
* ಪರಲೋಕದಲ್ಲಿ ಮಂಗಳ
* ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಆಶೀರ್ವಾದ
* ಇಸ್ರಾಯೇಲ್ ಅರಸನಿಗೆ ಜಯ

ಎಂದು ಕೂಗುವ ನುಡಿಗಳು ಸತ್ಯವೇದದ ಮತ್ತಾಯ, ಮಾರ್ಕ, ಲೂಕ ಹಾಗೂ ಯೋಹಾನನು ಬರೆದಂತಹ ಸುವಾರ್ತೆಗಳಲ್ಲಿ ಕಂಡುಬರುತ್ತವೆ. ಅವುಗಳನ್ನೇ ಪ್ರಸ್ತುತ ಕ್ರೈಸ್ತ ವಿಶ್ವಾಸಿಗಳು ಅನುಕರಿಸುತ್ತಾರೆ ಎಂದು ಕಂಡುಕೊಂಡಿರುವುದು.

* ಶುಭ ಶುಕ್ರವಾರ ಹಬ್ಬ (ಗುಡ್ ಫ್ರೈಡೆ) ಸಂದರ್ಭದಲ್ಲಿ ಕ್ರಿಸ್ತನನ್ನು ಶಿಲುಬೆಗೆ ಹಾಕಿದ ಸಮಯದಲ್ಲಿ ಯೇಸುಕ್ರಿಸ್ತನು ಶಿಲುಬೆಯ ಮೇಲೆ ತೂಗು ಹಾಕಲ್ಪಟ್ಟಾಗ ನುಡಿದ ಏಳು ಮಾತುಗಳು ಕ್ರೈಸ್ತ ಸಂಸ್ಕೃತಿಯಲ್ಲಿ ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ. ಅವುಗಳಿಗೆ ನಾವು ಸಪ್ತ ಸ್ವರಗಳು ಎಂತಲೂ ಕರೆಯಬಹುದಾಗಿದೆ. ಅಂತಹ ನುಡಿಗಳು ಭಾಷಿಕವಾಗಿ, ಕನ್ನಡ ಸಾಹಿತ್ಯದಲ್ಲಿ ಗೋಚರಿಸಿವೆ. ಅವುಗಳೆಂದರೆ,

೧. ತಂದೆಯೇ ಅವರನ್ನು ಕ್ಷಮಿಸು (ಲೂಕ ೨೩ನೇ ಅಧ್ಯಾಯ ೩೩ನೇ ವಚನ)

೨. ಈಹೊತ್ತೆ ನೀನು ನನ್ನ ಸಂಗಡ ಪರದೈಸಿನಲ್ಲಿರುವಿ (ಲೂಕ ೨೩:೪೩)

೩. ಅಮ್ಮ ಇಗೋ ನಿನ್ನ ಮಗನು ಇಗೋ ನಿನ್ನ ತಾಯಿ (ಯೋಹಾನ ೧೯:೨೧)

೪. ನನ್ನ ದೇವರೆ ನನ್ನ ದೇವರೇ ಯಾಕೆ ನನ್ನ ಕೈಬಿಟ್ಟಿದ್ದಿ (ಮತ್ತಾಯ ೨೭:೪೬)

೫. ನನಗೆ ನೀರಡಿಕೆಯಾಗಿದೆ (ಯೋಹಾನ ೧೯:೨೮)

೬. ತೀರಿತು (ಯೋಹಾನ ೧೯:೩೦)

೭. ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ (ಲೂಕ ೨೩:೪೬)

* ಇನ್ನು ಕ್ರೈಸ್ತರು 'ಪುನರುತ್ಥಾನ' ಹಬ್ಬವೆಂದು ಕ್ರಿಸ್ತನು ೩ನೇ ದಿನದಲ್ಲಿ ಎದ್ದು ಬಂದನೆಂದು ಆ ದಿನದ ಬೆಳಿಗ್ಗೆಯೇ ೪ ಗಂಟೆಗೆ ನೇಮಿಸಿದ ಸಮಾಧಿ ಹತ್ತಿರ ಹೋಗಿ ಕ್ರಿಸ್ತನೆದ್ದನೆಂದು ಹಾಡುವ, ಕೂಗುವ, ಬೋಧಿಸುವ ಹಾಗೂ ಕುಣಿಯುವ ಸಂದರ್ಭಗಳಲ್ಲಿ ಬಳಸುವ ಕನ್ನಡ ನುಡಿ ಕಂಡುಬಂದಿರುವುದು.

* ಸಾಂಸ್ಕೃತಿಕವಾಗಿ ವ್ಯಕ್ತಿನಾಮಗಳನ್ನು ಗಮನಿಸಿದಾಗ ಹಳೆಯ (ಪುರುಷ ಮತ್ತು ಸ್ತ್ರೀ) ವ್ಯಕ್ತಿನಾಮಗಳೆಂದು ಕಂಡುಕೊಂಡಿರುವುದು.

ಹಳೆಯ ಪುರುಷ ವ್ಯಕ್ತಿನಾಮಗಳು	ಹಳೆಯ ಸ್ತ್ರೀ ವ್ಯಕ್ತಿನಾಮಗಳು
ಅಂಜಿನಪ್ಪ	ಅಯ್ಯಮ್ಮ
ಅಂಜಿನಯ್ಯ	ಅಂಜಿನಮ್ಮ
ಆದ್ಯಪ್ಪ	ಆನಂದಮ್ಮ
ಆನಂದಪ್ಪ	ಈರಮ್ಮ
ಈರಪ್ಪ	ಐಮಾವತಿ
ಈರಯ್ಯ	ಕಾಡಮ್ಮ
ಈರಣ್ಣ	ಕಾಳಮ್ಮ
ಉಗ್ರಾಸಪ್ಪ	ಜಯಮ್ಮ
ಕಟಗಿ ಮಲ್ಲಯ್ಯ	ತಾಯಮ್ಮ
ಕೇಶಯ್ಯ	ತಿಪ್ಪಮ್ಮ

ಮತಾಂತರ/ಮಾನಸಾಂತರ ಸಂದರ್ಭದ ವ್ಯಕ್ತಿನಾಮಗಳು

ಸಂತೋಷ	ಮಾರ್ತ

ಪವನ	ಮರಿಯ
ಪ್ರಭಾಕರ	ಯೇಸು
ಸೀಮೋನ	ಲಾಜರ
ನೋಹ	ಎಲಿಯ
ಸುಕೀರ್ತ	ದಾವೀದ
ಸುಚಿತ	ಜಾನ್‌ವೆಸ್ಲಿ
ರೂಬೆನ್	ಭಾಸ್ಕರ
ನಂದಕುಮಾರ್	ಸುಂದರರಾಜ
ಯೇಸುದಾಸ್	ಕೃಪಾದಾಸ್

ಆಧುನಿಕ ಸಂದರ್ಭದ ವ್ಯಕ್ತಿನಾಮಗಳು

ಸಾನ್ನಿಧ್ಯ ಜಿ.ಹೆಚ್.	ಸುವರ್ಣ
ಅರ್ಪಣ	ಜಗನ್
ಸನ್ನಿಧಿ	ರಂಜಿತ್
ಪೂರ್ಣಿಮಾ	ಶಾಲಿನಿ
ಸುರೇಶ	ಸವಿತಾ
ಉಲ್ಲಾಸ	ಸಂದೀಪ
ನಯನ	ದೀಪ ಜಿ.ಹೆಚ್.
ಕವಿತಾ	ಮೇಘ
ಅರುಣ್	ಮೇನಕಾ
ಕಿರಣ	ನವೀನ
ಕ್ರಿಷ್	ಕಸ್ತೂರಿ
ಸೋನಿಯಾ	ವಿನಯ
ಅವಿನಾಶ	ಕಲ್ಪನಾ

* ಕ್ರೈಸ್ತ ಧರ್ಮೋಪದೇಶ ಸಂದರ್ಭದ ಭಾಷೆಯನ್ನು ಚರ್ಚು, ಸಭೆ ಸಮಾವೇಶಗಳಲ್ಲಿ ಬಹಿರಂಗವಾಗಿ ಏರ್ಪಡಿಸಿದ ಸುವಾರ್ತೆ ಕೂಟಗಳಲ್ಲಿ ಗುರ್ತಿಸಲಾಗಿದೆ. ಬರವಣಿಗೆ ಸಾಹಿತ್ಯಕ್ಕಿಂತ ಮೌಖಿಕ ಸಾಹಿತ್ಯ ಭಿನ್ನವಾಗಿ ಕಂಡುಬಂದಿರುವುದು. ಮೆಥೋಡಿಸ್ಟ್ ಚರ್ಚ್‌ನಲ್ಲಿ ನೀಡಿದ ಉಪದೇಶ ಹೀಗಿದೆ–

"ಕರ್ತನಲ್ಲಿ ಪ್ರಿಯ ಸಭೆಯವರೇ ಕ್ರಿಸ್ತನ ನಾಮದಲ್ಲಿ ನಿಮಗೆ ಕೂಡ ನಾನು ವಂದಿಸುವವನಾಗಿದ್ದೇನೆ. ಈ ಪರಿಶುದ್ಧ ದಿನದ ಸ್ವಲ್ಪ ಹೊತ್ತಿನ ಧ್ಯಾನಕ್ಕಾಗಿ ನೇಮಕವಾದ ಸತ್ಯವೇದದ ವಾಕ್ಯ ಭಾಗ ಶ್ರೀ ಲೂಕನು ಬರೆದ ಸುವಾರ್ತೆ ೧೯ನೇ ಅಧ್ಯಾಯ ೬ ರಿಂದ ೧೦ ವಚನಗಳನ್ನು ನಾವು ಸ್ವಲ್ಪ ಸಮಯ ಧ್ಯಾನ ಮಾಡೋಣ. ಯೇಸು ಸುಂಕದವನಾದ ಜಕ್ಕಾಯನ ಮನೆಗೆ ಹೋದಂತಹ ಈ ಒಂದು ದೃಷ್ಟಾಂತ" ಎಂದು ಹೀಗೆ ಮೆಥೋಡಿಸ್ಟ್ ಸಭೆಯ ಸಭಾ ಪಾಲಕರು ದೈವ ಸಂದೇಶವನ್ನು ನೀಡುತ್ತಾರೆ.

ಕೆಥೋಲಿಕ್ ಕ್ರೈಸ್ತ ಸಬೆಯ ಗುರುಗಳು ಹೀಗೆ ಹೇಳುತ್ತಾರೆ– "ಸಮಸ್ತ ಭಕ್ತಾದಿಗಳ ಸೃಷ್ಟಿಕರ್ತರೂ, ರಕ್ಷಕರೂ ಆಗಿರುವ ದೇವರೇ ಮೃತರಾದ ಭಕ್ತರಿಗಾಗಿ ನಾವು ಮಾಡುವ ಪ್ರಾರ್ಥನೆಗಳನ್ನು ಅಂಗೀಕರಿಸಿರಿ, ಅವರು ದೈನ್ಯದಿಂದ ಯಾಚಿಸುವ ಕ್ಷಮೆಯನ್ನು ದಯಪಾಲಿಸಿರಿ, ಯುಗಯುಗಾಂತರಕ್ಕೂ ಜೀವಿಸಿ ಆಳುವ ಕರ್ತರೇ ನಿಮ್ಮನ್ನು ಪ್ರಾರ್ಥಿಸುತ್ತೇವೆ ಕರುಣಿಸಿರಿ ಸ್ವಾಮಿ ಆಮೇನ" ಎಂದು ಪ್ರಾರ್ತಿಸುತ್ತಾರೆ. ಮತ್ತು ಬಹಿರಂಗ ಸಭೆಯ ಮೋತ್ಸವಗಳಲ್ಲಿ ಮೌಖಿಕ ಭಾಷೆಯನ್ನು ಕಂಡುಕೊಂಡಿರುವುದು.

* ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಬಳಕೆಯಾದ ಹಲವು ಅನ್ಯ ದೇಶೀಯ ಪದ, ಧರ್ಮಗುರುಗಳ ಪದನಾಮ ಹಾಗೂ ಬೈಬಲಿನಲ್ಲಿ ಕಂಡುಬರುವ ಪ್ರಾಣಿ, ವಸ್ತು, ಕ್ರಿಮಿ, ಕೀಟಗಳ ನಾಮಪದಗಳನ್ನು ಮತ್ತು ಪರಿಭಾಷೆಯನ್ನು ಕಂಡುಕೊಂಡಿರುವುದು.

* ಪ್ರಚಾರ ಸಾಹಿತ್ಯದೊಳಗೆ ಗೋಡೆಬರಹ, ಕರಪತ್ರಬರಹ ಭಾಷೆಯನ್ನು ಗುರ್ತಿಸಲಾಗಿದೆ. ಗೋಡೆಬರಹಕ್ಕೆ ಉದಾ. "ಈ ಸ್ಥಳವಾದದ್ದು ದೇವರ ಮನೆ ಇದೇ ಪರಲೋಕದ ಬಾಗಿಲು" (ಆದಿಕಾಂಡ ೨೮:೧೭)

"ಯೆಹೋವನು ತನ್ನ ಪರಿಶುದ್ಧ ಮಂದಿರದಲ್ಲಿ ಇದ್ದಾನೆ." (ಹಬಕ್ಕೂಕ ೨:೨೦)

"ನೀವು ಅಳೆಯು ಅಳತೆಯಿಂದಲೇ ನಿಮಗೂ ಅಳೆಯುವರು" (ಮತ್ತಾಯ ೭:೨)

ಹೀಗೆ ಇನ್ನು ಅನೇಕ ಬೈಬಲಿನ ಉಲ್ಲೇಖಗಳನ್ನು ಗೋಡೆಬರಹಗಳನ್ನಾಗಿ ಆಯ್ದು ಬರೆಯಲಾಗಿದೆ ಎಂದು ಕಂಡುಕೊಂಡಿರುವುದು.

ಒಟ್ಟಾರೆಯಾಗಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಕನ್ನಡ ಭಾಷೆಯ

ಬಳಕೆಯನ್ನು ಈ ಅಧ್ಯಯನದ ಮೂಲಕ ಅರಿಯಲಾಯಿತು. ಕ್ರೈಸ್ತ ಧರ್ಮ ಮತ್ತು ಸಂಸ್ಕೃತಿ ಕನ್ನಡ ಸಾಹಿತ್ಯ ಸಿರಿ ಅರಳುವಲ್ಲಿ ಸಹಾಯಕವಾಗಿದೆ. ಸರ್ವಧರ್ಮ ಸಹಿಷ್ಣುತೆ ಅಥವಾ ಧರ್ಮ ಸಮಾನತೆಯನ್ನು ಕಾಪಾಡಿದಂತಾಗಿದೆ ಎಂದು ತಿಳಿಯಬಹುದಾಗಿದೆ.

ನಡುಕಟ್ಟು ಸಾಮ್ಯ

ಈ ಪದವನ್ನು ಕ್ರೈಸ್ತ ಧರ್ಮಗ್ರಂಥ ಕನ್ನಡದಲ್ಲಿ ರಚನೆಯಾದಂತಹ ಸತ್ಯವೇದವು ಎಂಬ ಧರ್ಮಗ್ರಂಥದಲ್ಲಿ ಹಳೆ ಒಡಂಬಡಿಕೆಯಲ್ಲಿ ಬರುವ ಯರೆಮಿಯನ ಗ್ರಂಥ ೧೩ನೇ ಸಂಧಿ ಅಥವಾ ಅಧ್ಯಾಯದಲ್ಲಿ ಕಾಣುತ್ತೇವೆ. ಈ ಪದವು ಒಂದು ಸಾಮ್ಯ ಅಥವಾ ದೃಷ್ಟಾಂತವನ್ನು ಹೇಳುವ ಸಂದರ್ಭದಲ್ಲಿ ರಚನೆಯಾಗಿದೆ. 'ನಡುಕಟ್ಟು' "ಎಂದರೆ ನಾರಿಸಂದ ಮಾಡಿದ ಸೊಂಟದ ಸುತ್ತಲೂ ಬಿಗಿದು, ಕೆಳಗೆ ತೊಡೆಯ ಅರ್ಧಭಾಗದವರೆಗೆ ಮಾತ್ರ ಮುಚ್ಚುವಂತಹ ಉಡುಪಾಗಿತ್ತು". ಇದು ಕ್ರಿ.ಪೂರ್ವದಲ್ಲಿ ಇಸ್ರೇಲನ ಯರೂಸಲೇಮ ಅಥವಾ ಜೆರುಸಲೇಮನಲ್ಲಿ ಬಳಕೆಯಾಗುತ್ತಿತ್ತು. ಈ ನಾರು ಬಟ್ಟೆಯನ್ನು ಜಂಬುಹುಲ್ಲಿನ ನಾರಿನಿಂದ ನೇಯುತ್ತಿದ್ದರು. ಈ ಒಂದು 'ನಡುಕಟ್ಟು' ಅಲ್ಲಿನ ದೇವ ಜನರಿಗೆ ಸಮಾನವೆಂದು ವಿಶ್ಲೇಷಿಸಲಾಗಿದೆ. ನಡುಕಟ್ಟು ಎಂದರೆ ಸಾಮಾನ್ಯವಾಗಿ ನಾವು ಸಿದ್ಧವಾಗು ಟೊಂಕ ಕಟ್ಟು ಎಂಬರ್ಥದಲ್ಲಿ ಹೇಳಿದರೆ ಸತ್ಯವೇದದ ಈ ಪದವು ದೇವರ ಪ್ರೀತಿಗೆ ದೇವರ ಸಹವಾಸಕ್ಕೆ ಸಿದ್ಧವಾಗಿರುವುದು ಎಂಬಂತಹ ಹೊಸ ಅರ್ಥವನ್ನು ನಾವು ಭಾಷಿಕವಾಗಿ ಕಂಡುಕೊಂಡಿರುವುದು.

ಮುದ್ರೆಕೋಲು– ಇದು ಕನ್ನಡದಲ್ಲಿ ಹೊಸ ಪದರಚನೆಯಾಗಿ ಕಂಡುಬರುತ್ತದೆ. ಮುದ್ರೆ ಮತ್ತು ಕೋಲು ಎಂಬೆರಡು ಪದಗಳು ಸೇರಿ ಸಂಪೂರ್ಣ ಪದವಾಗಿರುತ್ತದೆ. ಶಾಬ್ಧಿಕವಾಗಿ ಈ ಎರಡು ಪದಗಳು ಬೇರೆ ಬೇರೆಯೇ ಆಗಿರುತ್ತವೆ. ಆದರೆ ಇಲ್ಲಿ ಒಂದೇ ಆಗಿ ಅರ್ಥವನ್ನು ನೀಡುತ್ತದೆ. ಅದು ಕ್ರೈಸ್ತ ಧರ್ಮದಲ್ಲಿ ಕಾಲಜ್ಞಾನ ಹೇಳುವ ಸಂದರ್ಭದಲ್ಲಿ ಬಳಕೆಯಾಗಿರುತ್ತದೆ. ಮುದ್ರೆಕೋಲು ಎಂಬುದು ಕ್ರೈಸ್ತ ಸಾಹಿತ್ಯದಲ್ಲಿ ಪ್ರತ್ಯೇಕಿಸಲ್ಪಟ್ಟ ಮೊಹರು ಮಾಡಿದ ಒಂದು ರಾಜದಂಡ. ಅಧಿಕಾರದ ಶಕ್ತಿ ಆಗಿದೆ. ಕನ್ನಡದಲ್ಲಿ ಸಾಮಾನ್ಯವಾಗಿ ಮೊಹರಿನಿಂದ ಕೂಡಿದ ಕಟ್ಟಿಗೆ ಎಂದರೆ ಕ್ರೈಸ್ತ ಸಾಹಿತ್ಯದಲ್ಲಿ ಅಧಿಕಾರದ ರಾಜದಂಡವಾಗಿದೆ.

ಉದಾ. ಮುದ್ರೆ + ಕೋಲು = ಮುದ್ರೆಕೋಲು

'ಪತಿ' ಎಂಬ ಪದದಡಿಯಲ್ಲಿ ಸಂಬೋಧಿಸುವ ಪದಗಳು

ನಿರ್ದಿಷ್ಟ + ವಾರ್ಗಿಕ = ಸಂಬೋಧನೆ

ಆದಿ + ಪತಿ = ಆದಿಪತಿ (ಮೀಕ ೫:೧)

ಜೀವ + ಅಧಿಪತಿ = ಜೀವಾಧಿಪತಿ (ಅ.ಕೃ ೩:೧೫)

ಏಕ + ಅಧಿಪತಿ = ಏಕಾಧಿಪತಿ (೧ ತಿಮೋಥಿ ೬:೧೫)

ನ್ಯಾಯ + ಅಧಿಪತಿ = ನ್ಯಾಯಾಧಿಪತಿ (ಕೀರ್ತನೆ ೫೦:೬)

ಸರ್ವ + ಅಧಿಪತಿ = ಸರ್ವಾಧಿಪತಿ (ಕೀರ್ತನೆ ೪೬:೬೦)

ಬಹುವ್ರೀ ಸಮಾಸ ರಚನಾ ರೂಪಗಳನ್ನು ಗುರ್ತಿಸಿರುವುದು.

ಪಿತನ + ಏಕ + ಕುವರ = ಯೇಸು ಕ್ರಿಸ್ತ

ಕನ್ಯಾ + ಮೇರಿ + ಕುವರ = ಯೇಸು ಕ್ರಿಸ್ತ

ಪಿತನ + ಏಕ + ತನುಜ = ಯೇಸು

ಸ್ವಾಮಿ + ಯೇಸು + ಕ್ರಿಸ್ತ = ಯೇಸು

ಕರ್ತ + ಯೇಸು + ಕ್ರಿಸ್ತ = ಯೇಸು

ತ್ರ + ಏಕ + ದೇವ = ಯೇಸು

ಶಿಲುಬೆ + ಹೊತ್ತವ = ಯೇಸು

ಸಾವಿನ + ಕೊಂಡಿಯ + ಮುರಿದವ = ಯೇಸು

ಇಷ್ಟದಿಂ + ಗಾಯವ + ಪಟ್ಟವ = ಯೇಸು

ಲ್ಯಾಟಿನ್ ಗೀತೆಗಳನ್ನು ಕಥೋಲಿಕ್ ಕ್ರೈಸ್ತ ಗೀತೆಗಳಲ್ಲಿ ಗುರ್ತಿಸಬಹುದಾಗಿದೆ. ಅವುಗಳಲ್ಲಿ ಕೆಲವು ಪದಗಳ ಕನ್ನಡ ಅರ್ಥಗಳನ್ನು ಗುರ್ತಿಸಿರುವುದು.

ಕನ್ನಡ	**ಲ್ಯಾಟಿನ್**
ಪಿತ	ಪಾತ್ರಿಸ್
ಸುತ	ಫೀಲಿಯಿ
ಪವಿತ್ರಾತ್ಮ	ಸ್ಪಿರಿತು
ಯೇಸು	ಯೇಸುಸ್
ತಾಯಿ	ಮಾತೆರ್
ದಯೆತೋರಿ	ಎಲೈಸಾನ
ಪರಿಶುದ್ಧರು	ಸಾಂಕ್ತುಸ್

ಇನ್ನು ಕೆಲವು ಸ್ಥಳನಾಮಗಳನ್ನು ಹೀಗೆ ಗುರ್ತಿಸಲಾಗಿದೆ.

ಬಾಬಿಲೋನ	ಮೆಕೆದೋನಿಯಾ
ಪತ್ಮೋಸ	ಸ್ಮುರ್ನ
ಪೆರ್ಗಮ	ದುವತ್ತೈರ
ಸಾರ್ದಿಸಿ	ಫಿಲದೆಲ್ಫಿ
ಲವೋದಿಕೆಯ	ಅಂತಿಯೋಕ್ಯ
ಲುಸ್ತ್ರ	ದೆರ್ಬೆ
ಅಥೈನ್ಸ್	ಬೇರೋಯ

ಕರ್ತನ ಭೋಜನ ಸಂಸ್ಕಾರ/ಕರ್ತನ ರಾತ್ರಿ ಭೋಜನ: ಇದು ಕ್ರೈಸ್ತೀಯ ಆಚರಣೆಗಳಲ್ಲಿ ಒಂದಾಗಿದ್ದು ದೀಕ್ಷಾಸ್ನಾನ ತೆಗೆದುಕೊಂಡ ಮೇಲೆ ದೃಢೀಕರಣ ಆದ ಮೇಲೆ ತಿಂಗಳ ಮೊದಲನೇ ರವಿವಾರ ಪ್ರಾರ್ಥನೆಯಲ್ಲಿ ತೆಗೆದುಕೊಳ್ಳುವ ತೀರ್ಥ/ ಪ್ರಸಾದ ಎನ್ನಬಹುದು. ಈ ಪದವೂ ಸಾಂಘಿಕವಾಗಿ ನೋಡಿದಾಗ ವಿಶೇಷವಾಗಿ ಗೋಚರಿಸುತ್ತದೆ. ಅಂದು ಯೇಸುಕ್ರಿಸ್ತ ಸ್ವಯಂ ನೀಡಿದ್ದಾನೆಂದು ಇವತ್ತು ಪಾದ್ರಿಗಳು ಸ್ಮರಣಾರ್ಥ ನೆರವೇರಿಸುವರು ಎಂಬುದನ್ನು ಭಾಷಿಕವಾಗಿ ಗಮನಿಸಿರುವುದು.

ಬೂದಿ ಬುಧವಾರ: ಕ್ರೈಸ್ತರು ಉಪವಾಸ ಮಾಡುವ ಸಮಯದಲ್ಲಿ ಆರಂಭದ ದಿನವೇ 'ಬೂದಿ ಬುಧವಾರ' ಆಗಿರುತ್ತದೆ. ಸಾಮಾನ್ಯವಾಗಿ ನಾವು ಬುಧವಾರವನ್ನು ಬಳಸುತ್ತೇವೆ. ಆದರೆ ಬೂದಿ ಬುಧವಾರ ಎಂಬ ಜಂಟಿ ಪದವನ್ನು ನಾವು ಕನ್ನಡದ ಕ್ರೈಸ್ತ ಸಾಹಿತ್ಯದಲ್ಲಿ ಮಾತ್ರ ಕಾಣಬಹುದು. ಆದಿಯಲ್ಲಿ ಯೆರೂಸಲೇಂನಲ್ಲಿ ಗೋಣಿತಟ್ಟು ಸುತ್ತಿಕೊಂಡು ಉಪವಾಸ ಆರಂಭಿಸುತ್ತಿದ್ದರು. ಅದನ್ನು ನಾವು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಬೂದಿ ಬುಧವಾರ ಎಂದು ಆಚರಿಸುವುದನ್ನು ಗುರ್ತಿಸಿರುವುದು.

ಖರ್ಜೂರಗರಿಗಳ ಭಾನುವಾರ: ಇದು ಸಹಿತ ವಾರಗಳಲ್ಲಿ ಬಳಸುವ ಪದವಾಗಿದ್ದು ಜಂಟಿಯಾಗಿ ಬಳಸಬೇಕಾಗುತ್ತದೆ. ಕ್ರಿಸ್ತನು ಕತ್ತೆಯ ಮೇಲೆ ಯೆಶೂಸಲೆಂ ಪಟ್ಟಣಕ್ಕೆ ರಾಜನಾಗಿ ಪ್ರವೇಶ ಮಾಡುವ ಸಂದರ್ಭದಲ್ಲಿ ಅಂದು ವಿಶ್ವಾಸಿಗಳು ಜಯಕಾರ ಮಾಡುತ್ತಿದ್ದರು ಇದನ್ನು ಈಗಲೂ ನಮ್ಮಲ್ಲಿ ಆಚರಿಸಿರುವರು ಎಂದು ತಿಳಿದುಕೊಂಡಿರುವುದು.

ಕನ್ನಡ ಸಾಹಿತ್ಯದಲ್ಲಿ ಅನ್ಯ ದೇಶೀಯ ಪದಗಳನ್ನು ಗಮನಿಸುವಾಗ ನಾವು ಸಾಮಾನ್ಯವಾಗಿ ಪೋರ್ಚುಗೀಸ್, ಅರೇಬಿಕ್, ಪರ್ಷಿಯನ್, ಹಿಂದಿ, ಉರ್ದು, ಇಂಗ್ಲೀಷ್ ಎಂದು ವಿಭಾಗಿಸಿ ಅಧ್ಯಯನ ಮಾಡುತ್ತೇವೆ. ಹಾಗೆಯೇ ಕ್ರೈಸ್ತ ಸಮುದಾಯದ ಕನ್ನಡ ಬೈಬಲ್‌ನಲ್ಲಿಯೂ ಹಲವಾರು ಅನ್ಯ ದೇಶೀಯ ಪದಗಳು, ವಾಕ್ಯಗಳು ಕಂಡುಬರುವುದುಂಟು. ಅವುಗಳು ನಮ್ಮ ಕನ್ನಡಕ್ಕೆ

ಹೊಸದಾಗಿ ಸೇರ್ಪಡೆಯಾಗುತ್ತವೆ. ಅವುಗಳ ಅರ್ಥ, ಸ್ವರೂಪ, ಬಳಕೆಯನ್ನು ಈ ಕೆಳಗಿನಂತೆ ವರ್ಗೀಕರಿಸಿ ವಿವರಿಸಲಾಗಿದೆ.

ಅನ್ಯದೇಶೀಯ ಪದಗಳನ್ನು ಗುರ್ತಿಸಿರುವುದು.

ಇಬ್ರಿಯ	**ಅರ್ಥ**	**ಬಳಕೆ**
ಅಲ್ಲೋನ ಬಾಕೂತ್	ಗೋಳಾಟದ ಮರ	ಆದಿಕಾಂಡ ೩೫:೮
ಅಲ್ಮೋನ್	ಯಾರ್ದನ್‌ಹೊಳೆಯಾಚೆ	ಆದಿಕಾಂಡ ೩೩:೪೭
ಆಕೋರಿನ	ಆಪತ್ತಿನ	ಯಹೋಶುವ ೭:೨೪
ಎಬಿನೇಜರ	ಸಹಾಯಶಿಲೆ	೧ನೇ ಸಮುವೇದ ೭:೧೩
ಏಲ್	ದೇವರು	ಆದಿಕಾಂಡ ೩೫:೭
ಪೆನಿಯೇಲ್	ದೇವರದರ್ಶನ	ವಿಮೋಚನ ಕಾಂಡ ೩೩:೨೦
ಪೆರೆಚ್	ಬೇದಿಸುವಿಕೆ	ಆದಿಕಾಂಡ ೨೮:೪೦
ಗ್ರೀಕ್	**ಕನ್ನಡ**	**ಉಲ್ಲೇಖ**
ಅಬ್ರಾಮ್	ಅಬ್ರಹಾಮ	ಮತ್ತಾಯ ೧:೨
ಅರಮ	ಅರಾಮ	ಮತ್ತಾಯ ೧:೩
ಅವರಿಬ	ಊರೀಯ	ಮತ್ತಾಯ ೧:೬
ಅಬಿಯ	ಅಬೀಯ	ಮತ್ತಾಯ ೧:೭
ಅಸಫ್	ಆಸನು	ಮತ್ತಾಯ ೧:೭
ಅಕವ	ಆಹಾಜ	ಮತ್ತಾಯ ೧:೯

ಕ್ರೈಸ್ತ ಧಾರ್ಮಿಕ ವಸ್ತುವಾಚಕ ಪದಗಳನ್ನು ಗುರ್ತಿಸಿರುವುದು.

ಗವಿ: ಗವಿ ಎಂದರೆ ಸಾಮಾನ್ಯವಾಗಿ ನಾವು ಕತ್ತಲಕೋಣೆಯಂತಿರುವ ಸ್ಥಳವನ್ನು ಅಥವಾ ಆಳವಾಗಿರುವ ಸ್ಥಳವನ್ನು ಗವಿ ಅಥವಾ ಗುಹೆ ಎಂದು ಕರೆಯುತ್ತೇವೆ. ಕ್ರೈಸ್ತ ಧರ್ಮದಲ್ಲಿ ಗವಿ ಎಂದರೆ ಯೇಸುವಿನ ತಾಯಿಯಾಗಿರುವ ಸಂತರಾದ ಮರಿಯಳ ನೆನಪಿನಾರ್ಥವಾಗಿ ಆಕೆಯ ಆದರ್ಶ, ಭಕ್ತಿ ಮತ್ತು ಸೇವೆಯನ್ನು ಪರಿಗಣಿಸಿ ಆಕೆಯನ್ನು ಅನುಸರಿಸುವ, ಸ್ಮರಿಸುವ ದೃಷ್ಟಿಯಿಂದ ಮರಿಯಳಿಗೆಂದೇ ದೇವಾಲಯದ ಆವರಣದಲ್ಲಿ ಒಂದು ಕಟ್ಟಡವನ್ನು ನಿರ್ಮಿಸುತ್ತಾರೆ. ಆ ಒಂದು ಕಟ್ಟಡದ ಮೂರ್ತ ಸ್ವರೂಪಕ್ಕೆ ಗವಿ ಎಂದು ಕರೆಯುತ್ತಾರೆ.

ಜಪಸರ: ಕೆಥೋಲಿಕ್ ಕ್ರೈಸ್ತರು ಬಳಸುವಂತಹ ಧಾರ್ಮಿಕ ಆಚರಣಾತ್ಮಕ ಪದವಾಗಿದೆ. ಜಪ

ಮತ್ತು ಸರ ಎಂಬ ಬಿಡಿ ಬಿಡಿ ಪದಗಳು ಬೇರೆ ಬೇರೆ ಅರ್ಥ ಕೊಡುತ್ತವಾದರೂ ಕ್ರೈಸ್ತ ಆಚರಮೆಗಳ ಅಥವಾ ಪೂಜಾ ವಿಧಾನಗಳಲ್ಲಿ ಈ ಎರಡು ಪದಗಳು (ಜಪ + ಸರ = ಜಪಸರ) ಸೇರಿ ಒಂದು ಹೊಸ ಪದವಾಗಿ ರಚನೆಯಾಗಿರುವುದನ್ನು ಅಥವಾ ಹೇಳುವ ಮಾತಾಡುವ ಪರಿಭಾಷೆಯಾಗಿ ಕೆಥೋಲಿಕ್ ಕ್ರೈಸ್ತ ಸಮುದಾಯದಲ್ಲಿ ಕಾಣಬಹುದಾಗಿದೆ. ಈ ಜಪಸರವನ್ನು ಕೊರಳಿನ ಸರ ಅಥವಾ ಶಿಲುಬೆಯ ಸರ ಎಂತಲೂ ಕರೆಯಬಹುದಾಗಿದೆ. ಇದು ತಂದೆಯಾದ ದೇವರ ಮಗನಾದ ಯೇಸುಕ್ರಿಸ್ತನ ಮತ್ತು ಯೇಸುವಿನ ತಾಯಿಯಾದ ಮರಿಯಳನ್ನು ನೆನಪಿಸುವ ಸಲುವಾಗಿ ಪೂಜಿಸುವ ಮಣಿಗಳ ಒಂದು ಹಾರವಾಗಿದೆ. ಅಲ್ಲದೆ ಇದು ಕ್ರೈಸ್ತರೆನಿಸಿಕೊಳ್ಳುವಂತಹ ಸಂಕೇತವೂ ಆಗಿದೆ.

ತೀರ್ಥ: ಕ್ರೈಸ್ತ ಧರ್ಮಗುರುಗಳು ವಿಶ್ವಾಸಿಗಳಿಗೆ ದೀಕ್ಷೆ ನೀಡುವಾಗ ಅವರು ಒಂದು ಬಟ್ಟಲು ಅಥವಾ ತಂಬಿಗೆಯಲ್ಲಿ ನೀರನ್ನು ತೆಗೆದು ಪ್ರಾರ್ಥಿಸಿ ನೀರಿನಿಂದ ತಲೆಗೆ ಚಿಮುಕಿಸಿ ನೀರಿನಿಂದ ಶಿಲುಬೆಯ ಗುರುತು ಹಾಕಿ ದೀಕ್ಷೆ ನೀಡುವಾಗ ಕ್ರಿಸ್ತನ ಎಲ್ಲಾ ಮಹಾ ಉಪಕಾರಗಳು ನೆನಪಿಗೆ ಬರುತ್ತವೆ. ಇಂತಹ ಸ್ಮರಣೆಗಾಗಿ ಸೇವಿಸುವ ಕೊಡುವ ಪವಿತ್ರ ಜಲಸ್ಪರ್ಶಕ್ಕೆ ತೀರ್ಥ ಎನ್ನಬಹುದಾಗಿದೆ.

ತೇರು: ಹಿಂದಿನ ಕಾಲದಲ್ಲಿ ಅಥವಾ ಇತಿಹಾಸದಲ್ಲಿ ರಾಜ ಮಹಾರಾಜರುಗಳನ್ನು ಪ್ರಜೆಗಳು ಗೌರವಿಸುವುದಕ್ಕಾಗಿ ಪಲ್ಲಕ್ಕಿಯಲ್ಲಿ ಎತ್ತುಕೊಂಡು ಊರ ಬೀದಿ ಚೌಕಗಳಲ್ಲಿ ಮೆರವಣಿಗೆ ಹೋಗುತ್ತಿದ್ದರು. ಸಾಮಾನ್ಯ ಮನುಷ್ಯರಿಗೆ ಇಂತಹ ಗೌರವ ನೀಡುವಾಗ ಸಂತರಿಗೆ ಎಂತಹ ಗೌರವ ಸಲ್ಲಬೇಕು ಎಂದು ಕ್ರೈಸ್ತರು ಸಮುದಾಯಕ್ಕೆ, ಊರಿಗೆ, ಪ್ರದೇಶಕ್ಕೆ, ಚರ್ಚ್‌ಗೆ, ಸಂಘಕ್ಕೆ ಮಾಡಿದ ಸೇವೆಯನ್ನು ಪರಿಗಣಿಸಿ ಆಯಾ ಪ್ರಾದೇಶಿಕ ಸಂತರ ಮೂರ್ತಿ ಮಾಡಿ ಅವರ ಪ್ರತಿಮೆಯನ್ನು ಅದೇ ಸಮುದಾಯದ ಚರ್ಚ್‌ನ ಆವರಣದಲ್ಲಿ ಚರ್ಚ್ ಸುತ್ತಲೂ ತಿರುಗಾಡುವ ಮೂಲಕ ಮೆರವಣಿಗೆ ಮಾಡುವಂತಹ ಪ್ರಕ್ರಿಯೆಯಾಗಿದೆ.

ಅಧ್ಯಯನದ ಸಾಧ್ಯತೆಗಳು

* ರಾಯಚೂರು ಜಿಲ್ಲಾ ಕ್ರೈಸ್ತರ ದ್ವಿಭಾಷಿಕತೆ ಪರಿಸರ ಅನುಲಕ್ಷಿಸಿ ಅಧ್ಯಯನ
* ಕನ್ನಡ ಸಾಹಿತ್ಯ ಮತ್ತು ಕ್ರೈಸ್ತ ಕನ್ನಡ ಧಾರ್ಮಿಕ ಸಾಹಿತ್ಯದ ತೌಲನಿಕ ಅಧ್ಯಯನ
* ಕ್ರೈಸ್ತೇತರರ ಕನ್ನಡ ಸಾಹಿತ್ಯದ ಭಾಷೆ
* ಅನುವಾದದಲ್ಲಿ ಕನ್ನಡ ಸಾಹಿತ್ಯ ಹಾಗೂ ಭಾಷೆ
* ಕ್ರೈಸ್ತರ ಆಧುನೀಕರಣ ಆಚರಣೆಗಳಲ್ಲಿ ಭಾಷೆ
* ಸಮಗ್ರ ಕ್ರೈಸ್ತ ಧರ್ಮದ ವ್ಯಕ್ತಿನಾಮಗಳ ಅಧ್ಯಯನ
* ಸಮಗ್ರ ಕ್ರೈಸ್ತ ಧರ್ಮದ ಸ್ಥಳನಾಮಗಳ ಅಧ್ಯಯನ
* ಸಮಗ್ರ ಕ್ರೈಸ್ತ ಧರ್ಮದ ಪಾರಿಭಾಷಿಕ ಪದಗಳ ಅಧ್ಯಯನ
* ಕ್ರೈಸ್ತ ಧಾರ್ಮಿಕ ಸಾಹಿತ್ಯದ ವ್ಯಾಕರಣಾತ್ಮಕ ಅಧ್ಯಯನ
* ಕ್ರೈಸ್ತ ಧಾರ್ಮಿಕ ಸಾಹಿತ್ಯದ ಕಾವ್ಯಾತ್ಮಕ ಅಧ್ಯಯನ

❖❖❖

ಅನುಬಂಧಗಳು

ಆಕರ ಗ್ರಂಥಗಳು

ಪ್ರಧಾನ ಗ್ರಂಥಗಳು

ಪೂರಕ ಗ್ರಂಥಗಳು

ಅಂತರ್ಜಾಲದ ಮಾಹಿತಿ

ವಕ್ತೃವಿವರ

ಛಾಯಾಚಿತ್ರಗಳು

ನಕ್ಷೆ

ಆಕರ ಗ್ರಂಥಗಳು

೧. ಪ್ರಧಾನ ಗ್ರಂಥಗಳು

ಉಜ್ಜೀವನ ಗೀತೆಗಲು, ಸೆಲ್ವಿನ್ ಕ್ರಿಸ್ಟಫರ್ ಜಾರ್ಜ್ ಅನುದಿನದ ಆಹಾರ, ವಿವೇಕನಗರ, ಬೆಂಗಳೂರು

ಕನ್ನಡ ಸಂಗೀತ ಸಂಗ್ರಹ ಮತ್ತು ಕನ್ನಡ ಕೀರ್ತನೆಗಳು, ಪ್ರಿ-ಸ್ಟಾರ್‌ಲೈಟ್ ಪ್ರಿಂಟರ್ಸ್, ಬೆಂಗಳೂರು

೨೦೦೨, ಪವಿತ್ರ ವಚನ (ಹೊಸ ಒಡಂಬಡಿಕೆ), ಬಿಲಿವರ್ಸ್ ಚರ್ಚ್ ಪಬ್ಲಿಕೇಷನ್ಸ್, ಮಂಜಾದಿ ಜಂಕ್ಷನ್, ಪಿ.ಬಿ. ತಿರುವಳ್ಳ, ಕೇರಳ

೨೦೦೫, ಪರಿಶುದ್ಧ ಬೈಬಲ್, ಡಬ್ಲ್ಯು.ಬಿ.ಟಿ.ಸಿ. ಇಂಡಿಯಾ, ಪಿ.ಬಿ. ಬಾಕ್ಸ್, ೮೪೭೮ ೩೬,೩ನೇ ಕ್ರಾಸ್, ಹಟ್ಚಿನ್ಸ್ ರೋಡ್, ಥಾಮಸ್‌ಟೌನ್, ಬೆಂಗಳೂರು-೫೬೦ ೦೮೪

೨೦೦೧, ಪವಿತ್ರ ಬೈಬಲ್, ಕೆ.ಜೆ.ವಿ. ಬೈಬಲ್ ಸೊಸೈಟಿ ಟಪಾಲು ಪೆಟ್ಟಿಗೆ, ೪೦೦೩ ವಿಜಯನಗರ, ಬೆಂಗಳೂರು

೨೦೦೨, ಬನ್ನಿರಿ ಆರಾಧಿಸೋಣ, ಯು.ಇ.ಎಸ್.ಟಿ. ಕರ್ನಾಟಕ ಎ.ಐ.ಆರ್. ರೋಡ್, ಧಾರವಾಡ

೨೦೦೧-೦೨, ಸತ್ಯವೇದವು, ಬೈಬಲ್ ಸೊಸೈಟಿ ಆಫ್ ಇಂಡಿಯಾ, ೨೦೬ ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-೫೬೦ ೦೦೧

೨೦೧೨, ಸಣ್ಣ ಪ್ರವಾದಿಗಳು, ಯು.ಇ.ಎಸ್.ಐ. ಪಬ್ಲಿಕೇಷನ್ಸ್ ಟ್ರಸ್ಟ್, ದೊಡ್ಡ ಗುಬ್ಬಿ ಅಂಚೆ, ಬೆಂಗಳೂರು

೧೯೯೭, ಹುದುವಾದ ದೇವಾರಾಧನೆ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೨೧೯, ಅಣ್ಣ ಸಲೈ, ಚೆನ್ನೈ (ಮದ್ರಾಸ್)

ಅಳಗೋಡಿ ಎಸ್.ಡಿ.ಎಲ್., ೨೦೦೧, ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು

ಗೋವಿಂದ ಪೈ.ಎಂ., ೨೦೦೬, ಗೊಲ್ಗೊಥಾ ಮತ್ತು ವೈಶಾಖಿ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

ಚೆನ್ನಕೇಶವಲು ಬಿ., ಕುರುಬನ ಕರೆ ದೇವರ ಪ್ರಜೆಗಳು, ಹಿಂದೂಸ್ತಾನ್ ಬೈಬಲ್ ಇನ್ಸ್‌ಟಿಟ್ಯೂಟ್ ೮೬-೮೯ ಮೇಡವಾಕ್ಕಮ್ ಟ್ಯಾಂಕ್ ರೋಡ್, ಕಿಲ್‌ಪಾರ್ಕ್, ಮದ್ರಾಸ್

ತಲವಾಡಿ ಬಿ.ಎಸ್., ೧೯೮೯, ಕರ್ನಾಟಕ ಕ್ರೈಸ್ತರ ಇತಿಹಾಸ, ಕೆಥೋಲಿಕರ ಸಂಘ, ಬೆಂಗಳೂರು

ತಲವಾಡಿ ಬಿ.ಎಸ್., ೧೯೮೯, ಕ್ರೈಸ್ತಮತ, ಪೌಲ ಪ್ರಕಾಶನ, ೪೪೧/೨೦೮ನೇ ಮೇನ್ ರೋಡ್, ಬೆಂಗಳೂರು

ತಲವಾಡಿ ಬಿ.ಎಸ್., ೧೯೯೮, ಕರ್ನಾಟಕದ ಕ್ರೈಸ್ತರು ಒಂದು ಪರಿಚಯ, ಕರ್ನಾಟಕ ಕ್ರೈಸ್ತ ಜಾನಪದ ಕೇಂದ್ರ, ಗಂಗೊಂಡನಹಳ್ಳಿ, ಬೆಂಗಳೂರು

ತಲವಾಡಿ ಬಿ.ಎಸ್., ೧೯೯೯, ಕರ್ನಾಟಕದ ಚರ್ಚುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ತಲವಾಡಿ ಬಿ.ಎಸ್., ೨೦೦೪, ಕನ್ನಡ ಸಮಾಗಮ, ಜ್ಞಾನಜ್ಯೋತಿ ಪ್ರಕಾಶನ, ಶಾಂತಿ ಸಾಧನ ಸಂಶೋಧನಾ ಕೇಂದ್ರ, ಆರ್.ವಿ. ವಿದ್ಯಾನಿಕೇತನ್ ಅಂಚೆ, ಬೆಂಗಳೂರು

ತಲವಾಡಿ ಬಿ.ಎಸ್., ೨೦೧೩, ಚಿಕ್ಕಮಗಳೂರು ಧರ್ಮಕ್ಷೇತ್ರದ ಸಮಗ್ರ ಸಂಕ್ಷಿಪ್ತ ಚರಿತ್ರೆ, ಅಮರವಾಣಿ ಪ್ರಕಾಶನ, ಚಿಕ್ಕಮಗಳೂರು, ಜ್ಯೋತಿ ನಗರ

ಪಿಯುಸ್ ಪೆಡಲಿಸ್ ಪಿಂಟೋ, ೧೯೯೯, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ, ಸಮನ್ವಯ ಪ್ರಕಾಶನ, ಮಂಗಳೂರು

ಪುರ್ತಾದೋ ಎಸ್.ಆರ್., ೧೯೯೦, ಕ್ರೈಸ್ತ ಧರ್ಮದ ಇತಿಹಾಸ, ಕ್ರೈಸ್ತ ದೈವಜ್ಞಾನ ಸಾಹಿತ್ಯ ಮಾಲೆ, ಮಂಗಳೂರು

ಪ್ರಕಾಶ ಎನ್.ಬಿ., ೨೦೦೮, ಸತ್ಯವೇದದ ಸತ್ಯಾಂಶಗಳು ಮತ್ತು ಆರಾಧನಾ ಕ್ರಮಗಳು, ಕಿಬ್ರೋನ್ ಪ್ರಕಾಶನ, ನಿಜಾಂಪುರ, ಬೀದರ್

ಪ್ರಕಾಶ ವಿ., ಪ್ರಾಸ್ಟರ್, ೨೦೧೪, ಜ್ಞಾನೋಕ್ತಿ ಗ್ರಂಥದಿಂದ ಜೀವಧಾರೆ, ಪಾರ್ಥಸಾರಥಿ ಗ್ರಾಫಿಕ್ಸ್, ರಾಯಚೂರು

ಪ್ರಕಾಶ ವಿ., ಪಾಸ್ಟರ್, ೨೦೧೪, ಸತ್ಯವೇದದಲ್ಲಿ ತೋರಿಬರುವ ಮುಖ್ಯಾಂಶಗಳು, ಕ್ಯಾಯೆಲ್ ಆಫ್‌ಸೆಟ್ ಪ್ರಿಂಟರ್ಸ್, ರಾಯಚೂರು

ಮೂರ್ತಿರಾವ್ ಎ.ಎನ್., ೨೦೦೯, ದೇವರು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು

ಮ್ಯಾಥ್ಯೂ ಕೆ.ಎಂ., ೧೯೯೪, ಕಿಟೆಲ್ ಒಂದು ಸಮಗ್ರ ಅಧ್ಯಯನ, ಕಿಟೆಲ್ ಕಾಲೇಜು, ಧಾರವಾಡ

ಲೋಹಿತಕುಮಾರ ಆರ್., ೨೦೧೬, ಬಳ್ಳಾರಿ ಜಿಲ್ಲೆಯ ಕ್ರೈಸ್ತ ಮಿಶನರಿಗಳ ಚರಿತ್ರೆ, ಗಾಯತ್ರಿ ಪ್ರಕಾಶನ, ಬೆಂಗಳೂರು

ವಿಜಯಕುಮಾರ ರೆವರೆಂಡ್, ೨೦೦೪, ಕರ್ನಾಟಕದಲ್ಲಿ ಪ್ರೊಟೆಸ್ಟೆಂಟ್ ಮಿಷನ್ನುಗಳ ಚರಿತ್ರೆ, ಕನ್ನಡ ದೈವಜ್ಞಾನ ಸಮಿತಿ, ಮಂಗಳೂರು

ಶರ್ಲಿ ಕ್ರಿಸ್ಟಫರ್, ಪ್ರೇಮಾ ಫಿನ್, ವಿಜಯಾಪಾರಮಾರ, ೨೦೧೧, ನಮ್ಮೊಡನೆ ಮಾತನಾಡುವ ವಾಕ್ಯ, ಯು.ಇ.ಎಸ್.ಟಿ. ಪಬ್ಲಿಕೇಶನ್ ಟ್ರಸ್ಟ್, ಕರ್ನಾಟಕ ಶಾಖೆ, ದೊಡ್ಡ ಗುಬ್ಬಿ ಅಂಚೆ, ಬೆಂಗಳೂರು

ಶ್ರೀನಿವಾಸ ಹಾವನೂರು, ೨೦೦೧, ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಸಭಾಪತಿ ಎನ್., ೨೦೦೧, ಆಧುನಿಕ ಕನ್ನಡ ಸಾಹಿತ್ಯಾಭಿವೃದ್ಧಿಗೆ ಬಳ್ಳಾರಿ ಲಂಡನ್ ಮಿಷನ್ನಿನ ಪ್ರಥಮ ಕೊಡುಗೆ, ಕನ್ನಡ ದೈವಜ್ಞಾನ ಸಮಿತಿ, ಮಂಗಳೂರು

ಸುರೇಶ ಕಮ್ಮಾರ, ೨೦೧೦, ಸತ್ಯ, ಲೈಫ್ ಟಚ್ ಫೌಂಡೇಶನ್, ಧಾರವಾಡ

೨. ಪರಾಮರ್ಶನ ಗ್ರಂಥಗಳು

* ಅರ್ಜುನ ತಾ. ಕೋರಟಕರ, ೨೦೦೭, 'ಭಾಷೆ ಬದುಕು ಸಾಹಿತ್ಯ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಅಶೋಕಕುಮಾರ ರಂಜೇರೆ, ೨೦೧೦, ಪದವಿನ್ಯಾಸ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಅಹ್ಮದ್ ದೀದಾತ್, ೨೦೦೨, ಇಸ್ಲಾಮಿನ ಪ್ರವಾದಿ ಏಸುಕ್ರಿಸ್ತ, ಶಾಂತಿ ಪ್ರಕಾಶನ, ಮಂಗಳೂರು.
* ಅಂಗಡಿ ಎಸ್.ಎಸ್., ೨೦೦೩, 'ಕನ್ನಡ ಸಂಶೋಧನೆ ಮತ್ತು ಚಿದಾನಂದಮೂರ್ತಿ ಎಂ.', ಸ್ವಪ್ನ ಬುಕ್‌ಹೌಸ್, ಬೆಂಗಳೂರು.
* ಅಂಗಡಿ ಎಸ್.ಎಸ್., ೨೦೦೩, ಕನ್ನಡ ನಿಘಂಟು ರಚನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಆರ್ವಿಯಸ್ ಸುಂದರಂ, ತಾರಾನಾಥ ಎನ್.ಎಸ್. (ಸಂ), ೨೦೦೬, 'ಸಂಶೋಧನ ಪಥ' ಮೈಸೂರು ವಿಶ್ವವಿದ್ಯಾಲಯ, ಮೈಸೂರು.
* ಇಬ್ರಾಹೀಮ್ ಸಈದ್, ೨೦೧೧, ಯೇಸು ಮತ್ತು ಮೇರಿ ಕುರ ಆನಿನಲ್ಲಿ, ಶಾಂತಿ ಪ್ರಕಾಶನ, ಮಂಗಳೂರು
* ಐಜಕ್ ಭಸ್ಮೆ, ೨೦೦೯, ಕನ್ನಡ ಬೈಬಲ್‌ನ ಅನುಕ್ರಮಣಿಕೆ, ಕೆ.ಜೆ.ವಿ., ಬೈಬಲ್ ಸೊಸೈಟಿ, ವಿಜಯನಗರ, ಬೆಂಗಳೂರು.

* ಕುಶಾಲಪ್ಪಗೌಡ ಕೆ., ೨೦೦೮, ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಸಮೀಕ್ಷೆ, ಕಾರ್ತಿಕ ಎಂಟರ್‌ಪ್ರೈಸಸ್, ಬೆಂಗಳೂರು
* ಕೃಷ್ಣಯ್ಯ ಎಂ.ಎಚ್., ೧೯೯೯, 'ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ', ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು.
* ಕೆಂಪೇಗೌಡ ಕೆ., ೧೯೯೬, ಸಾಮಾನ್ಯ ಭಾಷಾ ವಿಜ್ಞಾನ, ಪ್ರಸಾರಾಂಗ ಮಾನಸ ಗಂಗೋತ್ರಿ ಮೈಸೂರು.
* ಕೆಂಪೇಗೌಡ ಕೆ., ೧೯೯೭, 'ಕನ್ನಡ ಭಾಷಾ ಸ್ವರೂಪ', ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
* ಕೆಂಪೇಗೌಡ ಕೆ., ೨೦೦೭, 'ಕನ್ನಡ ಭಾಷಾ ಚರಿತ್ರೆ', ನವಭಾರತಿ ಪ್ರಕಾಶನ, ಮೈಸೂರು.
* ಕೆಂಪೇಗೌಡ ಕೆ., ೨೦೦೮, ವಿವರಣಾತ್ಮಕ ಭಾಷಾ ವಿಜ್ಞಾನ, ಗಜಾನನ ಪಬ್ಲಿಕೇಶನ್, ಮೈಸೂರು.
* ಚಿದಾನಂದಮೂರ್ತಿ ಎಂ., ೨೦೦೮, ಭಾಷಾವಿಜ್ಞಾನದ ಮೂಲ ತತ್ವಗಳು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.
* ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.
* ಚಂದ್ರಪೂಜಾರಿ ಎಂ., ೨೦೧೧, ಸಮಾಜ ಸಂಶೋಧನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಚಂದ್ರಪೂಜಾರಿ ಎಂ., ೨೦೧೧, ಸಂಶೋಧನಾ ಜವಾಬ್ದಾರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಜೈನುಲ್ಲಾ ಬಳ್ಳಾರಿ, ೨೦೧೦, ಕನ್ನಡ ಪತ್ರಿಕೋದ್ಯಮಕ್ಕೆ ರೆ. ಹೆರ್ಮನ್ ಮೋಗ್ಲಿಂಗ್ ಕೊಡುಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಝ್ಯಾಕ್ ಪೂನನ್, ಒಳ್ಳೆಯ ಆಸ್ತಿವಾರ, ಕ್ರಿಶ್ಚಿಯನ್ ಫೆಲೋಶಿಪ್ ಚರ್ಚ್ ೪೦, ಡಕೋಸ್ಟ್ ವೃತ್ತ, ಬೆಂಗಳೂರು.
* ಡೇವಿಡ್ ರೋಪರ್, ೨೦೦೨, ಕ್ರಿಸ್ತನ ಜೀವನ ಚರಿತ್ರೆ–೭, ಟ್ರೂತ್ ಫಾರ್ ಟುಡೇ ವರ್ಲ್ಡ್ ಮಿಶನ್ ಸ್ಕೂಲ್, ಶಿವಾಜಿನಗರ, ಬೆಂಗಳೂರು.
* ತಲವಾಡಿ ಬಿ.ಎಸ್., ೧೯೯೧, ಆದ್ಯ ಕನ್ನಡ ಕ್ರೈಸ್ತ ಲೇಖಕ, ರತ್ನತ್ರಯರು, ಕರ್ನಾಟಕ ಕ್ರೈಸ್ತ ಜಾನಪದ ಕೇಂದ್ರ, ಗಂಗೊಂಡನಹಳ್ಳಿ, ಬೆಂಗಳೂರು.

* ತಲವಾಡಿ ಬಿ.ಎಸ್., ೧೯೯೮, ಸಮಾವೇಶ, ಕರ್ನಾಟಕ ಕ್ರೈಸ್ತ ಜಾನಪದ ಕೇಂದ್ರ, ಗಂಗೊಂಡನ ಹಳ್ಳಿ, ಬೆಂಗಳೂರು.
* ಧಾರವಾಡಕರ್ ರಾ.ಯ., ೧೯೭೪, 'ಕನ್ನಡ ಭಾಷಾ ಶಾಸ್ತ್ರ' ಗೀತಾ ಬುಕ್ ಹೌಸ್, ಮೈಸೂರು.
* ಧಾರವಾಡಕರ್ ರಾ.ಯ., ೧೯೭೫, 'ಹೊಸಗನ್ನಡ ಉದಯಕಾಲ', ಧಾರವಾಡ.
* ದೇವುಡು, ೧೯೮೮, ಕರ್ನಾಟಕ ಸಂಸ್ಕೃತಿ, ಶಾಂತಿ ಪ್ರಕಾಶನ, ಗಾಂಧಿನಗರ, ಬೆಂಗಳೂರು.
* ನಾರಾಯಣ ಕೆ.ವಿ., ಸುಜ್ಞಾನಮೂರ್ತಿ ಬಿ., ಅಶೋಕಕುಮಾರ ರಂಜೇರೆ (ಸಂಕಲನ), ೧೯೯೭, 'ದಿನದಿನ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ನಾರಾಯಣಸ್ವಾಮಿ ಕೆ.ವಿ., ೧೯೯೯, ದ್ವಿಭಾಷಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ನಾರಾಯಣ ಕೆ.ವಿ., ೨೦೦೬, ಕನ್ನಡ ಶೈಲಿ ಕೈಪಿಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ನಾರಾಯಣ ಕೆ.ವಿ., ೨೦೦೭, ಕನ್ನಡ ಜಗತ್ತು ಅರ್ಧ ಶತಮಾನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ನಾರಾಯಣ ಕೆ.ವಿ., ೨೦೦೯, 'ಭಾಷೆ' ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ನಾಗಭೂಷಣಸ್ವಾಮಿ ಓ.ಎಲ್., ೨೦೧೩, ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ಬೆಂಗಳೂರು.
* ಪಾಲಾಕ್ಷ, ೨೦೦೫, ದಕ್ಷಿಣ ಭಾರತದ ಇತಿಹಾಸ ಮತ್ತು ಸಂಸ್ಕೃತಿ, ಶಶಿ ಪ್ರಕಾಶನ, ತಿಪಟೂರು.
* ಪಾಂಡುರಂಗಬಾಬು ಡಿ., ೨೦೦೫, ನುಡಿನೋಟ, ಆಕಾಶ ಪ್ರಕಾಶನ, ಹೊಸಪೇಟೆ
* ಪಾಂಡುರಂಗಬಾಬು ಡಿ., ೨೦೧೦, ನಮ್ಮ ಆಟಗಳು, ನುಡಿಕಟ್ಟು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಪೂಜಾರ ವಿ.ಜಿ., ೨೦೦೮, ಕನ್ನಡ ವ್ಯಾಕರಣ ಮತ್ತು ಭಾಷೆ, ಚೇತನಾ ಪ್ರಕಾಶನ, ಕಲಬುರ್ಗಿ
* ಪ್ರಧಾನ ಗುರುದತ್ತ, ೨೦೦೬, ಭಾಷಾಂತರ ಕಲೆ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

* ಪ್ರಧಾನ ಗುರುದತ್ತ (ಸಂ), ೨೦೧೧, ಮತಾಂತರ (ಸತ್ಯದ ಮೇಲೆ ಹಲ್ಲೆ), ಸಾಹಿತ್ಯ ಪ್ರಕಾಶನ, ಕೊಪ್ಪೀಕರ್ ಬೀದಿ, ಹುಬ್ಬಳ್ಳಿ.
* ಬಸವರಾಜ ಕೋಡಗಂಟಿ, ೨೦೧೦, ಕನ್ನಡ ವಿಭಕ್ತಿ ರೂಪಗಳು, ಬಂಡಾರ ಪ್ರಕಾಶನ, ಮಸ್ಕಿ.
* ಬಸವರಾಜ ಸಬರದ, ೨೦೦೨, 'ಸಮುದಾಯ ಮತ್ತು ಸಂಸ್ಕೃತಿ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಬೆಂಜಮಿನ್ ಎಸ್., ನಡೆ ಬಿಡುಗಡೆಯ ಕಡೆ, ರೆಡ್ಡಿ ಪ್ರಿಂಟರ್ಸ್, ಹಳೆ ಸರ್ಕಾರಿ ಆಸ್ಪತ್ರೆ ಹಿಂದುಗಡೆ, ಯಾದಗಿರಿ
* ಮಹಾದೇವಯ್ಯ ಪಿ., ೨೦೦೬, ದಿನದಿನ–೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಮಹಾದೇವಯ್ಯ ಪಿ., ೨೦೦೯, ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು (ಪ್ರಾಥಮಿಕ ಶಾಲೆಯ ಉರ್ದು ಭಾಷಿಕ ಮಕ್ಕಳನ್ನು ಅನುಲಕ್ಷಿಸಿ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಮಲ್ಲೇಪುರಂ ಜಿ. ವೆಂಕಟೇಶ, ೨೦೦೯, ಕನ್ನಡ ಭಾಷಾಧ್ಯಯನ, ಪ್ರತಿಭಾ ಪ್ರಕಾಶನ, ಪ್ರಥಮ ಛಾಯ, ಗೋಕುಲ ಮೂರನೇ ಹಂತ, ಮೈಸೂರು.
* ಮಾರ್ಕ್ ವಾಲ್ಡಾರ್, ೨೦೧೫, ಭಗವಾನ್ ಯೇಸುಕ್ರಿಸ್ತ, ವಲೇರಿಯನ್ ವಾಲ್ಡಾರ್, ಜೆಸ್ಸಿ ಡಿಕುನ್ಹಾ ರೋಶನ್, ಶರಲ್ ಆನಿ ಮೆರಿಲ್ ಬೊಂದೆಲ್, ಮಂಗಳೂರು.
* ಮುಗಳಿ ರಂ.ಶ್ರೀ, ೧೯೭೩, ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು.
* ಮುಹಮ್ಮದ್ ಫಾರೂಕ್ ಖಾನ್, ೨೦೧೩, ಪರಲೋಕ ಮತ್ತು ಭಾರತೀಯ ಧರ್ಮ ಗ್ರಂಥಗಳು, ಶಾಂತಿ ಪ್ರಕಾಶನ, ಮಂಗಳೂರು.
* ಮೋಹನ್ ಕುಂಟಾರ್, ೨೦೧೫, ಭಾಷಾಂತರ ಪ್ರಕ್ರಿಯೆ, ಪ್ರೇರಣೆ ಪ್ರಭಾವ, ಯಾಜಿ ಪ್ರಕಾಶನ, ಭೂಮಿ ಎಂ.ಪಿ. ಪ್ರಕಾಶನ ನಗರ, ಹೊಸಪೇಟೆ.
* ಮೃತ್ಯುಂಜಯ ಹೊರಕೇರಿ, ಬಸಲಿಂಗ ಸೊಪ್ಪಿಮಠ, ೨೦೦೫, ರಾಯಚೂರು ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
* ರವೀಂದ್ರನಾಥ ಕೆ., ೨೦೧೧, ಅಧ್ಯಯನದ ವಿಧಿ ವಿಧಾನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ರಹಮತ್ ತರೀಕೆರೆ, ೨೦೦೮, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
* ರಂಗಸ್ವಾಮಿ ಎ. ತಲ್ವಾಡಿ ಬಿ.ಎಸ್., ೨೦೧೦, ಕನ್ನಡ ಭಾಷೆಗೆ ವಿದೇಶಿ ವಿದ್ವಾಂಸರ ಕೊಡುಗೆ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
* ವಿಶ್ವನಾಥಯ್ಯ ಸಿ.ಎಂ., ಕಡೂರು ತಾಲೂಕಿನ ಸ್ಥಳನಾಮಗಳು, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
* ಶಿವಮೂರ್ತಿ ಎಂ., ೧೯೯೫, ಸಾಮಾಜಿಕ ಸಂಶೋಧನ ವಿಧಾನಗಳು (ಅನುವಾದ) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
* ಶಿವಾನಂದ ವ್ಹಿ., ೧೯೯೯, ಸಮುದಾಯ ಮತ್ತು ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಶೇಖರಾಚಾರಿ ಕೆ., ೨೦೧೦, ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಶ್ರೀಕಂಠಯ್ಯ ತೀ.ನಂ., ೨೦೦೮, ಕನ್ನಡ ಮಾಧ್ಯಮ ವ್ಯಾಕರಣ, ಗೀತಾ ಬುಕ್‌ಹೌಸ್, ಮೈಸೂರು.
* ಶ್ರೀನಿವಾಸ ಹಾವನೂರು, ೨೦೦೧, ರೆವರೆಂಡ್, ಡಾಕ್ಟರ್ ಫರ್ಡಿನಾಂಡ್ ಕಿಟೆಲ್, ಎಫ್. ಕಿಟೆಲ್ ಪ್ರತಿಮಾ ಸಮಿತಿ, ಸಿ.ಎಸ್.ಐ. ಮಧ್ಯ ಸಭಾಪ್ರಾಂತ, ಬೆಂಗಳೂರು.
* ಶಂಕರಭಟ್ ಡಿ.ಎನ್., ೨೦೦೯, 'ಕನ್ನಡ ವ್ಯಾಕರಣ ಯಾಕೆ ಬೇಕು?', ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ.
* ಶಂಕರಭಟ್ ಡಿ.ಎನ್., ೨೦೧೦, 'ಕನ್ನಡ ಪದಗಳ ಒಳರಚನೆ', ಭಾಷಾ ಪ್ರಕಾಶನ, ಗಡಿಕಲ್ಲು, ಕೊಪ್ಪ
* ಶಂಕರಭಟ್ ಡಿ.ಎನ್., ೨೦೧೦, 'ಭಾಷೆಯ ಬಗೆಗೆ ನೀವೇನು ಬಲ್ಲಿರಿ?', ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ.
* ಶಂಕರಭಟ್ ಡಿ.ಎನ್., ೨೦೧೧, ಮಾತು ಮತ್ತು ಬರಹದ ನಡುವಿನ ಗೊಂದಲ, ಭಾಷಾ ಪ್ರಕಾಶನ, ಆರಗ ತೀರ್ಥಳ್ಳಿ.
* ಶಂಭಾ ಜೋಶಿ, ೨೦೦೯, ಕಂನುಡಿಯ ಹುಟ್ಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

* ಸಂಗಮೇಶ ಸವದತ್ತಿಮಠ, ೧೯೯೯, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಕಲಬುರ್ಗಿ
* ಸಂಗಮೇಶ ಸವದತ್ತಿಮಠ, ೨೦೦೭, ಕನ್ನಡ ಭಾಷಾ ಸ್ವರೂಪ, ರೂಪರಶ್ಮಿ ಪ್ರಕಾಶನ, ಧಾರವಾಡ.
* ಸಂಗಮೇಶ ಸವದತ್ತಿಮಠ, ೨೦೦೯, ಕನ್ನಡ ಭಾಷಾ ವ್ಯಾಸಂಗ, ರೂಪರಶ್ಮಿ ಪ್ರಕಾಶನ, ಧಾರವಾಡ.
* ಸಂಗಮೇಶ ಸವದತ್ತಿಮಠ, ೨೦೧೫, ತೌಲನಿಕ ದ್ರಾವಿಡ ಭಾಷಾ ವಿಜ್ಞಾನ, ರೂಪರಶ್ಮಿ ಪ್ರಕಾಶನ, ಧಾರವಾಡ.
* ಸಾಂಬಮೂರ್ತಿ, ೨೦೦೧, ದಿನದಿನ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಸಾಂಬಮೂರ್ತಿ, ೨೦೧೦, ಕನ್ನಡ ಕ್ರಿಯಾರಚನೆ ಬಗೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಸೋಮಶೇಖರಗೌಡ, ೨೦೧೦, ಭಾಷೆ ರಚನೆ ಬಳಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಹರಿಕೃಷ್ಣ ಭರಣ್ಯ, ೧೯೯೦, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪ್ರಭಸ ಬಿಡುಗಡೆ, ಮದುರೈ
* ಹಿರೇಮಠ ಎಸ್.ಎಸ್., ೨೦೧೮, ದಲಿತ ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಹಂಪ ನಾಗರಾಜಯ್ಯ, ೨೦೦೮, ದ್ರಾವಿಡ ಭಾಷಾ ವಿಜ್ಞಾನ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

ಅಂತರ್ಜಾಲದ ಮಾಹಿತಿ

* ಬರಹ ನಿಘಂಟು
* hebrew greek and english bible
* kannada bible
* kannada dictionary
* all language dictionary
* www.doitinhebrew.com

ವಕ್ತೃ ವಿವರ


ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಊರು	ತಾಲೂಕು
೧.	ಆಂಟೋನಿ ರಾಜ ರೆ.	೫೦	ಪಾದ್ರಿಗಳು	ಪೋತ್ನಾಳ್	ಮಾನ್ವಿ
೨.	ಅಂಜಿನಯ್ಯ	೪೫	ಒಕ್ಕಲುತನ	ಕುರುಬದೊಡ್ಡಿ	ರಾಯಚೂರು
೩.	ಆಜಪ್ಪ ಬಾಬು	೩೫	ಉಪನ್ಯಾಸಕರು	ಶೆಟಗೇರಿ	ಯಾದಗಿರಿ
೪.	ಇರುದಯಾರಾಜ್ ರೆ.	೫೦	ಪಾದ್ರಿಗಳು	ಹಾರಾಪುರ	ಸಿಂಧನೂರು
೫.	ಈರಣ್ಣ ಜೆ.ಎಲ್.	೪೫	ಸ. ಪ್ರಾಧ್ಯಾಪಕ	ರಾಯಚೂರು	ರಾಯಚೂರು
೬	ಓವನ್	೫೫	ಪಾದ್ರಿಗಳು	ಮಾನವಿ	ಮಾನ್ವಿ
೭	ಚಂದ್ರಶೇಖರ	೩೫	ಶಿಕ್ಷಕರು	ಗವಿಗಟ್ಟು	ಮಾನ್ವಿ
೮.	ಚಾರ್ಲಸ್ ಸುಂದರ್	೪೦	ಪಾದ್ರಿಗಳು	ಜವಳಗೆರಾ	ಸಿಂಧನೂರು
೯.	ಚಿದಾನಂದ ಜೇಮ್ಸ್	೫೦	ಪಾದ್ರಿಗಳು	ಗುಲ್ಬರ್ಗಾ	ಗುಲ್ಬರ್ಗಾ
೧೦.	ಚೌರಪ್ಪ	೫೦	ಉಗ್ರಾಣಿಕರು	ಸಿಂಧನೂರು	ರಾಯಚೂರು
೧೧.	ಜಗನ್ನಾಥ	೫೦	ನಿ. ಶಿಕ್ಷಕರು	ರಾಯಚೂರು	ರಾಯಚೂರು
೧೨.	ಜಾನವೆಸ್ಲಿ	೫೦	ಗೋಲ್ಡ್ ಮೈನ್ಸ್	ಹಟ್ಟಿ	ರಾಯಚೂರು
೧೩.	ಜೋಸೆಫ್ ಬಡಿಗೇರ	೪೫	ಶಿಕ್ಷಕರು	ಮಸ್ಕಿ	ರಾಯಚೂರು
೧೪.	ತಲ್ವಾಡಿ ಬಿ.ಎಸ್.	೫೫	ಸಂಶೋಧಕರು	ವಿಜಯನಗರ	ಬೆಂಗಳೂರು
೧೫.	ತಾರಮ್ಮ	೫೦	ಹಿರಿಯರು	ಹೊಸೂರು	ರಾಯಚೂರು
೧೬	ದಸ್ತಗೀರ ದಿನ್ನಿ	೪೫	ಸ. ಪ್ರಾಧ್ಯಾಪಕ	ದಿನ್ನಿ	ರಾಯಚೂರು
೧೭	ದೇಸಪ್ಪ	೫೦	ಸಹ ಶಿಕ್ಷಕರು	ದೇವದುರ್ಗ	ರಾಯಚೂರು
೧೮.	ನಂದಕುಮಾರ ರೆ.	೫೦	ಪಾದ್ರಿಗಳು	ಮೆಥೋಡಿಸ್ಟ್ ಚರ್ಚ್	ಬೀದರ್
೧೯.	ಪರಮೇಶ ಡಿ.	೪೫	ವರದಿಗಾರರು	ಕೋನಾಪುರಪೇಟೆ	ಮಾನ್ವಿ

೨೦.	ಪುಷ್ಪಾವತಿ	೪೫	ಉಪನ್ಯಾಸಕರು	ರಾಯಚೂರು	ರಾಯಚೂರು
೨೧.	ಪ್ರಭು	೪೫	ಶಿಕ್ಷಕರು	ಸಿರವಾರ	ರಾಯಚೂರು
೨೨.	ಪ್ರಕಾಶ	೪೫	ಉಗ್ರಾಣಿಕರು	ನೆಲಹಾಳ	ರಾಯಚೂರು
೨೩.	ಪ್ರಭಾಕರ ಎಂ.ಡಿ.	೪೦	ಕೋಆರ್ಡಿನೇಟರ್	ಕುರ್ಡಿ	ರಾಯಚೂರು
೨೪.	ಪೆಂಚಾಲಯ್ಯ	೫೦	ಶಿಕ್ಷಕರು	ನೀರಮಾನ್ವಿ	ಮಾನ್ವಿ
೨೫.	ಪೊನ್ನುಸ್ವಾಮಿ ರೆ.	೪೫	ಪಾದ್ರಿಗಳು	ಕೆ.ಮರಿಯಮ್ಮನಹಳ್ಳಿ	ಲಿಂಗಸೂರು
೨೬.	ಭಾಸ್ಕರ ಡಿ.	೪೦	ಪಾದ್ರಿಗಳು	ಕುರ್ಡಿ	ಮಾನವಿ
೨೭	ಬಾಬು	೪೫	ಸದಸ್ಯರು	ದೇವಸ್ಗೂಗ್ರು	ರಾಯಚೂರು
೨೮.	ಬೆಂಜಮಿನ್ ಎಸ್.	೫೦	ಪ್ರಾಧ್ಯಾಪಕರು	ಗುಲಬರ್ಗಾ	ಗುಲ್ಬರ್ಗಾ
೨೯.	ಮಲ್ಲಯ್ಯ ಎಂ.	೪೦	ಸ. ಪ್ರಾಧ್ಯಾಪಕರು	ಅತ್ತನೂರು	ರಾಯಚೂರು
೩೦.	ಮಾರ್ಕಪ್ಪ ಎಂ.	೫೦	ಉಗ್ರಾಣಿಕರು	ರಾಯಚೂರು	ರಾಯಚೂರು
೩೧.	ಮಾರ್ಕ ಎಂ.	೩೫	ಶುಶ್ರೂಷಕರು	ಮಟಮಾರಿ	ರಾಯಚೂರು
೩೨.	ಮಾಕ್ಸಿಂ ರಸ್ಕಿನ್ ರೆ.	೪೫	ಪಾದ್ರಿಗಳು	ಪೊನ್ನೂರು	ಮಾನ್ವಿ
೩೩.	ಮುತ್ತಣ್ಣ	೪೦	ಬಿಲ್ ಕಲೆಕ್ಟರ್	ಕುರ್ಡಿ	ಮಾನ್ವಿ
೩೪.	ಯಂಕಣ್ಣ	೪೦	ಪ್ರಾಚಾರ್ಯರು	ಮಾನ್ವಿ	ಮಾನ್ವಿ
೩೫.	ಯೇಸು	೪೦	ಶಿಕ್ಷಕರು	ಮಟಮಾರಿ	ರಾಯಚೂರು
೩೬.	ರಂಗನಾಥ ಬಿಲ್ಲಾರ್	೪೦	ಸ. ಪ್ರಾಧ್ಯಾಪಕರು	ರಾಯಚೂರು	ರಾಯಚೂರು
೩೭.	ರೂಬೆನ್ ರೆ.	೪೫	ಪಾದ್ರಿಗಳು	ಕುರ್ಡಿ	ಮಾನ್ವಿ
೩೮.	ರೋಣಿ ಎಮ್.	೪೫	ಜಿ.ಪಂ. ಅಧಿಕಾರಿ	ರಾಯಚೂರು	ರಾಯಚೂರು
೩೯.	ವರಪ್ರಸಾದ್ ರೆ.	೫೦	ಪಾದ್ರಿಗಳು	ಅಗಾಪೆ ಚರ್ಚ್	ರಾಯಚೂರು
೪೦.	ವಿನ್ಸೆಂಟ್ ಎಂ.ಡಿ. ರೆ.	೫೦	ಪಾದ್ರಿಗಳು	ಮುದುಗಲ್	ಲಿಂಗಸ್ಗೂರು
೪೧.	ವಿನ್ಸೆಂಟ್ ರೋಡ್ರಿಗೆಸ್ ರೆ.	೫೦	ಪಾದ್ರಿಗಳು	ರಾಯಚೂರು	ರಾಯಚೂರು
೪೨.	ಶಿವಯ್ಯ ಹಿರೇಮಠ	೪೫	ಸ. ಪ್ರಾಧ್ಯಾಪಕರು	ರಾಯಚೂರು	ರಾಯಚೂರು
೪೩.	ಸದಾನಂದ ಎಂ.	೪೫	ಉಗ್ರಾಣಿಗರು	ಗಿಲ್ಲೆಸುಗೂರು	ರಾಯಚೂರು
೪೪.	ಸಾಮುಯೇಲ್ ಪಟಾನ್	೫೦	ಪಾದ್ರಿಗಳು	ಹೊಸಕೋಟೆ	ಬೆಂಗಳೂರು

೪೫.	ಸುಂದರರಾಜ	೪೦	ಪಾದ್ರಿಗಳು	ಕುರ್ಡಿ	ಮಾನ್ವಿ
೪೬.	ಸಂಸೋನ ಎ.ರೆ.	೫೦	ಡಿ.ಎಸ್.	ರಾಯಚೂರು	ರಾಯಚೂರು
೪೭.	ಸುಮಿತ್ರಪ್ಪ ಎಂ.	೩೫	ಒಕ್ಕಲುತನ	ತುರುಕುಂದೋಣಿ	ರಾಯಚೂರು
೪೮.	ಸೀಮೋನ ಎಂ.	೪೫	ಡಿ.ಎಸ್.	ಗುಲಬರ್ಗಾ	ಗುಲಬರ್ಗಾ
೪೯.	ಸೀಮೋನ ಎಂ.	೪೦	ದೈಹಿಕ ಶಿಕ್ಷಕರು	ಕುರ್ಡಿ	ಮಾನ್ವಿ
೫೦.	ಸುರೇಶಬಾಬು	೪೫	ಪಾದ್ರಿಗಳು	ಬೊಮ್ಮನಾಳ	ಮಾನ್ವಿ
೫೧.	ಸುಂದರರಾಜ	೪೦	ಪಾದ್ರಿಗಳು	ಅಗಾಪೆ ಚರ್ಚು	ರಾಯಚೂರು
೫೨.	ಸುರೇಶ	೩೫	ಶಿಕ್ಷಕರು	ಕುಡಿದಿನ್ನಿ	ಮಾನ್ವಿ
೫೩.	ಸುಲೋಚನಾ	೪೫	ಶಿಕ್ಷಕಿ	ರಾಯಚೂರು	ರಾಯಚೂರು



ದಕ್ಷಿಣ ಭಾರತದ ಮೊದಲ ಚರ್ಚ್, ಮುದಗಲ್



ಸಂತ ಜೇವಿಯರ್ ಕೇಂದ್ರ ದೇವಾಲಯ, ರಾಯಚೂರು



ದಿ ಪೆಂತೆಕೋಸ್ತ್ ಮಿಷನ್ ಚರ್ಚ್, ರಾಯಚೂರು



ಮೆಥೋಡಿಸ್ಟ್ ಕೇಂದ್ರ ದೇವಾಲಯ, ರಾಯಚೂರು



ಪವಿತ್ರ ಕುಟುಂಬದ ದೇವಾಲಯ, ಸಿಂಧನೂರು.



ಸಂತ ಮರಿಯ ಚರ್ಚ್, ಮಾನ್ವಿ



ಸಂತ ಜಾನ್ ಎವೆಂಜಲಿಸ್ಟ್ ಚರ್ಚ್, ಮಸ್ಕಿ



ಮೆಥೋಡಿಸ್ಟ್ ಚರ್ಚ್, ಕುರುಡಿ



ಹೋಲಿ ಕ್ರಾಸ್ ಚರ್ಚ್, ಸಿರವಾರ



ಲೂರ್ದು ಮಾತೆ ಚರ್ಚ್, ಲಿಂಗಸ್ಗೂರು



ಕರ್ತನ ರಾತ್ರಿ ಭೋಜನ ತೆಗೆದುಕೊಳ್ಳುವ ಸಂದರ್ಭ



ಬಹಿರಂಗ ಸುವಾರ್ತ ಕೂಟ



ಕುಟುಂಬ ಪ್ರಾರ್ಥನೆ ಸಂದರ್ಭ



ಮಗುವಿಗೆ ನಾಮಕರಣ ಮಾಡುತ್ತಿರುವುದು



ಚಿಕ್ಕ ಮಗುವಿಗೆ ದೀಕ್ಷೆ ನೀಡುತ್ತಿರುವ ಸಂದರ್ಭ



ದೃಢೀಕರಣ ನೀಡುವ ಸಂದರ್ಭ



ದೀಕ್ಷಾಸ್ನಾನದ ಸಂದರ್ಭ





ಮದುವೆ ಸಂದರ್ಭ





ಅಂತ್ಯ ಸಂಸ್ಕಾರ ಮಾಡುವ ಸಂದರ್ಭ

ಕರಪತ್ರ ಬರಹ ಮತ್ತು ಗೋಡೆ ಬರಹಗಳು










ರಾಯಚೂರು ಜಿಲ್ಲೆಯ ನಕಾಶೆ



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಕನ್ನಡ ಭಾಷಾಧ್ಯಯನ ವಿಭಾಗ